ಕರ್ನಾಟಕ

ಸಂಪಾದಕ:- ಬೆಟಗೇರಿ ಕೃಷ್ಣಶರ್ಮ

ಮುಖ್ಯ ವಿಷಯಗಳು

ಅಖಿಲ ಕರ್ನಾಟಕಸ್ಥರ ಮಹಾಸಭೆ (ಸಂಪಾದಕೀಯ)
ಸಂಪಾದಕರು ೯೭

ಜೀವನ ವನದಲ್ಲಿ (ಕವನ)
ಶ್ರೀ. ತಿನೇಶ್ವರ ದೊಡ್ಡಮನಿ, ನವಿಲೂರು ೧೦೦

ಕೊನೆಯ ಭೆಟ್ಟಿ (ಸಣ್ಣಕತೆ)
ಶ್ರೀ. ರಾಮಚಂದ್ರ ಜೋಶಿ, ಕಿತ್ತೂರು ೧೦೧

ಪ್ರಾಕೃತ ಭಾಷೆಗಳು (ಭಾಷಾವಿಜ್ಞಾನ)
ಶ್ರೀ. ಕೆ. ಟಿ. ಪಾಂಡುರಂಗಿ ಬಿ. ಓ. ಎಲ್. ಧಾರವಾಡ ೧೦೪

ಒಗಟುಗಳು (ಪ್ರಣಯಪದ್ಯ)
ಸಾ. ಲಕ್ಷ್ಮೀದೇವಿ ವೈದ್ಯ, ಬೆಳಗಾಂವಿ ೧೦೭

ವಿಚಾರತರಂಗಿಣಿ (ಗದ್ಯಕವನ)
ಶ್ರೀ. ಭಾ. ಗೋ. ಗೋಖಲೆ ಬಿ. ಎ., ಎಲ್ ಎಲ್. ಬಿ. ೧೦೮

ಗೋಪಾಳನ 'ಗೋಪಾಳ' (ವಿಕಾಂಕ ಪೃಥ್ಯ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೧೧೯

ಸ್ವಾತಂತ್ರ್ಯ ಸ್ವರೂಪ ದರ್ಶನ (ವಿಚಾರ ಪ್ರಚೋದಕ ಪ್ರಬಂಧ)
ಶ್ರೀ. ಜಿ. ಎನ್. ಸಹಿತ ಬಿ. ಎ. (ಆನರ್ಸ್) ಪುಣೆ ೧೨೭

ಕೃತಕ ಗೊಬ್ಬರಗಳು (ವಿಜ್ಞಾನ ವಿಚಾರ)
ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ೧೩೦

ಪುಸ್ತಕವಿಮರ್ಶ ('ನಿಸರ್ಗ' ಮತ್ತು 'ಎಚ್ಚತ್ತ ಭಾರತವ ಎತ್ತ ಸಾಗಿದೆ')
ಶ್ರೀ. ಬೆಟಗೇರಿ ಕೃಷ್ಣಶರ್ಮ ಮತ್ತು ಬಿ. ಪಿ. ಎಸ್ ರಾವ್ (೧೩೪)

ಹಿಲ್ಲಬೆ ಬೀರಣ್ಣನ ಬಡಿನುಡಿ (೯೯ ; ನಾಲ್ಕೂನಿಪ್ಪತ್ತನೆ ನೋಟ (೧೩೫);
ಸಾವರಸ್ಯೀಕಾರ (ಮೇಲೊಲೆಯ ೨-೩ ನೆಯ ಪುಟ)

ಸೆಪ್ಟೆಂಬರ್ JAGRUTI ಆಶ್ವಯುಜ ೧೯೪೬

ಸಾದರ ಸ್ವೀಕಾರ

೪೫. ಕಾಂಗ್ರೆಸ್ ಮುಂತ್ರಿ ಮಂಡಲವೂ ಏಕೀಕರಣದ ಪೂರ್ವ ಸಿದ್ಧತೆಯೂ— (ವಿಷಯ ವಿವೇಚನಾತ್ಮಕ ಕಿರು-ಹೊತ್ತಗೆ). ಧಾರವಾಡದಲ್ಲಿರುವ ಅ. ಕ. ಏ. ಕ. ಸಂಘದ ಕೇಂದ್ರ ಕಚೇರಿಯವರು ಪ್ರಕಟಿಸಿದ್ದಾರೆ. ಕ್ರಾ. ಅ. ೧೭ ಪುಟಗಳು.

ಕರ್ನಾಟಕದ ಏಳಿಗೆ-ಏಕೀಕರಣಗಳ ದೃಷ್ಟಿಗಳಿಂದ ಇಂದಿನ ಮುಂಬೈ-ಮದರಾಸ್ ಮಂತ್ರಿಮಂಡಲಿಗಳು ಯಾವ ಯಾವ ಕಾರ್ಯ ಕೈಕೊಂಡು ನೆರವೇರಿಸಲಿಕ್ಕಾಗಬಹುದೆಂಬುದರ ವಿವೇಚನೆಯನ್ನು, ನಾವು ಈ ಪುಟ್ಟ ಪುಸ್ತಕದಲ್ಲಿ ಕಾಣುವೆವು. ಕನ್ನಡಿಗರೆಲ್ಲರೂ ಅರಿತುಕೊಳ್ಳಬೇಕಾದ ವಿಚಾರವಿದು. ಸಕಾಲದಲ್ಲಿ ಮುದ್ರಿಸಿ ಪ್ರಕಟಿಸಿದುದಕ್ಕಾಗಿ ಕರ್ನಾಟಕ ಏಕೀಕರಣ ಸಂಘದವರ ಕಾರ್ಯಜಾಗೃತಿಯನ್ನು ಕೊಂಡಾಡಲೆ ಬೇಕು.

೪೬. ಜೀವನ ಸಂಸಾರ— (ಒಂದು ಹಾಸ್ಯ ಪ್ರಧಾನ ಏಕಾಂಕ ನಾಟಕ). ಬರೆದವರು ಶ್ರೀ. ನಗರ ಕೃಷ್ಣ ಇನಾಮದಾರ. ಪ್ರಕಾಶಕರು ರಂಗಂಪೇಟೆಯ ಕರ್ನಾಟಕ ಸಂಘದ 'ಆರುಣಗ್ರಂಥ ಮಾಲೆ'ಯ ೨ನೆಯ ಕಿರಣ. ಕ್ರಾ. ಅ. ೧೬ ಪುಟಗಳು. ಬೆಲೆ ೦-೪-೦.

೪೭. ಕಾಶ್ಮೀರದ ಕ್ರಾಂತಿ— (ಪರಿಚಯ) ಬರೆದವರು ಶ್ರೀ. ಕುಳುಕುಂದ ಶಿವರಾಯರು ಪ್ರಕಾಶಕರು ಜನತಾ ಸಾಹಿತ್ಯ, ಮುರಾರ್ಜಿಗಲ್ಲಿ, ಹುಬ್ಬಳ್ಳಿ ಕ್ರಾ. ಅ. ೧೬ ಪುಟ. ಬೆಲೆ ೦-೨-೦.

ನಿನ್ನೆ ಮೊನ್ನೆ ನಡೆದ ದಬ್ಬಾಳಿಕೆಯ ಘಟನೆಯ ಮೂಲಕ ಕಾಶ್ಮೀರದ ಹೆಸರಿಂದು ಭಾರತದ ಎಲ್ಲ ಜನರ ಬಾಯಲ್ಲಿಯೂ ಇದೆ. ಆದರ ಸಂಕ್ಷಿಪ್ತ ಪ್ರಾಚೀನ ಇತಿಹಾಸವನ್ನೂ, ಇಂದಿನ ವಿಚಿತ್ರ ರಾಜಕೀಯ ಪರಿಸ್ಥಿತಿಯನ್ನೂ, ಜನತೆಗೆ ಬೇಡವಾದ ಅಧಿಕಾರಿವರ್ಗದ ಆಡಳಿತದ ರೀತಿಯನ್ನೂ ಸಂಗ್ರಹಿಸಿಕೊಡ ಲಾಗಿದೆ ಈ ಚಿಕ್ಕ ಪುಸ್ತಕದಲ್ಲಿ. ಎಲ್ಲರೂ ಓದಿ ನೋಡಬೇಕು.

೪೮. ತವಾಫ್— (ವಾರಪತ್ರಿಕೆಯ ೫ನೆಯ ವಾರ್ಷಿಕ ವಿಶೇಷಾಂಕ). ಸಂಪಾದಕರು ಶ್ರೀ ಎಂ. ಎಸ್. ಮಾಧವ ರಾವ್, ೩೦೪ ರಾಮಾನುಜರೋಡು, ಮೈಸೂರು ಕ್ರಾ. ೪೮ ಪುಟಗಳು. ಬೆಲೆ ೦-೧೨-೦.

ಆಕರ್ಷಕವಾದ-- ಕನ್ನಡ ಕಬೀರದಾಸ ಚಿತ್ರದಲ್ಲಿ ಪಾತ್ರ ವಹಿಸಿದ—ಸಿನೇಮಾ ನಟಿ—ಲಕ್ಷ್ಮೀಬಾಯಿಯ ಮೂರು ಬಣ್ಣದ ಚಿತ್ರ ಮುಖಪತ್ರದ ಮೇಲೆ ಇದೆ. ನಾಟಕ-ಸಿನೇಮಾಗಳಿಗೆ ಸಂಬಂಧಿಸಿದ ಸಚಿತ್ರ ಲೇಖನಗಳಿರುವುವಲ್ಲದೆ, ಸಣ್ಣಕತೆ-ಕವಿತೆಗಳೂ ಇರುವುವು.

೪೯. ಒಡೆದ ಕನ್ನಡಿ— (ಹರಟೆಗಳ ಸಂಕಲನ) ಬರೆದವರು ಶ್ರೀಮಾನ್ ಎನ್. ಎಸ್. ಗದಗಕರ ಬಿ. ಎ. ಧಾರವಾಡ. ಮಾರಾಟಗಾರರು: ಮನೋಹರ ಗ್ರಂಥ ಭಾಂಡಾರ, ಧಾರವಾಡ. ಪೂ. ಕ್ಯಾ. ಅ. ೮೨ ಪುಟಗಳು. ಬೆಲೆ ೧-೦-೦.

೫೦. ಭಾರತೀಯ ರಾಜ್ಯಶಾಸನದ ಬೆಳವಣಿಗೆ—(ರಾಜಕೀಯ ವಿಷಯಕ ಗ್ರಂಥ). ಬರೆದವರು ಶ್ರೀ. ಕೆ. ಎಫ್. ಪಾಟೀಲ ಬಿ. ಎ., ಎಂ. ಎಲ್. ಎ. ಮುಂಬಯಿ. ಪ್ರಕಾಶಕರು ಶ್ರೀ. ಬಿ ಜಿ. ಸಂಕೇಶ್ವರ, ಸರಸ್ವತೀ ಪುಸ್ತಕ ಭಾಂಡಾರ, ಗದಗ. ಕ್ರಾ. ಅ. ೧೫೨ ಪುಟಗಳು. ಬೆಲೆ ೧-೮-೦.

೫೧. ನಾರಿ— (ನೀಳ್ಗತೆ) ಲೇಖಕರು ಶ್ರೀ. ರಮಾನಂದ. ಅಮಿತಾನ್, ಪ್ರಕಾಶಕರು 'ರಂಗಮಂಗ ಪ್ರಕಾಶನ' ಧಾರವಾಡ. ಪೂ. ಕ್ಯಾ. ಅ. ೮೮ ಪುಟಗಳು. ಬೆಲೆ ೦-೯-೦.

೫೨. ಹಾಡು-ಪಾಡು— (ಕವನಸಂಗ್ರಹ). ಕವಿಗಳು ಶ್ರೀಮಾನ್ 'ಅಂಬಿಕಾತನಯದತ್ತ' ಆವರು. ಗಲಗಲಿಯ ಆನಂದ ಸಾಹಿತ್ಯ ಮಂದಿರದ ೨ನೆಯ ನೆಲೆ. ಕ್ರಾ. ಅ. ೫೨ ಪುಟಗಳು. ಬೆಲೆ ೧-೦-೦.

೫೩. ಶ್ರೀವಿದ್ಯಾನಂದೇಶ್ವರ ಜನರಲ್ ಲೈಬ್ರರಿ—ಬೈಲೂರು ಈ ಸಂಸ್ಥೆಯ ನಾಲ್ಕನೆಯ ವಾರ್ಷಿಕ ವರದಿ. ಅಧ್ಯಕ್ಷರು: ಶ್ರೀ. ಡಿ ಎಂ ಕೊಪ್ಪೀಕರ್. ಕಾರ್ಯದರ್ಶಿ ಶ್ರೀ. ವಿ. ಆರ್. ಶಾನಭಾಗ.

ಹಳ್ಳಿಯ ಈ ಚಿಕ್ಕ ಲೈಬ್ರರಿ ಚಿರಾಯುವಾಗಿ, ಹಳ್ಳಿಗರ ಉನ್ನತಿಗಾಗಿ ಕಾರ್ಯ ಮಾಡುತ್ತಿರಲಿ.

೫೪. ಅರಳು ಮಲ್ಲಿಗೆ— (ಕೈಬರೆಹದ ಪತ್ರಿಕೆ) ಸಂಪಾದಕರು ಶ್ರೀ. ಬಿ. ಟಿ. ಕುಲಕರಣಿ, ಬದಾಮಿ ಅಲ್ಲಿಯ ಕರ್ನಾಟಕ ಸಂಘದ ಮುಖಪತ್ರಿಕೆಯಿದು. ಡೆಮಿ ೪ ಪುಟ.

ಬಾದಾಮಿಯ ತರುಣರ ಕನ್ನಡದ ಅಭಿಮಾನದ ನಿದರ್ಶಕವಾದ ಈ ಪತ್ರಿಕೆ, ಕನ್ನಡ ಅಭಿಮಾನಿಗಳಿಗೆ ಸಮಾಧಾನವನ್ನು ಉಂಟುಮಾಡದೆ ಇರದು. ಹೊಸ ಲೇಖಕರಿಗೆ ರಂಗಕ್ಷೇತ್ರವಾಗಿರುವ ಇಂತಪ ಕೈಬರೆಹದ ಪತ್ರಿಕೆಗಳಲ್ಲಿ ಆಂತರಂಗದ ಸಂಪೂರ್ಣ ಸೌಂದರ್ಯವನ್ನು ಅಪೇಕ್ಷಿಸುವುದು ಅಸ್ವಾಭಾವಿಕವಾದರೂ, ಬಾಹ್ಯ ಸೌಂದರ್ಯವನ್ನು ಬಯಸುವುದು ಸ್ವಾಭಾವಿಕವಾಗಿದೆ. ಪ್ರಸ್ತುತ ಪತ್ರಿಕೆಯಲ್ಲಿ ಸುಲೇಖನ, ಓರಣ, ಸೌಂದರ್ಯಗಳಿಗೆ ಎಡೆಯೆ ಇಲ್ಲ 'ಕರುಳಿನ ಕೂಗು' 'ವಿಧಿಘಟನೆ' ಎಂಬ ಸಣ್ಣ ಕತೆಗಳೂ 'ಮಲ್ಲಿಗೆ' 'ಸಂಧ್ಯಾರಾಣಿ' ಎಂಬ ಕವಿತೆಗಳೂ 'ರಾಮನವಮಿ' ಎಂಬ ವಿಡಂಬನಾತ್ಮಕ ಪ್ರಬಂಧವೂ ಇವೆ. ಈ ತರುಣರ ಬಳಗದ ಪ್ರಯತ್ನ ಕನ್ನಡ ಸಾಹಿತ್ಯದ ಮುಂಬರುವ ಜೆಲುವಿಕೆಗೆ ಕಾರಣವಾಗಲಿ.

೫೫. ಸ್ವತಂತ್ರ— (ಹೊಸ ಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ಬಸವರಾಜ ಕಟ್ಟಿಮನಿ ಆವರು. ಪ್ರಕಾಶಕರು ಶಾರದಾಕ್ಷಿ ಪಬ್ಲಿಷಿಂಗ್ ಹೌಸ್, ಬೆಂಗಳೂರು ಸಿಟಿ. ಡೆ. ೮. ೫೨ ಪುಟಗಳು. ವಾರ್ಷಿಕ ಚಂದಾ ೩-೦-೦, ಬಿಡಿ ಸಂಚಿಕೆಗೆ ೦-೪-೦.

ಚಂದಿರ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಚೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೯ | ೧ನೆಯ ಸಪ್ಟಂಬರ್ ೧೯೪೬ | ಸಂಚಿಕೆ ೪

ಸಂಪಾದಕೀಯ

ಅಖಿಲ ಕರ್ನಾಟಕಸ್ಥರ ಮಹಾಸಭೆ

ನನ್ನು ಈ ಸಂಚಿಕೆ ಪ್ರಕಟವಾಗುತ್ತಿರುವಾಗಲೆ ದಾವಣಗೆರೆಯಲ್ಲಿ ಅಖಿಲ ಕರ್ನಾಟಕಸ್ಥರ ಮಹಾಸಭೆಯು ಅಧಿವೇಶನ ಜರುಗುತ್ತಿರುವುದು.

ಕರ್ನಾಟಕ ಪ್ರಾಂತದ ಏಕೀಕರಣದ ಕೂಗನ್ನು ಇದುವರೆಗೆ ಕೇವಲ ಕನ್ನಡಿಗರ ಬಳಗವೆ ನಡೆಯಿಸಿದ್ದಿತು. ಪ್ರಾಂತದಲ್ಲಿರುವ ಮಿಕ್ಕ ಭಾಷೆಗಳನ್ನಾಡುವ ಜನರು, ಈ ಏಕೀಕರಣದ ಚಳುವಳಿಯನ್ನು ಇಲ್ಲಿಯ ತನಕ ಔದಾಸೀನ್ಯದ ಭಾವನೆಯಿಂದಲೆ ನೋಡುತ್ತ ಬಂದಿದ್ದಾರೆ; ಕೆಲವು ಜನರಂತೂ ಇದನ್ನು ಆಗಾಗ ವಿರೋಧಿಸುತ್ತಲೂ ಇದ್ದಾರೆ. ಈ ಔದಾಸೀನ್ಯ-ವಿರೋಧಗಳಿಗೆ ಏಕೀಕರಣದ ಚಳುವಳಿಯ ವಿಷಯದಲ್ಲಿರುವ ಅವರ ಅಜ್ಞಾನವೇ ಮುಖ್ಯ ಕಾರಣ. ಕರ್ನಾಟಕ ಏಕೀಕರಣವೆಂಬುದು ಕೇವಲ ಕನ್ನಡಿಗರ ಒತಕ್ಕಾಗಿ ಇದೆ ಎಂದೂ, ಭಾಷೆ-ಸಂಸ್ಕೃತಿಗಳ ಬೆಳೆವಣಿಗೆಯ ಉದ್ದೇಶವಿಸ್ಸೇ ಇದಕ್ಕೆದೆಯೆಂದೂ ಹಲವು ಜನ ತಪ್ಪುತಿಳಿವಳಿಕೆ ಮಾಡಿಕೊಂಡಿದ್ದಾರೆ. ಆದರೆ ಪ್ರಾಂತದ ಏಕೀಕರಣ, ಕರ್ನಾಟಕದಲ್ಲಿ ವಾಸಿಸುವ ಪ್ರತಿಯೊಬ್ಬನ ಜೀವ-ಸಾವುಗಳ ಪ್ರಶ್ನೆಯಾಗಿದೆಯೆಂಬುದರ ಸತ್ಯತೆಯನ್ನು ಇಂದು ಎಲ್ಲರೂ ತಿಳಿದುಕೊಂಡು ನಡೆಯುವೇಕಾಗಿದೆ. ಇಂದಿನ ಈ ಹೊಸ ರಾಜಕೀಯ ಘಟನೆಯ ರಚನೆಯ ಕಾಲದಲ್ಲಿ, ಕರ್ನಾಟಕಸ್ಥರು ಬಲವಾದ ಚಳವಳಿಯನ್ನು ಹೂಡಿ ಕರ್ನಾಟಕ ಪ್ರಾಂತ ರಚನೆಗಾಗಿ ಪ್ರಯತ್ನ ಮಾಡದೆ ಹೋದಲ್ಲಿ, ಸ್ವತಂತ್ರ ಭಾರತದಲ್ಲಿಯೂ ಕರ್ನಾಟಕಸ್ಥರಿಗೆ ಸ್ವಾತಂತ್ರ್ಯ, ಸುಖ, ಶಾಂತಿಗಳು ಸಿಕ್ಕಲಾರವೆಂಬುದನ್ನು, ಎಲ್ಲರೂ ಇಂದು ಸುತ್ತುನೋಟದಿಂದ ನೋಡಿ ವಿಚಾರಿಸಿ ಅರಿತುಕೊಳ್ಳಬೇಕಾಗಿದೆ.

ಕರ್ನಾಟಕದ ತುಂಡುಗಳು ಇಂದು ಬೇರೆ ಬೇರೆ ಆಡಳಿತಗಳಿಗೆ ಸೇರಿ, ಆ ಆಡಳಿತಗಳಲ್ಲಿರುವ ಬಹುಸಂಖ್ಯಾಕರ ಸ್ವಾರ್ಥಭಾವನೆಯ ಮೂಲಕ ಅವು ಅಲಕ್ಷ್ಯಕ್ಕೆ ಒಳಪಟ್ಟಿವೆ. ಈ ಅಲಕ್ಷ್ಯದ ಪರಿಣಾಮವನ್ನು ಕರ್ನಾಟಕದಲ್ಲಿ ಬದುಕಿ ಬಾಳುತ್ತಿರುವ ಪ್ರತಿಯೊಬ್ಬನೂ ಅನುಭವಿಸಬೇಕಾಗುವುದು. ಕರ್ನಾಟಕದಲ್ಲಿ ಆಗಾಗ ಬೀಳುವ ಬರಗಾಲ ಕನ್ನಡಿಗರಿಗಷ್ಟೆ ತೊಂದರೆ ಕೊಡುವುದಿಲ್ಲ. ಕನ್ನಡನಾಡಿನಲ್ಲಿ ಬೇರೆ ಬೇರೆಯ ವಿದ್ಯಾವ್ಯಾಸಂಗಕ್ಕಾಗಿ ಉಚ್ಚವಿದ್ಯಾಲಯಗಳಿಲ್ಲದಿರುವುದು ಕನ್ನಡಿಗರಿಗಷ್ಟೇ ಅನನುಕೂಲತೆಯಲ್ಲ. ಕರ್ನಾಟಕದಲ್ಲಿ ಉದ್ಯಮಶಾಲೆ, ಕಾರಖಾನೆಗಳಿಗೆ ಪ್ರೋತ್ಸಾಹದೊರೆಯದೆ ಇರುವುದು ಕನ್ನಡಿಗರಿಗಷ್ಟೆ ಹಾನಿಕರವಾದುದಲ್ಲ. ಕರ್ನಾಟಕದ ಜನರಿಂದ ಹೋಗುವ ಭೂಯಿಷ್ಠವಾದ ಕರ-ಕಂದಾಯಗಳು ಯಾರು ಯಾರ ಜೀವನದ ಅನುಕೂಲತೆಗೋ ವೆಚ್ಚವಾಗುತ್ತಿರುವುದು ಕನ್ನಡಿಗರಿಗಷ್ಟೇ ತೊಂದರೆಯನ್ನುಂಟು ಮಾಡುವುದಲ್ಲ. ಭಾಷೆಯ ದೃಷ್ಟಿಯಿಂದ ಕನ್ನಡಿಗರಿರಲಿ, ಅನ್ಯಭಾಷೆಯವರಿರಲಿ; ಧರ್ಮದ ದೃಷ್ಟಿಯಿಂದ ಹಿಂದುವಿರಲಿ ಮುಸಲ್ಮಾನ-ಕ್ರೈಸ್ತರಿರಲಿ; ಜಾತಿಯ ದೃಷ್ಟಿಯಿಂದ ಬ್ರಾಹ್ಮಣರಿರಲಿ, ಲಿಂಗಾಯತರಿರಲಿ, ಜೈನರಿರಲಿ, ಹರಿಜನ-ಗಿರಿಜನಗಳಿರಲಿ;—ಇವರೆಲ್ಲರೂ ಕರ್ನಾಟಕಸ್ಥರಾಗಿರುವುದರಿಂದ, ಅನುಭವಿಸಬೇಕಾದ ತಪ್ಪನಷ್ಟಗಳಲ್ಲಿ ಎಲ್ಲರೂ ಸಮಭಾಗಿಗಳಾಗಿಬೇಕಾಗುವುದು. ಕರ್ನಾಟಕದ ಏಕೀಕರಣದಿಂದ ಇಂತಹ ತಪ್ಪನಷ್ಟಗಳು ಕಡಿಮೆಯಾಗುವುದೆಂದಮೇಲೆ, ಇದರ ಅನುಕೂಲತೆ ಎಲ್ಲರಿಗೂ ಸಮಾನವಾಗಿ ಸಿಕ್ಕುವುದಲ್ಲವೆ?

* * * *

ಕರ್ನಾಟಕದ ಬಯಲು ಭೂಮಿಗಳಲ್ಲಿ ಬೇಳಾದಷ್ಟು ಹೊಲ-ಪಲ್ಲಗರು ಹರಿಯುತ್ತಿರುವುವು; ಅವುಗಳನ್ನು ಕಟ್ಟಬೇಕಾದಲ್ಲಿ ಕಟ್ಟಿ ಕೆರೆ-ಕಾಲುವೆಗಳನ್ನು ಮಾಡಿದರೆ, ಕನ್ನಡಿಗರಲ್ಲದ ಕರ್ನಾಟಕಸ್ಥರಿಗೆ ಕೃಷಿಗೆ ಅನುಕೂಲವಾಗಲಿಕ್ಕಿಲ್ಲವೆ? ಕರ್ನಾಟಕದ ಆಡಳಿತ-ಭಾಷೆ

ಸರಿಯಾಗಿ—ವಿದ್ಯುತ್ ಪೂರೈಕೆಯನ್ನು ದೇಶಕ್ಕೆ ಒದಗಿಸಿದರೆ, ಅದರ ಉಪಯೋಗ ಕನ್ನಡಿಗರಲ್ಲದವರಿಗೆ ಆಗದೇನು? ನಮ್ಮದೇ ವಿಶ್ವವಿದ್ಯಾನಿಲಯವನ್ನಾಗಿ ಎಲ್ಲ ಬಗೆಯ ಉಚ್ಚವಿದ್ಯಾಭ್ಯಾಸಕ್ಕೂ ಉಚ್ಚ ವಿಜ್ಞಾನದ ಅಧ್ಯಯನಕ್ಕೂ ಶಾಲೆ-ಕಾಲೇಜುಗಳು ನಮ್ಮಲ್ಲಿಯೇ ಸ್ಥಾಪಿತವಾದರೆ, ಕನ್ನಡಿಗರಲ್ಲದವರಿಗೆ ಅವುಗಳ ಪ್ರಯೋಜನ ದೊರೆಯದೆ? ಅಡಳಿತದ ಸಹಕಾರ-ಸಮಾನಸ್ಥಾನಗಳಿಂದ ದೇಶದಲ್ಲಿ ಕೈಗಾರಿಕೆ, ಉದ್ಯಮವ್ಯಾಪಾರಗಳು ನಡೆಯುತ್ತಿದ್ದರೆ, ಕನ್ನಡಿಗರಲ್ಲದ ಕರ್ನಾಟಕಸ್ಥರಿಗೆ ಅದರ ಲಾಭ ಸಿಕ್ಕಲಾರದೆ? ಸೂರ್ಯನ ಬಿಸಿಲೂ ಮಳೆಯೂ ನೀರೂ ಎಲ್ಲರಿಗೂ ಸಿಕ್ಕುವಂತೆ, ಏಕೀಕೃತ ಪ್ರಾಂತದ ಆಡಳಿತದಿಂದ ಎಲ್ಲರಿಗೂ ಸಮಾನ-ಸಾಕಲ್ಯಗಳು ಸಿಕ್ಕುವುವು. ಹೀಗಿರುವಾಗ, ಕನ್ನಡಿಗರಲ್ಲದ ಕರ್ನಾಟಕಸ್ಥರು ಪ್ರಾಂತದ ಏಕೀಕರಣ ಚಳವಳಿಯ ಬಗೆಗೆ ಉದಾಸೀನರೂ ವಿರೋಧಿಗಳೂ ಆಗಬೇಕೆ?

* * *

ಒಂದು ನಿರ್ದಿಷ್ಟವಾದ ಮಾತೃಭಾಷೆ ಅವಿಲ್ಲದೆ ಇಂದು ಕರ್ನಾಟಕಸ್ಥರಿಗೆಲ್ಲ ಆಗಬೇಕಾಗಿದೆ. ಪ್ರಾಂತದಲ್ಲಿ ಬಹುಸಂಖ್ಯಾಕರಾಡುವ ಭಾಷೆ ಪ್ರಾಂತದ ಆಡಳಿತದ ಭಾಷೆಯಾಗಬೇಕಾದುದು ಅನಿವಾರ್ಯವಾಗಿದೆ. ಅದರಂತೆಯೆ ಶಿಕ್ಷಣ ಮಾಧ್ಯಮವೂ ಬಹುಸಂಖ್ಯಾಕರ ಭಾಷೆಯಾಗುವುದು ಸ್ವಾಭಾವಿಕವಾಗಿದೆ. ಈ ಮಾತು ಕರ್ನಾಟಕ ಒಂದಕ್ಕೇ ಅನ್ವಯಿಸುವುದೆಂದಲ್ಲ: ಭಾಷಾನ್ಯೂನ ಪ್ರಾಂತಪದ್ಧತಿ ಇರುವಲ್ಲೆಲ್ಲ ಬಹುಸಂಖ್ಯಾಕ ಭಾಷಾತತ್ತ್ವವನ್ನು ಹೊಂದಿಸಿಕೊಳ್ಳಬೇಕಾಗುವುದು. ಮಹಾರಾಷ್ಟ್ರ ಪ್ರಾಂತ—ಆಂಧ್ರ ಪ್ರಾಂತಗಳೂ ಏಕೀಕೃತವಾದಲ್ಲಿ, ಅಲ್ಲಿಯೂ ಆಡಳಿತಗಳು ಇದೇ ತತ್ತ್ವವನ್ನು ಅನುಸರಿಸಬೇಕಾಗುವುದು. ಜಾತಿ-ಪಂಥ-ಕುಲ-ಧರ್ಮಗಳು ಆಡಳಿತಕ್ಕೆ ಪ್ರತ್ಯಕ್ಷವಾಗಿ ಸಂಬಂಧಿಸಿರುವುದಿಲ್ಲ; ಆದುದರಿಂದ ಅವುಗಳ ವಿಚಾರವನ್ನು ಅದು ಮಾಡುವ ಅವಶ್ಯವಿಲ್ಲ. ಆದರೆ ಭಾಷೆಯ ವಿಷಯ ಹಾಗಲ್ಲ. ಆಡಳಿತಕ್ಕೆ ಭಾಷೆಯು ಅತ್ಯಂತ ಅವಶ್ಯಕವಾಗಿದೆ. ಯಾವುದಾದರೊಂದು ಭಾಷೆಯನ್ನು ಅದು ಕನ್ನಡವೆಂದು ಒಪ್ಪಿಕೊಳ್ಳಲೇ ಬೇಕಾಗುವುದು. ಬಹುಜನಸಮತದ ಮೇಲೆ ನಡೆಯುವ ಇಂದಿನ ಜನತೆಯ ಆಡಳಿತಗಳು, ಪ್ರಾಂತದ ಬಹುಜನರ ಭಾಷೆಯನ್ನು ಆಡಳಿತದ ಭಾಷೆಯೆಂದು ಸ್ವೀಕರಿಸುವುವು. ಇದು ಕೇವಲ ಲಭಿಮಾನ-ಭಾವನೆಗಳ ವಿಷಯವಲ್ಲ; ಉಪಯುಕ್ತತೆ-ಅನುಕೂಲತೆಗಳ ಸಮಾವೇಶವಿದೆ. ಆದುದರಿಂದ ಮಾತೃಭಾಷೆಯೆಂಬ ಅಭಿಮಾನಭಾವ ಹಿಂದಿಯ, ಕರ್ನಾಟಕ ಏಕೀಕರಣವನ್ನು ಉಪೇಕ್ಷಿಸುತ್ತ ಬಂದಿರುವ-ಕರ್ನಾಟಕಸ್ಥರಾದ—ಅನ್ಯಭಾಷೆಯವರೆಲ್ಲರ, ಇಂದು ತಮ್ಮ ಸುಖ-ಬೇಪನಕ್ಕಾಗಿ ಪ್ರಾಂತದ ಏಕೀಕರಣವನ್ನು ಒಪ್ಪಿಕೊಳ್ಳಬೇಕಾಗಿದೆ.

* * *

ಅನ್ಯ ಭಾಷೆಯ ಕರ್ನಾಟಕಸ್ಥರಂತೆಯೆ ಇಂದು ಕರ್ನಾಟಕದಲ್ಲಿಯ ಬೇರೆ ಬೇರೆ ಜಾತಿಯವರೂ ಸಂಪೂರ್ಣ ಮನಸ್ಸಿನಿಂದ ಏಕೀಕರಣಕ್ಕಾಗಿ ಹೆಣಗುವುದು ಅವಶ್ಯವಾಗಿದೆ. ಏಕೀಕರಣವಾದರೆ ವೀರಶೈವರ ಬಹುಮತದಾಗಿ, ವೀರಶೈವರಲ್ಲದವರಿಗೆ ಪ್ರಯೋಜನ ದೊರೆಯದೆ ಹೋಗಬಹುದೆಂದು ಬ್ರಾಹ್ಮಣರೇ ಮೊದಲಾದ ಅಲ್ಪ ಸಂಖ್ಯಾಕರು ಸಂದಿಗ್ಧಭಾವದವರಾಗಿದ್ದಾರೆ; ಅದರಂತೆಯೆ ಅಲ್ಪ ಸಂಖ್ಯಾಕರೆಲ್ಲ ಒಟ್ಟುಗೂಡಿದರೆ ವೀರಶೈವರ ಬಹುಮತ ವಾಗುವುದು ಸಾಧ್ಯವಿಲ್ಲವೆಂದು, ಬಹುಸಂಖ್ಯಾಕರಾದ ವೀರಶೈವರೂ ಸಂದಿಗ್ಧಭಾವದವರಾಗಿದ್ದಾರೆ. ಹೀಗೆ ಸಂದಿಗ್ಧಭಾವದವರಾಗುವುದು, ಇಬ್ಬರಲ್ಲಿಯೂ ಇರುವ ಅಧಿಕಾರ ಸ್ವಾರ್ಥದ ಲಕ್ಷಣವೆಂದು ಯಾವ ಮನಃಶಾಸ್ತ್ರಕೋವಿದನೂ ವಿಶ್ಲೇಷಣೆ ಮಾಡಿ ತೋರಿಸಬಹುದಾಗಿದೆ. ಸ್ವಂತದ ಅಧಿಕಾರ-ಲಾಭಗಳ ಕಡೆಗೆ ನೋಡದೆ, ಪ್ರಾಂತದ ಸುಖ-ಸಮಾಧಾನಗಳನ್ನೇ ಅನುಲಕ್ಷಿಸಿ ಆಡಳಿತ ನಡೆಯಿಸುವ ಯಾವ ಜಾತಿ-ಪಂಗಡದವರ ಕಡೆಗೆ ಅಧಿಕಾರಗಳು ಸಿಕ್ಕಲೀನು? ಅಲ್ಲದೆ ವ್ಯಕ್ತಿ ಒಂದು ವ್ಯಕ್ತಿಯಾಗಿರುವಾಗ 'ತಾನು, ತನ್ನವರು, ತನ್ನ ಜಾತಿ' ಎಂಬ ಅಹಂಕಾರಭಾವನೆ ಅದನ್ನು ಮುತ್ತಿಕೊಳಬಹುದು; ಆದರೆ ಅದೇ ವ್ಯಕ್ತಿ ಹೊಣೆಗಾರಿಕೆಯನ್ನರಿತ ಆಡಳಿತದ ಶಕ್ತಿಯ ಒಂದು ಅಂಗವಾದಾಗ, ಇಂತಹ ಸಂಕುಚಿತ ಭಾವನೆಗಳು ಏನೂ ಕೆಲಸಮಾಡಲಾರವು. ಒಂದು ವೇಳೆ ಆಗಲೂ ವ್ಯಕ್ತಿ ಈ ಭಾವನೆಗಳನ್ನಿರಿಸಿಕೊಂಡು ಹೊರಟರೆ, ಆದರ್ಶಬದ್ಧವಾದ ಆಡಳಿತಯಂತ್ರ, ಅಂತಹ ವ್ಯಕ್ತಿಯನ್ನು ತನ್ನಲ್ಲಿ ಇರಿಸಿಕೊಳ್ಳಲಾರದು; ದೂರಕ್ಕೆ ಬೀಸಾಡಿ ಬಿಡುವುದು.

* * *

ಬೇರೆ ಬೇರೆ ಬಿದರಿಕೆಗಳ ನೆಲೆಯಲ್ಲಿ 'ಈಗ ಇದ್ದಂತೆಯೆ ಇದ್ದು ಬಿಡೋಣ; ನಮಗೆ ಪ್ರಾಂತರಚನೆಯೇ ಬೇಕಿಲ್ಲ' ಎಂದು ಹೇಳುವುದೆಂದರೆ ಅದೊಂದು ಆತ್ಮಘಾತಕ ವಿಚಾರವೇ ಆಗಿದೆಯೆಂದು ಯಾವ ಬುದ್ಧಿವಂತನೂ ಹೇಳಬಹುದಾಗಿದೆ. ಕನ್ನಡಿಗರ ಬಹುಸಂಖ್ಯಾಕ ಪ್ರದೇಶಗಳೆಂದು ಮುಂಬಯಿ ಮದ್ರಾಸ್ ಆಧಿಪತ್ಯಗಳಲ್ಲಿ ಆಲಕ್ಷಿತವಾದರೆ, ಆ ಪ್ರದೇಶಗಳಲ್ಲಿರುವ ಕನ್ನಡಿಗರಿಗೂ ಹಿತವಿಲ್ಲ; ಕನ್ನಡೇತರರಿಗೂ ಹಿತವಿಲ್ಲ. ಹಿಂದುಗಳಿಗೂ ಹಿತವಿಲ್ಲ; ಮುಸಲ್ಮಾನರಿಗೂ ಹಿತವಿಲ್ಲ. ಲಿಂಗಾಯತರಿಗೂ ಹಿತವಿಲ್ಲ, ಲಿಂಗಾಯತೇತರರಿಗೂ ಹಿತವಿಲ್ಲ. ಇಲ್ಲಿ ನಾವು ಬರಿ ದುಡಿದು ಗಳಿಸಿಕೊಡುವ ಮಾನವಪಶುಗಳಾಗುವೆವು. ನಮ್ಮ ಬುದ್ಧಿ-ಸಂಪತ್ತುಗಳು ಹೆರವರ ಪ್ರಯೋಜನಕ್ಕಾಗುವುವು. ನಮ್ಮದನ್ನು ನಾವು ಇನ್ನೊಬ್ಬರಿಗೆ ಕೊಡಬಾರದೆಂದಲ್ಲ. ನಮ್ಮದೆಂಬ ಸ್ವಾತಂತ್ರ್ಯದಿಂದ ದಾನವೆಂದೊ ಧರ್ಮವೆಂದೊ ಕೊಟ್ಟು ಆತ್ಮತೃಪ್ತಿಯಿಂದೆ ಸಮಾಧಾನಪಡುವುದೆಲ್ಲಿ? ಬಲುಮೆಯಿಂದ ಕಿತ್ತುಕೊಂಡು ಹೋಗುತ್ತಿರುವುದನ್ನು ಹೇಡಿತನದಿಂದ ಸಹಿಸಿ, ಆತ್ಮತೃಪ್ತಿಯಿಂದ ಅಸಮಾಧಾನದಿಂದ ಜೀವಿಸಬೇಕಾಗಿ ಬರುವುದೆಲ್ಲಿ? ಎಲ್ಲಿಯದೆಲ್ಲಿ ಅಂತರ? ಇಂತಹ ಅತೃಪ್ತಿ-ಅಸಮಾಧಾನಗಳು ನಮಗೆ ನಿಜವಾಗಿಯೂ ಬೇಡವಾಗಿದ್ದರೆ, ಅದಕ್ಕೆ ಕರ್ನಾಟಕ ಏಕೀಕರಣವೊಂದೇ ಮಹತ್ತರವಾದ ಸಾಧನ. ಧಾರವಾಡದಲ್ಲಿ ಸೇರಿದ ಅಖಿಲ ಕರ್ನಾಟಕಸ್ಥರ ಮಹಾಸಭೆಯು, ಎಲ್ಲರಿಗೂ ಈ ಮಾತಿನ ಮನವರಿಕೆ ಮಾಡಿಕೊಡುವಂತಾಗಲಿ. ಬರಲಿರುವ ಭಾರತೀಯ ರಾಜ್ಯಘಟನೆಯ ಕಾಲದಲ್ಲಿ, ಕರ್ನಾಟಕ ಪ್ರಾಂತದ ಪ್ರತ್ಯೇಕೀಕರಣದ ಅವಶ್ಯಕತೆಯನ್ನು ಘಟನಾಸಮಿತಿಯ ಸದಸ್ಯರು ಒಪ್ಪಿಕೊಂಡೇ ತೀರುವಂತೆ, ಸುಸಂಘಟಿತವಾದ ಚಳವಳಿ ನಡೆಯುವಂತಾಗಲಿ.

—ಸಂಪಾದಕರು

ಬೇರಿಣ್ಣ ಉವಾಚ :—

ಸರ್ ಫಿರೋಜಖಾನ್ ನೂನರು 'ಅಂಬೇಡ್ಕರರೂ ಅವರ ದಲಿತ ವರ್ಗದ ಅನುಯಾಯಿಗಳೂ ಇಸ್ಲಾಂ ಧರ್ಮ ಸ್ವೀಕರಿಸಬೇಕು; ಜಗತ್ತಿನಲ್ಲಿಯೆ ಅಶ್ಯಾಪಾರವಾದ (ಕಲಕತ್ತೆಯ ಮನುಷ್ಯ ಬೇಟೆಯಿಂದ ಈ ಮಾತು ಸಿದ್ಧವಾಗಿಯೆ ಬಿಟ್ಟಿದೆ) ಇಸ್ಲಾಂ ಧರ್ಮದಲ್ಲಿ ಡಾ. ಅಂಬೇಡಕರರ ಅನುಯಾಯಿಗಳಿಗೆ ಯೋಗ್ಯ ಸ್ಥಾನ-ಮಾನ ದೊರೆಯದಿರದು' ಎಂದು ಒಂದು ಸಭೆಯಲ್ಲಿ ಸಾರಿ ಹೇಳಿದರಂತೆ. ಆದರೆ ಅಧಿಕಾರಸ್ಥಾನಕ್ಕಾಗಿ ತಮ್ಮ ತಮ್ಮೊಳಗೇ ಕಚ್ಚಾಡುವ ಮುಸ್ಲಿಂ ಲೀಗಿನ ಧುರೀಣರನ್ನು ಪ್ರತ್ಯಕ್ಷವಾಗಿ ನೋಡುತ್ತಿರುವ—ಅಧಿಕಾರ ತೃಷ್ಣಾ ಪೀಡಿತರಾದ—ಅಂಬೇಡಕರರು, ಯಾವ ಆಶೆಯಿಂದ ಇಸ್ಲಾಂ ಧರ್ಮ ಸ್ವೀಕರಿಸಬೇಕು? ಈಗಿದ್ದ ಲೀಗಿನ ಧುರೀಣರಿಗೇ ಸ್ಥಾನಗಳು ಸಾಲದಿರುವಾಗ, ಅಂಬೇಡಕರರಿಗೆ ನೂನರು ಎಲ್ಲಿಯ ಸ್ಥಾನ ಕಲ್ಪಿಸುವರು? ಇನ್ನು ಅಂಬೇಡ್ಕರರ ಅನುಯಾಯಿ ವರ್ಗ ತಮ್ಮಲ್ಲಿ ಬಂದರೆ ತಾವು ಬಹುಸಂಖ್ಯಾಕರಾಗುವೆವೆಂಬ ಆಣೆಕೆ ನೂನರಿಗಿರಬಹುದೆಂದು ತಿಳಿದರೆ 'ಅಂಬೇಡ್ಕರರಿಗೆ ಅನುಯಾಯಿಗಳಿರುವರೇ?' ಎಂದು ನಾವು ಕೇಳುವೆವು. ಇರುವರೆಂಬ ವಿಶ್ವಾಸದಿಂದ ಬೇಕಾದರೆ ಅಂಬೇಡಕರರು ಇಸ್ಲಾಂ ಧರ್ಮ ಸ್ವೀಕರಿಸಿ ನೋಡಲಿ; ಆಮೇಲೆ ನೂನರು ನಿರಾತೆಯಿಂದ ನಿಟ್ಟುಸಿರನ್ನು ಬಿಡಬೇಕಾಗುವ ಸಮಸಂಗ ಬಂದೀತು. ಇನ್ನೊಂದು ಮಾತಿನ ವಿಚಾರದ ಬಗೆಗೂ ನೂನ್ ಸಾಹೇಬರಿಗೆ ಎಚ್ಚರಿಕೆ ಹೊಟ್ಟು ಇಡಬೇಕಾಗಿದೆ: ಅಂಬೇಡಕರರ ಅಧಿಕಾರ ಲಾಲಸೆಯ ದೆವ್ವ, ಒಂದೆರಡಿನದಲ್ಲಿಯೆ ಅವರನ್ನು ಇಸ್ಲಾಂ ಧರ್ಮ ಬಿಡಿಸಿ ಇನ್ನೊಂದು ಧರ್ಮವನ್ನೂ ಹಿಡಿಸೀತು. ನೂನ್ ಸಾಹೇಬರೆ, ಮೊನ್ನೆ ಮೊನ್ನೆ ಸರ್ ಪದವಿ ಬಿಟ್ಟರುವಿರೇನೊ! ಗಡ್ಡ ಇನ್ನೂ ಬೆಳೆದಿರಲಿಕ್ಕಿಲ್ಲ ಅಲ್ಲವೆ? ಅಂಬೇಡ್ಕರರಿಗೆ ಗಡ್ಡ ಹಚ್ಚಲಿಕ್ಕೆ ಏನು ಮಾಡುವವರಿದ್ದೀರಿ? ತಮಗೆ ಬೇಕೇ ಆಗಿದ್ದರೆ ನನಗೆ ಶೇವಿ ಕಳುಹಿಸಿರಿ. ನನ್ನ ನರೆಗುರಿಯ ಉಣ್ಣೆ ಕಳುಹಿಸುತ್ತೇನೆ. ಅದರಿಂದ ಅಲಂಕೃತವಾದ ಅಂಬೇಡ್ಕರರ ನಾಟಕೀಯ ಇಸ್ಲಾಂ ಮುಖ, ಪದಿನಾರಾಣೆ ಮುಸಲ್ಮಾನರವಾಗಿ ಕಂಡೀತು. ಅಂಬೇಡಖಾನ್ ಝಿಂದಾಬಾದ್;

* * * *

ಕಲಕತ್ತೆಯ ಹಾದಿಬೀದಿಗಳಲ್ಲೆಲ್ಲ ಹರಿದ ನರಪರಾಧಿಗಳ ನೆತ್ತರು ಸುನ ಮುಂಬಯಿಯ ಜಿನ್ನಾ ಸಾಹೇಬರ ನರನರಗಳಲ್ಲಿ ಸೇರಿ ಧುಮುಧುಮಿಸುತ್ತಿದೆಯಂತೆ. ಅಲ್ಲಿ ಸತ್ತವರ ಭೂತಗಳೆಲ್ಲ ಮುಸ್ಲಿಂ ಧರ್ಮದ ದೀಕ್ಷೆ ಕೊಡಿಸಿ, ಲೀಗಿನ ಅನುಯಾಯಿಗಳನ್ನು ಮಾಡಿಕೊಂಡು, ಕಾಂಗ್ರೆಸ್ಸಿಗರೊಂದಿಗೆ ಅವರು ಕಾಳಗಕ್ಕೆ ಕಳುಹುವವರಿದ್ದಾರಂತೆ. ಜಿನ್ನಾ ಸಾಹೇಬರ ಒಡಲಲ್ಲಿ ದೇಪ ತುಂಬಿ ಅವರು ಮನುಷ್ಯರಂತಾಗಬೇಕಾದರೆ, ಇನ್ನೂ ಆವರಿಗೆ ರಕ್ತದ ಅವಶ್ಯಕತೆ ಬಹಳವಾಗಿದೆಯಂತೆ. ಇದಕ್ಕಾಗಿ ಬಹುದೊಂದಧವನ್ನು ಮಂತ್ರಿಗೆ ಬಂದಿತವಾದ ನರ್ಮಾನು ಕಳುಹಿದ್ದರೂ, ಹದರಿಕೆಯಿಂದಲೊ ಭೂತದಯೆಯಿಂದಲೋ ಅವರು ಮಂತ್ರಿ, ಜಿನ್ನಾ ಸಾಬೇಬರ ಫರ್ಮಾನನ್ನು ಮೂಲೆಗೆ ಹಾಕಿಬಿಟ್ಟಿರಂತೆ. ಅದಕ್ಕಾಗಿ ಸಾಹೇಬರಿಗೆ ತುಂಬ ತಳಮಳವಾಗಿದೆ; ಕಳವಳವಾಗಿದೆ. ಲೀಗಿನ ಸದಸ್ಯತ್ವದಿಂದ ಸಿಂಧದ ಮಂತ್ರಿವರ್ಗವನ್ನು ಬೆಗೆದು ಹಾಕಬೇಕೆಂದೂ ಅವರು ಗುಡುಗುಹಾಕುತ್ತಿದ್ದಾರಂತೆ. ಬಹುತಃ ಮುಂದಿನ ಲೀಗಿನ ಕಾರ್ಯಕಾರಿ ಮಂಡಲದ ಸೇರುವೆಯಲ್ಲಿ ಈ ಮಾತಿನ ತೀರ್ಮಾನವಾಗಬಹುದಾಗಿದೆ. ಕಲಕತ್ತೆಯಲ್ಲಿ ಕೊಲೆಗೊಂಡವರ ಭೂತಗಳನ್ನು ಈ ಸಿಂಧದ ಮಂತ್ರಿವರ್ಗದ ಬೆನ್ನು ಹತ್ತಿಸಿದರೂ ಹತ್ತಿಸಿದರು. ಕರ್ತುಮಯರ್ಕಾಂ ಅಸ್ಮಥಾ ಕರ್ತಾಂ ಶಕ್ತಿಯನ್ನು ಅಮೇರಿ-ಜರ್ಬಲರಿಂತ ಪಡೆದ ಜಿನ್ನಾ ಸಾಹೇಬರು ಏನನ್ನೂ ಮಾಡಬಲ್ಲರು. ತಮ್ಮ ತರುವಾಯ ತಮ್ಮ ಪೀಠವನ್ನು ಅಲಂಕರಿಸಲಿಕ್ಕೆ ಬಂಗಾಲದ ಸುಪ್ರಸನರ್ದಿಷ್ಟವಂದಿಮಾಗಧರೊಬ್ಬರನ್ನು ದೂರೆ. ಯಿತೆಂಬ ಸಂತೋಷದಲ್ಲಿ, ಜಿನ್ನಾ ಸಾಹೇಬರಿಗೆ ಈಗ ಅನ್ನ ನೀರುಗಳು ಕೂಡ ಬೇಕಾಗಿಲ್ಲವಂತೆ.

* * *

ಆಂದಿನ ಕಲಕತ್ತೆಯ ಕತ್ತಲೆ ಕೋಣೆಯ ಕತೆಯನ್ನು ಜನರೆಲ್ಲ ಇತಿಹಾಸದಲ್ಲಿ ಓದುತ್ತಿದ್ದರು. ಅದು ನಿಜವೋ ಸುಳ್ಳೋ ಎಂಬುದು ಇಂದು ಸಂದೇಹದ ಮಾತಾಗಿದ್ದರೂ, ಇಂದಿನ ಸುಪ್ರವರ್ದಿ ಮಂತ್ರಿಗಳು 'ಕಲಕತ್ತೆಯ ಕತ್ತಲೆಯ ದಿನ'ಗಳನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಿದರು. ಈ ಕಟುಕರ ಅಂಗಡಿಯನ್ನು ಮುಸ್ಲಿಂ ಲೀಗಿನ ಮುಖಪತ್ರಿಕೆಯಾದ 'ಡಾನ್' ಎಂಬುದು 'ಇದು ಮುಸ್ಲಿಂ ಜನತೆಯ ಕಾಳಗ' ಎಂದು ಬರೆದಿದ್ದ. ಇದನ್ನು ಓದಿಸಿ ಕೇಳಿ ನನಗೆ ತುಂಬ ಆಶ್ಚರ್ಯವಾಗಿದೆ. ಮೊನ್ನೆ ಮೊನ್ನೆ ನನ್ನ ಹುಡುಗನೊಬ್ಬ ಮಾಡಿ ಮಾಡಿ ತೋತಂಬರಿ ಬಿತ್ತಿದ್ದ. ಒಳ್ಳೆ ಹದ ಸಿಕ್ಕು ಬಿತ್ತಿಗೆ ನಾಟಿ, ಹಚ್ಚಹಸುರಾಗಿ ಚೆಂದವಾಗಿ ಬೆಳೆದು ನಿಂತಿತ್ತು. ಮೆಲುಗಾಳಿಗೆ ತಲೆದೂಗುತ್ತ ಕುಣಿಯುತ್ತಿತ್ತು. ಬೆದರಿದ ಕೋಡಗವೊಂದು ಗಿಡ. ಬದಿ ಹೂ ಎತ್ತ ಬಂದು, ಕೋತಂಬರಿಯ ಮುಡಿಯನ್ನೆಲ್ಲ ಮೊತ್ತಕದುಳಿಯಿತು; ಕೋತಂಬರಿ ಮುಂಡಿದು ಮುದ್ದೆಯಾಗಿ ಬಿದ್ದಿತು. ಬೋಣಹಯಜಮಾನ ಅದರ ತೌರುಸವನ್ನು ಕೊಚ್ಚಿಕೊಳ್ಳುತ್ತಿದ್ದ: 'ಛಲೆ ಛಲೆ, ಕೋತಂಬರಿಯ ಗಿಡಗಳೊಂದಿಗೆ ನನ್ನ ಕೋಡ ಜಾಳಗ ಮಾಡಿ, ಎಲ್ಲವನ್ನೂ ಮುರಿದು ಬಿಟ್ಟನು' ಎಂದು. ಕಲಕತ್ತೆಯಲ್ಲಿ ನಡೆದ ಕಾಳಗ ಇಂತಹದೇ ಅಲ್ಲವೆ? ಕರುತಿಂಗಳ ಕೂಸನ್ನು ಕಸಾಯಿಯಿಂದ ಇರಿಯುವುದೂ, ವಿದ್ಯಾರ್ಥಿನಿಯರ ವಸತಿಗೆ ಬೆಂಕಿಹಚ್ಚಿ ಅವರನ್ನು ಸುಡುವುದೂ, ಬೀದಿಯಲ್ಲಿ ನಿರಪರಾಧಿಯಾರನ್ನೋ ಕಡಿದು ಕೊಲ್ಲುವುದೂ 'ಡಾನ್' ಪತ್ರಿಕೆಯ ಸಂಜಯನಿಗೆ ಸವಿಯಾದ ಯುದ್ಧದ ಸುದ್ದಿ. ಇಂತಹ ಯುದ್ಧ ಮಾಡಿಸಿಯೆ ಅದು ಲೀಗಿಗೆ ಪಾಕಿಸ್ತಾನ ಕೊಡಿಸುವುದೇನು? ಇಂತಹ ಕಾಳಗ ಮಾಡಿಸಲಿಕ್ಕೆ ಭಾರತವಲ್ಲಿ ಬೇರೆಯವರಿಗೂ ಬೇರೆಯ ಸ್ಥಳಗಳು ಬೇಕಾದಷ್ಟು ಇರುವವೆಂಬುವನ್ನು ಬಾಸ ಕೈಕಾಲಾಗಿಟ್ಟು 'ಡಾನ್' ಏನು ಬಲ್ಲದು? ಅದಕ್ಕೆ ಬರಿ ಬಾಯಿ ಇದೆ. ತಲೆಯಿಲ್ಲ, ಕಾಲಿಲ್ಲ. ಹಿಂದೂ ಪುರಾಣದಂತೆ ಡಾನ್ (ಅರುಣ) ಅರಿವಿಲ್ಲದಿನಿಂದ ಇಳಿಯುದು.

* * *

ಡಾವಣಗೆರೆಯಲ್ಲಿ ಅಖಿಲ ಕರ್ನಾಟಕಸ್ಥರ ಮಹಾಸಭೆ ನೆರವೇರಲಿದೆ. ಮಹಾಸಭೆಯ ಗುರಿ

ಕರ್ನಾಟಕಸ್ಥರನ್ನು ಒಂದುಗೂಡಿಸಿ ಏಕೀಕರಣದ ಜಳವಳಿಗೆ ಸಿದ್ಧರನ್ನಾಗಿಸುವದು. ಆದರೆ ಅಲ್ಲಿ ಅಡಿಗೆಯವನನ್ನು ಮೊದಲು ಮಾಡಿಕೊಂಡು ಅಧ್ಯಕ್ಷರ ವರೆಗೂ ಜನಿವಾರದ ಪಕ್ಷದವರೆ ಬೇಕೋ ಶಿವದಾರದ ಪಕ್ಷದವರಿಂದಬೇಕೋ ಎಂದು ಸ್ವಾಗತಸಮಿತಿಯಲ್ಲಿ ಜಗಳಾಟ ನಡೆಯಿತು. ವೀರಣ್ಣ ಹೋಗಿ ದೂರ ನಿಂತು ನೋಡುತ್ತಿದ್ದಾಗ ಜನಿವಾರದ ಪಕ್ಷದವರ ಕೊರಳಲ್ಲಿ ಜನಿವಾರವಿರಲಿಲ್ಲ; ಶಿವದಾರದ ಪಕ್ಷದವರ ಕೊರಳಲ್ಲಿ ಶಿವದಾರವಿರಲಿಲ್ಲ. ಇಬ್ಬರ ಕೊರಳಲ್ಲಿಯೂ ಪರಾಧೀನತೆಯ ಉರುಳುಗಣ್ಣಿ ಲಗಿದಿದ್ದುದು ಮಾತ್ರ ಸ್ಪಷ್ಟವಾಗಿ ಕಂಡಿತು. ಈ ಮಾತನ್ನು ವನು ಬೇಕಾದಷ್ಟು ಕೂಗಿ ಹೇಳಿದರೂ, ವೀರಣ್ಣನ ಮಾತನ್ನು ಯಾರೂ ಲೆಕ್ಕಿಸಲೇ ಇಲ್ಲ. ಮಾತಿನ ಕುಸ್ತಿ ನಡೆದೇ ನಡೆಯಿತು. ದಿನಗಳು ಒಂದರ ಹಿಂದೊಂದು ತರಳತೊಡಗಿದುವು. ಮಹಾಸಭೆಯ ದಿನ ವೀರಪತ್ತಿರಕ್ಕೆ ಬಂದುವು. 'ಸ್ಕೂಟನೆ ಕೊಟ್ಟ ತಸ್ಸಿ ಗಾಗಿ ಮೂನ ಉಳಿಸಿಕೊಳ್ಳಲಿಕ್ಕೆ ಮಹಾಸಭೆ ಮೊಡಿ ಬಿಡೋಣ' ಎಂಬ ವಿಚಾರ ಇಬ್ಬರಲ್ಲಿಯೂ ಒಂದು ಒಟ್ಟಿಯ ಕ್ಷಣದಲ್ಲಿ ಮೂಡಿತು. ಆಗಲೇ 'ಜನಿವಾರಕ್ಕೊಂದು ಮಾಲೆ ಶಿವದಾರಕ್ಕೊಂದು ಮಾಲೆ' ಎಂಬ ಪಾಪೇರಿ ನ್ಯಾಯದ ನಿರ್ಣಯವಾಯಿತು. ಕಾಂತ ರಾವ್ ಕೃಷ್ಣ ಮಂತ್ರಿಗಳೂ, ಕಾಟೀಲ ಮಲ್ಲಿನಗೌದ ಮುಂಬಯಿ ಮಂತ್ರಿಗಳೂ ಆ ಮಾಲೆಗಳನ್ನು ಕಡೆಯುವ ಪಂಥಾತ್ತರಾದರು. ಇರುವ ರಕ್ತದ ಹಿರಿಯರ ಈ ಪಾನೇರಿನ್ಯಾಯ ಬಿಸಿ ನೆತ್ತರದ ಪರಯದವರು ಕೆಲವರ ಮನಸ್ಸಿಗೆ ಒಪ್ಪಿಗೆಯಾಗಿಲ್ಲ, ಅವರ ಮನಸ್ಸಾಗರಮಂಥನ ಎಂತಹ ಕಾಳಕೂಟವನ್ನು ಹೊರಕ್ಕೆ ಹಾಕುವುದೇನೋ ನಿಜಲಿಂಗರಂಗನಾಥರೇ ಬಲ್ಲರು....ಎಂದು ಹೇಳುತ್ತಿದ್ದಾನೆ ವೀರಣ್ಣ.

* * *

ಧಾರವಾಡದಲ್ಲಿಯ ರೇಶನಿಂಗ್ ಕಾರಭಾರದ ಮೌಜು

ನಾಗರಿಕಸಂಜೆನಿಯು ಹಬ್ಬದ ತಂಬಿಟ್ಟು-ಕಡುಬಿಗಾಗಿ ಧಾರವಾಡದ ನಾಗರಿಕರಿಗೆ ಬೆಲ್ಲ ಸಿಕ್ಕಲಿಲ್ಲ; ಸಕ್ಕರೆ ದೊರೆಯಲಿಲ್ಲ. ಮಕ್ಕಳ ಹೊಸ ಆಂಗಿಗಾಗಿ ಬಟ್ಟೆಯ ಪರಮಿಟ್ಟು ಸಿಕ್ಕಲಿಲ್ಲ. ಈಗ ರವಮರುಜಾನ್ ಹಬ್ಬದ ಸಲುವಾಗಿ ಬಟ್ಟೆಯ ಪರಮಿಟ್ಟು, ಪಟ್ಟಣದಲ್ಲಿ ಹಾರಾಡುತ್ತಿವೆ. ಬೆಲ್ಲ-ಸಕ್ಕರೆ ಬೇಕಾದರೆ ಆದೂ ಸಿಕ್ಕಬಹುದಾಗಿದೆ. ಈ ಪಕ್ಷಪಾತ ಯಾತರ ಸಲುವಾಗಿ? ಭೂತದಯೆಗಾಗಿಯೊ, ಭೀತಿಭಯಕ್ಕಾಗಿಯೊ? ತಂಬಿಟ್ಟು ಸಿಕ್ಕದೆ ನಾಗರ ಸಂಜೆನಿಯು ಹುತ್ತಪ್ಪ ಕೆರಳಿದನೆಂದರೆ ರೇಶನಿಂಗ್ ವ್ಯವಸ್ಥೆಯೆ ತಲೆಕೆಳಗಾದೀತು; ಆದರೆ ಹಿಂದುಗಳು ಪೂಜೆ ಮಾಡುವ ಹುತ್ತಪ್ಪ ಕಲ್ಲಿನದಿರುವುದೆಂಬುದರ ಅರಿವು ರೇಶನಿಂಗ್ ಅಡಳಿತವರಿಗೆ ಪೂರ್ಣವಾಗಿ ಇದೆ ಆದರೇ ಅವರಿಂದ ಹೀಗೆಲ್ಲ ಮಾಡಿಸುವುದೆಂದು ವೀರಣ್ಣ ನುಡಿದ.

—o—

ಜೀವನದ ವನದಲ್ಲಿ

★

ಶ್ರೀ. ಶಿವೇಶ್ವರ ದೊಡ್ಡಮನಿ, ನವಿಲೂರು

೧

ಜೀವನದ ವನದಲ್ಲಿ ಪಾವನದ ಶ್ರೀಗಂಧ
ಬೆಳೆದು ಶೋಭಿಸುತಿರಲು, ಪುಲಕ ಪೃಂದ
ನಿಮಿರುವುದು; ಜಗವೆಲ್ಲ ನನಗಾಗಿ ಆನಂದ-
ಯುತವೆಂದು ಸಾರುವುದು ಕಾವ್ಯಬಂಧ!

೨

ನಾ ಕೊಂಡ ಸಕ್ಕರೆಯ ಮುಕ್ಕಳೆಳಸಿದರೊಮ್ಮೆ
ವಿಧಿಯು ಬೆರಸುವುದದಕೆ ಇನ್ನ ಮೆಣಸು;
ಯಮಲೋಕದಂತಾಗೆ ಕನಿಗೆ ಬುವಿಯೆಲ್ಲವೂ
ಕಾಡಬೇಗೆಯೊಲಿಹವು ಕವಿಯ ಕನಸು!

೩

ನಗೆ ಮನವ ಮುಗಮುಗಿಸಿ ಸೊಗದ ನಂಬುಗೆಯಂಟೆ
ಕೂಗೋದು ಕಿವಿಬೆರೆಯು ಹರಿದೊಯ್ವುದು;
ಚಾಗ-ಭೋಗವ ಯೋಗ ಕೂಡಿಬರೆ, ಅದೊ ಘಂಟೆ!—
ಬಡನಾಡ ಗುಡಿಯಲ್ಲಿ ಘಣಘಣಿಪುದು!

೪

ಎಡೆಬಿಡಿಯ ಕೆಲಸದಲ್ಲಿ ಮನದ ಗಂಗಾನದಿಯು
ಹರಿದು ನೆಲದಲಿ ಫಲದ ಬಾವುಟವನೆತ್ತಿ—
ಸೆರೆಗುಡಿಸಿ ಮಾಯೆ ಕೈಬಿಟ್ಟ ಕಾಟದ ಕಪಿಯು
ಜಿಗಿಯುತ್ತೈತರೆ ವನಕೆ—ಅಳ್ಳು ನೆತ್ತಿ!

೫

ಅಳುಕಿದರೆ ಎಲ್ಲ ಮರೆ, ಮರುಗಿದರೆ ಇಲ್ಲ ತೆರೆ,
ಜೀವನದ ಕಹಿಯಸಿತು ನನೆ-ಜಗದ ಬಿಗುವು?
ಬೆಳುಪುಗಣ್ಣಿನೆ ನೀರಸಿಕ್ಕಿ ತೆಯ್ದಲ್ಲದಲೆ
ಬಣ್ಣಬರುವುದೆ ಜನ್ನ, ನಿನ್ನ ನೆಲವು!

೬

ಶ್ರೇಯಸೇವತೆ ಬಾಯ ಮುಚ್ಚಿಸಳೊ ಬಿಚ್ಚಿಹಳೊ?
ಜೇಳಲಿಕೆ ಯಾರಿಲ್ಲ ನಿನಗೆ ಬಂದು!
ಹಿರಿಯಜ್ಜಿ ಹುಡಿಯಲ್ಲಿ, ಉಜ್ಜಿ ಮಜ್ಜನ ಗೆಯ್ದು!
ಅಜ್ಜ, ಕಜ್ಜನನೆಸಗಿ ಹುಡಿಯ ಬಯಸು!

ಕೊನೆಯ ಭೆಟ್ಟಿ

(ಸಣ್ಣ ಕತೆ)*

ಶ್ರೀ. ರಾಮಚಂದ್ರ ಜೋಶಿ, ಕಿತ್ತೂರು

★

ಕೊಲೆಯ ಅಪರಾಧಿಯೆಂದು ಮರಣ ಶಿಕ್ಷೆಗೆ ಗುರಿಯಾದ ಪ್ರಕಾಶನ ಕತೆಯನ್ನು ಕೇಳಿ ಮಾನವ ಹೃದಯ ಮರುಗದಿರದು. ಆದರೂ ಅವನು ಅಪರಾಧಿಯೆ ಅಹುದೇನು?

★

[ಯುವಕನೊಬ್ಬನು ಹೊಟ್ಟೆಯ ಪಾಪಿಗಾಗಿ ಅಪರಾಧ ಮಾಡಿ ದೇಹಾಂತ ಶಿಕ್ಷೆಗೆ ಒಳಗಾಗಿದ್ದಾನೆ. ಆ ಸಮಯದ ಪತಿ-ಪತಿಗಳ ಕೊನೆಯ ಭೆಟ್ಟಿ]

೧

"ಅಯ್ಯೋ ನನ್ನ ದೈವವೆ, ಹಿಂದಿನ ಬಾಳ ನೆನಪುಗಳನ್ನೆಲ್ಲ ಜ್ಞಾಪಕಕ್ಕೆ ತಂದುಕೊಂಡರೆ ಅವೆಲ್ಲ ನನ್ನ ಹೃದಯವನ್ನು ಛೇದಿಸುವವು. ಅವೆಲ್ಲವನ್ನು ಹೇಳಬೇಕೆಂದರೆ ಯಾರೂ ಕೇಳುವವರಿಲ್ಲ. ಒಂದು ವೇಳೆ ಕೇಳಬೇಕೆಂಬುವರಿದ್ದರೂ ಮನಗೊಟ್ಟು ಕೇಳುವವರಿಲ್ಲ. ಬಲುಮೆಯಿಂದ ಹೇಳಿದ್ದಾದರೆ "ತಂಗೀ ನೀನು ದುರ್ಭಾಗ್ಯಳು; ಜಗದೀಶನನ್ನು ಸ್ಮರಿಸು" ಎಂದು ಹೇಳುತ್ತಾರೆ. ಆದರೆ ನಿರಾಧಾರಿಗಳಿಗೆ ಜಗದೀಶನೆಂದೂ ಸಹಾಯ ನೀಡಿಲ್ಲ; ಮುಳುಗುತ್ತಿರುವವರನ್ನು ಎಂದೂ ಪರಮಾತ್ಮನು ಮೇಲಕ್ಕೆತ್ತಿಲ್ಲ. ಹೊಟ್ಟೆಗಿಲ್ಲದವರ ಪಾಡನ್ನು ಕಣ್ಣಿಟ್ಟು ಎಂದೂ ಆತ ನೋಡಿಲ್ಲ. ಆ ಪ್ರೇಮಮಯ ಪರಮಾತ್ಮನು ನಂದನವನದಲ್ಲಿ ತನ್ನ ಪ್ರೇಮದ ಸತಿಯನ್ನೊಡಗೂಡಿ ನಲಿಯುತ್ತಲಿದ್ದಾನೆ; ಅವಳ ಕೈಯ ಗೊಂಬೆಯೂ ಆಗಿದ್ದಾನೆ. ಲಕ್ಷ್ಮಿ ದಯಾಗೆ ಒಲಿದಿರುವಳೊ ಅವರನ್ನೇ ಮಮತೆಯ ನೋಟದಿಂದ ಅವನು ನೋಡುತ್ತಾನೆ. ನನ್ನಂತಹ ದುರ್ಭಾಗ್ಯಳನ್ನು ಆ ಲಕ್ಷ್ಮೀಪತಿ ನೋಡುವನೇ? ದುರ್ದೈವವನ್ನೇ ಭಕ್ತಿಯಿಂದ ಪೂಜಿಸುವವಳು ನಾನು— ಎಂದಮೇಲೆ ಜಗದೀಶನನ್ನೇಕೆ ಕೂಗಲಿ? ಕೂಗಬೇಕಾದರೆ ಕೂಡ ನನ್ನ ದೈವವನ್ನೇ ಕೂಗುತ್ತೇನೆ. ಆಗ ದೈವವು ಬಂದು ಮತ್ತಿಷ್ಟು ದೊಡ್ಡ ಗುಡ್ಡದಷ್ಟು ಕಷ್ಟವನ್ನು ಹೊಟ್ಟು, ಭಕ್ತಳ ಇಚ್ಛೆ ಪೂರ್ತಿಗೊಳಿಸಿದೆನೆಂದು ತಿಳಿದು ಹನನ್ಮುಲಿಯಾಗಿ ನಲಿಯುತ್ತ ಹೊರಡುವುದು.....

....ಹಿಂದೆ ನನ್ನ ದೈವವನ್ನು ಕೂಗಿದೆ; ಅತಿ ಬಡವನಾದ ಎರಡಕ್ಷರದ ಅಂಗ್ಲ ಮುದ್ರೆಯೊತ್ತಲ್ಪಟ್ಟ [ಬಿ. ಎ. ಎಮ್. ಎ.]

* ಹಿಂದೀ ಕಥೆಯೊಂದನ್ನು ಅನುಸರಿಸಿ ಬರೆಯಲಾಗಿದೆ. ಲೇ.

ನಿರುದ್ಯೋಗಿಯಾಗಿ ಮೆರೆಯುತ್ತಿರುವವನ ಅರ್ಧಾಂಗಿಯಾಗಿ, ಅವನನ್ನು ಪರಾಧೀನನನ್ನಾಗಿ ಮಾಡಿದೆ. ಇನ್ನೊಂದು ಸಲ ಕೂಗಿದೆ; ಎರಡು ಮಕ್ಕಳ ತಾಯಿಯಾದೆ. ಮೂರನೆಯ ಸಲ ಕೂಗಲು ನನ್ನ ಸರ್ವಸ್ವಿಯಾದ ಪತಿರಾಯನಿಗೆ ಮುಳುಗಲು ಅನುಕೂಲವಾಗುವಂತೆ—ಕೊಲೆಯ ಆರೋಪದಿಂದ— ಸೆರೆಮನೆಗೆ ತೆರಳಿಸಿದೆ. ದೇಹಾಂತ ಶಿಕ್ಷೆಯು ವಿಧಿಸಲ್ಪಟ್ಟಿತು. ಈಗೆಲ್ಲ ಮುಗಿಯಿತು. ಇನ್ನು ದೈವವನ್ನು ಏನೆಂದು ಕೂಗಲಿ?

ಬಡತನದ ಬವಣೆಯೆ ಎಲ್ಲ ಅಪರಾಧಗಳ ಸಾರವಾಗಿದ್ದರೆ, ಅವರನ್ನು ದೇಹಾಂತ ಶಿಕ್ಷೆಗೆ ಗುರಿಪಡಿಸಲಿ, ಗುಂಡು ಹಾರಿಸಲಿ, ಫೋಫಿನ ಬಾಯಿಗೆ ಕೊಡಲಿ, ಜೂರು ಜೂರು ಮಾಡಲಿ, ಪುಡಿ ಪುಡಿ ಮಾಡಲಿ! ಅದರೆ ನಾನು ಹೇಳುವುದೇನೆಂದರೆ ಅವನು ಕೊಲೆಗಾರನಲ್ಲ; ಬಡವನಿದ್ದಾನೆ. ತಪ್ಪುಗಾರನಲ್ಲ; ಹೊಟ್ಟೆಗಿಲ್ಲದವನಾಗಿದ್ದಾನೆ. ಅವನಿಗೆ ಪಾಪಿ ಎನ್ನಬೇಡಿ; ಪಸಿದವನೆನ್ನಿ!....

....ಅವನು ಮಾಡಿದುದಾದರೂ ಅದಾವ ಪಾಪ? ಏನೂ ಇಲ್ಲ; ಏನೇನೂ ಇಲ್ಲ. ಬಡತನದ ಬವಣೆಗೋಸುಗ ಮತ್ತು ದೈವಗೇಡಿ ಮಕ್ಕಳಿಗೋಸುಗ ಏನೇನೋ ಪ್ರಯತ್ನ ಮಾಡಿದನು. ಕಾಯದೆಯ ಪ್ರಕಾರ ಈ ಸಾಹಸವನ್ನು ದೈವವು ಕೊಲೆಯ ಅಪರಾಧವೆಂದೆಣಿಸಿತು. ದೇಹಾಂತಶಿಕ್ಷೆಯ ನಿರ್ಣಯ ಕೊಡಲ್ಪಟ್ಟಿತು. ಅಷ್ಟೆ ಇಲ್ಲ. ನಾನು ಒಮ್ಮನಸ್ಸಿನಿಂದ ಹೇಳುತ್ತೇನೆ: ಏನೂ ಅಷ್ಟಿ ಇಲ್ಲ. ಅವನು ಸಾಯಲಿ, ಗಲ್ಲಿಗೇರಲಿ, ಆ ಸ್ಥಳದಲ್ಲಿ ಹೂಗಾಡಲಿ! ಇವೆಲ್ಲವಾದರೂ ನನಗೆ ಸಂತೋಷವಿಸೆ. ಅವನು ತಪ್ಪುಗಾರನಲ್ಲ. ನೂರಾರು ಸಾರಿ ಹೇಳುತ್ತೇನೆ: ಅವನು ಪಾಪಿಯಲ್ಲ, ಬಡವನಿದ್ದಾನೆ. ದುರ್ದೈವಿಯಿದ್ದಾನೆ. ಆದರೂ ಅವನೊಬ್ಬ ಮನುಷ್ಯ....

ಹೊಟ್ಟೆಯ ಪಾಪಿಗಾಗಿ ಕೆಟ್ಟ ಪ್ರಸಂಗಗಳಲ್ಲಿ ಜಿಜ್ಞನು; ಕಳವು ಮಾಡಿದನು; ದಾರಿ ಬಡಿದನು; ಎಲ್ಲನನ್ನೂ ಮಾಡಿದನು. ಇವೆಲ್ಲವೂ ಕೇವಲ ಹೊಟ್ಟೆಗಾಗಿ. ರೂಢಿನೀತಿಯಂತೆ ವಿಚಾರಿಸಿದರೆ ಇವನು ಅಪರಾಧಿ..ಕೊಲೆಗಾರ..ಕಳ್ಳ! ಆದರೆ ತನು ವಿಚಾರಿಸಿ! ಪಾಪಿಗಳ ಕಡಗೆ ಲಕ್ಷ್ಯಕೊಟ್ಟವ್ವಾದರೆ, ಎಂತಹ ಅನ್ಯಾಯ ನಡೆದಿದೆಯೆಂಬುದು ಕಾಣುವುದು. ಧನಿಕ ಮುಲ್ಲಪ್ಪ ಶೆಟ್ಟಿಯು ಊರೆಲ್ಲರ ಎಲ್ಲ ಭೂಮಿಗಳ ಮೇಲೆ ತಾಲಕೊಟ್ಟು ತನ್ನ ಕೈವಶಮಾಡಿಕೊಳ್ಳುತ್ತಲಿದ್ದಾನೆ; ಬಡ್ಡಿಯ ಜಾಲದಲ್ಲಿ ಸಿಲುಕಿ ನೂರಾರು ಒಕ್ಕಲು ಮಕ್ಕಳು ಸಾಯುತ್ತಲಿದ್ದಾರೆ. ಇದು ಪಾಪವಲ್ಲವೇ? ನನ್ನ ಒಬ ಗಂಡನ ಚಿಕ್ಕ ಅಪರಾಧವು ಮಾತ್ರ ಪಾಪವೇ? ಇರಲಿ, ಅವನನ್ನು ಜಗತ್ತಿನಿಂದ ಹೊರದೂಡಿದರೆ ಪಾಪದ ಜಾಗಿಲು ಮುಚ್ಚುವುದೆ? ಎಂದೂ ಇಲ್ಲ. ನಾನೆಂದೂ ಹೇಳುತ್ತೇನೆ; ಎಂದೆಂದೂ ಸಾಧ್ಯವಿಲ್ಲ. ಅಸಾಧ್ಯವಾದುದು....

೨

"ನಿನ್ನೆ ನನಗೊಂದು ಸರಕಾರಿ ಮುದ್ರೆಯೊತ್ತಿದ ಕಾಗದ ದೊರೆಯಿತು: 'ನಿನ್ನ ಪತಿಯು ಮಕ್ಕಳೊಂದಿಗೆ ನಿನ್ನನ್ನು ಕೊನೆಯ ಭೇಟ್ಟಿಯಾಗಲು ಇಚ್ಛಿಸುತ್ತಾನೆ. ಅವನುನಾಡಿದ್ದು ದೇಹಾಂತ ಶಿಕ್ಷೆ ಹೊಂದುವನು!' ನಾನು ನನ್ನ ಅರ್ಥಾಂಗದ ಭೇಟ್ಟಿಗಾಗಿ— ಅಲ್ಲ! ಅಲ್ಲಲ್ಲ!! ನನ್ನ ಪತಿಯ ಜೀವಂತ ಹೆಣವನ್ನು ನೋಡಲಿಕ್ಕೆ—ಹೊರಟೆ. ನಾನು ನೋಡಲಪೇಕ್ಷಿಸುವವನ ಮೇಲೆ ಈಗಾಗಲೆ ಯಮನ ನೆರಳು ಬಿದ್ದುಬಿಟ್ಟಿದೆ. ಅವನ ಕೊರಳಿಗೆ ಹಗ್ಗವನ್ನು ಕಟ್ಟಿ ಶವವನ್ನಾಗಿ ಒಪ್ಪಿಸಿ ಬಿಟ್ಟಿದ್ದಾರೆ. ಆದರೂ ಆತನು ನಮ್ಮೆಲ್ಲರಂತೆ ಜೀವಂತನಿದ್ದಾನೆ. ಇದು ನೋಜಿಗದ ಸಂಗತಿ....

....ತುನು ವಿಚಾರಿಸಿರಿ! ಈಗ ನನ್ನ ಸರ್ವಸ್ವಿಯು ಯಮನ ಶುತ್ತಾಗಿದ್ದಾನೆ. ನಾವು ಅವನನ್ನು ಕಾಣಲು ಹೊರಟಿದ್ದೇವೆ. ಈ ದಿನ ಕಾಣಲಪೇಕ್ಷಿಸುವವನ ಕುತ್ತಿಗೆಯು ಹಗ್ಗಗಳಿಂದ ಬಿಗಿಯಲ್ಪಟ್ಟು, ನಾಳೆ ಅವನ ಹೆಣವನ್ನು ನನಗೊಪ್ಪಿಸುವರು. ನಾನು ಕಾನೂನನ್ನು ದೋಷಿಯೆಂದೆಣಿಸುವುದಿಲ್ಲ; ಆದರೆ ಮಾನವತೆಯನ್ನು ಕೇಳುತ್ತೇನೆ: "ಅಕ್ಕಾ ಮಾತನಾಡು! ಒಂದು ಸಲವಾದರೂ ಮಾತನಾಡು! ನ್ಯಾಯವು ಮೂಕವಿದೆಯೊ, ಕಿವುಡು ಇದೆಯೋ; ಕುರುಡು ಇದೆಯೊ? ಅದರ ಮುಂದೆ ನಿಂತವನ ಪರೀಕ್ಷೆಯನ್ನದು ಮಾಡಿಯೆ ಬಿಡುವುದು. ನಿನಗೂ ಬುದ್ಧಿಯಿದೆ. ನನ್ನ ಪರವಾಗಿ ತುನು ವಿಚಾರಿಸಿ ಹೇಳು"....

...ನಾನು ಹೊರಟೆ; ಸ್ವಾಭಿಮಾನವನ್ನು ಬೀಸಾಕಿ ಹೊರಟೆ. ಒಂದು ಸಲ ಅವನ ಪಾದಗಳನ್ನು ಮುದ್ದಿಡುವೆ. ತುನುಜೊತ್ತು ಹೃದಯದ ಮೇಲೆ ತಲೆಯಿಟ್ಟು ಅಳುವೆ. ಕೇಳುವೆ: 'ದೈವವೇ, ನನ್ನ ಪಾದಿಯನ್ನೇ ನೋಡುತ್ತಿರುವೆಯೊ? ಮರೆತು ಬಿಡುವುದಿಲ್ಲವೊ? ದುರ್ದೈವಿಯಾದ ನಾನು ನಿನ್ನ ತಾರುಣ್ಯದಲ್ಲಿ ಸುಖಕೊಡಲಿಲ್ಲ; ವಿಷ ಕಲಸಿದೆ. ಆದುದರಿಂದ ಕ್ಷಮೆ ಯಾಚಿಸುವೆ. ಮರೆತು ಬಿಡು! ಇವು ನಿನ್ನ ಮಕ್ಕಳು. ಈತ ನಿನ್ನ ಮಗನು! ಒಂದು ಸಲ ಮುದ್ದಿಡು! ಒಂದು ಸಲವಾದರೂ ಜನಕನ್ನೇಹದಿಂದ ನೋಡು! ಇದು ನಿನ್ನ ಮಗು!'.... ಜೇಲಿನ ದಾರಿಯನ್ನು ಹಿಡಿದೆ. ಬಗಲಲ್ಲಿ ಮಗು ಇದ್ದಿತು. ಅವನು 'ಅಮ್ಮಾ ಎಲ್ಲಿಗೆ ಹೊಕಟೆ?' ಎಂದು ಕೇಳಲು ಏನು ಉತ್ತರವನ್ನು ಕೊಡಲಿ? ಏನು ಹೇಳಲಿ ಆ ಆಜ್ಞಾನಿಗೆ? "ಮಗುವೆ ತಂದೆಯನ್ನು ನೋಡಲು ಬರುವುದಿಲ್ಲವೊ? ಅವರು ನಿನ್ನನ್ನು ನೋಡಲು ಇಚ್ಛಿಸುತ್ತಾರೆ!' ಎಂದು ಹೇಳಿದೆ. ಗೋಪಾಲನು ಆನಂದಭರಿತನಾಗಿ ಮಾತನಾಡಿದನು: "ಅಮ್ಮಾ ಬಹುದಿನಗಳಿಂದ ತಂದೆಯು ಭೆಟ್ಟಿಯಾಗಿಲ್ಲ. ಅವರನ್ನು ಆಟದ ಒಡವೆಗಳನ್ನು ಜೀಡುವೆ; ದುಡ್ಡನ್ನು ಕೇಳುವೆ. ಅವರು ನನ್ನ ತಂದೆಯಿದ್ದಾರೆ. ತಂಗಿಗೆ ಒಂದು ಸಹ ಆಟದ ಒಡವೆಗಳನ್ನು ಕೊಡುವುದಿಲ್ಲ. ನನ್ನ ತಂದೆ ಅವಳಿಗೆ ಏನಾಗಬೇಕು?"

ನನ್ನ ಹೃದಯವು ಈ ಮಾತುಗಳಿಂದ ಜೂರು ಜೂರಾಗಿ ಬಿಟ್ಟಿತು. 'ಅಯ್ಯೋ ದುರ್ದೈವಿ ಮಗುವೇ, ನಿನ್ನ ತಂದೆಯ ಮೇಲೆ ಯಮನ ಕಣ್ಣು ಈಗಾಗಲೆ ಬಿದ್ದಿದೆ. ಜೀವನದ ದಿನಗಳನ್ನು ಜೀರಳಿನಿಂದ ಎಣಿಕೆ ಹಾಕುತ್ತಲಿದ್ದಾನೆ. ಸರೆಮನೆಯಲ್ಲಿ ಸಿಲುಕಿದ್ದಾನೆ. ಮಗನೆ, ಪರಮಾತ್ಮನನ್ನು ಸ್ಮರಿಸು' ಎಂದು ಧೈರ್ಯದಿಂದ ಹೇಳಿದೆ.

ಗೋಪಾಲನು ನನ್ನ ಸೆರಗು ಜಗ್ಗಿ 'ತಂದೆಯವರು ಎಂದು ಬರುವರು?' ಎಂದು ಕೇಳಿದನು. ಮತ್ತೆ 'ನಂಗಡ ಕರೆದುಕೊಂಡು ಬರುವೆ. ನೀನು ಅಡ್ಡಿ ಮಾಡಬೇಡ; ಅವರು ನನಗೆ ನೆರೆಮನೆಯ ಗೋವಿಂದನಂತಹ ಕಾಲುಗಾಡಿಯನ್ನು ಕೊಡಿಸುವರು. ಆತನು ತನ್ನ ಗಾಡಿಯನ್ನು ಮುಟ್ಟಲು ಸಹ ಕೊಡುವುದಿಲ್ಲ. ಕೈಹಿಡಿದರೆ ಸಾಯ್‌ಕಲ್-ಗಾಡಿ ಮುರಿಯುವುದೇ? ಆತನು ಬಲು ದುಷ್ಟನು. ತಂಗಿಗೂ ನಾನು ಮುಟ್ಟಗೊಡಲಾರೆ ಅವಳು ನನ್ನ ಪಾಟಿಯನ್ನು ಒಡೆದಿರುವಳು. ಈ ಸಂಗತಿಯನ್ನೆಲ್ಲ ತಂದೆಗೆ ಹೇಳುವೆ.' ಎಂದು ಉತ್ಸಾಹದಿಂದ ಮಾತನಾಡಿದನು. ಜೇಲರನು ನಮ್ಮನ್ನು ಕರೆದುಕೊಂಡು ಹೋಗಲು ಆಜ್ಞೆಯಿತ್ತನು. ಒಬ್ಬ ದೂತನು ಬಂದು ನಮ್ಮನ್ನು ಕರೆದುಕೊಂಡು ಹೊರಟ. ಇಕ್ಕೆಲಗಳಲ್ಲಿಯೂ ಕತ್ತಲೆಯು ಕೋಣೆಗಳು, ದೊಡ್ಡ ದೊಡ್ಡ

ಸರಪಳಿಗಳಿಂದ ಬಿಗಿಯಲ್ಪಟ್ಟ ಕೋಣೆಯಲ್ಲಿ ಪರಮಾತ್ಮನ ಶ್ರೀಷ್ಠ ಕಲೆಯಿಂದ ನಿರ್ಮಿತರಾದ ಶ್ರೀಷ್ಠ ಮಾದರಿಯ ಮನುಷ್ಯರಿದ್ದಾರೆ. ಒಬ್ಬರಲ್ಲ, ಇಬ್ಬರಲ್ಲ, ಮೂವರಲ್ಲ, ನೂರಿನ್ನೂರು ಜನರು. ಜಗತ್ತಿನಲ್ಲಿ ದುರ್ಭಾಗ್ಯಳು ನಾನೊಬ್ಬಳಲ್ಲ ; ನಾವಿನ್ನೂರು ಜನರಿದ್ದಾರೆ.

....ನಮ್ಮನ್ನು ಕಗ್ಗತ್ತಲೆಯ ಕೋಣೆಯ ಮುಂದೆ ನಿಲ್ಲಿಸಿದರು. ಮಗುವು ಹೆದರಿ ನನ್ನ ಕಾಲುಗಳ ಮಧ್ಯದಲ್ಲಿ ಆಶ್ರಯಹೊಂದಿ ನಡುಗಹತ್ತಿತು.

ನಾನು ನಾಲ್ಕೂ ನಿಟ್ಟಿಗೆ ನೋಡಿದೆ. ಇದು ದೇಹಾಂತ ಶಿಕ್ಷೆಯ ಮನೆ. ಕೈದಿಗಳು ತಮ್ಮ ಜೀವನದ ಅಂತಿಮ ಕ್ಷಣವನ್ನು ಇಲ್ಲಿಯೆ ಕಳೆಯುತ್ತಾರೆ. ಒಂದು ವೇಳೆ ಈ ಮನೆಗೆ ಮಾತಾಡುವ ಶಕ್ತಿ ಇದ್ದದ್ದಾದರೆ, ಅದನ್ನು ಆದಿಶೇಷನಿಗೂ ಬಣ್ಣಿಸಲು ಅಸಾಧ್ಯವೇ ಸರಿ. ಈಮನೆಯು ಇಟ್ಟಿಗೆಗಳು ಇಂತಹ ಪಾಪಿಗಳ ನಿಟ್ಟುಸಿರಿನಿಂದಲೆ ಗಟ್ಟಿಯಾಗಿವೆ. ಮತ್ತು ನೆಲಗಟ್ಟಿನ ಮೇಲೆ ಎಷ್ಟು ಜನರ ಕಣ್ಣೀರು ಇಂಗಿಕೊಂಡಿರಬಹುದು? ಅವನ್ನೆಲ್ಲ ಒಟ್ಟುಗೂಡಿಸಿದರೆ ಜಗತ್ತಿನ ಅರ್ಧ ಸಭ್ಯತಾಭಿಮಾನಿಗಳು ಮುಳುಗುವುದರಲ್ಲಿ ಸಂದೇಹವಿಲ್ಲ. ಕತ್ತಲೆಯ ಕೋಣೆಯಲ್ಲಿ ಮೃತ್ಯುದೇವತೆಯು ಕುಣಿಯುತ್ತಲಿದ್ದಾಳೆ. ಶಿವಶಿವಾ! ಕೋಣೆಯೊಳಗಿಂದ ಒಮ್ಮೆಲೇ ಝಣಣಣ.... ಎಂಬ ಸಪ್ಪಳು ಕೇಳಿ ಬಂತು. ಒಬ್ಬ ಕೊರಗಿದ—ಸೊರಗಿದ—ನಿರಾಶಯುಕ್ತನಾದ—ಕಣ್ಣಲ್ಲಿಯೆ ಜೀವಹಿಡಿದ ಯುವಕನು ಬಾಗಿಲಹತ್ತಿರ ಬಂದನು. ಇವನೇ ಆ ಕಗ್ಗತ್ತಲೆಯ ಕೋಣೆಯಲ್ಲಿರುವ ಪ್ರಕಾಶ! ನನ್ನ ಪ್ರಕಾಶ! ನನ್ನ ಗೋಪಾಲನ ಪ್ರಕಾಶ ಹಾಗೂ ನನ್ನ ಮಗಳ ಪ್ರಕಾಶ! ದೂತನು 'ಐದೇ ನಿಮಿಷಗಳ ಸಮಯವಿದೆ, ಅಷ್ಟರಲ್ಲಿ ಮಾತಾಡಿ ಮುಗಿಸಿಕೊಳ್ಳಿರಿ!' ಎಂದು ಹೇಳಿದನು. ನನಗೆ ದೂರಸರಿದು ನಿಂತು ಮಾತನಾಡಲು ಆಜ್ಞೆಯಾಯಿತು. ನಾನು ಕೈದಿಗೆ ಏನಾದರೂ ಕೊಡುವೆನೆಂಬ ಭಯವಿತ್ತು. ನಾನು ಅವರನ್ನು ನೋಡಿದೆ. ಅವರ ಮುಖವು ಮೀಸೆ-ಗಡ್ಡಗಳಿಂದ ಮುಚ್ಚಲ್ಪಟ್ಟಿದೆ. ಕಣ್ಣುಗಳು ಬಳಸೇರಿವೆ. ದೇಹವು ಸೊರಗಿ ಕಡ್ಡಿಯಾಗಿದೆ. ಗೋಪಾಲನಿಗೆ ತಂದೆಯವರಿಗೆ ನಮಸ್ಕರಿಸೆಂದು ಹೇಳಿದೆ. ಏನೂ ಅರಿಯದ ಮಗು ಭೂಮಿಗೆ ತಿರಜಾಗಿ ಕರ ಮುಗಿದನು ನಾನೂ ನಮಸ್ಕರಿಸಿದೆ. ಅವರು ನಸುಗತ್ತಲೆಯಲ್ಲಿ ಅಡಿಗೆ ನಿಂತಿದ್ದರು. ಗದ್ಗದಿತ ಕಂಠದಿಂದ ಮಾತನಾಡಿದರು: 'ಇದು ಕೊನೆಯ ಭೆಟ್ಟಿ ಇದೆ, ಕೊನೆಯ ಹರಕೆ ಇದೆ, ಹಾಗೂ ಕೊನೆಯ ಸಂಭಾಷಣೆ ಇದೆ. ಸಾಕು. ನಾಳೆ ಮುಂಜಾವು ಬಂದು ನನ್ನ ಶವವನ್ನು ತೆಗೆದುಕೊಂಡು ಹೋಗು. ಜೀಲರನಿಗೆ ಹೇಳಿ ಇಟ್ಟಿದ್ದೇನೆ.'

ಆಗ ನಾನು ತಲೆ ಹಿಡಿದುಕೊಂಡು ಕುಳಿತುಬಿಟ್ಟೆ.

೩

ಗೋಪಾಲನು 'ತಂದೆ, ಮನೆಗೆ ಹೋಗೋಣ ನಡೆ' ಎಂದು ನುಡಿದನು. ಅದನ್ನು ಕೇಳಿ ನನಗೆ ದುಃಖದ ಮೇಲೆ ಬರೆಕೊಟ್ಟಂತೆ ಆಯಿತು. ಇದೆಂಥ ಸಾತ್ವಿಕ-ಆಗ್ರಹ! ಅವನ ತಂದೆಯು ಮಾತನಾಡಿದರು:—'ಮಗುವೆ, ನಾನು ಪರಲೋಕಕ್ಕೆ ತೆರಳುವನಿದ್ದೇನೆ. ನೀನು ಅಭ್ಯಾಸ ಮಾಡುತ್ತಿರು. ಅವಳನ್ನು ಕಾಡಬೇಡ!'

ಆಗ ಅವರ ಕಣ್ಣುಗಳಿಂದ ನೀರು ಧಾರೆಧಾರೆಯಾಗಿ ಹರಿಯುತ್ತಿರುವುದನ್ನು ಕಂಡೆ. ಅವರು ಕಲ್ಲುಗೊಂಬೆಯಂತೆ ನಿಂತಿದ್ದರು. ಗೋಪಾಲನು ಮತ್ತೆ ಮಾತನಾಡಿದನು: 'ತಂಗಿ ನನ್ನ ಚಾಟಿಯನ್ನು ಒಡೆದಿದ್ದಾಳೆ; ಹೊಸ ಚಾಟಿಯನ್ನು ಕೊಡಿಸು!'

ಅವರು ನಿಟ್ಟುಸಿರು ಬಿಟ್ಟು ನನಗೆ ಹೇಳಿದರು: 'ಮಗುವಿನ ಚಾಟಿ ಒಡೆದಿದೆಯಂತೆ; ಅತನಿಗೊಂದು ಹೊಸ ಚಾಟಿಯನ್ನು ಕೊಡಿಸು!'

ನಾನು ಏನೆಂದು ಹೇಳಲಿ? ನನ್ನ ಎರಡೂ ಕಿವಿಗಳು ಕೇಳದಂತಾಗಿವೆ. ಕಣ್ಣುಗಳ ಮುಂದೆ ಕಗ್ಗತ್ತಲೆ ಕವಿದಿದೆ. ಅವರು ಮತ್ತೆ ಹೇಳಿದರು:—'ಯೋಗ್ಯ ರೀತಿಯಿಂದ ಸುಖವಾಗಿರು, ಮಕ್ಕಳನ್ನು ಪ್ರೀತಿಯಿಂದ ಕಾಪಾಡು. ಗೋಪಾಲನ ಶಿಕ್ಷಣವನ್ನು ನುಂದುವರಿಸು. ನಾನಂತೂ ಹೊರಟೆ. ಗೋಪಾಲನನ್ನು ನಿನಗೊಪ್ಪಿಸಿದ್ದೇನೆ. ಜಂತೆಮಾಡಬೇಡ!'

ನಾನು ಮೂಕನಾದೆ. ಮತ್ತೂ ..... ಕುತ್ತಿಗೆ ಬಿಗಿಯಿತು. ಕಣ್ಣುಗಳಿಂದ ನೀರು ಧಾರೆಧಾರೆಯಾಗಿ ಹರಿಯುಹತ್ತಿತು.

ದೂತನು 'ಐದು ನಿಮಿಷಗಳಾದುವು, ನಾಳುಮಾಡಿ ನಡೆಯಿರಿ.' ಎಂದು ಕೂಗಿದನು. 'ಬಳ್ಳೀದು ಹೋಗುವೆ' ಎಂದು ನಾನೆಂದೆ. "ಶುಭವಾಗ್ತು! ನನ್ನ ಪರವಾಗಿ ಗೋಪಾಲನನ್ನು ಒಂದುಸಲ ಮುದ್ದಿಡು ಸೋಫಿಯ. ಪರಮಾತ್ಮನು ನಿನಗೆ ಧೈರ್ಯಕೊಡಲಿ. ಮುಂದಿನ ಜನ್ಮದಲ್ಲಿ ಫೆಟ್ಟಿಯಾಗುವೆ!"

ಮೂತನು ನಿಟ್ಟಿಗೆದ್ದು 'ಐದು ನಿಮಿಷಗಳಾದುವು. ಸಮಯ ಮುಗಿಯಿತು; ನಡೆಯಿರಿ!'—ಎಂದು ಮತ್ತೊಂದುಸಲ ಗರ್ಜಿಸಿದ ...

ಹಾನಗಲ್ಲಿನಲ್ಲಿ ನಮ್ಮ ಏಜಂಟರು;
ಶ್ರೀ. ಎಸ್. ಎಲ್. ಅಕ್ಕಿಪಳ್ಳಿ
ನ್ಯೂಜ್ ಏಜಂಟ್.

ಶಿರಸಿಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಕೆ. ಭಗತ್
ನ್ಯೂಜ್ ಏಜಂಟ್.

ಭಾಷಾವಿಜ್ಞಾನ—

ಲೇಖನಾಂಕ ೩

ಪ್ರಾಕೃತ ಭಾಷೆಗಳು

ಶ್ರೀ. ಕೆ. ಟಿ ಪಾಂಡುರಂಗಿ ಬಿ. ಓ. ಎಲ್. ಧಾರವಾಡ

★

ಇಂದು ಸಂಸ್ಕೃತಕ್ಕಿರುವ ಸನ್ಮಾನದ ಸ್ಥಾನ ಪ್ರಾಕೃತ ಭಾಷೆಗಳಿಗಿಲ್ಲವಾದರೂ, ಪ್ರಾಕೃತದಲ್ಲಿ ಹುದುಗಿರುವ ಜ್ಞಾನಭಾಂಡಾರ, ರಸಭಾಂಡಾರಗಳಿಗೇನೂ ಕೊರತೆಯಿಲ್ಲ. ಸಂಸ್ಕೃತದಂತೆ ಪ್ರಾಕೃತಭಾಷೆಯು ಸಾಹಿತ್ಯದ ಕಡೆಗೂ ನಮ್ಮ ಜನದ ಮನಸ್ಸನ್ನು ತಿರುಗಬೇಕು.

★

ಮುನಿತ್ರಯರು ಭಾಷೆಯ ಸಮಸ್ಯೆಗಳನ್ನು ಮುಖ್ಯವಾಗಿ ಸಂಸ್ಕೃತ ಭಾಷೆಯನ್ನು ಅಭ್ಯಾಸಮಾಡಿ ಅದೇವಭಾಷೆಯ ಅಂತಸ್ತನ್ನು ಹೆಚ್ಚಿಸುತ್ತಿರುವಾಗಲೆ, ಭಾರತದ ವಾಙ್ಮಯ ಚರಿತ್ರೆಯ ಮಧ್ಯಯುಗದಲ್ಲಿ ಬಹುಕೀ ಪ್ರಾಮುಖ್ಯತೆಯನ್ನು ಪಡೆದ ಇನ್ನೊಂದು ಭಾಷೆ—ಭಾಷೆಗಳ ಗುಂಪು—ಉದಯವಾಯಿತು. ಇದು ಪ್ರಾಕೃತ ಭಾಷೆ.

ಸಂಸ್ಕೃತ ನಾಟಕಗಳಲ್ಲಿ ಸ್ತ್ರೀಪಾತ್ರಗಳೂ ಹೀನ ಪಾತ್ರಗಳೂ ಆಡುವ ಭಾಷೆ "ಪ್ರಾಕೃತ ಭಾಷೆ" ಎಂದು ಸಾಧಾರಣವಾಗಿ ಗುರುತಿಸಲ್ಪಡುತ್ತದೆ; ಆದರೆ ಅದರ ಕ್ಷೇತ್ರವು ಇಷ್ಟೊಂದು ಪರಿಮಿತವಾಗಿರಲಿಲ್ಲ. ಬಾಧ್ಯ ಜನಾಂಗದ ಧಾರ್ಮಿಕ ಭಾಷೆಯಾಗಿ ಅದು ವಿಶಾಲವಾದ ವಾಙ್ಮಯವನ್ನೊಳಗೊಂಡಿದೆ. ಗಾಥಾ ಸಪ್ತಶತೀ, ಗೌಡವಹೋ, ಸೇತುಬಂಧ ಮೊದಲಾದ ಅತ್ಯುತ್ತಮ ಸಾಹಿತ್ಯಕೃತಿಗಳು ಪ್ರಾಕೃತಭಾಷೆಯಲ್ಲಿಯೇ ಇವೆ. "ಅಮಿಅಂ ಪಾಉಅಕವ್ವಂ" ಎಂದರೆ 'ಪ್ರಾಕೃತ ಕಾವ್ಯವು ಅಮೃತಮಯವಾಗಿದೆ' ಅದುದರಿಂದ 'ಅದನ್ನು ಕೇಳಲೂ ಓದಲೂ ಬಾರದವರು ಕಾವ್ಯಕಲೆಯನ್ನು ವಿಮರ್ಶಿಸಲ್ಲರೇ?' ಎಂದು ಸಾತವಾಹನನು ಹೇಳಿದ್ದೆ ಮಾಡುತ್ತಾನೆ. "ಅಮ್ಮಿಲ್ಲಪ ಲಾವಣ್ಣಂ ಪಯಂಪಬ್ಭಾಯಾಯೇ" ಎಂದರೆ 'ಪ್ರಾಕೃತದ ಛಾಯೆಯಿಂದಲೂ ಕಾವ್ಯದ ಸೌಂದರ್ಯವು ಹೊರಸೂಸುತ್ತದೆ' ಎಂದು ವಾಕ್ಪತಿ ರಾಜನು ಹೊಗಳುತ್ತಾನೆ. "ಪರುಸೋ ಸಕ್ಕಅ ಬಂಧೋ ಬಾಉಅ ಜಂಪೋವಿ ಹೋಇ ಸುಕುಮಾರೋ" (ಸಂಸ್ಕೃತದ ಶೈಲಿಯು ಪರುಷವಾಗಿರುತ್ತದೆ. ಪ್ರಾಕೃತ ರೀತಿ ಕೋಮಲವಾದುದು; ಆದ್ದರಿಂದ ತಮ್ಮ ಕಾವ್ಯವನ್ನು ಪ್ರಾಕೃತದಲ್ಲಿ ಬರೆಯುತ್ತೇವೆ) ಎಂದು ಜಯರಕ ಎಲ್ಲ ಪ್ರಾಕೃತಕವಿಗಳೂ ಹೇಳಿಕೊಳ್ಳುತ್ತಾರೆ. ಸಂಸ್ಕೃತ ಕವಿಗಳೇ 'ಪ್ರಕೃತಿ ಮಧುರಾಃ ಪ್ರಾಕೃತ ಗಿರಃ' ಎಂದು ಮೆಚ್ಚಿಗೆಯನ್ನು ಸೂಚಿಸಿದ್ದಾರೆ.

ಪ್ರಾಕೃತ ಭಾಷೆಯ ಅಸ್ತಿತ್ವವನ್ನು ಋಗ್ವೇದದಲ್ಲಿಯೆ ಕಾಣಬಹುದೆಂದು ಇತ್ತೀಚಿನ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ವೈದಿಕ ವಾಙ್ಮಯದಲ್ಲಿ ಮುಂದೆ ಭಾರತದಲ್ಲಿ ಬೆಳೆದು ಬಂದ ಎಲ್ಲ ಅಂಶಗಳ ಮೂಲವನ್ನೂ ಗುರುತಿಸಬಹುದಾದುದರಿಂದ, ಮೇಲಿನ ಹೇಳಿಕೆಯಲ್ಲಿ ಸತ್ಯಾಂಶವಿದೆ. ಆದರೂ ಸ್ಪಷ್ಟವಾಗಿ ದೊರೆಯುವ ಪ್ರಾಕೃತದ ಅತಿ ಪ್ರಾಚೀನ ಮಾದರಿಯೆಂದರೆ ಅಶೋಕನ ಶಾಸನಗಳಲ್ಲಿ. ಈ ಶಾಸನಗಳ ಭಾಷೆಯು ಮೂರು ಪ್ರಾದೇಶಿಕ ಭೇದಗಳನ್ನು ತೋರಿಸುತ್ತದೆ. ಮುಂದೆ ಜೇರೆ ಜೇರೆ ಪ್ರಾದೇಶಿಕ ಹೆಸರಿನಲ್ಲಿ ಪ್ರಾಕೃತ ಭಾಷೆಯು ಬೆಳೆದು ಬಂದಿದೆ.

ಪ್ರಾಕೃತ ವ್ಯಾಕರಣಕಾರರಲ್ಲಿ ಬಹುಜನರು, ಪ್ರಾಕೃತ ಭಾಷೆಗಳು ಸಂಸ್ಕೃತದಿಂದ ಹುಟ್ಟಿವೆಯೆಂದು ನಂಬಿದಂತಿದೆ. ಹೇಮಚಂದ್ರನು "ಆರ್ಷ ಪ್ರಾಕೃತಂ" ಎಂಬ ತನ್ನ ಸೂತ್ರಕ್ಕೆ ವೃತ್ತಿಯನ್ನು ಬರೆಯುತ್ತ 'ಸ್ಪಷ್ಟಕೀ ಸಂಸ್ಕೃತಂ ತತ ಆಗತಂ ಪ್ರಾಕೃತಂ' ಎಂದು ಪ್ರಾಕೃತವು ಸಂಸ್ಕೃತಜನ್ಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಪ್ರಾಕೃತ ಸರ್ವಸ್ವಕಾರ. ವಾಗ್ಭಟ ಮೊದಲಾದ ಇನ್ನೂ ಅನೇಕ ಪ್ರಮುಖ ಪ್ರಾಕೃತ ವ್ಯಾಕರಣಕಾರರೂ 'ಪ್ರಕೃತೇಃ ಸಂಸ್ಕೃತಾಯಾಸ್ತು ವಿಕೃತಿಃ ಪ್ರಾಕೃತೀ ಮತಾ' ಎಂದು ಹೇಮಚಂದ್ರನ ಮಾರ್ಗವನ್ನೇ ಅನುಸರಿಸಿದ್ದಾರೆ. ಆದರೆ "ಪ್ರಕೃತೀನಾಂ ಸಾಧಾರಣ ಜನಾನಾಂ ಇದಂ ಪ್ರಾಕೃತಂ" "ಪ್ರಕೃತ್ಯಾ ಸ್ವಭಾವೇನ ಸಿದ್ಧಂ" ಸಾಧಾರಣ ಜನರ ಬಳಕೆಯ ಭಾಷೆ— ಸ್ವಾಭಾವಿಕವಾಗಿ ಬಳಕೆಯ ಮಾತಾಗಿ ಸ್ವತಂತ್ರವಾಗಿ ಬೆಳೆದುಕೊಂಡು ಬಂದ ಭಾಷೆ— ಎಂಬ ವಿಚಾರಸರಣಿಯವರೂ ಮೇಲಿನವರ ಸಮಕಾಲೀನರಲ್ಲಿಯೆ ದೊರೆಯುತ್ತಾರೆ. ಸಂಸ್ಕೃತವೇ ಪ್ರಾಕೃತದ ತಿದ್ದಿದ ರೂಪವೆಂದೂ ಕೆಲವರು ವಾದಿಸಿದ್ದಾರೆ. ರಾಜಶೇಖರನು "ಯದ್ಯೋನಿಃ ಕಿಲ ಸಂಸ್ಕೃತಸ್ಯ" (ಯಾವುದು ಸಂಸ್ಕೃತದ ತಾಯಿಭಾಷೆಯೋ) ಎಂದು ಹೊಗಳಿದ್ದಾನೆ. 'ಪ್ರಾಕ್ ಕೃತಂ

ಜಯಂತಿ

ಪ್ರಾಕೃತಂ (ಸಂಸ್ಕೃತಕ್ಕಿಂತಲೂ ಮೊದಲಿದ್ದ ಭಾಷೆ)' ಎನ್ನುವ ಸಾಹಸವನ್ನೂ ಕೆಲವರು ಮಾಡಿದ್ದಾರೆ.

ಹೀಗೆ ಮುನಿತ್ರಯರ ನಂತರ ಸಂಸ್ಕೃತ, ಪ್ರಾಕೃತ ಭಾಷೆಗಳು ಪರಸ್ಪರ ತಾಯಿಭಾಷೆಯೆನ್ನುವಷ್ಟು ಜೊತೆಜೊತೆಯಾಗಿ ವಿದ್ವಾಂಸರ ಮನ್ನಣೆ ಪಡೆದು ಮುಂದುವರೆದುವು. ಸಂಸ್ಕೃತ ವ್ಯಾಕರಣಕಾರರು ಮುನಿತ್ರಯರ ಪದ್ಧತಿಯನ್ನು ಅನುಸರಿಸಿದರು. ಪ್ರಾಕೃತ ವ್ಯಾಕರಣಕಾರರು ಸಂಸ್ಕೃತ ಪ್ಯೂಯಾಕರಣಿಗಳ ಮಾರ್ಗವನ್ನು ಹಿಡಿದರು. ಸಂಸ್ಕೃತದ ಪರಿಭಾಷೆ, ಸಂಸ್ಕೃತದ ರೀತಿಯನ್ನು ಅನುಸರಿಸಿದರು. ಸಂಸ್ಕೃತದಲ್ಲಿಯೆ ಪ್ರಾಕೃತ ವ್ಯಾಕರಣವನ್ನು ಬರೆದರು.

ಪ್ರಾಕೃತವು ಅಶೋಕನ ಶಾಸನಗಳ ಕಾಲದಲ್ಲಿ ಉಗಮವನ್ನು ತಾಳಿ, ಹೇಮಚಂದ್ರನ ಕಾಲದಲ್ಲಿ ಅತ್ಯುನ್ನತ ಸ್ಥಿತಿಯನ್ನು ಪಡೆದು, ವ್ಯವಸ್ಥಿತ ವ್ಯಾಕರಣವನ್ನು ಕಟ್ಟಿಕೊಡುವವರೆಗಿನ ಈ ಮಧ್ಯಕಾಲದಲ್ಲಿಯೂ ಮುಂದೆಯೂ ಆಗಿಹೋದ ಸಂಸ್ಕೃತ ವ್ಯಾಕರಣ ಗ್ರಂಥಕಾರರಲ್ಲಿ ವಾಕಟನ ಮತ್ತು ಜಯಾದಿತ್ಯರ ಹೆಸರುಗಳು ಮಹತ್ತ್ವದುವಾಗಿವೆ. ಇವರಿಬ್ಬರು ಪಾಣಿನಿಯ ಸೂತ್ರಗಳನ್ನು ವಿವರವಾಗಿ ಚರ್ಚಿಸುವ ಕಾಶಿಕಾ ಗ್ರಂಥದ ಶೈಲಿಯು ಆಕರ್ಷಕವಾಗಿದೆ. ಇವರು ಸೂಚಿಸುವ ತಿದ್ದುಪಡಿಯ ಪೂರ್ವಸೂಚನೆಗಳು ಭಾಷ್ಯವಾರ್ತಿಕಗಳಲ್ಲಿಯು ಇವೆ. ಆದರೂ ಇವರ ತಿದ್ದುಪಡಿಯ ಬಹುಭಾಗವು ಚಂದ್ರಗೋಮಿಯ ಗ್ರಂಥದಿಂದ ಆಯ್ದುಕೊಂಡ ಭಾಗವಾಗಿದೆ. ಭರ್ತೃಹರಿಯ 'ವಾಕ್ಯಪದೀಯ'ವು ಸಂಸ್ಕೃತ ವ್ಯಾಕರಣ ಗ್ರಂಥಗಳಲ್ಲಿಜೋ ಇನ್ನೊಂದು ಉತ್ತಮಗ್ರಂಥವು ವ್ಯಾಕರಣದ ತಾತ್ತ್ವಿಕವಿನ್ನೆಲೆಯನ್ನುಳ್ಳ ಪದ್ಯಮಯವಾದ ಈ ಗ್ರಂಥವು ಬ್ರಹ್ಮ, ವಾಕ್ಯ ಮತ್ತು ಪ್ರಕೀರ್ಣಗಳೆಂಬ ಮೂರು ಕಾಂಡಗಳನ್ನೊಳಗೊಂಡಿದೆ. ಇವನ ತರುವಾಯ ಹನ್ನೊಂದನೆಯ ಶತಮಾನದಲ್ಲಿ ಪ್ಯೆಯಟನು "ಪ್ರದೀಪ"ವನ್ನು ಬರೆದನು. ಇಲ್ಲಿಗೆ ಸಂಸ್ಕೃತ ಭಾಷೆಯನ್ನು ಸ್ವತಂತ್ರವಾಗಿ ಅಭ್ಯಾಸಮಾಡುವ ಕಾಲವು ಮುಗಿದಂತಾಯಿತು. ಇನ್ನು ಅಭ್ಯಾಸದ ಅನುಕೂಲತೆಗಾಗಿ ಸಂಕ್ಷಿಪ್ತ ಗ್ರಂಥಗಳು, ಇದ್ದ ವಿಷಯಗಳನ್ನೇ ಬೇರೊಂದು ರೀತಿಯಿಂದ ಜೋಡಿಸಿ ಬರೆದ ಗ್ರಂಥಗಳು ಹುಟ್ಟಿದುವು. ಇಂಥವುಗಳಲ್ಲಿ ಪ್ರಕ್ರಿಯಾ ಕೌಮುದೀ ಮತ್ತು ಸಿದ್ಧಾಂತಕೌಮುದೀ ಗ್ರಂಥಗಳು ಪ್ರಸಿದ್ಧವಾಗಿವೆ. ಮೂಲಗ್ರಂಥಗಳಲ್ಲಿಯ ನಾದಗ್ರಸ್ತ ಅಂಶಗಳನ್ನೆಲ್ಲ ತಾರ್ಕಿಕ ಶೈಲಿಯಲ್ಲಿ ತರ್ಕಬದ್ಧವಾಗಿ ವಿವರವಾಗಿ ಚರ್ಚಿಸುವ ವ್ಯಾಕರಣಶಾಸ್ತ್ರದ ಉದ್ಗ್ರಂಥಗಳೂ ಹೇರಳವಾಗಿವೆ. ಈ ದಿಶೆಯಲ್ಲಿ ೧೬ನೆಯ ಶತಮಾನದ ನಾಗೋಜೀ ಭಟ್ಟನ ಹೆಸರು ಉಲ್ಲೇಖಿಸುವಂತಹದಾಗಿದೆ. 'ಉದ್ಯೋತ', 'ಪರಿಭಾಷೇಂದುಶೇಖರ', 'ಶಬ್ದೇಂದುಶೇಖರ', 'ಶಬ್ದರತ್ನ', 'ಮಂಜೂಷಾ' ಗ್ರಂಥಗಳು ಪಾಂಡಿತ್ಯ ಪೂರ್ಣವಾಗಿವೆ. ಇವಲ್ಲದೆ ಅನೇಕ ಟೀಕೆ ಟಿಪ್ಪಣಿಗಳೂ ಇವೆ. ಆದರೆ ಇವೆಲ್ಲ ಚಾರಿತ್ರ್ಯಿಕ ದೃಷ್ಟಿಯಿಂದ ಭಾಷೆಯು ಯಾವುದೇ ಸಮಸ್ಯೆಯನ್ನು ಚರ್ಚಿಸುವುದಿಲ್ಲವಾದ್ದರಿಂದ, ಅವು ಮಹತ್ತ್ವದ ಉದ್ಗ್ರಂಥಗಳೆನಿಸಿಕೊಂಡಿದ್ದರೂ ಭಾಷಾವಿಜ್ಞಾನದ ಅಭ್ಯಾಸಿಗಳಿಗೆ ಅನುಗಳ ವಿವರವಾದ ಚರ್ಚೆಯು ಅವಶ್ಯಕವೆನಿಸುವುದಿಲ್ಲ.

ಪ್ರಾಕೃತ ಭಾಷೆಗಳ ವ್ಯಾಕರಣಕಾರರನ್ನು ಪ್ರಾಚ್ಯರು, ಪ್ರತೀಚ್ಯರು ಎಂದು ಎರಡು ಗುಂಪಾಗಿ ವಿಂಗಡಿಸಲು ಬರುವಂತಿದೆ. ಶಾಕಲ್ಯ, ಭರತ, ಕೋಹಲ, ವರರುಚಿ, ಲಂಕೇಶ್ವರ, ರಾಮತರ್ಕವಾಗೀಶ, ಮಾರ್ಕಂಡೇಯ ಇವರು ಪ್ರಾಚ್ಯರು. ವಾಲ್ಮೀಕಿ, ತ್ರಿವಿಕ್ರಮ, ಲಕ್ಷ್ಮೀಧರ, ಸಿಂಹರಾಜ ಇವರು ಪ್ರತೀಚ್ಯರು.

ಮಹಾರಾಷ್ಟ್ರೀ, ಶೌರಸೇನೀ, ಪ್ರಾಚ್ಯಾ, ಅವಂತಿ ಮತ್ತು ಬಾಲ್ಹೀಕೀ, ಮಾಗಧೀ ಮತ್ತು ಅರ್ಧಮಾಗಧೀ ಇವು ಮುಖ್ಯವಾದ ಐದು ಪ್ರಾಕೃತ ಭಾಷೆಗಳು. ಆದರೆ ಆರು, ಏಳು, ಅಥವಾ ಎಂಟು ಎಂದು ಉಪಪ್ರಾಕೃತ ಭಾಷೆಗಳಲ್ಲಿ ಕೆಲವನ್ನು ಕೂಡಿಸಿಕೊಂಡು ಅಥವಾ ಬೇರೊಂದು ರೀತಿಯ ಪ್ರಾದೇಶಿಕ ವಿಭಜನೆಯನ್ನು ಅನುಸರಿಸಿ, ಬೇರೆ ಬೇರೆ ಗ್ರಂಥಕಾರರು ಬೇರೆ ಬೇರೆ ರೀತಿಯಿಂದ ಪರಿಗಣಿಸುತ್ತಾರೆ. ಇವಲ್ಲದೆ ಆರು ವಿಭಾಷೆಗಳೂ ಹನ್ನೊಂದು ವಿಭಾಷ ಭಾಷೆಗಳೂ, ಇಪ್ಪತ್ತೈದು ಅಪಭ್ರಂಶ ಭಾಷೆಗಳೂ ಹೀಗೆ ವ್ಯಾಕೃತ, ಉಪಪ್ರಾಕೃತ, ವೈಭಾಷ, ಮತ್ತು ಅಪಭ್ರಂಶವೆಂಬ ನಾಲ್ಕು ಗುಂಪಿನಲ್ಲಿ ಅನಂಖ್ಯ ಭಾಷೆಗಳು ಬರುತ್ತವೆ. ಇವರೆ ಹೀಗೆ ಅನೇಕ ಹೆಸರುಗಳಿದ್ದರೂ ಇವೆಲ್ಲ ಕೇವಲ ಪ್ರಾದೇಶಿಕ ಭೇದಗಳು ಅಥವಾ ಹೆಸರುಗಳು.

ಪ್ರಾಕೃತಭಾಷಾ ಪ್ರಪಂಚದಲ್ಲಿ ಹೇಮಚಂದ್ರನ ಹೆಸರು, ಸಂಸ್ಕೃತದಲ್ಲಿ ಪಾಣಿನಿಯಷ್ಟೇ ಮಹತ್ತ್ವದ್ದಾಗಿದೆ. ಸಿದ್ಧರಾಜನ ಆಶ್ರಯದಲ್ಲಿ ತಾನು ಬರೆದ ಗ್ರಂಥಕ್ಕೆ ಅವನು "ಸಿದ್ಧಹೇಮ ಚಂದ್ರ" ಎಂದು ಹೆಸರಿಟ್ಟಿದ್ದಾನೆ. ೪ ಅಧ್ಯಾಯದ ಈ ಗ್ರಂಥವು ೪೦೦ ಸೂತ್ರಗಳನ್ನೊಳಗೊಂಡಿದೆ. ಇವರಲ್ಲಿ ೮ನೆಯ ಅಧ್ಯಾಯವು ಕೇವಲ ಪ್ರಾಕೃತ ಭಾಷೆಗಳಿಗೆ ಮೀಸಲಾಗಿದೆ. ವರರುಚಿಯ 'ಪ್ರಾಕೃತ ಪ್ರಕಾಶ'ವು ಇದಕ್ಕೂ ಪ್ರಾಚೀನವಾದುದು. ಇವನು ಮೊದಲಿನ ಎಂಟನೆಯ ಅಧ್ಯಾಯದಲ್ಲಿ ಮಹಾರಾಷ್ಟ್ರಿಯನ್ನೂ ಮುಂದೆ ಒಂದೊಂದು ಅಧ್ಯಾಯದಲ್ಲಿ ಉಳಿದ ಪ್ರಾಕೃತ ಭಾಷೆಗಳನ್ನೂ ಚರ್ಚಿಸಿದ್ದಾನೆ. ಭರತನ ನಾಟ್ಯಶಾಸ್ತ್ರದಲ್ಲಿ ಪ್ರಾಕೃತಭಾಷೆಗಳಿಗೆ ಒಂದು ಅಧ್ಯಾಯವು ಮೀಸಲಾಗಿದೆ. ಚಂಡನ 'ಪ್ರಾಕೃತ ಲಕ್ಷಣ'ವು ವಿಭಕ್ತಿವಿಧಾನ, ಸ್ವರ ವಿಧಾನ, ವ್ಯಂಜನವಿಧಾನ, ಭಾಷಾಂತರವಿಧಾನವೆಂದು ನಾಲ್ಕು ಭಾಗಗಳನ್ನೊಳಗೊಂಡಿದೆ. ಪ್ರತೀಚ್ಯ ಪದ್ಧತಿಯ ಮೂಲ ಗ್ರಂಥವಾದ ವಾಲ್ಮೀಕಿಸೂತ್ರವು ಮೂಲರೂಪದಲ್ಲಿ ದೊರೆಯುವುದಿಲ್ಲ. ಈ ಸೂತ್ರಗಳ ಪರಿಭಾಷೆಯನ್ನೇ ಅನುಸರಿಸಿ ತ್ರಿವಿಕ್ರಮನು ಶಬ್ದಾನುಶಾಸನವನ್ನು ಬರೆದಿದ್ದಾನೆ. ವಿಜಯನಗರದ ತಿರುಮಲರಾಯನ ಆಸ್ಥಾನದಲ್ಲಿದ್ದ ಲಕ್ಷ್ಮೀಧರನು

ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

'ಷಡ್ಭಾಷಾಚಂದ್ರಿಕೆ'ಯನ್ನು ಬರೆದಿದ್ದಾನೆ. ಈ ಹೊತ್ತಿಗೆ ಸಂಸ್ಕೃತದಂತೆ ಪ್ರಾಕೃತವೂ ಬೆಳೆದು ಕಟ್ಟುನಿಟ್ಟಾದ ವ್ಯಾಕರಣಕ್ಕೆ ಒಳಪಟ್ಟು ನಿಂತ ನೀರಾಯಿತು.

ಪ್ರಾಕೃತ ಭಾಷೆಗಳಲ್ಲಿ ಮಹಾರಾಷ್ಟ್ರೀಯ ಮತ್ತು ಅರ್ಧ ಮಾಗಧೀ ಭಾಷೆಗಳು ಮಹತ್ತ್ವವನ್ನು ಪಡೆದಿವೆ. ಅರ್ಧಮಾಗಧಿಯು ಆರ್ಷಭಾಷೆಯೆಂದು ಪ್ರಸಿದ್ಧವಾಗಿದೆ. ಜೈನರಿಗೆ ಅರ್ಧ ಮಾಗಧಿಯಂತೆ ಬೌದ್ಧರಿಗೆ ಪಾಲಿಯು ಪವಿತ್ರಭಾಷೆಯಾಗಿದೆ. ಜನಸಾಮಾನ್ಯರ, ಹಳ್ಳಿಗರ ಮಾತಿನಿಂದ ಬುದ್ಧದೇವನು ಉಪದೇಶಿಸಿದ್ದರಿಂದ 'ಪಲ್ಲೀಭಾಷಾ' 'ಪಾಲೀಭಾಷಾ' 'ಪಾಲೀ' ಎಂದಾಯಿತೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದಕ್ಕೂ ವೈದಿಕಸಂಸ್ಕೃತಕ್ಕೂ ಹೆಚ್ಚು ಸಾಮ್ಯವು ಕಂಡು ಬರುತ್ತದೆ. ಪಾಲಿಯ ವ್ಯಾಕರಣಗಳಲ್ಲಿ ಕಾಚ್ಚಾಯನನ ಗ್ರಂಥವು ಉಲ್ಲೇಖಿಸುವಂತಹವಾಗಿದೆ. ಅವನು ಕಾತಂತ್ರ-ಪಾಣಿನಿಯರ ಪ್ರಭಾವವನ್ನು ತೋರಿಸುತ್ತಾನೆ. ೧೨ನೆಯ ಶತಮಾನದಲ್ಲಿ ಬ್ರಹ್ಮದೇಶದ **ಅಗ್ಗವಂಶ** ಎಂಬ ಪಂಡಿತನು 'ಸಿದ್ಧನೀತಿ' ಎಂಬ ಗ್ರಂಥವನ್ನು ಬರೆದಿದ್ದಾನೆ.

ಪ್ರಾಕೃತ ಭಾಷೆಗಳಿಗೂ ಇಂದಿನ ಉತ್ತರ ಹಿಂದುಸ್ತಾನದ ಭಾಷೆಗಳಿಗೂ ಇರುವ ನಡುವಿನ ಅವಸ್ಥೆಗೆ ಅಪಭ್ರಂಶವೆಂದು ಅನೇಕರು ಕರೆಯುತ್ತಾರೆ. ಆದರೆ ಇಂದಿನ ಭಾಷೆಗಳು ಪ್ರತ್ಯಕ್ಷವಾಗಿ ಪ್ರಾಕೃತದಿಂದಲೆ ಬಂದಿವೆ. ಪ್ರಾಕೃತವಲ್ಲದ ಅಂದಿನ ಬೇರೆ ಕೆಲವು ಭಾಷೆಗಳು ಅಪಭ್ರಂಶವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆಭೀರರೇ ಮೊದಲಾದವರ ಭಾಷೆ ಅಪಭ್ರಂಶವೆಂದು ದಂಡಿಯು ಹೇಳಿದ್ದಾನೆ. ಸಂಸ್ಕೃತ ಮತ್ತು ಪ್ರಾಕೃತದ ಜನಸಾಮಾನ್ಯರ ಬಾಯಿಂದಾದ ಅಶುದ್ಧರೂಪಗಳಿಗೆ ಅಪಭ್ರಂಶವೆಂದು ಹೆಸರು. ಅದು ಬೇರೆ ಭಾಷೆಯೂ ಅಲ್ಲ, ಯಾವುದೊಂದು ಭಾಷೆಯ ವಿಶಿಷ್ಟ ಅವಸ್ಥೆಯೂ ಅಲ್ಲವೆಂದು ಇನ್ನುಳಿದ ವಿದ್ವಾಂಸರ ಗೃಹಿಕೆಯಿದೆ. ಈ ಭಾಷೆಯು ಎಂದೂ ಗ್ರಂಥಸ್ಥ ಭಾಷೆಯಾಗಿಲ್ಲ. ಇವುಗಳ ವ್ಯವಸ್ಥಿತವಾದ ಅಭ್ಯಾಸವೂ ಆಗಿಲ್ಲ. **ಆನಂದವರ್ಧನನ** ಗ್ರಂಥದಲ್ಲಿ ಇದರ ರೂಪವು ದೊರೆಯುತ್ತದೆ.

ಇನ್ನು ಭಾಷಾವಿಜ್ಞಾನದ ಕ್ಷೇತ್ರವು ಧ್ವನಿ ನಿಷ್ಪತ್ತಿ ಶಾಸ್ತ್ರಗಳನ್ನು ಮೀರಿ, ಅನ್ವಯ, ಅರ್ಥಗಳ ಚರ್ಚೆಯನ್ನೂ ಒಳಗೊಂಡಿರುವುದರಿಂದ, ವ್ಯಾಕರಣವೆಂಬ ತಲೆಬರೆಹದ ಕೆಳಗೆ ಬಾರದ ಇನ್ನೂ ಕೆಲವು ಸಂಸ್ಕೃತ ಪ್ರಾಕೃತ ಗ್ರಂಥಗಳೂ ವಾದಗಳೂ, ಇಲ್ಲಿ ನಿರ್ದೇಶಿಸಲು ಯೋಗ್ಯವಾಗಿವೆ. ಭಾರತೀಯ ತರ್ಕಶಾಸ್ತ್ರವು ಅನುಮಾನಗಳ ಚರ್ಚೆಯನ್ನಷ್ಟೇ ತನ್ನ ಕ್ಷೇತ್ರವಾಗಿಟ್ಟುಕೊಳ್ಳದೆ, ವಾಕ್ಯರಚನೆ, ಅರ್ಥಬೋಧದ ರೀತಿ, ಶಬ್ದ-ಅರ್ಥಗಳ ಸಂಬಂಧ, ಶಬ್ದದ ಸ್ವರೂಪ, ಹೀಗೆ ಭಾಷೆಯ ಅನೇಕ ಸಮಸ್ಯೆಗಳನ್ನು ಚರ್ಚಿಸುತ್ತದೆ. ಸೂತ್ರಗ್ರಂಥಗಳಲ್ಲಿಯೆ ಈ ತರದ ಚರ್ಚೆಯ ಉಗಮವನ್ನು ಕಾಣಬಹುದು. ಮುಂದೆ **ಜಗದೀಶ ತರ್ಕಾಲಂಕಾರನು** ತನ್ನ 'ಶಬ್ದಶಕ್ತಿ ಪ್ರಕಾಶಿಕಾ' ಮತ್ತು 'ವಿಭಕ್ತ್ಯರ್ಥನಿರ್ಣಯ'ಗಳಲ್ಲಿಯೂ ಗದಾಧರನು 'ವ್ಯುತ್ಪತ್ತಿವಾದ,' 'ವಿಧಿವಾದ'ಗಳಲ್ಲಿಯೂ ತರ್ಕದಿಂದ ಹರಿತವಾದ ವಾದಸರಣಿಯಿಂದ ಪ್ರಯೋಗಗಳನ್ನು ಎತ್ತಿಕೊಂಡು, ಅವುಗಳನ್ನು ನಿಂಗಡಿಸುತ್ತ, ಒಳಗೆ ಹುದುಗಿದ ಸೂಕ್ಷ್ಮ ಅರ್ಥಗಳನ್ನು ಹೊರಗೆಡಹುತ್ತಾರೆ. ಇವರ ಈ ರೀತಿಯಲ್ಲಿ ಭಾಷೆಗಳ, ಮಾತಾಡುವವರ ಮಾನಸಿಕ ಹಿನ್ನೆಲೆಗಳನ್ನು ಅಭ್ಯಾಸ ಮಾಡಿದ ದೀರ್ಘವಿಚಾರಿಗಳಾದವರನ್ನು, ಭಾಷಾವಿಜ್ಞಾನದ ಈ ಅಂಗದಲ್ಲಿ ಕ್ರಾಂತಿಕಾರಕ ಸಿದ್ಧಾಂತಗಳಿಗೆ ತಂಸು ಮುಟ್ಟಿಸುವ ಸೂಚನೆಗಳಿವೆ. ಇವರಂತೆ ಇನ್ನುಳಿದ ದರ್ಶನಕಾರರೂ ಭಾಷೆಯ ಸಮಸ್ಯೆಗಳನ್ನು ಚರ್ಚಿಸಿದ್ದಾರೆ. ಅವರ ಮುಖ್ಯ ವಿಷಯವು ಬೇರೆಯಾಗಿದ್ದರೂ ವೇದವು—ಶಬ್ದವು—ಅವರ ಪ್ರಮಾಣವಾದ್ದರಿಂದ, ಅವರ ಅರ್ಥವನ್ನು ನಿರ್ಣಯಿಸುವುದಕ್ಕಾಗಿ ಅವರು ಈ ಸಮಸ್ಯೆಗಳನ್ನು ಚರ್ಚಿಸಿದರು. ವೇದದ ಅರ್ಥಕ್ಕಾಗಿಯೆ ಮೀಸಲಾದ ಮೀಮಾಂಸಾ ದರ್ಶನವು ಈ ಜವಾಬ್ದಾರಿಯನ್ನು ಪ್ರತ್ಯೇಕವಾಗಿ ಹೊತ್ತುಕೊಂಡಿತು ಕುಮಾರಿಲನ ವಾರ್ತಿಕದಲ್ಲಿ ಸಂದರ್ಭ ದೊರೆತಾಗಲೆಲ್ಲ ಈ ಪ್ರಶ್ನೆಯು ಚರ್ಚೆಯಿದೆ. ಖಂಡದೇವನ ಭಾಟ್ಟರಹಸ್ಯವು ಇದಕ್ಕಾಗಿಯೆ ಮೀಸಲಾಗಿದೆ. ಬಹುಶಃ ಇನ್ನುಳಿದ ಎಲ್ಲ ಗ್ರಂಥಗಳಲ್ಲಿಯೂ ಇದಕ್ಕಾಗಿ ಒಂದು ಭಾಗವು ಪ್ರತ್ಯೇಕವಾಗಿದೆ. ಜೈನ ಮತ್ತು ಬೌದ್ಧದರ್ಶನಗಳಲ್ಲಿಯೂ ಶಬ್ದಚರ್ಚೆಯು ಮಹತ್ತ್ವದ ಸ್ಥಾನವನ್ನು ಪಡೆದಿದೆ.

ಹೀಗೆ ಅತಿ ಪ್ರಾಚೀನ ಕಾಲದಿಂದ ಭಾರತದಲ್ಲಿ ಭಾಷೆಗಳ ಅಭ್ಯಾಸವು ಸಂಸ್ಕೃತ, ಪ್ರಾಕೃತಗಳ ಮುಖಾಂತರ ವಿವರವಾಗಿಯೂ ಶಾಸ್ತ್ರೀಯವಾಗಿಯೂ ಮುಂದುವರಿದಿದೆ. ಉಪಲಬ್ಧವಿದ್ದ ಭಾಷೆಗಳ ಅಭ್ಯಾಸದಲ್ಲಿ ತುಲನಾತ್ಮಕ ದೃಷ್ಟಿಯೂ ಜಾಗೃತವಾಗಿದೆ. ಬಹುಶಃ ಜಗತ್ತಿನ ಬೇರಾವ ದೇಶದಲ್ಲಿಯೂ ಭಾಷೆಗಳ ಕಡೆಗೆ ಇಷ್ಟೊಂದು ದಕ್ಷತೆಯಿಂದ ಲಕ್ಷ್ಯ ಪೂರಯಿಸಿದುದು ಕಂಡು ಬರುವುದಿಲ್ಲ.

ಒಗಟುಗಳು

ಸೌ. ಲಕ್ಷ್ಮೀದೇವಿ ವೈದ್ಯ, ಬೆಳಗಾಂವಿ

★

(ಉತ್ತರ ಕರ್ನಾಟಕದಲ್ಲಿ ಬಂಧುತ್ವಗಳು ಸರಸ್ವರರ ಹೆಸರನ್ನು ಕೊಳ್ಳುವಾಗ, ಸವಿಯರ್ಥದ ಸವಿನುಡಿಯ ಸವಿನಗೆಯಲ್ಲಿ ಹೊಂದಿಸಿ ಹೇಳುವ ರೂಢಿಯಿದೆ. ಸಕ್ಕೆಲ್ಲ ಬಿಪ್ಪುಗಳಲ್ಲಿರುವಲ್ಲಿ ಗಂಡನ ಹೆಸರನ್ನು ಸೇರಿಸಿ ಹೇಳಬೇಕು. ಸಂ. ಜ)

೧

ಕಷ್ಟಪಡಮ್ಮಾ ನಿನಗೆ ಕೈಮುಗಿದು ಬೇಡುವೆನು,
ಕೊಡು ಆರಿವ ಸೇವಿಸಲು *** ರಾಯರನು.

೨

ನರನರವು ನುಡಿಯುತಿದೆ***ರಾಯರಾ ಹೆಸರನ್ನು;
ನಾಲಗೆಯು ನುಡಿದರದುವೇ ತಾನೆ ನಿಜವೇನು ?

೩

'ಹುಟ್ಟಿ ಬೆಳೆದಿಹ ಮನೆಯು ಇರಲು ಇನ್ನೊಂದು ಮನೆ!
ಎಷ್ಟು ತೊಡಕಾದುದೀ ಹೆಣ್ಣಬಾಳು!'
ಕಷ್ಟ ಪಡುತಿರಲಿಂತು ***ರಾಯರ ಕಂಡೆ;
ಆ ಕ್ಷಣವೆ ನಾನೆಂದೆ 'ಧನ್ಯವೀ ಬಾಳು!'

೪

ಕತ್ತಲೆಯು ಕವಿದಿಹುದು ಸುತ್ತಮುತ್ತೆಲ್ಲ ಕಡೆ;
ಒತ್ತಿತುಂಬಿದೆ ಎದೆಯು ಶಾಂತಿಯಿಂದ.
*** ರಾಯರೇ ಒಲವಿನಮೃತವ ಕರೆದು
ಒಳಬೆಳಕ ನೀಡುವಿರಿ–ಎಂದು ನಂಬಿರುವೆ.

೫

ಪುರುಷನಾ ಹೃದಯವದು ಆರಸುತಿದೆ ದೇವರನು;
ಸ್ತ್ರೀಹೃದಯವವನು ಪ್ರತ್ಯಕ್ಷ ಕಾಣುತಿದೆ.
ಧನ್ಯಧನ್ಯವು ನಿಜದಿ ಗರತಿಯರ ಜೋಡಿಬಾಳು;
*** ರಾಯರನೆ ದೇವರೆನ್ನುವೆ.

೬

ಸತ್ಯ ಸೌಂದರ್ಯದಲಿ ಸೌಂದರ್ಯ ಸತ್ಯದಲಿ;
ಸತ್ಯ-ಸೌಂದರವೆರಡು *** ರಾಯರಲಿ.

೭

ನಂಬಿ ಕರೆದರೆ ಮಾತ್ರ ಓ ಎಂಬ ಶಿವ ತಾನು
ನಂಬದಲೆ ಕೂಗಿದರೆ ಓಗೊಡುವನೆ?
ಒಲವು ಕರೆದರೆಯೆ ಓಗೊಡುವ ** ರಾಯರು
ಬರುನುಡಿಯ ಕರೆಗೆ ಓ ಎನ್ನಬಹುದೆ?

೮

*** ರಾಯರದು ನಗೆಯರಳ ತಳಿನ ಮುಖ,
ಆದರಲ್ಲಿ ಇರಿಸುವೆನು ಕಸ್ತೂರಿಯ ತಿಲಕ.

೯

*** ರಾಯರೀ ಸಿರಿಮೊಗಕೆ ಮೆಚ್ಚಿದೆನು;
ಇದಕೆ ನಾನೀಗ ಕುಂಕುಮವನ್ನು ಹಚ್ಚುವೆನು.

೧೦

ಕುಸುಮಗಳ ಕೊಯ್ಸಿನೆನೆ ಮನ ಬಾರನೆಯೆ ಹೋಯ್ತು,
ಪ್ರೇಮವಿದು ಕೊಯ್ಯೆಂದು ಮುಂಮೂಡಿತು;
ಪ್ರೇಮವೇ ಜಯಪಡೆದು ಮಾಲೆಯನು ಮಾಡಿಸಿತು;
*** ರಾಯರಿಗೆ ಜೊಲುವ ಹೆಚ್ಚಿಸಿತು.

೧೧

ಒಂದೊಂದು ಅಲರುಗಳ ನಾನಾಯ್ದು ತಂದೆ;
ದೇವ ಪೂಜೆಗೆ ಎಂದು ಮಾಲೆಯನು ಹೆಣೆವೆ.
'ಈ ದೇವರನು ಬಿಟ್ಟು ಯಾವ ದೇವನು ಜೀರೆ?'
ಎಂದು ನಾನರುಪಿಸಿವೆ *** ರಾಯರೇ!

೧೨

ಪತಿಯೆಂಬ ಪೂಜ್ಯ ವ್ಯಕ್ತಿಯನು, ಗಂಡನೆಂಬಾ
ಸ್ವಾಮಿಯನು,
ನಲ್ಲನೆಂಬ ಒಲವಿನ ಮೂರ್ತಿಯನು, ಕಾಣುವೆನು
*** ರಾಯರನ್ನು.

೧೩

ಇನಿತು ದಿನವಿದ್ದುದೀ ಜೀವನವಪೂರ್ಣ;
*** ರಾಯರಿಂದದುವೆ ಪರಿಪೂರ್ಣ!

೧೪

ಮಲ್ಲಿಗೆಯ ಹೂವನೇರಿಸಿ ದೇವನಿಗೆ ನಾನು
*** ರಾಯರನು ಪಡೆದೆ ಪತಿಯಾಗಿ.
ಯಾವ ಜಾತಿಯ ಹೂವನೆರೆದು ಪೂಜಿಸಿ ಅವರು
ಪಡೆದಿಹರೊ ನಾನರಿಯೆ ನನ್ನ ಸತಿಯಾಗಿ.

೧೫

ಪ್ರೇಮವೇ ನೀನು ಹುಟ್ಟಿದುದೇಕೆ ಜಗದಲ್ಲಿ—
ನೊಂದವರ ಬೆಂದವರ ಸಂತಯಿಸಲಲ್ಲ?
*** ರಾಯರಾ ಹೃದಯಕ್ಕೆ ತಣಿವನ್ನು
ಬೀರುವೆನು ನಾನು, ಸಂಶಯವೆ ಇಲ್ಲ!

೧೬

'ನಾರಿಯೇ ನೀನು ನರಕದ ' ರಿ' ಎಂದು
ಹೇಳುವರು ಬಲ್ಲವರ ತೆರ ಮೂಢರಿಂದು.
*** ರಾಯರೇ ತಿಳಿಯದವರಿಗೆ: ಬಾಳ
ದಾರಿಯನು ತೋರುವಳು ನಾರಿಯೇ ಎಂದು.

೧೭

ಸಂಸಾರ ಸಾಗರದಿ ಜೀವನದ ನಾಕೆಯನು
ತೇಲಬಿಟ್ಟೆಹೆವೆಂದು ಸಂತಸದಿ ನಾವು;
ಅಬ್ಬರದ ತೆರೆಗಳವ ಆರ್ಭಟಿಸಿ ಬರಬಹುದು,
*** ರಾಯರೇ ಎಚ್ಚರಿರಿ ನೀವು!

೧೮

ಹಿಂದೊಂದು ಸಮಯದಲಿ ಸಾಮ್ರಾಜ್ಞಿಯೆನಿಸಿದ್ದೆ
ಕಡುಬಡವೆಯಾಗಿರುವೆ ನೀನು ಇಂದು!
ಕನ್ನಡಮ್ಮಾ ಬೇಡಿಕೊಳುವೆನಾವಾಗಲೂ
*** ರಾಯರ ಕಾರ್ಯ ನಿನ್ನ ಸುಖಕಿರಲೆಂದು.

ವಿಚಾರ ತರಂಗಿಣಿ

ಶ್ರೀ ಭಾ. ಗೋ. ಗೋಖಲೆ ಬಿ. ಎ. ಎಲ್.ಎಲ್. ಬಿ. ಗದಗ

ಉಗಿ

ಹೊನಲಾಗಿ ಹೊಳೆಯಾಗಿ ಕಡಲಾಗಿ
ಆತಪನಾ ತಪದಿಂದ ಮೋಡವಾಗಿ
ಗಾಳಿಯಾ ತಂಪಿನಿಂದ ಮಳೆಯಾಗಿ
ಭೂವಿಯನು ತಣಿಸಿ
ಜನಕೆಲ್ಲ ಉಣಿಸಿ
ನಿನ್ನ ಸ್ವಾತಂತ್ರ್ಯ ಕೃತಾರ್ಥವಾಯಿತು.

ಜೇಮ್ಸ್ ವ್ಯಾಟನೋ ಯಾವನೋ
ನಿನ್ನ ಬಲವನ್ನರಿತು, ಪಾತ್ರೆಯಲಿ
ನಿನ್ನ ತಾಯಿಯನು ಬಲಿಹಿಡಿದು,
ಬೆಂಕಿಯಾ ಕಾವಿನಿಂದ ಉಗಿಮಾಡಿ
ನಿನ್ನನ್ನು ನಳಿಕೆಯಲಿ ಬಿಗಿದು
ಪ್ರಚಂಡ ಯಂತ್ರಗಳನು ನಡೆಯಿಸಿ,
ಔದ್ಯೋಗಿಕ ಕ್ರಾಂತಿಯನು ಜಗಕೆಳಸಿ,
ಎಲ್ಲರನು ಪಾರತಂತ್ರ್ಯದಲಿ ನೂಕಿದನು

ಪಾರತಂತ್ರ್ಯದ ಫಲ ಪಾರತಂತ್ರ್ಯವಲ್ಲದೆ
ಮತ್ತಾವುದು?

ಕರ್ತವ್ಯ

ನಿನ್ನನರಿತರೆ ಜೀವನ, ನಿನ್ನ ಮರೆತರೆ ಮರಣ.
ಜೀವಗಳೆಲ್ಲ ನಿನ್ನನರಿತು ಸುಖದಲಿ ಬಾಳುತಿವೆ.
ಗಿಡ ಬೆಳೆಯುತಿವೆ, ಗಾಳಿಬೀಸುತಿದೆ, ಮೋಡ
ಮಳೆಗರಿಯುತಿವೆ
ಹೂ ಪರಿಮಳ ಹರಡಿ, ತನ್ನ ಕರ್ತವ್ಯ ತಾಮಾಡಿ
ಕೃತಾರ್ಥವಾಗುತಿವೆ.
ನೀ ಜೀವನದ ಬೆಳಕು
ನಿನ್ನ ಮರೆತುನಾ ಸಿಕ್ಕೆ
ಪಾರತಂತ್ರ್ಯ ಬಲೆಯಲಿ

ಪಕ್ಕು

ನಿನ್ನರಿವಾಗಿ ನಾ ನತ್ಯ ಸಿಗದೆ ದಣಿದೆ.
ಕತ್ತೆಯದುರು ಹಿಡಿದ ಮೂಲಂಗಿ ನೀನು.
ಇವನರಿಯದೆ ಆಳರಸರ ಬೆನ್ನತ್ತಿ ಕೆಟ್ಟೆ.
ನಿ-ನು ನೆಳಲು. ಮೃಗಜಲ ಮಾಯೆ.
ನೆಳಲನ್ನು ಬೆನ್ನತ್ತಿ ಸುಖಪಡೆದವರುಂಟೇ?

ಬೆಳಕಿನತ್ತ ಹೊಂಟರೆ
ನೆಳಲು ಬೆನ್ನತ್ತಿ ಬಾರದಿರುವುದೇ?

ಗೋಪಾಳನ 'ಗೋಪಾಳ'*

(ಒಂದು ಏಕಾಂಕ ದೃಶ್ಯ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

(ಈ ಏಕಾಂಕವನ್ನು ಆಡಲು ಬಯಸುವವರು ಪಂಡಿತ ಲೇಖಕರ ಒಪ್ಪಿಗೆ ಪಡೆದುಕೊಳ್ಳಬೇಕು.)

ಪಾತ್ರಗಳು :

ಗಂಡ — — ಗೋಪಾಳ.
ಹೆಂಡತಿ — — ಸುಭದ್ರಾ.
ಮುತ್ತು ಮಾರುವವ — — ನರಸಪ್ಪ.
ಗೋಪಾಳನ ಗೆಳೆಯ — — ಗಣೇಶ.

[ಮಧ್ಯಮ ತರಗತಿಯ ಇರುವಿಕೆಯನ್ನು ತೋರಿಸುವ ಮನೆಯ ದೃಶ್ಯ. ಹೊತ್ತು ಸುಮಾರು ಮುಂಜಾನೆ ೯ ಗಂಟೆ. ಬಕರ್‌ಈದ ನಿಮಿತ್ತ ರಜೆ ಇರುವ ಕಾರಣ, ಗೋಪಾಳನಿಗೆ ಕಚೇರಿಯ ಮತ್ತು ಸುಭದ್ರೆಗೆ ಅಡಿಗೆಯ ಅವಸರವಿಲ್ಲ. ಗೋಪಾಳ ಮುಖಕ್ಷೌರದ ಸಿದ್ಧತೆ ನಡೆಯಿಸಿದ್ದಾನೆ. ಸುಭದ್ರಾ ಕುಂಕುಮಪೆಟ್ಟಿಗೆಯನ್ನು ಮುಂದಿಟ್ಟು ಕೊಂಡು ತನ್ನ ಹೆರಳನ್ನು ಬಿಚ್ಚಿಕೊಳ್ಳುತ್ತಿದ್ದಾಳೆ.]

★

ಗೋಪಾಳ :— (ಬ್ಲೇಡನ್ನು ಹಿಡಿಕೆಯಲ್ಲಿ ಸೇರಿಸುತ್ತ) ಈ ಬಟ್ಟಲದಾಗ ತುಸು ಬಿಸಿನೀರಿದ್ದರ ತರಬಾರದs ?

ಸುಭದ್ರಾ :—ಬಂಬಗೆ ಬೆಂಕೀ ಹಾಕೇ ಇಲ್ಲ ಇನ್ನೂ ; ಬಿಸಿ. ನೀರೆಲ್ಲಿಂದ ತರಲಿ ?

ಗೋ :— ಮತ್ತ ಹೊಗೀ ಎಲ್ಲಿಂದ ಬರ್ತಾದ ಮನ್ಯಾಗ ?

ಸು :— ಬ್ಯಾಳಿಗೆ ಎಸರಿಟ್ಟೀನಿ.

ಗೋ :— ಅದರಾಗಿಂದs ತುಸು ತರಬಾರದs ? ಮತ್ತ ನೀರ್ಹಾಕಿಟ್ಟರಾತು !

ಸು :— ಬ್ಯಾಳಿಗಿಟ್ಟ ನೀರು ನಿಮ್ಮ ಹಜಾಮತಿಗೆ? ನೀವಂತೂ ತೀರ ತಾಳಬಿಟ್ಟೀರಿ.

ಗೋ :— ಹೀಂಗ ಮಾತು ಹಂಗಾದರ. ಹಜಾಮತಿಗಷ್ಟು ನೀರು ಕೊಟ್ಟು, ಉಳಿದ ನೀರಿಂದು ಜಪಾ ಮಾಡಂದರಾತು !

ಸು :— ಉಂ, ಮತ್ತೇನು ಮಾಡಬೇಕು ? ಈ ಸೂಟಿ ಯಾಕ ಕೊಡ್ತಾರೋ ಸರಕಾರದವರು ಅಂತನ್ನಾ ! ಕಚೇರಿ ಕೆಲಸ ಇರಲಿಲ್ಲ ಅಂದ್ರ ಬರೇ ತಿಂಬೋದರಾಗs ಇರ್ತೀರಿ ನೋಡ್ರಿ ನೀವ್ರ ! ಅದರಾಗ ಮಾಡುಗರು ಊರಿಗೆ ಹೋದಾಗಿನಿಂದ.. ನೀವs ಮಡುಗರಾಗೀದ್ದೀರ !

ಗೋ :— ನೀನೂ ಸ್ವಲ್ಪ ಹುಡುಗಿ ಆಗಿ ಓಪ್ಯಾಡಲ್ಲ !

ಸು :— ಅಲ್ಲಾ — ಎಷ್ಟದು ನಮ್ಮಕಡಿಂದ ಕೆಲಸಾ ಮಾಡಿಸಿ ಕೊಂಬೋದು? ನೀವು ಮನೀ ಕೆಲಸದಾಗ ಒಂದು ದಿವಸಾದರೂ ನಮಗ ನೆರವಾಗ್ತೀದೇನು ? ನೀವs ಹೇಳ್ರಿ !

ಗೋ :— ಆದಿರಲಿ, ನೀ ತಡ್ತೀದೀ, ನಾನs ತರಲ್ಯೋ ನೀರು?

ಸು :— ಸುಟ್ಟಸುಟ್ಟ ಕೈಲೆ ಜ ಬ್ಯಾಳೀ ಛಾಂಡೀ ಮುಟ್ಟ ಬ್ಯಾಡ್ರಿ ! ನಾ ಎಲ್ಲಾ ತಂದುಕೊಡ್ತೀನಿ. ಸ್ವಲ ನಿಧಾನಸ್ರಿ. ಕೈಯಾಗಿನ ಹೆರಳು ಮುಗೀಲಿ.

ಗೋ :— ಅಲ್ಲೀತನಕ ಛಾಂಗs ಕೂಡಲೇನು ನಾ ?

ಸು :— ಜಷ್ಟರಾಗs ಗಡ್ಡ ಬೆಳದು ಜಾವಾಜೀನs ಆಗ್ತಿದ್ದೀರಿ ನೋಡ್ರಿ ! ತುಸು ಕೂತರೇನು ತಪ್ಪಾತ್ಯ ?

ಗೋ :— ಅಲ್ಲs, ನೀ ನೀರು ತಂದುಕೊಟ್ಟೀ ಅಂದರ ಇಬ್ಬರದೂ ಕೆಲಸ ನಡೀತದ.

ಸು :— ಅಂದ್ರ ? ನಿಮ್ಮ ಹಜಾಮತೀ ನೀರು ನನಗೆದಕ್ಕ ಬೇಕಾಗ್ತಾವ ಸುಟ್ಟಿ ?

ಗೋ :— ಛಾಂಗಲ್ಲs, ಅಂದರ ನನ್ನ Shaving ಉ, ನಿನ್ನ Toilet ಉ ಕೂಡೇ ನಡೀತಾವs ಅಂತ.

ಸು :— ನಂದೇನಂದ್ರಿ ?

ಗೋ :— Toilet ಉ ! Toilet ಅಂದರ ಈಗೇನ್ನೀ ನಡಸೀಯಲ್ಲಾ ಅದs ! ಏಳು ಏಳು, ಲಗು ತಂದುಕೊಡು ನೀರು.

ಸು :— ಹಾಯಾಗ ಬಸ್ರೋಜೊಂದs ತಡ ; ಜೀವಕ್ಕ ನಿಧಾನ ಜಂತ ಇಲ್ಲs ಇಲ್ಲ. ನಾ ಆಂತs ಹೊರ್ಟೆಸೀನಿ !

ಗೋ :— ಮತ್ತ ನಾ ಜಂತs ನಿನ್ನ ಸಂಭಾಳಸಿಗೊಂಡೀನಿ !

---

* ಉತ್ತರ ಕರ್ನಾಟಕದಲ್ಲಿ ಲಂಚಕ್ಕೆರುವ ಪರ್ಯಾಯನಾಮ. ಲೇ.

ಸು :— ಯಾಕ? ಏನು ಕಡಿಮ್ಯಾಗ್ಯೇದ ನಿಮ್ಮ ಉಪಚಾರದಾಗ? ನಾ ಮಾಡಿದಷ್ಟು ಯಾವ ಹೆಂಡಂದ್ರೂ ಮಾಡತಿರಲಿಕ್ಕಿಲ್ಲ!

ಗೋ :— ಎಲ್ಲಾ ಮಾಡ್ತೀದಿ! ಒಂದು ಮಾಡೋದಿಲ್ಲ ನೋಡು!

ಸು :— ಅದ್ಯಾವುದು?

ಗೋ :— ನಾ ಹೇಳಿದ್ದು!

ಸು :— ಅದ್ಯಾಕ? ಯಾವ ಕೆಲಸಾ ಮಾಡಿಲ್ಲ?

ಗೋ :— ಈಗ ನೀರು ತಂದುಕೊಡೂ ಅಂತ ಎಷ್ಟು ಸಾರೆ ಹೇಳಿದೆ?

ಸು :— ಕೊಡ್ತೀನಂತ ಹೇಳೇನಲ್ಲ! (ಬಿಚ್ಚಿದ ಕೂದಲನ್ನು ಹಾಗೇ ಬಿಟ್ಟುಕೊಂಡು, ಎದ್ದು ಗಂಡನ ಹತ್ತರ ಬರುವಳು. ಗೋಪಾಳ ಅವಳ ಕೈಯಲ್ಲಿ ಬಟ್ಟಲ ಕೊಡಲು) ನೀರಷ್ಟು ತಂದು ಕೊಟ್ರ ಆತಿಲ್ಲೊ? ಮತ್ತೇನೂ ಕೇಳಬಾರದು!

ಗೋ :— ನನ್ನ ಹೆಣ್ತಿ ಶಾಣ್ಯಾಕಿ ಅಲ್ಲಽ!

ಸು :— ಆಹಹ, ಉಬ್ಬಸಬ್ಯಾಡ್ರಿ ನನ್ನ! ನನಗೆಲ್ಲಾ ನಿಮ್ಮ ಹಂಚಿಕಿ ತಿಳೀತಾವ!

ಗೋ :— ಹೀಂಗ್ ನೋಡು—ಆ ನೀರಂತೂ ಇನ್ನ ಬ್ಯಾಳಿಗೆ ಬರೂದಿಲ್ಲ! ಅಂದವ್ಯಾಲ ಕಾದ ನೀರು ಕೆಡಸೋದೇನು! ಆದರ ಉಪಯೋಗರರ ಮಾಡಿಕೊಂಬೋಣು. ಆದನ್ನ ಕಾಯಿಸಲಿಕ್ಕೆ ನಾಲ್ಕೆಂಟು ಇದ್ದಿಯಾದರೂ ಸುಟ್ಟಿದ್ದಾವು! ಅದು ವ್ಯರ್ಥ ಹೋಗ್ತದೊ ಇಲ್ಲೊ?

ಸು :— ಹೌದು ಪಾಪ! ಇಂಥಾ ಲೆಕ್ಕಾ ಪಾಕೇ ಮನಿ ಅಂಬೋದು ಮಠಾ ಮಾಡಿಟ್ಟೀರಿ! ನೀವೊಂದು ಲಂಗೋಟಿ, ನಾನ್ನೊಂದು ಕಫನಿ ಎರಡs ಮಾಡೋದು ಉಳದsದ ಈಗ! ಈಗ ಎರಡು ವರ್ಷ ಆತ್ಯು— ಒಂದು ಮುತ್ತಿನ ಬೆಂಡವಾಲೀ ತೊಗೊಬೇಕಂತೀನಿ; ಅದೇನಾಗವೊಲ್ಲದು! ಆ ಕಲ್ಟರ್ ಮುತ್ತು ಮಾರೋ ನರಸಪ್ಪ ವಪಾರ್ ಬಂದು ಬಂದು ಹೋಗ್ತಾನ.... ಒಮ್ಮೆ ಆದರೂ ಅನನ ಹತ್ತರ ವ್ಯಾಪಾರ ಮಾಡಲಿಲ್ಲ. ಇವತ್ತ ನಾಳೆ ಇಷ್ಟರಾಗs ಬರೋದಿವನ ಅಂವ! ಈ ಸಾರೆ ಮಾತ್ರ ನಾಯೇನೂ ಬಿಡೋ ಆಕಿ ಅಲ್ಲ. ಈ ಸಾರೆ ತಯಾರೀ ಬೆಂಡವಾಲಿನs ತರ್ತೀನಂತ ಹೇಳ್ಯಾನ! ಇನ್ನ ನನಗ ವರ್ಷತ್ತನಕಾ ಸೀರೀ ಕೊಂಡಕೊಬ್ಯಾಡ್ರಿ; ಇದ್ದದರ ಮ್ಯಾಲs ನಡಸ್ತೀನಿ. ಬೇಕಾದರ ಸಿನೇಮಾನೂ ತೋರಿಸಬ್ಯಾಡ್ರಿ. ಅದಕ್ಕೂ ನನ್ನ ಕಡೂಲಿ! ಬೆಂಡವಾಲೀ ಮಾತ್ರ ತೊಗೊಳ್ಳೇಬೇಕು.

ಗೋ :— ಹಾಂಗs ಮಾಡೋಣಂತೆ! ಏನು? ಬೀಳ್ತsದsರ ಎಷ್ಟದಕ?

ಸು :— ಈಗ ಬೆಲೀ ಹೆಚ್ಚಾಗೇದಂದ್ರೂ ೫೦ ರೂಪಾಯಿ ಬಿದ್ದೀತು.

ಗೋ :— ಇಷ್ಟsನs! ಅದಕ್ಯಾಕ ಕಾಳಜಿ ಮಾಡ್ತಿ! ಅಂವ ಬಂದsರ ಬರಲಿ. ಈ ಸಾರೆ ತೊಗೊಂಡs ಬಿಡೋದು. ಹತ್ತರ ಇಲ್ಲದಿದ್ದರ ಎಲ್ಯsರ ಜೀವಾ ವತ್ತೀಯಿಟ್ಟು ತಂದುಕೊಡ್ತೀನಿ; ಅಂದ್ರಾತಿಲ್ಲೊ? ಉಂ.... ಚಹಾದ ಜೋಡಿಗೆ ಮತ್ತೇನಾರs ಮಾಡ್ತಿಯೇನು? ಬರೆ ಚಹಾ ಕುಡೀಬ್ಯಾಡ್ರಿ ಅಂತ ಹೇಳ್ಯಾನ ಡಾಕ್ಟರು!

ಸು :— ಹೇಳಿದ್ದಾನು ಪಾಪ! ಹೇಳ್ಕಿಕ್ಕೇನು ಹೋಗ್ತsದ! ಇಲ್ಲೆ ಫರಾಳದ್ದು ಮಾಡಲಿಕ್ಕೆ ತನ್ನ ಹೆಣ್ತೀನ್ನ ಕಳಸಿಕೊಡ್ತಾನಂತೇನು? ಬರೇ ಹೇಳವರ ಗಂಟೇನು ಹೋಗ್ತsದ! ಇಷ್ಟಾಗಿ ಡಾಕ್ಟರು ಹೇಳ್ಯಾರೊ, ನೀವs ಹೇಳ್ತೀರೊ?

ಗೋ :— ಯಾರು ಹೇಳಿದರೂ ಕೆಟ್ಟದು ಬ್ಯಾರೇ ಅಲ್ಲsನ? ಉಂ, ಏನ್ ಮಾಡ್ತೀ ಪಂಗಾರ?

ಸು :— ಏನಾರೆ ಮಾಡ್ತೀನಿ. ಆ ಬೆಂಡವಾಲಿ ಆಸೇ ಒಂದು ಹಚ್ಚೀರಲ್ಲ! ಅಂತೂ ಒನ್ಮೆ ನಿಮ್ಮ ಬಾಯಿಲೆ ಬಂದsದ, ಇದs ದೊಡ್ಡದು! ಈ ಸಾರೆ ನಿಮ್ಮನ್ನೇನು ಬಿಡೋದಿಲ್ಲ ನಾ! (ಒಳಗೆ ಹೋಗುವಳು).

ಗೋ :— ನಮ್ಮನ್ನು ದೇವರೇ ಕಾಪಾಡಬೇಕು! ನಮ್ಮ ದುರದೃಷ್ಟಕ್ಕ ಒಂದೆರಡು ದಿವಸದಾಗs ಆ ಮುತ್ತಿನವ ಬಂದsಬಿಟ್ಟನs, ನಮ್ಮ ಫಜೀತಿ ಯಾತಕ್ಕೂ ಬ್ಯಾಡ! ಒಂದ ಅಂದರ ಆಗ ಏನಾರೆ ಮಾಡೋಣಂತ. ಎರಡು ದಿವಸ ಮಾರೀ ತಪ್ಪಿಸಿ ಬಿಟ್ಟ; ಅಥವಾ ಇನ್ನೇನಾರೇ ಉಪಾಯ ಮಾಡಿ ಅವಗ ಜಕ್ಕಾಕೊಟ್ಟ! ನೋಡೋಣಂತ. ಪ್ರಸಂಗ ಬಂದಾಗ ಯುಕ್ತಿ ತೋಚತಿರ್ತಾವ! ಈಗ್ಯಾಕ ಆದರ ವಿಚಾರ? (ಹೊರಗೆ 'ಬಾಯೇರ,' 'ಬಾಯೇರ' ಎಂದು ಕೂಗಿದ ಧ್ವನಿ. ಗೋಪಾಳ ಬಿಟ್ಟಬಿದ್ದು) ಯಾರು ಕೂಗತಾರಪಾ ಇದು? ಆ ನರಸಪ್ಪನs ಬಂದನೋ ಏನು ಸುದ್ದಿಗಾಡೊ! ಸಂಕಟ ಹೇಳಿಕೇಳಿ ಬರೋದಿಲ್ಲಾ ಅಂತಾರ! ನಮ್ಮ ಪಾಲಿಗೆ ಹೇಳಿಕೇಳೇ ಬಂಧಾಂಗಾದೀತು! ದೇವರೇ, ವೆಂಕಟರಮಣಾ, ಈಗ ಬಂದಂವ ನರಸಪ್ಪ ಆಗದ, ಮುತ್ಯಾಂವನರ ಆಗೋಹಾಂಗ ಮಾಡೋ ಮಹಾರಾಯಾ! ನವರಾತ್ರಿ ಒಂಬತ್ತು ದಿವಸ ದಿನಾ ಒಂದು ಕಾಯಿ ಒಡಸ್ತೀನಿ ನಿನಗ! (ನರಸಪ್ಪ ಒಳಗೆ ಬರುವನು. ಅವನನ್ನು ನೋಡಿ) ಇದು ಯಾರ ಮನೀ ಅಂತ ಬಂದೀ? ಯಾರು ನೀನು?

ನರ :— ನಿಮ್ಮ ಮನೀ ಅಂತs ಒಂದೀನಿ ರಾಯರs! ಬಾಯೇರು ಇಲ್ಲೇನ್ರಿ?

ಗೋ :— ಬಾಯೇರು ಇರ್ಲಿ. ನಮ್ಮ ಮನೀ ಅಂದರ? ನಮ್ಮ ಹೆಸರsರ ಗೊತ್ತದ ಏನು?

ನರ :— ಹೆಸರೇನ್ರಿ, ರಾಯರು ಅಂಬೋದಷ್ಟು ಗೊತ್ತು! ಹೆಚ್ಚಿಂದು ತೊಗೊಂಡು ನನಗೇನು ಮಾಡೋದದರ! ಮುತ್ತು ಮಾರಾಂವಗ ಹೆಸರು ದೆಸೀ ಯಾಕ ಬೇಕ್ರಿ?

ಗೋ :— ಅಂದರ ಆ ನರಸಪ್ಪನs ಏನ್ನೀನು? (ಅಡಿಗೆ ಮನೆಯ ಬಾಗಿಲಕಡೆಗೆ ಆಗಾಗ ನೋಡುವನು.)

ನರ:— ಹೌದಲ್ರಿ, ಯಾಕರಿ?

ಗೋ:— (ನಿಟ್ಟುಸಿರು ಬಿಟ್ಟು) ಕಾಡೊ ವ್ಯಾಳ್ಯಾ ಅಂದರ ಹೀಂಗಿರ್ತ್ತಾದಪಾ!

ನರ:— ಯಾಕರೀ ರಾಯರ? ಏನಾತ್ಯ?

ಗೋ:— ನನಗೇನಾಗಿಲ್ಲಪಾ! ಆದರ ನೀ ಬಂದ ವ್ಯಾಳ್ಯಾ ಬೆಲೊ ಇಲ್ಲಾ ಅಂತ!

ನರ:— ಯಾಕರಿ? ಬಾಯೋರಿಲ್ಲೇನ್ರಿ ಊರಾಗ?

ಗೋ:— ಇಲ್ಲಪಾ, ಊರಾಗಿಲ್ಲ. ನಾನೂ ಅದಽ ಹೇಳ ಬೇಕಂದೆ-ಅಕಿ ತವರ್ಮನಿಗೆ ಹೋಗ್ಯಾಳ. ಒಳ್ಳೇದು— ನನಗ ಬ್ಯಾರೇ ಕೆಲಸದಽ! ನೀ ಮುಂದಿನ ಸಾರೆ ಬಾ ಏನಪಾ!

ನರ:— ಬಾಯೋರೆಂದು ಬರ್ತಾರ್ರಿ? ನಾ ಇನ್ನೂ ೧೫ ದಿನ ಇಲ್ಲೇ ಇರ್ತೀನ್ರಿ. ಅಷ್ಟರಾಗಽ ಮತ್ತೊಮ್ಮೆ ಹಾಯ್ಲೇನ್ರಿ?

ಗೋ:— ಅವರು ಅಷ್ಟರಾಗಽ ಬರಲಿಕ್ಕಿಲ್ಲ! ನೀ ಮುಂದಿನ ವರ್ಷ ಬರ್ತೀಯಲ್ಲ; ಆಗಽ ನೋಡೋಣೇನಪಾ!

ನರ:— ಅದಾತ್ರಿ ಅವರ ದಸಿಂದ ಒಂದು ತಯಾರೀ ಬೆಂಡೂಲೀನಽ ತಂದಿದ್ದಿನ್ರಿ. ಈಗ ನಿಮ್ಮ ಕಣ್ಣಿಗೆ ಹಾಕಿಡ್ತೀನ್ರಿ! ಒಮ್ಮೆ ನೋಡ್ಯಽರ ನೋಡ್ರಿ-ಮಾಲು ಭಾಳ ಫಾಸ್ಟೈತ್ರಿ. ಈ ದಿವಸದಾಗ ಇಂಥಾ ಮಾಲಽ ಬರೋದಿಲ್ರಿ! ೨೫ ವರ್ಷ ಗ್ಯಾರಂಟೀ ಕೊಡ್ತೀನ್ರಿ!

ಗೋ:— ಈಗಂತೂ ನೀ ಹೋಗೇನಪಾ! ಒಂದು ಮಿನೀಟು ನಿನ್ನ ಸಂಗತಿ ಹಚ್ಚು ಮಾತಾಡೋದು ಅಂದರೂ ಕಠಿಣಽ ಅದಽ ಏನಪಾ!

ನರ:— ಇವತ್ತ ನಿನುಗ ಗಡಿಬಿಡಿ ಇದ್ದರ ನಾಳೆ ತೋರಸ್ತೀನ್ರಿ. ಅದಕ್ಕೇನು! ನನಗ ಹೇಳ್ರಿ—ನೀವು ಯಾವ ಹೊತ್ತಿಗೆ ಬಾ ಅಂದರೂ ಆ ಹೊತ್ತಿಗೆ ಬರ್ತೀನ್ರಿ!

(ಸುಭದ್ರಾ ಒಳಗಿನಿಂದ ಬಂದು ಗಲ್ಲಿಳ ಮಾಡದೆ ಗೋಪಾಳನ ಹಿಂದೆ ನಿಲ್ಲುವಳು. ನರಸಪ್ಪ ಸುಭದ್ರೆಯನ್ನು ನೋಡಿ ಆಶ್ಚರ್ಯಗೊಳ್ಳುವನು. ಅವನ್ನು ತೋರಗೊಡದೆ) ಈ ಬಾಯೋರಿದ್ದಾರಲ್ರಿ, ಅವರಾದರೂ ನೋಡಬಹುದ್ರಿ! (ಗೋಪಾಳ ಓಂತಿರುಗಿ ನೋಡುವನು. ಮುಖ ಪೆಚ್ಚಾಗುವುದು. ಸುಭದ್ರೆಯ ಕೈಯಲ್ಲಿಯ ಒಟ್ಟಲವನ್ನು ತಕ್ಕೊಂಡು ಕ್ವಾರ್ಟರ್ ಸ್ಥಳದಲ್ಲಿ ಹೋಗಿ ಕುಳಿತುಬಿಡುವನು.)

ಸುಭದ್ರಾ:— ಏನ್ ನರಸಪ್ಪಾ, ಯಾವಾಗ ಬಂದಿ? ನಿನ್ನ ಇದಽ ಈಗ ನೆನಸಿದಿವಿ! ತಂದೀಯೇನು ಬೆಂಡವಾಲ?

ನರ:— ನೀವು ಹೇಳಿದಮ್ಯಾಲ ತಾರದಽ ಇದ್ದೇನ್ರಿ?

ಸು:— ಬಾ, ಕೂಡಬಾ, (ಇಬ್ಬರೂ ಎದುರು ಬದುರು ಕೂಡುವರು. ಗೋಪಾಳ ಇವರ ಕಡೆಗೆ ಬೆನ್ನು ಮಾಡಿ ಕುಳಿತಿರುವನು. ನರಸಪ್ಪ ಅಗಾಗ ಗೋಪಾಳನ ಕಡೆಗೆ ತಿರುಗಿ ನೋಡುವನು.) ಇವರು ನಿನಗೇನು ಹೇಳ್ತಿದ್ರೊ?

ನರ:— ಏನಿಲ್ಲೇಳ್ರಿ! ನೀವು ಊರಾಗಿಲ್ಲಾ ಅಂತ ಸುಮ್ಮನಽ ನಕಲೀ ಮಾಡಿದರ್ರಿ!

ಸು:— ನಾ ಊರಾಗಿಲ್ಲಾ ಅಂತ ಹೇಳಿದರಽ?

ನರ:— ಹಾಂಗಽ ಚಾಷ್ಟಿಗೆ ಅಂದರ್ರಿ! ಅದೇನು ಖರೇ ಅಲ್ರಿ! (ಮುತ್ತಿನ ಬೆಂಡವಾಲಿಯ ಡಬ್ಬಿಯನ್ನು ತೆಗೆದು) ಇವು ನೋಡ್ರಿ ಬಾಯೋರಽ ನಿಮ್ಮ ಬೆಂಡವಾಲಿ! ಎರಡು ಸಾವಿರ ಮುತ್ತಿನ್ಯಾಗಿಂದ ಆರಿಸಿ ತಗದದ್ದವು ಬಾಯೋರ, ಈ ನಿಮ್ಮ ಬೆಂಡವಾಲೀ ಮುತ್ತು! ಯಾತರಾಗೂ ತಗಿಯೋ ಹಾಂಗಿಲ್ರಿ ಬಾಯೋರ! ನಿಮ್ಮ ಪ್ಯೆ ಬಣ್ಣ ಈ ಮುತ್ತಿನ ಬಣ್ಣ ಒಂದಽ ಅದ ನೋಡ್ರಿ! (ಬೆಂಡವಾಲಿಯನ್ನು 'ಪಾಲಿಶ್' ಅರಿವಿಯಿಂದ ಒರಸಿ ಸುಭದ್ರೆಯ ಕೈಯಲ್ಲಿ ಕೊಡುವನು.) ವಸ್ತ ಅಂದ್ರು ವಸ್ತ!

ಸು:— (ಉಲ್ಲಸಿತಳಾಗಿ) ತಿರಗಣಿ ಹೊಸಾ ನಮೂನೆ ಅದಽಲ್ಲಽ?

ನರ:— ಅದನ್ನ ನಾನಽ ವಿಕ್ಟೊರಿಯನ್ ಕೊಟ್ಟು ಮಾಡಿಸೀನ್ರಿ! ಈ ಮುತ್ತಂತೂ ಖರೇ ಮುತ್ತಿನ ಮಾರೀಮ್ಯಾಲ ಹೊಡಿಯೋ ಹಾಂಗವರಿ! ಎರಕೊಂಬೊ ಮುಂದ ಸಡಿತ ನೀವು ತಗೀಬ್ಯಾಡ್ರಿ! ಒಮ್ಮೆ ಕಿಂವ್ಯಾಗ ಹಾಕಿದ್ರಿ ಅಂದ್ರ ಜನ್ಮಶಾಶ್ವತ ನೋಡ್ರಿ ಬಾಯೋರ! ಕಿಮ್ಮತ್ತು....ನಾ ನಿಮಗ ಹಿಂದಕ್ಕ ಹೇಳಿದ್ದಕ್ಕಿಂತ ಸ್ವಲ್ಪ ಹೆಚ್ಚಾಗ್ತದ್ರಿ! ಆದರ ಈ ಮಾಲಿಗೇನು ಅದು ಹೆಚ್ಚಲ್ರಿ ಮತ್ತ!

ಸು:— ಅಂದ್ರ? ಎಷ್ಟು ಬೀಳ್ತದ? ಸುಮ್ಮನ ಹೆಚ್ಚಿಸಿ ಹೇಳಬ್ಯಾಡಾ!

ನರ:— ಈ ಸಾರೆ ನಾ ನಿಮಗ ಹತ್ತು ರೂಪಾಯಿ ಬಿಟ್ಟಽ ಕೊಡಜೇಕೂ ಅಂತ ಮಾಡೀನ್ರಿ. ಈ ಹತ್ತು ರೂಪಾಯಿ—ಮುಽದ—ನಾ ನಿಮ್ಮ ಕಡಿಂದಾನಽ—ನಿಮ್ಮ ಖುಷಿಯಿಂದ ತೊಗೋತೀನ್ರಿ! ಆ ಧೈರ್ಯ ಅದಽರಿ ನನಗ.

ಸು:— ಮುಂದೇನಾರೇ ಮಾಡೀಯಂತ. ಈಗ ಇದರ ಕಿಮ್ಮತ್ತೆಷ್ಟು?

ನರ:— ಇಪ್ಪೊಂದು ಸಾರೆ ನನ್ನಮ್ಯಾಲ ವಿಶ್ವಾಸಿಟ್ಟು ತೊಗೊಳ್ರಿ ಬಾಯೋರ. ನಾ ಹೇಳಿದ ಕಿಮ್ಮತ್ತಿನೊಳಗ ಮಾತ್ರ ಚೌಕಾಸೀ ಮಾಡಬ್ಯಾಡ್ರಿ.

ಸು:— ಅದಾತಪಾ. ಅದೆಷ್ಟು ಅಂಬೋದಽರ ಒಮ್ಮೆ ಹೇಳಲ್ಲ!

ನರ:— ನಾ ಸುಳ್ಳು ಹೇಳಿದ್ರೂ ನಂಬತೀರಿ, ಖರೆ ಹೇಳಿದ್ರೂ ನಂಬತೀರಿ! ಆದರ ಹಾಂಗ ವಿಶ್ವಾಸದ ಜಾಗಾದಾಗ ಚಾಸ್ತೀ ತೊಗೊಂಡ್ರ ನಮಗದು ಎಂದೂ ದಕ್ಕೂದಿಲ್ರಿ. ನಾವು ಮುಂದಿಗೆ ಸೇವಾ ಮಾಡಿದರ ನಮಗ ಯಾತರಾಗಽರ ಹೊಡತಾ ಕೊಡತೈತ್ರಿ! ನಾ ಭಾಳ ಇದರ ಅನುಭವಪಟ್ಟೀನ್ರಿ!

ಗೋ:— (ದೇಗಿದ ದನಿಯಲ್ಲಿ) ನಿಂದು ಕೊಚ್ಚಿಗೊಳ್ಳೋದಽ ಭಾಳಾತ್ಯಲ್ಲ! ಕಿಮ್ಮತ್ತೆಷ್ಟು ಅಷ್ಟು ಹೇಳಿಬಿಟ್ಟರಾಯ್ತಪಾ!

ನರ:— ಹೇಳ್ತಿನಿ ರಾಯರ! ಮೂರಲಿಕ್ಕೇ ತಂದಮ್ಯಾಲ ಕಿಮ್ಮತ್ತು ಹೇಳದಽ ಇರ್ತೀನ್ರಿ? ಮೊದಲನೆ ಸಾರೇ ವ್ಯವಹಾರ

ಅಂತ ನಾಕು ಮಾತು ಹೆಚ್ಚು ಆಡಬೇಕಾಗ್ತದ್ರಿ! ಹಿಂದಾಗಡೆ ಏನೂ ಜರೂರಿಲ್ರಿ!

ಗೋ:— ಮತ್ತೂ ನಿನ್ನ ಪುರಾಣಾನ ಬಿಡಬೌಲ್ಲಿ ಅಲ್ಲ ನೀನು!

ಸು:— ಹೇಳೋ ನರಸಪ್ಪಾ!

ನರ:— ಇದಕ್ಕ ಒಳ್ಳೆ ಆಗ್ತದರಿ. ಮತ್ತ ನಿಮ್ಮುಂದ ನುಳ್ಳೇನು—ಜಕಾತೀ ತಪ್ಪಿಸಿ ತಂದೇನ್ರಿ! ಆ ಮೂರುವರಿ ರೂಪಾಯಿ ಬಿಟ್ಟು ೭೫ ಬರಾಬರಿ ಮಾಡಿ ತೊಗೊಂಡು ಬಿದ್ರಿ! ಇದರಾಗ ಒಂದು ರೂಪಾಯಿ ಬಿಟ್ಟು ಕೊಟ್ಟರೂ ನನಗ ಅಸಲಿನ್ಯಾಗ ಲುಕ್ಸಾನರಿ ಮತ್ತ!

ಗೋ:— (ಆರ್ಧ ಗಡ್ಡಕ್ಕ ಸಬ್ಬು ಹತ್ತಿದ್ದು ಹಾಗೇ ಇರಲು ಎದ್ದು ಬಂದು) ಕಾಣಾ ಕಾಣಾ ಕಲ್ಚರ್ ಮುತ್ತಿನ ಬಿಂಡವಾಲಿ; ಅದಕ್ಕ ೭೫ ರೂಪಾಯೇ? ಯಾರದರ ಮನಿ ಪಾಳ್ ಮಾಡೀ! ೫೫|೬೦ ರೂಪಾಯಿ ಅಂದರ ತಲಿಬಡದು ಹೋತ್ಯು! ಹತ್ತು ರೂಪಾಯಿ ಬಿಟ್ಟು ಕೊಡ್ತೀನಿ ಅಂತ ನಮ್ಮಾಶ್ಯಲ ಉಪಕಾರ! ಈ ನಿನ್ನ ಉಪಕಾರದ ಲಾಭಾ ಪಡೀಲಿಕ್ಕೆ ನಾವು ಯೋಗ್ಯರಿಲ್ಲ! ನೀ ನಿನ್ನ ಪೂಲು ಒಯಿದು ಬಿಡೇನಪಾ!

ಸು:— ಏನ್ಹಿಂಗ್ ಮಾತಾಡಿದ್ರಿ? ಬ್ಯಾಡಾ—ಧಾರಣೆ ಮಾಡಿನಿ, ಅಷ್ಟು ಕಿಮ್ಮತ್ತಿಗೆ ಅಡ್ಡಿಯಿಲ್ಲಾ ಅಂದರ ತೊಗೊಂಬೋಣಂತ. ಅಂವ ಹೇಳಿದ ಕಿಮ್ಮತ್ತಿಗೇ ತೊಗೋಬೇಕಂತ ಎಲ್ಯಽದ? ಅವನ ಮ್ಯಾಲ ಯಾಕ ಪಾಪ, ಹರಿಪಾಯ್ತೀರಿ?

ಗೋ:—ಹೌದs, ಧಾರಣೇಮಾಡಪರು ೭೫ ರೂಪಾಯಂತs ಹೇಳಿದ್ರೂ ಅಂತ ಇಟಗೊಂಬೋಣು. ರೊಕ್ಕಾ ತೆರಾಂವಾ ನಾನಽ ಅಲ್ಲ ಕಡೀಕ?

ನರ:— ರಾಯರ, ಈಗೆರಡು ವರ್ಷದಿಂದs ಬಾಯೇರು ಹೇಳ್ತಿದ್ರೂ ಅಂತ ತಂದೇನಿ; ನೀವು ತೊಗೊಳ್‌ದಿದ್ರ ನನಗೇನು ಸುಟ್ಟಿಲ್ಲ. ಈ ಮಾಲು ಇದs ಊರಾಗs ಒಂದು ತಾಸಿನ್ಯಾಗ ಮಾರಿಕೊಂಡು ಬರ್ತೀನಿ! ಅಷ್ಟs ಅಲ್ಲ, ೭೫ ರೂಪಾಯಕ್ಕ ಮಾರಿಧಾಂಗ ಪಾವತೀ ತೋರಿಸಿ ಹೋಗ್ತೀನಿ, ಮತ್ತೇನು!

ಸು:— ನಾವು ತೊಗೊಳ್‌ದಿದ್ದರ ನಿನ್ನ ಜೀನಸೇನು ಉಳೀತದೇನು ಬಿಡು. ಯಾರಾದರೂ ತೊಗೋತಾರ. ಕೊಡೋ ಮಾತು ಹೇಳು. ೭೫ ಅಂದರ ದುಬಾರಿ. ಅವೇನು ಸಾಧ್ಯ ಇಲ್ಲ ನಮ್ಮ ಕಡಿಂದ.

ನರ:— ಬಾಯೇರ, ಕಿಮ್ಮತ್ತಿನ್ಯಾಗ ಕಡಿಮಿ ಆಗೋದಿಲ್ರಿ. ಅಷ್ಟು ರೂಪಾಯಿ ಇರದಿದ್ದರ, ಈಗ ಇದ್ದಷ್ಟು ಕೊಟ್ಟು, ಉಳಿದದ್ದು ೨/೩ ತಿಂಗಳ ಮ್ಯಾಲ ಕೊಟ್ಟರೂ ನಡದೀತ್ರಿ.

ಸು:— ಏನು ಮಾಡೋಣು ಮತ್ತ (ಎಂದು ಗಂಡನ ಕಡೆಗೆ ನೋಡುವಳು).

ಗೋ:— (ಹೆಂಡತಿಯನ್ನು ದುರುಗುಟ್ಟಿ ನೋಡುತ್ತ) ನಿನಗ ಬಿಡ್ರಿ. ಈ ಕಿಮ್ಮತ್ತು ಯಾರಾದರೂ ಹೆಚ್ಚು ಅಂದರ, ನನ್ನ ಸ್ವಲ್ಪರ ವಿಚಾರದs ಏನು? ವ್ಯಾಪಾರಾಗೋದಕ್ಕ ಅಂವ ಬೇಕಾದ್ದs ಹೇಳ್ತಾನ! ೬-೩ ತಿಂಗಳ ಮ್ಯಾಲಾದರೂ ಪೂರಾ ಕೊಡs ಬೇಕಲ್ಲಾ! ಅದೇನು ಬಿಡ್ತsದೇನು? ಈಗೇನದರಿಂದ ಹರಕತ್ತಾಗಿಲ್ಲ. ಬಿಂಡವಾಲಿ ಪಾಕ್ಕೊಂಡು ಪೆರೆದರೂ ನಿನಗ ಮಿನಿಸ್ಟರ್ ಹೆಣ್ತೀ ಅಂತ ಯಾರೇನಂಬೂದಿಲ್ಲ! ಕಾರಕೂನನ ಹೆಣ್ತಿ ಕಾರಕೂನನ ಹೆಣ್ತೀಹಾಂಗs ಇರಬೇಕು! ಬಡಪರಾಗಿ ನಮಗ್ಯಾಕಿವೆಲ್ಲಾ?

ಸು:— ಬಡವರ ಬಯಕಿ ಬಿಂಡವಾಲೀನೂ ಜೀಡಬಾರದs? ನಾ ಬಿಂಡವಾಲೀ ಪಾಕೋಅಷ್ಟು ನಮಗ ಯೋಗ್ಯತಾ ಇಲ್ಲೇನು? ಆಗಲೇ ಏನು ಹೇಳಿದಿರಿ ಮತ್ತ? 'ನರಸಪ್ಪ ಬರಲಿ, ಜೀವ ಪೊತ್ತಿಯಿಟ್ಟಾದರೂ ಬಿಂಡವಾಲಿ ತೊಗೊಂಬೋಣು' ಅಂತ! ಪೋಷ್ಟಿನ್ಯಾಗ ಇಟ್ಟಿಟ್ಟು ಬರ್ತೀರಲ್ಲ! ನನ್ನ ದಸಿಂದ ಅದರಾಗಿನ ೭೫ ರೂಪಾಯಿ ತಗದರ ಏನಾಗ್ತsದ? ದುಡ್ಡು ಹೋದರ ವಸ್ತ ಬರ್ತsದ ಮನೀಗೆ!

ನರ:— ೭೫ ರೂಪಾಯಕ್ಕ, ಬಾಯೇರs, ಒಬ್ಬ ಕಳ್ಳ ತೊಗೋತಾನ.

ಗೋ:— ಅಂದಮ್ಯಾಲ ಅಂವಗs ಕೊಡೇನಪಾ! ನಾವೇನು ಕಳ್ಳರಲ್ಲ, ತಿಳೀತs?

ನರ:— ರಾಯರ, ನೀವು ಹ್ಯಾಂಗ್ ಮಾತಾಡಿದರೂ ನಡೀತsದ! ಇದು ಮುಸ್ಕೀ ಕೆಲಸ ರಾಯರ. ಈ ಸೊಟ್ಟ ವಸ್ತದ ಕಾಲಾಗ ನಿಮ್ಮ ನಿಮ್ಮೊಳಗ ತಂಟೇ ಬ್ಯಾಡ! ನನಗ ಸಾವಿರ ಗಿರಾಕಿ. ಬಾಯೇರು ಹೇಳಿದ್ರೂ ಅಂತ ವಿಶ್ವಾಸದಿಂದ ಮಾಡಿಸಿ ತಂದಿದ್ದೆ. ಬ್ಯಾಡಂತೀರಿ. ಆರಕ್ಕೂ ನಮ್ಮ ತಕರಾರಿಲ್ಲ. ಜೇಕಾದರ ಹರಳಿನ ಮೂಗುಬಟ್ಟನ, ಉಂಗರವನ! ತೊಗೋಜೇಕೆಂಬೊ ಜಬರಿಲ್ಲ. ಅವನ್ನ ನೋಡೋ ಮನಸ್ಸಿದ್ರ ಅವನ್ನೂ ತೋರಸ್ತೀನಿ.

ಗೋ:— (ಅತ್ತಿಂದಿತ್ತ ಓಡಾಡುತ್ತಿದ್ದವನಂತು) ಏ ನರಸಪ್ಪಾ, ನೀ ಇಲ್ಲದ ಬ್ಯಾಟಾ ಮಾಡಬ್ಯಾಡಾ! ನನ್ನ ತಲೀ ನಮು ಇಲ್ಲೇಗ! ನನ್ನ ಬಾಯಿಂದ ಸುಮ್ಮನs ದುಬಾರಿ ಮಾತು ಆಡಿಸಿಗೊಂಡು ಹೋಗಬೇಕಾದೀತು. ನೀ ಜಾಗಾ ಬಿಡೇನಪಾ!

ನರ:— ಬಾಯೇರ, ಆ ಬಿಂಡವಾಲೀ ಕೊಡ್ರಿಲ್ಲೆ! ನಾ ಲಕ್ಷಾಂತರ ರೂಪಾಯಿ ವ್ಯಾಪಾರ ಮಾಡ್ತೀನ್ರಿ. ಹೀಂಗೆಲ್ಲೂ ಆಡಿಸಿಗೊಂಡಿದ್ದಿಲ್ರಿ. ಆಗಲಿ, ನಿಮ್ಮ ದಸಿಂದ ಆಡಿಸಿಗೊಂಡೆ ಆನಬೇಕು. ಕೊಡ್ರಿ ಬಾಯೇರ, ತಿಳಿಧಾಂಗಾತು. (ಸುಳದ್ರಾ ಬಿಂಡವಾಲಿಯ ಡಬ್ಬಿಯನ್ನು ಪಟ್ಟಿನಿಂದ ನರಸಪ್ಪನ ಮುಂದೆ ಎಸೆಯುತ್ತಾಳೆ. ಅವನು ಅದನ್ನೆತ್ತಿ ಜೇಬಿನಲ್ಲಿಟ್ಟು ಹೊರಡಲು ಅಣಿಯಾಗುತ್ತಾನೆ.) ಬಾಯರ, ಅವ್ವಾ ಅವರಿಗೆ ತೊಗೊಳ್ಳೊ ಮನಸ್ಸೈತಿ! ಅವರ ದಸಿಂದs ಕಷ್ಟಬಟ್ಟು ಮಾಡಿಸಿ ತಂದೀನಿ, ತಿರಿಗಿ ಒಯ್ಯೂಜೇಕೂ ಅಂದರ ನನಗೂ ಜೀವಕ್ಕ ಹ್ಯಾಂಗೋ ಆನಸ್ತೈತಿ. ಹತ್ತು ರೂಪಾಯಿ ನಂದs ಹೋಗಲಿ. ೬೦ ರೂಪಾಯಕ್ಕ ತೊಗೊಂಡು ಹೋಗಲಿ. ಈ ಕಿಮ್ಮತ್ತು ಯಾರಾದರೂ ಹೆಚ್ಚು ಅಂದರ, ನನ್ನ

ಗೊಂದು ಬೈ ಕೂಡಬ್ಯಾಡ್ರಿ! ಬೇಕಾದರ ಹಿಂಗೂ ಮಾಡ್ರಿ— ಅರ್ಧ ರೊಕ್ಕಾ ಈಗ ಕೊಡ್ರಿ; ಅರ್ಧ ನಿಮ್ಮ ಸವಡೀ ಪ್ರಕಾರ ಕಳಿಸ್ರಿ. ಇದಕ್ಕುದರ ಕಬೂಲಾಗ್ರಿ, ಹೋಗಲಿ!

ಗೋ :— ಮೂವತ್ತು ರೂಪಾಯದ ಮಾತರಲಿ; ಮೂರು ರೂಪಾಯಿ ಸಹಿತ ಈಗ ನಾ ಕೊಡಲಿಕ್ಕೆ ತಯಾರಿಲ್ಲೇನವಾ!

ಸು :— ನರಸಪ್ಪಾ, ಆ ಬೆಂಡವಾಲಿ ತಾ ಇಲ್ಲೆ! ನಾಳೆ ಬಂದು ನಿನ್ನ ಅರ್ಧ ರೂಪಾಯಿ ತೊಗೊಂಡು ಹೋಗು!

ಗೋ :— ನರಸಪ್ಪಾ, ಆ ಬೆಂಡವಾಲಿ ನಮಗ ಬೇಕಾಗಿಲ್ಲ; ಪ್ಯಾಂಗ ತಂದೀದಿ ಹಾಂಗ ತೊಗೊಂಡು ಹೋಗು!

ಸು :— ನರಸಪ್ಪಾ, ನಾ ತಾ ಅಂತ ಹೇಳೀನಿ; ಅದರ ಜವಾಬ್ದಾರಿ ನಂದು! ಅದನ್ನ ಕೊಟ್ಟು ಹೋಗಿಲ್ಲೆ!

ಗೋ :— ನರಸಪ್ಪಾ, ಕೊಟ್ಟೇ ಅಂದರ ಕೆಟ್ಟಿ! ಅದರ ಜವಾಬ್ದಾರೀ ನಿಂದು! ತೊಗೊಂಡು ಹೋಗು, ಒಳ್ಳೆ!

(ನರಸಪ್ಪ ಗೋಪಾಳನ ಕಡೆಗೊಮ್ಮೆ, ಸುಭದ್ರೆಯ ಕಡೆಗೊಮ್ಮೆ ನೋಡುತ್ತಿರುತ್ತಾನೆ).

ನರ :— ನಾ ಯಾರ ಮಾತಂತ ಕೇಳಬೇಕು ರಾಯರ್ರ? ನಾ ಕೊಡೋದೂ ಇಲ್ಲ, ಒಯ್ಯೋದೂ ಇಲ್ಲ; ಇಲ್ಲೇ ಇಟ್ಟು ಹೋಗಿ ಬಿಡ್ತೀನಿ. ನೀವು ನೀವು ಬೇಕಾದ್ದು ಮಾಡಿಕೊಳ್ರಿ!

ಗೋ :— ಏ, ಯಾಕ? ಹುಡುಗಾಟ ನಡಸೀಯೇನು? ಹೋಗ್ತಿಯೊ ಏನಂತಿ? (ನರಸಪ್ಪನ ಮೈನೆಲೆ ಹೋಗುತ್ತಾನೆ. ಅವನು ಕಾಲು ಕಿತ್ತುತ್ತಾನೆ. ಸುಭದ್ರಾ ಕಾಲಪ್ರಳಿಸುತ್ತ, ಅಳುಮೋರೆ ಮಾಡಿಕೊಂಡು, ಅದರೂ ಸಿಟ್ಟಿನಿಂದ ಉರಿಯುತ್ತ ಬಿಮ್ಮನೆ ಗೋಡೆಗಾತು ಕುಳಿತುಬಿಡುತ್ತಾಳೆ).

ಗೋ :— (ಕ್ಷಾಲದ ಸಾಹಿತ್ಯನನ್ನೆಲ್ಲ ತೆಗೆದಿಡುತ್ತ) ಅಂತು ವಸ್ತ ಅಂದರ ಪ್ರಾಣಾಕೊಡ್ತೀರಿ ನೋಡ್ರಿ ನೀವು ಪೆಂಗುನವು! ಬೇಕಾದ ವಚನ ಕೊಡಬಹುದು; ವಸ್ತಾ ಕೊಡಸ್ತೀನಿ ಅಂತ ಮಾತ್ರ ಯಾವ ಗಂಡಸೂ ವಚನಾ ಕೊಡಬಾರದು! ನಮ್ಮ ಸುಯೋ-ಧನೀನು ತೊಗೋತಾರ. ಅಲ್ಲ, ನನ್ನ ಹೆಣ್ಣ ಬಹಳ ವಿವೇಕೀ ಅಂತ ನಾ ಮುಂದೀಮುಂದ ಕೊಚ್ಚಿಗೋತಿದ್ದೆ. ನೀ ನೋಡಿದರ ವಸ್ತದ ಕಾಲಾಗ ನನ್ನ ಮರ್ಯಾದೀ ತಗದುಬಿಟ್ಟಿ! (ತುಸು ಹೊತ್ತು ಸುಮ್ಮನಿದ್ದು) ಉಂ, ಇನ್ನೇನು ನಮಗ ಜಪಾ ಸಿಗ್ತುದ! ಇಂದ ಊಟರೆ ಸಿಗ್ತುದೋ ಇಲ್ಲೋ ಅಂತೀನಿ! ಏಳ್ತೀಯೊ, ಹಿಂಗs ಚಾಮುಂಡೀ ಹಾಂಗ ಕೂದಲು ಬಿಟ್ಟುಗೊಂಡು ಕೂತು ಬಿಡ್ತೀಯೊ? (ಸುಭದ್ರಾ ಮಾತನಾಡುವುದಿಲ್ಲ. ಮುಖವನ್ನು ಕಾಣದಂತಾದಂದು ಗೋಡೆಯ ಕಡೆಗೆ ತಿರುಗುತ್ತಾಳೆ).

ಗೋ :— ಅಡಿಗಿ ಗಿಡಗಿ ಆದನೊ ಇಲ್ಲೊ ಮನ್ಯಾಗಿವತ್ತ?

ಸು :— (ಉತ್ತರವಿಲ್ಲ).

ಗೋ :— (ಅವಳಿಮುಂದಿಗೆ ಹೋಗಿ ನಿಂತು) ಅಡಗೀ ಊಟ ಇಲ್ಲ. ದಿದ್ರುಷ್ಟ ಸೋತ್ಯ, ಜಗಳಾಡಿಕೋತಾರೆ ಕೂಜೋಣು. ಅದಂದೆ ಒಂದು ಕೆಲಸಾಗಲಿ! (ಸುಭದ್ರಾ ಪೋಜಿಯನ್ನು ಇನ್ನೊಂದು ಕಡೆ ತಿರುಗುವಳು. ಗೋಪಾಳನೂ ಅದೇ ದಿಕ್ಕಿನಲ್ಲಿ ಎದುರು ನಿಲ್ಲುವನು. ಸುಭದ್ರಾ ಎದ್ದು ಹೋಗಿ ಜೀರೊಂದು ಕಡೆ ಕೂಡುವಳು).

ಗೋ :— ಅತ್ಯು ಸಂಜೀವನಕಾ ಹೀಂಗs ಮಾಡಿಕೋತ ಇರೋಣು! ಇವತ್ತ ಬಕರೀದ ಹಬ್ಬ; ಇದs ಆತ್ಯಂದವಾ! (ಹೋಗಿ ಕುರ್ಚಿಯ ಮೇಲೆ ಕೂಡುವನು) ನಾ ಮನ್ಯಾಗಿರಬೇಕೊ ಬಾನಾವಳಿಗ್ಹೋಗಬೇಕೊ?

ಸು :— ಹೋಗರಿ; ನನ್ನೇನು ಕೇಳ್ತೀರಿ?

ಗೋ :— ನೀ ಅಡಗೀ ಮಾಡೋದಿಲ್ಲ ಹೌದಲ್ಲೊ?

ಸು :— ಇಲ್ಲ, ಮಾಡೋದಿಲ್ಲ!

ಗೋ :— ಮತ್ತ ನೀನು?

ಸು :— ನನ್ನ ಗೊಡವಿ ನಿಮಗ್ಯಾಕ?

ಗೋ :— ಇದು ಎಷ್ಟು ದಿನ ಹೀಂಗ ನಡಿಯೋದು?

ಸು :— (ಉತ್ತರವಿಲ್ಲ).

ಗೋ :— ಅಲ್ಲ, ಈಗ ಅರುವತ್ತು ರೂಪಾಯಿ ಕೊಟ್ಟು ಆ ಬೆಂಡವಾಲೀ ತೊಗೋಬೇಕೂ?

ಸು :— ಹೌದು, ತೊಗೊಂಬೇಕು! ತೊಗೋತೇನಿ ಅಂತ ಹೇಳಿದ್ದಿರಿಲ್ಲೊ?

ಗೋ :— ನೀ ಚಪಾ ಮಾತಬೇಕು ಅಂತ ಹಾಂಗ ಹೇಳಿದ್ದೆ!

ಸು :— ಅಂದರ? ನೀವು ಹೇಳಿದ್ದು ಬರೆ ಅಲ್ಲ ಅನ್ರಿ!

ಗೋ :— ಏನೇ ಅಲ್ಲಾ ಅಂತೇನಲ್ಲ!

ಸು :— ಸುಳ್ಳಲ್ಲ ಅಂತಾನೂ ಅಲ್ಲ! ಹೀಂಗ ಸುಳ್ಳು ಮಾತಾಡಲಿಕ್ಕೆ ಮನಸ್ಸಾರs ಪ್ಯಾಂಗಾಗ್ತುದ ಅಂತೀನ್ಹಾ? ನಮ್ಮ ಜನ್ಮಾನs ನಿಮ್ಮ ಕೈಯಾಗ ಕೊಟ್ಟೀವಿ. ಅಂಥವರಿಗೂ ನೀವ ಸುಳ್ಳಾಡಿ ಮೋಸಾಮಾಡ್ತೀರಿ ಅಂದಮ್ಯಾಲ ಉಳಿದವರ ಪಾಡೇನು?

ಗೋ :— ಮನ್ಯಾಗ ಸುಳ್ಳು ಹೇಳಿದರೂ ನಡೀತದ!

ಸು :— ಸಾಕು, ಮಾತಾಡಲಿಕ್ಕೊಂದು ನೆಟ್ಟಗ ಬರ್ತುದ.

ಗೋ :— ಅನಾತ್ಯ, ಹೀಂಗs ಎಷ್ಟೊತ್ತು ನಡಿಯೋದೂ ಅಂತ? ಜಪಾಗಿಪಾ ಮಾಡ್ತೀಯೊ ಇಲ್ಲೊ? ಏನ್ಹಿಂಗs ಕೂತs ಬಿಡ್ತೀಯೊ?

ಸು :— ನಾ ಏನೂ ಮಾಡೂದಿಲ್ಲ. ನಿಮಗ ಬೇಕಾದರ ಮಾಡಿಕೊಳ್ರಿ! ಪರಿಬ್ರಮ್ಮ ಬಂದರೂ ಈ ಚಾಗಾ ಬಿಟ್ಟು ಏಳೋದಿಲ್ಲ ನಾ ಏನು! (ಒಮ್ಮೆಲೆ ಗಲಿಬಿಲಿಗೊಂಡ ಗೋಪಾಳ ಸ್ವಗತ) ಸ್ವಾತಿ ಬರುತ್ತಾನೆ. ಅವನನ್ನು ನೋಡಿದವಳೆ ಸುಭದ್ರಾ ಒಳಗೆ ಓಡಿ ಹೋಗುತ್ತಾಳೆ. ಗೋಪಾಳ ಆಶ್ಚರ್ಯದೊಡನೆ ಗಣೇಶನನ್ನು ಸ್ವಾಗತಿಸುತ್ತಾನೆ).

ಗೋ :— ಎಲ, ಇದೇನೊ? ಊರಿಂದನs ಬಂದೇನು? ಬತ್ತೀಯಂತ ಕಾಗದಿಲ್ಲ, ಪತ್ರಿಲ್ಲ....

ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

ಆಯುರ್ವೇದೀಯ ಔಷಧಗಳು.

ವೈದ್ಯ ಲೋಂಢೆ ಇವರ ಚಳಿಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮೃತಾಂಶಗುಳಿಗೆ–ಸರ್ವಪ್ರಕಾರದ ಆಮಾಂಶದ ಮೇಲೆ ಗುಣಕಾರಿ.
ಏಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ ಕೆ. ಲೋಂಢೇ ಫಾರ್ಮಸಿ,
ಪನವೇಲ–ಕುಲಾಬಾ

ಗಣೇಶ:— ಈ ಊರಾಗ ಪರಾ ನೋಡೋ ಒಂದು ಕೆಲಸ ಹತ್ತೈದ ನಪುಗ! ಅದಕ್ಕ ಬಂದೆ ಈಗ—ಏಕಾಏಕಿ. ನಿನ್ನ ಮುಖಹಿಂಗ್ಯಾಕಾಗೇದ? ಮತ್ತ ಅತ್ತಿಗ್ಯಾಕ ನನ್ನ ನೋಡಿದಾಕೇ ಒಮ್ಮೆಲೆ ಒಳಗs ಹೋಗಿಬಿಟ್ಲು? ಏನ್ನಡದೂದೇನಿದು? ಹೊಸಾ ಪದ್ಧತಿ ಪಾಕಿಕೊಟ್ಟೀಯೇನು ಮನ್ಯಾಗ?

ಗೋ:— ಎಲ್ಲೀ ಪದ್ಧತಿ! ಹಾಂಗೇನೂ ಇಲ್ಲ. ಕೂಡಲ್ಲಾ! ಎಲ್ಲಾರೂ ನೆಟ್ಟಗಿದ್ದಾರs? ಮತ್ತೇನು ಸುದ್ದಿ? ಯಾವಾಗ ಹೊರಟಿದ್ದಿ?

ಗ:— ನಿನ್ನೆ ರಾತ್ರೀ ಗಾಡಿಗೆ! ಹುಡುಗರೆಲ್ಲವ ನಿನ್ನವ್ವ?

ಗೋ:— ಈಕೀ ತಂಗೀ ಕಡಿಗೆ ಹೋಗ್ಯಾವ, ನಾಲ್ಕು ದಿವಸ.

ಗ:— ಹಂಗಾರ ರಾಜಾರಾಣಿ ಇಬ್ಬರs ಅನ್ನು ಪುನ್ಯಾಗೀಗ! ನಿನ್ನ ಕಜೇರಿ ಎಷ್ಟೊತ್ತಿಗೆ?

ಗೋ:— ಇವತ್ತ ಕಜೇರಿಗೆ ರಜಾ.

ಗ:— ಛೆಲೊ ಆತ್ಯಾ. (ಬಾಗಿಲ ಕಡೆಗೆ ಹೋಗಿ) ಅತ್ತಿಗಿ, ಅತ್ತಿಗಿ? ಎಲ್ಲಿ ಸುಳವs ಇಲ್ಲಲ್ಲೊ? (ಒಳಗೆ ಹೋಗಿ ನೋಡಿ ಬರುತ್ತಾನೆ.) ಎಲ್ಲೆ? ಇಷ್ಟರಾಗs ಅದೃಶ್ಯಳಾಗ್ಯಾಳಲ್ಲ? ನಾ ಬಂದರ ಎಷ್ಟು ಪ್ರೀತಿಯಿಂದ ಮೊದಲ ಮಾತಾಡಸೋ ಆಕಿ! ಅಂ, ಏನದs ಏನಿದು?

ಗೋ:— ಏನಿಲ್ಲೇಳೊ! ನೀ ಅರಿವಿ ಗಿರಿವಿ ತಗಿ, ಕೂಡಲ್ಲ.

ಗ:— ನನಗೀಗ ಚಹಾ ಬೇಕಪಾ!

ಗೋ:— (ಅನುಮಾನಿಸಿ) ಚಹಾನs? ಮಾ.....ಮಾಡ-ಸೋಣಲ್ಲ! ಇಲ್ಲದಿದ್ದರ ಹೊರಗs ಹೋಗೋಣೇನು? ಸೂಟಿ ಅದs; ಅಡ್ಯಾಡಿ ಬಂಧಾಂಗಾತು!

ಗ:— ಮಾಹಾರಾಯಾ, ಇದs ಬಂದೀನ್ನಾ. ಚಹಾ ತೊಗೊಂಡs ಹೊರಬೀಳೋಣಂತೀನಿ!

ಗೋ:— ಏಂಗs? ಮುಂಜಾನೆ ಈಗ ಎರಡುಸಾರೆ ಚಹಾ ಆಗ್ಯಾ. ಹಾಲು ಅವsನೊ ಇಲ್ಲೊ ಅನುಮಾನ!

ಗ:— ಅತ್ತಿಗೆಲ್ಲಾ ಮಾಡಿಕೊಡ್ತಾಳ! ನಾನs ಹೇಳಿ ಬರ್ತೀನಿ ನಿಂದ್ರು ಅತ್ತಿಗೀಗೆ—ಚಹಾ ಮಾಡು ಅಂತ! ಹಾಂಗs ಮಾತಾಡಿಸಿಧಾಂಗೂ ಆತ್ಯು!

ಗೋ:— ನೀ ಕೂಡೊ, ನಾ ಎಲ್ಲಾ ಹೇಳ್ತೀನಿ. (ಒಳಗೆ ಹೋಗಿ ಬಂದು) ಏನಏ ಹಾಲು ತೀರ್ಯಾವಂತಪಾ! ಏನು ಮಾಡೋಣು?

ಗ:— ಯಾರು ಅತ್ತಿಗೀನs ಹೇಳಿದ್ಲೇನು?

ಗೋ:— ಹುಂ, ಮತ್ಯಾರು ಹೇಳವರು?

ಸು:— (ಒಳಗಿನಿಂದಲೆ) ಸುಳ್ಳಾಡಬ್ಯಾಡ್ರಿ! ನಾ ಎಲ್ಲಿ ಹಾಂಗ ಹೇಳೀನಿ?

ಗ:— (ಬಾಗಿಲಿನ ಬಳಿ ನಿಂತು) ಅತ್ತಿಗಿ, ಅತ್ತಿಗಿ (ಉತ್ತರವಿಲ್ಲ-ದಾಗಲು) ಇದೇನ್ನಡದುದಪಾ? ನಮಗೂ ತುಸು ತಿಳೀಲೆಲ್ಲಾ! ಖರೇ ಹೇಳು, ಜಗಳಾಡೀರೇನು? ಹಾಂಗs ಕಾಣಿಸ್ತsದ ಲಕ್ಷಣ! ಗೊತ್ತು ನನಗ, ಏನಾರ ಅಂದಿದ್ದೀ ಅಥವಾ ಸುಳ್ಳs ಏನಾದರೂ ಮಾತ್ತೀನಿ ಅಂಬೋದು, ಅದನ್ನ ಮಾಡಲಿಕ್ಕಿಲ್ಲ! ಇದs ಆತು ನಿನ್ನ ಬಾಳು! ಅಲ್ಲ, ಇಂದ ಯಾತಕ್ಕಾಗಿ ಬಂದsದ ಜಗಳ?

ಗೋ:— ಜಗಳ್ಯಾತರದು! ಮುಂಚಾನೆ ಒಬ್ಬ ಮುತ್ತು ಮಾರಾಂವ ಬೆಂಡವಾಲೀ ತಂದಿದ್ದನs. ಹೋದವರ್ಷಾನs ಈಕಿ ಅಂವಗ ಆರ್ಡರ್ ಕೊಟ್ಟು ಇಟ್ಟಿದ್ಲಂತ. ಅವನ್ನ ನಾ ತೊಗೋ-ಗೊಡಿಸಲಿಲ್ಲಾ ಅಂತ ಈಗ ಸಿಟ್ಟು ಬಂದsದ! ಏನು ಹೇಳಬೇಕು?

ಗ:— ನನಗ ಗೊತ್ತೋ ನಿನ್ನ ಹಣೇಬಾರ! ಕಿಮ್ಮತ್ತಿಷ್ಟು ಅದಕ್ಕs?

ಗೋ:— ಆರುವತ್ತು ರೂಪಾಯಿಗೆ ಕೊಡಲಿಕ್ಕೆ ತಯಾರಾ-ಗಿದ್ದ. ಏನಾಕಾರಣಪಾ! ಅದರಾಗ ಕಲ್ಟರ್ ಮುತ್ತಿನ್ಯಾಗ ದುಡ್ಡು ಹಾಕೋದಂದ್ರು ತಿಪ್ಪ್ಯಾಗ ಒಗದಾಂಗs ನೋಡು! ತೊಗೊಂಬೋಣು ಅಂತ ಈಕಿ, ಬ್ಯಾಡಾ ಅಂತ ನಾನು. ಆ ಮುತ್ತಿನವನೆದುರಿಗೆ ತನ್ನ ಅಲ್ಲಗಳೆದು ಮಾತಾಡಿದ್ದೇ ಅಂತ, ಈಗ ಸಿಟ್ಟಾಗಿ ಕೂತಾಳ!

ಗ:— ಅಲ್ಲೊ, ಹೆಣ್ತೀ ಸಲುವಾಗಿ ಆರುವತ್ತು ರೂಪಾಯಿ ಸಹಿತ ಖರ್ಚು ಮಾಡಲಿಕ್ಕೆ ತಯಾರಿಲ್ಲಲ್ಲs ನೀನು? ಇಡೀ ಜನ್ಮಾ ನಿನಗಾಗಿ ಮೀಸಲಿಟ್ಟಾಳ! ಅದರಾಗ ನಿನ್ನ ಅದೃಷ್ಟ ಬಳ್ಳೇದಂತs ಅತ್ತಿಗೀ ಅಂಥಾಕಿ ನಿನಗ ಹೆಣ್ತಿ ಸಿಕ್ಕಾಳ. ಕಾಲ ಬದಲಾಗ್ಯಾವೀಗ! ಈಗಿನ ಹೆಂಗಸರಲ್ಲಿ ಸ್ವಲ್ಪ ಸ್ವಾಭಿಮಾನ ಹೆಚ್ಚಿರ್ತsದ! ಮಂದಿಇದ್ದಾಗ ಅವರ್ನ ಕೆಣಕೋದು ತಪ್ಪಾಗ್ತsದ! ನೀನಿನ್ನೂ ಮಾಜೀಕಾಲದ ಗಂಡ ಮಾಡಿಧಾಂಗ ಮಾಡಿದರ ಹ್ಯಾಂಗ್ ನಡದೀತೂ? ಹೆಣ್ತೀನ್ನ ಆಳೋ ಪದಾ ಸ್ವಲ್ಪ ಕಲೀ-ಬೇಕು ನೀ! ಅವರು ಕೇಳೋದು ಬಹಳಿರೋದಿಲ್ಲೋ ಹಾಂಗs! ನಾವು ನಮಗಾಗಿ ಎಷ್ಟೆಷ್ಟು ಖರ್ಚು ಮಾಡ್ತೀವಿ? ಒಂದು ಸಿಗರೇಟು, ಚಹಾ, ಸಿನೇಮಾದ ಲೆಕ್ಕಾ ಹಾಕಿದರsನs ವರ್ಷಕ್ಕ ಏನೂರು ರೂಪಾಯಿsಆಗ್ತಿದ್ದೀತಪಾ! ಹೆಣ್ತೀಗಾಗಿ—ಆರು-

ವತ್ತು ರೂಪಾಯಿಗೆ ಹಿಂದುಮುಂದು ನೋಡ್ತೀ! ಈಗ ಬೆಂಡವಾಲಿ ತೊಗೊಂಡೀ ಅಂದರ, ಇನ್ನ ಆರೆಂಟು ವರ್ಷ ಏನೂ ಕೇಳೋದಿಲ್ಲ ಅತ್ತಿಗಿ! ಇವ್ವಾಗಿ ನಿನಗೇನು ಧಾಡಿ ಆಗೇದ? ಪಗಾರಲ್ಲದಽ ಮ್ಯಾಲ ಈ ಕಾಲದಾಗ 'ಗೋಪಾಳ' ಬೇಕಾದಷ್ಟು ಬರ್ತದಪಾ!

ಗೋ :— ನೀನೂ ಆಕೀ ವಕೀಲಿ ತೊಗೊಂಡು ಮಾತಾಡಿದಿ ಅಂದ್ರು ಮುಗದಽ ಹೋತಲ್ಲ! ನೀ ಏನಽ ಹೇಳು, ಆ ಕಲ್ಚರ್ ಮುತ್ತಿನ್ಯಾಗ ದುಡ್ಡು ಪಾಕೋದು ನನಗೇನೂ ಮನಸಿಲ್ಲ ನೋಡಪಾ!

ಗ :— ಖರೇ ಮುತ್ತಿನ್ಯಾಗರ ನಿನಗ ಪ್ರೀತಿ ಅದ ಏನು?

ಗೋ :— ಅದು ಯಾರಿಗಿರಲಕ್ಕಿಲ್ಲ?

ಗ :— ಮುಗನಽ! ಇರಲಿ, ಇನ್ನ ನಿಮ್ಮ ಜಗಳ ರಾಜೀಯಾಗೋಧ್ಯಾಂಗಲಾ?

ಗೋ :— ಆಗದಿದ್ದರ ಹೋಗಲಿ!

ಗ :— ನಿನ್ನಂಥಾ ಮನುಷ್ಯನ್ನಽ ನಾ ಎಲ್ಲೂ ನೋಡಿಲ್ಲ ನೋಡು! ನೀನೂ ಮಹಾ ಜಿಬಟಪಾ!

ಗೋ :— ಹಾಂಗಂತಽ ಈಕೀ ಧಕ್ಕಡಿಗೆ ತಡಕೊಂಡೀನಿ ಮಾರಾಯಾ! ಮೆತ್ತನ ಗಂಡಾಗಿದ್ದರ ಕವಸೀನಽ ಹಾಕಸ್ತಿದ್ಲು!

ಗ :— ಅಂತೂ ನೀಯೇನೂ ಬೆಂಡವಾಲಿ ಕೊಡಸಾಂವಲ್ಲನ್ನು!

ಗೋ :— ಹೋಗಲಿ ಬಿಡೋ! ಎಲ್ಲೀ ಬೆಂಡವಾಲಿ ಹಚ್ಚೀ! ನಾ ಕೊಡಸೋದಿಲ್ಲ ಮಾರಾಯಾ!

ಗ :— ಮುಂದ? (ತುಸು ಯೋಚನೆ ಮಾಡಿ) ಇದು ನೋಡು.... ನಾ ಈಗೊಂದು ತಾರ ಮಾಡಿ ಬರಬೇಕಾಗೇದ. ಹತ್ತು ಮಿನಿಟಿನ್ಯಾಗ ಬರ್ತೀನಿ; ಏನು?

ಗೋ :— ಆ ಮ್ಯಾಲ ಹೋಗೋಣಲ್ಲಾ!

ಗ :— ಇಲ್ಲಿಲ್ಲ, ನಾ ಈಗ ಬರ್ತೀನಿ. (ಹೋಗುವನು.)

ಗೋ :— (ಸ್ವಗತ) ಗಣೇಶ ಬರೋದರಾಗಽ ಈಕೀ ಸಿಟ್ಟು ಇಳೀದಿದ್ದರ ನಮ್ಮ ಫಜೀತೀನಽ ಆದ! (ಎದ್ದು) ಈಕ್ಯಂತೂ ಒಳಗಽ ಕೂತುಬಿಟ್ಟಾಳ. ಕರದು ಒಂದಿಷ್ಟು ತಿದ್ದಿಕೀರತಿದ್ದೋಣು! ಹಾದಿಗೆ ಬಂದಾಳಂಬೊ ಆಶಾ ಇಲ್ಲ! ಪ್ರಯತ್ನ ಮಾಡೋದೂ ಅತ್ಯು! (ಒಳಗೆ ಹೋಗುವನು. ಒಂದೆರಡು ನಿಮಿಷದ ತರುವಾಯ ಹೊರಗೆ ಬರುವನು.) ಹೊರಗ ಬಂದಽಕ ಬರಲಾರದಽ? (ಸುಭದ್ರಾ ಹೊರಗೆ ಬರುವಳು).

ಗೋ :— ಆ ಮುತ್ತಿನವನೆದುರಿಗೆ ನಮ್ಮ ಮಂಗಳಾರತಿ ಆತ್ಯು. ಇನ್ನ ಗೆಳೆಯರೆದುರಿಗಿಷ್ಟು ನಮ್ಮ ಫಜೀತೀ ಮಾಡಿ ಬಿಡು ಅಂದ್ರು ಕೆಲಸಾನಽ ಬಗೀ ಹರೀತು! ಗಣೇಶ ಬಂದಾನ, ಗೊತ್ತದಽನೊ ಇಲ್ಲೊ?

ಸು :— (ಗೋಡೆಗೆ ಆತುಕೊಂಡು ನಿಂತು) ಗೊ ತ್ತು ಮಾ ಡಿ ಕೊಂಡು ನಾ ಏನ್ ಮಾಡೋದದಽ!

ಗೋ :— ಅಂದರ?

ಸು :— (ವಸಕ್ಕನೆ) ಅಂದರ? ನಾ ಏನ್ ಮಾಡಬೇಕು?

ಗೋ :— (ದರ್ಪದ ಧನಿಯಿಂದ) ಈಗ ಅಂವಗ ಚಹಾ ಬೇಕು, ಆಮ್ಯಾಲ ಊಟಿಗಿ ಆಗಬೇಕು!

ಸು :— ಇದೇನು ಖಾನಾವಳಿ ಅಲ್ಲ, ಆರ್ಡರ್ ಕೊಡಲಿಕ್ಕೆ!

ಗೋ :— ನೀ ಹೀಂಗ ಅಷ್ಟೆಲ್ಲ ಮಾತಾಡಬ್ಯಾಡಾ—ತಲಿ ಕೆಟ್ಟಿತೂ ಅಂದರ ಮನಶಾ ಅಲ್ಲ ನಾ!

ಸು :— ಇನ್ನೂ ಸಂಶಯ ಅದಽ ಏನದರಾಗ?

ಗೋ :— ಅಲ್ಲ, ಇಷ್ಟು ಪಂಡಿತನ ಯಾಕ ಬಂತು ನಿನಗ?

ಸು :— (ಅಣಕಿಸಿ) ಇಷ್ಟು ಮಂಡಚತನ ಯಾಕ ಬಂತು ನಿಮಗ? 'ಜೀವಾ ಪೊತ್ತೀ ಇಟ್ಟಾದರೂ ತಂದು ಕೊಡ್ತೀನಿ ರೂಪಾಯಿ,' ಎಲ್ಲಿ ಹೋದವ್ವಽ ಮಾತು? ಇಂಥಾ ರಾಜ್ಯ— ಅದನ್ನ ಸಹಿತ ದಾನಾಮಾಡಿದ ಹರಿಶ್ಚಂದ್ರ- ಕೊಟ್ಟ ವಚನಾ ತಪ್ಪಬಾರದು ಅಂತ! ನಿಮ್ಮ ಮಾರಗೊಂಡು ಬೆಂಡವಾಲೀ ಕೊಡಸೋದಾಗಪ್ಪೊಲ್ಲದು! ಅದೂ ಮಾಡಿಕೊಂಡ ಹೇಣ್ತಿಗೆ! ದೇಶಕ್ಕಾಗಿ ಪ್ರಾಣಾ ಕೊಡೋದು ಬಂದರ ಎಲ್ಲ ಹೋಗಿ ಮುಖಾ ಅಡಗಸ್ತೀರೋ ಏನೊ! ನಮ್ಮ ಹೆಂಗಸರಿಗೇ ಬುದ್ಧಿ ಕಡಿಮಿ! ನಿಮ್ಮನ್ನ.....

ಗೋ :— (ನಮಲದೇ) ಇದು ನೋಡು, ಇಂಥಾ ಲೆಕ್ಚರ್ ಹೊಡೀಲಿಕ್ಕೆ ನನಗೂ ಬರ್ತದ! ಈಗ ಇವೆಲ್ಲಾ ಮಾತಿರಲಿ. ಗಣೇಶ ಈಗ ಬರ್ತಾನ ಅಂವ ಇರೋ ತನಕಾ ಅದರೂ ಈ ಸಿಟ್ಟು ಎಲ್ಲಽರ ಬ್ಯಾದೇ ತಗದಿಡು! ಇಲ್ಲಿದ್ದರ ನನ್ನ ಹತ್ತರ ಕೊಟ್ಟಿರು! ಅಂವ ಟಾಂಗಾ ಹತ್ತಿದಾ ಅಂದರ, ಮತ್ತ ನಿನ್ನ ಸ್ವಾಧೀನ ಮಾಡ್ತೀನದನ್ನ!

ಒಡೆದ ಕನ್ನಡಿ

(೧೧ ಹಡಬಿಗಳ ಸಂಕಲನ)

ಇದೀಗ ಪ್ರಕಟವಾಗಿದೆ.

ಲೇಖಕರು : ಎನ್. ಎಫ್. ಗದಗಕರ ಬಿ.ಎ.

'ಶ್ರೀರಂಗ'ರು ಮುನ್ನುಡಿ ಬರೆದಿದ್ದಾರೆ.

ಬೆಲೆ ೦-೧೨-೦.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

ವಿಶ್ವಸಾಹಿತ್ಯಮಾಲೆ ಕುಸುಮ ೧.

ಎಚ್ಚತ್ತ ಆಗ್ನೇಯ ಏಶಿಯ

★

ಇಂಡೋನೇಶಿಯ—ಇಂಡೋಚೀನಗಳ ಕ್ರಾಂತಿ; ಬರ್ಮಾ, ಮಲಯಾ, ಸಯಾಂಗಳ ಸ್ವಾತಂತ್ರ್ಯ ಸಂಗ್ರಾಮ
ನಕ್ಷೆಗಳು ಸಹಿತ.

ಲೇಖಕರು: – ಶ್ರೀ. ಎಂ. ಪರಿದಾಸ (ದ್ವಿತೀಯ
ಮಹಾಯುದ್ಧ, ಉಕ್ಕಿನ ಮನುಷ್ಯ
ಗ್ರಂಥಗಳನ್ನು ಬರೆದವರು.)

ಬೆಲೆ ರೂ. ೧-೮-೦ (ವ್ಯಾಪಾರಿಗಳಿಗೆ ಧಾರಾಳ ಕಮಿಶನ್)

ಮಾರಾಟಗಾರರು:—
ರಾಮ್ ಬ್ರದರ್ಸ್, ಗದಗ

ಸು:— ಉಂ, ಆದಿನ್ನ ನನ್ನ ಬಿಟ್ಟು ಹೋಗೋ ಪ್ರಾಂಗಣ ಇಲ್ಲ. ಅಲ್ಲಾ, ನಿಮ್ಮಿದ್ದೇನು ಜುಲುಮೇನು? ಇವತ್ತ ನನ್ನ ಕಡಿಂದಕ ಏನೂ ಮಾಡೋದಾಗೋದಿಲ್ಲ! ನೀವ್ರ ರಜಾ ಒರದು ಮನ್ಯಾಗ ಕೂತ್ತೀರಲ್ಲ! ನಾವ್ಯಾರ ಮಾಡಜಾರಧಾಂಗ? ಇನ್ನೆಂಟು ದಿವಸ ನನ್ನಕಡಿಂದ ಯಾವ ಕೆಲಸಾನೂ ಆಗೋದಿಲ್ಲ!

ಗೋ:— ಈಗ ಬೆಂಡವಾಲಿ ತಂದುಕೊಟ್ಟರ?

ಗ:— (ಪ್ರಪೇಶಿಸಿ) ಕೊಟ್ಟಕ ಬಿಡೋ ಹೊಗಲ್! ಸುಳಪ್ಯಾ ನಾಚಕೊಂಡು ಪುನಃ ಒಳಗೆ ಓಡಿಹೋಗುವಳು. ಗಣೇಶ ಒಳಗೆ ಹಣಕಿಕ್ಕಿ ಇದು ನೋಡು ಗೋಪ್ಯಾ, ನಾ ಯೋದದ್ದು ತಾರ ಕೊಡಲಿಕ್ಕೆ ಅಲ್ಲ, ಈ ಬೆಂಡವಾಲೀ ತರಲಿಕ್ಕೆ! ನಾ ನಾಲ್ಕು ಹೆಜ್ಜಿ ಹೋಗೋದರಾಗs ಆ ನಿನ್ನ ಮುತ್ತಿಫನನs ಪತ್ತರದ ಮನೆಯಿಂದ ಹೊರಬಿದ್ದ. ಅನಾಯಾಸs ಕೆಲಸಾತ್ಯು, ಅರುವತ್ತು ರೂಪಾಯಕ್ಕ ಬೆಂಡವಾಲೀ ತಂದಕಬಿಟ್ಟಿ. ಈ ರೂಪಾಯಿ ನನಗ ನೀನು ಕೊಟ್ಟರ ಕೊಡು, ಬಿಟ್ಟರ ಬಿಡು! ಇವನ್ನ ನೀ ತಂದದ್ದೂ ವಂತs ಹೇಳ್ತಿನ್ನಾ ಅತ್ತಿಗೀ ಮುಂದ; ತಿಳೀತಿಲ್ಲೊ! ನಾ ತಂದದ್ದೂ ವಂದ್ರು ಅತ್ತಿಗಿ ಅವನ್ನ ಮುಟ್ಟಲಕ್ಕೇ ಇಲ್ಲ!

ಗೋ:— ಪಾಪವಾ! ನಿನ್ನ ಒಳೀ ಪೇಚಿನ್ಯಾಗs ಹಾಕಿದೆಲ್ಲಾ ಅಂತ! ನಿನ್ನ ಮಾತೀನು ನಡಧಾಂಗಾತು!

ಗ:—ನಿನ್ನ ಮಾತಿಗೆ ಬೆಂಕೀ ಹಚ್ಚಿ ಶು! ಮಗನs, ಸಂಸಾರದಾಗ ಹೆಣ್ತಿ ಪತ್ತುಸಾರೆ ಸೋತರ, ಗಂಡ ಒಮ್ಮೆಯಾದರೂ ಸೋಲಬೇಕಾಗ್ತುದ! ನಿನಗ್ಗೊತ್ತು— ಅರುವತ್ತು ರೂಪಾಯಿ ಹೋಗತ್ತಾವಲ್ಲಾ ಅಂತ ನಿನ್ನ ಮನಸಿಗೆ ಹತ್ತ್ಯಾದ! ನನಗ ನೀ ಕೊಡಬ್ಯಾಡ ಮಾರಾಯಾ! ಅತ್ತಿಗ್ಗೆ ಕೊಟ್ಟರ ನಾ ಏನೂ ಬಡವಾಗೋದಿಲ್ಲ. ಅದಕ್ಕ ಹಿಂಗ್ ಮಾಡೋಣು:— ನಾ ನಿನಗ 'ಗೋಪಾಳಾ' ಅಂತ ಇವನ್ನ ಕೊಡ್ತೀನಿ; ನೀ ನಿನ್ನ ಹೆಣ್ತಿಗೆ ಕಾಣಿಕೀ ಅಂತ ಕೊಟ್ಟು ಬಿಡು! ಅತ್ಯೇ! ಇನ್ನ ಇದರ ಬಗ್ಗೆ ವಿಚಾರ ಮಾಡೋದು ಬ್ಯಾಡಾ! ನಾ ಅತ್ತಿಗಿನ್ನ ಕರದು, ಏನು ಹೇಳಬೇಕೋ ಅದನ್ನ ಹೇಳಿ ಎಲ್ಲಾ ಸರಿಮಾಡ್ತೀನಿ! ನೀ ಸುಮ್ಮನಿರು! (ಬೆಂಡವಾಲಿಯನ್ನು ಮೇಜಿನ ಖಾನೆಯಲ್ಲಿಟ್ಟು ಒಳಗೆ ಹೋಗಿ ಸುಳಪ್ರೆಯನ್ನು ಕರೆದುತ್ತಾನೆ) ಅತ್ತಿಗಿ, ಇಂದ ಗೋಪ್ಯಾ ನಿನ್ನ ಸಿಟ್ಟಿಗೆನ್ಸಿಸಬೇಕಂತs ಇದೆಲ್ಲಾ ನಾಟಕಾ ಮಾಡ್ಯಾನ ನೋಡು! ನಿನಗ ತಿಳೀಧಾಂಗ ಹೋಗಿ, ಈಗ ಬೆಂಡವಾಲಿ ತೊಗೊಂಡು ಬಂದಾನ! ನಾ ಬರದಿದ್ದರ ನಿನ್ನ ಹೀಂಗs ಕಾಡ್ತಿದ್ದ ಲುಚ್ಚಾ! ಇಗಾ (ಖಾನೆಯಿಂದ ಅವನ್ನು ತಂದು ಸುಳಪ್ರೆಯ ಕೈಯಲ್ಲಿ ಕೊಡುವನು. ಆವಳು ಅದನ್ನು ತಕ್ಕೊಂಡು, ಪಸನ್ನಮಿಯಾಗಿ ಒಳಗೆ ಹೋಗಿಬಿಡುವಳು).

ಗೋ:— ಇನ್ನ ಎಲ್ಲಾ ಸರಬರಾಯಿ ಆಗ್ತುದs ನಡಿ!

(ಇಬ್ಬರೂ ನಗುತ್ತ ಒಳಗೆ ಹೋಗುವರು).

[ತೆರೆ

ನಮ್ಮ ಏಜಂಟರಲ್ಲಿ ಬಿನ್ನಪ

ಕಾಗದ ಇನ್ನೂ ಸಾಕಷ್ಟು ಸಿಕ್ಕುತ್ತಿಲ್ಲವಾದುದರಿಂದ ಪ್ರತಿಗಳನ್ನು ನಿಯಮಿತ ಸಂಖ್ಯೆಯಲ್ಲಿ ಜೋರಡಿಸಲಾಗುತ್ತದೆ. ಆದುದರಿಂದ ತಮಗೆಷ್ಟು ಪ್ರತಿ ಬೇಕೆಂಬುದರ ನಿಂತಿತ ಸಂಖ್ಯೆಯನ್ನು ಪ್ರತಿತಿಂಗಳ ೧೫ನೆಯ ತಾರೀಖಿನ ಒಳಗಾಗಿಯೇ ಕಾರ್ಯಾಲಯಕ್ಕೆ ತಿಳಿಸಬೇಕು. ನಮ್ಮ ಕಾರ್ಯಾಲಯದ ಪತ್ರದ ದಾರಿಯನ್ನು ನೋಡಿದೆ, ಎಲ್ಲರೂ ಸರಿಯಾದ ಸಮಯಕ್ಕೆ ಹಣ ಕಳುಹಬೇಕು. ಮಾರಪಿ ಉಳಿದ ಸಂಚಿಕೆಗಳನ್ನು ಮರಳಿ ತೆಗೆದುಕೊಳ್ಳುವುದಿಲ್ಲವಾದುದರಿಂದ ಅದಕ್ಕಾಗಿ ಪತ್ರವ್ಯವಹಾರ ಮಾಡಬಾರದು.

—ವ್ಯ. ಜ.

ಸ್ವಾತಂತ್ರ್ಯಸ್ವರೂಪ ದರ್ಶನ

(ವಿಚಾರ ಪ್ರಚೋದಕ ಪ್ರಬಂಧ)

ಶ್ರೀ. ಜಿ. ಎನ್. ಸಭಾಹಿತ ಬಿ. ಎ. (ಆನರ್ಸ್) ಪುಣೆ.

ಇಂದು 'ಸ್ವಾತಂತ್ರ್ಯ' 'ಸ್ವಾತಂತ್ರ್ಯ' ಎಂದು ಎಲ್ಲೆಲ್ಲಿಯೂ ಕೂಗೆದ್ದಿದೆ. ಆದರೆ 'ಸ್ವಾತಂತ್ರ್ಯ'ವೂ ಕೆಲವೊಂದು ನಿಯಮಗಳಿಗೆ ಒಳಗಾಗಿಯೆ ತೀರಬೇಕಾಗುವುದೆಂಬುದನ್ನು ಬಹುಜನರು ಅರಿತಂತಿಲ್ಲ.

"ನಿನ್ನ ಪ್ರೇಮಕ್ಕೆ ಪಾತ್ರನಾಗಲು ಸಪ್ತಸಮುದ್ರಗಳನ್ನಾದರೂ ತಾರಿಸುವೆನು; ಕೋಟೆಯ ಎತ್ತರವಾದ ಗೋಡೆಯಿಂದಾದರೂ ಜಿಗಿಯುವೆನು; ಉರಿಯುವ ಜ್ವಾಲೆಯಲ್ಲಾದರೂ ಜಾರುವೆನು; ಹರಿಯುವ ಹಳ್ಳವನ್ನಾದರೂ ಹಾಯುವೆನು. ಹೆಚ್ಚೇನು, ಭೂಮ್ಯಾಕಾಶಗಳನ್ನೇ ಒಂದು ಮಾಡುವೆನು....."

ಯಾವನದ ಅದ್ಭುತರಮ್ಯತೆಯ ಹೊಸ್ತಿಲಮೇಲೆ ಕಾಲಿಟ್ಟ ಪ್ರೇಮಿಯೊಬ್ಬ ತನ್ನ ಪ್ರಿಯತಮೆಯಮುಂದೆ 'ಕೊಚ್ಚುತ್ತಿದ್ದ'! ಆದರೆ ಹೊತ್ತು ಮಾತ್ರ ಯಾವ ಹರಟೆಗೂ ಎಡೆಕೊಡದೆ, ತನ್ನ ಕರ್ತವ್ಯವನ್ನು ಸಾಂಗವಾಗಿ ಸಾಗಿಸುತ್ತಿದ್ದುದರಿಂದ, ಸಂಜೆ ಸಮೀಪಿಸಿತು.

"ಇನ್ನು ಹೊರಡಲೇ?" ಪ್ರಿಯಕರನೆಂದ. "ನಾಳೆ ನಸುಕಿನಲ್ಲೇ ಮರಳಬಹುದಲ್ಲವೆ?" ಪ್ರಿಯತಮೆ ಪೂರ್ಸುಡಿದಳು.

ಯುವಕ ಇನ್ನೂ ಮನೋರಾಜ್ಯದಲ್ಲಿಯೆ ರಮಿಸುತ್ತಿದ್ದ; ಸತ್ಯತೆಯನ್ನು ಮರೆತಿದ್ದ. ಆದರೆ 'ಮುಂಚಾನೆ ಬರುವೆಯಾ?' ಎಂಬ ಸಣ್ಣ ಪ್ರಶ್ನೆ ಕೂಡ ಅವನನ್ನು ವಾಸ್ತವಿಕ ಜಗತ್ತಿಗೆ ಇಳಿಸಿತು. ಏಕೆಂದರೆ ಅದು ಮಳೆಗಾಲವಿತ್ತು. ಅವನ ಮನೆ ಮೈಲೆರಡು ಮೈಲು ದೂರ. ಮಳೆ ಜೋರಾಯಿತೆಂದರೆ ಬಟ್ಟೆ ತೋಯಿಸಿಕೊಳ್ಳದೆ ಬರಲು ಸಾಧ್ಯವಿಲ್ಲ. 'ಸಪ್ತ ಸಮುದ್ರಗಳನ್ನಾದರೂ ದಾಂಟುವ....ಭೂಮ್ಯಾಕಾಶಗಳನ್ನೇ ಒಂದು ಮಾಡುವ' ವೀರನಿಗೆ, ಒಂದೆರಡು ಮೈಲು ಮಳೆಯಲ್ಲಿ ತೋಯಿಸಿಕೊಂಡು ಬರುವ ಚಿತ್ರ ಮನದ ಮುಂದೆ ಬಂದೊಡನೆಯೆ, ಉನ್ನತ ಆಕಾಶದಲ್ಲಿ ಒಯ್ದು ಆಲೆಯಿಸುವ ಅವನ ಕಲ್ಪನೆಯ ರೆಕ್ಕೆಗಳು ಮುದುಡಿಕೊಂಡುವು. 'ಕ್ಷಮಿಸು, ಮಳೆ ಜೋರಾದರೆ ನಾಳೆಯ ನಸುಕಿನಲ್ಲಿ ನನ್ನನ್ನು ನಿರೀಕ್ಷಿಸಬೇಡ' ಎಂದು ನುಡಿದು ಉತ್ತರಕುಮಾರ ಹೊರಟುಬಿಟ್ಟ.

ಇಂದಿನ ಹಿಂದುಸ್ತಾನದ ಯುವಕರ ಸ್ಥಿತಿ ಬಹುಮಟ್ಟಿಗೆ ಇದೇ ರೀತಿಯಾಗಿದೆ. ಯೌವನದ ಮಬ್ಬು ತಲೆಗೇರಿದಾಗ, ವಿಶ್ವವಿದ್ಯಾನಿಲಯದ ಹೊಸ್ತಿಲನ್ನು ಅದೇ ಆಗ ದಾಟುವಾಗ, ಸ್ವಾತಂತ್ರ್ಯದ ಸವಿಗನಸುಗಳ ಮುಂದಿಗೆ ತಿನ್ನುವದು ಅವರಿಗೆ ಸಹಜ. ಅವರು ವಿಜೃಂಭಿಸುವದು ಇನ್ನೂ ಕಲ್ಪನೆಯ ಜಗತ್ತಿನಲ್ಲಿ. ಆಗ ಅವರು 'ಭೂಮಾತೆಯ, ನಿನ್ನ ದಾಸ್ಯವಿಮೋಚನೆ ಮಾಡಲು ನಾವು ಹಸಿರಕ್ತವಿರುವವರೆಗೂ ಹೋರಾಡದೆ ಬಿಡೆವು....' ಎಂದು ಮುಂತಾಗಿ ನಿರ್ಧಾರ ಕೈಕೊಳ್ಳುವದು ಸಾಮಾನ್ಯ ಸಂಗತಿ. ಆದರೆ ವಾಸ್ತವತೆಯ ಧುರ್ಭವ ಜಗಲ ತೊಡಗಿತೆಂದರೆ, ಅವರ ಭಾವನೆಯ ಮಂಜುಗೋಪುರ ಕರಗಿ ಹೋಗುವುದೂ ಅಷ್ಟೇ ಸಾಮಾನ್ಯ ಸಂಗತಿ. "ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು?" ಎಂಬ ಮಾತೆಯ ರಣದ ಕರೆಗೆ ಮನ್ನಣೆಯಿತ್ತು ಮುಂಬರುವ ಕೆಚ್ಚೆದೆಯ ತರುಣರು ಅದೆಷ್ಟು ಮಂದಿ?

'ನಮ್ಮ ನಾಡು' ಎಂಬ ಅಭಿಮಾನ ಪ್ರತಿ ಭಾರತೀಯನಲ್ಲೂ ಇದ್ದೇ ಇರುವುದು. ಅಯುಷ್ಯದ ಒಂದಿಲ್ಲೊಂದು ಸಮಿಷದಲ್ಲಿ ಪ್ರತಿಯೊಬ್ಬ ಹಿಂದೀಯನ ಅಂತರಾಳದಲ್ಲಿಯೂ ಪವಿತ್ರ ಭಾವನೆಯೊಂದು ಸುಳಿಯಬಹುದು: 'ಜನ್ಮದಾತೆಯ ಋಣ ತೀರಿಸಲು, ಆಕೆಯ ಒಂದಿಷ್ಟೋಣೆ ಮಾಡಲು, ನಾನು ನನ್ನ ನಾವಿ-ನಾಟಗಳಲ್ಲಿ ಧುಮುಧುಮಿಸುವ ಜನ-ಹಸಿ ರಕ್ತ ನನ್ನೂ ಹರಿಸದೆ ಬಿಡೆನು—' ಎಂದು. ಇದು ನಿಜವು! ಆದರೆ ಈ ಅಭಿಮಾನ ಒಂದೇ ಕ್ಷಣಿಕವಾದರೆ, ಅಥವಾ ಬರೇ ಭಾವನಾವೇಶದ ಫಲವಾದರೆ ಯಾವ ಜಾಯೋಗ? ನಮ್ಮ ನಾಡಿಗೆ ನಮ್ಮಿಂದೇನಾಗಬೇಕು?—ಎಂಬ ಅರಿವಿಲ್ಲದೆ, ನಾವು ಪ್ರಜ್ಞಾಪೂರಕರಂತಾಗಿರುವೆವು. ಜೀರ್ಣ ಮತ್ತು ಅಪಾಯಕರವೆಂದು ಕಟ್ಟಡವನ್ನು ಕೆಡಹುವುದು ಸುಲಭ ಮಾತಲ್ಲ; ಅವುಗಳ ಸ್ಥಾನದಲ್ಲಿ ಹೊಸತಾಗಿ ಉಪಯುಕ್ತ ಕಟ್ಟಡವನ್ನೆಬ್ಬಿಸುವುದರಲ್ಲಿ ಸಾಹಸವಿದೆ. 'ನಮ್ಮ ನಾಡು ದಾಸ್ಯಕ್ಕೀಡಾಗಿದೆ; ನಮ್ಮ ನಾನು ಹುಡುಕಿ ಹುಡುಕಿ ಹೋಗಿದೆ!' ಎಂದು ಹಳಹಳಿಸುವುದರಿಂದ ಏನಾದಂತಾಯಿತು! ಅದಕ್ಕೆ ರಚನಾತ್ಮಕವಾದ ಆಂಜನದ ಲೇಪನವಾಗಬೇಕು!

ಎಲ್ಲರ ಬಾಯಲ್ಲಿ ನುಡಿಯಲ್ಲಿ ಇಂದು 'ಸ್ವಾತಂತ್ರ್ಯ' ಕಬ್ಬಿಣದಾಡುತ್ತಿರಬಹುದು; ಆದರೆ ಅದೆಷ್ಟು ಮಂದಿಯ ಮನದ

ಮುಂದೆ ಆ ಶಬ್ದದ ಸರಿಯಾದ ಚಿತ್ರ ಮೂಡಿಕೊಂಡಿರುವುದು! 'ಸ್ವಾತಂತ್ರ್ಯ' 'ಸಾಮ್ಯವಾದ' ಇವೆಲ್ಲ ತೀರ ಮನುಕಾದ ಪದಗಳು. ಅದರಿಂದಲೇ ಅವು ಎಲ್ಲರ ಬಾಯಲ್ಲಿಯೂ ನಲಿದಾಡಬಲ್ಲವು.

'ತೋಳವೂ ಕುರಿಮರಿಯೂ' ಎಂಬ ಕತೆ ಎಲ್ಲರಿಗೂ ಗೊತ್ತಿರಬಹುದು. ತೋಳಕ್ಕೆ ಕುರಿಮರಿಯ ಭಕ್ಷಣೆಯೇ ಸ್ವಾತಂತ್ರ್ಯ; ತದ್ವಿರುದ್ಧ ಕುರಿಮರಿಯ ಸ್ವಾತಂತ್ರ್ಯ ತೋಳದ ಅಪಾಯದಿಂದ ಜೀವ ಒಟಾವು ಮಾಡಿಕೊಳ್ಳುವುದರಲ್ಲಿ. ಇದರಂತೆ ಸಮಾಜದಲ್ಲಿ ಎಲ್ಲರ ಹಿತಾಹಿತಗಳು ಒಂದಾಗಿರುವುದಿಲ್ಲ. ಒಮ್ಮೊಮ್ಮೆ ಜೀರೆ ಜೀರೆ ವರ್ಗಗಳ ಹಿತಾಹಿತ ಪರಸ್ಪರ ವಿರೋಧಕವಾಗಿರುತ್ತವೆ. ಹೀಗಿದ್ದಾಗ 'ಸ್ವಾತಂತ್ರ್ಯ'ದ ಅರ್ಥ ಹೇಳುವುದು ಜನ ತಿಳಿದುಕೊಂಡಷ್ಟು ಸುಲಭವಲ್ಲ.

ಹಿಂದುಸ್ತಾನದ ಪರಿಸ್ಥಿತಿಯನ್ನೇ ಎತ್ತಿಕೊಳ್ಳೋಣ: ಒಕ್ಕಲ ತನದ ಕ್ಷೇತ್ರದಲ್ಲಿ ಇಲ್ಲೊಂದು ಜಮೀನ್‌ದಾರರ ವರ್ಗ ಬೆಳೆದು ಕೂಂಡಿದೆ; ಅದರ ಕೆಳಗೆ ದುಡಿಯುವ ದಲಿತವರ್ಗ ರೈತರದು. ಜಮೀನ್‌ದಾರರ ಸ್ವಾತಂತ್ರ್ಯ ರೈತರ ರಕ್ತಶೋಷಣೆಯಲ್ಲದೆ; ರೈತರ ಸ್ವಾತಂತ್ರ್ಯ ಈ ದಲಾಲಿ-ಜಮೀನ್‌ದಾರ ವರ್ಗದ ದರೋಪೆ ನಿಲ್ಲಿಸಿಬಿಡುವುದರಲ್ಲಿದೆ! ಇದೇರೀತಿ ನಾವು ಔದ್ಯೋಗಿಕ ಕ್ಷೇತ್ರದಲ್ಲಿಯೂ ಕಾಣಬಹುದು. ದುಡಿಸುವವರು ಬೆರಳ ಮೇಲೆ ಎಣಿಸಬಹುದಾದಷ್ಟು ಭಂಡುಪಲುಡಾರರು; ಕೈಕೆಳಗೆ ತಮ್ಮ ಜೀವನವನ್ನೇ ಮಾರಿಕೊಂಡ ಕಾಮುಗಾರರು. ಇವರಿಬ್ಬರ ಹಿತಾಹಿತಗಳೂ ಪರಸ್ಪರ ವಿರೋಧಿಗಳಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಹೀಗಿದ್ದಮೇಲೆ, ನಾವು ಯಾರ ಹಿತಾಹಿತದ ಸಲುವಾಗಿ ಸ್ವಾತಂತ್ರ್ಯ ಸಂಪಾದಿಸಬೇಕೆಂಬ ಪ್ರಶ್ನೆ ತಾನಾಗಿಯೇ ಉದ್ಭವಿಸುವುದು. ಇನ್ನು 'ಯಾವುದಾದರೊಂದು ಉಪಾಯದಿಂದ ಈ ವರ್ಗಕಲಹ ಅಳಿಸಿ, ಒಂದು ವರ್ಗದ ಹಿತಾಹಿತ ಮತ್ತೊಂದಕ್ಕೆ ಪೋಷಕವಾಗುವ ಹಾಗೆ ಪ್ರಯತ್ನಿಸಬಹುದೇ?' ಎಂಬ ಸಮಸ್ಯೆಯಾದರೂ ವಿಚಾರಸತಕ್ಕದ್ದಾಗಿದೆ. ಏಕೆಂದರೆ ಹಾಗಾದಲ್ಲಿ ಸ್ವಾತಂತ್ರ್ಯದ ರೂಪರೇಷೆಗಳನ್ನು ಎಲ್ಲರೂ ಒಂದೇ ಬಗೆಯಾಗಿ ಚಿತ್ರಿಸಬಹುದು.

ಆದರೆ ಸಾಮಾನ್ಯವಾಗಿ ಜನರು, ಸ್ವಾತಂತ್ರ್ಯವೆಂದೊಡನೆಯೆ ತಮ್ಮ ಮನಬಂದಂತೆ ವರ್ತಿಸುವ ಅಧಿಕಾರ ಎಂದು ತಿಳಿದುಬಿಡುತ್ತಾರೆ.

ಸ್ವಾತಂತ್ರ್ಯ ಸಿಕ್ಕಿತೆಂಬ ಮಬ್ಬಿನಿಂದ ಸ್ಕೂಲಕಾಯದ ಮನುಷ್ಯನೊಬ್ಬ, ದೊಡ್ಡ ಊರೊಂದರಲ್ಲಿ ಕಾಲ್ದಾರಿಯನ್ನು ಬಿಟ್ಟು ಬೀದಿಯ ಮಧ್ಯದಲ್ಲಿ ಎಲ್ಲ ರಸ್ತೆಯನ್ನೂ ಆವರಿಸಿ ನಿಧಾನವಾಗಿ ನಡೆಯತೊಡಗಬಹುದು! ಚಾಕಿಯ ಪೋಲೀಸನು ವಿಚಾರಿಸಿದರೆ, ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂತೆಂದು ತಿಳಿದುಕೊಳ್ಳಬಹುದು. ಆದರೆ ತಾನು ಹೀಗೆ ಮಾಡಿದಲ್ಲಿ ಇತರರೂ ತನ್ನನ್ನೇ ಅನುಸರಿಸಬಹುದೆಂಬ ವಿಚಾರ ಆ ಬಡಪ್ರಾಣಿಯ ಮನಸ್ಸಿನಲ್ಲಿ ಬರುವುದೇ ಇಲ್ಲ. ಟಾಂಗಾವಾಲಾನು ತನ್ನ ಸ್ವಾತಂತ್ರ್ಯ ಪ್ರತಿಪಾದಿಸಲೆಂದು ಕಾಲ್ದಾರಿಯ ಮೇಲೆ ವಾಹನ ಒಯ್ದರೆ ಅಥವಾ ಮೋಟಾರವಾಲಾನು ಆ ಮನುಷ್ಯ ತನ್ನ ಸ್ವಾತಂತ್ರ್ಯಕ್ಕೆ ಅಡ್ಡ ಬಂದನೆಂದು ಭಾವಿಸಿ ಅವನ ಮೇಲೆ ಬಂಡಿಯನ್ನು ಓಡಿಸಿದರೆ, ಪರಿಣಾಮವೇನಾಗಬಹುದು! ಪ್ರತಿಯೊಬ್ಬರೂ ತಮ್ಮ ಮನಸ್ಸಿಗೆ ತೋರಿದಂತೆ ವರ್ತಿಸತೊಡಗಿ, ಯಾರೊಬ್ಬರೂ ತಮ್ಮ ಗೊತ್ತನ್ನು ಪುಟ್ಟಲಾರರು. ಸ್ವಾತಂತ್ರ್ಯ ವೈಯಕ್ತಿಕ ವಿಷಯವಷ್ಟೇ ಅಲ್ಲ; ಅದೊಂದು ಸಾಮಾಜಿಕ ಕಟ್ಟಳೆ.

ಮನುಷ್ಯ ಸಾಮಾಜಿಕ ಜೀವಿ; ಒಬ್ಬಂಟಿಗನಾಗಿ ಅವನು ಬಾಳಲಾರ. ಕ್ರೂಸೋನ ಬಗ್ಗೆ ಓದುವುದು ನಾವು ಪುಸ್ತಕದಲ್ಲಷ್ಟೆ! ಸಾಮಾನ್ಯವಾಗಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆನ್ನುವ ಮನುಷ್ಯ ತನ್ನ ಸಮಾಜಭಾಂಧವರೊಡನೆ ಬಾಳಲೇಬೇಕು. ಹಾಗೂ 'ಥುಸಿಡೈಡ'ನು ಪುರಾತನ ಕಾಲದಲ್ಲಿಯೆ ಕಂಡು ಹಿಡಿದಂತೆ— ನಮಗೆ ಗೊತ್ತಿದ್ದ ಮನುಷ್ಯರು ಹಾಗೂ ನಾವು ನಂಬುವ ದೇವರು— ಸಾಧ್ಯವಿದ್ದಲ್ಲೆಲ್ಲ ಅಧಿಕಾರ ನಡೆಯಿಸಲು ಯತ್ನಿಸುವುದು ಇವರ ಹುಟ್ಟುಗುಣ. ಆದುದರಿಂದ ಸಮಾಜದಲ್ಲಿ ಎಲ್ಲರೂ ಬಾಳಿ-ಬದುಕಬೇಕೆದ್ದರೆ ಪ್ರತಿಯೊಬ್ಬನೂ ತನ್ನ ಮನಬಂದಂತೆ ವರ್ತಿಸಲಾರನು. ಎಲ್ಲರ ಆಶೆ-ಆಕಾಂಕ್ಷೆಗಳೂ ತೃಪ್ತಿಯಾಗುವ ಒಂದು ವಿಶಿಷ್ಟ ರೀತಿಯಲ್ಲಿ ಸಮಾಜದ ರಚನೆಯನ್ನು ಮಾಡಿಕೊಳ್ಳುವುದು ಅಗತ್ಯ. ಹೀಗೆ ಮಾಡಲು ಒಬ್ಬೊಬ್ಬನ ವೈಯಕ್ತಿಕ ಸ್ವೇಚ್ಛಾವೃತ್ತಿಯನ್ನೂ ಕೆಲಮಟ್ಟಿಗೆ ಪ್ರತಿಬಂಧಿಸುವುದು ಅಗತ್ಯ; ಆದರೆ ಈ ಪ್ರತಿಬಂಧ ಯಾವಾಗಲಾದರೂ ಸಮಾಜದ ವ್ಯಕ್ತಿತ್ವದ ಬೆಳವಣಿಗೆಗೆ ತುಂಬಾ ಪೂರಕವಾಗಿರಲೆ ಬೇಕು. ಈ ನಿರ್ಬಂಧದಿಂದ ಕಟ್ಟಲ್ಪಟ್ಟ ಸಮಾಜವೆ ಸ್ವತಂತ್ರ ಸಮಾಜ.

ಇಂದಿನ ರಾಜಕಾರಣಶಾಸ್ತ್ರ ಪಂಡಿತರಾದ ಹೆರಾಲ್ಡ್ ಲಾಸ್ಕಿ ಅವರು 'ಸ್ವಾತಂತ್ರ್ಯ'ದ ಸ್ಪಷ್ಟೀಕರಣ ಹೀಗೆ ಮಾಡುವರು: 'ಯಾವ ಪರಿಸರದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅನುವು ದೊರೆಯುವುದೋ, ಅಂತಹ ಸನ್ನಿವೇಶವನ್ನು ಸಮಾಜದಲ್ಲಿ ಕಾಪಾಡಿಕೊಳ್ಳುವುದೆಂದರೆಯೆ ಸ್ವಾತಂತ್ರ್ಯ'!

ಲಾಸ್ಕಿಯವರು ಸ್ಪಷ್ಟಮಾಡಿದಂತೆ ಸ್ವಾತಂತ್ರ್ಯವನ್ನು ಅದರ ಮೂರು ಸ್ವರೂಪದಲ್ಲಿ ನಾವು ನೋಡಬಹುದು: ವೈಯಕ್ತಿಕ, ರಾಜಕೀಯ ಹಾಗೂ ಆರ್ಥಿಕ. ಈ ಮೂರೂ ಸ್ವರೂಪಗಳ ಸಮಾವೇಶದಿಂದಲೇ ಸಮಾಜದಲ್ಲಿ ಸ್ವಾತಂತ್ರ್ಯದ ಸನ್ನಿವೇಶ ಸಾಧ್ಯ.

ಒಬ್ಬ ಮನುಷ್ಯ ಭಾರತೀಯ ವೇಷ-ಭೂಷಣ ತೊಡಬಹುದು ಅಥವಾ ಪಾಶ್ಚಿಮಾತ್ಯ ಪದ್ಧತಿಯನ್ನು ಅನುಸರಿಸಬಹುದು. ಕಪ್ಪು ಹೆಂಡತಿಯನ್ನೇ ಲಗ್ನವಾಗಬಹುದು ಅಥವಾ ಲಗ್ನವಾಗದೆಯೂ ಇರಬಹುದು. ಹಿಂದೂ ಮುಸಲ್ಮಾನನಾಗಬಹುದು ಅಥವಾ

ಮಹಮ್ಮದೀಯ ತತ್ತ್ವವನ್ನು ಒಪ್ಪಿಕೊಂಡಿರಬಹುದು. ಈ ಎಲ್ಲ ವಿಷಯಗಳಲ್ಲಿ ಅವನ ಕೃತಿಯಿಂದ ಸಮಾಜಕ್ಕೆ ಯಾವ ಬಗೆಯ ಅಹಿತವೂ ಉಂಟಾಗದು. ಈ ಎಲ್ಲ ಅವನ ಕಾರ್ಯಗಳ ಪರಿಣಾಮ ಅವನಿಗಷ್ಟೇ ಸಂಬಂಧಿಸಿದೆ. ಸ್ವಾತಂತ್ರ್ಯದ ಈ ಕ್ಷೇತ್ರವೇ ವೈಯಕ್ತಿಕ.

ಅದರಂತೆ ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ರಾಜ್ಯದಾಡಳಿತದಲ್ಲಿ ಭಾಗವಹಿಸುವ ಅಧಿಕಾರವಿದೆ. ರಾಜ್ಯಘಟನೆ ಪ್ರಜಾಸತ್ತಾತ್ಮಕವಾಗಿರತಕ್ಕದ್ದು, ಹಾಗೂ ಸಮಾಜದಲ್ಲಿ ವಯಸ್ಸಿಗೆ ಬಂದ ಪ್ರತಿಯೊಬ್ಬನಿಗೂ ಮತಾಧಿಕಾರವಿರಬೇಕು. ಅದರಂತೆ ಅವನು ಶಾಸನಸಭೆಯ ಸದಸ್ಯನಾಗಲೂ ಯೋಗ್ಯನಾಗಬೇಕಲ್ಲದೆ, ಸರಕಾರದ ಯಾವ ಕೆಲಸ ಮಾಡಲೂ ಸಾಮಾನ್ಯವಾಗಿ ಪಾತ್ರನಾಗಿರತಕ್ಕದ್ದು. ಇವಲ್ಲದೆ ಪ್ರತಿಗಾಮಿಯಲ್ಲದ ಯಾವ ನಾಗರಿಕ ಸರಕಾರವೆ ಆಗಲಿ ಸ್ಥೂಲವಾಗಿ ವಾಕ್, ಪತ್ರಿಕಾ ಹಾಗೂ ಸಭಾಸ್ವಾತಂತ್ರ್ಯಗಳನ್ನು ಮನ್ನಿಸಲೇ ಬೇಕು. ಇವೇ ರಾಜಕೀಯ ಸ್ವಾತಂತ್ರ್ಯದ ತಿರುಳು. ರಾಜಕೀಯ ಸ್ವಾತಂತ್ರ್ಯದಿಂದ ಸಮಾಜ ಕ್ರಮಬದ್ಧವಾಗುವುದು. ಸಮಾಜದಲ್ಲಿ ಒಬ್ಬ ನಾಯಕನ ಅಥವಾ ಒಂದು ಪಕ್ಷದ ಬಲಾತ್ಕಾರ ಅಳಿಸಿ ಕಾಯ್ದೆಯ ಸತ್ತೆ ನೆಲೆಗೊಳ್ಳುವುದು.

ಆರ್ಥಿಕ ಸ್ವಾತಂತ್ರ್ಯ: ರೊಟ್ಟಿಯೇ ಮನುಷ್ಯನ ಜೀವಿತದ ಇತಿಶ್ರೀ ಆಗಲಾರದಾದರೂ, ಅನ್ನವಿಲ್ಲದೆ ಮನುಷ್ಯ ಬಾಳಲಾರ. ಹೊಟ್ಟೆ ಹೊರೆದುಕೊಳ್ಳಲು ಅವನು ಉದ್ಯೋಗ ಮಾಡಲೇಬೇಕಾಗುವುದು; ಹಾಗೂ ಬೇಗೆ ಅವನು ಕೈಕೊಳ್ಳುವ ಉದ್ಯೋಗದಿಂದ ಅವನ ಜೀವನ ಅರ್ಥಪೂರ್ಣವಾಗಲು ಸಾಧ್ಯವಿದ್ದಾಗಲೇ ನಾವು ಆ ಮನುಷ್ಯನಿಗೆ ಆರ್ಥಿಕಸ್ವಾತಂತ್ರ್ಯವಿದೆ ಎಂದು ಹೇಳಬಹುದು. ಆರ್ಥಿಕಸ್ವಾತಂತ್ರ್ಯವೆಂದರೆ ಎಲ್ಲರಿಗೂ ಆಸ್ತಿಯನ್ನು ಸರಿಯಾಗಿ ಹಂಚಿಕೊಡಬೇಕೆಂದಲ್ಲ; ಎಲ್ಲರಿಗೂ ಅವರವರಿಗೆ ಬೇಕಾದ ಉದ್ಯೋಗಗಳನ್ನೇ ಒದಗಿಸಿಕೊಡುವ ಹೊಣೆ ಸಮಾಜಕ್ಕಿದೆ ಎಂದೂ ಅಲ್ಲ. ಆದರೆ ಸ್ವತಂತ್ರ ಸಮಾಜದಲ್ಲಿ ಯಾವ ಮನುಷ್ಯನೂ ತನ್ನ ಆಸ್ತಿಯ ಬಲದಿಂದ ಇನ್ನೊಬ್ಬನ ಜೀವಿತವನ್ನು ತನ್ನ ವಶದಲ್ಲಿಟ್ಟುಕೊಳ್ಳಲಾರ; ಅಲ್ಲದೆ ಸಮಾಜದೊಳಗಿನ ಪ್ರತಿಯೊಂದು ವ್ಯಕ್ತಿಗೂ ಸಮಾಜದ ಏಳಿಗೆಗೆ ಸಂಬಂಧಿಸಿದ ಕೆಲಸ ಮಾಡಲು ಯಾವಾಗಲೂ ಅನುವಿರುತ್ತದೆ. ಅಲ್ಲಿ ಉದ್ಯೋಗವಿಲ್ಲದೆ ಅಲೆಯುವ ಜನರಿಲ್ಲ. ಎಲ್ಲರ ಆರ್ಥಿಕ-ಜೀವನವೂ ಸ್ಥಿಮಿತವಾಗಿರುವುದು; ಸ್ವತಂತ್ರವೂ ಅರ್ಥಪೂರ್ಣವೂ ಆಗಿರುವುದು.

ಸ್ವಾತಂತ್ರ್ಯದ ಈ ಮೂರು ಸ್ವರೂಪಗಳನ್ನು ಅಭ್ಯಾಸದ ದೃಷ್ಟಿಯಿಂದ ಮಾತ್ರ ನಾವು ವಿಂಗಡಿಸಬಹುದು. ಇವುಗಳಲ್ಲಿ ಯಾವುದಕ್ಕೆ ತಡೆಯುಂಟಾದರೂ ಸಮಾಜದ ಸ್ವಾತಂತ್ರ್ಯ ನಷ್ಟವಾಗದೆ ಇರದು. ಯಾವುದೊಂದು ಕಾಲದಲ್ಲಿ ಸಮಾಜ ಅಸ್ವತಂತ್ರವಾದರೆ, ಸ್ವಾತಂತ್ರ್ಯದ ಯಾವ ಸ್ವರೂಪಕ್ಕೆ ತಡೆಯುಂಟಾಗಿದೆ ಎಂಬುದನ್ನು ಗ್ರಹಿಸಿಕೊಂಡು, ಅದರ ಬಿಡುಗಡೆಗಾಗಿ ಹೆಣಗಬೇಕಾಗುವುದು. ಅಲ್ಲದೆ ಒಮ್ಮೆ ಸ್ವಾತಂತ್ರ್ಯ ಗಳಿಸಿ ಆಯಿತೆಂದು ಸುಮ್ಮನೆ ಇರತಕ್ಕದ್ದಲ್ಲ. ಸತತ ಜಾಗ್ರತಿಯೆ ಸ್ವಾತಂತ್ರ್ಯದ ಬೆಲೆ.

ಮನುಷ್ಯ ಪ್ರಾಣಿಯ ದೃಷ್ಟಿಯಿಂದ ಹೇಳಬಹುದಾದರೆ, ಎಲ್ಲ ನಾಗರಿಕ ರಾಷ್ಟ್ರಗಳೂ ಬಡಿದಾಡಿ, ೧೯ನೆಯ ಶತಮಾನ ಮುಗಿಯುವುದರೊಳಗೆ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡುವು; ಆದರೆ ಆದಾದ ಮೇಲೆ ಈ ರಾಷ್ಟ್ರಗಳು ಇನ್ನಾಯಿತೆಂದು ಕೈಮುಚ್ಚಿಕೊಂಡು ಕುಳಿತುಕೊಳ್ಳಲು ಸಾಧ್ಯವಾಯಿತೇ? ಔದ್ಯೋಗಿಕ ಕ್ರಾಂತಿ (Industrial Revelution) ಆರ್ಥಿಕ ಕ್ಷೇತ್ರದಲ್ಲಿ ಒದಗಿ ಬಂದೊಡನೆಯೆ, ಆಧುನಿಕ ಸಮಾಜದ ಸ್ವರೂಪವೇ ಬದಲಾಯಿತು; ಹಾಗೂ ಈ ಸಮಾಜರಚನೆಯಂತೆ ಸ್ವಾತಂತ್ರ್ಯದ ಆರ್ಥಿಕಸ್ವರೂಪಕ್ಕೆ ಪ್ರಾಮುಖ್ಯತೆ ಬರತೊಡಗಿತು. ಮಾನವತೆಯ ಸ್ವಾತಂತ್ರ್ಯಸಂಗ್ರಾಮ ಮುಂದರಿಯಲೇ ಬೇಕಾಯಿತು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೊನೆಯೆಂಬುದೇ ಇಲ್ಲ!

ಔದ್ಯೋಗಿಕ ಕ್ರಾಂತಿಯಾಗುವುದರ ಮೊದಲು ಉತ್ಪತ್ತಿ ವಿಶೇಷವಾಗಿ ವಿನಿಮಯಕ್ಕಾಗಿ ಇದ್ದಿಲ್ಲ. ಪ್ರತಿಯೊಬ್ಬ ಮನುಷ್ಯ ಹಾಗೂ ಪ್ರತಿಯೊಂದು ಹಳ್ಳಿಯೂ ಆರ್ಥಿಕದೃಷ್ಟಿಯಿಂದ ಸ್ವಯಂಪೂರ್ಣವಾಗಿತ್ತು. ಆದುದರಿಂದ ಆರ್ಥಿಕ ಕ್ಷೇತ್ರದಲ್ಲಿ ಒಬ್ಬ ಮನುಷ್ಯ ತನ್ನ ಆಸ್ತಿಯ ಬಲದಿಂದ ಇನ್ನೊಬ್ಬನ ಜೀವಿತವನ್ನು ತನ್ನ ಕೈಯಲ್ಲಿಟ್ಟುಕೊಳ್ಳಲು ಸಾಧ್ಯವಿದ್ದಿಲ್ಲ. ಆದರೆ ಯಂತ್ರಯುಗ ಆರಂಭವಾದೊಡನೆ, ಉತ್ಪತ್ತಿಯ ಪ್ರಮಾಣ ದೊಡ್ಡದಾಗಿ ವಿನಿಮಯ ಬೆಳೆಯಿತು. ಅಲ್ಲದೆ ಆಸ್ತಿಯಲ್ಲಿ ಸ್ವಂತ ಹಕ್ಕಿಂತೂ ಇದ್ದೇ ಇದ್ದುದರಿಂದ, ಬಂಡವಾಳಶಾಹಿಯ ಆಳಿಕೆಯಲ್ಲಿ ಉಳ್ಳವರ ವರ್ಗ ಹಾಗೂ ದಲಿತರ ವರ್ಗಗಳಿಗೆ ಹೊಡಲಾಯಿತು. ಮೊದಲನೆಯ ವರ್ಗ ಎರಡನೆಯ ವರ್ಗವನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಅನುವಾಯಿತು. ಆದುದರಿಂದಲೆ ಅರ್ಥಶಾಸ್ತ್ರ ಪಂಡಿತರಾದ ಪ್ರಾಧ್ಯಾಪಕ ಟಾನಿ (Tawney) ಅವರು, ಇಂಗ್ಲೆಂಡ್ ಅಮೇರಿಕಾ ಮುಂತಾದ ಸುಧಾರಿಸಿದ ರಾಷ್ಟ್ರಗಳಲ್ಲಿಯ ಸಮಾಜದ ಮೇಲೆ ಬರೆಯುತ್ತ ಹೀಗೆನ್ನುವರು: 'ಈ ಹೊತ್ತು ಲಾರ್ಡ್ ಮೆಲ್‌ಚೆಟ್‌ರು ನಕ್ಕರೆಂದರೆ ಹತ್ತು ಸಾವಿರ ಮನೆಗಳಲ್ಲಿ ಹರುಷ ಹರಿಯುವುದು; ಮಾರ್ಗನ್‌ರು ಒಮ್ಮೆ ಗುಮ್ಮಗಿದರೆ ಸಾಕು, ಎರಡೂ ಭೂಖಂಡಗಳಲ್ಲಿಯ ಜೀವ ಕಳೆಗುಂದುವುದು! ["Lord Melchett smiles and there it sunshine in ten thousand homes. Mr. Morgan frowns and the population of two continents is plunged in gloom!" Prof. Tawney of China writing in his book 'Equality']

ಆದ್ದರಿಂದ ಇಂದಿನ ಸಮಾಜದಲ್ಲಿ ಆರ್ಥಿಕ ಸ್ವಾತಂತ್ರ

(೧೨ನೆಯ ಪುಟಕ್ಕೆ ಮುಂದುವರಿದಿದೆ)

ಕೃತಕ ಗೊಬ್ಬರ

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ ಎಸ್‌ಸಿ.
ಹೈದರಾಬಾದ್

*

ಕೃಷಿಯೆ ಉಪಜೀವನದ ಮುಖ್ಯಸಾಧನವಾಗಿರುವ ಹಿಂದು-ಸ್ತಾನದಲ್ಲಿ, ಗೊಬ್ಬರದ ಆವಶ್ಯಕತೆ ಎಷ್ಟಿರುವುದೆಂಬುದನ್ನು ಜೇರೆ ಹೇಳಬೇಕಾಗಿಲ್ಲ. ಆದರೆ ಇಲ್ಲದಿರುವ ಗೊಬ್ಬರವನ್ನು ಉಂಟುಮಾಡಿಕೊಳ್ಳಲು ನಾವು ಯಾವ ಯಾವ ಉಪಾಯ ಮಾಡಬಹುದು ?

ಇಲ್ಲಿವರೆಗೆ ಲಭ್ಯನಾವ ಭಾರತದ ಜನಗಣನೆ ಮತ್ತು ಆದರ ಉದ್ಯಮಗಳ ತುಲನಾತ್ಮಕ ಪರಿಶೀಲನೆಯಿಂದ, ಭಾರತವು ಸಂಪೂರ್ಣ ಐದರಲ್ಲಿ ನಾಲ್ಕು ಪಾಲು ವ್ಯವಸಾಯೋದ್ಯಮಿಯಾಗಿ, ಕೃಷಿ ಪ್ರಧಾನವಾದುದಾಗಿದೆಯೆಂದು ತಿಳಿದುಬರುವುದು. ಇಷ್ಟಿದ್ದರೂ, ಭಾರತೀಯರಲ್ಲಿಯ ಬಹುಜನರು ಅನ್ನಾನ್ನನೆಂದು ಹಂಬಲಿಸುವುದನ್ನು ನೋಡಿದರೆ, ಕರುಳಿಗೆ ಬರೆ ಬಿದ್ದಂತಾಗುತ್ತದೆ. ಪರದೇಶದಿಂದ ಬರುವ ಸಮುದ್ರಪಾತಳಿಯ ಮೇಲೆ ಕಾಣುವ ಹಡಗುಗಳು ಆಹಾರದ ತುಟುಕನ್ನೇನಾದರೂ ತರುತ್ತಿವೆಯೊ ಎಂದು ಪಿಪಾಸಾಪೂರ್ವಕವಾಗಿ ಅತ್ತಕಡೆಗೇ ದೃಷ್ಟಿಯನ್ನಿಟ್ಟು, ಮೋಡಕ್ಕೆ ಮುಖಿ ಚಾಚುವ ಚಾತಕವಾಗಿದೆ ಇಂದು ನಮ್ಮ ದೇಶ. ಭಾರತದ ಆಹಾರೋತ್ಪತ್ತಿಯಲ್ಲಿ ಕಂಡುಬರುವ ಈ ಕ್ಷೀಣದೆಸೆಗೆ ಕಾರಣಗಳನೇಕವಿರಬಹುದು. ಇದನ್ನು ಹೀಗೆಯೆ ಬಲಿಯಗೊಟ್ಟರೆ ಮುಂದೆ ಚಿಕಿತ್ಸೆ ಅಸಾಧ್ಯವಾಗಬಹುದು. ಸಾಧಾರಣವಾಗಿ ರೋಗಗಳ ನಿವಾರಣೋಪಾಯಗಳು ಮೂರು ವಿಧದುವುಗಳೆಂದು ಕಂಡು ಬರುತ್ತದೆ:— ತ್ರಾಣಿಕ, ಚೈಕಿತ್ಸಿಕ ಮತ್ತು ಪಾರಿಶ್ರಾಮಿಕಗಳೆಂದು. ಆಹಾರೋತ್ಪಾದನೆಗೆ ಪಾರಿಶ್ರಾಮಿಕದಂತೆ ಕೃಷಿಕನಿದ್ದಾನೆ; ನಿಸರ್ಗ ಚಿಕಿತ್ಸಕ ; ಆದರೆ ತ್ರಾಣಿಕ ಮಾತ್ರ ಬೇಕಾಗಿದೆ. ಈ ತ್ರಾಣಿಕ ಮೊದಲಿನಿಂದಲೂ ಉಪಯೋಗದಲ್ಲಿದ್ದರೂ ರೋಗಿಯ ರೋಗ ಮಾತ್ರ ಇನ್ನೂ ಗುಣಮುಖವಾಗಿಲ್ಲ. ರಾಸಾಯನಿಕ ವೈದ್ಯ, ರೋಗಿಗಳಿಗನುಗುಣವಾದ ಹೊಸ ತ್ರಾಣಿಕಗಳನ್ನು ಕಂಡುಹಿಡಿದು, ಆಹಾರೋತ್ಪಾದನೆಯ ಕ್ಷಯವನ್ನು ನಿವಾರಿಸುವ ಪ್ರಯತ್ನದಲ್ಲಿ ಇದ್ದಾನೆ. ಈ ತ್ರಾಣಿಕವೇ ಕೃತಕ ಗೊಬ್ಬರ.

ಜೀವಿಯ ನಿರ್ವಹಣೆ ಆಹಾರವಿಲ್ಲದೆ ಸಾಧ್ಯವಿಲ್ಲವೆಂಬುದು ಎಂಥವರಿಗೂ ವಿದಿತವಿದೆ. ಆಹಾರ-ಆಹಾರದಲ್ಲಿ ಭೇದವಿದೆ. ಒಂದೇ ಆಹಾರ ಎಲ್ಲ ಜೀವಿಗೂ ಆಹಾರವಾಗಲಾರದು. ಮನುಷ್ಯನ ಆಹಾರ ಸಸ್ಯಗಳ ಆಹಾರವಲ್ಲ. ಅಷ್ಟೇ ಅಲ್ಲ, ಒಬ್ಬ ಮನುಷ್ಯನಿಗೆ ಶಕ್ತಿವರ್ಧಕದಂತೆ ಉಪಯೋಗವಾಗುವ ಆಹಾರ ವಸ್ತು ಇನ್ನೊಬ್ಬನಿಗೆ ಅಪೇ ಪರಿಣಾಮವನ್ನು ಉಂಟುಮಾಡಲಾರದು. ಇದಕ್ಕೆ ಕಾರಣ ಬಗೆಬಗೆಯ ಮನುಷ್ಯರ ವಿಭವವಿಧವಾದ ಶಾರೀರಿಕ ಪ್ರಕೃತಿಗುಣವೇ. ಆಯಾ ಜೀವಿಯ ಶಾರೀರಿಕ ಪ್ರಕೃತಿ ಗುಣಕ್ಕೆ ಸಮನ್ವಯಿಸುವ ಆಹಾರವೇ ಆಯಾ ಜೀವಿಯ ಆಹಾರ; ಉಳಿದುದೆಲ್ಲ ನಿರರ್ಥಕ. ಒಂದು ಪ್ರಾಣಿಗೆ ವಿಶಿಷ್ಟಾಂಶಗಳುಳ್ಳ ಆಹಾರಬೇಕಾದಲ್ಲಿ, ಆ ಅಂಶವ ವಿಶೇಷ ಪ್ರಮಾಣವುಳ್ಳುದನ್ನೇ ಅದಕ್ಕೆ ಒದಗಿಸಿದರೆ, ಅದು ಆ ಪ್ರಾಣಿಗೆ ಶಕ್ತಿವರ್ಧಕವಾಗಿ ಪರಿಣಮಿಸುತ್ತದೆ. ಕ್ಷೇತ್ರದ ಪ್ರಾಕೃತಿಕ ಸ್ವಭಾವದ ಪರೀಕ್ಷೆಮಾಡಿ, ಅದಕ್ಕೆ ಅನುಗುಣವಾದ ವಿಶಿಷ್ಟಾಂಶಗಳನ್ನುಳ್ಳ ನಿಯತ ಪರಿಮಿತಿಯ ಆಹಾರವನ್ನೊದಗಿಸಿಕೊಟ್ಟಲ್ಲಿ, ಆ ಕ್ಷೇತ್ರ ತನ್ನಿಂದ ಸಾಧ್ಯವಾದ ಸರ್ವೋತ್ಪತ್ತಿಯನ್ನೂ ಕೊಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಮೇಲಿನ ವಿಚಾರಗಳಿಂದ ಸಿದ್ಧಿಸುವುದೇನೆಂದರೆ: ಈ ಭಾರತದಲ್ಲಿಯ ಕೃಷಿಯ ಬೆಳೆಗೆ ಸದ್ಯ ಕ್ಷಯರೋಗ ತಗುಲಿದೆ ಆದನ್ನು ದೂರೀಕರಿಸಲಿಕ್ಕೆ ಬೇಕಾದುದು ತಕ್ಕ ಆಹಾರ, ಕಾರಣ. ಆ ಕ್ಷೇತ್ರ ಕಸುವಿನದಾಗಿ, ಬೆಳೆಯ ಬೆಳೆವಣಿಗೆಯನ್ನು ಹೆಚ್ಚು ಮಾಡತಕ್ಕ ವಸ್ತುಗಳಾವುವು ಎಂಬುದರ ಬಗೆಗೆ ಒಂದು ವಿಹಂಗನು ದೃಷ್ಟಿಯನ್ನು ಹಾಕೋಣ:—

ಮನುಷ್ಯನು ಉಸಿರಾಡಿಸುವಾಗ ಗಾಳಿಯಲ್ಲಿದ್ದ ಅಮ್ಲಜನಕವನ್ನು ಸೇವಿಸಿ ಇಂಗಾಲಾಮ್ಲವನ್ನು ಬಿಡುತ್ತಿದ್ದರೆ, ಸಸ್ಯಗಳು ಗಾಳಿಯಲ್ಲಿದ್ದ ಇಂಗಾಲಾಮ್ಲವನ್ನು ಹೀರಿಕೊಂಡು ಅದನ್ನು ಭೇದಿಸಿ, ಅದರಲ್ಲಿದ್ದ ಇಂಗಾಲವನ್ನು ತಮ್ಮ ಆಹಾರಕ್ಕೆ ಉಪಯೋಗಿಸಿ ಅಮ್ಲಜನಕವನ್ನು ಬಿಟ್ಟುಬಿಡುತ್ತವೆ. ಈ ರೀತಿಯ ಮೂಲಕ ಗಾಳಿಯಲ್ಲಿಯ ಅಮ್ಲಜನಕದ ಪ್ರಮಾಣದಲ್ಲಿ ಏನೂ ಹೆಚ್ಚು ಕಡಿಮೆ ಆಗುವುದಿಲ್ಲ. ಈ ಕಾರ್ಯವು ಸಸ್ಯಗಳ ಹಸಿರು ಭಾಗಗಳಲ್ಲಿ ಹಗಲಿನಲ್ಲಿ ಆಗುತ್ತಿರುತ್ತದೆ. ಹಸಿರು ಎಲೆಗಳು ಸೂರ್ಯರಶ್ಮಿಯ ಸಹಾಯದಿಂದ ಇಂಗಾಲಾಮ್ಲ ಮತ್ತು ತೇವವನ್ನು ಹೀರಿಕೊಂಡು, ಸ್ಟಾರ್ಚ್ ಮತ್ತು ಪಿಷ್ಟಶರ್ಕರೆಗಳನ್ನು ತಯಾರುಮಾಡುತ್ತವೆ. ಇದರಿಂದ ಸಸ್ಯಗಳ ಆಹಾರವು ಇಂಗಾಲಾಮ್ಲ ಮತ್ತು ನೀರು ಎಂಬುದು ಗೊತ್ತಾದಂತಾಗುತ್ತದೆ. ಸಸ್ಯಗಳ ಆಹಾರ ಇಷ್ಟೇ ಅಲ್ಲ; ಈ ವಸ್ತುಗಳಲ್ಲದೆ ವಿಶೇಷವಾಗಿ ಸಾರಜನಕ ಮತ್ತು ಕೆಲವು ಲೋಹ-ಲವಣಗಳು ಬೇಕು. ತರತರದ ಸಸ್ಯಗಳ ಪರೀಕ್ಷೆಯಿಂದ ಇವುಗಳ ಬೆಳೆವಣಿಗೆಗೆ ಕೆಳಗೆ ತಿಳಿಸಿದ ವಸ್ತುಗಳು ಆವಶ್ಯಕವೆಂದು ಕಂಡುಬಂದಿದೆ.

ಇಂಗಾಲ, ಜಲಜನಕ, ಅಮ್ಲಜನಕ, ಸಾರಜನಕ, ಪೊಟಾಸಿಯಂ, ರಂಜಕ, ಕ್ಯಾಲ್ಸಿಯಂ, ಮೆಗ್ನೀಸಿಯಂ, ಕಬ್ಬಣ, ಗಂಧಕ ಮತ್ತು ಸೋಡಿಯಂ. ಈ ವಸ್ತುಗಳಲ್ಲಿ ಕೇವಲ ಇಂಗಾಲವು ಗಾಳಿಯಿಂದ (ಇಂಗಾಲಾಮ್ಲ ರೂಪದಲ್ಲಿ) ಮತ್ತು ಉಳಿದ ವಸ್ತುಗಳು ಭೂಮಿಯಿಂದ ದೊರಕುತ್ತವೆ.

ಅಡವಿಗಳಲ್ಲಿ ಸಸ್ಯಗಳು ಒಣಗುವುದರಿಂದಲೂ ಹಾಗೂ ಕೊಳೆಯುವುದರಿಂದಲೂ ಮಣ್ಣಿನಲ್ಲಿ ಕೂಡಿಕೊಂಡುಬಿಡುತ್ತವೆ. ಇದ

ರಿಂದ ಮಣ್ಣಿನಲ್ಲಿ ಆಹಾರವಸ್ತುಗಳ ಪ್ರಮಾಣ ಹೆಚ್ಚಾಗಿ, ಅದೇ ಕಸುವಿನ ಮಣ್ಣೆಂದು ಕರೆಯಲ್ಪಡುತ್ತದೆ. ಆಹಾರದ ಸಲುವಾಗಿ ಸಸ್ಯಗಳನ್ನು ಬೆಳೆಯಿಸಿದಾಗ, ಮಣ್ಣಿನಲ್ಲಿ ಆಹಾರವಸ್ತುಗಳು ಕಡಮೆಯಾಗಿ ಭೂಮಿಯು ಬಂಜೆಯಾಗುತ್ತ ಹೋಗುತ್ತದೆ. ಈ ಕೊರತೆಯನ್ನು ದೂರಮಾಡುವುದಕ್ಕೆ ಗೊಬ್ಬರವನ್ನು ಉಪಯೋಗಿಸುತ್ತಾರೆ. ಇದು ಭೂಮಿಯ ಉತ್ಪಾದನಶಕ್ತಿಯನ್ನು ಹೆಚ್ಚಿಸುತ್ತದೆ.

ಸಸ್ಯಗಳಿಗೆ ಬೇಕಾಗುವ ಆಹಾರವಸ್ತುಗಳಲ್ಲಿ ಸಾರಜನಕವು ಬಹಳ ಮುಖ್ಯವಾದುದು. ಇದು ಹೆಚ್ಚಿನ ಪ್ರಮಾಣದಲ್ಲಿದ್ದಾಗ ಸಸ್ಯಗಳು ಬಹುಬೇಗ ಬೆಳೆಯುತ್ತವೆ. ಗಾಳಿಯಲ್ಲಿ ಸಾರಜನಕದ ಪ್ರಮಾಣವು ಸುಮಾರು ೫೫ ಇದೆ. ಆದರೆ ಗಾಳಿಯಿಂದ ಸಾರಜನಕವನ್ನು ನೇರವಾಗಿ ಹೀರಿಕೊಳ್ಳಲಾಗದ ಅನೇಕ ಸಸ್ಯಗಳು, ಭೂಮಿಯ ಮೇಲಿನ ಸಾರಜನಕಯುಕ್ತ ಸಂಯುಕ್ತಗಳಿಂದ ಸಾರಜನಕವನ್ನು ಹೀರಿಕೊಳ್ಳುತ್ತವೆ. ಇವಕ್ಕೆ ವಿರುದ್ಧವಾಗಿ, ದ್ವಿದಳಜಾತಿಯ ಸಸ್ಯಗಳು, ತಮ್ಮ ಗ್ರಂಥಿಗಳಲ್ಲಿರುವ ಜೀವಾಣುಗಳ ಸಹಾಯದಿಂದ ಗಾಳಿಯಲ್ಲಿದ್ದ ಸಾರಜನಕವನ್ನು ನೇರವಾಗಿ ಹೀರಿಕೊಂಡು, ತಮ್ಮ ಆಹಾರಕ್ಕೆ ಬೇಕಾದ ಸಸಾರ ಜನಕಾಂಶವನ್ನು ತಯಾರು ಮಾಡಿಕೊಳ್ಳುತ್ತವೆ ಈ ರೀತಿಯಾಗಿ ಭೂಮಿಯ ಮೇಲೆ ದ್ವಿದಳ ಜಾತಿಯ ಸಸ್ಯಗಳನ್ನು ಬೆಳೆಯಿಸಿದರೆ, ಇವುಗಳಿಂದ ಭೂಮಿಯು ತನಗೆ ತಾನೆ ಕಸುವಿನದಾಗುತ್ತದೆ.

ಪುಕ್ಕಟೆ ದೊರೆಯುವ ಹಾಗೂ ಗೊಬ್ಬರದಂತೆ ಉಪಯೋಗವಾಗುವ ಅನೇಕ ನೈಸರ್ಗಿಕ ವಸ್ತುಗಳಿಗೆ 'ನೈಸರ್ಗಿಕ ಗೊಬ್ಬರ'ಗಳೆಂದು ಹೆಸರು. ಉದಾಹರಣೆಗಾಗಿ: ಮನುಷ್ಯರ ಹಾಗೂ ಪ್ರಾಣಿಗಳ ಮಲಮೂತ್ರಗಳು, ಕೊಳೆತ ಎಲುವುಗಳು ಪುಡಿ, ಒಣಗಿದ ರಕ್ತ ಮುಂತಾದುವುಗಳು. ಇವೆಲ್ಲವುಗಳಲ್ಲಿ ಸಾರಜನಕ, ರಂಜಕ ಮುಂತಾದ ಆಹಾರವಸ್ತುಗಳಿರುತ್ತವೆ. ಸಾಮಾನ್ಯವಾಗಿ ಈ ವಸ್ತುಗಳಲ್ಲಿ ಧಾನ್ಯಗಳ ತವುಡನ್ನು ಕೂಡಿಸುತ್ತಾರೆ. ಇದರಿಂದ ಇವು ಭೂಮಿಯೊಳಗೆ ಸುಲಭವಾಗಿ ಇಂಗಿಕೊಳ್ಳುತ್ತವೆ.

ಸಸ್ಯಗಳಿಗೆ ಬೇಕಾದ ಎಲ್ಲ ಆಹಾರವಸ್ತುಗಳು ನೈಸರ್ಗಿಕ ಗೊಬ್ಬರಗಳಲ್ಲಿ ಇರುತ್ತವೆ. ಆದರೆ ಕೆಲವು ಬೇಳೆ ಯಾವುದಾದರೊಂದು ವಿಶಿಷ್ಟ ಸಸ್ಯವನ್ನು ಬೆಳೆಯಿಸಬೇಕಾದರೆ, ವಿಶಿಷ್ಟ ಆಹಾರದ ಹೆಚ್ಚಿನ ಪ್ರಮಾಣವು ಅವಶ್ಯಕ. ಇಂತಹ ಪ್ರಸಂಗಗಳಲ್ಲಿ ಕೃತಕ ಗೊಬ್ಬರಗಳು ಉಪಯೋಗವಾಗುತ್ತವೆ. ಸಸ್ಯಗಳ ಬೆಳೆವಣಿಗೆಗೆ ಅನೇಕ ಮೂಲವಸ್ತುಗಳು ಆವಶ್ಯಕವೆಂದು ಮೊದಲೇ ತಿಳಿಸಿದೆ. ಇವುಗಳನ್ನು ಸಸ್ಯಗಳು ಮಣ್ಣಿನಿಂದಲೂ ಮತ್ತು ವಾಯುವಿನಿಂದಲೂ ಪಡೆಯುತ್ತವೆ. ಸಾಮಾನ್ಯವಾಗಿ ಮಣ್ಣಿನಲ್ಲಿ ಸಸ್ಯಗಳ ಬೆಳೆವಣಿಗೆಗೆ ಬೇಕಾದ ವಸ್ತುಗಳು ಸಾಕಾಷ್ಟು ಪ್ರಮಾಣದಲ್ಲಿರುವುದಿಲ್ಲ. ಹೀಗೆ ಕಡಿಮೆಯಾಗಿರುವ ಪದಾರ್ಥಗಳಲ್ಲಿ ಸಾರಜನಕ, ರಂಜಕ ಮತ್ತು ಪೊಟಾಸಿಯಂ ಈ ಮೂಲ ವಸ್ತುಗಳನ್ನೊಳಗೊಂಡ ಪದಾರ್ಥಗಳೇ ಮುಖ್ಯವಾದುವುಗಳು. ಇವು ಕೂಡಿಕೊಂಡಿದ್ದ ಮಣ್ಣಿಗೆ ಕಸುವಿನ ಮಣ್ಣೆಂದು ಹೆಸರು. ಭೂಮಿಯ ಕಸುವನ್ನು ಕಾಯ್ದುರಿಸುವುದಕ್ಕೂ ಮತ್ತು ಹೆಚ್ಚಿಸುವುದಕ್ಕೂ ಇನೇ ಮೂರು ವಸ್ತುಗಳು ಆವಶ್ಯಕ. ಒಂದು ಬೇಳೆ, ಮಣ್ಣಿನಲ್ಲಿ ಮೇಲೆ ತಿಳಿಸಿದ ಪದಾರ್ಥಗಳು ಕಡಮೆಯ ಪ್ರಮಾಣದಲ್ಲಿದ್ದು ಇದರಿಂದ ಹೆಚ್ಚು ಬೆಳೆ ಪಡೆಯಬೇಕಾದರೆ, ಕೆಲವೊಂದು ವಸ್ತುಗಳನ್ನು ಕೃತಕರೀತಿಯಿಂದ ತಯಾರಿಸಿ ಮಣ್ಣಿನಲ್ಲಿ ಸೇರಿಸಬೇಕಾಗುತ್ತದೆ. ಇಂತಹ ವಸ್ತುಗಳಿಗೆ 'ಕೃತಕ ಗೊಬ್ಬರ' ಅಥವಾ 'ರಾಸಾಯನಿಕ ಗೊಬ್ಬರ'ಗಳೆಂದು ಹೆಸರು. ಇವು ಭೂಮಿಯಲ್ಲಿ ಸೇರಿಕೊಂಡು ಅದನ್ನು ಫಲವತ್ತಾಗಿ ಮಾಡುತ್ತವೆ.

ಕೃತಕ ಗೊಬ್ಬರಗಳು ಒಟ್ಟು ಮೂರು ವಿಧದುವುಗಳಾಗಿವೆ!

೧. ಸಾರಜನಕಯುಕ್ತ ಗೊಬ್ಬರಗಳು.
೨. ರಂಜಕಯುಕ್ತ ಗೊಬ್ಬರಗಳು.
೩. ಪೊಟಾಸಿಯಂ ಗೊಬ್ಬರಗಳು.

ಸಾರಜನಕಯುಕ್ತ ಗೊಬ್ಬರಗಳು ಅನೇಕವಿವೆ. ಇವುಗಳಲ್ಲಿ ಚಿಲ್ಲಿಯ ಪೆಟ್ಟ್ಲಪ್ಪು, ಗಾಳಿಯ ಪೆಟ್ಟ್ಲಪ್ಪು, ಅಮೋನಿಯಂ ಸಲ್ಫೇಟು (Ammonium Sulphate) ಮುಖ್ಯವಾದುವುಗಳು. ಚಿಲ್ಲಿಯ ಪೆಟ್ಟ್ಲಪ್ಪು ಸಾಧಾರಣ ಪೆಟ್ಟ್ಲಪ್ಪಿನಂತೆ ಇರುತ್ತದೆ ಇದರ ರಾಸಾಯನಿಕ ಹೆಸರು 'ಸೋಡಿಯಂ ನೈಟ್ರೇಟ್' ಎಂದು. ದಕ್ಷಿಣ ಅಮೇರಿಕೆಯ ಚಿಲ್ಲಿ ಎಂಬ ಸ್ಥಾನದಲ್ಲಿ ಇದರ ದೊಡ್ಡ ದೊಡ್ಡ ಸಂಗ್ರಹಗಳು ಸಿಕ್ಕುತ್ತವೆ. ಇದು ಒಂದು ಲಘ್ವಾದ ಜಡವಸ್ತುವಾಗಿದ್ದು, ನೀರಿನಲ್ಲಿ ಬಹು ಬೇಗ ಕರಗುವಷ್ಟಲ್ಲದೆ ಗಾಳಿಯಿಂದ ತೇವವನ್ನು ಕೂಡ ಹೀರಿಕೊಳ್ಳುತ್ತವೆ.

ಗಾಳಿಯ ಪೆಟ್ಟ್ಲಪ್ಪು ಕೂಡ ಇದೇ ಪ್ರಕಾರದ ಒಂದು ಸಂಯುಕ್ತವಾಗಿದೆ. ಗಾಳಿಯಲ್ಲಿ ವಿದ್ಯುತ್ಕಣಗಳನ್ನು ಪ್ರವಹಿಸುವುದರಿಂದ ಸಾರಜನಕದ ಆಕ್ಸಾಯಿಡುಗಳು ಹುಟ್ಟುತ್ತವೆ. ಇವುಗಳನ್ನು ನೀರಿನಲ್ಲಿ ಕರಗಿಸಿ ಸಿದ್ಧಿಸಿದ ನೈಟ್ರಿಕ್ ಆಮ್ಲ (Nitric Acid)ದ ಮೇಲೆ ಸುಣ್ಣದ ಹರಳಿನ ಕ್ರಿಯೆಯಿಂದ ಕ್ಯಾಲ್ಸಿಯಂ ನೈಟ್ರೇಟ್ (Calcium Nitrate) ತಯಾರಿಸುತ್ತಾರೆ. ಈ ಸಂಯುಕ್ತವು ಸಾರಜನಕಯುಕ್ತ ಗೊಬ್ಬರಗಳಲ್ಲಿ ಉತ್ತಮ ತರದ ಗೊಬ್ಬರವೆಂದು ಎಣಿಸಲ್ಪಟ್ಟಿದೆ.

ಸಾರಜನಕಯುಕ್ತ ಗೊಬ್ಬರಗಳಲ್ಲಿ ಅಮೋನಿಯಂ ಸಲ್ಫೇಟು ಬಹಳೇ ಶ್ರೇಷ್ಠವಾದುದು ಇಲ್ಲಿಯ ಭೂಮಿಯನ್ನು ಕಸುವ್ರಗೊಳಿಸುವುದಕ್ಕೆ ಇದು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ. ಇದನ್ನು, ಗಾಳಿಯಲ್ಲಿಯ ಸಾರಜನಕದಿಂದ ಅಮೋನಿಯವಾತಯಾರಿಸಿ, ಅದರ ಮೇಲೆ ಗಂಧಕಾಮ್ಲದ ಕ್ರಿಯೆಯಿಂದಾಗಲಿ ಅಥವಾ ಕಲ್ಲಿದ್ದಲಿಯ ಅನಿಲಸನ್ನು ತಯಾರಿಸುವಾಗ ಉಪಜನ್ಯವಾಗುವ ಅಮೋನಿಯಾವುಳ್ಳ ನೀರಿನ ಮೇಲೆ ಗಂಧಕಾಮ್ಲದ ಕ್ರಿಯೆಯಿಂದಾಗಲಿ ತಯಾರಿಸುತ್ತಾರೆ ಇದೊಂದು ಜಡ ಸಂಯುಕ್ತವಾಗಿದ್ದು ನೀರಿನಲ್ಲಿ ಬಹು ಬೇಗ ಕರಗುತ್ತದೆ ಇದನ್ನು ಭೂಮಿಯಲ್ಲಿ ಸೇರಿಸುವುದರಿಂದ ಭೂಮಿಯಲ್ಲಿದ್ದ ಸುಣ್ಣದ ಮೇಲೆ ಇದರ

ಕ್ರಿಯೆಯಾಗಿ, ಕ್ಯಾಲ್ಸಿಯಂ ನೈಟ್ರೇಟ್ ತಯಾರಾಗುತ್ತದೆ. ಈ ತೆರನಾಗಿ ತಯಾರಾದ ಸಂಯುಕ್ತವನ್ನು ಸಸ್ಯಗಳು ಸುಲಭವಾಗಿ ಹೀರಿಕೊಳ್ಳಬಹುದಾಗಿದೆ.

ರಂಜಕಯುಕ್ತ ಗೊಬ್ಬರಗಳಲ್ಲಿ ಸುಪರ್‌ಫಾಸ್ಫೇಟ್ (Super Phosphate) ಎಂಬುದು ಮುಖ್ಯವಾದುದು. ಇದನ್ನು ಎಲುಬಿನ ಜಿನುಗಾದ ಪುಡಿಯ ಮೇಲೆ ಗಂಧಕಾಮ್ಲದ ಕ್ರಿಯೆಯಿಂದ ತಯಾರಿಸುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಸುಣ್ಣವಿದ್ದ ಭೂಮಿಗಳಿಗೆ ಇದು ಉತ್ತಮವಾದ ಗೊಬ್ಬರ. ಸುಣ್ಣವಿಲ್ಲದ ಭೂಮಿಗಳಿಗೆ ಎಲುಬಿನ ಪುಡಿಯನ್ನು ಗೊಬ್ಬರದಂತೆ ಉಪಯೋಗಿಸಬಹುದಾಗಿದೆ. ಎಲುಬಿನ ಪುಡಿಯಲ್ಲಿ ಸೇಕಡಾ ೬೦ ರಿಂದ ೭೦ ಭಾಗ ಕ್ಯಾಲ್ಸಿಯಂ ಫಾಸ್ಫೇಟು ಇರುತ್ತದೆ.

ಪೊಟಾಸಿಯಂ ಕಾರ್ಬೊನೇಟು, ಪೊಟಾಸಿಯಂ ಲೋಹದ ಒಂದು ಸಂಯುಕ್ತ. ಇದು ಸಸ್ಯಗಳ ಬೂದಿಯಲ್ಲಿ ಅಧಿಕವಾಗಿದ್ದು, ಇದನ್ನು ಗೊಬ್ಬರದಂತೆ ಉಪಯೋಗಿಸಬಹುದು. ಆದರೆ ಜರ್ಮನಿಯಲ್ಲಿ ಸ್ಟಾಸ್ ಫ್ಯೋರ್ಟ್ ಎಂಬ ಸ್ಥಳದಲ್ಲಿ ಈ ಲೋಹದ ಸಂಯುಕ್ತಗಳ ದೊಡ್ಡ ದೊಡ್ಡ ಸಂಗ್ರಹಗಳು ಸಿಕ್ಕಿರುತ್ತವೆ. ಇವುಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಪೊಟಾಸಿಯಂ ಕ್ಲೋರಾಯಿಡು ಮತ್ತು ಪೊಟಾಸಿಯಂ ಸಲ್ಫೇಟುಗಳನ್ನು ದೊರಕಿಸಿಕೊಳ್ಳುತ್ತಾರೆ. ಪೊಟಾಸಿಯಂ ಸಲ್ಫೇಟು, ಒಂದು ಶುಭ್ರವಾದ ಜಡ ವಸ್ತುವಾಗಿದೆ. ಇದರಲ್ಲಿ ಸುಮಾರು ಅರ್ಧಭಾಗ ಪೊಟಾಷ್ (Potash) ಇದ್ದು, ಉಳಿದೆಲ್ಲ ಭಾಗ ಗಂಧಕ ಮತ್ತು ಆಮ್ಲಜನಕದಿಂದ ಕೂಡಿದೆ. ಇದು ಜಿಪುಗುಮಣ್ಣಿಗೆ ಯೋಗ್ಯವಾದ ಗೊಬ್ಬರ. ಪೊಟಾಸಿಯಂ ಕ್ಲೋರಾಯಿಡು ಸಾಧಾರಣ ಉಪ್ಪಿನಂತಹ ಒಂದು ಜಡ ಸಂಯುಕ್ತವಾಗಿದ್ದು, ಉತ್ತಮತರದ ಗೊಬ್ಬರವಾಗಿದೆ. ಆದರೆ ಇದು ಪೊಟಾಸಿಯಂ ಸಲ್ಫೇಟ್‌ಗಿಂತ ಕಡಮೆಪರ್ಜಿಯದು.

ತರತರದ ಗೊಬ್ಬರಗಳಿಂದ ಸಸ್ಯಗಳಿಗೆ ತರತರದ ಲಾಭಗಳು ದೊರೆಯುತ್ತವೆ: ಸಾರಜನಕ ಯುಕ್ತ ಗೊಬ್ಬರಗಳಿಂದ ಸಸ್ಯಗಳ ಪೋಷಣೆಯಾಪತೆ, ಪೊಟಾಸಿಯಂನಿಂದ ಸಸ್ಯಗಳಲ್ಲಿ ಬಲಹೆಚ್ಚಾಗಿ, ಇದರಿಂದ ಇವುಗಳಲ್ಲಿ ಸ್ಟಾರ್ಚ್ ಮತ್ತು ಸಿಹಿಪಕರೆಗಳು (Starch and Carbo hydrates) ಹುಟ್ಟುವುದರಲ್ಲಿ ಸಹಾಯವಾಗುತ್ತದೆ. ರಂಜಕಯುಕ್ತ ಸಂಯುಕ್ತದಿಂದ ಸಸ್ಯವು ಕಾಣಿಸಿಕೊಂಡು, ಹೂ ಮತ್ತು ಬೀಜಗಳನ್ನು ಬಿಡುತ್ತದೆ. ಒಟ್ಟಿನ ಮೇಲೆ ಹೇಳಬೇಕಾದರೆ ಯಾವುದೇ ಒಂದು ಗೊಬ್ಬರವನ್ನು ಉಪಯೋಗಿಸದೆ ತರತರದ ಗೊಬ್ಬರಗಳ ಮಿಶ್ರಣವನ್ನು ಉಪಯೋಗಿಸುವುದು ಹೆಚ್ಚು ಲಾಭದಾಯಕ.

ಮೇಲೆ ತಿಳಿಸಿದ ಗೊಬ್ಬರಗಳಲ್ಲಿ ಅಮೋನಿಯಂ ಸಲ್ಫೇಟು ಮತ್ತು ಸುಪರ್ ಫಾಸ್ಫೇಟ್‌ಗಳು ಬಹಳೇ ಶ್ರೇಷ್ಠತರದ ಗೊಬ್ಬರಗಳೆಂದು ಎಣಿಸಲ್ಪಟ್ಟಿವೆ ಇಲ್ಲಿಯ ಭೂಮಿಗೆ ಇವು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿರುವುದರಿಂದ, ಇಲ್ಲಿಯ ಎಷ್ಟೋ ರಾಸಾಯನಿಕ ಕಾರ್ಖಾನೆಗಳಲ್ಲಿ ಇವುಗಳನ್ನು ತಯಾರಿಸುತ್ತಿದ್ದಾರೆ. ಇವುಗಳ ತಯಾರಿಯಲ್ಲಿ ಉಪಯೋಗಿಸಲ್ಪಡುವ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿರುವ ವಸ್ತುಗಳಲ್ಲಿ ಗಂಧಕಾಮ್ಲ (Sulphuric Acid)ವು ಬಹಳೇ ಮಹತ್ವವಾದ್ದಾಗಿದೆ. ಇದು ಇಲ್ಲದೆ ಮೇಲೆ ತಿಳಿಸಿದ ಗೊಬ್ಬರಗಳು ತಯಾರಾಗುವಂತಿಲ್ಲ. ಕಾರಣ ಇಲ್ಲಿ ಗಂಧಕಾಮ್ಲದ ವಿಷಯವಾಗಿ ಒಂದೆರಡು ಮಾತು ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ.

ಸದ್ಯ ಹಿಂದುಸ್ಥಾನದಲ್ಲಿ ಗಂಧಕಾಮ್ಲವು ಹೆಚ್ಚಿನ ಪ್ರಮಾಣದಲ್ಲಿ ಜಮಷೀದ್‌ಪುರ, ಕಲ್ಕತ್ತೆ, ಮೈಸೂರು, ಮದ್ರಾಸು, ಮುಂಬಯಿ, ಅಮೃತಸರ, ಆಗ್ರಾ, ಹೈದರಾಬಾದು ಮತ್ತು ಕಾನಪುರಗಳಲ್ಲಿ ತಯಾರಾಗುತ್ತದೆ ಮೈಸೂರು ಮತ್ತು ಟಾಟಾ ಕಾರ್ಖಾನೆಗಳಲ್ಲಿ ವರ್ಷಕ್ಕೆ ೩೫ ಸಾವಿರ ಟನ್ನಿನಷ್ಟು ಗಂಧಕಾಮ್ಲವು ತಯಾರಾಗುತ್ತದೆ. ಇದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಈ ಆಮ್ಲದ ಆವಶ್ಯಕತೆ ಇದ್ದ ಮೂಲಕ, ಪರದೇಶಗಳಿಂದ ಸುಮಾರು ೭೫ ಸಾವಿರ ಟನ್ನಿನಷ್ಟು ಗಂಧಕಾಮ್ಲವನ್ನು ಬರ ಮಾಡಿಕೊಳ್ಳಲಾಗುತ್ತದೆ. ಕೃತಕ ಗೊಬ್ಬರಗಳ ಜೀವಾಳವಾಗಿದ್ದ ಈ ಆಮ್ಲದ ಸಲುವಾಗಿ, ಹಿಂದುಸ್ಥಾನವು ಹೀಗೆ ಪರಾವಲಂಬಿಯಾಗಿದ್ದರೆ, ಇಲ್ಲಿಯ ಕ್ಷೇಶ್ರೋತ್ಪಾದನೆ ಪರಕೀಯರ ಸೂತ್ರದ ಕೈಗೊಂಬೆಯಾಗಬೇಕಾದೀತು. ನಮ್ಮ ಕಾರ್ಖಾನೆಗಳು ಇತ್ತ ಕಡೆಗೆ ಗಮನಕೊಡಬೇಕು. ಈಗಾಗಲೇ ನಡೆದ ಕೆಲಸದಿಂದ ಹಿಂದುಸ್ಥಾನವು ಕೆಲವೇ ದಿನಗಳಲ್ಲಿ ಸಂಪೂರ್ಣ ಸ್ವಾವಲಂಬಿಯಾಗುವ ಆಶಾಕಿರಣಗಳು ತಲೆದೋರುತ್ತಿವೆ.

ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಬೇಕಾದ ಕಚ್ಚಾವಸ್ತುಗಳಲ್ಲಿ ಪ್ರಕೃತಿದತ್ತವಾದ ಗಂಧಕ ಮತ್ತು ಆಯರ್ನ್-ಪೈರಿಟೀಜ್ ಮುಖ್ಯವಾದುವುಗಳು. ಇಲ್ಲಿಯವರೆಗೆ ಹಿಂದುಸ್ಥಾನದಲ್ಲಿ ಎರಡು ಕಡೆ ಆಯರ್ನ್ ಸಲ್ಫಾಯಿಡು (Iron Sulphide) ಹುಡುಕಿ ತೆಗೆದಿದ್ದಾರೆ. ಒಂದು ಸಿಮ್ಲಾದ ಹತ್ತಿರದಲ್ಲಿರುವ ತಾರಾದೇವಿ ಎಂಬ ಸ್ಥಳದಲ್ಲಿ; ಮತ್ತೊಂದು ಹೈದರಾಬಾದ ದಕ್ಷಿಣದಲ್ಲಿರುವ ತಾಂಡೂರು ಕಲ್ಲಿದ್ದಲಿಯ ಕಣಿಯಲ್ಲಿ. ಪ್ರಕೃತಿದತ್ತವಾದ ಗಂಧಕವು ಇಲ್ಲಿಯವರೆಗೆ ಕೇವಲ ಬಲುಚಿಸ್ತಾನ್ ಮತ್ತು ಸಿಮ್ಲಾದ ಗುಡ್ಡಗಳಲ್ಲಷ್ಟೆ ಸಿಕ್ಕಿರುತ್ತದೆ ಇಂದು ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಬಲುಚಿಸ್ತಾನದ ಗಂಧಕವನ್ನೇ ವಿಶೇಷವಾಗಿ ಉಪಯೋಗಿಸಹೆತ್ತಿದ್ದಾರೆ.

ಇತ್ತೀಚೆಗೆ ಕೆಲವೇ ವರ್ಷಗಳಿಂದ ಕೃತಕ ಗೊಬ್ಬರಗಳು ಉಪಯೋಗವಾಗುತ್ತಿದ್ದು, ಸಾಕಷ್ಟು ಫಲದಾಯಕವಾದುದು ನಿದರ್ಶನಕ್ಕೆ ಬಂದಿದೆ. ಸುಮಾರು ೩೦ ಲಕ್ಷ ಟನ್ನು ಗೊಬ್ಬರವನ್ನು ಹಿಂದುಸ್ಥಾನವು ಪ್ರತಿವರ್ಷ ಬಳಸಬಹುದೆಂದು ಅಂದಾಜು ಮಾಡಲಾಗುತ್ತದೆ. ಗೊಬ್ಬರವನ್ನು ತಯಾರಿಸುವ ಕಾರ್ಖಾನೆಗಳು ಇನ್ನೂ ಬೆಳೆಯುತ್ತಲಿವೆ. ಮೈಸೂರು ಸಂಸ್ಥಾನದ ಬೆಳಗೊಳದ ಕಾರ್ಖಾನೆಯಲ್ಲಿ ವರ್ಷಕ್ಕೆ ೭ ಸಾವಿರ ಟನ್ನು ಅಮೋನಿಯಂ ಸಲ್ಫೇಟು ತಯಾರಾಗುತ್ತದೆ. ತಿರುವಾಂಕೂರು

ಸಂಸ್ಥಾನದ ಅಲ್ವೇ (Alwaye) ಸ್ಥಳದಲ್ಲಿ ಎರಡೂಕಾಲು ಕೋಟಿ ಬಂಡವಾಳದ ವಿನಿಯೋಗದಿಂದ, ೫೦೦೦ ಟನ್ ಅಮೋನಿಯಂ ಸಲ್ಫೇಟು ಸಿದ್ಧಿಸುವ ಪ್ರಯತ್ನಗಳು ನಡೆದು, ಇದೇ ಜುಲೈ ೧೯೬೬ ರಿಂದ ಕಾರ್ಯ ಪ್ರಾರಂಭವಾಗಿದೆ. ರಂಜಕಯುಕ್ತ ಗೊಬ್ಬರಗಳಲ್ಲಿ 'ಸುಪರ್ ಫಾಸ್ಫೇಟ್' ಪ್ರೀಷ್ಮವಾದ ಗೊಬ್ಬರವಾಗಿದೆ. ಹಿಂದುಸ್ತಾನದಲ್ಲಿ ಫಾಸ್ಫೇಟ್ ಸಂಗ್ರಹಗಳು ಮುದ್ದೆಯ ರೂಪದಲ್ಲಿ ಟ್ರಿಚೀ (Trichy), ಮತ್ತು ಶಿಲೆಯ ರೂಪದಲ್ಲಿ ಬಿಹಾರ ಪ್ರಾಂತದ ಸಿಂಗಭೂಮ್ (Singbhum) ದಲ್ಲಿ ಸಿಕ್ಕೆರುತ್ತವೆ. ಇವು ನೀರಿನಲ್ಲಿ ಕರಗದ ಕಾರಣ, ಇವುಗಳ ಮೇಲೆ ಗಂಧಕಾಮ್ಲದ ಕ್ರಿಯೆಯಿಂದ ನೀರಿನಲ್ಲಿ ಸುಲಭವಾಗಿ ಕರಗುವ 'ಸುಪರ್ ಫಾಸ್ಫೇಟ್' ತಯಾರಿಸಬಹುದಾಗಿದೆ. ನಮಗೆ ತಿಳಿದಮಟ್ಟಿಗೆ ಮದ್ರಾಸಿನ ಪೆರ್ರಿ ಅಂಡ್ ಕಂಪನಿ ಮತ್ತು ಹೈದರಾಬಾದಿನ ಕೆಮಿಕಲ್ಸ್ ಅಂಡ್ ಫರ್ಟಿಲಾಯಿಜರ್ಸ್ ಕಾರ್ಖಾನೆಗಳನ್ನು ಬಿಟ್ಟರೆ, ಮತ್ತಾವ ಕಾರ್ಖಾನೆಯೂ ಈ ಗೊಬ್ಬರವನ್ನು ತಯಾರಿಸುವುದಿಲ್ಲ. ಪೆರ್ರಿ ಅಂಡ್ ಕಂಪನಿಯಿಂದ ವರ್ಷಕ್ಕೆ ೩ ಸಾವಿರ ಟನ್ನಿನಷ್ಟು ಸುಪರ್ ಫಾಸ್ಫೇಟು ತಯಾರಾಗುತ್ತದೆ. ಈ ಫಾಸ್ಫೇಟಿನ ಉತ್ಪಾದನೆಗಿಂತ ವ್ಯಯ ಹೆಚ್ಚಿದ್ದ ಮೂಲಕ, ಸುಮಾರು ೧೦ ಸಾವಿರ ಟನ್ನಿನಷ್ಟು ಪರದೇಶಗಳಿಂದ ಬರಮಾಡಿಕೊಳ್ಳಲಾಗುತ್ತದೆ.

ಮೇಲಿನ ವಿವರಣೆಗಳಿಂದ ನಮ್ಮಲ್ಲಿ ಗೊಬ್ಬರದ ಬೇಡಿಕೆಗೂ ಪೂರಯಿಕೆಗೂ ಇರುವ ಪ್ರಮಾಣ ಅಜಗಜಾಂತರ. ವ್ಯವಸಾಯದಿಂದ ಬಾಳುವ ಹಿಂದುಸ್ಥಾನದಲ್ಲಿ ವ್ಯವಸಾಯವನ್ನು ಬಾಳಸಲಿಕ್ಕೆ ನಮ್ಮ ಬಂಡವಾಳಗಾರರೂ, ಸರ್ಕಾರದವರೂ ತಮತಮಗೆ ಸಿಲುಕುವಷ್ಟು ಕೈಸೀಡಬೇಕು. ಗೊಬ್ಬರಗಳನ್ನು ಹುಟ್ಟಿಸಿ, ತಣ್ಣಗೆ ಕೈಮುಚ್ಚಿಕೊಂಡು ಕೂಳತರೂ ಆಗದು. ಏಕೆಂದರೆ ನಮ್ಮಲ್ಲಿಯ ರೈತರಿಗೆ ತಾವು ಬಳಸುವ ಗೊಬ್ಬರದ ಹೊರತು ಬೇರೆ ಗೊಬ್ಬರವೇ ಇಲ್ಲವೆಂದು ನಂಬುಗೆ; ಹೊಸ ಗೊಬ್ಬರಗಳನ್ನು ಉಪಯೋಗಿಸುವಲ್ಲಿ ಅವನಿಗೆ ಹೆದರಿಕೆ. ಅಥವಾ ಆಕ್ಷೇಪ. ಉತ್ಪಾದಿತ ಗೊಬ್ಬರಗಳ ಉಪಯೋಗ ಸರಿಯಾಗಿ ಆಗುವಂತೆ ನಾಲ್ಕಾರು ಹಳ್ಳಿಗೊಂದರಂತೆ ಮಾದರಿ ಸಾಲೆಯೊಂದನ್ನೂ ಪ್ರಯೋಗಕ್ಷೇತ್ರವೊಂದನ್ನೂ ತಯಾರಿಸಿ, ಆಯಾ ಕೃಷಿಜಾತೆಯವರು ಅವುಗಳ ಮಹತ್ತ್ವವನ್ನು ನಮ್ಮ ರೈತರ ಅನುಗಾಹನೆಗೆ ಬರುವಂತೆ ತಿಳಿಯಪಡಿಸಬೇಕು. ಅಂತೂ ಗೊಬ್ಬರದ ಉತ್ಪಾದನೆ ಮತ್ತು ಅದರ ಉಪಯೋಗ ಸರಿಯಾಗಿ ನಡೆದಲ್ಲಿ, ಆಹಾರದ ಬಗೆಗೆ ಈಗಿದ್ದ ಹಿಂದುಸ್ಥಾನದ ಪರಾವಲಂಬನೆ ದೂರವಾಗಿ, ತನ್ನ ಪ್ರಜೆಯ ಹೊಟ್ಟೆಯನ್ನು ತಾನೇ ತುಂಬಲು ಅದು ಶಕ್ತವಾಗುತ್ತದೆ.

(೧೯೬೫ನೆಯ ಪುಟದಿಂದ ಮುಂದೆಸಾಗಿದ್ದು)

ವನ್ನು ಗಳಿಸಿಕೊಳ್ಳದೆ ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಮಾತಾಡುವುದರಲ್ಲಿ ಅರ್ಥವಿಲ್ಲ. ಉದಾಹರಣೆಗಾಗಿ ಇಂದು ನಾವು ನಮ್ಮ ರೈತರ ಅಥವಾ ಔದ್ಯೋಗಿಕ ಕಾರಖಾನೆಯ ಕಾಮುಗಾರರ ರಾಜಕೀಯ ಸ್ವಾತಂತ್ರ್ಯದಲ್ಲಿ ಎಷ್ಟರ ಮಟ್ಟಿಗೆ ಹುರುಳಿದೆ ಎಂಬುದನ್ನು ನೋಡಬಹುದು. ಈ ಜನರಿಗೆ ಹುನಾವಣೆಗಳ ಮತಾಧಿಕಾರವೇನೋ ಇದೆ; ಆದರೆ ಅವರು ತಮಗೆ ಉದ್ಯೋಗ ಕೊಟ್ಟ ಧನಿಕರ ವಿರುದ್ಧ ಹೋಗಲಾಪರೇ? ಧನಿಕರ ವಿರುದ್ಧ ಉಸುರೆತ್ತಿದರೆ ಸಾಕು; ನೌಕರಿಗೇ ಜಕ್ಕ! ಹೊಟ್ಟೆಯ ಮೇಲೆ ಕಾಲು! ಹೀಗಿರುವಲ್ಲಿ ಅವರು 'ರಾಜಕೀಯ ಸ್ವಾತಂತ್ರ್ಯವಿದೆ' ಎಂದು ಹೇಳಿಕೊಳ್ಳುವುದು ಪಾಸಾಸ್ಯಪದವಲ್ಲವೇ? ಆದ್ದರಿಂದ ಇಂದು ನಾಗರಿಕ ಮಾನವತೆಯ ಮುಂದೆ ನಿಂತಿರುವ ಪ್ರಶ್ನೆ, ಕಳೆದುಕೊಂಡ ಸ್ವಾತಂತ್ರ್ಯವನ್ನು ಆರ್ಥಿಕಕ್ಷೇತ್ರದಲ್ಲಿ ಗಳಿಸಿಕೊಳ್ಳುವುದು. ಹಿಂದುಸ್ತಾನದ ಸಮಸ್ಯೆ ಇದಕ್ಕೆ ಮಿಕ್ಕಿದೆ. ಏಕೆಂದರೆ ನಮಗೆ ರಾಜಕೀಯ ಸ್ವಾತಂತ್ರ್ಯ ಪೂರ್ಣವಾಗಿ ಇಲ್ಲ! ಆದರೂ ಇಂದು ಆರ್ಥಿಕಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯಕ್ಕೆ ಹುರುಳಿಲ್ಲವೆಂದ ಮೇಲೆ, ನಮ್ಮ ದೇಶದ ಸಮಸ್ಯೆಯಾದರೂ ಕೊನೆಗೆ ಸುಸಂಸ್ಕೃತ ಮಾನವತೆಯ ಮುಂದೆ ನಿಂತಿರುವ ತೊಡಕಿನ ಅಂಗವಾಗಿಯೆ ಉಳಿಯುವುದು ಎಂಬುದು ತೀರ ಸಹಜ.

ಒಟ್ಟಿನ ಮೇಲೆ ಹೇಳಬೇಕಾದರೆ, ಇಂದು ಲೋಕದಲ್ಲಿ ಜನತೆಯ ಸ್ವಾತಂತ್ರ್ಯವನ್ನು ತಂದು ತೀಗಿ ಎರಡು ವರ್ಗಗಳು ಬೆಳೆದುಕೊಂಡಿವೆ:— ಶೋಷಿಸುವವರದೊಂದು ಶೋಷಣೆಗೆ ಒಳಗಾಗಿ ಇರುವವರದೊಂದು. ಈ ಹೃದಯದ ನಾಡಿಯು ಬಡಿತ ಎಲ್ಲಿ ನೋಡಿದರಲ್ಲಿ ಒಂದೇ ಸಮಾನ, ವಿಕ ಪ್ರಕಾರ. ಅದಕ್ಕೆ ದೇಶ-ವಿದೇಶವೆಂದಿಲ್ಲ, ಜಾತಿ-ಪರಜಾತಿಯೆಂದಿಲ್ಲ, ಬಿಳಿಯ ಕರಿಯ ವರ್ಣಗಳ ಭೇದವೂ ಇಲ್ಲ. ಪರತಂತ್ರ ಹಿಂದುಸ್ತಾನದಲ್ಲಿ ದೇಶಕ್ಕೆ ದೇಶವೇ ಶೋಷಣೆಗೆ ಒಳಗಾದ ವರ್ಗವಾಗಿರಬಹುದು; ಆದರೆ ಸ್ವತಂತ್ರವೆಂದುಕೊಳ್ಳುವ ಇಂಗ್ಲೆಂಡ್ ಅಮೇರಿಕೆಗಳಲ್ಲೂ ಇದೇ ಪ್ರಕಾರ ದೇಶೀಯ ಜನರೇ ದೇಶೀಯರನ್ನು ಶೋಷಿಸುವರು. ಉಳ್ಳವರ ವರ್ಗ ಪಾಗೂ ದಲಿತರ ವರ್ಗ ಎಲ್ಲೆಡೆಯಲ್ಲಿಯೂ ಒಂದೇ. 'ದೇದಿವ್ಯಮಾನ ದೀಪನಾಲೆಯು ಭುವನದೆದುರಿನಲ್ಲಿ ಕಡುಗತ್ತಲು ತುಂಬಿದ ಗುಡಿಸಿಲು; ತಂದು ತೇಗಿದ ತುಂಬುಜೀವನದದುರು ಬರಿಹೊಟ್ಟೆಯ ಬಡಕಲು ಜೀವ; ಅಸದೃಶ ಸುಖಸಂತೋಷಡಡೆಯಲ್ಲಿ ಅಸಹ್ಯ ಸಾವು ನೋವು'— ಇವು ಹಿಂದುಸ್ತಾನದ ಸೊತ್ತಷ್ಟೇ ಅಲ್ಲ; ಇಂದಿನ ಎಲ್ಲ ನಾಗರಿಕ ರಾಷ್ಟ್ರಗಳಲ್ಲಿಯೂ ಇವೆ. ಆದರೆ ಇನ್ನೂ ಎಷ್ಟು ಕಾಲವಿರಬೇಕು ಈ ವೈಪರೀತ್ಯ? ಈ ಪ್ರಶ್ನೆಗಳೇ ಇಂದು ಮಾನವಕೋಟಿಯ ಸ್ವಾತಂತ್ರ್ಯದ ಮುಂದೆ ಎದ್ದು ನಿಂತಿವೆ. ಹಾಗೂ ಅವುಗಳನ್ನು ಎದುರಿಸುವುದರಲ್ಲಿಯೆ ಇಂದು ಸುಸಂಸ್ಕೃತ ಸಮಾಜದ ಸ್ವಾತಂತ್ರ್ಯ ಸಂಗ್ರಾಮ ಅಡಗಿರುತ್ತದೆ.

ಸಪ್ಟಂಬರ್ ೧೯೬೬



ನಿಸರ್ಗ

(ಕಾದಂಬರಿ)

ಲೇಖಕರು : ಕೆ. ಶಿವರಾಮಯ್ಯ, ಧಾರವಾಡ

ಪ್ರಕಾಶಕರು : ಸ್ವಂತ ಪ್ರಕಾಶನ

ಬೆಲೆ ೩-೦-೦.

ಈ ಹೊಸ ಸ್ವತಂತ್ರ ಕಾದಂಬರಿಯ ಲೇಖಕರಾದ ಶ್ರೀ ಶಿವರಾಮಯ್ಯನವರು, ಕನ್ನಡ ವಾಚಕರಿಗೆ ಅಪರಿಚಿತರೇನೂ ಅಲ್ಲ. ಬೇರೆ ಬೇರೆ ನಿಯತಕಾಲಿಕಗಳಲ್ಲಿ ಪ್ರಕಟವಾಗಿರುವ ಅವರ ವಿವಿಧ ವಿಷಯಕ ಲೇಖನಗಳನ್ನು ಓದಿದವರು ಬಹುಜನರಿರಬಹುದು. ಪ್ರಸ್ತುತ ಕಾದಂಬರಿಯನ್ನು ಬರೆದು, ಕನ್ನಡ ಆಧುನಿಕ ಸಾಹಿತ್ಯ ಕೋವಿಗೆ ಒಂದು ಹೊಸ ಹೂಮಾಲೆಯನ್ನೆ ಇವರು ಅರ್ಪಿಸಿದ್ದಾರೆಂದು ಹೇಳಬಹುದು.

ವ್ಯಾ. ರಂ. ಶ್ರೀ. ಮುಗುಳಿಯನವರು ವಿಮರ್ಶಾತ್ಮಕವಾದ ಮುನ್ನುಡಿಯನ್ನು ಬರೆದಿದ್ದು ' ಬೆಳಗಾಂವಿ ಜಿಲ್ಲೆಯ ಉತ್ತರ ತುದಿಯಲ್ಲಿರುವ ಹಳ್ಳಿಗಳಲ್ಲಿಯ ಜನಜೀವನ—ಅದರಲ್ಲಿಯೂ ಜೈನ ಸಮಾಜದ ಚಿತ್ರ—ಈ ಕಾದಂಬರಿಯಲ್ಲಿ ಮೊದಲನೆಯ ಸಲ ಬಂದದ್ದು ಇದರ ದೊಡ್ಡಿನ ವೈಶಿಷ್ಟ್ಯವಾಗಿದೆ' ಎಂದು ಹೇಳಿ, ಕಾದಂಬರಿಯ ವಿಶೇಷ ಗುಣಗಳನ್ನೂ ತೋರಿಸಿ ಮಾತಿನಿಂದ ಎತ್ತಿ ವಿವೇಚಿಸಿರುವರು ' ಈ ಕಾದಂಬರಿಯ ಸಂಪಾದಿಲಿ ಸುಲಭವಾಗಿ ಅರ್ಥವಾಗುವಂತಿಲ್ಲ' ಎಂದು, ಉತ್ತರ ಕರ್ನಾಟಕದ ಉತ್ತರದ ತುದಿಯಲ್ಲಿರುವ ಜೈನಸಮಾಜದವರಾಡುವ ಮಾತಿನ ವೈಶಿಷ್ಟ್ಯಗಳನ್ನು ಸೋದಾಹರಣವಾಗಿ ವಿವರಿಸಿ, ಎಲ್ಲಿ ಕಡೆಯ ವಾಚಕರಿಗೂ ಇದರ ಜಾನಪದ ಭಾಷೆ ತಿಳಿಯುವಂತೆ ಪವಣಿಸಿರುವರು.

ಈ ಕಾದಂಬರಿ ಸ್ವತಂತ್ರವಾಗಿ ಈಗಾಗಲೆ ೭-೮ ತಿಂಗಳುಗಳಾಗಿವೆ. ವಾಚಕರ ಅಭಿಪ್ರಾಯಗಳನ್ನು ಕೇಳಿದರೆ, ಕೆಲವು ಜನರು ಇದನ್ನು ತುಂಬಾ ಹೊಗಳುವರು; ಇನ್ನು ಕೆಲವು ಜನರು ' ಇದೆಂತಹ ಕಾದಂಬರಿ? ೨೦-೦ ಪುಟಗಳನ್ನು ಓದುವಷ್ಟರಲ್ಲಿಯೆ ನಮ್ಮ ತಾಳ್ಮೆ ತೀರಿಹೋಯಿತು' ಎಂದು ಹೇಳುವರು. ಒಂದೆ ಕಾದಂಬರಿಯ ಬಗೆಗೆ ಇಷ್ಟೊಂದು ದಟ್ಟಿಕೋತ್ತರ ಭೇದ ಇಂತಹ ಅಭಿಪ್ರಾಯಭೇದಗಳೂ ಒಂದು ಈ ಕಾದಂಬರಿಯ ವೈಶಿಷ್ಟ್ಯವೆಂದು ಹೇಳಬಹುದು.

ಮಧ್ಯಮ ತರಗತಿಯ ಇಲ್ಲವೆ ಮೇಲಣ ತರಗತಿಯ ಜನರ ಜೀವನವನ್ನೇ ಚಿತ್ರಿಸಿದ ಇದುವರೆಗಿನ ನಮ್ಮ ಕಾದಂಬರಿಗಳನ್ನು ಓದಿ ಅಭ್ಯಾಸವಾಗಿದ್ದ ನಮ್ಮ ಬಹುಜನ ವಾಚಕರಿಗೆ, ಜಾನಪದ ವೈಲಕ್ಷಣ್ಯಗಳಿಂದ ತುಂಬಿರುವ ಮಾತನ್ನಾಡುತ್ತ ಬರುವ ಇದರಲ್ಲಿಯ ಹಳ್ಳಿಗರ ಪಾತ್ರಗಳು ಮನಸ್ಸನ್ನು ಹಿಡಿಯಬೆ ಹೋಗುವುದು ಅಸ್ವಾಭಾವಿಕವೇನೂ ಅಲ್ಲ. ಕಾದಂಬರಿಯ ಪಾತ್ರಗಳೊಂದಿಗೆ ಸಹಾನುಭೂತಿಯಿಂದ ಸಮರಸರಾಗದೆ ಹೋದಲ್ಲಿ, ಆ ಕೃತಿಯಲ್ಲಿಯ ರಸ-ಭಾವಗಳ ಪರಿಣಾಮ ಸ್ವಲ್ಪವೂ ಆಗಲಾರದು. ' ಇದೇನು? ಹಳ್ಳಿಯ ಹೆಂಬ ಲೈಕರಿನವರು; ಅಜ್ಞಾನಿಗಳು; ಅಸಂಸ್ಕೃತರು. ಆಹಾರ-ನಿದ್ರಾ-ಭಯ-ಮೈಥುನಗಳ ಅರಿವು ಮಾತ್ರವಿದ್ದ ಮಾನವ ಪಶುಗಳು, ಇವರಿಗೆ ಪ್ರೇಮವೇನು ಗೊತ್ತು! ಗೆಳೆತನವೇನು ಗೊತ್ತು? ಸುಖ-ದುಃಖಗಳ ಬೆಲೆಯನ್ನೇನು ಬಲ್ಲರು?' ಎಂಬ ತಿರಸ್ಕಾರದ ಧೋರಣೆಯಿಂದ ಓದಲು ತೊಡಗಿದವರಿಗೆ ಈ ಕಾದಂಬರಿಯಲ್ಲಿ ಬಿಡಿಯೆ ತೋರದು. ' ಆದರೆ ಮಾನವನ ಮೂಲಭೂತ ಆಶೆ-ಆಕಾಂಕ್ಷೆಗಳೂ ಸೊತ್ತು-ಗುರಿಗಳೂ ಎಲ್ಲೆಯೂ ಯಾವಾಗಲೂ ಒಂದೆ ಬಗೆಯಾಗಿರುವುವು' ಎಂಬ ತತ್ತ್ವವನ್ನರಿತು, ಸಹಾನುಭೂತಿಯಿಂದ ಓದಲು ತೊಡಗಿದರೆ, ಇಲ್ಲಿಯ ಜಾನಪದ ಭಾಷೆ ನಮ್ಮ ಹೃದಯದ ಭಾಷೆಯಾಗುವುದು; ಇದರಲ್ಲಿ ಬರುವ ಪಾತ್ರಗಳೊಂದಿಗೆ ನಮಗೂ ಸಮರಸರಾಗಲಿಕ್ಕೆ ಬರುವುದು. ಆಗ ಈ ಕಾದಂಬರಿಯು ಸವಿ ಗೊತ್ತಾಗುವುದು,

' ನಿಸರ್ಗ ' ಮನೋವಿಶ್ಲೇಷಣಾತ್ಮಕ ಕಾದಂಬರಿ. ಇಂತಹ ಕೃತಿಗಳಲ್ಲಿ ಪಾತ್ರಪರಿಪೋಷಣೆಗೆ ಹೆಚ್ಚಿನ ಸ್ಥಾನವಿರುವುದಲ್ಲದೆ ಘಟನಾ ಜಂಜಾಟಕ್ಕೆ ಕೃತಿಗಳಲ್ಲ. ತಾರಾ ಎಂಬವಳು ಈ ಕತೆಯ ನಾಯಿಕೆ. ಅವಳ ಮದುವೆಯಿಂದ ಪ್ರಾರಂಭವಾಗಿದ್ದ ಈ ಕಾದಂಬರಿ, ಅವಳ ಸ್ವರ್ಗಾರೋಹಣಯಾತ್ರೆಯಲ್ಲಿ ಕೊನೆಗೊಳ್ಳುತ್ತದೆ. ನಾಯಿಕೆಯ ೧೧ ನೆಯ ವರ್ಷದ ವಯಸ್ಸಿನಿಂದ ಸುಮಾರು ೫೦ ನೆಯ ವಯಸ್ಸಿನ ವರೆಗಿನ ೦ ವರ್ಷದ ವಿಶಾಲವಾದ ಅವಧಿಯಲ್ಲಿ ನಡೆದ ಬೇರೆ ಬೇರೆ ಘಟನೆಗಳು ಇದರಲ್ಲಿ ಪೋಣಿಕೆಗೊಂಡಿವೆ. ಸ್ಥಳ ಬೆಳಗಾಂವಿ ಜಿಲ್ಲೆಯ ಉತ್ತರ ತುದಿಯಲ್ಲಿ ಕೃಷ್ಣಾನದಿಯ ತೀರದಲ್ಲಿರುವ ನಾಲ್ಕಾರು ಹಳ್ಳಿಗಳು. ಬರುವ ಮುಖ್ಯ ಪಾತ್ರಗಳೆಲ್ಲ ಜೈನಾಯರೇ ಪ್ರಧಾನ ವ್ಯವಸಾಯವಾಗಿದ್ದ—ಜೈನಧರ್ಮಾನುಯಾಯಿ ಹಳ್ಳಿಗರವು ಕಾದಂಬರಿಯ ಹೆಚ್ಚಿನ ಭಾಗ ಸಂವಾದದಲ್ಲಿಯೆ ಬೆಳೆದಿರುವುದರಿಂದ— ಪಾತ್ರೋಚಿತ ಭಾಷೆಯಲ್ಲಿಯೆ ಸಂವಾದಗಳನ್ನು ಬಳಿಯಿಸಿರುವುದರಿಂದ— ಹಳ್ಳಿಗರ ಮಾತಿನಲ್ಲಿಯೆ ಈ ಕೃತಿ ಮುಂದುವರಿದಂತಾಗಿದೆ.

ಚಂದೂರಿನಲ್ಲಿ ಮಗದುಮ ರ ಮಲ್ಲಪ್ಪ ಒಬ್ಬ ಒಕ್ಕಲಿಗ. ಅವನ ಪೆಂಡತಿ ಚಿತ್ತವ್ವ. ಇವರಿಗೆ ತಾರಾ ಒಬ್ಬಳೆ ಒಬ್ಬಳು ಮಗಳು. ಮಲ್ಲಪ್ಪನ ತಂಗಿ ಚಿಪ್ಪವ್ವ. ಅವಳು ಅದೇ ಊರಿನ ಜೈನರ ಹೂವಣ್ಣನ ಹೆಂಡತಿ. ಇವರಿಗೆ ಭರಮ ಎಂಬೊಬ್ಬ ಗಂಡುಮಗ; ತಾರೆಗಿಂತ ಒಂದೆರಡು ವರ್ಷಕ್ಕೆ ಹಿರಿಯ. ಭರಮನಿಗೆ ತಾರೆಯನ್ನು

ಕೊಟ್ಟು ಲಗ್ನವಾಗುವುದು. ಈ ಲಗ್ನಕ್ಕೆ ತಾರೆಯ ಸೋದರ-ಮಾವನ ಮಗ, ತನ್ನ ತಾಯಿ ಸುಂದರವ್ವನೊಂದಿಗೆ ಬಂದಿರುವ. ಈ ಹುಡುಗನ ಹೆಸರು ಅನಂತ. ಸುಮಾರು ಎಂಟು ವರ್ಷದ ವಯಸ್ಸು. ತಾರೆ ಅವನನ್ನು ತುಂಬ ಪ್ರೀತಿಸುವಳು. ಅನಂತನ ತಂದೆ ರಾಮಪ್ಪ ಏನಾಪುರದಲ್ಲಿ ಕಿರಾಣಿ ಅಂಗಡಿ ಹಾಕಿಕೊಂಡು ಇರುವನು. ತಾರಾ ದೊಡ್ಡವಳಾಗಿ ಅತ್ತೆಯ ಮನೆಗೆ ಹೋಗಲು, ದುಷ್ಟ ಅತ್ತೆ ಚಿಮ್ಮವ್ವ ಅವಳನ್ನು ಪರಿಪರಿಯಿಂದ ಕಾಡುವಳು. ಗಂಡನೊಂದಿಗೆ ಸಂಸಾರವನ್ನೂ ಮಾಡಗೊಡಲಿಲ್ಲ. ಈ ಅವಧಿಯಲ್ಲಿ ಅನಂತ ಆಗಾಗ ಚಂದೂರಿಗೆ ಬರುತ್ತಿರುವ. ಜೊತೆಯನೂ ಶಾಲೆಗೆ ಹೋಗುವವನೂ ಸೋದರ ಮಾವನ ಮಗನೂ ಆದುದರಿಂದ, ತಾರೆಯಲ್ಲಿ ಅನಂತನ ವಿಷಯಕವಾದ ಆತ್ಮೀಯತೆ ಬೆಳೆಯುತ್ತಿರುವುದು. ಅನಂತನೂ ಅವಳನ್ನು ಪ್ರೀತಿಸುವನು. ಚಿಮ್ಮವ್ವತ್ತೆಯ ದುಷ್ಟತನದ ಅತಿರೇಕ, ತಾರೆಯ ಬಾಳುವೆಯನ್ನೇ ಹಾಳು-ಮಾಡುವುದು. ಈ ಅವಧಿಯಲ್ಲಿ ಊರ ಜಾತ್ರೆಗೆಂದು ತಾರೆ ತವರ ಮನೆಗೆ ಬಂದಿದ್ದಳು; ಅನಂತನೂ ಏನಾಪುರದಿಂದ ಅಲ್ಲಿಗೆ ಬಂದಿದ್ದ. ಪ್ರಾಯಪೂರ್ಣ ತಾರೆಯನ್ನು ಕಲಿತ ಅನಂತನ ರಸಿಕ ಜೀವನ ತುಂಬ ಆಕರ್ಷಿಸುವುದು. ಇದುವರೆಗಿನ ಅವಳ—ಇದ್ದೂ ಇಲ್ಲದಂತಹ ಗಂಡನೊಡನಿರುವ—ವಿರಹ ಜೀವನವು, ಈ ಆಕರ್ಷಣೆಗೆ ಪುಟಕೊಡುವುದು. ಏಕಾಂತದ ಸಂಧಿಯೊಂದು ಕೂಡಿಬಂದಾಗ, ಅನಂತ-ತಾರೆಯರಲ್ಲಿ ತೀರ ಹತ್ತಿರದ ಸಂಬಂಧವೊದಗುವುದು. ಅಂದಿನಿಂದ ತಾರೆಯ ಹೃದಯದಲ್ಲಿ ಅನಂತ, ಅನಂತನ ಹೃದಯದಲ್ಲಿ ತಾರೆ ಶಾಶ್ವತ ಪ್ರಣಯಮೂರ್ತಿಗಳಾಗಿ ಆಚ್ಛೊತ್ತಿ ನಿಲ್ಲುವರು.

ಅನಂತನ ಮದುವೆ ಅವನ ೭ನೆಯ ವರ್ಷದಲ್ಲಿಯೆ ಅತನ ಸೋದರಮಾವನ ಮಗಳು ಇಂದಿರೆಯೊಂದಿಗೆ ಆಗಿರುವುದು. ಹುಡುಗಿ ಕುರೂಪಿಯೆಂದು ಮೊದಲಿನಿಂದಲೂ ಅನಂತನಿಗೆ ಅವಳಲ್ಲಿ ತಿರಸ್ಕಾರ. ಈಗ ತಾರೆಯಂತಹ ಸುಂದರ ತರುಣಿಯ ಸಂಯೋಗ ಒದಗಿತು. ಅವಳ ಪ್ರೀತಿಯ ಮಾಧುರ್ಯದ ರುಚಿ ಅವನನ್ನು ಮುಗ್ಧನನ್ನಾಗಿಸಿತು.

ಜೊಗುಲೆ ಹೂವಣ್ಣ ಸತ್ತುಹೋದ. ಗಂಡ ಸತ್ತರೂ ಚಿಮ್ಮವ್ವನ ದುಷ್ಟತನ ಕಡಿಮೆಯಾಗಲಿಲ್ಲ. ಭರಮನಿಗೆ ಬೇಕಾಗಿದ್ದರೂ ತಾರೆಯೊಂದಿಗೆ ಅವನನ್ನು ಬಾಳುವೆ ಮಾಡಗೊಡಲಿಲ್ಲ. ತಾರೆಯನ್ನು ಬಿಟ್ಟುಬಿಡಿಸಿ, ಬೇರೆಯ ಹೆಣ್ಣುತಂದು ಮದುವೆ ಮಾಡಿದಳು.

ತಾರಾನ ಉಡಿಕೆಯ ವಿಚಾರ ನಡೆಯಿತು. ಹಾರೋಗೇರಿಯ ಸೇತ ಅಪ್ಪಣ್ಣನಿಗೆ ಉಡಿಕೆ ಮಾಡಿಕೊಡುವುದಾಗಿ ನಿಶ್ಚಯವಾಯಿತು. ಇದು ಅನಂತ-ತಾರೆಯರಿಬ್ಬರಿಗೂ ಬೇಕಾಗಿರಲಿಲ್ಲ. ನಿಶ್ಚಣಕ್ಕೆ ಬಂದ ಅನಂತನನ್ನು ತಾರೆ ಏಕಾಂತದಲ್ಲಿ ಕಂಡು, 'ನಾನು ನೀನು ಕೂಡಿ ಎಲ್ಲಿಗಾದರೂ ಹೋಗಿ ಬಿಡೋಣ ನಡೆ' ಎನ್ನುವಳು. ಅನಂತನ ಅಧೈರ್ಯ ಸಮ್ಮತಿಸಗೊಡಲಿಲ್ಲವಾದುದರಿಂದ, ಉಡಿಕೆಯ ಕಾರ್ಯ ನಡೆದು, ತಾರೆ ಅಪ್ಪಣ್ಣನ ಹೆಂಡತಿಯಾದಳು.

ಅಪ್ಪಣ್ಣ ಒಳ್ಳೆಯವನಾದರೂ, ಮೊದಲ ಹೆಂಡತಿಯು ಅನೀತಿ ಜೀವನದ ಮೂರ್ತಿಯೊಂದವನಾಗಿ, ಬಲುದಿನ ಬೇರೆ ಮದುವೆ ಮಾಡಿಕೊಳ್ಳದೆ ಬಾಳಬೇಕಾಗಿ ಬಂದುದರಿಂದ, ಆ ಅವಧಿಯಲ್ಲಿ ಅವಿವೇಕದ ಬೆನ್ನು ಹತ್ತಿದ್ದ. 'ಅರೇರ ಸೋನಾ' ಎಂಬ ವ್ಯಭಿಚಾರಿಣಿಯೊಂದಿಗೆ ಸಂಬಂಧ ಬಳೆಯಿಸಿ, ತನ್ನ ಪ್ರಕೃತಿಯನ್ನು ರೋಗಕ್ಕೆ ಆಸ್ಪದ ಮಾಡಿಕೊಟ್ಟಿದ್ದ. ಅವನ ರೋಗ ತಾರೆಯ ಬಾಳಿನಲ್ಲಿ ವಿಷ ಬೆರಸಿತು. ಇದ್ದುದರಲ್ಲಿ ಸುಖ ಹೆಚ್ಚಿಕೊಂಡು ಇರಬೇಕೆಂದು ಅವಳೆಷ್ಟು ಹವಣಿಸಿದರೂ, ರೋಗ ಹಾಗೆ ಅವಳನ್ನು ಇರಗೊಡಿಸಲಿಲ್ಲ.

ಅನಂತನಿಗೆ ಬೇಡವಾದ ಹೆಂಡತಿಯೊಂದಿಗೆ ಬಾಳಬೇಕಾಗಿ ಬಂದಿತು. ಆಗಿನ ಅವನ ಜುರುಕುಹತ್ತಿದಂತಹ ಮನಸ್ಸು-ನಿನು ಮಾಡಿದರೆ ಸಮಾಧಾನವಾದೀತೆಂಬುದನ್ನು ತಿಳಿಯದೆ—ಸ್ವಲ್ಪ ದೂರುಕಿತು. ಭಂಗಾರಿ ಎಂಬ ಹುಡುಗಿಯ ಜೊತೆಗೆ ಬಿದ್ದು, ಊರಲ್ಲಿ ಇರಲಾರದೆ ಮಿರ್ಜಿ-ಕೊಲ್ಲಾಪುರಗಳ ಕಡೆಗೆ ಅವಳನ್ನಿರಿಸಿ, ಆ ವೆಚ್ಚವನ್ನೆಲ್ಲ ವಹಿಸಿಕೊಳ್ಳಬೇಕಾಯಿತು. ತಮ್ಮ-ತಾಯಿಗಳಿಂದ ಬೇರೆಯಾದ. ತನ್ನ ಪಾಲಿಗೆ ಬಂದುದನ್ನೆಲ್ಲ ಕಳೆದುಕೊಂಡು ಕಂಗಾಲಾದ. ಎರಡು ಮಕ್ಕಳು, ಹೆಂಡತಿ ಇವರನ್ನೂ ದೆಸೆಗೇಡಿಗಳನ್ನಾಗಿ ಮಾಡಿದ. ಇಂತಹದರಲ್ಲಿ ಕ್ಷಯ ರೋಗವೊಂದು ಗಂಟು ಬಿದ್ದಿತು. ಗಂಡನ ರೋಗದ ಪರಿಣಾಮ ಹೆಂಡತಿಯ ಮೇಲೂ ಆಗಿ ಅವಳೂ ಹಾಸಿಗೆ ಹಿಡಿಯುವಳು. ತವರಮನೆಯವರು ಬಂದು ಎಲ್ಲರನ್ನೂ ಕರೆದುಕೊಂಡು ಹೋಗುವರು. ಅಲ್ಲಿ ಅತ್ತೆಮನೆಯವರ ತಿರಸ್ಕಾರಕ್ಕೆ ಬೇಸತ್ತು ಅನಂತ ಮನೆಬಿಟ್ಟು ಎಲ್ಲಿಗೋ ಹೋಗಿಬಿಡುವನು.

ತಾರೆ ಅಂತಹ ರೋಗದಲ್ಲಿಯೆ ಬಸಿರಾಗುವಳು. ಮೂರು-ನಾಲ್ಕು ತಿಂಗಳು ಆದಾಗ, ಅನಂತನ ಕರುಣಕಥೆಯನ್ನು ಕೇಳಬೇಕಾದ ಸಂದರ್ಭವೊದಗಿ, ಕಣ್ಣಿಗೆ ಬವಳಿ ಬಂದು ಬೀಳುವಳು. ಬಿದ್ದ ಪೆಟ್ಟು ತಗುಲಿ ಗರ್ಭಪಾತವಾಗುವುದು. ತಾರೆಯ ಆರೋಗ್ಯತೆ ಇನ್ನಿಷ್ಟು ಹೆಚ್ಚುವುದು. ಈ ಅಶಕ್ತತೆಯಲ್ಲಿಯೆ ಅಪಥ್ಯವಾಗಿ ಜ್ವರ ತಲೆದೋರುವುದು. ಕಾಮುಕ ಪಶು ಅಪ್ಪಣ್ಣನ ಬಲಾತ್ಕಾರದ ಮೂಲಕ, ಜ್ವರ ವಿಷಮ ಪರಿಸ್ಥಿತಿಗೆ ಹೋಗುವುದು. ಅನಂತನನ್ನು ಕಾಣಬೇಕೆಂದು ತಾರೆ ಆಗಾಗ ಅಪೇಕ್ಷಿಸುತ್ತಿದ್ದುದರಿಂದ, ತಾರೆಯ ಗಂಡ, ತಾಯಿ, ತಂದೆ ಕೂಡಿ ಅನಂತನೆಲ್ಲಿರುವನೆಂಬುದನ್ನು ಗೊತ್ತುಪಡಿಸಿ ಹೇಳಿ ಕಳುಹಿಸುವರು.

ಮಿರಜಿಯ ಆಸ್ಪತ್ರೆಯಲ್ಲಿ ಅನಂತ ಮಲಗಿದ್ದ. ಡಾಕ್ಟರು ಬೇಡವೆಂದು ಎಷ್ಟು ಹೇಳಿದರೂ ಕೇಳದೆ, ಕಾರಿನಲ್ಲಿ ತಾರೆಯಿದ್ದ ಚಂದೂರಿಗೆ ಹೊರಟ. ಅವನು ಆಲ್ಲಿಗೆ ಬರುವುದರಲ್ಲಿಯೆ ತಾರೆ ಸತ್ತುಹೋಗಿದ್ದಳು. ಶವವನ್ನು ಸ್ಮಶಾನಕ್ಕೆ ಸಾಗಿಸಿ ಚಿತೆಯ ಮೇಲೆ ಇರಿಸಿದ್ದರು ದುಃಖಾವಿಷ್ಟನಾದ ಅನಂತ, ತನ್ನ ಪ್ರಕೃತಿಯ

ತಿರುವಿಲ್ಲದೆ ಸ್ಮಶಾನಕ್ಕೆ ಓಡಿ ಓಡಿ ಹೋದ. ಬಾಯಿಂದ ನೆತ್ತರು ಸುರಿಯತೊಡಗಿತ್ತು. ಆನೇಶದಲ್ಲಿ ಚಿತೆಯ ಬಳಿ ಹೋಗಿ ಬಿದ್ದ. ಬಿದ್ದವನು ಮರಳಿ ಏಳಲಿಲ್ಲ. ಈ ನಿಷಾದ ಪೂರ್ಣ ಘೋಟಪೊಂದಿಗೆ ಕಾದಂಬರಿ ಕೊನೆಗೊಂಡಿದೆ.

ಕಥಾನಕ, ಜೀವಂತಭಾಷೆ, ಕಾದಂಬರಿಯ ತಂತ್ರ, ಅನುಭವದ ಚಿತ್ರ ಇವೆಲ್ಲವುಗಳ ದೃಷ್ಟಿಯಿಂದ ಕಾದಂಬರಿ ಸಂಪೂರ್ಣ ಸುಂದರವಾಗಿದ್ದು ಸಮಗ್ರಕೃತಿ ತುಂಬ ಪರಿಣಾಮಕಾರಿಯಾಗಿದೆ. ತಾರೆಯ ತಾಯಿ ರತ್ನಮ್ಮ, ಅತ್ತೆ ಚಿಮ್ಮಮ್ಮ, ಊರಲ್ಲಿಯ ವಿಧವೆ ಚಾಂಗಲಮ್ಮ, ಅನಂತರ ತಾಯಿ ಸುಂದರಮ್ಮ, ತಾರೆಯ ಎರಡನೆಯ ಅತ್ತೆ ಅಮ್ಮಮ್ಮ, ಅನಂತನ ಹೆಂಡತಿ ಇಂದಿರೆ ಇವರೆಲ್ಲರ ಸ್ವರೂಪಗಳ ಆವಿಷ್ಕರಣ ಸುಂದರವಾಗಿ ರೂಪುಗೊಂಡಿದೆ. ಒಂದೊಂದರ ವೈಶಿಷ್ಟ್ಯವನ್ನೂ ಎತ್ತಿ ತೋರಿಸಲಿಕ್ಕೆ ಇಲ್ಲಿ ಅವಕಾಶವಿಲ್ಲ. ಆದರಂತೆಯೆ ತಾರೆಯ ತಂಜೆ ಸುಬ್ಬಪ್ಪ, ಮಾವ ಜೂವಣ್ಣ ಇವರ ಹೃದಯಸ್ವರೂಪವೂ ಕಾದಂಬರಿಯಲ್ಲಿ ಜೀವಾಗಿ ಮೂಡಿದೆ. ಎರಡನೆಯ ಗಂಡ ಅಪ್ಪಣ್ಣನಲ್ಲಿಯ ಸಂಯಮುರಾಹಿತ್ಯವೊಂದನ್ನು ಬಿಟ್ಟರೆ, ಅವನು ಬಲು ಒಳ್ಳೆಯ ಮನುಷ್ಯ. ಆದರೆ ಅವನ ಅದೊಂದು ಅವಗುಣವೇ ಕಾದಂಬರಿಯ ವಿಷಾದಾಂತ ಘಟನೆಗೆ ಹೆಚ್ಚಿನ ಕಾರಣವಾಗಿದೆ. ಭರಮನ ಪಾತ್ರರಚನೆ ಅಸ್ಪಷ್ಟವಾಗಿದೆ. ತಾಯಿಯು ಸೂತ್ರಗೊಂಬೆಯಾಗಿ ನಡೆಯುವ ಅವನು, ಅಷ್ಟೊಂದು ಸಜೀವಿಯಾಗಿ ತೋರುವುದಿಲ್ಲ. ಇವರಲ್ಲಿ ಕಾಣಲು ಸಿಕ್ಕುವ ಬೇರೆ ಬೇರೆ ಉಪಪಾತ್ರಪ್ಪದ್ಯಪಾತ್ರಗಳೂ ಆಭಾಸವಿಲ್ಲದಂತೆ ಬಂದು ಬಂದು ಹೋಗುತ್ತವೆ. ಅನಂತನ 'ಭಂಗಾರಿ' ನಮಗೆ ತೆರೆಯ ಮರೆಯಿಂದಲೆ ಪರಿಚಿತಳಾಗಿದ್ದರೂ, ತುಂಬ ಒಳ್ಳೆಯ ಮನಸ್ಸಿನ ಹೆಣ್ಣೆಂಬುದು ಗೊತ್ತಾಗುವುದು.

ಮುಖ್ಯ ಪಾತ್ರಗಳಾದ ತಾರಾ-ಅನಂತರ ಸ್ವಭಾವ ಪರಿಪೋಷಣೆ ಸೂಕ್ಷ್ಮದೃಷ್ಟಿಗೆ ಯುಕ್ತಿಯುಕ್ತವಾಗಿದೆಯಾದರೂ, ಅವರ ವಯಸ್ಸಿನಲ್ಲಿರುವ ಅಂತರ ಸೂಕ್ಷ್ಮ ವಿಮರ್ಶಕರನ್ನು ಗೊಂದಲಕ್ಕೆ ಗುರಿಮಾಡುವುದು. ಈ ನಾಯಕ-ನಾಯಿಕೆಯರ ವಯಸ್ಸಿನ ಬಗೆಗಿರುವ ಲೇಖಕರ ಅಸ್ಪಷ್ಟ ಕಲ್ಪನೆಯ ಮೂಲಕ, ಅನೇಕ ಸಹಜ ಘಟನೆಗಳೂ ಅಸಹಜವೆನಿಸುವಂತಾಗಿವೆ. ಈಗ ಪ್ರಕಟವಾಗಿರುವ ಕಾದಂಬರಿಯಲ್ಲಿ ಇದೊಂದು ದೊಡ್ಡ ಕೊರತೆಯೆನಿಸುವುದು. ಆದರೆ ಈ ಕೊರತೆ ತಿದ್ದಲಿಕ್ಕೆ ಬಾರದಂತಹದೇನೂ ಅಲ್ಲವಾದುದರಿಂದ, ಸ್ವಲ್ಪ ವಿಚಾರದಿಂದ ಮುಂದಿನ ಆವೃತ್ತಿಯಲ್ಲಿ ತಿದ್ದಿಕೊಂಡರೆ, ಕನ್ನಡ ಕಾದಂಬರೀ ಪ್ರಪಂಚದಲ್ಲಿ ನಿಸರ್ಗವೊಂದು ಉತ್ತಮ ಕಾದಂಬರಿಯಾಗಿ ನಿಲ್ಲುವುದು.

ಹಳ್ಳಿಯ ಜೀವನವನ್ನೇ ಹೆಚ್ಚಾಗಿ ರೂಪಿಸದಿದ್ದ ಕನ್ನಡ ಲಲಿತ ಸಾಹಿತ್ಯದಲ್ಲಿ, ಹದಿನಾರಾಣೆ ಹಳ್ಳಿಯ ಕತೆಯಾಗಿರುವ ನಿಸರ್ಗ ಒದಗಿಬಂದಿರುವುದು ಸಂತೋಷದ ಸಂಗತಿ. ಇದಕ್ಕೆ ಕಾರಣರಾದ ವಿ॥ ಸೀ॥ ಕಣ್ಣಾರಾಯರು ಕನ್ನಡಿಗರ ಅಭಿನಂದನೆಗೆ ತಕ್ಕವರು.

—ಬೆಟಗೇರಿ ಕೃಷ್ಣಶರ್ಮ

೩೭. ಎತ್ತಚ್ಚ ಭಾರತ ಎತ್ತ ಸಾಗಿದೆ?

(ಸಚಿತ್ರ ವಿವೇಚನಾತ್ಮಕ ಗ್ರಂಥ)

ಲೇಖಕರು ಶ್ರೀ. ಗ. ಸು. ಹಾಲಸ್ವ ಎಂ. ಎ. ಹರಿಪುರ. ಬೆಲೆ ೩-೮೦.

ಕನ್ನಡ ನಾಡಿನ ತ್ಯಾಗವೀರ ಪುತಾತ್ಮ ವೈಲಾರ ಮಹಾದೇವಪ್ಪನವರಿಗೆ ಸಮರ್ಪಿತವಾದ ಈ ರಾಜಕಾರ್ಯ ವಿಷಯಕ ಗ್ರಂಥಕ್ಕೆ, ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಲಿಯಲ್ಲಿ ಉಪ ಮಂತ್ರಿಗಳಾಗಿ ಕೆಲಸಮಾಡುತ್ತಿರುವ ಶ್ರೀ. ಕೆ. ಎಫ್. ನಾಟೇಲರು ಚಿಕ್ಕ ಮುನ್ನುಡಿ ಬರೆದು, ಇದನ್ನು ಪ್ರಶಂಸಿಸಿದ್ದಾರೆ.

ಇದೊಂದು ಆಧುನಿಕ ಭಾರತದ ಸಂಕ್ಷಿಪ್ತ ರಾಜಕೀಯ ಇತಿಹಾಸವೆಂದು ಹೇಳಬಹುದು. 'ಒಂದು ತಲೆಮಾರಿನಲ್ಲಿ' ಎಂಬ ಮೊದಲನೆಯ ವಿಭಾಗದಲ್ಲಿ ಬ್ರಿಟಿಷರು ಭಾರತಕ್ಕೆ ಬಂದುದನ್ನು ಮೊದಲುಮಾಡಿ ೧೯೩೫ನೆಯ ಇಸ್ವಿಯವರೆಗಿನ ರಾಜಕೀಯ ಆಡಳಿತದ ಚರಿತ್ರೆಯನ್ನು ಸಂಗ್ರಹಿಸಿ ಹೇಳಿರುವರು. ಇದರಲ್ಲಿ ರೆಗ್ಯುಲೇಟಿಂಗ್ ಆಕ್ಟ್, ಪಿಟ್ಟನ ಇಂಡಿಯಾ ಬಿಲ್ಲು, ರಾಣಿಯವರ ಜಾಹೀರ್‌ನಾಮೆ, ಮೊರ್ಲೆ-ಮಿಂಟೊ ಸುಧಾರಣೆ, ಮಾಂಟೆಗೊ-ಚೆಮ್ಸ್‌ಫೋರ್ಡ್ ಸುಧಾರಣೆ, ಸೈಮನ್ ಕಮಿಶನ್, ರೌಂಡ್ ಟೇಬಲ್ ಕಾನ್‌ಫರನ್ಸ್, ೧೯೩೫ರ ಭಾರತದ ಹೊಸ ರಾಜ್ಯ ಘಟನೆ ಇವುಗಳ ವಿಚಾರವು, ಆ ಆ ಕಾಲದ ಭಾರತೀಯರ ಚಟುವಟಿಕೆಗಳ ಹಿನ್ನೆಲೆಯೊಂದಿಗೆ ಬಂದಿದೆ. ಮುಂದಿನ ೨-೩ ಪ್ರಕರಣಗಳಲ್ಲಿ 'ಹೊಸರಾಜ್ಯ ಘಟನೆಯ ಸ್ವರೂಪ' ಮತ್ತು 'ತ್ರಿವಿಂಗಳ ಕಾಂಗ್ರೆಸ್ ರಾಜ್ಯ' ಇವುಗಳ ಪರಿಚಯವಿದೆ. ಳನೆಯ ಭಾಗವು ಕಾಂಗ್ರೆಸ್ಸು ಅಧಿಕಾರ ತ್ಯಾಗಮಾಡಿದಂದಿನಿಂದ 'ಕ್ರಿಪ್ಸ್ ಬರುವವರೆಗೆ' ನಡೆದ ಘಟನೆಗಳನ್ನೊಳಗೊಂಡಿದೆ. 'ಕ್ರಿಪ್ಸ್ ಕೊಡುಗೆಯ ವಿಮರ್ಶೆ' ೫ನೆಯ ವಿಭಾಗದಲ್ಲಿದ್ದು ೬ನೆಯ ವಿಭಾಗವು 'ಆಗಸ್ಟ್ ೮ರ ತರುವಾಯ'ದ ಭಾರತದ ಸ್ವಾತಂತ್ರ್ಯಯುದ್ಧದ ಉತ್ಸಾಹದಾಯಕ ಸಂಗತಿಯನ್ನು ಒಳಗೊಂಡಿದೆ. ಮುಂದೆ ೭ ಭಾರತದ ಭವಿಷ್ಯಸ್ಥಾನ, ೮ ಸ್ವಯಂನಿರ್ಣಯ ತತ್ತ್ವ, ಪಾಕಿಸ್ತಾನ ೯ ನರೇಂದ್ರರ ಸಮಸ್ಯೆ, ೧೦ ಸ್ವತಂತ್ರ ಭಾರತದಲ್ಲಿ ೧೧ ಎಚ್ಚತ್ತ ಭಾರತ ಎತ್ತ ಸಾಗಿದೆ?— ಎಂಬ ೫ ವಿಭಾಗಗಳಲ್ಲಿ ಗ್ರಂಥ ಕೊನೆಗೊಂಡಿದೆ.

ಗ್ರಂಥಕರ್ತರು ತರುಣರು, ದೇಶದ ಪ್ರೀತಿ ನರನರಗಳಲ್ಲಿಯೂ ಹರಿದಾಡುವವರು. ಬರೆದ ಭಾಷೆ-ರೀತಿಗಳು ಉಪನ್ಯಾಸಕರ ಉತ್ಸಾಹಪೂರಿತ ಭಾಷೆ ರೀತಿಗಳಾಗಿರುವುವು; ಎಂತಲೆ ಜನ ಸಾಮಾನ್ಯರಿಗೆ ವಿಷಯ ತಿಳಿಯುವಂತೆ ಮಾಡಿ ಹುರುಪಿಗೆಬ್ಬಿಸುವಂತಿವೆ.

ಈ ಗ್ರಂಥದಲ್ಲಿ ಆಡಕವಾದ ವಿಷಯವೆಲ್ಲ ಈ ಕಾಲದಲ್ಲಿ ನಮ್ಮ ಜನಸಾಮಾನ್ಯರಿಗೆ ತಿಳಿಯಬೇಕಾಗಿದೆ. ಇದುವರೆಗೆ ಇದ್ದ ಇಂತಹ ಪುಸ್ತಕಗಳ ಕೊರತೆಯನ್ನಿದು ಕಳೆಯುವಂತಿದೆ. ಅದಕ್ಕಾಗಿ ಲೇಖಕರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿರುವರು.

—ಬಿ. ಪಿ. ಎಸ್. ರಾವ್.



ಕಲಕತ್ತೆಯಲ್ಲಿ ಪೈಶಾಚಿಕ ಕಗ್ಗೊಲೆ

ಲೀಗಿನ ಹೋರಾಟದ ದಿನವೆಂದು ಆಗಸ್ಟ್ ೧೬ನೆಯ ದಿನವನ್ನು ಹಿಂದುಸ್ತಾನದ ತುಂಬ ಮುಸ್ಲಿಂ ಲೀಗ್ ಪಕ್ಷದವರು ಆಚರಿಸಿದರು. ಎಲ್ಲಿಯೂ ಪ್ರತ್ಯಕ್ಷವಾದ ಹಿಂಸಾಕೃತ್ಯಗಳು ನಡೆದಂತಿಲ್ಲ; ಆದರೆ ಲೀಗಿನ ಸರಕಾರವೇ ಆಡಳಿತ ನಡೆಯಿಸುತ್ತಿರುವ ಬಂಗಾಲ ಪ್ರಾಂತದ ರಾಜಧಾನಿಯಲ್ಲಿ, ಆ ದಿನದಿಂದ ಮೊದಲು ಮಾಡಿ ಉಗ್ರವಾದ ಕಟುಕತನ ಪ್ರಾರಂಭವಾದುದು, ಇದುವರೆಗೂ ಅಲ್ಲಿಯ ಜನತೆಗೆ ಕೊಲೆಯ ಭೀತಿ ಇಲ್ಲದಂತಾಗಿದೆ. ಜೀವನ ವ್ಯಾಪಾರಕ್ಕಾಗಿ ದಾರಿಯಲ್ಲಿ ಹೋಗಿಬರುವವರೆಲ್ಲ—ಸಾವಿನ ಯಾವ ಸುಳಿಪೂ ಇಲ್ಲದೆ ನಿಶ್ಚಿಂತರಾಗಿ ನಡೆದಾಗ-ಇರಿಸಿಕೊಂಡು ಕಡಿಸಿಕೊಂಡು ಬಡಿಸಿಕೊಂಡು ಚುಚ್ಚಿಸಿಕೊಂಡು ಎಣಿಕೆಯಿಲ್ಲದಷ್ಟು ಜನ ಗಾಯಗೊಂಡರು; ಎಣಿಕೆಗೆ ಸಿಕ್ಕದಷ್ಟು ಜನ ಸತ್ತುಹೋದರು. ಸಂರಕ್ಷಿಸುವ ಸರಕಾರ ನಗರದಲ್ಲಿದೆಯೆಂದು ಯಾರಿಗೂ ಎನಿಸುವಂತಿರಲಿಲ್ಲ. ಎಲ್ಲಿ ನೋಡಿದಲ್ಲಿ ಮನೆಗಳಿಗೆ ಬೆಂಕಿ, ಅಂಗಡಿಗಳ ಲೂಟಿ. ಕಣ್ಣಾರೆ ಕಂಡ ಸುದ್ದಿಗಾರರು ಹೇಳಿದ ವಾಸ್ತವ ಸಂಗತಿಗಳನ್ನು ಓದಿದರೆ, ಯಾವ ಮಾನವ ಹೃದಯಿಯ ರಕ್ತವೂ ಕುದಿಯದಿರದು; ಕರುಳುಗಳು ಹೈಫೆಗೊಳ್ಳದಿರವು. ೨೦ನೆಯ ಶತಮಾನದಲ್ಲಿಯೂ—ಸುಸಂರಕ್ಷಿತವಾದ ರಾಜಧಾನಿಯಲ್ಲಿಯೂ—ಇಂತಹ ಗರ್ಭನೀ ಮುಹಮ್ಮದನ ಕಗ್ಗೊಲೆ-ಸುಲಿಗೆಗಳನ್ನು ಎಸಗಿಸುವಂತಹ ಘಟನೆಗಳು ನಡೆದಿರುವುದನ್ನು ಕೇಳಿ, ಯಾವ ಮಾನವೀಯನೂ ಬೆದರಿ ಬೀಳದಿರಲಾರ. ಮರಣ ಹೊಂದಿದ ಜನರ ಸಂಖ್ಯೆ ೫೦೦೦, ೬೦೦೦, ೭೦೦೦ ಎಂದು ದಿನದಿನಕ್ಕೂ ಏರುತ್ತ ಹೋರಟಿದೆ. ಇದೆಲ್ಲ ಹಿಂಸಾಚಾರಕ್ಕೆ ಕಾರಣವೇನು?

ಕಗ್ಗೊಲೆಗೆ ಕಾರಣರು ಯಾರು?

ಕಲಕತ್ತೆಯ ಕಗ್ಗೊಲೆಯನ್ನು ಕೇಳಿ ಜಿನ್ನಾ ಸಾಹೇಬರು ನಿಷೇಧ-ವಿವಾದಗಳನ್ನು ಪ್ರದರ್ಶಿಸಿ ಹೊರಗುಳಿಯಲು ಬಯಸಿರುವರಾದರೂ, ಇವರ ಮೂಲ ಪ್ರಚೋದನೆಯು ಹೊಸತೆ ಅವರ ತಲೆಯ ಮೇಲೆ ಜಾರದೆ ಹೋಗದು. ಏಕೆಂದರೆ ಇತ್ತೀಚಿಗಿನ ಅವರ ಭಾಷಣಗಳನ್ನು ಕೇಳಿದರೆ 'ಭಾರತದಲ್ಲಿ ರಕ್ತದ ಹೊಳೆ ಹರಿಸಿ ನಾವು ನಮ್ಮ ಪಾಕಿಸ್ತಾನವನ್ನು ಸಾಧಿಸುವೆವು' ಎಂಬ ಮಾತು ಪಲ್ಲವಿಯಂತೆ ಆಗಿದ್ದುದು ಕಂಡು ಬರುವುದು. ಈ ಹಿರಿಯ ಮುಂದಾಳಿನ ನುಡಿಯನ್ನೆ ಕಿರಿಯ ಮುಂದಾಳುಗಳೆಲ್ಲ ಗಟ್ಟಿಮಾಡಿ ಸಭೆಗಳಿದುರು ಒಪ್ಪಿಸುತ್ತಿದ್ದುದು ಬಹುಜನರ ಅನುಭವದ ಮಾತಾಗಿದೆ. ಮುಸ್ಲಿಂ ಲೀಗಿನವರು ಈಗ ಬ್ರಿಟಿಷರೊಂದಿಗೂ ಕಾಂಗ್ರೆಸ್ಸಿಗರೊಂದಿಗೂ ಹೋರಾಟ ಹೂಡಿರುವೆವೆಂದು ಸಾರುತ್ತಲಿದ್ದಾರೆ. ನಿಜವಾಗಿ ನೋಡಿದರೆ ಬ್ರಿಟಿಷರ ಬಗೆಗೆ ಅವರಲ್ಲಿ ವಿರೋಧವೇನೂ ಇಲ್ಲ. ಬ್ರಿಟಿಷರ ಹೆಸರನ್ನು ಕೊಳ್ಳುವುದು ಕೇವಲ ತಮ್ಮ ದೊಡ್ಡಿತನವನ್ನು ಪೆಚ್ಚಿಸಿಕೊಳ್ಳಲಿಕ್ಕೆ. ತಮ್ಮ ಮಾತಿಗೊಂದು ತತ್ತ್ವದ ಹಿನ್ನೆಲೆಯಿದೆಯೆಂಬುದನ್ನು ಹೊರಗಿನವರಿಗೆಲ್ಲ ತೋರಿಸಲಿಕ್ಕೆ. ನಿಜವಾಗಿ ಮುಸ್ಲಿಂಲೀಗಿನ ಇಂದಿನ ವಿರೋಧಿಯೆಂದರೆ ಕಾಂಗ್ರೆಸ್ಸು. ಕಾಂಗ್ರೆಸ್ಸನ್ನು ಹಣ್ಣು ಮಾಡಿ ಮಣ್ಣುಗೂಡಿಸಬೇಕೆಂಬುದು ಜಿನ್ನಾ ಪ್ರಭೃತಿ ಮುಸ್ಲಿಂ ಲೀಗಿನವರ ಒಳಬಯಕೆ. ಅದಕ್ಕಾಗಿ ಶಾಂತಿಮಯವಾದ ಶಾಸನಬದ್ಧ ಜಳವಳಿ ಮಾಡಿ ಗೆಲವು ಪಡೆಯುವ ಆಶೆ ಅವರಿಗಿಲ್ಲವಾದುದರಿಂದ, ರಕ್ತದ ಕಾಲುವೆಯನ್ನು ಹರಿಯಿಸುವ ಗುಜುಗುಪಾಕಿ, ಭಾವಿಕರಾದ ಶಾಂತಿಪ್ರಿಯರಾದ ಕಾಂಗ್ರೆಸ್ಸಿಗರನ್ನೂ ಭಾರತದಲ್ಲಿ ಬಹುಸಂಖ್ಯಾಕರಾಗಿರುವ ಹಿಂದುಗಳನ್ನೂ ಬೆದರಿಸುತ್ತಲಿದ್ದಾರೆ. ಹೊಣೆಗಾರರಾದ ಲೀಗಿನ ಮುಂದಾಳುಗಳೂ ಇಂದು 'ಮತ್ತೊಮ್ಮೆ ಪಾಣಿಪತ್ತಿನಂತಹ ಯುದ್ಧ ಮಾಡೋಣ' ಎಂದು ಹೊಣೆಗೆಟ್ಟ ಮಾತುಗಳನ್ನಾಡಿ, ತೀವ್ರ ಧರ್ಮಾಭಿಮಾನಿಗಳಾದ ಅಶಿಕ್ಷಿತ ಮುಸ್ಲಿಂ ಗುಂಪುಗಳನ್ನು ಕೆಣಕಿಸುತ್ತಿದ್ದಾರೆ. ೧೬ನೆಯ ತಾರೀಖಿನ ದಿನ ನಡೆದ ಪ್ರತಿಯೊಂದು ಸಭೆಯಲ್ಲಿಯೂ—ಧಾರವಾಡದ ಟಾಂಗಾವಾಲಾಗಳ ಸಭೆಯಲ್ಲಿ ಕೂಡ—ರಕ್ತದ ಕಾಲುವೆ ಹರಿಸುವ ಮಾತುಗಳೇ ಕೇಳಿಸಿದುವು. ಇದೇ ಮುಂದಾಳುಗಳಿಂದಲೆ ರಚಿತವಾದುದು ಬಂಗಾಲದ ಸರಕಾರ. ಸಭೆಯಲ್ಲಿ ರಕ್ತದ ಕಾಲುವೆ ಹರಿಸುವ ಮಾತು-

ಗಳನ್ನು ಮುಂದಾಳುಗಳ ಬಾಯಿಂದ ಕೇಳಿ, ಮೇಲೆ ಆಳುವ ಅಧಿಕಾರಿಗಳು ಅದೇ ಮುಂದಾಳುಗಳೇ ಇರುವರೆಂದು ಮನವರಿಕೆ ಮಾಡಿಕೊಂಡ ಗುಂಡ—ಪುಂಡಜನರು, ಕಗ್ಗೊಲೆಗೆ ಸಿದ್ಧರಾಗದೆ ಏನು ಮಾಡುವರು? ಮುಂದಾಳುಗಳ ಮಾತನ್ನು ಕೇಳಿ ತಮ್ಮವರ ಚಳವಳಿಗೆ ನೆರವಾದಂತೆಯೂ ಆಯಿತು; ಸುಲಿಗೆ—ಲೂಟಿಗಳಿಂದ ಮನೆ ತುಂಬಿಕೊಳ್ಳುವ ಪ್ರೇಯಕ್ಕೆಕ ಹಿತವೂ ಸಾಧಿಸಿತು.

ಮೊದಲನೆಯ ಕಾಳಿಗಪಂತೆ ಈ ಕಗ್ಗೊಲೆ!

ಇಂತಪ ಕಗ್ಗೊಲೆಯ ಕಟುಕತನವನ್ನು 'ಮುಸ್ಲಿಮರ ಮೊದಲನೆಯ ನುವಾಯುದ್ದ' ಎಂದು ಕರೆದು ಜಂಭಕೊಚ್ಚಿಕೊಳ್ಳುವ ಮುಸ್ಲಿಂ ಲೀಗಿನ ಮುಖಪತ್ರಿಕೆಯನ್ನು ನೋಲಿದರೆ, ಅದರ ಆವಿವೇಕ-ಅಜ್ಞಾನಗಳಿಗಾಗಿ—ಇಂತಪ ಪಿಶಾದದ ಸಂದರ್ಭದಲ್ಲಿಯೂ—ಕನಿಕರದ ನಗೆ ಏರುವುದು ಯುದ್ಧವೆಂದರೆ ಏನೆಂಬುದು ಅದಕ್ಕೆ ಗೊತ್ತಿದೆಯು? ನಿರಪರಾಧಿಗಳಾದ ಜನಜಂಗುಳಿಯನ್ನು ಕಳ್ಳತನದಿಂದ ಇರಿದು ಕೊಲ್ಲುವುದೂ, ಯಾವ ಆಪತ್ತಿನ ಕಲ್ಪನೆಯೂ ಇಲ್ಲದೆ ನಿಶ್ಚಿಂತರಾಗಿರುವವರ ಮನೆಗಳಿಗೆ ಬೆಂಕಿ ಹಚ್ಚುವುದೂ, ಹೆಂಗುಸರನ್ನೂ ಪುಸುಗೂಸುಗಳನ್ನೂ ಬೆಂಬಿಸುವುದೂ, ಕಳವು ದರೆವಡೆ ಮಾಡುವುದೂ ಇದೆಲ್ಲ ಯುದ್ಧವೆನಿಸುವುದೇ? ಯುದ್ಧವು ರಾಜಕೀಯಕ್ಕೆ ಸೇರಿದುದು. ಎರಡು ಪಕ್ಷಗಳೂ ಬಂದಕ್ಕೊಂದು ಯುದ್ಧದ ಎಚ್ಚರಿಕೆ ಕೊಟ್ಟು ಪ್ರಾರಂಭಿಸುವುವು. ಸೇನೆ-ನೌಕೆಗಳಲ್ಲಿ ಯುದ್ಧ ನಡೆಯುವುದಲ್ಲದೆ ನಾಗರಿಕರೊಂದಿಗಲ್ಲ. ಇಂತಪ ಪೈಶಾಚಿಕ—ಅನಾಗರಿಕ—ಕೃತ್ಯವನ್ನು ಯುದ್ಧವೆಂದು ಕರೆದು ಒಪ್ಪಿಬಿಟ್ಟುಕೊಳ್ಳುವುದು ಎಂತಪ ಹೀನಮನದ ನಿದರ್ಶನ? ಕೇವಲ ಮನುಷ್ಯನ ಜನ್ಮಸಿದ್ಧ ಹಕ್ಕುಗಳ ಪುನ್ಸ್ಥಾಪನೆಗಾಗಿ ಶಾಂತಿಮಯ ಮಾರ್ಗದಿಂದ ಪ್ರಾತಂತ್ರ್ಯ ಚಳವಳಿ ನಡೆಯಿಸಿದುದನ್ನೂ ಅತ್ಯಾಚಾರ ಮಾರ್ಗದಿಂದ ಪತ್ತಿಕ್ಕಿದ ಬ್ರಿಟಿಷರ ಸಂರಕ್ಷಕ ಕಾಯಿದೆಗಳು ಈಗ ಎಲ್ಲಿವೆ? ರಾಜಧಾನಿಯಲ್ಲಿಯೆ ಇದ್ದು ಬಾಯಿಗೆ ಬಂದಂತೆ ಬರೆದು ಜನರನ್ನು ಕೆರಳಿಸುತ್ತಿರುವ ಪತ್ರಿಕೆಗಳ ಬಾಯಿಗೆ ಬೀಗಹಾಕುವ ಸಾಮರ್ಥ್ಯವನ್ನೂ ಕಳೆದುಕೊಂಡಿವೆಯೆ?

ಮತಧರ್ಮ ಮದಾಂಧರಿಗೇನು ಉಪಯೋಗ?

ಹಿಂದೆ ಕಾಂಗ್ರೆಸಿನ ಮಂತ್ರಿಮಂಡಲಿಗಳು ಬೇರೆ ಬೇರೆ ಪ್ರಾಂತಗಳಲ್ಲಿ ಆಡಳಿತದಲ್ಲಿದ್ದು, ತತ್ತ್ವದ ಮೂಲಕ ರಾಜೀನಾಮೆ ಕೊಟ್ಟು ಹೊರಗೆ ಬಂದಾಗ, ದ್ವೇಷಪ್ರಸಾರಕ ಜಿನ್ನಾ ಸಾಹೇಬರು, ಮುಸ್ಲಿಂ ಜನರಿಗೆಲ್ಲ 'ಜಪುಗಡೆಯ ದಿನ' ಪಾಲಿಸಲು ಫರ್ಮಾನು ಹೊರಡಿಸಿದ್ದರು. ಕಾಂಗ್ರೆಸ್ ಮಂತ್ರಿಮಂಡಲಿಗಳು ಆಗ ಮುಸ್ಲಿಮರಿಗೆ ಮಾಡಿದ ದ್ರೋಹವಾವುದು ಹೇಳಿರಿದರೆ, ಉದಾಪರಣೆ ಕೊಡಲಿಕ್ಕೂ ಒಂದು ಘಟನೆ ದೊರೆವಂತಿರಲಿಲ್ಲ. ಧರ್ಮದ ದೃಷ್ಟಿಯನ್ನಿರಿಸಿಕೊಂಡು ಕಾಂಗ್ರೆಸ್ಸನ್ನು ಸಂಘಟಿತ ವಾಗಿಯೆ ಇಲ್ಲ. ಆ ದೃಷ್ಟಿಯಿಂದ ಹೊರಟಿದ್ದರೆ ಅದಕ್ಕೆ ಗೆಲವು ಸಿಕ್ಕುತ್ತಲೇ ಇರಲಿಲ್ಲ. ಪರದೇಶಗಳಿಂದ ಬಂದು ಭಾರತವನ್ನು ನೋಡಿಕೊಂಡು ಹೋದ ರಾಜಕಾರ್ಯ ಪಂಡಿತರೆಲ್ಲ ಕಾಂಗ್ರೆಸ್ಸಿನ ತಾತ್ತ್ವಿಕ ತಳಹದಿಯನ್ನೂ ನಿದರ್ಶನಿಯ ಚಳವಳಿಯನ್ನೂ ಪುರಸ್ಕರಿಸಿ ಕೊಂಡಾಡುತ್ತಲೇ ಹೋಗಿದ್ದಾರೆ. ಈಗ ಜಿನ್ನಾ-ಸಾಹೇಬರು ಕಲಕತ್ತೆಯ ದುರ್ಘಟನೆಯ ತರುವಾಯ ಎಂತಹ ದಿನ ಪಾಲಿಸಲು ಫರ್ಮಾನು ಪೊರಡಿಸುವರೋ ನೋಡಬೇಕಾಗಿದೆ. ಶಾಸ್ತ್ರಾಂ ಎಂದರೆ ಶಾಂತಿ-ಸಮತೆಗಳನ್ನು ಕಾಯುವ ಧರ್ಮ ತಮ್ಮದೆಂದು ಹೇಳಿ ಮೊನ್ನೆಮೊನ್ನೆಯೆ ಅಂಬೇಡಕರರನ್ನು ತಮ್ಮಲ್ಲಿಗೆ ಆಮಂತ್ರಿಸಿದ ನೂನ ಸಾಹೇಬರು ಈಗ ಏನು ಹೇಳುವರು? ಪೇಡು ಸೇರಿಸಿಕೊಳ್ಳುವ ಬುದ್ಧಿ, ದ್ವೇಷ, ಅವಿವೇಕಗಳು ಎಂತಪ ಶಾಂತಿಧರ್ಮದ ತತ್ತ್ವಗಳನ್ನೂ ತುಳಿದು ನಡೆಯಬಲ್ಲವೆಂಬುದನ್ನು ನೂನ್ ಸಾಹೇಬರು ಅರಿತುಕೊಂಡು, ಇನ್ನು ಮುಂದಾದರೂ ವಿವೇಕದಿಂದ ವರ್ತಿಸಲಿ.

ಕರ್ತವ್ಯಪರಿಯದ ಗವರ್ನರರು.

ನಗರಕ್ಕೆ ನಗರವೇ ತಲ್ಲಣಿಸಿ ಹೋಗುತ್ತಿದ್ದರೂ, ಸಂರಕ್ಷಣೆಯ ಸಂಪೂರ್ಣ ವ್ಯವಸ್ಥೆಯನ್ನೆಲ್ಲ ತನ್ನ ಕಡೆಗೇ ಇರಿಸಿಕೊಂಡಿರುವ ಬಂಗಾಲದ ಗವರ್ನರರು ಅಸಮ್ಯವಾದ ನಿರ್ಲಕ್ಷ್ಯ ತೋರಿಸಿದುದು ಆಶ್ಚರ್ಯದ ಸಂಗತಿಯಾಗಿದೆ. ಕಲಕತ್ತೆಯ ಎಲ್ಲ ಪ್ರಮುಖ ಪತ್ರಿಕೆಗಳೂ, ಪ್ರಮುಖ ಧುರೀಣರೂ ಗವರ್ನರರ ಈ ಮಹಾಪ್ರಮಾದವನ್ನಿಂದು ಲೋಕದೆದುರು ಘೋಷಿಸುತ್ತಿದ್ದಾರೆ. ಸ್ವಲ್ಪ ಜಾಗ್ರತಿ ವಹಿಸಿ ಸಕಾಲದಲ್ಲಿ ಸಂರಕ್ಷಣೆಗೆ ಆಜ್ಞೆ ಕೊಟ್ಟಿದ್ದರೆ, ನಗರದ ಅಸಂಖ್ಯಜನರ ಪ್ರಾಣವನ್ನು ಉಳಿಸಿದಂತಾಗುತ್ತಿತ್ತು. ಆಸ್ಪತ್ರೆಗಳ ರಕ್ಷಣೆಯಾಗುತ್ತಿತ್ತು. ಇಂದು ಸ್ಮಶಾನದಂತೆ ಕಾಣುತ್ತಿರುವ ಕಳೆಗೆಟ್ಟ ಕಲಕತ್ತಾ ನಗರ, ನಗರವೆಂಬ ಹೆಸರಿಗೆ ತಕ್ಕುದಾಗಿ ಉಳಿಯುತ್ತಿತ್ತು. ಒಬ್ಬ ವ್ಯಕ್ತಿಯ ಅಜಾಗರೂಕತನ ಇಂದು ದೇಶದ ಸುವ್ಯವಸ್ಥೆಯನ್ನೇ ಮಾರ್ಪಡಿಸುವುದರಲ್ಲಿದೆ. ಕಲಕತ್ತೆಯ ಕಿರಿಯ ಮಾದರಿಗಳೇ ಬಂಗಾಲದ ಬೇರೆ ನಗರಗಳಲ್ಲಿಯೂ ತಲೆಯೆತ್ತಲು ತೊಡಗಿವೆ. ಕಾಂಗ್ರೆಸಿಗೆ ಮೊದಲಿನಿಂದಲೂ ದ್ರೋಹ ಬಗೆಯುತ್ತ ಬಂದ ಸಿಂಧಪ್ರಾಂತದ ಗವರ್ನರರು ಕೂಡ ಚಾತುರ್ಯದಿಂದ ತಮ್ಮ ಪ್ರಾಂತದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದಿರುವಾಗ, ಬಂಗಾಲದಂತಪ ಪ್ರಮುಖ ಪ್ರಾಂತದ ಗವರ್ನರರು ಹೀಗೆ ಅಚಾತುರ್ಯದಿಂದ ನಡೆಯಬೇಕೆ? ಈ ಹೊಣೆಗೇಡಿತನದ ವಿಚಾರಣೆಯಾಗಿ ತಪ್ಪುಗಾರರಿಗೆಲ್ಲ ಪ್ರಾಯಶ್ಚಿತ್ತ ಹೊರೆಯಬೇಕಾದುದು ಅನಿವಾರ್ಯವಾಗಿದೆ.

ಕಳೆದ ಜೂಲೈ ತಿಂಗಳಿಂದ ಬೆಂಗಳೂರಲ್ಲಿ ಹೊಸತಾಗಿ ಪ್ರಾರಂಭವಾದ ಮಾಸಪತ್ರಿಕೆ. ಸಂಪಾದಕರಾದ ಶ್ರೀ ಬಸವರಾಜ ಕಟ್ಟಿ ಮನಿಯವರು ಕನ್ನಡ ವಾಚಕ ಲೋಕಕ್ಕೆ ಅಪರಿಚಿತರೇನೂ ಅಲ್ಲ. ಬೇರೆ ಬೇರೆ ಪತ್ರಿಕೆಗಳ ಉಪಸಂಪಾದಕ-ಸಂಪಾದಕರಾಗಿಯೂ ಕತೆಗಾರ-ಕಾದಂಬರಿಕಾರರಾಗಿಯೂ ತಮ್ಮ ಸಾಹಿತ್ಯದ ಮೂಲಕ ಯನ್ನು ಕನ್ನಡಿಗರಿಗೆ ತೋರಿಸುತ್ತ ಬಂದಿದ್ದಾರೆ. ಈಗ ಸ್ವತಂತ್ರವಾಗಿ 'ಸ್ವತಂತ್ರ' ಪತ್ರಿಕೆ ಪ್ರಾರಂಭಿಸಿದುದು ಸಂತೋಷದ ಮಾತು. 'ಸ್ವತಂತ್ರ' ಬಹುಕಾಲ ಬಾಳಿ ಕನ್ನಡಕುಲದ ಉನ್ನತಿಗಾಗಿ ದುಡಿಯಲಿ.

೫೬. **ಚಿತ್ತಗಾಂಗ ಕ್ರಾಂತಿವೀರರು**— (ಭಾರತದ ಆಧುನಿಕ ಸ್ವಾತಂತ್ರ್ಯಯುದ್ಧದ ಚರಿತ್ರಭಾಗ) ಮೂಲ ಲೇಖಕರು ಶ್ರೀಮತಿ ಕಲ್ಪನಾದತ್ತ ಅವರು. ಅನುವಾದಕರು 'ಲಲಿತಾ'. ಪ್ರಕಾಶಕರು ಕುಳುಕುಂದ ಶಿವರಾಯರು, ಜನತಾಸಾಹಿತ್ಯ, ಮರಾತಾಗಲ್ಲಿ, ಹುಬ್ಬಳ್ಳಿ. ಕ್ರೌ. ಅ. ೧೦೦ ಪುಟಗಳು. ಬೆಲೆ ೧-೦-೦.

೫೭. **ಅವತಾರ**— (ಲಘುಪ್ರಬಂಧಗಳ ಸಂಕಲನ). ಲೇಖಕರು: ಶ್ರೀ. ಎನ್. ಪ್ರಲ್ಹಾದರಾವ್ ಎಂ. ಎ., ಪ್ರಕಾಶಕರು: ನ್ಯೂಜ್ ಸಿಂಡಿಕೇಟ್, ಚಾಮರಾಜ ಪೇಟೆ—ಬೆಂಗಳೂರುನಗರ. ಕ್ರೌ. ಅ. ೪೦ ಪುಟಗಳು ಬೆಲೆ ೦-೬-೦.

೫೮. **ಜಯಪ್ರಕಾಶ ನಾರಾಯಣ**— (ವ್ಯಕ್ತಿ ಚರಿತ್ರ) ಬರೆದವರು ಶ್ರೀ. ನಾಡಿಗ ಕೃಷ್ಣಮೂರ್ತಿ. ಪ್ರಕಾಶಕರು: ಶ್ರೀ. ಜಿ. ಹೆಚ್ ರಾಮರಾವ್ ಬಿ. ಎಸ್ಸಿ. ಮೈಸೂರು. ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು. ಕ್ರೌ. ಅ. ೪೮ ಪುಟಗಳು. ಬೆಲೆ ೦-೧೦-೦.

೫೨ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು.
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ನುರುಗುವ ನೀಳವಾದ ಕೂದಲನ್ನು ಬೆಳೆಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು,ಹೊಟ್ಟು ಉದುರುವುದು, ಪಟ್ಟೆತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಮೂಲಿನ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಹೊಸಬರಿಗೆ ಮೌಲ್ಯವಾನಪನಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿಬಂಧನೆಗಳಿಗೆ ಕಟ್ಟುಬಿದ್ದು ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ಪ್ರಶಂಸೆಗೂ ಕಟ್ಟುದಾಗಿದೆ.

★ ಕರ್ನಾಟಕದ ಒಳ್ಳಿಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲಿಸಿಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಣಿ

ಮ್ಯಾನೇಜರ್
ಎಮ್. ಗೋವರ್ಧನರಾವ,

ಸರ್ಕಲರ್

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ ಇವರಿಂದ ಪ್ರಸಿದ್ಧವಾದುದು.

ತಾ. ೧೫-೭-೪೬ ರಿಂದ ಕೆಳಗೆ ಬರೆದ ಔಷಧಗಳು ಕಿರಕೋಳ ದರದಿಂದ ಎಲ್ಲಾ ಕಡೆಗೆ ಸಿಗುತ್ತವೆ.

(೧) ಕಾಸ್ಯೋ:- ೬೫ ಗುಳಿಗೆಗಳ ೧ ಬಾಟ್ಲಿ ೧-೦-೦
೬೫ ಗುಳಿಗೆಗಳ ೧ ಬಾಟ್ಲಿ ೧-೪-೦

(೨) ಮುಕುಲ:- ಸಣ್ಣ ಬಾಟ್ಲಿಗೆ ೧-೪-೦
ದೊಡ್ಡ ಬಾಟ್ಲಿಗೆ ೪-೪-೦

(೩) ರಕ್ತಜೋಷಾಂತಕ:- ಸಣ್ಣ ಬಾಟ್ಲಿಗೆ ೧-೪-೦
ದೊಡ್ಡ ಬಾಟ್ಲಿಗೆ ೩-೦-೦

(೪) ಪಂಕಮುಂಜನ:- ಸಣ್ಣ ಬಾಟ್ಲಿಗೆ ೦-೪-೦
ದೊಡ್ಡ ಬಾಟ್ಲಿಗೆ ೧-೪-೦

ಕಾಸ್ಯೋದ ಬೆಲೆ ಕಡಿಮೆ ಮಾಡಿದಂತೆ ಮುಕುಲ ಮೊದಲಾದವುಗಳ ದರವನ್ನು ಇದಕ್ಕಿಂತ ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಮಗೆ ವಿಷಾದವೆನಿಸುತ್ತದೆ. ಸಾಧ್ಯವಾದ ಕೂಡಲೆ ಅವುಗಳ ಬೆಲೆಯನ್ನೂ ಕಡಿಮೆ ಮಾಡಲಾಗುವುದೆಂದು ನಮ್ಮ ಗ್ರಾಹಕರಿಗೆ ಆಶ್ವಾಸನ ಕೊಡುತ್ತೇವೆ.

Pirnted by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.

ಪಂಪಾ

ಸಂಪುಟ ೯

ಸಂಚಿಕೆ ೫



ಭಾರತದ ಪರರಾಷ್ಟ್ರಮಂತ್ರಿ ಪಂಡಿತ ಜವಾಹರಲಾಲರು

ಮುಖ್ಯ ವಿಷಯಗಳು

ಬೆಳದಿಂಗಳು (ಕವನ)
ಶ್ರೀ. 'ಚಿದಾನಂದ' ಬೈಲಹೊಂಗಲ ೧೬೯

ಪುಂಡಾಟಿಕೆಗೆ ಖಂಡಿತವಾದ ಪ್ರತ್ಯುಪಾಯ (ಸಂಪಾದಕೀಯ)
ಸಂಪಾದಕರು ೧೭೦

ಪೂರ್ಣ ಜೀವನ (ಕವನ)
ಶ್ರೀ. ಜಿ. ವಿ. ವಾಲಿ ಹುಬ್ಬಳ್ಳಿ ೧೭೨

ಸ್ವಾಮಿ (ಸಣ್ಣಕತೆ)
ಶ್ರೀ. ಪ ಸು. ಭಟ್ಟ ತಿರಸಿ ೧೭೩

ಸಾಹಿತಿಗೆ ಚಾರಿತ್ರ್ಯವೊ ವ್ಯಕ್ತಿತ್ವವೊ (ಚರ್ಚೆ)
ಶ್ರೀ. ಗೌರೀಶ ಕಾಯಕಿಣಿ. ಗೋಕರ್ಣ ೧೭೬

ಸಿರಿ ಷಡ್ವರ್ಗ (ಕವಿತೆ)
ಶ್ರೀ. ಅಶ್ವತ್ಥನಾರಾಯಣರಾವ್, ಬನಾರಸ ೧೭೦

ಭಗವಂತನ ಭವಿಷ್ಯ (ಏಕಾಂಕ ದೃಶ್ಯ)
ಶ್ರೀ. ಬಳ್ಳಾರಿಯ 'ಬೀಚಿ' ೧೭೭

ಸ್ವತಂತ್ರ್ಯ ಸಂಪಾದನೆ (ವಿ. ಪ್ರ. ಪ್ರಬಂಧ)
ಶ್ರೀ. ಜಿ. ಎನ್. ಸಭಾಹಿತ ಬಿ. ಎ. (ಆನರ್ಸ್) ಪುಣೆ ೧೭೭

ಯಾರ ಟಿಕ್ಕೆ ಯಾರಿಗೆ ? (ಸಣ್ಣಕತೆ)
ಶ್ರೀ. ನರಸಿಂಹ ಜೋಶಿ, ಮುಂಬಯಿ ೧೭೧

ಕರ್ನಾಟಕ ಜಲವಳಿಯಲ್ಲಿ ಧಾರವಾಡದ ಭಾಗ
ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ ೧೭೬

ಅಲ್ಲಪ್ಪ ಬೀರಣ್ಣನ ಬಡಿನುಡಿ (೧೭೭) ಪುಸ್ತಕವಿಮರ್ಶೆ (೧೭೭)
ನಾಲ್ಕೂ ನಿಟ್ಟಿನ ನೋಟ (೧೭೯)ಗಳು.

ಅಭಿನಂದನೆ : ಮೇಲೋಲೆಯ ಮೇಲೆ ಅಚ್ಚಾದ ಪಂಡಿತ ಜವಾಹರಲಾಲರ ಪಡೆಯಚ್ಚನ್ನು ಒದಗಿಸಿ ಕೊಟ್ಟದ್ದಕ್ಕಾಗಿ ಹುಬ್ಬಳ್ಳಿಯ 'ಸಂಯುಕ್ತಕರ್ನಾಟಕ' ಪತ್ರಿಕೆಯ ಸಂಚಾಲಕರಿಗೆ ಕೃತಜ್ಞತೆಯ ವಂದನೆಗಳು. ೧೭೦

ವಿಶೇಷ ಸೂಚನೆ:— ಜಯಂತಿಯ ಸಣ್ಣ ಕತೆಗಳ ಸ್ಪರ್ಧೆಯ ಪ್ರಕಟನೆಯನ್ನು ಬರಲಿರುವ ನವ್ಹೆಂಬರ್ ಸಂಚಿಕೆಯಲ್ಲಿ ನೋಡಬೇಕು. ೬೦ ರೂ. ೧೫ ರೂ. ೧೦ ರೂ. ಹೀಗೆ ಬಹುಮಾನಗಳನ್ನಿರಿಸಲಾಗಿದೆ. ೧೭೭

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಪೆಡುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳಸಲು ಆದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನರೆಯುವುದು, ಹೊಟ್ಟು, ಉದುರುವುದು, ಪಟ್ಟಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯೋತ್ತಮವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.



RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.



ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ನೆಯ ಆಕ್ಟೋಬರ್ ೧೯೪೬ | ಸಂಚಿಕೆ ೬

ಬೆಳುದಿಂಗಳು

ಶ್ರೀ. 'ಜಿದಾನಂದ' ಬೈಲಹೊಂಗಲ

ಬೆಳುದಿಂಗಳು ಬಂದಿದೆಯಿದೊ,
ಜಿಚ್ಚ್ಚಕೋರವೆ!
ಮುಗಿದ ಮೊಗವ ಅರಳಿಸು ನೀ
ಹೃದಯ ಕುಮುದವ. ೧

ಚಾಂದೇವಿಯ ಮಣಿಮುಕುಟದ
ಬೆಳಕಿನಂತಿದೆ;
ರಾತ್ರಿರಮಣಿ ಜವನಿಕೆಯನು
ಧರಿಸಿದಂತಿದೆ. ೨

ಸೃಷ್ಟಿದೇವಿ ಪಾಲ್ಗಡಲೊಳು
ಮಿಂದ ಹಾಗಿದೆ;
ಶಾಂತಿರಸವ ಮಳೆಯು ಜಗದಿ
ಸುರಿದ ಹಾಗಿದೆ. ೩

ಮಾನವತೆಯ ಪುಣ್ಯಗಂಗೆ
ಹರಿವಂತಿಹುದು;
ಮಂಗಲತೆಯ ಹಿಮವು ಕರಗಿ
ಹನಿವಂತಿಹುದು. ೪

ಆನಂದದ ಕಡಲು ಉಕ್ಕಿ
ಜಿಲ್ಲಿಡಂತಿದೆ;
ಸೌಂದರ್ಯದ ಬುಗ್ಗೆಯೊಡೆದು
ಜಿಮ್ಮಿಡಂತಿದೆ. ೫

ಭೂಮಾತೆಯು ನಕ್ಕಂತಿದೆ
ಪರಮಾತ್ಮನ ಜಯವಿಯಂತಿದೆ;
ಆಸುರಸ್ಪರ್ಶವ ಪರಸಿದೆ
ಇನಿಯನನ್ನೆ ಮರೆಸಿದೆ. ೬

ಬೆಳುದಿಂಗಳು ಬಂದಿದೆ, ನಲಿ
ಜಿಚ್ಚ್ಚಕೋರವೆ,
ಮೊಗವರಳಿಸಿ ನಗೆಹರಿಯಿಸು
ಹೃದಯಕುಮುದವೆ ೭

ಪುಂಡಾಟಿಕೆಗೆ ಖಂಡಿತವಾದ ಪ್ರತ್ಯುತ್ತರವು

ಇದೀಗ ರಾಜಕೀಯ ಸಂಕ್ರಮಣ ಕಾಲ. ಪುರಾಣದಲ್ಲಿ ಬಣ್ಣಿಸಿದಂತಹ ದೇವಾಸುರರ ಸಾಗರಮಂಥನದಂತಹ ಸಂದರ್ಭವೇ ಇದೆಂದು ಹೇಳಬಹುದು. ಇಂದಿನ ಪರಿಸ್ಥಿತಿಮಂಥನದ ಕಡೆಗೊಳ ಪಗ್ಗವು ಇಬ್ಬರ ಕೈಯಲ್ಲಿಯೆ ಇಲ್ಲ; ಹಲವರ ಕೈಯಲ್ಲಿದ್ದು ಎಲ್ಲರೂ ತಂತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಜಗ್ಗುತ್ತಿರುವರು. ಎಲ್ಲರಿಗೂ ಸ್ವಾತಂತ್ರ್ಯದ ಅಮೃತವನ್ನು ದೊರಕಿಸಬೇಕೆಂಬ ಆಶೇಕ್ಷೆಯಿದ್ದರೂ ಸರಿಯಾದ ರೀತಿಯಲ್ಲಿ ಕಡೆತದ ಕೆಲಸ ಸಾಗಿಲ್ಲ.

ಪರಸ್ಪರರಲ್ಲಿ ಅವಿಶ್ವಾಸ, ಮತ್ಸರ, ಈರ್ಷೆ, ಸ್ಪರ್ಧೆ, ದ್ವೇಷಗಳು ಬಡುಕಿ ಬಾಳಬೇಕೆನ್ನುವ ಸಾಧುವೃತ್ತಿಯ ಬಹುಸಂಖ್ಯಾಕ ಜನರನ್ನು ಸ್ವಾರ್ಥಸಾಧಕರಾದ ಪುಂಡರ ತಂಡ ಸುಖ-ಸಮಾಧಾನಗಳಿಂದ ಬಾಳಗೊಡದಾಗಿದೆ. ಸುಶಿಕ್ಷಿತರೆನ್ನಿಸಿಕೊಳ್ಳುವ ಪುಂಡರಿಗೆ ಅಧಿಕಾರ ಸೂತ್ರಗಳು ಕೈಯಲ್ಲಿ ಬೇಕಾಗಿವೆ; ಅಶಿಕ್ಷಿತರಾದ ಪುಂಡರಿಗೆ ತಮ್ಮ ಪಾಶವ ಆಶೆ-ಆಕಾಂಕ್ಷೆಗಳನ್ನು ಪೂರಯಿಸಿಕೊಳ್ಳುವ ಸಂದರ್ಭಗಳು ಬೇಕಾಗಿವೆ. ಆದುದರಿಂದಲೇ ಇಬ್ಬರೂ ಪರಸ್ಪರ ಸಹಕಾರಿಗಳಾಗುವರು; ಬದುಕಿಬಾಳಬೇಕೆನ್ನುವ ಬಹುಸಂಖ್ಯಾಕರ ಗುಂಪನ್ನು ಅಶಾಂತಿ-ಅಸಮಾಧಾನಗಳಿಗೆ ಗುರಿಮಾಡುವರು.

ಪರಾಧೀನತೆಯಲ್ಲಿ ಬಹುದಿನ ಬಾಳಿದ ನಮ್ಮಲ್ಲಿಯ ಬಹಳ ಜನರಿಗೆ ಸ್ವಾತಂತ್ರ್ಯದ ಸರಿಯಾದ ಅರ್ಥವೇ ಗೊತ್ತಾಗಿಲ್ಲ ಒಂದೊಂದು ಧರ್ಮದವರಿಗೂ, ಒಂದೊಂದು ಪಂಥದವರಿಗೂ, ಒಂದೊಂದು ಕುಲದವರಿಗೂ—ತಮಗೆಮಗೆ ತಿಳಿದಂತಹ—ಸ್ವಾತಂತ್ರ್ಯ ಬೇಕಾಗಿದೆ. ಇಂತಹ ಸ್ವಾತಂತ್ರ್ಯವೆಂದರೆ ಅದು ನಿಜವಾದ ಸ್ವಾತಂತ್ರ್ಯವಲ್ಲ; ಸ್ವೈರವೃತ್ತಿ. ಸ್ವೈರವೃತ್ತಿ ಸಮಾಜದಲ್ಲಿ ಸುಖ-ಶಾಂತಿಗಳನ್ನೆಂದೂ ನೆಲೆಗೊಳಿಸದು. ಬಲಿಷ್ಠರಿಂದ ಬಲಹೀನರನ್ನು ತುಳಿಯಲು ಹಚ್ಚುವುದು. ಇನ್ನೊಬ್ಬನ ಜೀವಿತದ ದಾರಿಯಲ್ಲಿ—ಅತ್ಯವಿಶ್ವಾಸದ ದಾರಿಯಲ್ಲಿ ಅಡ್ಡವಾಗದಂತೆ, ಬಹುಜನರ ಸುಖ-ಶಾಂತಿಯನ್ನು ಸಾಧಿಸಬಹುದಾದ ಬಹುಜನರಿಂದ ಒಪ್ಪಿಗೆಯನ್ನು ಪಡೆದ—ತಂತ್ರಗಳಿಗೆ ಜೀಗಾಗಿ ನಡೆಯುವುದೆಂದರೆಯೆ ನಿಜವಾದ ಸ್ವಾತಂತ್ರ್ಯ. ಅಧಿಕಾರಾಕಾಂಕ್ಷಿಗಳೂ ಸ್ವಾರ್ಥಸಾಧಕ ಹಿಂಸಾಕಾಂಕ್ಷಿಗಳೂ ಇಂತಹ ನಿಜವಾದ ಸ್ವಾತಂತ್ರ್ಯದ ದಾರಿಯಲ್ಲಿ ಕಲ್ಲು-ಮುಳ್ಳುಗಳನ್ನು ಹರಡುವರು. ಅದಕ್ಕಾಗಿ ಬಹುಜನವರ್ಗ ಮುನ್ನೆಚ್ಚರಿಕೆಯಿಂದಿರಬೇಕಾದುದು ಅತ್ಯಗತ್ಯದ ವಿಷಯವಾಗಿದೆ.

ಭಾರತದ ಇಂದಿನ ಪರಿಸ್ಥಿತಿಯು ಮಂಥನದ ಮುಖ್ಯವಾದ ಹಗ್ಗ ಬ್ರಿಟಿಷರ ಕೈಯಲ್ಲಿದೆ. ಎಲ್ಲರನ್ನೂ ಪಂಚಾಯತ್ರಾಗಿ ಮಾಡಿ, ಸಿಕ್ಕಬಹುದಾದ ಅಲ್ಪಾಂಶವನ್ನಾದರೂ ತಮಗೇ ಬೇಕೆಂದು ಸಿಕ್ಕಬೇಕೆಂದು ಅವರ ಇಚ್ಛೆ. ಅನೇಕ ಸಲ ಅವರು ಹಗ್ಗವನ್ನು ಎಳೆಯುತ್ತಿರುವರು. ಬಾಯಲ್ಲಿ ಅಮೃತ ಮಾತು ಮುತ್ರ ಭಾರತದ ಕಲ್ಯಾಣ; ಮಾನವಕೋಟಿಯ ಸುಖಸಾಧನ ಇವರೊಂದಿಗೇ ವೈಯಕ್ತಿಕ ಹಿತವನ್ನೋ ಪಂಗಡ-ಪಕ್ಷಗಳ ಹಿತವನ್ನೋ ಸಾಧಿಸಬೇಕೆನ್ನುವ ಮುಸ್ಲಿಮ್ ಲೀಗು, ಪಲಿತವರ್ಗದ ಮಹಾಸಭೆ, ಹಿಂದೂ ಮಹಾಸಭೆಗಳವರು ತಮ್ಮ ತಮ್ಮ ರೀತಿಯಲ್ಲಿ ಹಗ್ಗ ಹಿಡಿದು ಸೆಳೆಯುತ್ತಿರುವರು. ಕಮ್ಯುನಿಸ್ಟ್ರು, ಸೋಶಾಲಿಸ್ಟರು ಒಂದುಕಡೆಗೆ ಸೆಳೆಯುತ್ತಿದ್ದರೆ ಜನತಾನಾಯಕರು, ಸಿವಿಂತರು ಇನ್ನೊಂದು ಕಡೆಗೆ ಎಳೆಯುತ್ತಿದ್ದಾರೆ. ಆದುದರಿಂದ, ನಿಜವಾದ ಅಮೃತವನ್ನು ಪಡೆದು, ಭಾರತದಲ್ಲೆಲ್ಲ ಶಾಂತಿ-ಪುಷ್ಟಿ-ತುಷ್ಟಿಗಳನ್ನು ಸ್ಥಾಪಿಸಬೇಕೆಂಬ ಮಹೋದ್ದೇಶದಿಂದ ಮುಂದೆ ಬಂದು ಮುಖ್ಯವಾದ ಹಗ್ಗವೊಂದನ್ನು ಹಿಡಿದ ಕಾಂಗ್ರೆಸ್ ಪಕ್ಷದ ಚಲನ-ವಲನಕ್ಕೆ ಅಡೆತಡೆಗಳೇ ಹೆಚ್ಚಾಗುತ್ತಲಿವೆ. ಈ ವಿಚಿತ್ರಗತಿಯು ಮಂಥನದಲ್ಲಿ ಹೊರಡುವ ದ್ವೇಷ, ಮತ್ಸರ, ಹಿಂಸೆ ಮೊದಲಾದ ಕಾಲಕೂಟವೈವಿಧ್ಯಗಳನ್ನು ನುಂಗಿ ಪಚನಮಾಡಿಕೊಂಡು ಅದು ಮುಂದಿನ ಕಾರ್ಯಕ್ಕೆ ಸ್ವಸ್ಥವೃತ್ತವಾಗಬೇಕಾಗಿದೆ. ಕಾಂಗ್ರೆಸಿನ ವಿಷಯದಲ್ಲಿ ಶ್ರದ್ಧೆಯಿರಿಸಿಕೊಂಡಿರುವ ಬಹುಸಂಖ್ಯಾಕ ಜನತೆ, ಇದರ ಕಾಲಕೂಟವಿಜ್ಞಾನದ ಕಾರ್ಯದಲ್ಲಿ ಸಹಾಯಕರಾಗಿ ನಿಲ್ಲುವುದು ಅತ್ಯವಶ್ಯವಾಗಿದೆ.

ಅಲ್ಲಲ್ಲಿ ನಡೆದಿರುವ ಜಾತೀಯ ದೊಂಬಿ, ಪುಂಡಾಟಿಕೆಗಳೆಂದರೆಯೆ ಉಗ್ರವಾದ ವಿಷ. ಇದು ಎಲ್ಲರ ಪಕ್ಷದವರಿಗೂ ಹಿಂಸಾಕಾರಿ. ಇದನ್ನು ಕೇವಲ ಆಡಳಿತದ ಸಂರಕ್ಷಕ ಅಧಿಕಾರಿವರ್ಗದಿಂದ ತಡೆಯುವುದೂ ಪರಿಹರಿಸುವುದೂ ಸಾಧ್ಯವಿಲ್ಲ. ಇದರ ಪರಿಹಾರಕ್ಕಾಗಿ ಪ್ರಜಾಶರನೇಶ್ವರನೇ ಎಚ್ಚರ್ತು ನಿಲ್ಲಬೇಕಾಗಿದೆ. ತನ್ನ ತಪಸ್ಸಿನ ಮೂಲಕ ಸಂಸಾದಿಸಿದ ಗಾಢಾನುಭವವಿದ್ಯೆಯಿಂದ ಈ ವಿಷದ ಶಕ್ತಿಯನ್ನು ಕಡಿಮೆ ಮಾಡಬೇಕಾಗಿದೆ. ಹಾಗಾದರೆ ಪ್ರಜಾಪರಮೇಶ್ವರನು ಎಚ್ಚರುಗೊಳ್ಳುವುದೆಂದರೆ ಏನು?

ನಮ್ಮಲ್ಲಿಯ ಯಾವ ಜಾತಿ-ಪಂಗಡಗಳನ್ನೇ ತೆಗೆದುಕೊಳ್ಳೋಣ. ಎಲ್ಲಪುಗಳಲ್ಲಿಯೂ ಸುಖ-ಸಮಾಧಾನಗಳಿಂದ ಬಾಳಬೇಕೆನ್ನುವ ಜನರೇ ಬಹುಳವಾಗಿರುವರಲ್ಲದೆ, ಅತ್ಯಾಚಾರಪ್ರಿಯರಿರುವುದಿಲ್ಲ. ನೆರೆಹೊರೆಯವರೆಲ್ಲ ಸ್ನೇಹ-ಸೌಹಾರ್ದದಿಂದ ಇರಬೇಕೆಂದು ಬಯಸುವವರೇ ಬಹುಸಂಖ್ಯಾಕರು ಮೊದಲು, ಪಗೆ-ಹೊಟ್ಟೆಕಿಚ್ಚು ಮಾಡಬೇಕೆನ್ನುವವರಿಲ್ಲ. ಆದುದರಿಂದ ಅಂತಹ ಶಾಂತಿಪ್ರಿಯ ಜನರು ಒಂದುಗೂಡಿ, ಹಳ್ಳಿ-ಹಳ್ಳಿಗಳಲ್ಲಿಯೂ ಪಟ್ಟಣ-ಪಟ್ಟಣಗಳಲ್ಲಿಯೂ ಶಾಂತಿ ಸಂರಕ್ಷಕ ದಳಗಳನ್ನು ಏರ್ಪಡಿಸಬೇಕು. ಇದರಲ್ಲಿ ಇಂ

ಜಾತಿ-ಕುಲಗಳೆಂಬ ನಿರ್ಬಂಧವಿಲ್ಲದೆ ಎಲ್ಲ ಜಾತಿ-ಪಂಥದ ಶಾಂತಿ-ಪ್ರಿಯ ತರುಣರನ್ನೂ ಸೇರಿಸಬೇಕು. ಭಾರತೀಯ ಕಲಹಗಳು ಎಲ್ಲಿಯಾದರೂ ನಿಲ್ಲುವ ಸುಳಿವು ಕಂಡಾಕ್ಷಣ, ಇದಕ್ಕಾಗಿ ಇಲ್ಲಿ ಪೂರ್ವೋಪಾಯಗಳನ್ನು ಕೈಕೊಳ್ಳಬೇಕು; ಕಲಹಗಳೆದ್ದಲ್ಲಿ ಯಾವ ಜಾತಿಯವರು ತಪ್ಪುಗಾರರೆಂದು ನಿರ್ಣಯಿಸಲು ಹೋಗದೆ ಕಲಹಗಳು ನಿಂತು ಹೋಗುವಂತೆ ಪ್ರತ್ಯಕ್ಷವಾಗಿ ಪ್ರಾಣಹಾನಿಯಿಂದ ತಡೆಯೊಡ್ಡಬೇಕು; ಇಂಥ ಕಲಹಗಳ ಕಾಲದಲ್ಲಿ ಕಷ್ಟ ಸನ್ನಿವೇಶಗಳಿಗೆ ಗುರಿಯಾಗಿದ್ದ ಸಾಮಾಜಿಕರಿಗೆ ನಿಷ್ಪಕ್ಷಪಾತದಿಂದ ಸಹಾಯವನ್ನು ನೀಡುವುದು— ಇವೇ ಆ ಶಾಂತಿಸಂರಕ್ಷಕ ದಳದ ಮುಖ್ಯ ಕೆಲಸವಾಗಬೇಕು. ಇಂದಿನ ಜಾತೀಯ ಕಲಹದ ಪುಂಡಾಟಿಕೆಯನ್ನು ಖಂಡಿತವಾಗಿ ತಡೆಯಲಿಕ್ಕೆ ಸರಿಯಾದ ಉಪಾಯವೆಂದರೆ ಈ ಶಾಂತಿ-ಸಂರಕ್ಷಕ ದಳವೇ ಅದೀತಲ್ಲದೆ ಪೋಲೀಸ ದಳವು ಆಗದು, ಸೈನ್ಯವೂ ಆಗದು. ಇವು ಅಧಿಕಾರಿಗಳ ಬಲಸಂತತಿಯ ಉಪಾಯಗಳಾದುದರಿಂದ, ಇವುಗಳಿಂದ ಅಧಿಕಾರಕ್ಕೆ ತಾತ್ಕಾಲಿಕ ದೃಷ್ಟಿಯಿಂದ ವಿರೋಧಿಗಳಾಗಿರುವ ಜನರಲ್ಲಿ ರೊಚ್ಚು ಹೆಚ್ಚುವುದು; ಸುಖ-ಶಾಂತಿಗಳು ಇನ್ನಿಷ್ಟು ದೂರಕ್ಕೆ ಓಡುವುವು.

ಆದುದರಿಂದ ಇಂದು ಹಳ್ಳಿಹಳ್ಳಿಗಳಲ್ಲಿಯ ಜನ—ರಾಜಕೀಯ ಮತಗಳೇನೇ ಇರಲಿ—ಎಲ್ಲರ ಮಾನವೀಯ ಸಾಮಾಜಿಕ ಹಕ್ಕುಗಳು ಒಂದೆಬಗೆಯವಾದುದರಿಂದ, ಅವುಗಳ ಸಂರಕ್ಷಣೆಗಾಗಿ ಶಾಂತಿ-ಸಂರಕ್ಷಕದಳಗಳನ್ನು ಸಂಘಟಿಸಬೇಕು. ಪಟ್ಟಣಗಳಲ್ಲಂತೂ ಇಪ್ಪಗಳ ಸಂಘಟನೆಯು ಅವಶ್ಯಕತೆ ಅತಿಯಾಗಿ ಇದೆಯೆಂಬುದನ್ನು ಅರಿತುಕೊಂಡು, ಪಟ್ಟಣಿಗರು ಇದಕ್ಕಾಗಿ ಕಾರ್ಯಪ್ರವೃತ್ತರಾಗಬೇಕು.

ವಿವಿಧ ಪ್ರಕೃತಿಯ ಜನರಿರುವಲ್ಲಿ ಮತಭಿನ್ನತೆಯಿರುವುದು ಸ್ವಾಭಾವಿಕ. ಈ ಮತಭಿನ್ನತೆಯ ಮೂಲಕ ಮುನಿದಾಟಗಳೇಳುವುದೂ ಸ್ವಾಭಾವಿಕ. ಆದರೆ ಇಂಥ ಮುನಿದಾಟಗಳು ಮಾನವನ ಜೀವಿಸುವ ಮೂಲ ಹಕ್ಕನ್ನು ಅಪಹರಿಸುವುದೆಂದರೆ ಅದು ಅಸಹ್ಯವಾದ ಅನೀತಿ. ಈ ಅನೀತಿಯನ್ನು ತಡೆಯುವುದು ಮನುಷ್ಯಮಾತ್ರನಾದ ಪ್ರತಿಯೊಬ್ಬನ ಪ್ರಮುಖವಾದ ಕರ್ತವ್ಯ.

ಓಂ ಸಹನಾವವತು, ಸಹನೌ ಭುನಕ್ತು,
ಸಹವೀರ್ಯಂ ಕರವಾವಹೈ।
ತೇಜಸ್ವಿನಾವಧೀತಮಸ್ತು
ಮಾವಿದ್ವಿಷಾವ ಹೈ।
ಓಂ ಶಾಂತಿಶ್ಶಾಂತಿಶ್ಶಾಂತಿಃ

—ಸಂಪಾದಕರು.

ಕನ್ನಡ ಕಾವ್ಯಮಾಲೆ

ಬೆಳಗಾಂವಿ ಜಿಲ್ಲೆಯ ಸೇಡಬಾಳದಲ್ಲಿ ಪ್ರಕಟವಾಗುವುದು.

ಸಂಪಾದಕರು :

ಶ್ರೀ. ಟಿ. ಕೆ. ಪಾಟೀಲ ಬಿ.ಎ., ಬಿ.ಟಿ.

ಕನ್ನಡಕ್ಕಾಗಿ ದುಡಿದು ಅನುಭವಪಡೆದ ವಿದ್ವಾಂಸರ ಸಲಹೆಗಳಿಂದ, ಆಧುನಿಕ ದೃಷ್ಟಿಗೆ ಒಪ್ಪುವಂತೆ ವಿಸ್ತೃತ ಮುನ್ನುಡಿ, ಟೀಕೆ-ಟಿಪ್ಪಣಿಗಳನ್ನು ಬರೆಯಿಸಿ, ಹಳಗನ್ನಡ ಗ್ರಂಥಗಳನ್ನು ಈ ಕಾವ್ಯಮಾಲೆಯಲ್ಲಿ ಪೋಣಿಸಲಾಗುವುದು.

'ನಿಸರ್ಗ' ಕಾದಂಬರಿ ಬರೆದು ಕನ್ನಡಲೋಕಕ್ಕೆ ಪರಿಚಿತರಾಗಿರುವ ಶ್ರೀ. ವಿ.ಜಿ. ಅಣ್ಣಾರಾಯರು ಸಂಪಾದಿಸಿದ

ಚಿನ್ಮಯ ಚಿಂತಾಮಣಿ

ಎಂಬ ಆಧ್ಯಾತ್ಮಿಕ ಗ್ರಂಥವು ಈ ಮಾಲೆಯ ಮೊದಲನೆಯ ಕುಸುಮವಾಗಿ ದೀಪಾವಳಿಗೆ ಅರಳುವುದು

ಕನ್ನಡ ಕಾವ್ಯಮಾಲೆ 'ಶಾಂತಿನಿವಾಸನ' ಸೇಡಬಾಳ
ಜಿಲ್ಲಾ ಬೆಳಗಾಂವಿ

ಸೂಚಿಶಿಲ್ಪಕಲೆ

ಹೊಲಿಗೆ ಕಲಿಯಬೇಕೆನ್ನುವವರಿಗೆ ಪ್ರಯೋಜನಕಾರಿಯಾದ
ಸಚಿತ್ರ ಪುಸ್ತಕ ★ ಇದೀಗ ಪ್ರಕಟವಾಗಿದೆ.

ಬರೆದವರು :

'ಸೂಚಿಶಿಲ್ಪ ನಿಪುಣ' ಹಳಪೇಟೆ ಚಿಂತಾಮಣಿಯವರು

ಬಟ್ಟೆ ಕತ್ತರಿಸುವುದು, ಹೊಲಿಗೆ, ಯಂತ್ರದ ಪರಿಚಯ, ಕಸೀದೆಯ ಕೆಲಸ ಮೊದಲಾದ ಸಮಗ್ರ ವಿಷಯಸಂಗ್ರಹವಿರುವುದಲ್ಲದೆ ಬಟ್ಟೆಯ ಬೆಲೆಬಾಳಿಕೆ, ಬಟ್ಟೆಯಳಿಕೆ ಕಳೆಯುವುದು, ಕಲೆ ತೆಗೆಯುವುದು ಇತ್ಯಾದಿ ಉಪಯುಕ್ತ ವಿಷಯದ ಪರಿಚಯವನ್ನೂ ಕೊಡಲಾಗಿದೆ.

ಪರಿಸ್ಥಿತಿಯ ಮೂಲಕ ಕೆಲವೆ ಪ್ರತಿಗಳನ್ನು ಪ್ರಕಟಿಸಲಾಗಿದೆ.
ಶೀಘ್ರವೆ ಮುಂಗಡ ಹಣ ಕಳುಹಿಸಿ ಪ್ರತಿಯನ್ನು ಪಡೆಯಬೇಕು.

ಸಿ. ಡಿ. ಹಳಪೇಟೆ, ಗಾಂಧೀಚೌಕ
ಧಾರವಾಡ.

ಪ್ರಶ್ನೆಗೆ ಉತ್ತರ

೧

ಪ್ರ:— ಇತ್ತೀಚೆಗೆ ರಾಜಕಾರ್ಯದಲ್ಲಿ ಕರ್ನಾಟಕ ಸಿಂಹ' ಗಂಗಾಧರರಾಯರ ಧ್ವನಿಯು ಕೇಳದಂತಾಗಿದೆಯಲ್ಲಾ! ಅದೇತಕ್ಕಾಗಿ ಅವರು ಹೀಗೆ 'ಹೆಸರಾಗಿಯೂ ಕೂಡ ಬೇಳಹೆಸರಿಲ್ಲ' ದಂತಾಗಿದ್ದಾರೆ?

ಉ:— ಇದರ ಉತ್ತರವನ್ನು ಬಾಯಿಮಾತಿನಿಂದ ಹೇಳಲಿಕ್ಕೆ ಬರುವುದಿಲ್ಲ. ಕನ್ನಡಿಗರ ಹೃದಯಕ್ಕೆ ಶ್ರೀ. ಗಂಗಾಧರರಾಯರ ಹೃದಯವು ಹಲವು ಸಲ ಉತ್ತರ ಕೊಟ್ಟಿದೆ.... ಈ ವಿಷಯದ ಬಗ್ಗೆ 'ಗಂಡನಿಗೆ ಬೇಡವಾದ ಹೆಣ್ಣು ಗುಂಡ ಕಲ್ಲಿಗೂ ಬೇಕಾಗುವುದಿಲ್ಲವಂತೆ' ಎಂಬ ನಾಣ್ಣುಡಿ ಗೊತ್ತಿದೆಯಲ್ಲವೆ?

೨

ಪ್ರ:— ಕರ್ನಾಟಕದ ರಾಜಕಾರ್ಯದಲ್ಲಿ ಒಂದು ಪ್ರಮುಖವಾದ ಪಕ್ಷ, ದೇ. ಭ. ದಿವಾಕರರಂಗರಾಯರನ್ನು ತಲೆಯೆತ್ತದಂತೆ ಮಾಡಬೇಕೆಂದು ಪ್ರತಿಜ್ಞಾಬದ್ಧವಾಗಿದೆಯಂತಲ್ಲ; ಏಕೆ? ವಿರುದ್ಧವಿದವರು 'ಅಕಳಾ ಸಕಳಾ' ಟೀಕೆ ಮಾಡಿ ದಿವಾಕರರನ್ನು ಬೈಯುತ್ತಾರೆ; ಆದರೂ ಅವರು ತಲೆಯೆತ್ತಿಕೊಂಡೇ ತಿರುಗುತ್ತಾರಲ್ಲಾ! ಅದು ಹೇಗೆ?

ಉ:— ಇದರಲ್ಲಿ ಎರಡು ಮಾತುಗಳನ್ನು ನೀವು ಕೇಳಿದ್ದೀರಿ. ಮೊದಲನೆಯ ಮಾತಿಗೆ ನಮ್ಮ ಉತ್ತರವಿಷ್ಟು: ಜಿನ್ನಾ — ಅಂಬೇಡಕರರು ಗಾಂಧೀ—ಜವಾಹರಲಾಲರನ್ನು ತಲೆಯೆತ್ತದಂತೆ ಮಾಡಬೇಕೆಂದು ಪಣತೊಡುತ್ತಾರೆ, ಗೊತ್ತೇ? ಅದೇಕೆ ಎಂಬುದನ್ನು ಗೊತ್ತಿದ್ದರೆ ಇದೂ ನಿಮಗೆ ಗೊತ್ತಾಗಲಿಕ್ಕೆ ಬಹುದಾಗಿದೆ. ಇನ್ನು ಎರಡನೆಯ ಮಾತಿಗೆ ಹೀಗೆ ಉತ್ತರ ಹೇಳಬಹುದು: ಮನೆಯಲ್ಲಿ ಇರುವ ಬೈಲ ಪತಿವ್ರತಾಸ್ತ್ರೀಯರಿಂತ, ಬೈಸಿಕೊಂಡರೂ ಕಾರ್ಯ ಸಾಧಿಸುತ್ತಿರುವವರು ತಲೆಯೆತ್ತಿಕೊಂಡೇ ತಿರುಗಬೇಕಾಗುವುದು.

೩

ಪ್ರ:— ಅಡ್ವಾಸಾದೇಬ ಲಕ್ಷ್ಮಿಯವರು ರಾಜಕಾರ್ಯದಿಂದ ನಿವೃತ್ತರಾದರೆ? ಅವರು ಸದಸ್ಯರಾಗಿ ಆರಿಸಿ ಬಂದಿದ್ದರೂ ಮುಂಬಯಿ ಅಸೆಂಬ್ಲಿ ಅಧಿವೇಶನಗಳಿಗೆ ಹೋಗುತ್ತಿಲ್ಲವೆಂದೆ ಕಾಣುವುದಿಲ್ಲ. ಆದೇಕೆ?

ಉ:— ಈ ವಿಷಯದ ಬಗ್ಗೆ ಸಲ್ಲಸಳಾಯಿ ಪಟೇಲರನ್ನು ಬರೆದು ಕೇಳಿದರೆ ಅವರು ಹೆಚ್ಚು ವಿವರವಾಗಿ ಉತ್ತರ ಕೊಟ್ಟಾರು. ಪಟೇಲ ಮಲ್ಲನ ಗೌಡರು ಮಂತ್ರಿಪೀಠದಿಂದಿಳಿದು, ಲಟ್ಟು ಯವರಿಗೆ ಅವಕಾಶ ಮಾಡಿಕೊಟ್ಟರೆ, ಅವರು ಪಂಡಿತವಾಗಿ ಅಸೆಂಬ್ಲಿಯ ಅಧಿವೇಶನಗಳಿಗೆ ಹೋಗುವರು. ಹೀಗೆ ಮಾಡಿಸಲಿಕ್ಕೆ ಸಾಧ್ಯವಿದಯೇ ನಿಮಗೆ?

೪

ಪ್ರ:— ಮುಂಬಯಿ ಪ್ರಾಂತದಲ್ಲಿ ಕರ್ನಾಟಕ ವಿಭಾಗ ಏಷ್ಟಿರಿಂದು ಸುಮಾರ್ಕ್ಷವಾಗಿದ್ದರೂ ಮುಂಬಯಿ ಅಸೆಂಬ್ಲಿಯು ಮಂತ್ರಿಮಂಡಲದಲ್ಲಿ ಕನ್ನಡಿಗರೊಬ್ಬರೇ ಇದ್ದಾರಲ್ಲಾ; ಅದೇಕೆ ಹೀಗೆ?

ಉ:— ಇದೇ ಮಾತನ್ನು ನಾವೂ ಕಾಂಗ್ರೆಸ್ ಮೇಲಧಿಕಾರಿಗಳಿಗೆ ಬರೆದೂ ಕೇಳಿದ್ದೆವು. ಆದರು ಕನ್ನಡಿಗರ ಬುದ್ಧಿ-ವಿವೇಕಗಳ ಅಸ್ತಿತ್ವಕ್ಕೇ ಕೊಡಲಿಯಿಕ್ಕಿರಂತೆ ಇನ್ನೊಂದು ಸಲವೂ ಮಾಡಿಯಲ್ಲಿ ಕಾಲದಲ್ಲಿ ಬುದ್ಧಿ-ವಿವೇಕಗಳನ್ನುಪಯೋಗಿಸಿ ಕೊಂಡು, ಕನ್ನಡಿಗರು ಪಕ್ಷ ಪ್ರತಿನಿಧಿಗಳನ್ನು ಆರಿಸಿಕೊಟ್ಟಾರೆ, ಇನ್ನು ಬಂದೇ ಏಕೆ? ಎಲ್ಲ ಸ್ಥಾನಗಳನ್ನೂ ಕನ್ನಡಿಗರಿಗೇ ಕೊಡಬೇಕು" ಎಂದು ಉತ್ತರ ಕೊಟ್ಟರು. ಅವರ ಈ ಉತ್ತರ ಸರಿಯಾಗಿದೆಯೇ ಎಂಬುದನ್ನು ನೀವೇ ಸ್ವಲ್ಪ ಪರಿಶೀಲನೆ ಬುದ್ಧಿಯಿಂದ ವಿಚಾರಿಸಿ ನೋಡಿರಿ.

೫

ಪ್ರ:— 'ವೈದಿಕೀಜಂ' ಎಂದರೇನು? ಭಾರತ ಶಾಸ್ತ್ರೀಯು ನ್ಯಾಯಾಧೀಶರು ರಾಜಕೀಯ ಪತ್ರಜ್ಞಾನವನ್ನು 'ವೈದಿಕೀಜಂ' ಪ್ರತಿಪಾದಿಸುವುದಂತೆ. ಇಂದು ಜಗತ್ತೆಲ್ಲವೂ ಭಾರತ ರಾಷ್ಟ್ರೀಯ ಮಹಾಸಭೆಯ ನೀತಿ-ಮೆಚ್ಚಿ-ಪೂರಸ್ಕರಿಸುವುದೆಂದಮೇಲೆ, ಅವರ 'ವೈದಿಕೀಜಂ' ತತ್ವಜ್ಞಾನವನ್ನು, ಒಬ್ಬರು ಬಾಯ್ಬಿ ಬಿಂದಂತೆ ಬೈಯುವುದಲ್ಲಾ; ಅದೇಕೆ ಹೀಗೆ?

ಉ:— 'ವೈದಿಕೀಜಂ' ಎಂಬ ವಾದ ಹೊಸದಾಗಿ ಪ್ರಚಾರದಲ್ಲಿ ಬಂದಿಹ. ಅದರ ಬಗೆಗೆ ಕನ್ನಡಿಗರೇ ಅದ ಬಲ್ಲಾರಿಯು ಶಾಸ್ತ್ರಿಗಳೊಬ್ಬರು ವಿವರಪೂರ್ಣವಾದ ಗ್ರಂಥವೊ. ದನ್ನು ಬರೆಯುತ್ತಿದ್ದಾರಂತೆ. ಅದು ಹೊರಕ್ಕೆ ಬಂದ ಮೇಲೆ ನಾನೂ ಓದಿನಿ ಕೇಳುವೆನು; ನಿಮಗೂ ಓದಲು ಹೇಳುವೆನು, ಯೋಕಕ್ಕೆಲ್ಲಾ ಬೇಕಾದ ಶಂಕರನನ್ನು ಶ್ರೀಪಾದರು ದ್ವೇಷ ಮಾಡುತ್ತಿದ್ದರಂತೆ ಕಾಂಗ್ರೆಸಿನ ಸರ್ವಸಾಮ್ಯ 'ವೈದಿಕೀಜಂ'ನ್ನು ದ್ವೇಷಿಸುವ ಒಬ್ಬಬ್ಬರೂ ಆ ಜಾತಿಗೆ ಸೇರಿದವರೆಂದು ಹೇಳಬೇಕಾಗುವುದು.

ಯೋಕ ವಿಚಿತ್ರ ಮಾರ್ಗಾವಳಿ

ಕರ್ನಾಟಕ ಬ್ರಾಹ್ಮಣರದೊಂದು ವಿದ್ಯಾಪ್ರಸಾರಕ ಸಂಘ ಮುಂಬಯಿಯಲ್ಲಿ ಪ್ರಾರಂಭವಾಗಿದೆ. ಈ ಸಲ ಕೆಲವು ವಿದ್ಯಾರ್ಥಿಗಳಿಗೆ ವೇತನಗಳನ್ನೂ ಕೊಟ್ಟಿದ್ದಾರೆ. ಖಂಡಿತ ಜವಾಹರಲಾಲರೆ, ನೀವು ಚಿಂತೆಯನ್ನೇ ಬಿಟ್ಟುಬಿಡಿರಿ; ಭಾರತಕ್ಕೆ ನೀವು ಏನು ಮಾಡದಿದ್ದರೂ ಸ್ವಾತಂತ್ರ್ಯ ಸಿಕ್ಕೇ ಸಿಕ್ಕುತ್ತದೆ.

* * *

ಅಲ್ ಇಂಡಿಯಾ ರೇಡಿಯೊ ಸಂಸ್ಥೆಯು ಮುಂಬಯಿ ಕೇಂದ್ರದಲ್ಲಿ ಕರ್ನಾಟಕದ ಹಳ್ಳಿಗರಿಗಾಗಿ ಕಾರ್ಯಕ್ರಮವನ್ನೇರ್ಪಡಿಸಲು ಏರ್ಪಾಡು ನಿಮಿತ್ತಗಳನ್ನು ಕೊಟ್ಟಿದ್ದಾರೆ. ಕನ್ನಡಿಗರೇ, ಇನ್ನು ನೀವು ಹೊಗಿಕೊಳ್ಳುವುದನ್ನು ಬಿಡಿರಿ; ನಿಮಗಾಗಿ ಒಗಿಕೊಳ್ಳುವ ಕನ್ನಡ ಕಲಾವಿದರು ನಾಟಕ-ಹಾಡುಗಳನ್ನು ಕೇಳಿರಿ.

ಸ್ವಾಮಿ

(ಸಣ್ಣಕತೆ)

ಲೇ. ಪ. ಸು. ಭಟ್ಟ, ಶಿರಸಿ

(ಇದು ಯಾವನ್ನೂ ಉದ್ದೇಶಿಸಿ ಬರೆದುದಲ್ಲ. ಆದರೂ ಈ ರೀತಿ ಜೀವನ ಸಾಗಿಸುವವರು ಎಷ್ಟೋ ಜನ ಇದ್ದಾರೆ. —ಲೇ.)

★

ಜಗತ್ತು ಮೋಸ ಮಾಡಿದವರಿಗೇ ಮಣಿದು ಸೇವೆ ಸಲ್ಲಿಸುತ್ತದೆ. ಬಡವನಾದ ದಯಾನಾಥನನ್ನು ಕಣ್ಣು ತೆಗೆದು ಸಮಾಜ ನೋಡಲಿಲ್ಲ; ಅವನ ಮೋಸದ ವೇಷಕ್ಕೆ ಸಾವಿರಗಟ್ಟಲೆಯ ಕಾಣಿಕೆ ಸಲ್ಲಿಸಿತು.

★

ದಯಾನಾಥ, ಒಮ್ಮಿಂದೊಮ್ಮೆ— ಈಗ ಎಂಟು ವರ್ಷಗಳ ಹಿಂದೆ ಹೇಗೆ ಮಾಯವಾಗಿದ್ದನೋ ಹಾಗೆಯೇ— ಇಂದು ಮೂಡಬಟ್ಟಿದ್ದಾನೆ! ಅಲ್ಲದೆ ಕೈಯಲ್ಲಿ ಲಕ್ಷಾವಧಿ ರೂಪಾಯಿಗಳಿಸಿಕೊಂಡೂ ಬಂದಿದ್ದಾನೆಂದು ಊರೆಲ್ಲ ಸುದ್ದಿ. ಆತ— ಮಾರ್ಗದ ಮೇಲೆ— ಪ್ಯಾಂಟು ಹಾಕಿಕೊಂಡು ಒಳ್ಳೆ ಡಾಲಿ. ನಿಂದ— ಕೈಯಲ್ಲೊಂದು ದೊಣ್ಣೆ ಹಿಡಿದುಕೊಂಡು ಬರುತ್ತಿದ್ದ. ಮೊದಲಿಗಿಂತಲೂ ಈಗ ತುಂಬ ಧಷ್ಟಪುಷ್ಟನಾಗಿದ್ದಾನೆ. ಮೊದಲೋ ಊಟಕ್ಕೇ ಗತಿ ಇದ್ದಿಲ್ಲ! ಈಗ, ದೊಡ್ಡ ಶ್ರೀಮಂತನಾಗಿರುವನೆಂದು ಯಾರೂ ಭಾವಿಸುವಂತಿದ್ದ. ಒಂದು ವಿಶೇಷವೇನೆಂದರೆ— ಈಗ ಮುಸಲ್ಮಾನರಂತೆ ಗಡ್ಡ ಬೆಳಿಯಿಸಿದ್ದುದರಿಂದ, ಅದೊಂದು ಬಗೆಯಲ್ಲಿ ಚಿಂದ ಕಾಣುತ್ತಿದ್ದ.

'ದೊಡ್ಡ ಶ್ರೀಮಂತನಾಗಿದ್ದಾನೆ! ಬಡಗೆಳೆಯನ ನೆನಪಾದರೂ ಎಲ್ಲಿ ಆಗುವುದು?' ಎಂದು ಸುಮ್ಮನೆ ದಾರಿ ಹಿಡಿದು ಹೋಗುತ್ತಿದ್ದೆ.

ಆತನೇ ಕೂಗಿ ಕರೆದು ಮಾತನಾಡಿದ. ಯೋಗಕ್ಷೇಮದ ಮಾತುಕತೆ ಎಲ್ಲಾ ಮುಗಿದುವು. ಕೊನೆಗೆ ನಾನು ಕೇಳಿದೆ: "ಚಿಕಸ್ಮಾತ್ ಇಲ್ಲಿಂದ ಮಾಯವಾದೆ! ಈಗ ಒಮ್ಮೆಲೆ ಬಂದಿರುವೆ. ಈ ಗಡ್ಡ—ಎಲ್ಲಾ ಏನುಕತೆ?" ಎಂದು. ಆತ ನಗುತ್ತ ಹೇಳಿದ: "ಅದೆಲ್ಲಾ ದೊಡ್ಡ ಕತೆ. ಇಂದು ಸಂಜೆಗೆ ಊಟಕ್ಕೆ ನಮ್ಮ ಮನೆಗೇ ಬಂದುಬಿಡು. ಊಟ ಮಾಡಿಕೊಂಡು ನಿನಗೆಲ್ಲಾ ಸವಿವರವಾಗಿ ಹೇಳುತ್ತೇನೆ."

ನಾನು 'ಮುದ್ದಾಂ' ಬರುವೆನೆಂದು ಹೇಳಿ, ಮನೆಯ ಕಡೆಗೆ ನಡೆದೆ. ಆ ದಿನವೇ ಮನೆಯಲ್ಲಿ ಒಬ್ಬನಿಗೆ ಸಾಲುವಷ್ಟು ದೇವರ ಕೈಯೂ ಕಡಿಮೆಯಾಗಿತ್ತು. ಏನುಮಾಡುವುದು? ಹೆಂಡತಿ ಮಕ್ಕಳಿಗೆ ಉಪವಾಸ ಹಾಕಲು ಬರುತ್ತದೆಯೆ? 'ನಾನೇ ಉಪವಾಸ ಬೀಳುವ ಹೊತ್ತು ಬಂತು!' ಎಂದು ತಲೆ ಕೆರೆದುಕೊಳ್ಳುತ್ತಾ ಬರುತ್ತಿದ್ದೆ; ಅಷ್ಟರೊಳಗೆ ನನ್ನ ಪಾಲಿನ ದೇವರಂತೆ ಇವನು ಸಿಕ್ಕಿದ; ಊಟಕ್ಕೆ ಬರಲಕ್ಕೂ ಔತಣ ಕೊಟ್ಟ. ನಾನು, ದಯಾನಾಥ ಚಿಕ್ಕಂದಿನಿಂದಲೂ 'ಗಳಸ್ಯ ಕಂಠಸ್ಯ'ರಾಗಿದ್ದವು. ಇಬ್ಬರ ಊರು ಒಂದೆ! ಇಬ್ಬರೂ ಕೂಡಿ ಆಡಿದ್ದೇವೆ, ಅಲ್ಲಲ್ಲಿ ಎಷ್ಟೋ ದಿನ ಒಂದೇ ಬಟ್ಟಲಲ್ಲಿ ಊಟ ಮಾಡಿದ್ದೇವೆ. ಒಂದೇ ಹಾಸಿಗೆಯಲ್ಲಿ ಮಲಗಿ ನಿದ್ರಿಸಿದ್ದೇವೆ. ಹದಿನೆಂಟು ವರುಷದ ಗೆಳೆತನ. ಹಾಗೆ ಒಮ್ಮೆಲೇ ಮರೆಯಲು ಸಾಧ್ಯವೇ? ಎಂಟು ವರ್ಷವಾದರೇನಾಯಿತು?....

ಇದನ್ನೆಲ್ಲಾ ಯೋಚಿಸುತ್ತ ಮನೆಗೆ ಬರುವಾಗ, ಆಗಲೇ ಎಂಟು-ವರೆ ಗಂಟೆ ಆಗಿಹೋಗಿತ್ತು. ಬೇಗನೆ ಒಟ್ಟೆ ಬದಲಾಯಿಸಿಕೊಂಡು 'ರಾತ್ರಿ ನನಗೆ ಬರುವುದಿಲ್ಲ' ಎಂದು ತಿಳಿಸಿ, ದಯಾನಂದನ ಮನೆಯ ಕಡೆಗೆ ಹೋದೆ. ಬಾಗಿಲನ್ನು ಪ್ರವೇಶಿಸುವಾಗ ೯ ಗಂಟೆಯಾಯಿತು. ದಯಾನಂದ ನನ್ನ ಬರವನ್ನೆ ನೋಡುತ್ತ ಕುಳಿತಿದ್ದ. ಊಟಕ್ಕೆ ತಯಾರಿಯಾಗಿ ಹೋಗಿತ್ತು. ಹೋದವನೆ ಕೈಕಾಲು ತೊಳೆದುಕೊಂಡು, ಬಾಳೆಯ ಲೆಯ ಮುಂದೆ ಕುಕ್ಕುರಿಸಿದ್ದೇ!

"ಈ ಹಿಂದಿನ ಎಂಟು ವರ್ಷದಲ್ಲಿ, ಸಂಜೆಯಾಗುವುದರೊಳಗೆ ಫಲಾಹಾರ ಮುಗಿದು ಬಿಡುತ್ತಿತ್ತು. ಅದೇ ರೂಢಿ. ಒಂಬತ್ತು ಘಂಟೆಯೊಳಗೆ ಊಟವಾಗಲೇ ಬೇಕು!" ಎಂದ ದಯಾನಾಥ.

ಅಷ್ಟರಲ್ಲಿ ಎಲೆಯ ಮೇಲೆ ಒಂದೊಂದಾಗಿ ಪಕ್ವಾನ್ನ-ಕಜ್ಜಾಯ ಬೀಳಹತ್ತಿತು. ಈಗಿತ್ತಲಾಗಿ ಈ ದೇಶನ್ ಕುರುವಾದ ಮೇಲೆ— ಈ ರೀತಿ ಊಟವನ್ನು ಮಾಡಿದ ದಾಖಲೆಯೆ ಇದ್ದಿಲ್ಲ. ಆದರೂ ಔಪಚಾರಿಕವಾಗಿ 'ಇದನ್ನೆಲ್ಲಾ ಏಕೆ ಮಾಡಿಸಿದೆಯಪ್ಪಾ!' ಎನ್ನುತ್ತಾ—ನಗುತ್ತ—ಕಲೆಯುತ್ತ ಎರಡು ತುತ್ತು ಹೆಚ್ಚಿಗೆಯೆ ಹೊಟ್ಟೆಯಲ್ಲಿ ತುಂಬಿದೆ.

ಊಟವಾದ ನಂತರ—ವೀಳ್ಯವನ್ನು ಜಗಿಯುತ್ತಾ—ಮಹಡಿಯನ್ನೇರಿದೆವು. ಹಾಸಿಗೆಯ ಮೇಲೊರಗಿ "ಹೂಂ, ಇನ್ನು ನಿನ್ನ ಕತೆ ಆರಂಭಿಸು" ಎಂದೆ.

"ನಿನಗೆ ಆಷ್ಟು ಕುತೂಹಲವಿದ್ದರೆ ಆಗಬಹುದು. ಆದರೆ ಸೋಮು; ಗುಟ್ಟು ಗುಟ್ಟಾಗಿಯೇ ಇರಲಿ! ಯಾರೊಡನೆಯೂ ಹೇಳಬೇಡ!" ಎಂದು ಪೀಠಿಕೆಯನ್ನು ತೆಗೆದುಕೊಂಡು, ಕತೆಗೆ ಆರಂಭಿಸಿದ. ನಾನೂ ಗುಟ್ಟಾಗಿಯೆ ಇದನ್ನಿಲ್ಲಿ ಬರೆದಿದ್ದೇನೆ. ಓದುಗರು ಯಾರಿಗೂ ಇದನ್ನು ಉಸಿರಲಾಗದು.

* * *

"ಮ್ಯಾಟ್ರಿಕ್ ಆದ ನಂತರ ತಂದೆಯೂ ತೀರಿಹೋದ; ಮುಂದೆ ಕಲಿಯಲಾಗಲಿಲ್ಲ; ಆಷ್ಟರಲ್ಲಿ ಭಾಗ್ಯಲಕ್ಷ್ಮಿ ಮನೆಗೆ ಕಾಲಿಟ್ಟು ಬಿಟ್ಟಿದ್ದಳು; ಸಂಸಾರನೌಕೆ ಸಾಗರದಲ್ಲಿ ನಿಜದು

ಬಿಟ್ಟಿತ್ತು. ಎಷ್ಟು ತುಘಾನಿದ್ದರೂ ಮುಂದುವರಿಯದೆ ಗತಿಯಿರಲಿಲ್ಲ. ನೌಕರಿಗಾಗಿ ಅಲೆಯಬೇಕಾಯಿತು....ಈ ಕತೆಯೆಲ್ಲ ನಿನಗೆ ಗೊತ್ತೇ ಇದೆ! ಅಷ್ಟರಲ್ಲಿ ನೀನೂ ನನಗೆ ಸಿಕ್ಕು ಒಂದು ೫೫ ರೂಪಾಯಿಯ ನೌಕರಿ ಹುಡುಕಿಕೊಟ್ಟೆ. ಸರಿಯೆ? ಆ ಸಂಬಳ 'ಗಂಡ-ಹೆಂಡಿರಿಬ್ಬರಿಗೆ ಬೇಕಾದ ಹಾಗೆ ಸಾಕು!' ಎಂದು ಜೋಕಾಯಿಸಿ ಬಿಡುತ್ತಿದ್ದೆ ನಿನ್ನ ಮುಂದೆ. ಆದರೆ ನನ್ನ ಅವಸ್ಥೆ ನನಗೇ ಗೊತ್ತು! ೫೫ ರೂಪಾಯಿ ಎತಕ್ಕೂ ಸಾಲುತ್ತಿರಲಿಲ್ಲ. ಮಧ್ಯೆ ಒಬ್ಬಿಬ್ಬರಿಂದ ಕೈಗಡ ತೆಗೆದುಕೊಂಡಿದ್ದೆ. ಅವರ ಕಾಟ ಬೇರೆ ಆರಂಭವಾಯಿತು! ಈ ಪೀಕಲಾಟದಲ್ಲಿ 'ಸಾಕಪ್ಪಾ! ಸಂಸಾರ!' ಎಂದು, ಆಘನಾಶಿನಿಯಲ್ಲಿ ಹಾರಿ ಪ್ರಾಣಕೊಟ್ಟು ಬಿಡಬೇಕೆಂಬ ವಿಚಾರ ಸಹ ಬಂದುಹೋಯ್ತು. ಕೊನೆಗೆ ದಿನವಿಡೀ ಯೋಜನೆ: 'ಬಡತನ ಓಡ್ಡೋಡಿಸಲು ಏನು ಮಾಡಲಿ?' ಎಂದು. ಹಗಲೂ-ರಾತ್ರಿ ಅದೇ ಯೋಜನೆ! ರಾತ್ರಿ ನಿದ್ದೆ ಸಹ ಹತ್ತುತ್ತಿರಲಿಲ್ಲ. ಮೇಲಾಗಿ ಎಷ್ಟೋ ದಿನ ಉಪವಾಸ ಇರಬೇಕಾಯಿತು.

ಕೊನೆಗೆ ಒಂದು ಯೋಜನೆ ಹೊಳೆಯಿತು:

'ನಾನೂ ಕಾವೀ ಬಟ್ಟೆ ಧರಿಸಿ—ಒಬ್ಬ ಸ್ವಾಮಿಯಾಗಬೇಕು!' ಎಂದು ಯೋಚಿಸಿದೆ. ಆ ವಿಚಾರ ಬರಲೂ ಒಂದು ಕಾರಣವಾಯಿತು: ಅದೇ ಸಮಯದಲ್ಲಿ ನಮ್ಮೂರಿಗೆ ಯಾವುದೋ ಮಠದ ಸ್ವಾಮಿಗಳು—ಅವರ ಶಿಷ್ಯಕೋಟಿ—ಬಂದಿದ್ದರು. ಅವರ ಪಾದಪೂಜೆಯಾಯಿತು. ಕುಳಿತಲ್ಲೇ ನೂರಾರು ರೂಪಾಯಿ!

ನಾನು ಮೂಗಿನ ಮೇಲೆ ಬೆರಳಿಟ್ಟುಕೊಂಡೆ! ನಾವು ಹಗಲಿರುಳೂ ಬೆನ್ನು ಮುರಿದು ದುಡಿದರೂ ನಮಗೆ ಬರುವುದು ಇಪ್ಪತ್ತೈದು ರೂಪಾಯಿ; ಈ ಸ್ವಾಮಿಗಳೋ—ದಿನವಿಡಿ ಕುಳಿತಲ್ಲೇ ಕುಳಿತು ನೂರಾರು ರೂಪಾಯಿ ಗಳಿಸುವರು! 'ಎಲಾ ಅನ್ಯಾಯವೇ!' ಎಂದುಕೊಂಡೆ. ಈ ಸಮಾಜದ 'ಸಂಭಾವಿತ' ಜನರಿಗೆಲ್ಲ ತಕ್ಕ ಪ್ರಾಯಶ್ಚಿತ್ತ ಕೊಡಬೇಕು ಎಂದು ಯೋಚಿಸಿದೆ.

ಇಲ್ಲಿಂದ ಮೂವತ್ತು ಮೈಲಿನ ಮೇಲೆ—ಹಳ್ಳಿ ಎನ್ನು ಬೇಕಾದರೆ—ಒಂದು ಮಠವಿತ್ತು. ಅಲ್ಲಿ ಈಗತ್ತಲಾಗಿ ಸರಿಯಾಗಿ ಪೂಜೆ-ಪುರಸ್ಕಾರ ನಡೆಯುತ್ತಿರಲಿಲ್ಲ. ಅದನ್ನು ಕಟ್ಟಿಸಿದವರು ವೆಂಕಟರಮಣ ಹೆಗಡೆಯವರು. ಅವರು ಒಬ್ಬ ಯೋಗ್ಯ ಪೂಜಾರಿ—ಸಾಧುವನ್ನು ಹುಡುಕುತ್ತಿದ್ದರು ನಾನು, ಈ ವಿಚಾರ ಕೇಳಿದ್ದೆ. ಅಲ್ಲಿಗೇ ಮೊದಲು ಹೋಗುವುದಾಗಿ ನಿಶ್ಚಯಿಸಿ ನಾವಿಬ್ಬರೂ—ಗಂಡ ಹೆಂಡತಿ—ಅಲ್ಲಿಗೆ ರವಾನೆಯಾದೆವು.

ಹಳ್ಳಿಯ ಹತ್ತಿರವೇ ವೆಂಕಟರಮಣ ಹೆಗಡೆಯವರು ಸಿಕ್ಕಿದರು. ನಾನು ಅವರನ್ನು ಎಲ್ಲಿಯೋ ನೋಡಿದ್ದ. 'ಇಲ್ಲಿ ವೆಂಕಟರಮಣ ಹೆಗಡೇರು ಕಟ್ಟಿಸಿದ ದೇವಾಲಯವಿದೆಯೇ?' ಎಂದು ಕೇಳಿದೆವು. ಅವರಿಗೆ ಆಶ್ಚರ್ಯವಾಯಿತು! ಅಷ್ಟರಲ್ಲಿ ನಾವಿಬ್ಬರೂ ಕಾವೀಬಟ್ಟೆ ಧರಿಸಿಕೊಂಡಿದ್ದೆವು.

'ತಮಗೆ ಹೇಗೆ ತಿಳಿಯಿತು?' ಎಂದು ಕೇಳಿಕೊಂಡರು ಆ ಹೆಗಡೆಯವರು.

'ಅಲ್ಲಿ ಪೂಜೆ—ಪುರಸ್ಕಾರ ಸರಿಯಾಗಿ ನಡೆಯುತ್ತಿಲ್ಲವಂತೆ! ಕಾಡಿನ ಮೂಲೆಯಲ್ಲಿ ತಪಸ್ಸು ಮಾಡುತ್ತಿದ್ದ ನನಗೆ ಅದು ತಿಳಿಯಿತು. 'ಅಲ್ಲಿ ಹೋಗಿ ನೀನು ವಾಸಿಸಿ ಪೂಜೆಯನ್ನು ಸರಿಯಾಗಿ ನಡೆಯಿಸು' ಎಂದು ಯಾರೋ ಹೇಳಿದಂತಾಯಿತು; ಅದಕ್ಕಾಗಿ ಕೂಡಲೆ 'ಈ ಸಾಧ್ವಿಯನ್ನು ಕರೆದುಕೊಂಡು ಬಂದೆ' ಎಂದೆ. ಅವರು ಸ್ತಂಭೀಭೂತರಾದರು! ನಿಜಕ್ಕೂ ನಮ್ಮ ಮೇಲೆ ವಿಶ್ವಾಸ ಹುಟ್ಟಿತು. ತಾನೇ—ಆ—ಹೆಗಡೆಯೆಂದೂ 'ಈಗಿತ್ತಲಾಗಿ ಪೂಜೆ ಸರಿಯಾಗಿ ನಡೆಯುತ್ತಿಲ್ಲ! ತಾವು ಹೇಳಿದ್ದು ಸತ್ಯ!' ಎಂದೂ ತನ್ನ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು. ಫಲಾಹಾರ ಮುಗಿಯಿತು. ಇಬ್ಬರಿಗೂ ಎರಡು ಗಾಡಿ ಹಾಕಿ, ಅವರ ಮೇಲೆ ಹುಲಿಯ ಚರ್ಮ ಹಾಸಿ ಕೊಟ್ಟರು. ಅಂತೂ ಯಾವುದೂ ಗೊಜಿಲ್ಲದೆ, ದೇವಸಿಗೆ ಧನ್ಯವಾದ ಸಲ್ಲಿಸುತ್ತಾ ನಿದ್ದೆಹೋದೆವು.

* * *

ಮರುದಿನ ಬೆಳಗಾಗುವುದರೊಳಗೆ ನಮ್ಮ ಸುದ್ದಿ ಊರಲ್ಲೆಲ್ಲಾ ಹಬ್ಬಿತ್ತು! ಕೆಲವರು 'ತಕ್ಕ ಸಂನ್ಯಾಸಿಯೇನೋ' ಎಂದರು. ಆದರೆ ಹೆಗಡೇರು ನನ್ನ ವಿಷಯದಲ್ಲಿ ನಂಬುಗೆ ಹುಟ್ಟಿಸುತ್ತಿದ್ದರು. ಅಪನಂಬಿಕೆಯಾಗಲೂ ಕಾರಣವಿದೆ: ಎಷ್ಟೋ ಸಂನ್ಯಾಸಿಗಳು ಇದೇ ರೀತಿಯಿಂದ ಬಂದು ಜನರ ಬೆಳ್ಳಿ-ಬಂಗಾರದ ವಸ್ತುಗಳನ್ನು ಹಾರಿಸಿಕೊಂಡು ಹೋಗಿದ್ದರು.

ಎಷ್ಟೋ ಜನ ಭಕ್ತರು ಅಂದು ಕಾಣಿಕೆಯನ್ನೆಲ್ಲಾ ತಂದು ಮುಂದೊಡ್ಡಿದರು. ನಾವಿಬ್ಬರೂ ಭಸ್ಮಗಳನ್ನು ಹಚ್ಚಿಕೊಂಡು ಕುಳಿತಿದ್ದೆವು. ಜನರು ನಾನಾರೀತಿಯಿಂದ ನಮ್ಮನ್ನು ಪರೀಕ್ಷಿಸಿದರು ನಮ್ಮನ್ನು ಪ್ರಶ್ನಿಸಿದರು. ಅದಕ್ಕೆಲ್ಲ ನಾವಧಾನದಿಂದ ಉತ್ತರಿಸಿ, ಅವರ ಪರೀಕ್ಷೆಯಲ್ಲಿ ಹೆಚ್ಚು ಗುಣ ಪಡೆದು ಪಾಸಾದೆವು. ಅದರಿಂದ ಜನರಲ್ಲಿ ನಮ್ಮ ಮೇಲೆ ನಂಬುಗೆ ದೃಢವಾಗಿ ಕುಳಿತಿತು. ಅದೇ ದಿನ ದೇವಾಲಯವನ್ನು ನಮ್ಮ ವಶಕ್ಕೆ ಒಪ್ಪಿಸಿದರು. ಒಬ್ಬ ಬ್ರಾಹ್ಮಣನನ್ನೂ ನಮ್ಮ ವಶಕ್ಕೆ ಒಪ್ಪಿಸಿದರು. ಎರಡು ವರ್ಷ ಅತ್ಯಂತ ವಿಜೃಂಭಣೆಯಿಂದ ದೇವಾಲಯದಲ್ಲಿ ಪೂಜೆ—ಸೇವೆ ನಡೆಯಿತು. ಇಷ್ಟು ದಿನ—ಇಷ್ಟು ಸರಿಯಾಗಿ ಅಲ್ಲಿ ಪೂಜೆ ನಡೆದೇ ಇರಲಿಲ್ಲ! ಅಲ್ಲದೆ ನಾನು ತಿಂಗಳಿಗೊಮ್ಮೆ—ಅಧ್ಯಾತ್ಮಿಕ ವಿಷಯದ ಮೇಲೆ—ಜನರಿಗೆ ಬೋಧೆ ಮಾಡುತ್ತಿದ್ದೆ. ಇದರಿಂದ ಎರಡು ವರ್ಷದಲ್ಲಿ ದೊಡ್ಡ ಮಠದ ಗುರುವೇ ಆದೆ. 'ಏಮೋಲೇನು?.....

ಭಕ್ತ ಜನರ ಮನೆಗೆ ಹೋಗಿ ಬರಬೇಕಾಯಿತು. ಅಲ್ಲಿ ನನ್ನ ಪಾದಪೂಜೆ ಮಾಡಿ, ೫೫ ರೂಪಾಯಿ ಆ ಮನೆಯ ಯಜಮಾನ

ನೊಬ್ಬನೇ ಹಾಕಬೇಕಾಗಿತ್ತು! ಆ ಮೇಲೆ ಉಳಿದವರು. ಒಂದು ಮನೆಗೆ ಹೋದರೆ ೫೦ ರೂಪಾಯಿಯ ಮೇಲೆ ಉತ್ಪನ್ನ! ಹೀಗೆ ಎಂಟು ವರ್ಷದಲ್ಲಿ ಬಂಗಾರದ ಸಾಮಾನು—ಎಲ್ಲ ಕೂಡಿ ಹತ್ತು ಸಾವಿರ ರೂಪಾಯಿ ಸಂಪಾದಿಸಿದೆ.

'ಎಂಟು ವರುಷದ ನಂತರ ನಾವು ತಿರುಗಿ ತಪಸ್ಸಿಗೆ ಹೋಗುವವರು' ಎಂದು ಹೇಳಿದ್ದೆವು ಅದರಂತೆಯೆ ಈಗ ಎಂಟು ವರುಷದ ನಂತರ ತಿರುಗಿ ಬಂದೆವು. ಭಕ್ತರೆಲ್ಲಾ ಕಣ್ಣೀರು ಸುರಿಸಿದರು. 'ಎಂಟು ವರ್ಷಕ್ಕೊಮ್ಮೆ ಬಂದು ಹೋಗುವೆವು' ಎಂದು ಹೇಳಿ ಬಂದಿದ್ದೇವೆ. ಈ ಮಧ್ಯೆ ನಮ್ಮೂರಿಗೂ ಬಂದು ಹೋಗಿರುವೆ. ಈ ಜನವೇ ನನ್ನ ಪಾದ ತೊಳೆದು ತೀರ್ಥ ಕುಡಿದು 'ದಯಾನಂದ ಸ್ವಾಮಿಗಳ ಮಹರಾಜಕೀ ಜಯ' ಎಂದು ಜಯ ಜಯಕಾರ ಹಾಕಿರುವರು" ಎಂದು ತನ್ನ ಕತೆ ಮುಗಿಸಿದ.

* * *

ನಾನು ಆತನ ಸಾಹಸಕ್ಕೆ ಬೆರಗಾದೆ. 'ಅಯ್ಯೋ! ನಾನು ಮಾತ್ರ ಇದ್ದಂತೆ ಇರುವೆನಲ್ಲಾ!' ಎಂದು ಮನದಲ್ಲೇ ಮಿಡುಕಿದೆ. 'ನಾನೂ ಆತನ ಹಾಗೇ ಆಗಿಬಿಡಲೇ?' ಎಂದು ಯೋಚಿಸಿದೆ.

ಅವನೇ ಹೇಳಿದ:— "ಏನು ಯೋಚನೆಯೊ ಅದೂ? ನನ್ನ ಹಾಗೇ ಆಗಬೇಕೆಂದು ಯೋಚಿಸುತ್ತಿದ್ದಿಯಾ! ನೋಡು, 'ಸ್ವಾಮಿ' ಆಗುವುದು ಎಂದರೆ ಸಸಾರವಲ್ಲ! ಕಠಿನ ತಪಸ್ಸನ್ನೂ ಸಂಗಡ ಮಾಡಲೇಬೇಕು. ಕೇವಲ ಹುಲಿಯ ಚರ್ಮದ ಮೇಲೆ ಮಲಗಬೇಕು. ಚಳಿ-ಮಳೆಯಿನ್ನದೆ ಬೆಳಕು ಹರಿಯುವುದರೊಳಗೆ ತಣ್ಣೀರಲ್ಲಿ ಸ್ನಾನಮಾಡಬೇಕು." ಇದನ್ನೆಲ್ಲಾ ಸವಿಸ್ತಾರವಾಗಿ ವಿವರಿಸಿದ.

"ಇದು ನಿನ್ನಂತಪಸಿಗೇ ಸಾಧ್ಯ" ಎಂದೆ ನಾನು.

ಆತನು ನಕ್ಕು ಒಳಗೆ ಹೋಗಿ ಕೈಯಲ್ಲಿ ಮುಚ್ಚಿ ಏನನ್ನೋ ತಂದುಕೊಟ್ಟ. 'ಇದು ಗೆಳೆಯನ ಕಾಣಿಕೆ. ಬೇಕಾದರೆ ಈಗುಟ್ಟು ಬಿಚ್ಚಿಡಲು ಅಂಜ ಎಂದು ತಿಳಿದುಕೊಂಡರೂ ಅಡ್ಡಿಯಿಲ್ಲ!' ಎಂದ. ನಾನು ತೆಗೆದು ನೋಡಿದೆ; ಚಿನ್ನದ ಗುಲಾಬೀ ಹೂ! 'ಚಿನ್ನವನ್ನೇ ಕಾಣದ ನನ್ನವಳಿಗೆ ಕೊಡಬೇಕು, ಅವಳು ಸಂತೋಷಪಟ್ಟುದನ್ನು ನೋಡಬೇಕು!' ಎಂದು ಮನಸ್ಸಿನಲ್ಲೇ ಅಂದಾಜು ಹಾಕಿದೆ.

"ನೋಡು! ನಾನು ನಾಳೆಯಿಂದ ವ್ಯಾಪಾರವನ್ನಾರಂಭಿಸುವೆ. ನನಗೂ ಒಬ್ಬ ಕಾರಕೂನನ ಅಗತ್ಯವಿದೆ. ೬೦ ರೂಪಾಯಿ ಸಂಬಳ ಕೊಡುವೆ. ಆ ನಿನ್ನ ಸುಡುಗಾಡು ನೌಕರಿ ಬಿಟ್ಟು ಬಿಡು" ಎಂದ ದಯಾನಾಥ.

ನಾನು ಕೃತಜ್ಞತೆಯಿಂದ ಅವನನ್ನು ವಂದಿಸಿದೆ. ಇನ್ನೇನು! ಬಡತನ ಓಡಿಯೋಗುವ್ತದೆ! ಸ್ವಾಮಿಯ ಅನುಗ್ರಹ.

ಹಾರಯಿಕೆ

★

ಶ್ರೀ. ಕೆ. ಎಸ್. ಸುಭ್ರಾಯಭಟ್ಟ ಪೆರ್ದಾಲ

ಬಿಡುವಿರದ ಜೀವಸದಿ ತನುವು ಬಲು ಬಳಲಿರಲಿ
ಬೆಸನದಲಿ ಮನ ಕದಡಿ ಕೊರಗುತಿರಲಿ;
ಅರೆಹೊಟ್ಟೆಯೆನಗಿರಲಿ ಹರಕು ಚಿಂದಿಯೆ ಇರಲಿ
ನಿನ್ನ ಮೊಗ ದರುಶನವು ನಿತ್ಯವಿರಲಿ! ॥ ೧ ॥

ಸಾಲ ಸಾವಿರವಿರಲಿ ಸಾವು ಬಪ ನೋವಿರಲಿ
ಪೈರಿಗಣವೆನ್ನನೊತ್ತೊತ್ತಿ ಬರಲಿ;
ಬಂಧು ಬಳಗವು ಎನ್ನ ಕಡೆಗಣಿಸಿ ಹೊರಗಿಡಲಿ
ನಿನ್ನೆಡೆಯೊಳೆನಗೊಂದು ತಾಣವಿರಲಿ! ॥ ೨ ॥

ವಿಘ್ನಗಳ ಕೋಟಲೆಯು ಎನ್ನ ಪಥಕೆದುರಿರಲಿ
ಜಯಕೆಗಳು ಸಾಸಿರವು ಫಲಿಸದಿರಲಿ;
ವಿರುಗಾಳಿಯೆದ್ದುರುಳಲೆನ್ನ ಬಾಳಿನ ನಾಕೆ
ನಿನ್ನ ವದನದ ಮಂದಹಾಸವೊಂದಿರಲಿ! ॥ ೩ ॥

ಬಂಧನದಿ ಸಿಲುಕಿರಲಿ ಬವರವಂಗದಲಿರಲಿ
ಬರಿ ನಿರಾಶೆಯೊಳೆನಗೆ ಹುಚ್ಚು ಬರಲಿ;
ವಿತ್ತರದ ಸಾಗರವೆ ನನ್ನು ಜ್ಞೇರ್ಪಡಿಸಿರಲಿ
ಎನ್ನ ನೆನವೊಂದು ನಿನಗೆಂದು ಇರಲಿ! ॥ ೪ ॥

ಸಾಹಿತಿಗೆ ಚಾರಿತ್ರ್ಯವೋ ವ್ಯಕ್ತಿತ್ವವೋ?

[ಪ್ರಾ. ಇನಾಮದಾರರು ಎತ್ತಿದ ಪ್ರಶ್ನೆಯ ಇನ್ನೊಂದು ಮುಗ್ಗಲು]

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ಸಾಹಿತಿಗೆ ಚಾರಿತ್ರ್ಯ ಇಲ್ಲದೆ ಶೀಲ ಇರಬಾರದೆಂತಲ್ಲ; ಇರುವುದಿಲ್ಲವೆಂತಲೂ ಅಲ್ಲ. ಸಾಹಿತಿಯು ರೂಪಿಸುವ ಸಾಹಿತ್ಯಕೃತಿಗೆ ಆ ಚಾರಿತ್ರ್ಯ ಶೀಲಗಳು ಉಗಮಗಳಲ್ಲ. ಸಾಹಿತಿಯ ಆಂತರಂಗದ ವಿಕಾರಗಳ ಪರಿಪಾಕವೇ ಸಾಹಿತ್ಯಕೃತಿಯಾಗಿ ವ್ಯಕ್ತವಾಗುತ್ತದೆ.

★

"ಸಾಹಿತ್ಯವು ಮನೋಬಲವನ್ನು ಕುಗ್ಗಿಸುತ್ತದೆ."—ಎಂದು ಆಧುನಿಕ ತುರ್ಕಸ್ತಾನದ ಸೃಷ್ಟಿಕರ್ತನಾದ ಮುಸ್ತಫಾ ಕಮಾಲ್ ಪಾಶಾನು ಉದ್ಗರಿಸಿದ್ದನು. ಕಮಾಲನು ತನ್ನ ಅರಂಭದ ಜೀವನದಲ್ಲಿ ಒಬ್ಬ ಆವೇಶದ ಕವಿತೆ ಬರೆಯುತಿದ್ದನಂತೆ; ಆದರೆ ಮುಂದೆ ಸೈನ್ಯಗಳನ್ನು ಕಟ್ಟಿ ರಾಷ್ಟ್ರವನ್ನು ಕಟ್ಟಿಸಲು ಆರಂಭಿಸಿದ ಮೇಲೆ, ಕಮಾಲನು ಕವನ ಕಟ್ಟುವುದನ್ನು ಬಿಟ್ಟನು. ಮುಂದೆ ಅವನ ಸರ್ವಾಧಿಕಾರದಲ್ಲಿ ಕವಿ ಕಲಾವಿದರನ್ನೂ ಕತೆ-ಕಾದಂಬರಿಗಳನ್ನು ಕಟ್ಟುವಾಸುವ ಕಟ್ಟಪ್ಪಣೆಯನ್ನು ಈ ತುರ್ಕಸ್ತಾನದ ಕಾರಣಪುರುಷನು ಹೊರಡಿಸಿದ್ದಿದ್ದು ಸಾಹಿತಿಗಳ ಭಾಗ್ಯವೇ ಸರಿ!

ಕಮಾಲನು ತನ್ನ ಸೈನಿಕ ಶಾಸನೂ ಸಮಾಜ ಸೇವಕ ಚಾರಿತ್ರ್ಯವನ್ನು ಬೆಳಸಿಕೊಳ್ಳಲು ಮೊದಲು ಮಾಡಿದಂದಿನಿಂದ ಸಾಹಿತ್ಯದ ಹವ್ಯಾಸ ಬಿಟ್ಟನೆಂಬುದು ಬಹಳೇ ಸೂಚಕವಿದೆ. ತನ್ನ ಮನೋಬಲವು ಸಂಕಲ್ಪದ ಸತ್ತ್ವವು ಸಾಹಿತ್ಯದಿಂದ ಸವಿಲು ಜೀಳುವುದೆಂದೂ ಮಿದುವಾಗುವುದೆಂದೂ ಕರ್ಮವೀರನ ಬಿಗುವು-ಬಿಂಕಗಳು ಸಾಹಿತ್ಯದಿಂದ ಕೆಡುವುವೆಂದೂ ಕಮಾಲನು ಅಭಿಪ್ರಾಯ ಪಟ್ಟನು. ಈ ಅಭಿಪ್ರಾಯವನ್ನು ಜಗತ್ತಿನ ಎಷ್ಟು ಸಾಹಿತಿಗಳು ಮನ್ನಿಸುವರೋ! ಅದರಲ್ಲಿಯೂ ನಮ್ಮ ಕನ್ನಡ ಸಾಹಿತ್ಯಿಕರು—ವಿದೂಷಕ ಸಮ್ಮಿತಿಯಿಂದ ದೂಷಕ ಸಮ್ಮಿತಿಯವರೆಗೂ, ಕಾಂತಾ ಸಮ್ಮಿತಿಯಿಂದ ಕ್ಲಾಂತಿಯು ಸಮ್ಮಿತಿಯವರೆಗೂ ಸಾಹಿತ್ಯದ ಪ್ರಭಾವ-ಪ್ರತಾಪಗಳನ್ನು ಮನಗಂಡು, ಮನವಾರೆ ಹೊಗಳುವ ನಮ್ಮ ಸಾಹಿತ್ಯಿಕರು—ಕಮಾಲನ ಅಭಿಪ್ರಾಯವನ್ನು ತಗಲಖತನದ ತಲೆತಿರುಕ ಮಾತೆಂದೇ ಭಾವಿಸಬಹುದು. ಆದರೆ ಇಂಥ ಅಭಿಪ್ರಾಯ ಬರೀ ರಾಜಕೀಯನ ಸೈನಿಕ ಸರ್ವಾಧಿಕಾರಿಯಷ್ಟೇ ಅಲ್ಲ; ಜಗತ್ಪ್ರಸಿದ್ಧ ಸಾಹಿತಿಯೂ ಶ್ರೇಷ್ಠ ತಮ ಬೇಧಾವಿಗಳಲ್ಲಿ ಒರ್ವನೂ ಆದ ಜಾರ್ಜ್ ಬರ್ನಾರ್ಡ್ ಶಾ-ನು ಕೂಡ ವ್ಯಕ್ತಮಾಡಿದ್ದಾನೆ. ಹೆಜ್ಜು ಬಜ್ಜಾಗಿ, ಹೆಜ್ಜು ಜುಜ್ಜುವಂತೆ ವ್ಯಕ್ತಮಾಡಿದ್ದಾನೆ. ಸಾಹಿತಿಯು ಜಗತ್ತಿನ ಶಿಕ್ಷಕನೆಂದು ಭಾವಿಸಿ ಶಾ-ನು ಎಂದಿದ್ದಾನೆ: —"ಕ್ಲೈಸಾಗು ಪವರು ಮಾಡುತ್ತಾರೆ; ಕ್ಲೈಸಾಗದವರು ಕಲಿಸುತ್ತಾರೆ!"

ಇಂತಹ ಮಾತುಗಳನ್ನೆಲ್ಲ ಪರಿಶೀಲಿಸಿದರೆ, ಅವುಗಳಲ್ಲಿ ಅತಿರೇಕದ ಕೆಲಪೊಂದು ಅಂಶವಿದ್ದರೂ ಮೂಲದಲ್ಲಿ ಒಂದು ಸತ್ಯವೇ ನಿಂತಿದೆಯೆಂಬುದು ತಿಳಿದುಬರಬಹುದು. ಈ ಮಾತುಗಳ ಯಥಾರ್ಥತೆಯನ್ನು ಅಲ್ಲಗಳೆಯಲಾಗಲಿ ಒಪ್ಪಿಕೊಳ್ಳಲಾಗಲಿ ನಾವು ಹೊಡ್ಡಿದ ಪಾಪ ಎಬ್ಬಿಸಜೀಕಾಗಿಲ್ಲ. ಸಾಹಿತ್ಯವು ನಿಷ್ಪ್ರಯೋಜಕವೇ? ಜೀವನದ ಮೇಲೆ—ಜಗತ್ತಿನಲ್ಲಿ—ಸಾಹಿತ್ಯದ ಪ್ರಭಾವವಿಲ್ಲವೇ? ಸಾಹಿತ್ಯವು ದುರ್ಬಲರ ಸ್ವಪ್ನ ರಂಜನವೇ?—ಇವೆಲ್ಲ ಪ್ರಶ್ನೆಗಳಿಗೆ ನಾವಿಲ್ಲಿ ಉತ್ತರಕೊಡ ಜೇಕಿಲ್ಲ. ನಮಗೆ ಈ ಮಾತುಗಳ ಹಿನ್ನೆಲೆಯಲ್ಲಿ ಮುಖ್ಯವೆನಿಸುವ ಸಂಗತಿ ಇಷ್ಟೇ:— ಸಾಹಿತ್ಯವನ್ನುಂಟು ಮಾಡುವ ಮನೋಧರ್ಮ ಕೃತಿಯನ್ನು ಕಾರ್ಯತತ್ಪರತೆಯನ್ನು ಉಂಟು ಮಾಡುವ ಮನೋವೃತ್ತಿಯಿಂದ ಜೇರೆ ಜಗೆಯಾಗಿದೆ ಎಂದು. ಇದು ಎಷ್ಟರಮಟ್ಟಿಗೆ ಸತ್ಯ?

ಈ ಸಂದರ್ಭದಲ್ಲಿ, "ಜಯಂತಿ"ಯ ಜೂನ್ (೧೯೩೬) ಸಂಚಿಕೆಯಲ್ಲಿ ಪ್ರಕಟವಾದ, ಪ್ರಾ ಇನಾಮದಾರರ "ಸಾಹಿತಿ ಮತ್ತು ಶೀಲ" ಈ ವಿಷಯದ ಬರೆಹ ನೆನಪಿಗೆ ಬರುತ್ತದೆ. ಪ್ರಾ. ಇನಾಮದಾರರು ಮಂಡಿಸಿದ—ಹಾಗೂ ಪ್ರತಿಪಾದಿಸಲು ಜಯಸಿದ—ಪ್ರಶ್ನೆಯು, ಸಾಹಿತಿಯ ಕೃತಿಗೂ (ಸಾಹಿತ್ಯ ಕೃತಿಗೂ) ಆತನ ಶೀಲಕ್ಕೂ ಎಷ್ಟರ ಮಟ್ಟಿಗೆ ಹೊಂದಿಕೆ-ಹೋಲಿಕೆಗಳ ಸಂಬಂಧವಿರುತ್ತದೆ?—ಇರಜೇಕು?—ಎಂಬುದು. ಆದರೆ ಪ್ರಸ್ತುತ ಸೂಕ್ಷ್ಮದಲ್ಲಿ ಸೇರಿ ನೋಡಿದರೆ, ಈ ಪ್ರಶ್ನೆ ಅಷ್ಟೊಂದು ಶುದ್ಧ ವಿಲ್ಲವೆನ್ನಜೇಕಾಗುತ್ತದೆ. ಮತ್ತು ಮೇಲೆ ಆಯ್ದುಕೊಂಡ ಕಮಾಲ ಪಾಶಾನ ಮಾತಿನ ಎಳೆಯೂ ಇದೇ ಪ್ರಶ್ನೆಯ ತೊಡಕಿನಲ್ಲಿ ಸಿಲುಕಿಕೊಂಡಿದೆ. ಹೇಗೆಂದು ನೋಜೋಣ:

ನಮ್ಮ ಈ ಚರ್ಚೆಯಲ್ಲಿ ಸಾಹಿತ್ಯದ ವ್ಯಾಪ್ತಿಯನ್ನು ಲಲಿತ ಸಾಹಿತ್ಯದ ಮಟ್ಟಿಗೆ ಇಟ್ಟುಕೊಂಡಿದೆ. ಕಾವ್ಯ, ಕಾದಂಬರಿ, ಕಥಾ ಕೃತಿಗಳ ಕಲಾಪ್ರಪಂಚವೇ ನಮ್ಮ ವಾದಭೂಮಿ—(ಅಲ್ಲಿ, ವ್ಯಾಖ್ಯಾನ ಕ್ಷೇತ್ರ). ಕತೆ-ಕಾದಂಬರಿಗಳನ್ನಾಗಲಿ, ಕಾವ್ಯ-ಕಲಾ ಕೃತಿಗಳನ್ನಾಗಲಿ ನಿರ್ಮಿಸುವ ವ್ಯಕ್ತಿಯು ಶೀಲದ ವಿಚಾರಣೆಯಿಂದ ಕೃತಿಗಳ ಮೂಲ್ಯಮಾಪನದಲ್ಲಿ ಮುಖ್ಯವೇ? ಎಂದರೆ ಸಾಹಿತ್ಯಕ್ಕೂ ಕಲಾಕೃತಿಗೂ ಶೀಲಕ್ಕೂ ಸಂಬಂಧವಿದೆಯೇ? ಈ ಪ್ರಶ್ನೆ ಶುದ್ಧವಾಗಿಲ್ಲವೆಂದು ನಾವು ಎಂದೆವು. ಏಕೆಂಬುದನ್ನು ಅರಿತು ಕೊಳ್ಳುವ ಮೊದಲು, ಸಾಹಿತ್ಯ ಹಾಗೂ ಶೀಲ ಇವುಗಳ ವ್ಯಾಪ್ಯ-ವ್ಯಾಪ್ತಿಗಳನ್ನು ನಿಶ್ಚಯಮಾಡಿಕೊಳ್ಳಬೇಕು

ಸಾಹಿತ್ಯದ ವ್ಯಾಪ್ತಿ ಈ ಚರ್ಚೆಯಮಟ್ಟಿಗೆ ಯಾವುದೆಂದು ಹೇಳಿದೆ. ಅದು ಲಲಿತಕೃತಿ; ಆನಂದಪ್ರಧಾನ ನಿರ್ಮಿತಿ; ರಸಸೃಷ್ಟಿ. ಸಾಹಿತ್ಯದ ಸಾವಿರ ವ್ಯಾಖ್ಯೆಗಳೊಳಗಿಂದಲೂ ಹೊರಡುವ ಕೊನೆಯ ಹಾಗೂ ಕೆನೆಯ ಲಕ್ಷಣ ಈ ರಸಮಯತೆ—ಆನಂದ ಅಲ್ಲಾದ ಪ್ರಧಾನತೆ. ಇನ್ನು ಶೀಲದ ಸ್ವರೂಪವೇನು? ಶೀಲವನ್ನು ಇಲ್ಲಿ ಬರೀ ಸದಾಚಾರ, ಸಜ್ಜನಿಕೆ, ಎಂಬ ಅರ್ಥದಲ್ಲಿ ಇಟ್ಟುಕೊಂಡಿಲ್ಲ. ಸತ್ ಇರಲಿ ಅಸತ್ ಇರಲಿ, ಸುಷ್ಟು ಇರಲಿ ದುಷ್ಟವಿರಲಿ, ಶೀಲವೆಂದರೆ ಚಾರಿತ್ರ್ಯ. ಇಂಗ್ಲಿಷ್ ಭಾಷೆಯಲ್ಲಿ Character ಎಂಬ ಶಬ್ದದಿಂದ ಸಿದ್ಧವಾಗುವ ಭಾವ ಇವೆರಡೂ ಶಬ್ದಗಳನ್ನು ತೂಗಿಸಿ ತೊಲಿಸಿ ನೋಡಿದರೆ, ಸಾಹಿತ್ಯದ ಭಾವ ಶೀಲ ಇಲ್ಲವೆ ಚಾರಿತ್ರ್ಯದ ಭಾವ ದೊಂದಿಗೆ ಎಂದಿಗೂ ವಿಕರೂಪವಾಗಲಾರದೆಂದು ತೋರುವುದು.

ಚಾರಿತ್ರ್ಯವು ಕೇವಲ ಇಚ್ಛಾಶಕ್ತಿಯಿಂದ ಸುತ್ತಲೂ ಪುಟಿಗೊಂಡ ಹುರಿಗೊಂಡ ಮನೋವ್ಯಕ್ತಿಗಳ ಒಂದು ಸಮಿಯಲ್ಲ. ಅದೊಂದು ಬಗೆಯ ಹಟಯೋಗದ ಸಿದ್ಧಿ. ಯಾವುದೊಂದು ಪ್ರಭಾವಿಯಾದ ಭಾವನಾಕೇಂದ್ರದ ಸುತ್ತಲೂ ಮನಸ್ಸಿನ ಮಿಕ್ಕುವೆಲ್ಲ ವೃತ್ತಿಗಳೂ ವಿಕಾರಗಳೂ ಕೊಂಡುಕೊಂಡು ಬೆಳೆದು ಬಂದ ಸ್ವಭಾವದ ರೂಪಕ್ಕೆ ಚಾರಿತ್ರ್ಯ ಇಲ್ಲವೇ ಶೀಲವೆನ್ನುವರು. ಚಾರಿತ್ರ್ಯದ ಮುಖ್ಯ ಹಾಗೂ ವಿಶೇಷ ಲಕ್ಷಣವೆಂದರೆ ಕಾರ್ಯಕಾರಿತೆ—ಕ್ರಿಯಾಪರತೆ. ಮನೋವಿಜ್ಞಾನಿ ಹೇಳುವಂತೆ "Character is will in action" ಕೆಲವೊಂದು ಹಟ ಚಟಗಳಿಂದ ಇಚ್ಛಾಶಕ್ತಿಯು ಬಲಪಡೆಯುವ ಮನಸ್ಸಿನ ಪ್ರವೃತ್ತಿಯೆಲ್ಲ ಒಂದೇ ಬಗೆಯ ಕಾರ್ಯದಲ್ಲಿ ಸಾಗುವುದು. ಇದು ಚಾರಿತ್ರ್ಯದ ಕುರುಹು, ಇಲ್ಲವೆ ಧರ್ಮ

ಮನಸ್ಸಿನ ವ್ಯಾಪಾರಕ್ಕೆ ಮೂರು ಅಂಗಗಳಿವೆ ಒಂದು ಹೊರ ಪ್ರಪಂಚದ ಸಂಗತಿಗಳ ಅರಿವು—ಎಸಿಕೆ. ಇದು ವೇದನೆ. ಮುಂಚೆ ಈ ವೇದನೆಯಿಂದ ನಮ್ಮ ಮನಃಚಿತ್ತವನ್ನೇ ಒಂದು ಬಗೆಯಾಗಿ ಉದ್ರೇಕಗೊಂಡು ವಿಕಾರವಶವಾಗುವುದು. ಇದು ಭಾವನೆ. ಆ ಮೇಲೆ ಮನಸ್ಸು ಒಂದು ನಿಶ್ಚಯಕ್ಕೆ ಒಂದು ಹೊರಗಿನ ವೇದಾನಾಕಾರಿಯಾದ ಸಂಗತಿಯು ಕುರಿತು ಕೆಲವೊಂದು ನಡತೆಯನ್ನು ಪ್ರತಿಕ್ರಿಯೆಯನ್ನು ಹೂಡಲು ಒತ್ತಾಯ ಪಡುತ್ತದೆ. ಇದು ನರ್ತನೆ. ಸಾಮಾನ್ಯವಾಗಿ ಮನೋವ್ಯಾಪಾರದ ಈ ಮೂರು ಅಂತರಸ್ಥಗಳನ್ನು ಇಲ್ಲವೆ ಅಂಗಗಳನ್ನು ಅಲೋಚಿಸಿದರೆ ಒಂದು ಸಂಗತಿ ಸ್ಪಷ್ಟವಾಗುವುದು; ಅದೇನೆಂದರೆ: ಸಾಹಿತ್ಯಪ್ರಪಂಚವು ವ್ಯಾಪಿಸುವ ಕ್ಷೇತ್ರ—ಲಲಿತಕೃತಿಗಳಿಗೆಲ್ಲ ಸಂಬಂಧಪಟ್ಟ ಮನೋವ್ಯಾಪಾರ-ವೇದನೆ-ಗಳೇ ಸರಿ. ಆದರೆ ವ್ಯಾವಹಾರಿಕ ಜೀವನ-ವ್ಯಕ್ತಿ-ಸಮಾಜಗಳ ಸಂಬಂಧದ ಆರ್ಥಿಕ-ರಾಜಕೀಯವೇ ಮುಂತಾದ ಎಲ್ಲ ಪ್ರಾಪಂಚಿಕ ಕಾರ್ಯಕ್ಷೇತ್ರವು ವರ್ತನೆಗೆ ಸಂಬಂಧಪಟ್ಟದ್ದು.

ಎಂದರೆ ಶೀಲ ಇಲ್ಲವೆ ಚಾರಿತ್ರ್ಯದ ಸಂಬಂಧ ನೇರವಾಗಿ ನಿಚ್ಚಳವಾಗಿ ಸಾಹಿತ್ಯದೊಂದಿಗಾಗಲಿ, ಲಲಿತಕೃತಿಗಳೊಂದಿಗಾಗಲಿ ಬರುವುದಿಲ್ಲ, ಇರುವುದಿಲ್ಲ. ಇಚ್ಛಾಶಕ್ತಿಯೇ ಪ್ರಧಾನವಾಗಿದ್ದ ವ್ಯಕ್ತಿ ತನ್ನ ಎಸಿಕೆ-ನನಸಿಕೆಗಳನ್ನೆಲ್ಲ ಒಂದೇಗುರಿಗೆ ಹಾಯಿಸುತ್ತಾನೆ. ಅದು ಅವನ ಪ್ರತ್ಯಕ್ಷ ವ್ಯಾವಹಾರಿಕ ಕೃತಿ-ಪ್ರಯೋಗ, ವಿನಿಯೋಗ, ಉಪಯೋಗ ಈ ಮೂರು ಬಗೆಯಾಗಿಯೇ ಅವನ ಮನಸ್ಸಿನ ಪ್ರತಿಕ್ರಿಯೆ ಜರುಗುತ್ತದೆ. "ಹೂ" ನೋಡಿದರೆ ಈ ಚಾರಿತ್ರ್ಯಕ ವ್ಯಕ್ತಿಯು 'ನೋಟಕೂಟವ ನಾಕು. ಮಾಗುತ್ತಿರು!" ಎಂದು ಎನ್ನುವದಿಲ್ಲ; ಅದನ್ನು ಕೊಯ್ದು ಮೂಸಬಹುದು. ಹೆಂಡತಿಯಿದ್ದರೆ ಅಲೆಯಲ್ಲಿ ಮುಡಿಯಲ್ಲೇರಿಸಬಹುದು. ಇಲ್ಲವಾದರೆ ತನ್ನ ಕೊರಳ ಪಟ್ಟಿಗೆ ಸಿಕ್ಕಿಸಿ ಇರಿಸಬಹುದು! ತಡಿಸಿಲನ್ನು ಕಂಡು ಅತನು ಅಷ್ಟಪಟ್ಟದಿಯನ್ನು ಬರೆಯಲಾರ.—ಬರೆಯಬಹುದೆಂದೆ ಎನಿಸುವುದಿಲ್ಲ ಅತನಿಗೆ. ಸಾಕಷ್ಟು ಜ್ಞಾನವಿದ್ದರೆ ಅದರ ವಿದ್ಯುನ್ವಿನಿಯೋಗದ ವಿಚಾರ ಮಾಡಬಹುದು. ಸಾಮಾನ್ಯನಾಗಿದ್ದರೆ ಒಂದು ಛಾಯಾಚಿತ್ರ ತೆಗೆದು ಒಯ್ಯಬಹುದು.

ತಾತ್ಪರ್ಯವೆಂದರೆ ಶೀಲ ಇಲ್ಲವೆ ಚಾರಿತ್ರ್ಯವು ಸಾಹಿತ್ಯಕ್ಕೆ ಅನುಕೂಲವಿಗುವುದಿಲ್ಲ. ಸಾಹಿತ್ಯವು ಚಿಂತನದಿಂದ, ಮನೋ ಮಂಥನದಿಂದ, ಭಾವನೆಗಳ ಚರ್ವಣದಿಂದ ಬರುವ ವಸ್ತು. ಸಾಹಿತಿಯಿರಲಿ, ಕಲಾವಿದನಿರಲಿ, ಅಂತರ್ಮುಖನಿದ್ದಷ್ಟು, ಅತ್ಮಾನುಸಂಧಾನಿಯಾದಷ್ಟು ಅತನ ಕೃತಿಯು ಸಂಸ್ಕೃತಿ ಪಡೆಯುತ್ತದೆ. ಒಂದು ಸನ್ನಿವೇಶ ಒಂದು ಸಂಗತಿ ಕಣ್ಣೆದುರು ಬಂದರೆ, ಕಲಾವಿದನು ಅದನ್ನು ಮನದಣಿ ನೋಡಿ ಮನವಾರೆ ಹಿಗ್ಗಿ (ಇಲ್ಲವೆ ಕರಗಿ-ಕೊರಗಿ) ಶಬ್ದದಲ್ಲಿಯೋ, ಚಿತ್ರದಲ್ಲಿಯೋ, ರಾಗದಲ್ಲಿಯೋ ತನ್ನ ಉದ್ರಿಕ್ತ ಅತಿರಿಕ್ತ ಭಾವನೆಗಳ ಕ್ಷೋಭವನ್ನು ಕೋವಿಕೊಂಡು ಸಂತೃಪ್ತನಾಗುವನು. ಆದರೆ ಚಾರಿತ್ರ್ಯ ಪ್ರಧಾನ ವ್ಯಕ್ತಿಯ ಪ್ರತಿಕ್ರಿಯೆಯ ಮಾರ್ಗವೇ ಬೇರೆ. ಅದು ನೇರವಾವ ವ್ಯಾವಹಾರಿಕತೆ ಹಾಗೂ ಉಪಯುಕ್ತತೆಯ ರಾಜಮಾರ್ಗ.

ಹೀಗೆ ಶೀಲ ಇಲ್ಲವೇ ಚಾರಿತ್ರ್ಯ, ಮನಸ್ಸಿನ ಒಂದೇ ಶಕ್ತಿಯನ್ನು ವಿಶೇಷ ಪದಗೊಳಿಸಿ ಹುರಿಗೊಳಿಸಿ ಅದಕ್ಕೆ ಅನುಪಮವಾಗಿ ವ್ಯಕ್ತಿಯ ವಿಕಾಸವನ್ನು ಸಾಧಿಸುವುದರಿಂದ ಸಂಭವಿಸುತ್ತದೆ. ಆದ್ದರಿಂದ ಸಾಹಿತ್ಯಕೃತಿಯಲ್ಲಿ ಪಲ್ಲಟಂಲಾಂಛನಕ್ಕೆ ಅವಕಾಶ ಇಲ್ಲವೆ ಅಷ್ಟು ಉದ್ರಿಕ್ತ ಭಾವನೆಗಳೇ ಉಳಿಯುವುದಿಲ್ಲ. ಪ್ರತ್ಯಕ್ಷ ಕಾರ್ಯಕ್ಕೆ ಒಳಿಯಲಾರದ ಇಲ್ಲವೆ ಸಂಸ್ಕಾರ ವಶದಿಂದ ಇಳಿಯಲೊಲ್ಲದ ಭಾವಾವೇಶಗಳೇ ಸಾಹಿತ್ಯ ಕೃತಿಯಾಗಿ ಕಲಾಕೃತಿಯಾಗಿ ಹೊರಹೊಮ್ಮುತ್ತವೆ. ಎಂದಮೇಲೆ ಶೀಲಕ್ಕೂ ಸಾಹಿತ್ಯಕ್ಕೂ ನಿಜವಾದ ನೇರವಾದ ಸಂಬಂಧವಿಲ್ಲವೆಂದಾಯಿತು.

ಈ ವಿವೇಚನೆಯಿಂದ, ಹಿಂದೆ ಬಂದ ಕಮಾಲನ ಇಲ್ಲವೆ ಬರ್ನಾರ್ಡ್ ಶಾ-ನ ಮಾತಿನ ಮರ್ಮ ಹೆಚ್ಚು ಸ್ಪಷ್ಟವಾಗುತ್ತದೆ. ಸಾಹಿತ್ಯದೃಷ್ಟಿ ಇಲ್ಲವೆ ಶಕ್ತಿ ಬೆಳೆದ ವ್ಯಕ್ತಿಗೆ ನೇರವಾಗಿ ಕ್ರಿಯೆಗೆ ದುಡುಕಲು ಶಕ್ಯವಾಗುವುದಿಲ್ಲ. ಅವನಿಗೆ ಒಂದು ಪ್ರಶ್ನೆಯ ಹಲವು ಮೈಮ್ಮಗಳೂ ಒಂದು ನಿರ್ಣಯದ ವಿವಿಧ ಪರಿಣಾಮಗಳೂ ಒಮ್ಮೆಲೇ ತೋರುವವು ಅಥವಾ ಬಂದ ಸಂದರ್ಭಕ್ಕೆ ತೀರ ವಿಸಂಗತನಾದ ವಿಘಾತಕವಾದ ಅಂಶವೇ ಹೆಚ್ಚು ವಿಕಾರವಶವಾಗಿ ಮಾಡಬಹುದು. ವ್ಯಾಧನಿಗೆ ಕೊಟ್ಟ ವಾಲ್ಮೀಕಿಯ ಶಾಪದಿಂದ ಮಹಾಕಾವ್ಯದ ಆದಿಶ್ಲೋಕವಾಯಿತು; ಆದರೆ ಕ್ರೌಂಚವಧದ ದುರಂತ ತಪ್ಪಲಿಲ್ಲ. ವಾಲ್ಮೀಕಿಯ ಸ್ಥಳದಲ್ಲಿ ಅಂತಹ ಭಾವಜೀವಿಯಲ್ಲದ ನ್ಯಾಯಬುದ್ಧಿಯ ಇನ್ನಾವನಾದರೂ ಬೇಟೆಗೆ ಬಂದ ರಾಜಪುತ್ರನಿದ್ದರೆ, ಆ ವ್ಯಾಧನ ಬಾಣ ಕಕ್ಕಿಗೆ ಹಾರುವ ಮೊದಲೇ ಬಾಣ ಹೂಡಿದ ಕೈಯು ತುಂಡಾಗಿ ಬೀಳುತ್ತಿತ್ತು. ರಾಜಪುತ್ರನ ವ್ಯಾವಹಾರಿಕ ಪ್ರತಿಕ್ರಿಯೆ ಪ್ರತ್ಯಕ್ಷವಾಗಿ ಆಗುತ್ತಿತ್ತು.

ಎಂದರೆ ಸಾಹಿತ್ಯಕ್ಕೆ ಸಾಮಗ್ರಿಯಾಗುವ ಸಾಮರ್ಥ್ಯವಾಗುವ ಮನೋಧರ್ಮವು ಚಾರಿತ್ರ್ಯಕ್ಕೆ ಕಾರಣವಾಗುವ ಧರ್ಮದಿಂದ ಸ್ವಭಾವತಃ ಬೇರೆಯಿರಬೇಕು. ಆ ಘಟನಾಪ್ರವಾಹವನ್ನು ಮುಂದರಿಸುವುದು ಚಾರಿತ್ರ್ಯದ ಧರ್ಮ. ಘಟನಾ ಪ್ರವಾಹದಲ್ಲಿ ನಿಂತು ಚಿಲ್ಲಾಟವಾಡಿ ಈಸಾಡಿ ಆನಂದಪಡುವುದು ಸಾಹಿತ್ಯದ ಧರ್ಮ. ಪ್ರಯತ್ನ ಪ್ರಯೋಜನಗಳಿಂದಲೇ ಬದ್ಧವಾಗಿರುವ ವ್ಯಾವಹಾರಿಕ ಯಶಾಪಯಶಗಳೇ ಚಾರಿತ್ರ್ಯ-ಶೀಲಗಳ ಪರಿಣಾಮಗಳು. ಆದರೆ ಜೀವನದ ಹರ್ಷ-ಶೋಕ, ಸುಖ-ದುಃಖ, ಸಾಧನೆ-ಶೋಧನೆ, ಸಾಫಲ್ಯ-ವೈಫಲ್ಯ ಎಲ್ಲವನ್ನೂ ಒಳಗೊಂಡ ಅನುಭವದ ವಿಶಾಲ-ವಿಸ್ತಾರವನ್ನು ತಕ್ಕಮಟ್ಟಿಗೆ, ತನ್ನಮಟ್ಟಿಗೆ ಪ್ರತಿಬಿಂಬಿಸುವ ಪ್ರತಿಭಾ ವಿಲಾಸವೇ— ವ್ಯಕ್ತಿತ್ವದ ಪರಿಪಾಕವೇ— ಸಾಹಿತ್ಯದ ಅಂತರಂಗವು.

ಇದರ ಅರ್ಥ ಸಾಹಿತಿಗೆ ಚಾರಿತ್ರ್ಯ ಇಲ್ಲವೇ ಶೀಲ ಇರಬಾರದೆಂತಲ್ಲ; ಇರುವುದಿಲ್ಲವೆಂತಲೂ ಅಲ್ಲ. ಸಾಹಿತಿಯು ರೂಪಿಸುವ ಸಾಹಿತ್ಯಕೃತಿಗೆ ಆ ಚಾರಿತ್ರ್ಯ-ಶೀಲಗಳು ಉಗಮಗಳಲ್ಲ— ಆತನ ಇಲ್ಲವೆ ಆಕೆಯ ಅಂತರಂಗದ ಅಂತರಾಳದ ವ್ಯಕ್ತಿ-ವಿಕಾರಗಳ ಪುಟಗೊಂಡ ಪಾಕವು ಸಾಹಿತ್ಯಕೃತಿಯಾಗಿ ಲಲಿತ ಕಲಾಕೃತಿಯಾಗಿ ವ್ಯಕ್ತವಾಗುತ್ತದೆ. ಸಾಹಿತ್ಯ ನಿರ್ಮಿತಿಯ ಮಟ್ಟಿಗೆ ಸಾಹಿತಿಯ ಶೀಲ-ಚಾರಿತ್ರ್ಯಗಳು ಬದಿಗುಳಿಯುವವು; ಬದಿಯಾಗಿ ಉಳಿಯುವವು. ಎಷ್ಟೋ ಸಲ ಸಾಹಿತ್ಯದಲ್ಲಿ ಅದ್ವಿತೀಯ ಮುಮ್ಮೆಯನ್ನು ಪಡೆದು ಮೆರೆಯುವ ವ್ಯಕ್ತಿ ನಿತ್ಯ ಜೀವನದ ಧಾವಂತದಲ್ಲಿ, ಉಪಜೀವಿಕೆಯ ಸಫಲತೆಯಲ್ಲಿ, ಇಲ್ಲವೆ ಸಾಮಾಜಿಕ ಸಾರ್ವಜನಿಕ ಹೊಣೆಗಾರಿಕೆಯಲ್ಲಿ ತೀರ ನಿಕೃಷ್ಟ—ನಿರುಪಯೋಗಿಯಾಗಿ ಕಂಡುಬರುವುದುಂಟು.

ಸಾಹಿತಿಗಳು ಸತ್ಕಾರ ಸಮಾರಂಭದ ಅಧ್ಯಕ್ಷರಾಗಬಲ್ಲರು. ಆ ಸಮಾರಂಭವನ್ನು ಸೆರಪೇರಿಸುವ ಕಾರ್ಯಕರ್ತರಾಗಲಾರರು. ಸಾಹಿತಿಗಳು ಗೌರವನಿಧಿಗಳನ್ನು ಪಡೆಯಲು ಅರ್ಹರಾಗಬಹುದು; ಅಂತಹ ನಿಧಿಯನ್ನು ಕೂಡಿಸಲು ಸರ್ವಥಾ ಅಯೋಗ್ಯರಾಗಬಹುದು. ಸಾಹಿತಿಗಳು ಸಂಘಗಳ ಮುಖ್ಯ ಅತಿಥಿಗಳೂ ಮಾನ್ಯ ಭಾಷಣಕಾರರೂ ಆಗಿ ಮೆರೆಯಬಹುದು; ಆದರೆ ಕಾರ್ಯದರ್ಶಿಗಳಾಗಲಾರರು. ಕಾರ್ಯಕ್ರಮಗಳನ್ನು ರಚಿಸಲಾರರು. ಇನ್ನು ಈ ಸಾಮಾನ್ಯ ಮಾತಿಗೂ ಅಪವಾದಗಳು ಸಾಕಷ್ಟು ಸಿಕ್ಕಬಹುದು. ಕಾರ್ಯಕರ್ತರೂ ಕರ್ಮವೀರರೂ ಸಾಹಿತ್ಯ ನಿರ್ಮಿತಿಯನ್ನು ಮಾಡಿರಬಹುದು. "ಭೂಪತಿಯು ಕವಿಯಾಗಿ ಕವಿ ಭೂಪತಿಯಾಗಿ" ಮೆರೆದ ನಾಡು-ನುಡಿಗಳಿರಬಹುದು. ಪೇಶ್ವೆಲ್ ಸಾಹೇಬರು ಸೇನಾಪತಿಯಾಗಿಯೂ ಕವನಗಳನ್ನು ರಚಿಸುತ್ತಿರಬಹುದು. ರಾಷ್ಟ್ರಪತಿ ಜವಾಹರರು ರಾಜಕೀಯ ಏಟಾಟೋಪ ನಡೆಯಿಸುವಾಗಲೂ ಲಲಿತ ನಿಬಂಧಗಳನ್ನು ಮಧುರಶೈಲಿಯಲ್ಲಿ ಬರೆಯುತ್ತಿರಬಹುದು. ರಾಜಗೋಪಾಲಾಚಾರ್ಯರು ಕತೆಗಾರರೂ ಆಗಿರಬಹುದು. ಕೆ. ಎಮ್. ಮುನಸಿಯವರು ನಾಟಕಕಾರರೂ ಇರಬಹುದು. ಚರ್ಚಿಲ್ಲರು ಯುದ್ಧಚರಿತ್ರೆಗಳಂತೆ ಸೃಷ್ಟಿಚಿತ್ರಗಳನ್ನು ಜನ್ನಾಗಿ ಬರೆದಿರಬಹುದು; ಆದರೆ ಇವೆಲ್ಲ ಉದಾಹರಣೆಗಳಲ್ಲಿ ಎಷ್ಟುಪಾಲು ಅವರ ಚಾರಿತ್ರ್ಯ— ರಾಜಕೀಯ ಸಾಮಾಜಿಕ ಸಾರ್ವಜನಿಕ ಚಾರಿತ್ರ್ಯ—ವಿವಿಧವೋ, ಮಹತ್ತ್ವದ್ದೋ ಅಷ್ಟುಪಾಲು ಅವರ ಸಾಹಿತ್ಯ ಗೌಣವಿರುತ್ತದೆ.

ಸಾಹಿತ್ಯದ ಸಂಬಂಧ ಹೀಗೆ ಚಾರಿತ್ರ್ಯದೊಡನೆ ಇರುವುದಿಲ್ಲ; ಅದು ಕೇವಲ ವ್ಯಕ್ತಿತ್ವದೊಡನೆ,—ಸ್ವಚ್ಛಂದ ವಿಕಾಸಗೊಂಡ ವ್ಯಕ್ತಿತ್ವದ ವಿಲಾಸದೊಡನೆ. ಭಾವನಾ ಜೀವಿಗಳೂ ಕಲ್ಪನಾ ಜೀವಿಗಳೂ ಸ್ವಪ್ನರಂಜಕರೂ ವಿಶೇಷವಾಗಿ ಸಾಹಿತ್ಯಲೋಕದ ನಿವಾಸಿಗಳು. ಚಾರಿತ್ರ್ಯವು ಸಾಹಿತ್ಯದ ವಿಷಯವಾಗಿ ಬರಬಹುದು; ವಸ್ತುವಾಗಿ ವಿನ್ಯಾಸಪಡೆಯಬಹುದು ಆದರೆ ಸಾಹಿತ್ಯದ ಶಕ್ತಿ ಶೈಲಿ ಹಾಗೂ ಶೋಭೆಗಳು ಪಾಕಗೊಂಡು ಬೆಳೆಯುವುದು ವ್ಯವಹಾರವನ್ನು ಮೀರಿದ, ಉಪಯೋಗವನ್ನು ಬದಿಗಿಟ್ಟ, ಉಪಜೀವಿಕೆಯಿಂದ ದೂರ ನಿಂತ ಸಮಗ್ರ ಜೀವನದ

ವಿಶಾಲವಾದ ಅನುಭವ, ವಿಶೇಷವಾದ ಅವಲೋಕನ ಮತ್ತು ಭಾವನಾಮಯ ತಲ್ಲೀನತೆಗಳಿಂದಲೇ ಸರಿ.

ವ್ಯಕ್ತಿಯ ಶೀಲವು ಭೂಷಣವಿರಲಿ, ದೂಷಣವಿರಲಿ; ಹಿಂಕಿತಿರಲಿ, ಕೆಡಕಿರಲಿ; ಕೀಳಿರಲಿ, ಮೇಲಿರಲಿ; ಅವನ ಅಥವಾ ಅವಳ ವ್ಯಕ್ತಿತ್ವವು ಎಷ್ಟು ಸಂಪನ್ನವೋ ಅಷ್ಟು ಅದರಿಂದ ವ್ಯಕ್ತವಾಗಬಹುದಾದ ಸಾಹಿತ್ಯಕೃತಿಯು ಉದ್ದಾಮವು, ಉತ್ತಮವು. ಚಾರಿತ್ರ್ಯವಂತನ ಚಾತುರ್ಯವು ಕೇವಲ ಪ್ರಸ್ತುತವನ್ನೇ ನೋಡಿಕೊಳ್ಳುತ್ತದೆ—ನಡೆಸಿಕೊಳ್ಳುತ್ತದೆ. ಆದರೆ ಸಾಹಿತಿಯ ಪ್ರತಿಭೆಯು ಪ್ರಸ್ತುತ-ಅಪ್ರಸ್ತುತಗಳ ನಡುವೆ ಇಂದ್ರ ಧನುಷ್ಯದ ಸೇತುವೆಯನ್ನು ಕಟ್ಟುತ್ತದೆ. ಈ ಪ್ರತಿಭಾವ್ಯಾಪಾರವು ಒಂದು ಕಾಯಕಲ್ಪವೂ ಆಹುದು; ಪರಕಾಯಾ ಪ್ರವೇಶವೂ ಆಹುದು. ಸಾಹಿತಿಗೆ ಮಹಾ ಅನುಭೂತಿಯಾದರೂ ಇರಬೇಕು. ಸಹಾನುಭೂತಿಯಾದರೂ ಇರಲಿಕ್ಕೆ ಬೇಕು. ಒಂದು ತಾನೇ ವ್ಯಕ್ತಿತ್ವ ವಾಗಿ ನಿಲ್ಲುತ್ತದೆ; ಇನ್ನೊಂದು ಬೇರೆ ವ್ಯಕ್ತಿತ್ವದೊಂದಿಗೆ ಹೊಂದಿಕೊಂಡು ಅದರ ವಿಶೇಷಗಳನ್ನು ವ್ಯಕ್ತಮಾಡುತ್ತದೆ. ಮೇಲೆ ಕೊಟ್ಟ ಕೆಲವು ಉದಾಹರಣೆಗಳಲ್ಲಿ ವ್ಯಕ್ತಿತ್ವಶಾಲಿಗಳಾದವರೇ ಸಾಹಿತ್ಯ ಕೃತಿಗಳನ್ನು ರಚಿಸುವರೆಂಬುದು ತನ್ನಾಕೆ ಕಂಡುಬರುತ್ತದೆ. ಅಂಥವರ ಸಾಹಿತ್ಯವಾಗಲೀ, ಕಲೆಯಾಗಲೀ, ಅವರ ಸಾಮಾಜಿಕ ಇಲ್ಲವೆ ವೈಯಕ್ತಿಕ ಜೀವನದ ವ್ಯಾವಹಾರಿಕ ಮಹತ್ವದ ಚರಿತ್ರೆಯ ಫಲವಲ್ಲ. ಅದು ಸಡಿಲಿಸಿದಾಗ, ಅದರ ಬಿಡುವಿನಲ್ಲಿ, ಅದರ ವ್ಯಕ್ತಿತ್ವವು ಗೈದ ನಲಿದಾಟವು.

ವೈಷಮ್ಯದಿಂದಲೋ, ಸ್ಪರ್ಧೆಯಿಂದಲೋ, ಜೀವವ ಕಲಹದ ಪ್ರತಿಕೂಲತೆಗಳಿಂದಲೋ, ಯಶಸ್ವಿಯಾದ—ಪ್ರಭಾವಿಯಾದ ಬಾಳಿಗೆ ಅವಶ್ಯವಾದ ಗುಣಗಳು ನಿಜವಾದ ಸುಖ-ಜೀವನಕ್ಕೆ ಮಾರಕವಾಗಿಯೂ, ಸಾಹಿತ್ಯ ಇಲ್ಲವೆ ಕಲಾಪ್ರಪಂಚಕ್ಕೆ ಬಾಧಕವಾಗಿಯೂ ಪರಿಣಮಿಸುತ್ತವೆ. ರಟ್ಟೆಯ ಹುರಿ, ಹೊಟ್ಟೆಯ ಉರಿ, ನೆಟ್ಟ ದೃಷ್ಟಿಯ ನಿಸ್ಸೂರವಾದ ಗುರಿ ಇವುಗಳ ಎಡೆಬಿಡದ ವಾದಿಕೆಯಿಂದ ಮನಸ್ಸನ್ನು ಹೆಪ್ಪುಗಟ್ಟುತ್ತದೆ. ಜೀವನದ ಗೆಲುವಿಗೆ ಬೇಕಾಗುವ ಸಾಧನೆಯು ಇಂದಿನ ಸಾಮಾಜಿಕ ದುರವಸ್ಥೆಯಲ್ಲಿ, ಅನವಸ್ಥೆಯಲ್ಲಿ, ಜೀವನದ ಜಿಲುವಿಗೆ ಬಾಧೆಯಾಗಿ ಪರಿಣಮಿಸುತ್ತದೆ. ಆದ್ದರಿಂದ ಇಂಥ ಯಶಸ್ವಿ ಜೀವನದ ದಾರಿಯನ್ನು ದಣಿವಿಲ್ಲದೆ ತಣಿವಿಲ್ಲದೆ ತುಳಿಯುವ ಚಾರಿತ್ರ್ಯವಂತನು ಶೀಲವಂತನು, ವ್ಯವಹಾರ ಚತುರನು, ತನ್ನ ಅನುಭವವನ್ನೆಲ್ಲ ಎನಿಸಿಕೆ ನೆನಸಿಕೆಗಳನ್ನೆಲ್ಲ ಕಾರ್ಯಕ್ಷಮತೆಯ ಒಂದೇ ಎರಕದಲ್ಲಿ ಹೊಯ್ದು ಉಪಯುಕ್ತತೆಯನ್ನು ಬೆಳಸಿಕೊಳ್ಳುತ್ತಾನೆ.

ಇಂಥ ಹುರಿಗೊಂಡ ಗುರಿಗಟ್ಟಿದ ಬದುಕು ಸಾಹಿತ್ಯವನ್ನು ಅರಳಿಸದು; ಹೆಚ್ಚೆಂದರೆ ವಿಕಾಸಗೊಳಿಸಿದ್ದಾಗ ಅದು ಸಾಹಿತ್ಯದ ಆಸ್ವಾದವನ್ನು ಮೂಡಬಹುದು. ರಸಿಕತೆಯನ್ನುಂಟು ಮಾಡಬಹುದು. ರಸಋಷಿಯನ್ನುಂಟುಮಾಡಲಾರದು! ಅಂತೆಯೇ, ಸಾಹಿತ್ಯದ ನೇರವಾದ ಸಂಬಂಧ ವ್ಯಕ್ತಿತ್ವದೊಡನೆ, ಸ್ವಚ್ಛಂದವಾದ ವ್ಯಕ್ತಿವಿಕಾಸ-ವಿಲಾಸದೊಡನೆ; ಹೊರತು ಶೀಲ ಚಾರಿತ್ರ್ಯಗಳ ಆಚ್ಚು-ಕಟ್ಟುಗಳೊಡನೆ ಅಲ್ಲ. ಪುಣ್ಯವಂತನಿರಲಿ, ಪಾಪಿಯಿರಲಿ, ಅತನ ಜೀವನ ಉತ್ಕಟ ಭಾವನಾ ಪೂರ್ಣವಾಗಿದ್ದರೆ ಅದರಿಂದ ಸಾಹಿತ್ಯಕೃತಿಯು ಸ್ಫೂರ್ತಿ ಬರಬಹುದು. ಜೀವನದ ಯಾವ ಪಾತಳಿಯಲ್ಲಿಯೇ ಇರಲಿ ಕೊಲೆಗಡಕ, ಕಲೆಗಾರ, ಸೆರೆಕುಡುಕ, ಸೈನಿಕ, ನಾವಿಕ, ಉಂಡಾಡಿ, ಅಂಗಡಿಕಾರ ಪ್ರಮಥಾಪುರುಷ, ಖಲಪುರುಷ, ನಟ, ವಿಟ. ಸಮ್ರಾಟ—ಯಾವ ರೀತಿಯ ಜೀವನವೇ ಇರಲಿ; ಅದನ್ನು ತನ್ಮಯತೆಯಿಂದ, ಅಳವಾದ ಅರಿವಿನಿಂದ, ವಿಪುಲವಾದ ಅನುಭವದಿಂದ ಬದುಕಿ ಕಹಿ-ಸಿಹಿಗಳನ್ನೆಲ್ಲ ಉಂಡು ಅರಗಿಸಿಕೊಂಡ ತಪಸ್ಸು—ಅದು ಸತ್ಕರ್ಮ ಯೋಗವೇ ಆಗಲಿ ಒಂದು ಪ್ರಭಾವಿಯಾದ ವ್ಯಕ್ತಿತ್ವವನ್ನು ಮಾರ್ಪಡಿಸಬಲ್ಲದು. ಅಂಥ ವ್ಯಕ್ತಿತ್ವದ ಪ್ರಭಾವಕ್ಕೆ ಪ್ರತಿಭೆಯ ರಂಜಕ ವ್ಯಂಜಕ ಶಕ್ತಿಯು ಸಾಕಷ್ಟು ಜೊತೆಯಾಗಿದ್ದರೆ, ಅದು ಸಾಹಿತ್ಯ ಕೃತಿಯಾಗಿ, ಕಲಾಕೃತಿಯಾಗಿ, ಲಲಿತನಿರ್ಮಿತಿಯಾಗಿ ರೂಪಗೊಳ್ಳಬಹುದು.

ಇಂಥ ಸಾಹಿತಿಯಾಗಬಲ್ಲ ವ್ಯಕ್ತಿತ್ವವು ರಸಪ್ರಪಂಚದಲ್ಲಿಯೂ, ಸೌಂದರ್ಯ ಸಾಧನೆಯಲ್ಲಿಯೂ ಸಾರ್ವಭೌಮ ಸ್ಥಾನವನ್ನು ಪಡೆಯುವಂತಿದ್ದರೂ, ಸಾರ್ವಜನಿಕ ಸ್ವಾಸ್ಥ್ಯ, ಸಾಮಾಜಿಕ ಪ್ರತಿಷ್ಠೆಗಳ ಮೇಲೆ ನೆಲೆಗೊಂಡ ಒಳಿತು-ಕೆಡಕುಗಳಿಗೆ ಸಂಬಂಧಪಟ್ಟ ವ್ಯಾವಹಾರಿಕ ಜೀವನದ ಒರೆಗಲ್ಲಿಗೆ, ಇಂಥ ರಮ್ಯವಾದರೂ ಅಗಮ್ಯವಾಗುವ ವ್ಯಕ್ತಿತ್ವಕ್ಕಿಂತ ಸಮರ್ಥವೂ ಕಾರ್ಯಕ್ಷಮವೂ ಆದ ಚಾರಿತ್ರ್ಯವೇ ಹೆಚ್ಚಿನ ಬೆಲೆಯದಾಗಿ ಇಳಿಯಬಹುದು. ಅಂತೆಯೆ ಕರ್ಮವೀರನಾಗಲು ಹೊರಟ ಕವಾಲ ಅತಾತುರ್ಕನು ತನ್ನ ಕವಿತ್ವವನ್ನು ಬಿಟ್ಟು ಕತ್ತಿ-ಕೋವಿಯನ್ನು ಕೈಗೊಂಡಿದ್ದು. ಅಂತೆಯೇ ಗ್ರೀಕ ಸ್ವಾತಂತ್ರ್ಯವ್ಯಾಪಾರನಾದ ವಿಶ್ವವಿಖ್ಯಾತ ಪ್ಲೇಟೋನು ತನ್ನ ಆದರ್ಶ ರಾಜ್ಯ ವ್ಯವಸ್ಥೆಯಲ್ಲಿ ಕವಿಗಳಿಗೆ ಸ್ಥಳಕೊಡದೆ ಇದ್ದುದು!

ಎಲ್ಲಿಯೂ ಯಾವ ಸ್ಥಾನವೂ ದೊರೆಯದಿದ್ದರೂ ಸಾಹಿತಿಗೆ ಕಲಾವಿದನಿಗೆ ರಸರಾಜ್ಯದಲ್ಲಿ ಸೌಂದರ್ಯ ಸೃಷ್ಟಿಯಲ್ಲಿ, ಸಹೃದಯದ ಸಮಾಗಮ ಸಲ್ಲಾಪಗಳಲ್ಲಿ ಸಲಿಗೆಯ ಸನ್ಮಾನದ ಸ್ಥಾನವು ಎಂದೆಂದಿಗೂ ಮೀಸಲಾಗಿದೆ. ಆದಕ್ಕಾಗಿ ಸಾಹಿತಿಗೆ ಏನುಬೇಕು? ವ್ಯಕ್ತಿತ್ವವೋ, ಚಾರಿತ್ರ್ಯವೋ? ಚಾರಿತ್ರ್ಯವಿರಲಿ ಇಲ್ಲದಿರಲಿ; ಸಾಹಿತಿಯಾಗಲು ವ್ಯಕ್ತಿತ್ವವೇ ನಿಶ್ಚಯವಾಗಿ ಬೇಕು—ಅಕ್ಷಯವಾಗಿಬೇಕು.

ಸಿರಿ ಷಡ್ವರ್ಗ!

★

ಪ್ರೀ. 'ಅಕ್ಷಯ' ಹಿಂ. ವಿ. ವಿ. ನಿಲಯ, ಬನಾರಸ

(ಸ್ವಚ್ಛಂದ ಛಂದ)

'ಅರಿಷಡ್ವರ್ಗ! ಅರಿಷಡ್ವರ್ಗ!'
ಎಂದೇಕೆ ತೊಳಲುವಿರಿ? ಅಂಜುವಿರಿ?
ಮತ್ತೊಮ್ಮೆ ಯೋಚಿಸಲು
ಸಿರಿಷಡ್ವರ್ಗವವು, ಜಗದ ಬಾಳಿಂಗ.
'ಇವನು ತೊರೆಯಿರಿ! ದೂರ ಸರಿಯಿರಿ!
ಎಂದೇಕೆ ಅರಿಯಮೆಯ ಜೀರುವಿರಿ—
ಘಾತಕಲಿತರಗಿಳಿಯು ರೀತಿಯಲಿ?
ಜೀವ ನಿಡಿಯುವ ತಂತಿ ಇವೆ, ಮತ್ತೆ ನೋಡಿ.

ರಕುತ, ನರ, ಮಾಂಸ ಎಲುಚರವೆ
ಎಂತು ಮನುಜನು ಮುದ್ದೆಮಣ್ಣೋ;
ಪಂಚೇಂದ್ರಿಯಗಳರಿವವನು
ಎಂತೊಂದು ಒಣಮರವ ಮುಟ್ಟೋ;
ಅಂತೆಯೇ ಷಡ್ವರ್ಗ ತಾಳ್ದು ಬಾಳದಿಹ
ಒಳಿತೊಂದು ಸಪ್ಪೆಯದು ಚಿತ್ರನಾತ್ರ;
ಅವನ ಬಾಳೊಂದು ಬರಿ ಬೀಳುಭೂಮಿ!

ಕಾಮವಿಲ್ಲದೆ ಕೆಲಸವಾದರೂ ಹೇಗೆ?
ಗುರಿಯನೇ ಕಾಣದಿಹ ನಡೆಯಲೇ ಭರದು?
ಹಸಿವಿನಿಂದಲೆ ಅಡಿಗೆ, ಊಟ, ಜೀವದಿರವು.
ಪ್ರಸೃಷ್ಟಿಕರ್ತನೂ ಇನಂದ ಕಾಮಿಸಿಯೆ
ಪ್ರಕೃತಿ ವೈಚಿತ್ರ್ಯವನು ಚಿತ್ರಿಸಿಹನು.
ಕಾಮವಿರದಿರೆ ಸೃಷ್ಟಿ ಮುಂದುವರಿವುದು ಹೇಗೆ?
ಕಾಮವೇ ಮೂಲ ಈ ವಿಶ್ವವಸಿರಿಂಗೆ.
ಆ ಕಾಡು ಕುದುರೆಗೇ ಹಾಕಿ ಕಡಿವಾಣ—
ಜಡಿದು ನಡೆಸಲು ಸರಿಯ ದಾರಿ ಮೇರೆಯಲಿ,
ಜಗದಿ ನುಗ್ಗಿಸೆ ಬಾಳು ಕಾಣುವದು ಸಾರ್ಥಕತೆ.

ಕ್ರೋಧವೂ ಇರಬೇಕು ಕೇಡುಗಳ ತೊಡೆಯುವೊಡೆ,
ಅನ್ಯಾಯ ದೌಷ್ಟ್ಯಗಳ ಇದಿರಿಸುವ ತಿಯಲಿದು.
ಲೋಕದಲಿ ಸತ್ಕಾರ್ಯವೆಸ್ಟಿಹುದು ಪ್ರೇರಣೆಯು!
ಕಳೆ ಬೆಳೆದ ತೋಟವನು ಹಸನು ಮಾಡುವೊಡೆ
ಗುದ್ದಲಿಯು ಪೆಟ್ಟಂತು ಬೀಳಲೇ ಬೇಕು;
ಕೊಳೆ ರಾಶಿ ಬಿದ್ದಕಡೆ ಜೇಡವೇ ಬೆಂಕಿ?
ನಿತ್ಯಯುದ್ಧದಿ ಶಸ್ತ್ರನಿಂದೆ ಬೆಳುಂಟಿ?
ಹಾವ ಹುಲಿದಾಡುವೆಡೆ ಕೋಲಿರದೆ ಹೇಗೆ?
ಕಾಣ ವಾಯುವ ಕೆಲಸ ಜೀವನದಿ ಒದಗಿರಲು
ಈ ಕೊದಲಿಯಾಡುತಲಿ ದಾರಿಯಾಗಿಸುತಿರಲಿ.

ಮೋಹವಿರಬಾರದೇ ನಮ್ಮೊಳ್ಳಕನದಲ್ಲಿ?
ಈಸೊತ್ತ ಸುಲಭದಲಿ ಎಸೆವ ಹದನೆಂತು?
ಕಿರಿ ನೀರಿನಂತವನು ತಡೆದು ಹಾಯಿಸಬೇಕು.
ತೂಬಿನಲಿ ನೀರಬಿಡೆ ಕಾಲುವೆಯು ಹರಿದು
ಪಾತ್ರದಲಿ ನೀರೆರೆದು ಪೈರ ಬೆಳೆಯುವುದು;
ಕಟ್ಟಿಯೊಡೆದರೆ ಹೊಲಗಳೆಲ್ಲ ಕೊಚ್ಚಿ,
ಪ್ರವಾಹದೊಳಗಾವುದು ಕರೆಯು ಬರಿದು.
ಹುಚ್ಚ ಕರ್ಣನ ದಾನ ಕೂನಯ ಕಾಣಿಸಿತವಗೆ.
ಪ್ರೇಮ ಔದಾರ್ಯಗಳ ಪೆಚ್ಚಕ್ಕು ಹದಬೇಕು;
ಲೋಭ ತೂಬುಗಳವನು ಕಟ್ಟನೊಳಗಿಡಲಿ.

ಮೋಹವಿಲ್ಲದ ಮನಕೆ, ವನವೇನು, ಮರವೇನು,—
ಈ ಮನೋಹರ ಜಗದ ಸೌಂದರ್ಯ ಬರಿ ಶೂನ್ಯ,
ಜೀವನದ ಆನಂದ ರಂಗು ಗೆತೆಯಿರದ ಪಟ,
ಬಾಳೊಂದು ಉಪ್ಪುಪ್ಪ ಕಾಲಕಳೆಯುವುದಷ್ಟೆ.
ಸೊಗವ ವಿಶ್ವದ ಹುಟ್ಟು ಬರಿ ಮಾಸು, ನಾಶಕ್ಕೆ?
ಇಲ್ಲ; ಇದು ಆನಂದ ಮುಕರಂದದನುಭವಕೆ.
ಮೋಹವಿಲ್ಲದೆ ಜಿಲುಪೆ ಹೆಣ್ಣಾಗಲೇ ಒಣಬಂಜೆ?
ಮೋಹ ತೋಳ್ಗಳಲಿಹುದು ಸೃಷ್ಟಿಕಾರ್ಯವ ಗುಟ್ಟು.
ಯೋಗಿ ಶಿವ ಜಿಲುಪೆ ಉಮೆಯರ ಬೆರಸಿತೀ ಮೋಹ.
ಜಗವನೇ ಬಳಸಿ ಬಾಣಿಸುವ ಹೂಮಾಲೆಯಿದು;
ಪಯಣದಲಿ ಉತ್ಸಾಹ ಹರ್ಷಗಳ ಜಿಲ್ಲಲಿದು.

ಮನವಿದ್ದರೇನಾಯ್ತು, ನಮ್ಮ ಹಿರಿಮೆಯದೆನುಗೆ?
ಇಗೊಡನೆ ಕಡಿಯುವುದು ಕೇಳುದಾರಿಗೆ, ಕೆಳಗೆ.
ಕಮಲದಾಶ್ರಿತ ತುಂಬಿ ಮುಂಬಿಯನು ಮೂಸೀತೆ?
ಅಮೃತ ಉಂಡಿಪ ಹೆಮ್ಮೆ ಹೆಂಡವನು ಕುಡಿಸೀತೆ?

ಸ್ವಾತಂತ್ರ್ಯ ಸೆಡಕೆಂದೆ ಜೋಳಿಗೆಯ ತೊಡಿಸೀತೆ ?
ಯಾತ್ರೆ ಪುಣ್ಯದ ನೆನವು ಪಾಪಕಂಜಿಸಬಹುದು.
ವೇಷದಲಿ ಕೂಡಿಟ್ಟ ಮೈಕೊಬ್ಬು ತಾ ಕರಗಿ
ಪಸಿವಿನಲಿ ಹೊಲಸೇನ ತಿನ್ನಿಸಿದ ರೀತಿಯಲಿ
ಘನತೆಯಾ ಮದ ಮನವ ದೂರದೊಳಗಿಟ್ಟರಲಿ;
ತುಚ್ಛಯೋಜನೆಯಿಂದ, ಹೇಯಕಾರ್ಯಗಳಿಂದ.
ಪೋಷಿಸಲಿ ಮದ ನಮ್ಮ ಹಿರಿಮೆ ಹೆದ್ದಾರಿಯನು—
ನಾಚಿಸಲಿ ಹೊಗದಂತೆ ಅಡ್ಡದಾರಿಯ, ಸಂದ.

ಮಾತ್ಸರ್ಯವೇ ತಪ್ಪೆ—ಪಾತ್ರವನೆ ಬಗೆಯದಲಿ ?
ಕೇಡನೆಣಿಸದ ಕಡೆಯಲಿದು ಮೇಲ್ಮೆ ಸಾಧನವೆ!
ಹಿರಿಯರಲಿ ಮಾತ್ಸರ್ಯ ಕಿರಿಯರೇಳ್ಗೆಗೆ ಮೂಲ.
ಜಡದಾನೆ ನಡೆಸುವೊಡೆ ಅಂಕುಶವು ಬೇಡವೇ ?
ಜೂಜಿನೊಳಗಲ್ಲವೇ ಕುದುರೆ ನಾಗಾಲೋಟ ?
ಇರಲಿ ನಮಗೂ ಕಿಚ್ಚು ಗುರಿಗಿರಿಯ ತುದಿ ಏರೆ,
ಶಕ್ತಿ ಸಾಧ್ಯದ ಹಿರಿಮೆಯುಪಯೋಗ ಸಾಧಿಸಲು,—
ಅಲ್ಪದಾಯುಷ್ಯದಲಿ ಕೊನೆ ಎಂದೊ, ಎಂತೊ, ಏನೋ!
ಗಾಳಿಯಿದ ಬಳಸುವೊಡೆ ದೋಣಿಪಟ ಚಿಟ್ಟಿಪರಿ
ಸುಲಭಸಾಧ್ಯದ ಮಾತು, ನಡುಗಡಲ ಪಯಣ.

ಹೀಗೆ ಷಡ್ವರ್ಗವೇ ಅರಿ-ಸಿರಿಗಳಾಗುವುದು
ನಮ್ಮ ಉಪಯೋಗದಲಿ; ಅದರ ಗುಣದಿಂದಲ್ಲ.
ಅವುಗಳೆಲ್ಲವು ಪರಿತದಾಯುಧದ ರೀತಿ;
ಬಳಸಬಹುದವುಗಳನು ಶಸ್ತ್ರ ಚಿಕಿತ್ಸಕನಾಗಿ
ನೂರಾರು ಜೀವಗಳನುಳಿಸೆ, ಯಾತನೆಯಳಿಸೆ;
ಬಳಸಲೂ ಬಹುದವುಗಳಜ್ಞೆ ಕ್ರೂರಪಾತಕಿಯಾಗಿ
ನೂರಾರು ಜೀವಗಳನಳಿಸೆ, ಯಾತನೆಯ ಬೆಳಸೆ.
ವಿಷವೂ ಔಷಧವಲೆ, ಉಪಯೋಗಿಸಲು ತಿಳಿದು ?
ಆತ್ಮಹತ್ಯವೂ ಸಾಧ್ಯವದನು ಸುಂಗಲು ಮರೆದು.
ಎಲ್ಲವೂ ಬೇಕಿಲ್ಲಿ ತಿಳಿದುಕೊಂಡರೆ ಗುಟ್ಟು.
ಯಾವುದಕು ಅಳಾಗದಿಲ್ಲವನುಭವಿಸುವುದೆ
ತ್ಯಾಗ; ತ್ಯಾಗದ ಕೂಗು ಬಲು ದೊಡ್ಡ ರೋಗ.
ನಾವು, ಜಗ ಜನಿಸಿಹುದು ತ್ಯಜಿಸಲೋಸುಗವಲ್ಲ;
ನಾವು ಲೋಕಕ್ಕೆಂದು, ಲೋಕವೂ ನಮಗೆಂದು.
ಬರಿಯ ಖಂಡನೆಗಲ್ಲ, ದೊನ್ನೆ ಮಂಡನೆಗಲ್ಲ.
ಸಂನ್ಯಾಸ ಸೆವೆಯೇಕೆ ಜಗತಿಳಿದು ಬಾಳರಲು ?
ಜೀವನವು ಉತ್ಸಾಹ, ಶ್ರದ್ಧೆ ಕೋರಿದ ಯುದ್ಧ.
ನಿಂತ ನೀರೇನಲ್ಲ, ಪುಲಗಿಕೊಳೆ ಹೂಳಲ್ಲ,
ಸುಮ್ಮನೆಯೆ ಹತ್ತಿಳಿವ ಗುಡ್ಡವೂ ಏನಲ್ಲ.
ಪ್ರಕೃತಿಯಳ ವರದಾನ ಫಲಗರ್ಭ ಕರ್ಮನೆಲ,
ಉತ್ತಿ ಬಿತ್ತುತ ಪೈರ ಬೆಳೆಯುವುದು ಪಸಿವಿಂಗೆ.
ಬಿಡುವುದೋಡುವುದೆಲ್ಲ ಮಾನವನ ಗತಿಯಲ್ಲ;
ಕಷ್ಟ, ಹಗೆ ಎಂದೆನುತ ಭಯದಿ ನಡುಗುವುದಲ್ಲ.
ಜೀವನದ ರೀತಿಯೇ ಬಂದುದಕ್ಕಿದಿರಿಹುದು.
ಇಲ್ಲೆಲ್ಲ ಜಾಳುವುದೆ, ಎಲ್ಲವನು ಬಳಸುವುದೆ,
ತತ್ತ್ವ, ಹಿತ ಮಿತಿಯರಿದು,— ಜಗದ ಮೇಲ್ಮೆಗೆ ಎಂದು.

—— o ——

ಸಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

ಆಯುರ್ವೇದೀಯ ಔಷಧಗಳು.

ವೈದ್ಯ ಲೋಂಫೆ ಇವರ ಜಳಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮಾಂಶಗುಳಿಗೆ-ಸರ್ವಪ್ರಕಾರದ ಅಪಾಂಶದ ಮೇಲೆ ಗುಣಕಾರಿ.
ಏಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ. ಕೆ. ಲೋಂಫೇ ಫಾರ್ಮಸಿ,
ನನವೇಲ-ಕುಲಾಬಾ.

ಬಡತನದ ಬಾಳು

☆

'ಅನೇಪಕ್ಷೆಯಿಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.

ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

ಭಗವಂತನ ಭವಿಷ್ಯ

(ಒಂದು ವಿಕಾರ)

ಶ್ರೀ. ಬಳ್ಳಾರಿ 'ಬೀಚಿ' ಬರೆದಿದ್ದು.

★

೧. ಭಗವಂತ :— ಬಡವನಿಗೆ ಭೂತ ಬಿಡಿಸಿಕೊಂಡು ತಿರುಗಾಡುವವನು.
೨. ದಾನೋದರ :— ಇವನ ಶಿಷ್ಯನು ಜಾಲಕ್ಕೆಬಿದ್ದ.
೩. ಲಕ್ಷ್ಮಿ :— ಭಗವಂತನ ಅರ್ಧಾಂಗಿ ಕಾಸ್ಮಿಕ್ ದರಿದ್ರದೇವತೆ.

★

೧

[ಹೊರಗೆ ಬಸ್ಸು, ಲಾರಿ ಮಾಡುವ ಗಲಾಟೆಯಲ್ಲಿ ಹಿಂದಿನ ಜೊರಬಿದ್ದ ಭಗವಂತನನ್ನು ಗಾಳಿಮಾತ್ರ ತೇಲುವವನಂತೆ ಅನುಮಾನದಲ್ಲಿ ಓಟಬಿಟ್ಟಿದ್ದಾನೆ. ಏನೂ ಕಾಣುವಂತಿಲ್ಲ ಅವನಿಗೆ. ಹಿಂದೆ ಬರುತ್ತಿದ್ದ ದಾನೋದರನು ಕೂಗಿ ಕೂಗಿ, ಓಡಿಬಂದು ಅಡ್ಡಗಟ್ಟಿ ನಿಲ್ಲಿಸುತ್ತಾನೆ.]

ದಾನಮು:—(ಕೆಮ್ಮುತ್ತಾ ಕೆಣಕುವ ಪಸಿಯಲ್ಲಿ) ನಮಸ್ಕಾರ ಭಗವಂತರಾಯರೇ, ಈ ಯುದ್ಧಕಾಲದಲ್ಲಿಯೂ ರಾಯರಿಗೆ ಆಷ್ಟೊಂದು ಕ್ಷೌರನಾ-ಗಿಯ್ಯಾ ಎಲ್ಲಿಂದ ಹೊರಗೆದ್ದೀತೂ-ಅಂತ..

ಭಗವಂತ:— ಏನೋ ದಾನೂ, ನಿನ್ನ ಜೇಷ್ಟೆ ? ಕ್ಷೌರನಾ ಎಲ್ಲಿದೆಯೊ ?

ದಾನಮು:— ಅಲ್ಲ, ಕೆನಿಗಿವಿ ಪೂರ್ತಿ....

ಭಗವಂತ:—ಕೆವಿಗೇನಾಗಿದೆಯೋ, ಜೆನ್ನಾಗಿಯೇ ಕೇಳುತ್ತೆ. ಇರಲಿ ಬಾ. ಅನಾಯಾಸವಾಗಿ ಎದುರಿಗೆ ಬಂದಿದಿಯಾ, ಒಂಟಿ ಬ್ರಾಹ್ಮಣ. ಈ ರಸ್ತೆಯ ತುದಿಗಿರುವ 'ನರೇಂದ್ರಭವನ'ದಲ್ಲಿಷ್ಟು ಕಾಫೀ ಕುಡುಸೊಂಡು ಹೋಗೋಣ.

ದಾನಮು:—ಏನೋ ಅನಾಹುತಗಿನಾಹುತ ಇದೆ. ಇದೇಕಪ್ಪಾ ಒನ್ಮೆಲೇ ಕುಚೇಲಾವತಾರದಿಂದ ಕರ್ಣಾವತಾರಕ್ಕೆ ಬಂದಿ ? ಏನಾದರೂ ವಿಶೇಷಗಿಶೇಷ ? ಯಾವುದಾದರೂ ಜೇಟಗೇಟೆ ?

ಭಗ:— ಛೆ, ಛೆ, ಅದೂ ಈ ದಿವಸದಲ್ಲಿ !

ದಾನಮು:— ಮತ್ತೇನು .... ಆಫೀಸ-ಗೀಫೀಸಿನಲ್ಲಿ ಸಂಬಳ-ಗಿಂಬಳದ ಬಡತಿ ಗಿಡತಿ ?

ಭಗ:— ಇನ್ಯಾರಿಗೆ ಬೇಕಯ್ಯಾ ಸಂಬಳ ?

ದಾನಮು:— ಯಾವುದಾದರೂ ದೂರದ ಅಜ್ಜಿಗಜ್ಜಿ ಸತ್ತು ಗಿತ್ತು, ಆಸ್ತೀಗಿಸ್ತಿ ಬಂದುಗಿಂದಿತೇನೋ ಭಗವಂತ ?

ಭಗ:—ಹಾಗೇನೂ ಇಲ್ಲೊ ದಾನೂ. ಪುನಸ್ಸಿನಲ್ಲಿ ಬಂದಿದೆ, ಕೊಡಿಸ್ತೇನಿ, ಆಷ್ಟೆ !

ದಾನಮು:— ಸರಿ, ಹೊಸದಾಗಿ ಏನಾಗಿನೂ ಕಂಪನಿಯು ಏಜನ್ಸಿ ಗೀಜನ್ಸಿ ತೆಗೆದುಗಿದುಕೊಂಡಿದೀಯಾ, ಏನು ಸಮಾಚಾರ ? ಮೆಲೆವಿದ್ದು ಕಾಫೀಗೀಫಿ ಕೊಡಗಿಡಸ್ತೀಯಾ ?

ಭಗ:— ಅಂಥಾದೇನೂ ಇಲ್ಲ ಮಹಾರಾಯಾ.

ದಾನಮು:— ಒಹೋ, ಪುಕ್ಕಗಿತ್ರ ಜನನ ಗಿನನವೇ ?

ಭಗ:—ಸರಿ ! ಅದು ಒಂದೇ ನೋಡು ಆಗಬೇಕಾದದ್ದು. ಒಂಭತ್ತು ತಿಂಗಳಿನ ಹನ್ನೊಂದನೇ ಮಗು ಕೈಯ್ಯಲ್ಲಿದೆ ; ಪುನೆಯಲ್ಲಿ ಮತ್ತೆ ಮೂರು ತಿಂಗಳು ನದ್ಯ.

ದಾನಮು:—ಹಾಗಾದರೆ ಏಕಯ್ಯಾ ಈ ನಡಗರಗಿಡಗರ ಅಂತೆ?

ಭಗ:— ಇದೆ, ಒಂದು ಕಾರಣ.

ದಾನಮು:—ಅದನ್ನೇ ಮಹಾಸ್ವಾಮಿ, ಈ ಜಾಲಕನು ತಿರಗಿರಬಾಗಿ ಕರಗಿರ ಒಡ್ಡಿ ಕೇಳಿಗೀಳಿಕೊಳ್ಳುತ್ತಿರುವುದು ! ಹೇಳಯ್ಯಾ ಏನು ಸಮಾಚಾರ ಗಿಮಾಚಾರ ಅಂದ್ರೆ, ಅದೇನೋ ದೊಡ್ಡ-ಗಿಡ್ಡಸ್ತಿಗೆ ಮಾಡಗೀತ್ತಿದಾನೆ.

ಭಗ:— ಏನೂ ಇಲ್ಲಪ್ಪಾ ....

ದಾನಮು:— ಹಾಗಾದರೆ ಈ ಕಾಫೀಗೀಫಿ ಏಕಪ್ಪಾ ?

ಭಗ:— ಬರಿ ಆಷ್ಟೆ ಅಲ್ಲ ದಾನು! ನೀನು ನಮ್ಮ ಮನೆಗೆ ಊಟಕ್ಕೂ ಬರಬೇಕು. ನೀ ಊಟ.

ದಾನಮು:— ನಿನ್ನ ತಮಾಷೆಗಿಮಾಷೆ ನನಗೆ ಅರ್ಥಗಿರ್ಥ ಆಗೂದಿಲ್ಲ. ಸಂದರ್ಭಗಿಂದರ್ಭ .. .. ..

ಭಗ:— (ಪಸನ್ನಮಿಯಾಗಿ) ತಾರಯ್ಯ ಕೈ; (ಅನೇಕದ ಭಾಷಣಕಾರನಂತೆ) ಭಗವಂತನ ತಾಪತ್ರಯಗಳು ಹಿಂದಾದವು. ಆ ಹರಕು ಅಂಗಿಯ ಮುರುಕು ಮನೆಯ ಹಸಿಪಯ ದರಿದ್ರ ಭಗವಂತನು ಹೋಯುವಾದ. ಇನ್ನು ನೀನು ಕಾಣುವುದು ಸಿರಿವಂತ ಭಗವಂತನನ್ನು. ನನ್ನ ನುನೆಯವಳು— ಸಾಕ್ಷಾತ್ ಲಕ್ಷ್ಮೀ ಇನ್ನು ಮೇಲೆ!

ದಾನಮು:— ಈ ಸಾಕ್ಷಾತ್‌ಗೀಕ್ಷಾತ್ ಎಲ್ಲಾ ಜೇಡ ನನಗೆ! ಇದ್ದ ವಿಷಯಗಿಷಯ ಹೇಳ್ತೀಯಾ, ಆಫಬಾ ಫೋಲಿಸ್ರು-ಗೀಲೀಸ್ರನ್ನು ಕರೆದು ಹುಜ್ಜುಗಿಜ್ಜಾ ಸ್ಪತ್ರೆಗೆ ಹೊಗಿಸಲೊ ?

ಭಗ:—ನೋಡಿದ್ದೇನಯ್ಯಾ ಪಾರಭವಿಷ್ಯ; ಉಜಿತವಾಚನಾಲಯದಿಂದಲೇ ಬರುತ್ತಿದ್ದೇನೆ ಈಗ.

ದಾನಮು:— ಏನುಗೀನಿಪಯೋ ಭಗವಂತ ?

ಭಗ:— (ಹಿರಿಹಿರಿ ಹಿಗ್ಗುತ್ತ) ಸ್ತ್ರೀಯಿಂದ ಧನಲಾಭ!

ದಾನಮು:—(ಸಂತೋಷಾಶ್ಚರ್ಯಗಳಿಂದ) ಆ! ಧನಗಿನ ಲಾಭ!! ಅದೂ ಸ್ತ್ರೀ-ಗೀಯಿಂದ !!!

ಭಗ:— ದೈವ ಅಂದ್ರೆ ಇದು ನೋಡೋ ದಾನು. ಹಣ ಬಂದ ಕೂಡ್ಲೆ ಚಿಕ್ಕ ಪುಟ್ಟ ಸಾಲಗಳನ್ನೆಲ್ಲಾ ತೀರಿಸಿಬಿಟ್ಟು, ಮುಕ್ಕಳನ್ನೆಲ್ಲಾ ಕಾನ್ವೆಂಟಿನಲ್ಲಿಟ್ಟು, ಊರಹೊರಗೊಂದು ಆರಮನೆ ಕಟ್ಟಿಸಿಕೊಂಡು, ಒಂದು ಒಳ್ಳೇ ಕಾರಿಟ್ಟುಕೊಂಡು ಹಾಯಾಗಿದ್ದಿಡ್ತೇನೆ.

ದಾನಮು:— ಆಫೀಸು-ಗೀಫೀಸು ?

ಭಗ:— ಇನ್ನೇಕಯ್ಯಾ ಆ ದರಿದ್ರ ದಾಸ್ಯ? ಅಂತೂ ನಲವತ್ತು ವರ್ಷದ ಅಷ್ಟದಾರಿದ್ರ್ಯ ಒಂದೇ ವಾರಭವಿಷ್ಯದಲ್ಲಿ ಓಡಿತು ನಮ್ಯ. ಸ್ತ್ರೀಯಿಂದ ಧನಲಾಭ! ಬಾರೋ ದಾಮು. ಬಂದಿತಲ್ಲ ನರೇಂದ್ರಭವನ. ಏನ್ಬೇಕೆಲ್ಲಾ ತಿಂದ್ಹಾಕಿಬಿಡು. ಕಂಜಿ ಇಡ್ಲಿ, ಉತಿಪೀ ಉಪ್ಪಿಟ್ಟು, ಮೈಸೂರು ಮಸಾಲೆದೋಸೆ, ಬೊಂಬಾಯಿ ಬಾಸುಂದಿ, ಲಕ್ನೊ ಲಾಡು, ಪಟ್ಟಣಂ ಪಕೋಡಂ, ಧಾರವಾಡದ ಫೇಡೇ; ಬಳ್ಳಾರಿ ಬೂಂದಿ.

ದಾಮು:— ತಿನ್ನೋದುಗಿನ್ನೋದು ಎಲ್ಲಾ ಸರಿ; ಈಗ ಕೊಡಗಿಡಲಿಕ್ಕೆ ಬೇಡವೇ ಹಣಗಿಣ?

ಭಗ:— ಇದೆಯಪಾ (ಕಿಸೆಯನ್ನು ಬಾರಿಸಿ), ಕೊಟ್ಟಿದ್ದಾಳೆ ನನ್ನ ಲಕ್ಷ್ಮಿ ತರಕಾರಿ ತರಲಿಕ್ಕೆ. ಚಿಲ್ರೆ ಇಲ್ಲ ಎಂದು ರೂಪಾಯಿ ಕೊಟ್ಟಿದ್ದಾಳೆ, ರೂಪಾಯಿ.

ದಾಮು:— ಇದೆಲ್ಲಾ ಮುಗಿಸಿ ಗಿಗಿಸಿ ರಾತ್ರಿಗೀತ್ರಿ ಊಟಗೀಟಕ್ಕೆ ಬೇರೆ ಬರಗಿರಬೇಕೆ?

ಭಗ:— ತಪ್ಪದೆ ಬಾರಯ್ಯಾ, ದೇವರು ಕೊಟ್ಟ ಕಾಲಕ್ಕೂ ಬೇಡವೇ? ಸ್ತ್ರೀಯಿಂದ ಧನಲಾಭ! (ಆನಂದದಲ್ಲಿ ಮೈಮರೆತು ಇಬ್ಬರೂ ನಗುವರು).

೨

[ಭಗವಂತನ ಮನೆ. ಅವನ ಗೃಹಲಕ್ಷ್ಮಿ ಮನೆಗೆಲಸದಲ್ಲಿ ತೊಡಗಿದ್ದಾಳೆ. ಪರುಕಾಮುರುಕು ಚಿಂದಿ ಚಾಪಿ. ಅಸ್ತವ್ಯಸ್ತವಾಗಿ ಮನೆತುಂಬ ಬಿದ್ದಿವೆ. ಭಗವಂತನ ಪ್ರವೇಶ.]

ಲಕ್ಷ್ಮಿ:— (ಅಡಿಕೆನ ಪಣಿಯಲ್ಲಿ) ಸಧ್ಯ ಬಂದಿರಾ ಮನೆಗೆ, ಇವತ್ತಿನೊಳಗೆ?

ಭಗ:—ಏನೇ ಹಾಗಂತಿದೀಯಾ? ಬರದೆ ಎಲ್ಲಿಗೆ ಹೋಗ್ತೇನೆ?

ಲಕ್ಷ್ಮಿ:— ಯಾರಿಗೆ ಗೊತ್ತು? ಎಲ್ಲಿಗೆ ಹೋಗ್ತೀರೇ ಅನ್ನೋದು ನಿಮಗೆ ಗೊತ್ತಿದ್ರೆ ತಾನೆ? ಏನು, ಇಷ್ಟೊತ್ತೆ? ಬೀಜ ಬಿತ್ತಿ, ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡಿ ಮಳೆ ತರಿಸಿ, ತರಕಾರಿ ಬೆಳೆದು ತಂದಿರೋ ಏನು ಗತಿ?

ಭಗ:— ಆದದ್ದಾದರೂ ಏನೇ ಈಗ?

ಲಕ್ಷ್ಮಿ:— ಇನ್ನೇನಾಗ್ಬೇಕಂತೆ? ಅವಸರದಲ್ಲಿ ನಿಮ್ಮನ್ನೇ ನಂಬಿ ಕೂಡಬೇಕು ನೋಡಿ. ಬಾವಿಯಲ್ಲಿ ಬಿದ್ದವರನ್ನ ತಗಿಯೋಕೆ ಹಗ್ಗಾತರಲಿಕ್ಕೆ ಕಳಿಸಬೇಕು ನಿಮ್ಮನ್ನ.

ಭಗ:— ಏನೇ, ಹಾಗೆ ಸಿಡಿಸಿಡಿ ಸುರುವು ಮಾಡಿಬಿಟ್ಟೀಯಾ ನುನೆಗೆ ಬಂದ ಕೂಡಲೇ?

ಲಕ್ಷ್ಮಿ:—ಇನ್ನೇನಂತೆ ಮತ್ತೆ? ಬಲ್ಲೆ ಇಲ್ಲ, ಕಾಯಿ ಇಲ್ಲ— ಎಂದು ಅರ್ಧ ಗಂಟೆ ಕಾದಾಡಿ, ಅಳ್ತಾ ಬರೀ ಸಾರುಅನ್ನಾ ನುಂಡು ಶಾಲೆಗೆ ಮುಕ್ಕಳು ಹೋದುವ್ವ. ತರಕಾರಿ ತಂದು ಎಸೆದು ಹೋಗಿ, ಎಲ್ಲಾದರೂ ನಿಮ್ಮ ಓಬೇರಾಯನ ಕಂತೆಗೆ ಕುಳಿತಿದ್ದರೆ ಮಾರೇನು ಬೇಡಾ ಅನ್ನಿಸ್ತದ್ರೆ? ಊಂ. ಇರಲಿ ಏಳಿ, ಮತ್ತೆ ಕೂಡ್ತೀರಲ್ಲಾ ಬೇರೆನ್ನೆಮೂಲಿ ಹಿಡಿದು! ಸ್ನಾನಕ್ಕೇಳಿ, ಗೊತ್ತೇ ಇದೆ. ಎಲೆಮೇಲೆ ಅನ್ನ—ಕಲೆಮೇಲೆ ನೀರು. ಇನ್ನೂ ಆಫೀಸಿಗೆ ಹೊತ್ತಾಗ್ಲಿಲ್ಲೇ ನಿಮಗೆ.

ಭಗ:— ಇನ್ನೆಲ್ಲೀ ಆಫೀಸೆ?

ಲಕ್ಷ್ಮಿ:— ಏನು ಹಾಗಂದ್ರೆ. ಆಫೀಸಿಗೆ ಹೋಗಲ್ಬೇಡವು ಇವತ್ತು?

ಭಗ:— ಇವತ್ತು ಅಲ್ಲ, ಇನ್ನು ಮೇಲಿಂದ—ಅಂದೆ....

ಲಕ್ಷ್ಮಿ:— ಇನ್ನು ಮೇಲೆ? ನಿಮಗೂ ಬಂದಿತೇನು, ಆದೇನೊ ಸಂಪು ಅನ್ನೋ ರೋಗ? ಕಸಗುದಿಸುವವರಿಂದ ಗಾಡೀ ನಡೆಸುವವರ ವರೆಗೂ ಸುರುವಾಗಿದೆಯಂತಲ್ಲಾ! ಇರಲಿ ಏಳಿ, ಆ ಹುಚ್ಚು ಚ್ಚಿಲ್ಲಾ ಜೇಡ; ಅದು ಏನೋ ಅಂದ್ಹಾಂಗಿದೆ: ಪಡೆದದ್ದು ಭಟ್ಟು ದುಡಿದದ್ದು ಕೇಳಿದರೂ ಅಂತ. ಊಟ ಮುಗಿಸಿ ಏನಾದರೂ ಮಾಡಿಕೊಳ್ಳಿ. ನಿಮ್ಮ ಇಷ್ಟ. ಅದೆಲ್ಲಾ ಇರಲಿ, ಸಧ್ಯ, ಒಲೆ ದಣದಣಾ ಉರೀತಾ ಇದೆ. ಪೌಪೆ ಚಿನ್ನಾಗಿ ಕೂತಿದೆ. ತರಕಾರಿ ಕೊಡಿ ಮೊದಲು; ಕುಯ್ದಾದರೂ ಬೇಯಿಸ್ತೇನೆ.

ಭಗ:— ಎಲ್ಲಿದೆ ತರಕಾರಿ?

ಲಕ್ಷ್ಮಿ:— (ಪೊಳೆಗೆ ನೇತಾಡುತ್ತಿದ್ದ ಬರೀ ಚೀಲವನ್ನು ನೋಡಿ) ಮತ್ತೇತಕ್ಕೆ ನೀವು ಮಾರ್ಕೆಟ್ಟಿನಲ್ಲಿ ಹೋದದ್ದು ಅಂತ! ಕೋಳಿ ಕೂಗುತ್ತಲೆ ಹೋದವರು, ಬಿಸಿಲು ತಲೆಯಮೇಲೆ ಬಂದಮೇಲೆ ಬಂದ್ರೂನೂ ತರಕಾರೀ ತರಲಿಕ್ಕೆ ಆಗಲಿಲ್ಲವೆ?

ಭಗ:— ಮನೆಯಿಂದ ಹೊರಟದ್ದೇನೋ ತರಕಾರಿ ತರಲಿಕ್ಕೆ ಅಂತೆಯೇ.

ಲಕ್ಷ್ಮಿ:— ಏನು, ಆಷ್ಟರಲ್ಲಿಯೇ ಬೆಕ್ಕು ಆಡ್ಸ ಬಂದಿತೆ?

ಭಗ:— ಅಲ್ಲವೇ.....

ಲಕ್ಷ್ಮಿ:— ಸೌಪೆ ಹೊರೆ ಎದುರು ಬಂದಿತೆ?

ಭಗ:— ಸರಿ, ಇದೇ ನೋಡು ನಿನ್ನದು—ಮಾತು, ಮಾತು, ಮಾತು ಮಾತು! ಹೇಳುವ ವರೆಗೂ ಕೇಳಕೂಡದೆ?

ಲಕ್ಷ್ಮಿ:— ಏನೂ, ತರಕಾರೀ ಮಾರುವವರೂ ಸಂಪು ಮಾಡಿದ್ದಾರೆಯೆ?

ಭಗ:—ಗೃಹಚಾರ, ಎಲ್ಲ ಮಾತುಗಳನ್ನೂ ನೀನೇ ಆಡುವದಾಗಿದ್ದರೆ ಒಬ್ಬ ಮೂಕನನ್ನಾದರೂ ಮದುವೆಯಾಗಬಾರದಾಗಿತ್ತೆ?

ಲಕ್ಷ್ಮಿ:— ಇರಲಿ ಬಿಡಿ. ನಮ್ಮಪ್ಪನಿಗೆ ನಿಮ್ಮಷ್ಟು ತಿಳುವಳಿಕೆ ಎಲ್ಲಿಂದ ಬರಬೇಕು, ಪಾಪ! ಆದೆಲ್ಲಾ ಹಳೆಯದಾಯಿತಲ್ಲ. ಹೋಗಲಿ ಬಿಡಿ, ನಾಳೆ ಮಗಳ ಮದಿವಿ ಮಾಡಬೇಕಲ್ಲಾ! ನೀವು ಕಟ್ಟಿಕೊಡಿ ಆವಳನ್ನ, ಆದೇನು ಮೂಕನಿಗೇ ಕೊಡುತ್ತೀರೋ ಕುರುಡನಿಗೇ ಕೊಡುತ್ತೀರೋ ತಿಳಿಯುತ್ತಲ್ಲಾ!

ಭಗ:— ಇದ್ದೀಜವ್ವಾನಲ್ಲ ನಿನ್ನ ತಮ್ಮ ರಾಜ. ಮೂಕನಲ್ಲದಿದ್ದರೆ ಗುಜ್ಜ.

ಲಕ್ಷ್ಮಿ :— ನಿಮ್ಮ ಯೋಗ್ಯತೆ ಏನಾಗುತ್ತೆ ಬಿಡಿ, ಅಂತಹ ಅಳಿಯನನ್ನು ತರುವುದು! ವರದಕ್ಷಿಣೆ ಸುರುವಬೇಡವೇ ಅವಿತ್ತರ? ಆದರಲಿ, ತರಕಾರೀಗೆ ಕೊಟ್ಟ ರೂಪಾಯಿ ಜೊಡಿ ಸಧ್ಯ. ಪೊಸರಿನವಳು ಮೂರುಸಲ ಎಡತಾಕಿದಂಪ ಮಾಡಿ ನೋಡಳು. ಕಡೆಗೆ ಪಕ್ಕದ ಮನೆಯ ಪದ್ದಮ್ಮನ ಪತ್ತಿರ ತಂದು ಕೊಟ್ಟೆ. ಎಲ್ಲಿ, ಆ ರೂಪಾಯಿ ಕೊಡಿ!

ಭಗ :— ಎಲ್ಲಿಯ ರೂಪಾಯೇ ನೀನು? ನಾನೂ ಪಾಪೂ 'ನರೇಂದ್ರಭವನ'ದಲ್ಲಿ ತಿಂದು ಪಾಕಿಪೆವು; ಉಳಿದ ಮೂರಾಣೆ ಕುದುರೆಗಾಡಿಗೆ ಕೊಟ್ಟು ಅದರಲ್ಲಿ ಮನೆಗೆ ಬಂದೆ.

ಲಕ್ಷ್ಮಿ :—ಕುದುರೆಗಾಡಿ! ಅಂತಹದೇನಾಗಿದ್ದಿತು ನಿಮಗೆ?

ಭಗ :— ಹೊಟ್ಟೆ ಭಾರ.

ಲಕ್ಷ್ಮಿ :— ನಿಮಗೇನು ಮತಿ ಕೆಟ್ಟಿದೆಯೋ ಏನು ಗತಿ? ನನ್ನ ಬಾಯಿಂದ ಒಳ್ಳೇ ಮಾತು ಬರೋಲ್ಲ ನೋಡಿ ಇನ್ನು! ಅಲ್ಲಾ, ಬಿಡಿಕಾಸಿಗೆ ಜಾಣತನ ಮಾಡಿ ಈ ಕಷ್ಟಕಾಲದಲ್ಲಿ ನಾನು ಸಂಸಾರ ಮಾಡ್ತೇನೆ; ಮಕ್ಕಳನ್ನು ಮಾಕರ್ಿಟಿಗೆ ಕಳಿಸಿದರೆ ಕಾಸು ಕದೀತಾರೇ ಅಂತ ನಿಮಗೆ ಕೊಟ್ಟೆ, ಒಂದು ರೂಪಾಯಿ ತಿಂದು ಬರೋದಾ? ಏನ್ರೀ ಅಂತಹ ಪಾಲತ್ತು ಬಂದಿರೋದು ನಿಮಗೇ,—ಅಂತ ಕೇಳ್ತೀನಿ! ಏನು ಅಂತಹ ಐಶ್ವರ್ಯ ಉಳತಾ ಇದೆಯೆ?

ಭಗ :— ಅಯ್ಯೋ ಹುಚ್ಚಿ ಹುಚ್ಚೀ, ಇದಕ್ಕೇ ನೋಡು ಹೆಣ್ಣು ಬುದ್ಧಿ ಎನ್ನೋದು! ತರಕಾರಿ ತರಲಿಲ್ಲಂತೆ ಬೇಗಾಡ್ತಾಳೆ ಅವಾಗಲಿಂದ. ಸೇರುಗಟ್ಟಲೆ ಸೌತೇಕಾಯಿ ಬದನೆಕಾಯಿ ಉಲ್ವೇ ಧಡ್ಡೀ! ಮಣಗಟ್ಟಿ ಚಿನ್ನ ಬೆಳ್ಳಿ ತರ್ತೀನಿ ತಿಳೀತೇನೇ— ನನ್ನ ವೈಡೂರ್ಯ?

ಲಕ್ಷ್ಮಿ :— ಇದೇನು? ಹೀಗಾಗಿ ಬಂದ್ರಿ ಮನೆಗೆ ಇವತ್ತೂ? ಯಾರಾದರೂ ತಲೆಗೇನಾದರೂ ತಿಕ್ಕಿದರೋ ಏನು ಮಣ್ಣೋ ಮತ್ತೆ!

ಭಗ :— ಅಯ್ಯೋ ದರಿದ್ರ, ನನಗೇನೂ ಆಗಿಲ್ಲೆ. ನಿಜ ಸಂಗತಿ ಹೇಳಿದರೆ ನಿನಗೇ ಪುಚ್ಚು ಹಿಡಿಯುತ್ತೆ ಈಗ! ನನ್ನ ರಾತಿ ವೃಷಭ ಉಲ್ವೇನೇ ಚಿನ್ನಾ, (ಹಿಗ್ಗುವನು).

ಲಕ್ಷ್ಮಿ :— ಸರಿ; ಈಗ ನನಗೆ ಪೂರ್ತಿ ಖಾತ್ರಿಯಾಯಿತು— ನಿಮ್ಮ ತಲೆ ಕೆಟ್ಟಿದೆ ಎಂದು. ನನಗೆ ಎಂದೋ ಗೊತ್ತು ಹೀಗಾಗುತ್ತೆ ಅಂತ. ಮೊದಲೇ ಪಿತ್ತ ಪ್ರಕೃತಿ. ಸಾಲದ್ದಕ್ಕೆ ಜೇಬಿನಲ್ಲಿ ಕಡಲೆಕಾಯಿ ತುಂಬಿ ಹಸಿದ ಹೊಟ್ಟೆಯಲ್ಲಿ ತಿನ್ನೋದು. ಮೇಲೆ ಗಂಟಿಗೊಮ್ಮೆ ಆ ದರಿದ್ರ ಕಾಫಿ ಬೇರೆ. (ಒಳಗೆ ಹೋಗುತ್ತ) ನಿಲ್ಲಿ, ಒಂದು ನಾಲ್ಕು ಕೊಡ ತಣ್ಣೀರಾದರೂ ಎರಚ್ತೇನೆ ತಲೆಯಮೇಲೆ.

ಭಗ :— (ಹಿಡಿಹಿಡ್ಡ ಬಂದು) ಕೊಂಜ ನಿಲ್ಲೇ ಮಹರಾಯಿತೀ! ನಿಜವಾಗಿಯೂ ಪುಚ್ಚೇ ಹಿಡಿಸಿಬಿಟ್ಟೀ ಆಮೇಲೆ! ದಯವಿಟ್ಟು ನನ್ನ ಮಾತು ಕೇಳು!

ಲಕ್ಷ್ಮಿ :— ಹೂಂ, ಹೇಳಿ ಹಾಗಾದರೆ.

ಭಗ :— ಹಾ, ಹಾಗೆ ಹಾದೀಗೆ ಬಾ, ನನ್ನ ಬಂಗಾರ!!

ಲಕ್ಷ್ಮಿ :— ಅಗೊ, ಸುರುವಾಯಿತೇ ಪುನಃ?

ಭಗ :— ಇಲ್ಲ, ಇಲ್ಲ ಪುಡಿಯಾಯಿತೀ, ವೃಷಭರಾತಿಗೆ ವಾರ ಭವಿಷ್ಯ ಏನಿದೆ ಗೊತ್ತಿದೆಯೇ? (ನಿರುತ್ತರ) (ಗಿದ್ದವನಂತೆ) ಇಲ್ಲ ಇಲ್ಲ (ಪದ್ಯವನ್ನು ಮೇಲೇರಿಸಿ) ಸ್ತ್ರೀಯಿಂದ ಧನಲಾಭ. ಇದೇ ವಾರದಲ್ಲಿ. ಈ ವಾರದಲ್ಲಿ ಇಂದೇ ಕಡೆಯ ದಿನ. ಇಂದು ಆಗಲೇಬೇಕು ಧನಲಾಭ!

ಲಕ್ಷ್ಮಿ :— (ಉತ್ಸಾಹದಲ್ಲಿ) ನಿಜವಾಗಿಯೂ ನಿಜವೇನು?

ಭಗ :— ಅಯ್ಯೋ ಪುಚ್ಚಿ, ವಾರಭವಿಷ್ಯ ಎಲ್ಲಾದರೂ ಸುಳ್ಳಾಗುತ್ತೆಯೆ?

ಲಕ್ಷ್ಮಿ :— ಹಾಗಾದರೆ ಹಿಂದೆ ಹೇಳಿದ್ದುದೆಲ್ಲವೂ ನಿಜವೇ ಆಗಿದೆಯೇ?

ಭಗ :— ಒಂದಲ್ಲ, ಒಂದು ಸಹಸ್ರ. ಮೊದಲನೆಯ ವಾರದಲ್ಲಿ ಬಂಧುಮಿತ್ರರ ಭೇಟಿ—ಕೈಯಲ್ಲಿ ಹಣವಿರುತ್ತದೆ. ಮನಸ್ತಾಪ-ಕೊಡುವುದಿಲ್ಲವೆಂದರೆ. ಆ ಮೇಲೆ ಇಡೀ ತಿಂಗಳು ಆರ್ಥಿಕ

ದುಃಸ್ಥಿತಿ—ಬಂದ ಸಂಬಳವೆಲ್ಲವೂ ಮುಗಿದಿರುತ್ತದೆ. ಕಡೆಯ ವಾರದಲ್ಲಿ ಗೃಹಕಲಹ, ಒನ್ಸ್‌ಟೆ ದೈವಭಕ್ತಿ–ಕೈಯಲ್ಲಿ ಬಿಡಿ ಕಾಸು ಇಲ್ಲದುದರಿಂದ. ವರ್ಷಫಲ ಕೇಳಿಲ್ಲವೇ ನೀನು? ಬಡವರಿಗೆ ಸದಾ ದಾರಿದ್ರ್ಯ; ಬಡವರೆ ಸ್ತ್ರೀಸುಖ ಉತ್ತಮ. ಪುತ್ರ-ಪೌತ್ರ ಪ್ರಾಪ್ತಿ. ಮಾನ ಹೋಗುವ ಸಂಭವವಿದೆ, ಪರಂತು ಹೋಗುವುದಿಲ್ಲ; ಕಾರಣ ಹೋಗಲು ಅಲ್ಲಿ ಏನೂ ಇಲ್ಲ. ಚೈತ್ರ, ವೈಶಾಖ, ಜ್ಯೇಷ್ಠ—ಕ್ಷೌಗಾರಿಕೆ ಲಾಭಕರ, ಬೇಸಿಗೆಯಲ್ಲಿ ಬೀಸಣಿಕೆಗಳ ಮಾರಾಟ ಹೆಚ್ಚುವುದು. ಜೆಲ್ಲರೆ ವ್ಯಾಪಾರಿಗಳಿಗೆ ಉತ್ತಮ, ಸೋಡಾ, ಡ್ರಿಂಕು, ಐಸು ಅಂಗಡಿಗಳಿಗೆ ವ್ಯಾಪಾರ ಹೆಚ್ಚು. ಆಷಾಢ-ಶ್ರಾವಣ ಮಾಸಗಳಲ್ಲಿ ನಿದ್ರಾ ಹಾನಿ, ಮಳೆಬಂದು ಮನೆ ಸೋರುತ್ತೆ. ಭಾದ್ರಪದ– ಭಕ್ಷ್ಯ ಭೋಜನಗಳು, ಆಜೀರ್ಣಾದಿ ರೋಗಗಳು. ಪಕ್ಷಮಾಸ ಮತ್ತು ದಸರಾ ಹಬ್ಬವಾದ್ದರಿಂದ. ಕಾರ್ತೀಕ ಮಾಸ, ಬೆಳ್ಳಿ ಚಿನ್ನ ಬಟ್ಟೆ ಅಂಗಡಿಗಳಿಗೆ ವ್ಯಾಪಾರ ಹೆಚ್ಚು. ದೀಪಾವಳಿಯ ಆಳಿಯಂದಿರ ಉಡುಗೊರೆಯ ಸುಲಿಗೆ. ಎಣ್ಣೆಯ ಬೆಲೆ ಏರುವುದು, ದೀಪಗಳು ಹೆಚ್ಚಾಗುವವು. ಪುಷ್ಯ ಮಾಸ ದಾಹ ಕದಿಮೆ, ಜಳಿಗಾಲವಾದ್ದರಿಂದ....

ಲಕ್ಷ್ಮಿ:— ಅಯ್ಯೋ, ಆದೆಲ್ಲಾ ಹಾಳಾಗಲಿ ಬಿಡಿ ಅಂದ್ರೆ, ನಿಜವಾಗಿಯೂ ಹಣ ಸಿಕ್ಕುತ್ತೆ ಏನ್ರೀ ಇವತ್ತು?

ಭಗ:— ಇನ್ನೂ ಅನುಮಾನವೆ ನಿನಗೆ?

ಲಕ್ಷ್ಮಿ:— ಅನುಮಾನವೇನಿಲ್ಲ ಬಿಡಿ, ಆದರೆ ಎಷ್ಟು ಅಂತ?

ಭಗ:— ಎಷ್ಟು? ರೂಪಾಯಿಗಳೋ? ನೋಟುಗಳೊ? ನೋಟುಗಳಾದರೆ ಹತ್ತರವೋ ಜೆಲ್ಲದ ನೂರರವೊ? ಏನೇನು ನಂಬರು?— ಇದೆಲ್ಲಾ ವಾರಫಲಿಸ್ಯವಲ್ಲಿ ಹೇಳಲಿಕ್ಕಾಗುತ್ತೆ ಏನೆ? ಧನಲಾಭ ಅಂತ ಇದೆ; ನಾಲದೆ? ರಾತ್ರಿಯುವರೆಗೆ ಜೀವ ಬಿಗಿಹಿಡಿಯಲಾರೆಯ?

ಲಕ್ಷ್ಮಿ:— ಇನ್ನೇನಾತ್ಮಪತ್ರಯ ಬಿಟ್ಟು ನಮಗೆ; ನಮ್ಮ ಕುಮುದಾನ್ನ ರಾಜನಿಗೆ ಮದುವೆ ಮಾಡಿ ಬಿಡೋಣ. ಏನ್ರಿ?

ಭಗ:— ವರದಕ್ಷಿಣೆ ಕೊಡೋಕೆ ನಿಮ್ಮ ಕೈಯಿಂದ ಏನಾಗುತ್ತೆ ಅಂದೆಲ್ಲೇ!

ಲಕ್ಷ್ಮಿ:— ಏನೋ ಮಾತಿನ ನಂದರ್ಭ, ಅಂದಿದ್ದರೂ ಅಂದಿರ ಬಹುದು. ಹೆಂಗಸರು ಅದಿದ್ದನ್ನೆಲ್ಲಾ ಮನಸ್ಸಿನಲ್ಲಿಡಬೇಕೆ? ಅದಿರಲಿ, ಮದುವೆಯ ಜವಳಿ, ಈ ದರಿದ್ರ ಊರಿನಲ್ಲಿ ತೆಗೆಯೋದು ಬೇಡ ಸದ್ಯ. ಸೂರು ಎರಡು ಸೂರು ಹೆಚ್ಚು ಹೋದರೂ ಪರವಾಯಿಲ್ಲ, ಬೆಂಗಳೂರಿಗೆ ಹೋಗಿಯೇ ತರೋಣವಂತೆ!

ಭಗ:— ಈಗ ಹೇಗೇ ರೈಲಿನಲ್ಲಿ ಹೋಗುವುದು? ಒಂದು ಉಪಾಯ ಮಾಡೋಣ ಹಾಗಾದ್ರೆ. ಹೋಗುವಾಗ ಸ್ಪೆಷ್ಟ್ ಕ್ಲಾಸಿನಲ್ಲಿ ಹೋಗಿ, ಅಲ್ಲಿ ಒಂದು ಕಾರು ಬೆಲೆಗೆ ತೆಗೆತೇನೆ....

ಲಕ್ಷ್ಮಿ:— ಪೌದು, ಹೇಗಾದರೂ ಬೇಕಲ್ಲ ಮೆರವಣಿಗೆಗೆ?

ಭಗ:— ಇನ್ನೊಂದು ಯೋಜನೇ ಮಾಡೀನಿ ಕಣೇ?

ಲಕ್ಷ್ಮಿ:— (ಆತುರದಿಂದ) ಏನ್ರೀ ಅದು?

ಭಗ:— ಊರ ಹೊರಗೆ ದೊಡ್ಡೊಂದು ಬಂಗ್ಲೆ ಮಾರಾಟಕ್ಕೆ ಬಂದಿದೆ. ಅದನ್ನು ತೆಗೆದುಕೊಂಡ್ರೆ....

ಲಕ್ಷ್ಮಿ:—ಅಹುದು ಕಣ್ರೀ; ಮದುವೇಸಹ ಬಂಗಲೆಯಲ್ಲೇ ಮಾಡಬಹುದು!

ಭಗ:— ಏಕಲನ ಮುಂಜೀ ಕೂಡ ಈಗಲೇ ಮಾಡಿದರಾಯಿತು.

ಲಕ್ಷ್ಮಿ:— ಅಷ್ಟೇಕಂತೆ ದರಿದ್ರ? ನಮಗೇನು ದೇವರು ಕಡಿಮೆ ಮಾಡಿದಾನೆಯೇ? ಲಕ್ಷಣವಾಗಿ ಬೇರೆ ಮುಹೂರ್ತದಲ್ಲಿಯೇ ಮಾಡೋಣವಂತೆ! ಅಹುದೂ.... ಕಿರಿವಿ ಇಟ್ಟ ನನ್ನ ನತ್ತೂ....

ಭಗ:— ತರ್ತೇನೆಯೇ ಅದೆಲ್ಲಿ ಹೋಗುತ್ತೆ! ಅಂತಹವು ಇನ್ನೂ ನಾಲ್ಕು ತರ್ತೇನೆ ಬೇಕಾದ್ರೆ. ನಿನ್ನ ಆ ಪಳೇತರಹದ ಅಡ್ಡಿಕೆ, ಗಿಡ್ಡಿಕೆ ಹೊರಗೆ ತೆಗೀಬೇಡ ಮಹಾರಾಯತಿ; ಆ ಮೇಲೆ ಬೇಗರು ನಕ್ಕಾರು.

ಲಕ್ಷ್ಮಿ:— ಹಾಗಾದರೆ ಹೊಸ ಫ್ಯಾಷನ್ನಿನ ಜ್ಯೆನು ಮಾಡಿಸಿ ಕೊಡಿ!

ಭಗ:— ಹೂಂ.

ಲಕ್ಷ್ಮಿ:— ರೇದಿಯೋ ಬಳೆ?

ಭಗ:— ಹೂಂ.

ಲಕ್ಷ್ಮಿ:— ಜಿನ್ನದ ಡಾಬು?

ಭಗ:— ಹೂಂ,

ಲಕ್ಷ್ಮಿ:— ವಜ್ರದ ಬೆಂಜೋಲೆ?

ಭಗ:— ಹೂಂ.

೫೦ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿಯ

ಜ್ವರದ ಗುಳಿಗೆ.

ಬಾಟ್ಲಿಗೆ ೧–೮–೦

ಎಲ್ಲ ಪ್ರಕಾರದ ಜ್ವರಗಳ ಮೇಲೂ ಮಹೌಷಧ.

ವಿಳಾಸ:—

ಗಣೇರ ರಾಮಚಂದ್ರ ಕರ್ಕಿ ಮತ್ತು ಕಂಪನಿ

ಗಿರಗಾಂವ, ಮುಂಬಯ್ಕಿ.

ಲಕ್ಷ್ಮಿ:— ಗಂಡು ಮಗೂಗೆ ಭೂಷಣವಾಗಿರುತ್ತೆ; ಒಂದರಳೆಲೆ ಕೂಡ ತನ್ನಿ.

ಭಗ:— ಯಾವುದೇ ಮಗು?

ಲಕ್ಷ್ಮಿ:— ನೀವಂತೂ. ಬೇಡವೇ ನಾನೆ ದಾನಾ ಕಾಮುದಾಗೆ ಮಗುವಾದರೆ!

(ಇಬ್ಬರೂ ನಮವಮನೆಯ ನಿರ್ಗಮನ.)

೩

(ರಾತ್ರಿ ಹತ್ತು ಗಂಟೆಯಾಗಿದೆ. ದಾನಯ್ಯನ ಮನೆಯಲ್ಲಿ ಒಬ್ಬನೆ ಕುಳಿತು ಹಳೆಯದೇ ಆಗಿದ್ದ ಹೊಸ ಬೀಡಿಯನ್ನು ಹೊತ್ತಿಸಿ ಲಕ್ಷ್ಮಿ ಕಟ್ಟಿಸಿರುವ ಮಣ್ಣಿನ ಮಹಡಿಯ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋಗಿ ಅಲ್ಲಿಂದ ಕೆಳಗೆ ಹಾರಿ ಸಾಯಲು ಪ್ರಯತ್ನಿಸಿ ಗಲ್ಲಕ್ಕೆ ಕೈಕೊಟ್ಟು ಕುಳಿತ ಜಗನ್ನಾಥನ ಸ್ತ್ರೀಯ ನಿರೀಕ್ಷೆಯಲ್ಲಿದ್ದಾನೆ. ಒಳಗಿನಿಂದ ಗಾಯನ.)

ದಾನಯ್ಯ:—ಭಗವಂತಾ .. .... ಇದೇನಪ್ಪಾ ಉತ್ತರ ಗಿತ್ತರ ಏನೂ ಇಲ್ಲ? ದೂರಾದರೂ ಇದ್ದು ನಿದ್ದಾರೆಯೋ ಇಲ್ಲಗಿಲ್ಲವೋ ಮತ್ತೆ? (ಗಟ್ಟಿಯಾಗಿ) ಭಗವಂತಾ.

ಭಗ:— (ಜಳಕನಾಗಿ) ಬನ್ರೆವ್ವಾ, ಯಾರು ಅದು? ಬನ್ನಿ ಒಳಗೆ!

ದಾನಯ್ಯ:— ಇದೇನವ್ವಾ, ಅವ್ವಾ ಗಿವ್ವಾ ಅಂತುಗಿಂತಿದಾನೆ ಈ ನುನುಷ್ಯ? ದನಿಗಿನಿ ಸಪ ಗುರುತುಗಿರುತು ನಿಗಗಿಗಲಿಕ್ಕಿಲ್ಲಪ್ಪೋ ಏನು ಮುಂಡುಗಿಂಡು? ನಾನೊಕ್ಕಿ, ಭಗವಂತಾ ನಾನೂ!

ಭಗ:— ಎಲೇ, ಏನೇ ಮಾಡತ್ತಾಯಿದ್ದೀ? ಒಳಗೆ ಬಾಗಿಲಲ್ಲಿ ಹೆಂಗುಸರು ಯಾರೋ ಬಂದಂತಿದೆ. ಬಾರೇ, ಬೇಗ ದೀಪ ತೆಗೆದುಕೊಂಡು!

ಲಕ್ಷ್ಮಿ:— (ಇದ್ದಲ್ಲಿಂದಲೆ ಅವಸರಪಡ್ತಿ) ಬನ್ನಿರೆವ್ವಾ ಬನ್ನಿ, ಒಳಗೆ ಬನ್ನಿ! ಇಗೋ ತರತಿದ್ದೇನೆ ದೀಪ ಬನ್ನಿ ಒನ್ನಿ!

(ಕೈದೀಪಹಿಡಿದುಕೊಂಡು ಇಬ್ಬರೂ ಬಾಗಿಲಿಗೆ ಬಂದು ಪ್ರಾಮುಖವನ್ನು ಕಂಡು ಹೆಚ್ಚಾಗುವರು. ಲಕ್ಷ್ಮಿ ನಾಚಿ ಒಳಗೆ ಹೋಗುವಳು.)

ದಾನಯ್ಯ:— ಏನಯ್ಯಾ ಭಗವಂತಾ, ಮೂವತ್ತುಗೀವತ್ತು ವರ್ಷಗಿರ್ಷದ ಪರಿಚಯಗಿರಿಚಯದ ದನಿಗಿನಿ ಸಪ ತಿಳಿಗಿಳಿಯದಿಲ್ಲವೇನಯ್ಯಾ ನಿನಗೆ? ಹೋಗಲಿ, ಗಂಡುಗಿಂಡೆಂದು ಸಪ ದನಿಗಿನಿಯ ಮೇಲೆ ಗೊತ್ತುಗಿತ್ತಾಗತ್ತೆ? ಬನ್ರೆವ್ವಾಗಿನ್ರೆವ್ವಾ ಎಂದೇ ಸುರುಗಿರು ಮಾಡಿಬಿಟ್ಟೆದೀಯಾ ಒಂದೇ ಸವ್ನೇ!

ಭಗ:— (ಅನುಮಾನಿಸಿ) ಇಲ್ಲ.... ದಾನೂ.... ಸ್ತ್ರೀ.

ದಾನಯ್ಯ:— ಓ, ಸರಿ ಸರಿ. ಸ್ತ್ರೀ-ಗೀಯಿಂದ ಧನಗಿನ ಲಾಭ ತಾನೆ?

ಭಗ:—(ತಪ್ಪಿತನಂತೆ) ಅದಕ್ಕೇ. ಇರಲಿ ಬಿಡು. ಇದೇನಯ್ಯಾ, ಪೂರ್ತಿ ನೆಂದುಕೊಂಡು ಬಂದಂತಿದೆ ದಾರಿಯುದ್ದಕ್ಕೂ. ಮಳೆ ಆಯ್ತೇನೋ, ಇಲ್ಲಿ ತೊಟ್ಟು ಹನಿ ಸಪ ಇಲ್ಲ.

ದಾನಯ್ಯ:— ಮಳೆ ಗಿಳೆ ಅಷ್ಟಿಷ್ಟಲ್ಲ ನೋಡು. ನಿನ್ನ ಸೀಜೀ ಊಟದ ಮುಹೆಪೆ ಗಿಹೆಮೇನೋ ಮುಹರಾಯಾ! ಮುಗಿಲು ಗಿಗಿಲಲ್ಲಿ ತೂತು ಗೀತು ಏನಾದರೂ ಬಿದ್ದು ಗಿದ್ದಿದೆಯೋ ಏನೋ! (ನಡುಗುತ್ತ) ಏನು ಚಳಗಿಳಿಯಯ್ಯಾ ಇದು? ಏನಾದರೂ ಇಟ್ಟುಗಿಟ್ಟಿದೀಯಾ ಅಗ್ನಿಗಿಗ್ನಿಜ್ಞೋತ್ರ? ಸಿಗರೇಟು-ಗಿಗರೇಟು? ಇಲ್ಲವೇನಯ್ಯಾ? ನಾಳೆಗೀಳೆ ಬೆಳಗು-ಗಿಳಗಾದರೆ ಲಾಕೋ ಗೀಕೋಪತಿ ನೀನು! ಬಿರ್ಲಾ-ಗಿರ್ಲಾಗಳು ಕೈಗಿಯ್ಯುಡಕ್ಕೆ ಬರಬೇಕು ನಿನ್ನ ಪತ್ತರಗಿತ್ತರ.

ಭಗ:— ಮನೆಯಲ್ಲಿ ಏನೋ ಇಲ್ಲ. ತಾಳು, ಅವಳ ಪತ್ತಿರ ಏನಾದರೂ ಚಿಲ್ಲರೆ ಇದ್ರೆ ತರ್ತೇನೆ. ಪಕ್ಕದ ಅಂಗಡಿಯಲ್ಲಿ ತರೋಣವಂತೆ. ಏನೇ,....ಲೇ.

ಲಕ್ಷ್ಮಿ:— ಬಂದೆ ಕಣ್ರೀ, ಏನು, ಬಂದರೆ ಅವರು.... ಬನ್ನಿರೆಮ್ಮಾ (ಕೈದೀಪಹಿಡಿದುಕೊಂದಿಗೆ ಬರುವಳು).

ಭಗ:— ಯಾರೂ ಬಂದಿಲ್ಲವೇ ಎಳು ತಿಂಗಳಲ್ಲಿ ಹುಟ್ಟಿದವಳೆ! ಹಾಗೇಕೆ ಅವಸರಪಡುತ್ತಿ? ಅಬಿರಲಿ, ಏನಾದರೂ ಚಿಲ್ಲರೆ ಇದೆಯೇ?

ಲಕ್ಷ್ಮಿ:— ಅಯ್ಯೋ, ನಿಮಗಿಲ್ಲ ಅಂತೇನೆಯೇ? ತೆಕ್ಕೊಳ್ಳಿ ಆ ಗೂಡಿನಲ್ಲಿದೆ....ಸಿಕ್ಕಿತೇ?....ಆ ಮೊಸರಿನವಳು ಕಡ್ಡಾಯ ಮಾಡಿದಳಲ್ಲ, ನೀವು ಮಾರ್ಕೆಟ್ಟಿಗೆ ಹೋದಾಗ! ಪಕ್ಕದ ಮನೆಯ ಪದ್ಮಾವತೆಮ್ಮನ ಪತ್ತಿರ ಒಂದು ರೂಪಾಯಿ ತಂದು ಎನೆವೆ ಅವಳ ಮುಖಕ್ಕೆ. ಪನ್ನ ಹದಿಮೂರುವರೆ ಆಣೆ ತೆಗೆದು ಕೊಂಡು, ಮಿಕ್ಕ ಎರಡೂವರೆ ಆಣೆ ಅವಳೇ ಅಲ್ಲಿ ಇಟ್ಟು ಹೋಗಿದ್ದಾಳೆ, ನನ್ನ ಕೈಯಲ್ಲಿ ಕೆಲಸವಿದ್ದಿತೂ ಅಂತ...ಸಿಕ್ಕಿತೇನ್ರೀ?

ಭಗ:— ಹಾ, ಸಿಕ್ಕಿತು. ಎಷ್ಟಿದೆ ಅಂದಿ?

ಲಕ್ಷ್ಮಿ:— ಎರಡೂವರೆ ಆಣೆ ಇಲ್ವೆ? ಒಂದು ಅರ್ಧಾಣೆ, ಒಂದು ಎರಡಾಣೆ ಅಂದ್ರಲ್ಲ ಅವಳೂ!

ಭಗ:— ಅಯ್ಯೋ, ಒಳ್ಳೇ ಪೆಚ್ಚು ಅವಳು. ಎರಡಾಣೆ ಅಲ್ವೇ ಇದು, ನಾಲ್ಕಾಣೆ ಕಣೇ.

ದಾನಯ್ಯ:— ಯಾರು, ಮೊಸರುಗಿಸರಿನವಳೇ?

ಲಕ್ಷ್ಮಿ:— ಹೌದು.

ದಾನಯ್ಯ:— ಎರಡು-ಗಿರಡಾಣೆ ಪೆಚ್ಚು-ಗಿಚ್ಚು ಇಟ್ಟಿಗಿಟ್ಟಿ ದಾಳೆಯೇ?

ಭಗ:— ಹೌದು

ದಾನಯ್ಯ:— ನಿಜಗಿಜ ಆಯ್ತಲ್ಲಪ್ಪೋ ಭಗವಂತಾ, ನಿನ ವಾರಗೀರ ಭವಿಷ್ಯ!

ಭಗ:— ಹೇಗೋ?

ದಾನಯ್ಯ:— ಸ್ತ್ರೀ-ಗೀಯಿಂದ ಧನಗಿನ ಲಾಭ!

ಭಗ, ಲಕ್ಷ್ಮಿ (ದಿಗ್ಭ್ರಮೆಯಾಗಿ) ಅಯ್ಯೋ! ಇದೆಯೇ ಧನ!...

ಸ್ವಾತಂತ್ರ್ಯ ಸಂಪಾದನೆ

ಶ್ರೀ. ಜಿ. ಎನ್. ಸಭಾಹಿತ ಬಿ.ಎ. (ಆನರ್ಸ್) ಪುಣೆ.

★

ಸಾಮ್ಯವಾದದಲ್ಲಿ ಗುಣವಿದೆ, ದೋಷವೂ ಇದೆ. ಗಾಂಧೀವಾದದಲ್ಲಿಯೂ ಹಾಗೆಯೆ. ಇವೆರಡರಲ್ಲಿಯ ಗುಣಗಳನ್ನಾಯ್ದು ಅಳವಡಿಸಿಕೊಂಡರೆಯೆ ಶಾಂತಿಮಯವಾದ ಸ್ವಾತಂತ್ರ್ಯ ನಮಗೆ ಸಿಕ್ಕಬಹುದು.

★

ಮಾನವನ ಆರ್ಥಿಕಜೀವನವನ್ನು ಕವಿದುಕೊಂಡ ಕಾರ್ಮೋಡವನ್ನು ಕರಗಿಸಿ, ಅವನನ್ನು ಸ್ವಾತಂತ್ರ್ಯಸೂರ್ಯನ ಉಜ್ವಲ ಉತ್ತೇಜಕ ಕಿರಣರಾಶಿಯಿಂದ ತೇಜೋಮಯನನ್ನಾಗಿ ಮಾಡಲು ಹಲವಾರು ಜನ ಬೇರೆ ಬೇರೆ ಉಪಾಯಗಳನ್ನು ಸೂಚಿಸಿರುವರು. ಅವೆಲ್ಲವುಗಳನ್ನು ನಾವು ಸಾಮಾನ್ಯವಾಗಿ ಎರಡು ವಿಧವಾಗಿ ಕ್ರೋಢೀಕರಿಸಬಹುದು:— ಸ್ಥೂಲವಾಗಿ ಹೇಳಬಹುದಾದರೆ ಒಂದು ಅಧ್ಯಾತ್ಮಿಕ ದೃಷ್ಟಿ, ಇನ್ನೊಂದು ಭೌತಿಕ. ಮೊದಲನೆಯದು 'ಗಾಂಧೀವಾದ'ವೆಂಬ ಹೆಸರಿನಿಂದ ಜನತೆಯಲ್ಲಿ ಪ್ರಚಾರವಾಗಿದೆ; ಎರಡನೆಯದೇ 'ಸಾಮ್ಯವಾದ'.

ಗಾಂಧೀವಾದಿಗಳ ತತ್ತ್ವದಂತೆ: ಜಗತ್ತು ಇಂದು ಭೌತಿಕ ಕ್ಷೇತ್ರದಲ್ಲಿಷ್ಟೇ ಮುಂದುವರಿದಿದೆ. ಮನುಷ್ಯನು ಬಾಹ್ಯವಾತಾವರಣದಲ್ಲಿ ಸುಧಾರಿಸಿದ್ದರೂ ಆವನ ಹೃದಯ ಅದಕ್ಕೆ ಸಂಪೂರ್ಣವಾಗಿ ಒಕೊಟ್ಟಿಲ್ಲ; ಅದು ತುಂಬುಹೃದಯವಾಗಿಲ್ಲ–ಹೀಗಾಗಿ ಈ ಪ್ರಗತಿ ಅಸ್ತವ್ಯಸ್ತವಾಗಿದೆ. ಇದನ್ನು ಸರಿಪಡಿಸಲು ಅವನಿಗೆ ಒಂದೇ ಮಾರ್ಗ—ಆತ್ಮನಿರೀಕ್ಷಣೆ. ತನ್ನಂತೆ–ಪರರ ಕಾಣುವ, ವಿಶ್ವಬಾಂಧವ್ಯವನ್ನು ಗಳಿಸಿಕೊಂಡ ವಿಶಾಲ ಹೃದಯ, ಬೇಕು.

ಈ ವಾದಿಗಳಿಗೆ ಇಂದಿನ ಆರ್ಥಿಕಪ್ರಗತಿಯಲ್ಲ, ಯಂತ್ರಮಯವಾದ ಜಗತ್ತಿನಲ್ಲಿ ಶ್ರದ್ಧೆಯಿಲ್ಲ. ವ್ಯಾಪಾರಿಸಂತೆಯನ್ನು ಪೂಜಿಸುವುದರಲ್ಲಿಯೇ ಇವರ ದೊಡ್ಡಸ್ತಿಕೆ. 'ನಿಸರ್ಗದೊಂದಿಗೆ ಮಿಲನವಾಗಿರಿ' ಎಂಬುದೇ ಇವರ ಸೊಲ್ಲು. ಗಾಂಧೀವಾದಿಗಳಿಗೆ ಯಂತ್ರಗಳೆಂದರೆ ನಿರುದ್ಯೋಗದ ತವರುಮನೆ; ಜನತೆಗೆ ಸಲ್ಲದ ವಿರಾಮ (leisure) ಒದಗಿಸಿ, ಅವನ ನೈತಿಕ ಅವನತಿಯನ್ನುಂಟು ಮಾಡುವ ಸಾಧನ. ಆದುದರಿಂದಲೇ ಅವರಿಗೆ ಯಂತ್ರಯುಗ ಬೇಡ.

'ಗಾಂಧೀ ಯೋಜನೆ'ಯ ಮುನ್ನುಡಿಯಲ್ಲಿ ಗಾಂಧೀಜಿ ಹೇಳಿದ್ದಾರೆ: 'ಈ ಯೋಜನೆ, ಇಂದಿನ ವಿಜ್ಞಾನದ ರೀತಿಯಲ್ಲಿ ತಾನು ಕಂಡುಕೊಂಡ ಜೀವನದ ತತ್ತ್ವವನ್ನು ವಿವರಿಸಿ ಹೇಳುವ ಪ್ರಯತ್ನ' ಎಂದು. ಸರಳಜೀವನದೊಂದಿಗೆ ಉನ್ನತ ವಿಚಾರ ವಿರಬೇಕೆನ್ನುವ ತತ್ತ್ವ ಸುಧಾರಿಸಿದ ಯಂತ್ರಗಳ ಸಹಾಯದಿಂದ ಹುಟ್ಟುವಳಿಯನ್ನು ಹೆಚ್ಚಿಸುವ ವಿಚಾರ ಈ ಯೋಜನೆಗೆ ವಿರೋಧವಾದುದು. ಇದಕ್ಕೆ ಅವರು ಕೊಡುವ ಕಾರಣಗಳು ಮೂರು: ಒಂದು, ಅವು ನಿರುದ್ಯೋಗವನ್ನು ಹೆಚ್ಚಿಸುತ್ತವೆ. ಎರಡು, ಉತ್ಪತ್ತಿಯನ್ನು ಕೇಂದ್ರೀಕರಿಸಿ ಸ್ಥಳಿಕ ಸ್ವಯಂ-ಪೂರ್ಣತೆಗೆ ಭಂಗ ತರುತ್ತವೆ. ಮೂರು, ಶ್ರಮದ ಭಾರವನ್ನು ಬೇಕಾದುದಕ್ಕಿಂತ ಹೆಚ್ಚು ಇಳಿಸಿ, ಅವರಿಂದುಂಟಾಗುವ ತೆರಪಿನ ಅಪವ್ಯಯಕ್ಕೆ ಕಾರಣವಾಗುತ್ತದೆ.

ಯಂತ್ರಗಳು ಉತ್ಪತ್ತಿಯನ್ನು ಕೇಂದ್ರೀಕರಿಸುವುದರಿಂದ ಸ್ಥಳಿಕ ಸ್ವಯಂಪೂರ್ಣತೆಗೆ ಭಂಗಬರುವುದೇನೋ ನಿಜ; ಆದರೆ 'ಸಲ್ಲದ ತೆರಪನ್ನೊದಗಿಸಿಕೊಟ್ಟು ನೈತಿಕ ಅವನತಿಯನ್ನುಂಟು ಮಾಡುತ್ತವೆ; ನಿರುದ್ಯೋಗವನ್ನು ಹೆಚ್ಚಿಸುತ್ತವೆ' ಎಂಬುದು ಸತ್ಯವಲ್ಲ. ಅವರು ತೋರಿಸುವ ನೈತಿಕ ದೋಷಗಳು: ಮಿತಿಯಿಲ್ಲದ ಅತ್ಯಾಶೆ, ಪೆಚ್ಚಿನ ಸಂಪತ್ತಿನ ಕೇಂದ್ರೀಕರಣದಿಂದ ಉಂಟಾಗುವ ವೈಷಮ್ಯ, ಬದವರ ಶೋಷಣೆ, ಮಾನವತೆಯ ಅವನತಿ. ಇವೆಲ್ಲ ಔದ್ಯೋಗೀಕರಣದ ಮೂಲಕವಲ್ಲ; ಆದರೆ ಇಂದಿನ ಸಮ್ಮಿಶ್ರ ಸಮಾಜರಚನೆಯ ಮೂಲಕ—ಭಂಡವಲಶಾಹೀ ಪದ್ಧತಿಯ ಪರಿಣಾಮವಿದು. ಇಂದು ಸಮ್ಮಿಶ್ರ ಸಮಾಜದಲ್ಲಿ ನಿರುದ್ಯೋಗವೇ ಥರ್ಮವಾಗಿ ಪರಿಣಮಿಸಿದ್ದರೆ, ಅದು ಔದ್ಯೋಗೀಕರಣದಿಂದಲ್ಲ; ಆದರೆ 'ಲಾಭಕ್ಕಾಗಿ ಉತ್ಪತ್ತಿ' ಎಂಬ ಇಂದಿನ ಸಮಾಜರಚನೆಯ ಮೂಲನುಸಂಧಾನದಿಂದ!

ಇಂದಿನ ಉತ್ಪಾದಕ ಪದ್ಧತಿಯ ಸಂಕೀರ್ಣತೆ ಸಮ್ಮಿಶ್ರ ಬುದ್ಧಿಮತ್ತೆಯ ಒಲೆಗಲ್ಲು. ವ್ಯವಸ್ಥಾಕ್ರಮದಲ್ಲಿಯು ಸಾಮರ್ಥ್ಯ ನೈತಿಕ ಉನ್ನತಿಗೇ ಒಂದು ತೈಯೇರಿಸುತ್ತದೆ. ಮಾನವತೆಯ ಪ್ರಗತಿ, ಅವನ ಸಂಸ್ಕೃತಿಯ ಮೇಲ್ಮೈ, ಅವನು ಯುಗ ಯುಗಗಳಲ್ಲಿ ತನ್ನದೆಂದು ಕೊಳ್ಳುವ ಸಮಾಜದ ಪರಿಧಿಯನ್ನು ವಿಸ್ತರಿಸಲು ಕೈಕೊಂಡ ಪ್ರಯತ್ನದಲ್ಲಿದೆ. ನಾಗರಿಕತೆಯ ಬಾಲ್ಯದಲ್ಲಿ ಕುಟುಂಬವೇ ಅವನ ಸಮಾಜದ ಇತಿ-ಮಿತಿ. ಮುಂದೆ ಅವನ್ನು 'ತಂಡ'ಕ್ಕೆ ಬೆಳಸಿಕೊಂಡಿದ್ದಾಯಿತು. ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ದೇಶದ ವ್ಯಕ್ತಿತ್ವಕ್ಕೆ ನೊದಲಾಯಿತು. ಇಂದು ಅದು ಮಾನವಸಮಾಜದ ಕಡೆಗೆ ಮುನ್ನಡೆದಿದೆ. ಈ ಪ್ರಗತಿಯ ಅಡಿಗಲ್ಲೇ ಇಂದಿನ ಉತ್ಪಾದಕ ಪದ್ಧತಿ ಉತ್ಪತ್ತಿ ಸಾಧನಗಳ ಸುಧಾರಣೆಯಿಂದ, ಅವುಗಳ ಸಂಕೀರ್ಣತೆಯಿಂದ ಇಂದಿನ ಜಗತ್ತು ಆರ್ಥಿಕವೃಷ್ಟಿಯಿಂದ ಏಕತಾನತೆಯನ್ನು ಹೊಂದಿದೆ. ಆದರೆ ಈ ಸನ್ನಿವೇಶವನ್ನು ಸಮ್ಮಿಶ್ರ ಸಮಾಜರಚನೆ ಇನ್ನೂ ಗುರುತಿಸಿಲ್ಲ. ಅದಕ್ಕಾಗಿಯೇ ಇಂದು ಜಗತ್ತು ಮಲೆತು ನಿಂತಂತಾಗಿದೆ; ಆದರೂ ಹೊಸ ಹೊಸ ಪ್ರವಾಹಗಳು ಏಳುತ್ತಿರುವುದನ್ನು ನಾವು ಅಲ್ಲಗಳೆಯಲಾರೆವು. ಒಮ್ಮೆ ಈ ಪ್ರವಾಹಗಳ ಓಟ ಬಲಿಯಿತೆಂದರೆ ಅದು ಮಾನವತೆಯ ಮುಂದಿನ

ಪ್ರಗತಿಗೆ ಒಡ್ಡಾಗಿ ನಿಂತ ಇಂದಿನ ಸಾಹುಕಾರೀ ಸಮಾಜ ಪದ್ಧತಿಯನ್ನು ಕಿತ್ತೊಗೆದು ಮುಂದೆ ಹರಿಯುವವರಲ್ಲಿ ಸಂಶಯವಿಲ್ಲ. ಎಂದರೆ ರಾಷ್ಟ್ರ-ರಾಷ್ಟ್ರಗಳೆಂಬ ಕೂಗಡಗಿ ಅಂತರ್ರಾಷ್ಟ್ರೀಯ ಸಮಾಜ—ಮಾನವ ಸಮಾಜ—ಕಟ್ಟಿಯೆತ್ತುವವರಲ್ಲಿ ಅನುಮಾನವಿಲ್ಲ. ಆದುದರಿಂದಲೇ ಇಂದಿನ ನಮ್ಮ ಉತ್ಪತ್ತಿ ಸಾಧನದ ಅಭ್ಯುದಯ ಪೌರುಷತ್ವದ ಸಂಪೂರ್ಣತೆಯ ಸಂಸ್ಕೃತಿಯ ಅಡ್ಡಿತೀಯ ಬೆಳೆವಣಿಗೆ.

ಇನ್ನು ಯಂತ್ರಗಳು ಒಡ್ಡಿಕೊಳ್ಳುವ ತೊಡಕು, ಸಮಯದ ಅಪವ್ಯಯಕ್ಕೆ ಕಾರಣವಾಗಿ ಮಾನವ-ಜೀವನದ ಬೆಳವಣಿಗೆಗೆ ಸ್ವಲ್ಪ ಕೊಡುಪ್ಪವೆ. ಈ ಸಮಯ ನೈತಿಕಪ್ರಗತಿಗೆ ಒಂದು ಪೆಟ್ಟಲ್ಲೇ ಹೊರತು ಎಷ್ಟಕ್ಕೆ ಮುಖ್ಯವಲ್ಲ. ನಾಗರಿಕತೆಯೆಂದರೇನು? ಪ್ರೊಫೆಸರ್ ಬಿ. ರಸೆಲ್ ಹೀಗೆ ಹೇಳುತ್ತಾರೆ: "Civilization may be defined as the pursuit of objects not ... strictly necessary for survival.... civilization and the progress requires leisure." ಆದ್ದರಿಂದ ನಾಗರಿಕತೆಯ ಬೆಳವಣಿಗೆಗೆ ತೆರಪು ಅವಶ್ಯವಾದ ಅಗತ್ಯವಿದೆ ಎಂಬುದು ನಮಗೆ ತಿಳಿದ ಸಂಗತಿ. ತೆರಪು ಮನುಷ್ಯನ ನೈತಿಕ ಅಭಿವೃದ್ಧಿಗೆ ಕಾರಣವೆಂಬುದು ಸ್ಪಷ್ಟ ಪಡಿಸಿದ್ದಾಯಿತು. ಇಂದು ಯಂತ್ರಗಳು ಸರಿಯಾಗಿ ಉಪಯೋಗಿಸಲ್ಪಟ್ಟರೆ, ನಮ್ಮ ಜಿಹಿಕ ಇಚ್ಛೆಗಳನ್ನು ಸ್ವಲ್ಪವೇ ದೇಳೆಯಲ್ಲಿ ವಿಶೇಷ ಶ್ರಮವಿಲ್ಲದೆ ಪೂರೈಸುವುದು ಹೀಗಾಗಿ ಮನುಷ್ಯನಿಗೆ ತನ್ನ ಧ್ಯೇಯಸಾಧನೆಗಾಗಿ ಹಣಗಲು ಸಾಕಷ್ಟು ಅವಕಾಶ ಸಿಕ್ಕುತ್ತದೆ. ಅಲ್ಲದೆ ರಸೆಲ್ಲರೇ ಮುಂದುವರಿದು ಎನ್ನುವಂತೆ: "When men are liberated from the pressure of the struggle to obtain food they do not all sink into sloth and idleness; some remain active in the pursuit of knowledge or art or some other purely mental object. It is the work of these men that sheds lustre to mankind as a whole. To have lived a certain number of years, consumed a certain amount of food, begotten a certain number of children similar to oneself, and then died is not the utmost of which men are capable; yet owing to the scant productivity of the non-industrial communities it was until lately, all that most men could hope to achieve."

ಎಂದರೆ ಮನುಷ್ಯ ತನ್ನ ಹೊಟ್ಟೆಗೆ ಸಮಾಧಾನವಾಹೊಡನೆಯೆ, ಉಳಿದ ತೆರಪನ್ನು ನೈತಿಕ ಅವನತಿಗಾಗಿ ಉಪಯೋಗಿಸಿಕೊಳ್ಳುವುದಿಲ್ಲ. ಆದರೆ ತನ್ನ ಸಂಸ್ಕೃತಿಗೆ ತಕ್ಕಂತೆ ಸಾಹಿತ್ಯ-ವಿಜ್ಞಾನ ಕ್ಷೇತ್ರಗಳಲ್ಲಿ ತನ್ನ ಗುರಿಯ ಸಾಧನೆಗಾಗಿ ಹೆಣಗುವನು. ಹಾಗೂ ಇಂತವರ ಸಾಹಸದ ಫಲವೇ ಸಮಾಜವನ್ನು ಸಂಸ್ಕೃತಿಯಿಂದ ಬೆಳಗಿಸುವುದು. ಆದರೆ 'ಯಂತ್ರಗಳು ಉತ್ಪತ್ತಿಸಾಧನೆಗಾಗಿ ಉಪಯೋಗಿಸಲ್ಪಡುವವರಿಗೆ ದೇಶದಲ್ಲಿ ಬಹುಮಂದಿಗೆ ಹೊಟ್ಟೆ-ಬಟ್ಟೆಗೆ ಹೊರಕೊಳ್ಳುವವರಲ್ಲಿಯೇ ದೇಳೆಯ ವ್ಯಯವಾಗಿ, ಸಂಸ್ಕೃತಿಯ ಬೆಳೆವಣಿಗೆಗೆ ಅಗತ್ಯವಾದ ತೆರಪು ಸಿಗುತ್ತಿದ್ದಿಲ್ಲ. ಎಂದ ಹೇಲೆ ಯಂತ್ರಯುಗ ಮಾನವನ ಏಳ್ಗೆಗೆ ಎಷ್ಟು ಪೋಷಕವಾಗಿದೆ ಎಂಬುದು ಸಹಜ.

ಇನ್ನು ನಿರುದ್ಯೋಗದ ಸಮಸ್ಯೆ: ಇಂದು ಹಿಂದುಸ್ಥಾನದ ಪರಿಸ್ಥಿತಿಯನ್ನೇ ಆಯ್ದುಕೊಂಡರೆ, ನಮ್ಮ ಜನರು ಇಂದು ನಿರುದ್ಯೋಗದಿಂದ ಅಲೆಯಬೇಕಾಗಿದೆ. ಇದಕ್ಕೆ ಕಾರಣ ಹಿಂದುಸ್ಥಾನದಲ್ಲಿ ಔದ್ಯೋಗಿಕ ಕ್ಷೇತ್ರಗಳಿಲ್ಲವೆಂತಲ್ಲ. ಆದರೆ ಅವನ್ನು ಬೆಳಸಿದರೆ ಬ್ರಿಟಿಶ್ ಬಂಡವಲಶಾಹಿಗೆ ಧಕ್ಕೆ ಬರುತ್ತದೆಂದು. ಭಂಡವಲಶಾಹೀ ಸಮಾಜದಲ್ಲಿ ಉತ್ಪತ್ತಿಯು ಲಾಭಬಡಕತನವನ್ನು ಅವಲಂಬಿಸಿದೆ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಅಮೇರಿಕೆಯಲ್ಲಿಯೊ, ಆಸ್ಟ್ರೇಲಿಯಾದಲ್ಲಿಯೊ, ಬೆಳ ಅತ್ಯುತ್ಪತ್ತಿಯಾಗಿ, ಆಹಾರಧಾನ್ಯಗಳು ಹೇರಳವಾಗಿ ಬೆಳೆದರೆ ಅವರು ಏನುಮಾಡುವರು ಗೊತ್ತೇ? ಅದರಲ್ಲಿ ಬಹುಭಾಗವನ್ನು ಸಮುದ್ರದಲ್ಲಿ ಚೆಲ್ಲುವರು. ಯಾಕೆ? ಜಗತ್ತಿನ ಎಲ್ಲ ಜನರಿಗೂ ಪೊಟ್ಟೆ ತುಂಬುವಷ್ಟು ಆಹಾರ ಸಿಗುತ್ತಿದೆಯೇ? ಇಲ್ಲ. ಅದರೂ ಹೆಚ್ಚಾಗಿ ಬೆಳೆದ ಧಾನ್ಯವನ್ನು ಸಮುದ್ರದಲ್ಲಿ ಚೆಲ್ಲುವರು! ಅಲ್ಲವಾದರೆ ಆ ಧಾನ್ಯದ ಧಾರಣೆ ಬಿದ್ದು ಲಾಭ ಕಡಿಮೆ ಸಿಕ್ಕುವುದು! ಇದು ಇಂದಿನ ಸಮಾಜರಚನೆಯ ನ್ಯೂನ್ಯತೆಯ ತಳಹದಿ. ಅಲ್ಲದೆ ಸಂಪತ್ತಿನ ಕೇಂದ್ರೀಕರಣ—ಸಾಹುಕಾರೀ ಪದ್ಧತಿಯ ಮೂಲತತ್ತ್ವ, ಹೀಗಿದ್ದ ವೇಲೆ ದೇಶದ ಆರ್ಥಿಕಸಂಪತ್ತು ಕೆಲವೇ ಭಂಡುವಲುಗಾರರಲ್ಲಿ ಸಂಚಯವಾಗತೊಡಗುವುದು. ಆದರೆ ಇಂದು ಯಂತ್ರಗಳ ಸಹಾಯದಿಂದ ಉತ್ಪತ್ತಿಯನ್ನು ಬೇಕಷ್ಟು ಬೆಳಸಬಹುದು; ಆದರೆ ಹೀಗೆ ಬೆಳಸಿದರೆ ಅದು ಖರೀದಿಯಾಗಬೇಕಲ್ಲವೆ? ಹುಟ್ಟಿದ ಸರಕುಗಳನ್ನು ಲಾಭವಪಡೆದು ಮಾರಲು ಬಾರದೆ ಹೋದರೆ, ಅವುಗಳ ಉತ್ಪತ್ತಿ ಮಾಡುವುದರಲ್ಲಿ ಸಾಹುಕಾರರಿಗೆ ಯಾವ ಹಿತ? ಹೀಗಾಗಿ ಅವರು ಸರಕುಗಳನ್ನು ಮಾರಲು ಪೇಟೆಯನ್ನು ಹುಡುಕತೊಡಗುವರು. ದೇಶದಲ್ಲಿಯಂತೂ ಸಂಪತ್ತಿನ ಕೇಂದ್ರೀಕರಣ ಹೆಚ್ಚು ಹೆಚ್ಚು ಆಗತೊಡಗಿದಂತೆ, ಸಮೂಹದಲ್ಲಿ ವಿಪರೀತ ದೈನ್ಯವ್ಯ ತಲೆದೋರಿ, ಅಲ್ಲಿಯ ಬಹುಜನಸಮಾಜ ನಿರ್ಗತಿಕವಾಗುವುದು. ಇದರಿಂದ ಅವರಲ್ಲಿ ಹುಟ್ಟಿದ ಸರಕುಗಳನ್ನು ಕೊಂಡುಕೊಳ್ಳುವ ತ್ರಾಣವಿರುವುದಿಲ್ಲ. ಇದಕ್ಕಾಗಿಯೆ ಬೇರೆ ದೇಶದ ಕಡೆಗೆ ದೃಷ್ಟಿಹೊರಳಿಸಬೇಕಾಗುತ್ತದೆ. ಸಾಹುಕಾರೀ ಶಾಹೀ ಬೆಳೆದಂತೆ, ಸಾಮ್ರಾಜ್ಯವಾದವು ಬೆಳೆದ ಬಗೆಯಾದರೂ ಇದರಿಂದಲೇ. ಇನ್ನು ಜರ್ಮನಿಯಂತೆ ತದಪಮಾಡಿ ತಲೆಯೆತ್ತಿದ ಸಾಹುಕಾರಿಶಾಹಿಗೆ ಬೇರೆ ಯಾವ ದೇಶವೂ ಆಹುತಿಯಾಗದೆ ಹೋದಲ್ಲಿ, ಅದು ದೇಶದ ದಲಿತವರ್ಗವನ್ನೇ ಮುಟ್ಟೂ ಮುತ್ತೂ ಸುಲಿಯತೊಡಗುವುದು. ಅದೇ 'ಫಾಶೀವಾದ'ದ (fascism) ಗುಟ್ಟು. 'ಇಂದಿನ ಯುದ್ಧಗಳಾದರೂ ವ್ಯಾಪಾರೀಕಾರಣಗಳಿಗಾಗಿ' ಎಂದು ಹೇಳುವುದರ ಅರ್ಥವಾದರೂ ಇದೇ. ಎಂದರೆ ಬೇರೆ ಬೇರೆ ಸಾಹುಕಾರೀ-

ಶಾಹಿ ರಾಷ್ಟ್ರಗಳು ತಮ್ಮ ತಮ್ಮೊಳಗೇ ಪೇಟೆಗಾಗಿ ಪೈಪೋಟಿ ಮಾಡತೊಡಗಿದುವೆಂದರೆ, ಒಂದಿಲ್ಲೊಂದು ನೆವದಿಂದ ಯುದ್ಧ ಒದಗಿಬರುವುದು ಸಹಜ. ಈ ರಾಷ್ಟ್ರನೀಪದ್ಧತಿಯು—ಅದರ ಲಾಭಬಡಕತನದ—ಫಲವಾಗಿಯೆ ನಾವು ಇಂದು ಸಂಪತ್ತಿನ ಜೊತೆಗೆ ಬಡತನವನ್ನು ಕಾಣುವುದು. ತಿಂದು ತೇಗುವ ತುಂಬು-ಜೀವನದೆದುರು ಬರಿಹೊಟ್ಟೆಯ ಬಡಕಲುಜೀವವನ್ನು ನೋಡುವುದು. ದೇಶದಲ್ಲಿ ಉದ್ಯೋಗವನ್ನು ಒದಗಿಸಿ ಸಂಪತ್ತನ್ನು ಹೆಚ್ಚಿಸುವ ಅನೇಕ ಆನುಕೂಲತೆಗಳಿದ್ದರೂ ನಿರುದ್ಯೋಗ, ಬಡತನಕ್ಕೆ ಆಸ್ಪದ ಕೊಡುವುದು. ಜಗತ್ತಿಲ್ಲ ತಿಂದು ತೇಗುವಷ್ಟು ಬೆಳೆಯಿಸಲು ಬೇಕಾಗುವ ಉತ್ಪತ್ತಿಸಾಧನಗಳಿದ್ದರೂ ಅಸಹ್ಯ ಬಡತನ, ಸಾವು, ನೋವು, ಭೀಕರ ನಾಟ್ಯವಾಡುತ್ತಿರುವುದು. ದೇವರು ಹೆಚ್ಚಾಗಿ ಧಾನ್ಯಧವಸಗಳನ್ನು ದಯಪಾಲಿಸಿದರೂ ಅದನ್ನು ಸಮುದ್ರವಲ್ಲಿ ಬಿಸುಡುವುದು. ಇವು ನಮ್ಮ ಇಂದಿನ ಸಮಾಜರಚನೆಯ ದೋಷಗಳು-- ಪರಿಣಾಮಗಳು; ಉತ್ಪತ್ತಿ ಸಾಧನಗಳಾದ ಯಂತ್ರಗಳ ತಪ್ಪಲ್ಲ.

ಎಂದ ಮೇಲೆ ಗಾಂಧೀವಾದಿಗಳು ಇಂದಿನ ನಮ್ಮ ಸಮಾಜರಚನೆಯನ್ನು ದೂಷಿಸದೆ ಯಂತ್ರಗಳನ್ನು ತೆಗಳುವುದರಲ್ಲಿ ವಿಶೇಷ ಅರ್ಥವಿಲ್ಲ. ಇದೂ ಅಲ್ಲದೆ ಮತ್ತೊಂದು ಮಹತ್ತ್ವದ ವಿಚಾರ: "ನ ಜಾತು ಕಾಮ: ಕಾಮಾನಾಮ್ ಉಪಭೋಗೇನ ಶಾಮ್ಯತಿ" (Not from his precepts on the duties of Bachelors) ಎಂಬ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆ ಗಾಂಧೀವಾದ. ನಮ್ಮ ಬಯಕೆಗಳನ್ನು ಕಡಿಮೆಮಾಡಲು ಪ್ರಯತ್ನಿಸುವುದರಲ್ಲಿದೆ ಅದರ ಅನುಕರಣ. ಅದುದರಿಂದಲೇ ಶ್ರೀಮಾನ್ ನಾರಾಯಣ ಅಗರವಾಲರು, ಗಾಂಧೀಯೋಜನೆಯಲ್ಲಿ ಹೀಗೆ ಹೇಳಿರುವರು: "The East had and has even now its own Economics which is as scientific if not more" ಎಂದರೆ ಸಾಮಾನ್ಯವಾಗಿ ಇಂದಿನ—ಪಾಶ್ಚಾತ್ಯ—ಅರ್ಥಶಾಸ್ತ್ರ 'ಮನುಷ್ಯನ ಬಯಕೆಗಳು ವಿಪುಲವಾಗಿವೆ, ವಿವಿಧವಾಗಿವೆ' ಎಂಬ ಗ್ರಹಿಕೆಯಿಂದ ಮುಂದುವರಿಯುತ್ತದೆ. ಶ್ರೀಮಾನ್ ಅಗರವಾಲರು ಹೇಳುವ ಅರ್ಥಶಾಸ್ತ್ರದ ಗ್ರಹಿಕೆ ತದ್ವಿರುದ್ಧವಾಗಿದೆ. ಇದು ಸರಿ. ಆದರೆ ಈ ತತ್ತ್ವವ ಸಾಮಾನ್ಯಜನತೆಗೆ ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನೂ ನಾವು ವಿಚಾರಿಸಬೇಕಾಗುವುದು. ಏಕೆಂದರೆ ಸಮಾಜದಲ್ಲಿಯ ಬಹುಜನತೆ—ಸಾಮಾನ್ಯ ಜನತೆ. ಈ ದೃಷ್ಟಿಯಿಂದ ನೋಡಿದಾಗ ಅದರ ಅಸಾಧ್ಯತೆ ಎಷ್ಟರ ಮಟ್ಟಿಗಿದೆ ಎಂಬುದು ತಿಳಿಯುವುದು.

ಮತ್ತೂ ಒಂದು ಅದರ ದೋಷವನ್ನು ನಾವು ಪರಿಶೀಲಿಸಿದರೆ ಅದರ 'ಶೀಲ ಮಹಮ್ಮದತ್ವ' ನಮಗೆ ತಿಳಿಯಬಹುದು.

ಸಮಾಜದಲ್ಲಿ ಎಲ್ಲರ ಬೇಕು-ಬಯಕೆಗಳೂ ಒಂದಾಗಿರುವುದಿಲ್ಲ; ಇವು ಇಂದಿನ ಸಮಾಜದಲ್ಲಿ ಪರಸ್ಪರವಿರೋಧಕವಾಗಿವೆ—ಎಂಬುದನ್ನು ಮೊದಲೇ ಪ್ರತಿಪಾದಿಸಿದೆ. ಆದರೆ ಗಾಂಧೀವಾದಿಗಳು ಅಪೇಕ್ಷಿಸುವುದಿಲ್ಲ. ಅವರ ತತ್ತ್ವ ಹೀಗೆ: 'ನಾವು ಜಮೀನ್ದಾರರ ಧನಿಕರ, ಸಾಹುಕಾರರ ಮನವನ್ನು ಒಲಿಸಬೇಕು; ಅವರು ಬಡವರ ಸೊತ್ತಿನ ಪಾರುಪತ್ಯಗಾರರಾಗುವಂತೆ ಅವರ ಹೃದಯ ಬದಲಿಸಬೇಕು' ಎಂಬುದೇ ಇವರ ಹೇಳಿಕೆ; ಆದರೆ ವಾಸ್ತವತೆಯ ಎಳ್ಳಷ್ಟು ಪರಿಚಯವಿದ್ದವ, ಮನುಷ್ಯನ ಮನೋವಿಜ್ಞಾನದ ಕೊಂಚ ಅಭ್ಯಾಸ ಮಾಡಿದವ, ಇದರ ಅಶಕ್ಯತೆಯನ್ನು ಕಾಣಬಹುದು. ಸಮಾಜ ಶಾಸ್ತ್ರಗಳ ಪ್ರಯೋಗಶಾಲೆಯಾದ ಇತಿಹಾಸವಾದರೂ ಈ ಅಭಿಪ್ರಾಯವನ್ನೇ ಎತ್ತಿ ಹಿಡಿಯಬಹುದು. ತಜ್ಞ ಲಾಸ್ಕಿ (Laski) ಯವರೂ ಈ ವಿಷಯವಾಗಿ ಹೀಗೆಯೇ ಹೇಳಿರುವರು: "Men would sooner part with their soul than with power" (In his Democracy by crisis) ಮನುಷ್ಯನಿಗೆ ಸೊತ್ತು ಪ್ರಾಣಕ್ಕಿಂತಲೂ ಪ್ರಿಯವಾಗಿದೆ; ಪ್ರಾಣವನ್ನಾದರೂ ಕೊಡಬಲ್ಲ; ಅಸ್ತಿಯನ್ನು ಕೈಗಳೆಯಲಾರ! ಅದು ಅವನ ಹುಟ್ಟುಗುಣ.

ಕೆಲವರು ಎನ್ನುತ್ತಾರೆ: 'ಗಾಂಧೀವಾದವನ್ನು ಇಂದಿನ ಜನತೆ ಆಚರಿಯಲಾರದು; ಅನುಸರಿಸಲಾರದು. ಅದನ್ನು ತಿಳಿದುಕೊಂಡು ಆಚರಿಸುವ ಮಟ್ಟಕ್ಕೆ ಮುಂದುವರಿಯಲು ಜನಾಂಗಕ್ಕೆ ಇನ್ನೂ ಸಾವಿರಾರು ವರ್ಷ ಬೇಕು' ಎಂದು. ಸರ್ ರಾಧಾಕೃಷ್ಣನ್ನರೂ ಹೀಗೆಯೇ ಅಭಿಪ್ರಾಯ ಪಡುವರು (In his Introduction to "He follows christ"). ಅಟ್ಟ ಹತ್ತಿದೆ ನಾವು ಗಗನಕ್ಕೇರಲು ಹವಣಿಸುವುದು—ದೇವತೆಗಳು ಹೆಜ್ಜೆಯಿಡಲು ಅಂಜುವ ಸ್ಥಳಕ್ಕೆ ಮೂರ್ಖರು ನುಗ್ಗುತ್ತಾರೆ (Fools rush in where angels fear to tread) ಎಂದಂತಾಗಬಹುದು. ಆದುದರಿಂದ ಇಂದಿನ ಸಮಾಜದ ಕುಂದು-ಕೊರತೆಗಳನ್ನು ನೀಗಿಸಲು ಹೊರಟ ಜನನಾಯಕರು, ಗಾಂಧೀವಾದವ ಗೊಡವೆ ಬಿಡುವುದು ಉತ್ತಮ.

ಎಂದಮೇಲೆ, ಇಂದು ನಮ್ಮ ಬಂಧನದ ವಿಮೋಚನೆಯನ್ನು ಸಾಮ್ಯವಾದ ಮಾಡಬಲ್ಲುದೇ? ಇಲ್ಲಿಯವರೆಗೆ ನಾವು ಪರಿಶೀಲಿಸಿದ ಸಂಗತಿಗಳಲ್ಲಿ ಸತ್ಯಾಂಶವಿದ್ದಲ್ಲಿ, ಇಂದು ನಾವು ನಮ್ಮ ಆರ್ಥಿಕ ಮುಗ್ಗಟ್ಟನ್ನು ಬಿಡಿಸಿಕೊಳ್ಳಲು, ನುರಿಯಾಗುತ್ತಿದ್ದ ಸ್ವಾತಂತ್ರ್ಯವನ್ನು ಪುನಃ ಪಡಕೊಳ್ಳಲು ಸಾಮ್ಯವಾದಕ್ಕೇ ಶರಣು ಹೂಡಿಯೆ ಬೇಕೆಂಬುದು ತೀರ ಸಹಜ.

'ಸಾಮ್ಯವಾದ' ಈ ಪದದ ಸಾಮಾನ್ಯ ಅರ್ಥ ಬಹು ಮಸುಕಾಗಿದೆ. ಕೆಲವೇಕರು ಹಲವಾರು ಬಗೆಯಾಗಿ ಅದರ ಸ್ಪಷ್ಟೀಕರಣ ಮಾಡುವರು. ಒಮ್ಮೆ ಇವರ ವಿಷಯವಾಗಿ 'ಪಂಚ್' (Punch) ಪತ್ರಿಕೆ ಹೀಗೆ ಬರೆದಿತ್ತು: "A Scientist suggests dissipating ice-bergs with heat bombs. Personally we think it would be cheaper to land two socialists on the things and let them discuss what socialism really means" (Feb 18 25) ಆದರೆ ಈ ಮಾತು ಬಹಳ ವರ್ಷಗಳ ಹಳೆಯದು. ಇಂದು ನಾವು ಸಾಮ್ಯವಾದದ ರೂಪರೇಷೆಯನ್ನು ಶಾಸ್ತ್ರೀಯವಾಗಿ ಹೀಗೆ ಕೊಡಬಹುದು:

ಸಾಮ್ಯವಾದವನ್ನವಲಂಬಿಸಿದ ಸಮಾಜವನ್ನು ಜಮೀನಿನ ಮೇಲೆ-ಉತ್ಪತ್ತಿ ದ್ರವ್ಯಗಳ ಮೇಲೆ—ಖಾಸಗೀ ಸತ್ತೆ ಯಾವ ಬಗೆಯಿಂದೂ ಇರಲಾರದು. ಇನ್ನು ಸಮಾಜವೊತ್ತು; ವ್ಯಕ್ತಿಯ ಅಸ್ತಿಯಲ್ಲ. ಆಲ್ಲವೆ ಉತ್ಪತ್ತಿ 'ಲಾಭಕ್ಕಾಗಿಯಲ್ಲ;' 'ಮಾನವ ಸತ್ತೆಯ ಕಲ್ಯಾಣಕ್ಕಾಗಿ.' ಇಂತಹ ಸಮಾಜವನ್ನು ಸೃಷ್ಟಿಸುವ ಸಂಚಯಕ್ಕೆ ಎದೆಯಿಲ್ಲ ಆರ್ಥಿಕ ಸ್ವಾತಂತ್ರ್ಯವಿರಲಾರದು. ಒಬ್ಬ ಮನುಷ್ಯ, ಖಾಸಗೀ ವ್ಯಕ್ತಿಯೂ ಇಡೀ ಸಾಮಾಜಿಕ ಜನರನ್ನು ನುಲಾಮುಗಿಮಿಳ್ಳಿಸಿಡುವ ಸ್ಥಿತಿಯಿರಲಾರದು; ಅಲ್ಲವೆ ಜನತೆ ಇಮ್ಮಾಂಡಿಸಿದ ಅನ್ನ ಉಡಲು ಬಟ್ಟೆ ಇಲ್ಲದೆ, ಅಲೆಮಾರಿಯಾಗಿ ಬೀದಿಗೆ ಬೀಳಲಾರದು. ಈ ಎಲ್ಲ ಪೂರ್ವಗಾಮಿಯಾಗಿರುವುದನ್ನು ಸಾಮಾನ್ಯವಾಗಿ ಪೂರ್ತಿಗೊಳಿಸುವುದು. ಈ ಸಮಾಜವಾದಿ ಸಾಮಾಜವನ್ನು 'Sufficiency for all Decent Enjoyment' ಎಂದೆನ್ನಬಹುದು. ಇಂತಹ ಸಮಾಜವನ್ನು ಬಲವಾಗಿ ಪ್ರತಿಪಾದಿಸಿದ ಮಾರ್ಕ್ಸ್ ಉತ್ಪತ್ತಿದ್ರವ್ಯಗಳನ್ನು ಬಂಡವಾಳಿಗರಿಂದ ಕಿತ್ತುಕೊಳ್ಳಬೇಕೆಂದು ಪ್ರತಿಪಾದಿಸಿದ್ದಾನೆ. ಆದರೆ ಅವನ್ನು ಹೇಗೆ ಪಡೆಯಬೇಕೆಂಬ ಧ್ಯೇಯವನ್ನು ಸಮಾಜವಾದಿ ಚಳವಳಿಗೆ ಬಿಟ್ಟಿದ್ದಾನೆ. ಸಮಾಜವಾದಿ ಮೇಲ್ಪಂಕ್ತಿಗೆ ಸಮಾಜವಿಂದ ಬಂಡವಾಳಿಗರ ಶಕ್ತಿಯನ್ನು ವಿಭಿನ್ನವಾಗಿ ಬೆಳೆಯುವುದಿಲ್ಲವೆಂದು, ಸಾಮಾನ್ಯವಾಗಿ ಮನುಷ್ಯನ ಮಹತ್ವಾಕಾಂಕ್ಷೆಯನ್ನು ವಿನಾಶಕ್ಕೆ ಕಾರಣವೆಂದು ತಾತ್ಸಾರಗಳವರಿಗೆ ತಳಿಸಬಹುದು. ಆದಾಗ್ಯೂ ಮನುಷ್ಯನ ಈ ಸಹಜವಾದ ತನ್ನ ತೆಕ್ಕೆಸಿಲ್ಲಿ ಪ್ರಾಪಂಚಿಕವನ್ನೆಲ್ಲವನ್ನು ಬೇಕಾದ್ದು ಬೆಳೆಯಲು ಅವಕಾಶವಿದೆ. ಯಾವ ಅವಕಾಶ ಸಿಕ್ಕಿದೆ 'ಮಾನವ ವಿಜ್ಞಾನ' ರಾಗಬೇಕಾಗಿಲ್ಲ (More Intelligent than Human).

ಇಷ್ಟೆಲ್ಲ ಬಹು ಪ್ರಮುಖವಾದ ವಿಚಾರ ಇದರ ಜೊತೆ ಸಮಾಜವನ್ನು ಕಟ್ಟುವ ಬಗೆ ಹೇಗೆ? ಇದೇ ಮುಖ್ಯ ಪ್ರಶ್ನೆ; ಬಹು ವಾಪಕ್ಯವಾದ ಸಮಸ್ಯೆ, ಸ್ಪಷ್ಟವಾಗಿ ಸಾದ್ಯ. ಈ ಪ್ರಶ್ನೆಯ ಉತ್ತರ ಇಷ್ಟೆಯಾಗಿದೆ ಎಂದು ಹೇಳಬಹುದು. ಒಂದು ಸಾಮ್ಯವಾದಿಗಳದು (Socialistic); ಇನ್ನೊಂದು ಸಮಾಜವಾದಿಗಳದು (Communistic). ಇತ್ತೀಚಿನ ಮುಖ್ಯ ಭೇದ ಇಷ್ಟೇ: ಸಾಮ್ಯವಾದಿಗಳು ಪ್ರಜಾಪ್ರಭುತ್ವವನ್ನು ನೆಲೆಗೊಂಡ ರಾಷ್ಟ್ರವಿದ್ದಲ್ಲಿ ಈ ಸಮಾಜವನ್ನು ಮತಪೆಟ್ಟಿಗೆ (Ballot-Box) ಯ ಮುಖಾಂತರ ಸಾಧಿಸಬಹುದು ಎನ್ನುವರು. ತದ್ವಿರುದ್ಧ ಸಮಾಜವಾದಿಗಳು 'ಸಾಮಾನ್ಯವಾದಿ ರಾಜ್ಯದ ನೆರಳಿನಲ್ಲಿ ಪ್ರಜಾಪ್ರಭುತ್ವಕ್ಕೆ ಎಡೆಯೇ ಇರುವುದಿಲ್ಲ; ಆದ್ದರಿಂದ ಮತಪೆಟ್ಟಿಗೆಯು ಸಮಾಜದಿಂದ ಸಾಮ್ಯವಾದ ಸ್ಥಾಪಿಸುವುದು ಪೆಗಲುಗಡಸು' ಎನ್ನುತ್ತಾರೆ. ಅವರೆನ್ನುವಂತೆ ಇಂದು ನಾವು ಸಾಮಾನ್ಯವಾದ ರೀತಿಯಿಂದ ಆಸ್ತಿಯನ್ನು, ಸತ್ತೆಯನ್ನು ವಶಪಡಿಸಿಕೊಂಡು, ಬೇರೆ ಸಮಾಜ ರಚಿಸಲು ಕ್ರಾಂತಿಯೊಂದೇ ದಾರಿ. ಜಗತ್ತಿನ ಯಾವ ಕಾಲದಲ್ಲೂ, ಯಾವ ರಾಷ್ಟ್ರದಲ್ಲೂ, ಸತ್ತೆಯನ್ನು ಕ್ರಾಂತಿಯಿಂದಲ್ಲದೆ ವಶಪಡಿಸಿಕೊಂಡ ಉದಾಹರಣೆಯಿಲ್ಲ. ಮನುಷ್ಯನಿಗೆ ಆಸ್ತಿಯ ಮೇಲಿನ ವ್ಯಾಮೋಹ ಜೀವಕ್ಕಿಂತಲೂ ಹೆಚ್ಚಾಗಿದೆ. ಹೀಗಿದ್ದಾಗ ಬರಿಮಾತಿನಿಂದ, ಸಂಧಾನದಿಂದ ಅವನು ಅದನ್ನು ತ್ಯಜಿಸಲಾರನು. ಅದನ್ನು ಕಸಿದುಕೊಳ್ಳಬೇಕಾಗುವುದು. ಹೀಗೆಂದ ಮಾತ್ರಕ್ಕೆ ಸಾಹುಕಾರೀ ಶಾಹಿಯು ನೆಲೆಗೊಂಡ ರಾಷ್ಟ್ರದಲ್ಲಿ ಯಾವ ಬಗೆಯ ಸಾಮ್ಯವಾದೀ ಸಮಾಜ ಸುಧಾರಣೆಗೂ ಎಡೆಯೇ ಇಲ್ಲವೆಂತಲ್ಲ. ಎಲ್ಲಿಯವರೆಗೆ ತಮ್ಮ ನಿಜವಾದ ಅಧಿಕಾರಕ್ಕೆ ಧಕ್ಕೆ ಬರಲಾರದೋ ಅಲ್ಲಿಯವರೆಗೆ, ಎಲ್ಲ ಸಾಮ್ಯವಾದೀ ವಿಚಾರಗಳನ್ನು ಈ ಸಮಾಜವ್ಯವಸ್ಥೆ ಸಹಿಸಬಲ್ಲದು. ನೀರು ಕುತ್ತಿಗೆಯವರೆಗೆ ಬರುವವರೆಗೆ ಬೀರಬಲ್ಲನ ಕತೆಯೊಳಗಿನ ಮುಂಗ. ಮರಿಯನ್ನು ಹೆಗಲಮೇಲೆ ಎತ್ತಿಕೊಳ್ಳುವುದು; ಆದರೆ ಮೂಗಿನ ಬಳಿಗೆ ಬರತೊಡಗಿದಾಗ ಮಾತ್ರ ಮರಿಯನ್ನೇ ಕಾಲ್ಬುಡದಲ್ಲಿಟ್ಟುಕೊಳ್ಳುವುದು. ತಮ್ಮ ಆಸ್ತಿ ಹೋಗುವ ಪ್ರಸಂಗ ಬಂದಾಗ, ಯಾವ ಧನಿಕನೂ ಜೀವದ ಆಶೆ ತೊರೆದು ಹೋರಾಡಲು ಸಿದ್ಧನಾಗದೆ ಬಿಡನು. ಇದು ಮಾನವಧರ್ಮ. ಇದನ್ನೇ ಸಮಾಜವಾದಿಗಳು ಹೀಗೆ ಸ್ಪಷ್ಟೀಕರಿಸುವರು: 'ನೀರು ನೂರು ಅಂಶ ಉಷ್ಣತೆ ತಗಲುವವರೆಗೂ ನೀರಾಗಿಯೇ ಉಳಿಯುವುದು; ಆದರೆ ಅದು ರೂಪಾಂತರ ಹೊಂದಬೇಕಾದರೆ ಮಾತ್ರ ಕ್ರಾಂತಿ ಅಗತ್ಯ. ಅಂತೆಯೇ ಅದು ಉಗಿಯಾಗುವುದು' ಎಂದು (Mark). ಸಮಾಜವಾದಿ ಸಮಾಜ, ಸಾಹುಕಾರೀ ಸಮಾಜದ ಬೇರೆ ರೂಪವಲ್ಲ; ಅದರ ಗುಣಧರ್ಮವೇ ವಿಶಿಷ್ಟವಾಗಿದೆ, ತೀರ ಭಿನ್ನವಾಗಿದೆ. ಇದು ಕ್ರಾಂತಿಯಿಂದಲ್ಲದೆ ಸಾಧ್ಯವಿಲ್ಲ!

'ಆದರೆ ಇಂದು ಮಾನವತೆ ಇಬ್ಬಣವಾಗಿ ಹಿಂಸಾತ್ಮಕ ಯುದ್ಧವಲ್ಲಿ ತೊಡಗಿತೆಂದರೆ, ಆ ಜ್ವಾಲಾಮುಖಿಯಲ್ಲಿ ಇಂದಿನವರೆಗೆ ಬೆಳೆದು ಬಂದ ಮನುಷ್ಯಜಾತಿಯ ನಾಗರಿಕತೆ, ಸಂಸ್ಕೃತಿ, ಹೇಳಲು ಹೆಸರಿಲ್ಲದಂತೆ ಉರಿದು ಹೋಗುವುದರಲ್ಲಿ ಸಂಶಯವಿಲ್ಲ!' ಹೀಗೆಂದು ಲಾಸ್ಕಿಯವರೇ ತಮ್ಮ ಒಂದು ಪುಸ್ತಕದಲ್ಲಿ ('Democracy in Crisis') ಅಭಿಪ್ರಾಯಪಟ್ಟಿರುವರು. ಆದರೆ ಇಂತಹ ಕ್ರಾಂತಿಯೂಪ ಹೊರತು ನಮ್ಮ ಇಷ್ಟ ಸಮಾಜರಚನೆಯನ್ನು ನಾವು ಸಾಧಿಸಲಾರೆವು; ಮುಲೆತು ನಾರತೊಡಗಿದ ನಾಗರಿಕತೆಯ ಪ್ರವಾಹ ಮುಂದುವರಿಯಲಾರದು. ಈ 'ಚಕ್ರವ್ಯೂಹ ಕೋಟೆ'ಯೊಳಗಿಂದ ಪಾರಾಗುವ ಬಗೆ ಹೇಗೆ? ಈ ಮುಗ್ಗಟ್ಟಿನಿಂದ ಪಾರಾಗಲು ದಾರಿತೋರಿದ ಕೀರ್ತಿ ಭಾರತಕ್ಕೆ, "ಅಹಿಂಸಾಹಿ ಪರಮೋಧರ್ಮಃ" ಎಂಬ ಬೀಜಮಂತ್ರವನ್ನು ಜಗತ್ತಿಗೇ ಸಾರಿದ ಪೂಜ್ಯ ಬಾಪೂಜಿ ಅವರಿಗೆ ಸಲ್ಲುತ್ತದೆ. ಇಂದು ದಲಿತವರ್ಗ ತನ್ನನ್ನು ಹೀರಿ ಹಿಪ್ಪೆಮಾಡುತ್ತಿರುವ, ಕೋಟಿ ಸುತ್ತಿರುವ, ಸಮಾಜಕ್ಕೇ ಶತ್ರುತ್ವ ತೆಗೆದುಕೊಂಡ ಬಂದಾಲಕವನ್ನು ಕಿತ್ತೊಗೆಯಬೇಕಾಗಿದೆ. ಆದರೆ ಅದು ಹಿಂಸಾತ್ಮಕ ಕ್ರಾಂತಿಯಿಂದಲ್ಲ. ಅಹಿಂಸೆಯ ರೀತಿಯಿಂದ. ಉಪೇಯದ ಉಚ್ಚಭಾವ ಉಪಾಯವನ್ನು ಸಕಾರಣನಾಗಿ ಪ್ರತಿವಾದಿಸುತ್ತದೆ— ನಿರ್ದೋಷಗೊಳಿಸು-

(ಉಳಿದ ನಿದು ಪುಟ ನೋಡಿರಿ)

ಯಾರ ಟಿಕ್ಕೆ* ಯಾರಿಗೆ?

(ಸಣ್ಣ ಕತೆ)

ಶ್ರೀ. ನರಸಿಂಹ ಜೋಶಿ ಮುಂಬಯಿ

ಸವಿಯಾದ ಸಂಸಾರದಲ್ಲಿಯೂ ಸಣ್ಣಸಣ್ಣ ಮಾತಿಗಾಗಿ ವಿರಸ ತಲೆದೋರಿ ಸಂಸಾರಗೇಡಿನ ಸಂದರ್ಭಗಳು ಪದಗುಪ್ಪುಪು. ಎಲ್ಲರ ಮನಸ್ಸು ರಾಯುರಂತಪದಾದಲ್ಲಿ, ಇಂದು ಬಿಡುಗಡೆ ಹೊಂದುತ್ತಿರುವ ಅನೇಕ ಸಂಸಾರಗಳು ಬೆರೆತು ಬಾಳಬಹುದು!

ಮನೆಗೆ ಬರುವಷ್ಟರಲ್ಲಿ ಹಾಲಿನ ನೀಲವ್ವ ಬಾಗಿಲಿನಲ್ಲಿ ಕುಳಿತಿದ್ದಳು; ಒಂದುವರೆ ವರ್ಷದ ನಮ್ಮ ಚಿನ್ನನನ್ನು ಬಗಲಲ್ಲಿರಿಸಿಕೊಂಡು "ಸಣ್ಣ ಧನೇರು ಭಾಳ ಗುಲಾಮು ಅದಾರ" ಎಂದು, ನನ್ನಾಕೆಯ ಮುಂದೆ ಮಗುವಿನ ಕೌತುಕ ಮಾಡುತ್ತಿದ್ದಳು. ನೀಲವ್ವ ನನ್ನನ್ನು ನೋಡಿದೊಡನೆಯೆ ಚಿನ್ನನನ್ನು ಬಗಲಿನಿಂದಿಳಿಸಿ, ನನ್ನಾಕೆಯ ಕೈಯಲ್ಲಿ ಕೊಟ್ಟು ಮಾತಿಗೆ ಪ್ರಾರಂಭ ಮಾಡಿದಳು:

"ಮಾನಮ್ಮಿ ಬಂತು ಧನೇರ, ಎಲ್ಲಾ ಕೊಟ್ರು ಜೆಲೋ ಆಗ್ತೈತಿ. ಈಗೆರಡು ವಾರದಿಂದ ಹತ್ತೀಕಾಳು ತಾಡು ಇಲ್ಲದ್ದರಿಂದ, ಎಮ್ಮಿ ಹೈನಾ ಜರಾ ಕಡಿಮಿ ಮಾಡೈತಿ."

"ಆಗಡಿಗಿಯೊಳಗಿಟ್ಟ ಗಂಟು ಹೊರಗ ತೆಗಿಯಬಾರದಽ?" ಎನ್ನುವಷ್ಟರಲ್ಲಿ "ಇದ್ದ ಗಂಟ ಎಲ್ಲಾ ಅವನ ಹೆಣಕ್ಕ ಬಡಿದು ಬಿಟ್ಟಾದರೂ ಇನ್ನೂ ಹುಡಿಗಿನ್ನ ಕರದೊಯ್ಯಲ್ಲ; ಟಿಕ್ಕೇ ಪರತ ಕೊಟ್ರೆನಽ ಕರದೊಯ್ತಾನಂತ ಹೇಳಿ ಹಚಿಗೊಟ್ಟಿದಾನ. ನನ್ನ ಹಿರ್ಯಾ-ಅಂವರಽ ಏನ್ ಮಾಡಾಂವ!—ಸಾಲಗಾರರು ಬಂದು ಮನೀ ಬಾಗಿಲಿನಾಗ ಕುಂಡ್ರಾಣಾ, ಆಬ್ರು ಕಾಯಕೊಳ್ಳೋ ಸಲುವಾಗಿ ಟಿಕ್ಕೇ ಪತ್ತೀ ಬಗದ; ಇನ್ನ ಒಂದಽ ಉಪಾಯ ಐತಿ—ಇದ್ದ ಎಮ್ಮಿನಽನ ಮಾರಿ ಟಿಕ್ಕಿ ಬಿಡಿಸಿಗೊಂಡು ಬಂದು, ಮಗಳ ಅತ್ತೀಮನೀಗಿ ಕಳಸೋದು" ಎಂದು ದುಃಖದಿಂದ ದೀರ್ಘವಾದ ನಿಟ್ಟುಸಿರುಬಿಟ್ಟಳು ನೀಲವ್ವ.

ಕಿಸೆಯಲ್ಲಿಂದ ಹಣ ತೆಗೆದು ನೀಲವ್ವನ ಹಾಲಿನ ಲೆಕ್ಕ ಕೊಟ್ಟೆ. ನೀಲವ್ವ ನನ್ನಿಂದ ಯಾವ ಮಾತನ್ನೂ ಅಪೇಕ್ಷಿಸದೆ ಹೊರಟು ಹೋದಳು.

* * *

ಒಳಗೆ ಬಂದು ಕೋಟು ತೆಗೆದಿಡಬೇಕೆಂದು ಅತ್ತಿತ್ತ ನೋಡಿದೆ. ಅಷ್ಟರಲ್ಲಿ ನನ್ನ ಚಿನ್ನ ಆಳಿಯ ಬಗಲಲ್ಲಿದ್ದುದು ಕಂಡುಬಂತು. ಚಿನ್ನನನ್ನು ಬಗಲಲ್ಲಿ ಎತ್ತಿಕೊಳ್ಳಬೇಕೆಂಬ ಯೋಜನೆಯಿಂದ ಅವಳ ಮುಂದೆ ಹೋಗಿ, ಎರಡೂ ಕೈ ಮುಂದೆಮಾಡಿದೆ. ಆಕೆ ಕೈಸನ್ನೆ ಮಾಡಿ ಹೋಗಬೇಡವೆಂದು ಹೇಳುತ್ತಿದ್ದಳು. "ನನ್ನ ಮಗು ನನ್ನ ಕಡೆಗೆ ಬರಲಿಕ್ಕಿಲ್ಲನ್ನೇ?" ಎಂಬವಳಿಗೆಂದೆ. "ಬರುತ್ತಿದ್ದರೆ ಕರೆಯಿರಿ" ಎಂದಳಾಕೆ. ನಿಕಾವಷ್ಟು ಪ್ರಯತ್ನವಟ್ಟರೂ ಚಿನ್ನ ನನ್ನ ಕಡೆಗೆ ಬರಲಾರದೆ ಅವಳನ್ನೇ ಅಪ್ಪಿಕೊಂಡು ಕುಳಿತ. 'ಸೋಲು ಬಂದಿತಲ್ಲಾ' ಎಂದು ವಿವಂಜನೆಗೊಳಗಾದೆ. ಕಿಸೆಯಲ್ಲಿ ಕೈಹಾಕುವಷ್ಟರಲ್ಲಿ ಬೆಳ್ಳಿಯ ರೂಪಾಯಿ ಕೈಗೆ ದೊರೆಯಿತು. ಉಗುರಿನ ಜೋಲಿಂದ 'ಖಣಲ್' ಎಂದು ಚಿನ್ನನ ಮುಂದೆ ಪುಟಿಹಾರಿಸಿದೆ. ಚಿನ್ನ ಒಂದು ನಿಮಿಷವೂ ಅವಳ ಬಗಲಲ್ಲಿ ಕುಳ್ಳಿರಲಾರದೆ ಹೋದ. ಚಿನ್ನನನ್ನು ಅಪ್ಪಿಕೊಂಡು "ನಮ್ಮ ಚಿನ್ನ ಬಹಳ ಬುದ್ಧಿವಂತ" ಎಂದು ಮುದ್ದಿಟ್ಟೆ. ಆಕೆನಗುಮುಖದಿಂದ ನನ್ನೆಡೆಗೆ ನೋಡಿದರೂ, ನೋಲಿನ ಭಾವ ಆಕೆಯ ಮುಖದ ಮೇಲೆ ಒಡಮೂಡಿತ್ತು.

* * *

ಸಂಜೆಯ ಐದು ಗಂಟೆಯ ಸುಮಾರಿಗೆ ಜಗಲಿ ಕುಡಿದು ಆಳಿ. ಯೊಡನೆ ಹರಟಿ ಮೊತೆಯುತ್ತ ಕುಳಿತಿದ್ದೆ. ಕೊಟ್ಟಿಲಲ್ಲಿ ಚಿನ್ನ ಆಡುತ್ತ ಮಲಗಿದ್ದ. ಅಷ್ಟರಲ್ಲಿ ನೀಲವ್ವನ ಸ್ಮಾರಿ ಬಂದಿತು. ನೀಲವ್ವ ಈಗೇಕೆ ಬಂದಳೆಂಬುದು ನನಗೆ ತಿಳಿಯದಾಯಿತು. ನನ್ನ ಪೆಂಡತಿ ಏನಾದರೂ ಕೆಲಸ ಹೇಳಿರಬಹುದೆಂದು ಮಾತ ನಾಡದೆ ಸುಮ್ಮನೆ ಇದ್ದೆ. ನೀಲವ್ವ ತನ್ನ ಕುಪ್ಪಸದ ಕೋಳಿನಿಂದ ಒಂದು ಲಕ್ಕೋಟಿಯನ್ನು ತೆಗೆದು ನನ್ನ ಮುಂದಿಟ್ಟು "ನೋಡ್ರಿ ಧನೇರ, ಇದೀಗ ಪತ್ರಾ ಹಂಜುವ ಆಳು ಇದನ್ನು ಕೊಟ್ಟು, ನನ್ನ ಹೆಬ್ಬಟ್ಟು ಊರಿಸಿಕೊಂಡು ಹೋಗಿದಾನ; ಇದೇನೈತಿ ಜರಾ ಓದಿ ಹೇಳ್ರಿ! ನನ್ನ ಜನ್ಮದಾಗ ಇದಽ ಹೊದಲನೇ ಸಾರಿ ನೋಡಿದ್ದು" ಎಂದಳು. ಲಕ್ಕೋಟೆ ಒಡೆದು ನೋಡಿದೆ. ಒಳಗಿನ ಮಜಕೂರು ಇಂತಿತ್ತು:

"ನಲ್ಲವ್ವಾ ಕೋಣ ಬಸಲಿಂಗಪ್ಪಾ ಭುಪದಾಳ ಹಲ್ಲೀವಸ್ತಿ ಅರಭಾಂವಿ ಇವಳಿಗೆ:—

ಕೆಳಗೆ ಸಹಿ ಮಾಡಿದವ ಬಸಲಿಂಗಪ್ಪಾ ಇವನು ಈ ಸೋಟೀಸಿನ ಮೂಲಕ ಹೀಗೆ ತಿಳಿಸುವ್ಯಾನಲ್ಲಾ:—ನೀನು ನನ್ನ ಲಗ್ನದ ಹೆಂಡತಿ ಇದ್ದು, ಜೋಡ ವರ್ಷದ ಪಂಚಮಿವರೆಗೆ ನನ್ನ ಕೂಡ ಸುಖದಿಂದ ಬಾಳ್ವೆ ಮಾಡಿಕೊಂಡ ಬಂದಿ. ಆದರೆ ಪಂಚಮಿಗೆ ಇನ್ನ ತೌರೂರಿಗೆ ಹೋಗುವ ಮುಂಡಿ, ನಾನು ನಿನ್ನ ಮೈಮೇಲೆ ಹಾಕಿದ ಬಿಲ್ಲು ಮುಂತಾವ ಆಭರಣಾಗಳನ್ನು ಒಯ್ದಿರುತ್ತೀ. ನಾಲ್ಕಾರು ಸಾರಿ ಕರೆಯಲಿಕ್ಕೆ ಬಂದರೂ ನಾನು ಕೊಟ್ಟ ಆಭರಣಗಳನ್ನು ತೆಗೆದು ಕೊಂಡು ಬರಲಿಕ್ಕೆ ಕಬೂಲ್ ಆಗಿಲ್ಲಾ. ನೀನು ನಿನ್ನ ತಾಯಿಯ ಭುಲತಾಪಿನೆ ಬಿದ್ದು ನಿನ್ನ ಬಾಳುವೆಯನ್ನು ನೀನೇ ಹಾಳುಮಾಡಿ

*ಟಿಕ್ಕೆಯೆಂಬುದು ಉತ್ತರಕರ್ನಾಟಕದಲ್ಲಿಯ ಒಂದು ಕೂದಲ ಅಲಂಕಾರ... ಸಂ.

ಕೊಳ್ಳುತ್ತಲಿರುವೆ. ಇನ್ನು ಮೇಲೆ ನಾನು ಯಾವ ಪಬನ್ನೂ ತೀಲುವದಿಲ್ಲ. ಈ ನೋಟೀಸು ಮುಟ್ಟಿ ಎಂಟು ದಿನಗಳಲ್ಲಿ ನನ್ನ ಆಭರಣಗಳನ್ನು ತೆಗೆದುಕೊಂಡು ಬಂದು ಹೊಲಿನಂತೆ ದುಬದಿಂದ ಪಂಸಾರವಾಡಬೇಕು; ಇಲ್ಲದಿದ್ದರೆ ಕಾಯಿದೇಶೀರ ಇಲಾಖೆ ಜವಾಬ್ದಾರವಾಗುವದು. ಈ ನೋಟೀಸಿನ ಬಗ್ಗೆ ನಿನ್ನ ತಲೆಯಮೇಲೆ ಎಷ್ಟು ಅಂತಾ ತಿಳಿಯಬೇಕು

ಇ ಎ. ಪೆ. ನು. ಬಸಲಿಂಗಪ್ಪ ಗುಪದಾಳ
ಸಾಕ್ಷಿ ಹಲವರ್ ಇವನನು ಅದೆ."

ನೀಲವ್ವನಿಗೆ ಏನು ಹೇಳಬೇಕೆಂಬುದು ತನಗೆ ತಿಳಿಯದಾಯಿತು. ಕೆಲವ ನಿಮಿಷ ಪರ್ಯಂತ ವಿಚಾರಮಾಡುತ್ತ ಕುಳಿತಳು. ನೀಲವ್ವನ ಮುಖದ ಮೇಲಿನ ಭಾವಗಳನ್ನು ನೋಡುತ್ತಿದ್ದ ಬಸಲಿಂಗಪ್ಪನು ಅವಳನ್ನು ಕುರಿತು: "ಮಾನಮ್ಮನಿಗೆ ನಿನ್ನ ಅಳ್ಳಾ ಮಗನ ಪವಾನಂತ ಪತ್ರ ಬರದಾನು; ಆ ಪತ್ರ ಸುಟ್ಟುಬಿಡಲಿಕ್ಕೆ ಕಾರಕೊಂಡು ಹೋಗ ತೇನು ಅಂತ ತಿಳಿಸಿದಾನ" ಮುಂತಾದವುಗಳನ್ನು ನೀಲವ್ವನ ಮರ್ಮ ಭಿನ್ನವಿಯಾಗುವಂತೆ, "ಕಿವಿಗೆ ಮುಸ್ಸಿ ಬಂತು ಘನೇರ ಆಂವಗ" ಎಂದು ಮಾತನಾಡಿ, ಅವನ್ನು ಏನೇನು ಮಾಡ ತಾರೆ? ಎಂದು ತನ್ನ ದೊಡ್ಡತಿಯನ್ನು ಕೇಳಿದಳು. ಆಕೆ ತೊಟ್ಟಿಲ ಕಡೆಗೆ ಕೈಮಾಡಲು ಮಾನಮ್ಮನವರು ತೊಟ್ಟಿಲಲ್ಲಿ ಹಣಿಯುಕ್ಕಿ ನೋಡಿ "ಮುತ್ತಿನಂಥಾ ಮಗ ಪವಾದು" ಎಂದವಳೇ, ಲಕ್ಷ್ಮೀಪಯನ್ನು ಮರಳಿ ತೆಗೆದುಕೊಂಡು ಮನೆಗೆ ಹೊರಟಿದಳು.

* * *

ಮುಂಜಾನೆಯು ಸಾಧಾರಣ ಪಕ್ಕುಗಂಟೆಗೆ ಪಲಕರ್ಣಯನ್ನು ತಲುಪಿದೆ. ಪಾವಿಯಲ್ಲಿ ಪೆಟ್ಟಿಯಾದ ನಾಲ್ಕಾರು ಜನರನ್ನು ಕೇಳಿ, ಕಡೆಗೆ ಬಸಲಿಂಗಪ್ಪನ ಮನೆಗೆ ಬಂದು ಸೇರಿದೆ. ನಾನು ಆರಭಾಂವಿಯಿಂದ ಬಂದದ್ದನ್ನು ಕೇಳಿ ಬಸಲಿಂಗಪ್ಪನು ಚೆನ್ನಾಗಿ ಆದರ ಸತ್ಕಾರ ಮಾಡಿದನು. ಕುಸುವೇಳೆ ವಿಶ್ರಾಂತಿ ಪಡೆದು, ಬಸಲಿಂಗಪ್ಪನಿಗೆ ನನ್ನ ಕೆಲಸದ ಮಧಿತಾರ್ಥವನ್ನು ತಿಳಿಸಿಕೊಟ್ಟೆ. ಬಸಲಿಂಗಪ್ಪನು ಊರಿನ ಕೆಲವು ಜನ ಹಿರಿಯರನ್ನು ಕರೆಯಿಸಿ, ಮಾತಿಗಾರಂಭಿಸಿದ: "ರಾಯರೇ, ನನ್ನ ಎಲ್ಲ ಲಭರಣಗಳು ದೊರಕಿವೆ; ಆದರೆ ನನ್ನತಾಯೀ ಟಿಕ್ಕೆ ಮಾತ್ರ ಇನ್ನೂದೊರೆತಿಲ್ಲ. ಹೋದ ಸಲ ಬಂದಾಗ ಆ ಟಿಕ್ಕೆಯನ್ನು ತೆಗೆದುಕೊಂಡು ಬರು- ವಂತೆ ಹೇಳಿದೆ. ಆದರೆ ಅದಕ್ಕೆ ಉಪಾಯವನ್ನಾಗಲಿ ಉತ್ತರ- ವನ್ನಾಗಲಿ ಅವರು ಹೇಳಲಿಲ್ಲ. ನನ್ನ ತಾಯಿಯು ಟಿಕ್ಕೆಯ ಸಲುವಾಗಿ ಆಗ್ರಹ ಪಡಿಸುತ್ತಿದ್ದುದರಿಂದ ಟಿಕ್ಕೆಯ ಏನಾ ಆಕೆಯನ್ನು ಕರೆತರುವುದು ಸಾಧ್ಯವಿಲ್ಲ."

ನೆರೆದ ಹಿರಿಯರು ಇದಕ್ಕೆ ಹೂಂಗುಟ್ಟಿದರು. ನನ್ನ ಕೈಚೀಲ- ದಲ್ಲಿಯ ಗಂಟನ್ನೊಂದು ಬಿಚ್ಚಿದೆ; ನಾನು ತಂದ ಟಿಕ್ಕೆಯನ್ನು ಹಿರಿಯರ ಮುಂದಿಟ್ಟು "ಹಿರಿಯರೇ ಈ ಟಿಕ್ಕೆಯನ್ನು ಬಸಲಿಂಗಪ್ಪ ಮಲ್ಲವ್ವನವನ್ನು ಕರೆದುಕೊಂಡು ಬಂದು ನುಬಂದ ಬಾಳುವೆ ಮಾಡುವಹಾಗೆ ಕೊಡಬಾರದು. ನಾಳೆ ಬಸಲಿಂಗಪ್ಪನ ಕಡೆ- ಯಿಂದ ತಕರಾರು ಬರಬಾರದೆಂದು ಈ ಟಿಕ್ಕೆಯನ್ನು ನಿಮ ಕೈಗೊಪ್ಪಿಸಿದ್ದೇನೆ; ಇದಕ್ಕೆ ನೀವು ಒಪ್ಪುವಿರಾ?" ಎನ್ನಲು ಹಿರಿಯರು "ಒಳ್ಳೆಯದು" ಎಂದರಲ್ಲದೆ "ಮಾನಮ್ಮನಿಗೆ ಮಲ್ಲಪ್ಪ ಬಸಲಿಂಗಪ್ಪನ ಮನೆಯನ್ನು ಇದ್ದಾಳೆಂದು ತಿಳಿಯಿರಿ!" ಎಂದು ಆಶ್ವಾಸನೆಯನ್ನಿತ್ತರು

* * * *

ಆಂದು ದಸರೆಯ ಹಬ್ಬ. ಊಟ ಮಾಡಿ ನಾನು ತಾಂಬೂಲ ಸೇವನೆ ಮಾಡುತ್ತಿದ್ದೆ. ಜಿನ್ನ ನನ್ನ ಬಳಿಯಲ್ಲೇ ಆಡುತ್ತ ಮಲ- ಗಿದ್ದ. ಮನೆಯಾಕೆ ಕೆಲಸದಲ್ಲಿದ್ದಳು. ಇಷ್ಟರಲ್ಲಿ ನೀಲವ್ವ, ಮಲ್ಲವ್ವ, ಬಸಲಿಂಗಪ್ಪ ಮತ್ತು ಅವನ ಸ್ನೇಹಿತ ಇವರೆಲ್ಲ ಬಂದರು. ಬಸಲಿಂಗಪ್ಪನ ಸ್ನೇಹಿತ ನನ್ನನ್ನು ಕಂಡೊಡನೆ ನಮಸ್ಕಾರ ಮಾಡಿದ. ಬಸಲಿಂಗಪ್ಪನು ಕೂಡ ನಮಸ್ಕಾರ ಮಾಡಿದ. ನೀಲವ್ವ ಆವನಿಬ್ಬರ ಕಡೆಗೂ ನನ್ನ ಕಡೆಗೂ ತಿರುತಿರುಗಿ ನೋಡಿದಳು. ನೀಲವ್ವ ಎಂದಳು: "ರಾಯರ, ಅಳ್ಯಾ-ಮಗಳ ಬನ್ನೀಹಬ್ಬದ ದಿನಾ ನಿಮ್ಮ ಕಡೆಗೆ ಆಶೀರ್ವಾದಕ್ಕಾಗಿ ಕರಕೊಂಡು ಬಂದೀನಿ. ಬನ್ನೀ-ಬಂಗಾರ ಕೊಡೋದಲ್ಲಽನ ನನ್ನ ವತಿಂದ ಈ ಟಿಕ್ಕೇನೂ ಕೊಟ್ಟು ಬಿಡ್ರಿ" ಎಂದು ವಿನಂತಿ ಮಾಡಿಕೊಂಡಳು. ನನ್ನ ಮುಂದಿಟ್ಟ ಟಿಕ್ಕೆಯನ್ನು ಒಂದೆರಡು ಸಾರೆ ಹೊರಹೊರಳಿಸಿ ನೋಡಿದೆ. ಬಸಲಿಂಗಪ್ಪನೂ ಅವನ ಸ್ನೇಹಿತನೂ ನನ್ನೆಡೆಗೆ ನೋಡು- ತ್ತಿದ್ದರು. ಕೂಡಲೆ ಬಸಲಿಂಗಪ್ಪನ ಸ್ನೇಹಿತ ತನ್ನ ಗಂಟಿನ್ನು ಬಿಚ್ಚಿ, ಒಂದು ಬಂಗಾರದ ಟಿಕ್ಕೆಯನ್ನು ಹೊರತೆಗೆದ. ಬಸಲಿಂಗಪ್ಪ ಆ ಟಿಕ್ಕೆಯ ಕಡೆಗೂ ನೀಲವ್ವನ ನನ್ನ ಮುಂದಿಟ್ಟ ಟಿಕ್ಕೆಯ ಕಡೆಗೂ ನೋಡಿ "ರಾಯರೇ, ನೀವು ಕೊಟ್ಟು ಹೋದ ಟಿಕ್ಕೆ ನಮ್ಮದಲ್ಲ; ನನ್ನ ತಾಯಿಯ ಟಿಕ್ಕೆ ನಿಮ್ಮ ಮುಂದೆ ಆದೆ" ಎಂದ.

ಇದೆಲ್ಲವನ್ನೂ ನನ್ನ ಹೆಂಡತಿ ಬಾಗಿಲಲ್ಲಿ ನಿಂತು ನೋಡು- ತ್ತಿದ್ದಳು. ಬನ್ನಿಯನ್ನೂ ನೀಲವ್ವ ಕೊಟ್ಟ ಟಿಕ್ಕೆಯನ್ನೂ ಬಸ- ಲಿಂಗಪ್ಪನ ಕೈಯಲ್ಲಿ ಕೊಟ್ಟು ಮನ್ನಿಸಿದೆ. ಮಲ್ಲವ್ವನ ಕೈಯಲ್ಲಿ ಬರೀ ಬನ್ನಿಯನ್ನಿಟ್ಟೆ. "ಮಲ್ಲವ್ವನಿಗೆ ಬಂಗಾರದಂಥ ಗಂಡ ಇದ್ದಾನೆ; ಬಂಗಾರವೇಕೆ?" ಎಂದು ನೀಲವ್ವನಿಗೆ ನುಡಿದೆ.

"ಉಪಕಾರ ಮಾಡಿದ್ರಿ ಮಹಾರಾಯರ," ಎಂದು ನೀಲವ್ವ ನುಡಿದಳು. ನಾನು ಗೋಣು ಅಲುಗಾಡಿಸಿ "ನಾನೇನು ಉಪಕಾರ ಮಾಡಿದೆ?" ಎಂದು ನನ್ನಾಕೆಯ ಕಡೆಗೆ ನಸ್ಸೆ ಮಾಡಿದೆ. "ಆಕೆಯ ಟಿಕ್ಕೆ; ಅವಳಿಗೆ ಗೊತ್ತಿಲ್ಲದೆ ನಾನು ಒಯ್ದು ಬಸಲಿಂಗಪ್ಪನಿಗೆ ಕೊಟ್ಟು ಬರದಿದ್ದರೆ, ಈ ಮಾತು ಶಕ್ಯವಿರ- ಲಿಲ್ಲ" ಎಂದು ನುಡಿದೆ. ಬಸಲಿಂಗಪ್ಪ ತಾನು ತಂದ ಟಿಕ್ಕೆಯನ್ನು ನನ್ನ ಮುಂದಿಟ್ಟು "ಹೋಗಿ ಬರತೀನವ ರಾಯರ," ಎಂದು ನಮಸ್ಕರಿಸಿ, ನೀಲವ್ವ ಸಮೇತ ಎಲ್ಲರೂ ಹೊರಟುಹೋದರು.

"ನಿನಗೂ ಬಂಗಾರ ಕೊಡುವೆ ಬಾ" ಎಂದು ನನ್ನಾಕೆಯನ್ನು ಕರೆದೆ. ಆಕೆಯ ಟಿಕ್ಕೆಯನ್ನೊಸ್ಸಲ ಬನ್ನಿಯನ್ನೂ ಅವಳ ಕೈಯಲ್ಲಿ ರಿಸಿದೆ. ಆಕೆ ಜಿನ್ನನನ್ನು ಬಗಲಲ್ಲೆತ್ತಿ ಮುದ್ದಿಟ್ಟು "ಇಲ್ಲಿನ ನನ್ನ ಜೀವದ ಬಂಗಾರ" ಎಂದು ನಗುತ್ತ ಹೊರಟುಹೋದಳು.



ಚಿಟ್ಟಗಾಂಗ್ ಕ್ರಾಂತಿವೀರರು

ಮೂಲ ಇಂಗ್ಲಿಷ್ ಲೇಖಕರು ಶ್ರೀಮತಿ ಕಲ್ಪನಾ ದತ್ತ ಅವರು.
ಕನ್ನಡ ಭಾಷಾಂತರಕಾರರು ಶ್ರೀಮತಿ ಲಲಿತಾ ಮಂಗಳೂರು ಅವರು.

೧೯೩೦ನೆಯ ಇಸ್ವಿಯಲ್ಲಿ, ಬಂಗಾಲ ಪ್ರಾಂತದ ಚಿತ್ತಗಾಂಗ್ ಡಿಸ್ಟ್ರಿಕ್ಟಿನಲ್ಲಿ ನಡೆದ ಭೀಕರ ಕ್ರಾಂತಿಯ ಕತೆಯೂ ಪ್ರಮುಖ ಕ್ರಾಂತಿಕಾರರ ಪರಿಚಯಗಳೂ ಇದರಲ್ಲಿ ಸಂಗ್ರಹಗೊಂಡಿವೆ.

'ಸಾವಿರಾರು ವರ್ಷದ ಪರಾಧೀನತೆ ಭಾರತೀಯರನ್ನು ಪೇಡಿಗಳನ್ನಾಗಿಸಿದೆ' ಎನ್ನುವವರೂ 'ಭಾರತದಿಂದ ಕ್ಷಾತ್ರವೃತ್ತಿ ಪೊರಟು ಹೋಗಿದೆ' ಎನ್ನುವವರೂ ಈ ಪುಸ್ತಕವನ್ನು ಅವಶ್ಯವಾಗಿ ಓದಿ, ಭಾರತೀಯರ ಶಕ್ತಿ-ಸಾಹಸಗಳು ಅವಿರತವಾಗಿ ಜೀವಂತವಾಗಿರುವುವೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಇದರ ಒಂದೊಂದು ಪುಟವೂ ಓದುಗನಲ್ಲಿ ದೇಶಾಭಿಮಾನವನ್ನು ಪ್ರಜ್ವೋದಿಸುವುದು. ಭಾರತದ ಪರಾಧೀನಜೀವನದ ಬಗೆಗೆ ಸಂತಾಪವನ್ನು ಹುಟ್ಟಿಸುವುದು. ಸ್ವಾತಂತ್ರ್ಯ ಪಡೆಯುವ ಕಾರ್ಯಕ್ಕಾಗಿ ನಿರ್ಭೀತರಾಗಿ ನಡುಬಿಗಿಯುವುದೇ ಪ್ರತಿಯೊಬ್ಬ ತರುಣನ ಕರ್ತವ್ಯವೆಂಬ ಅರಿವನ್ನು ಮೂಡು ಮಾಡುವುದು.

ಬಂಗಾಲದ ಕ್ರಾಂತಿಕಾರರ ಬಳಗದ ಅಂದಿನ ಗುರಿಯೆಂದರೆ' ತಮ್ಮ ಅಸಮಾಧಾನವನ್ನು ಪ್ರಕಟಗೊಳಿಸುವುದಕ್ಕಾಗಿ, ಅಲ್ಲಿಯ ವಿದೇಶೀಯ ಅಧಿಕಾರಿಗಳನ್ನೂ ಅವರ ಸಂಬಂಧಿಕರನ್ನೂ ಕೊಂದುಹಾಕಬೇಕು—ಎಂಬುದಾಗಿತ್ತು. ಹೀಗೆ ಮಾಡುವುದರಿಂದ ತಮ್ಮ ಜನರಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ್ಯದ ಸಂಬಂಧಗಳನ್ನು ಹುಟ್ಟಿಸಲಿಕ್ಕೆ ಅನುಕೂಲವಾಗುವುದೆಂದು. ಆ ಕ್ರಾಂತಿಕಾರ ತರುಣ-ತರುಣಿಯರ ದೃಢವಾದ ಭಾವನೆಯಾಗಿತ್ತು. ಅದಕ್ಕಾಗಿ ಕ್ರಾಂತಿಕಾರಕ ಸಂಸ್ಥೆಯನ್ನು ಸಂಘಟಿಸಬೇಕು. ಸಂಘಟನೆಗಾಗಿ ಮದ್ದು ಬೇಕು. ಉದ್ದೇಶಸಾಧನೆಗಾಗಿ ಶಸ್ತ್ರಾಸ್ತ್ರಗಳು ಬೇಕು. ಇಂತಹ ಶಸ್ತ್ರಾಸ್ತ್ರದ ಸಂಪಾದನೆಗಾಗಿಯೆ ತಾ. ೧೮-೪-೧೯೩೦ನೆಯ ದಿನ ಇವರು, ಚಿತ್ತಗಾಂಗಿನ ಶಸ್ತ್ರಾಗಾರದ ಮೇಲೆ ದಾಳಿ ಮಾಡಿ ಕೈವಶ ಮಾಡಿಕೊಂಡರು. ತಾ. ೨೨-೪-೧೯೩೦ನೆಯ ದಿನ ಸುಸಜ್ಜಿತವಾದ ಬ್ರಿಟಿಷ್ ದಳದೊಂದಿಗೆ ಜಲಾಲಬಾದ್ ಬೆಟ್ಟದ ಮೇಲೆದ್ದು ಎದುರಿಸಿ, ಯುದ್ಧವನ್ನೇ ಮಾಡಿದರು. ಎದುರು ಪಕ್ಷದ ೧೦೦-೧೫೦ ಜನರನ್ನು ಕೊಂದರು; ತಮ್ಮಲ್ಲಿಯ ೧೫ ಜನ ಸ್ವಾತಂತ್ರ್ಯ ವೀರರನ್ನು ಕಳೆದುಕೊಂಡರು. ಇದರ ಮುಂದಿನ ಒಂದೊಂದು ಘಟನೆಗಳೂ ಕಲ್ಪಿತ ಕತೆಯೆನಿಸುವಷ್ಟು ರೋಮಹರ್ಷಕವಾಗಿವೆ.

ಈ ಕ್ರಾಂತಿಕಾರರ ಗುಂಪಿನ ಹಿರಿಯ **ಸೂರ್ಯಸೇನ.** ಅವನನ್ನು ಎಲ್ಲರೂ 'ಮಾಸ್ಟರ್‌ದಾ' ಎಂದು ಕರೆಯುವರು. **ಅನಂತಸಿಂಗ್, ಗಣೇಶಘೋಷ** ಎಂಬವರು ಈ ಚಳವಳಿಯ ಎರಡು ಕಣ್ಣುಗಳಿದ್ದಂತೆ. ಮೊದಲನೆಯವ ಭಾವಿಕನಾದ ಕರ್ಮವೀರ; ಎರಡನೆಯವನು ಭಾವುಕನಾದ ಬುದ್ಧಿವೀರ. ಸಾಹಸವೀರನಾದ **ಅಂಬಿಕಾಚಕ್ರವರ್ತಿ**ಯ ಕತೆಗಳು ಪವಾಡದಂತೆ ತೋರುವುವು. **ಜೀವನಘೋಷಾಲ, ಅನಂತಸಿಂಹ, ನಂದಿ, ರಾಮಕೃಷ್ಣ ವಿಶ್ವಾಸ, ೧೪ ವರ್ಷದ ಬಾಲವೀರ ಹರಿಪದ ಭಟ್ಟಾಚಾರ್ಯ** ಇವರೆಲ್ಲ ಜೀವದಾಶೆಯಿಲ್ಲದೆ ಹೋರಾಡಿ, ಸ್ವಾತಂತ್ರ್ಯಕ್ಕಾಗಿ ಅತ್ಯದ ಬಲಿಯನ್ನು ತೆತ್ತವರು.

ಬಡವಿಯೂ ಮುದುಕಿಯೂ ಅಸಂಸ್ಕೃತಳೂ ಆದ **ಸಾವಿತ್ರಿ** ದೇವಿಯ ಸೆರೆಮನೆಯ ಕರುಣಕತೆ ಓದುಗರ ಕಣ್ಣಲ್ಲಿ ನೀರು ತರಿಸಬಲ್ಲದಾದರೆ, ಅವಳ ದೇಶಪ್ರೀತಿಯ ಮಾತುಗಳು ಮೈಗೆ ಜುಮ್ಮುತರಿಸಿ ಹುರುಪನ್ನು ಕೊಡಬಲ್ಲುವು. ತಾನು, ಮಗಳು, ಮಗ ಎಲ್ಲರೂ ಸೆರೆಮನೆಯಲ್ಲಿ. ನೆಯ ವರ್ಗದ ಸೆರೆಯಾಳಾಗಿದ್ದ ಮಗ ಎಣ್ಣೆಗಾಣದ ಕೆಲಸಮಾಡಿ ರೋಗದ ಬಲೆಯಲ್ಲಿ ಬಿದ್ದ, ಆದಕ್ಕೇ ತುತ್ತಾದ. ಆದರೂ ಆ ವೀರ ಮಹಿಳೆಯಲ್ಲಿಯ ಕ್ರಾಂತಿನಿಷ್ಠೆ ಅಚಲವಾಗಿದ್ದಿತು. ಇದುವರೆಗೂ ಬದುಕಿದ್ದಾಳೆ ಈ ಆಧುನಿಕ ಕಾಲದ ಕುಂತಿದೇವಿ.

ಸುಹಾಸಿನಿ ಗಂಗುಲಿ ಎಂಬ ವಿದುಷಿಯು ಸ್ವಾತಂತ್ರ್ಯ ನಿಷ್ಠೆ, ಅದಕ್ಕಾಗಿ ತನ್ನ ಆಯುಷ್ಯದ ಒಂದೊಂದು ಕ್ಷಣವನ್ನೂ ಪ್ರಯೋಜನವಾಗಿಸಿದ ರೀತಿ ಇವುಗಳನ್ನು ನೋಡಿದಾಗ, ನಮಗೆ 'ಇನ್ನೆಯ ಶತಮಾನದ ಭಾರತೀಯ ಮಹಿಳೆಯೇ ಇವಳು?' ಎಂದು ಆಶ್ಚರ್ಯದಿಂದ ಉದ್ಗಾರ ತೆಗೆಯಬೇಕಾಗುವುದು.

ಪ್ರೀತಿ **ವೆದ್ದಾದರ** ಎಂಬ ತರುಣಿಯ ಆತ್ಮತ್ಯಾಗದ ಕತೆಯಂತೂ ಹೆಣದಲ್ಲಿ ಮರಳಿ ಜೀವ ತರಿಸುವಂತಹದು. ಬಡ ಪೋಸ್ಟ್ ಮಾಸ್ತರನ ಮಗಳೊಬ್ಬಳೀಕೆ. ತಂಜೆ-ತಾಯಿಗಳಿಗೆ ಒಬ್ಬಳೇ ಒಬ್ಬಳು ಮಗಳು. ಎಂಟು ಜನ ಸಹಕಾರಿಗಳೊಂದಿಗೆ ಪಹರ್‌ಥಲಿ ರೇಲ್ವೇ ಸ್ಟೇಷನ್ನಿನ ಯುರೋಪಿಯನ್ ಕ್ಲಬ್ಬಿನ ಮೇಲೆ ದಾಳಿ ಮಾಡಿದಳು. ೧೫ ನಿಮಿಷಗಳಲ್ಲಿ ಮುದುಪೆಯು ಮುಂಟಾದಂತಿದ್ದ ಆ ಕ್ಲಬ್ಬಿನ ಪ್ರದೇಶಕ್ಕೆ ಸ್ಮಶಾನದ ರುದ್ರಸೌಂದರ್ಯವನ್ನು ತಂದು ತೋರಿಸಿದಳು. ಪೋಲೀಸರ ಕೈಗೆ ಸಿಕ್ಕಬಾರದೆಂಬ ಉದ್ದೇಶದಿಂದ ಅವಳು ಅಲ್ಲಿಯೆ ಅಂದೇ ವಿಷ ಕುಡಿದು ನತ್ತುಹೋದಳು.

ಒಬ್ಬೊಬ್ಬರ ಚರಿತ್ರವೂ ಒಂದೊಂದು ಘಟನೆಯೂ ಕಲ್ಪಿತವೆನಿಸುವಷ್ಟು ಅದ್ಭುತವಾಗಿವೆ. ಗುರಿಯ ಸಾಧನೆಗಾಗಿ ಜೀವದ ಪರಿವೆಯಿಲ್ಲದೆ ಹೋರಾಡುವವರ ಪರಿಚಯವಿಲ್ಲದ ನಮಗೆ ಇವೆಲ್ಲ ಕಟ್ಟುಕತೆಯಂತೆ ಎನಿಸಬಹುದು; ಆದರೆ ಇವರಲ್ಲಿಯ ಒಬ್ಬನೂ ಮಾತು ಕಲ್ಪನೆಯಲ್ಲ. ಕ್ರಾಂತಿಕಾರಿಗಳೆಲ್ಲರೂ ಇದ್ದು ಎಲ್ಲವನ್ನೂ ಕಣ್ಣಾರೆ ಕಂಡ ಕಲ್ಪನಾ ಪತ್ರ ಇವರು ಬರೆದ ಸತ್ಯಕಥೆಯಿದು. ಭಾರತದ ಸ್ವಾತಂತ್ರ್ಯ ಯುದ್ಧದ ಇತಿಹಾಸದಲ್ಲಿಯ ಕೋಮಾಂಜಕಾರಿಯಾದ ಅನ್ಯಾಯವೊಂದಿದು. ಎಲ್ಲರೂ ಓದಲೇಕಾದ ಈ ಗ್ರಂಥವನ್ನು ಒಳ್ಳೆಯ ರೀತಿಯಿಂದ ಕನ್ನಡಿಸಿದ ಲಲಿತಾ ಅವರನ್ನೂ, ಪ್ರಕಟಿಸಿದ ಜನತಾ ಸಾಹಿತ್ಯದ ಸಂಚಾಲಕರನ್ನೂ ನಮನವಾರ್ಪ ಅಭಿನಂದಿಸುವೆವು.

—ಬಿ. ಟಿ. ಎಸ್. ರಾವ್

೩೨. ಅಂಬಿಕಾತನಯದತ್ತ

(ಕವನ ಸಂಗ್ರಹ)

ಬೇರೆ ಬೇರೆ ಕವಿಗಳ ಕವನಗಳನ್ನು ಸಂಕಲಿಸಿ, ಧಾರವಾಡದ ಸಾಧನ ಮುದ್ರಣಾಲಯದವರು ಪ್ರಕಟಿಸಿದ್ದಾರೆ. ಬೆಲೆ ೩-೦-೦

ಇದರಲ್ಲಿ ೯ ಜನ ಕವಿಗಳ ಒಂದೊಂದು ಕೃತಿಗಳು ಸಂಗ್ರಹಗೊಂಡಿವೆ. ಎಲ್ಲವೂ ಕನ್ನಡ ಕವಿವರ 'ಅಂಬಿಕಾತನಯದತ್ತ'ರನ್ನು ಕುರಿತು ಬರೆದುವು. 'ಗೀತಾಪ್ರಿಯ'ರ 'ಕವಿ ಅಂಬಿಕಾತನಯದತ್ತ' ಎಂಬುದೂ 'ವಿನಾಯಕ'ರ 'ಕನ್ನಡ ಕುಲದ ಗಂಧರ್ವ' ಎಂಬುದೂ ದೀರ್ಘಕವನಗಳಾಗಿವೆ. 'ಶ್ರೀನಿವಾಸ' ಅ ಮೈಂಬಳ ಶಂಕರನಾರಾಯಣರವ ಅಷ್ಟಷಟ್ಪದಿಗಳು. ಮಿಕ್ಕುವೆಲ್ಲ ಚಿಕ್ಕ ಕವಿತೆಗಳು.

ಕವಿಯ ಮೇಲ್ಮೈಯನ್ನೇ ಹೇಳಲಿಕ್ಕೆ ಮುಂದೆ ಬಂದುವು ಇಲ್ಲಿಯ ಎಲ್ಲ ಕವನಗಳು. ಒಬ್ಬಿಬ್ಬರು ಕವಿಯ ಗೆಳೆಯರು; ಇಬ್ಬರು ಮೂವರು ಕವಿಯನ್ನು ಗುರುವೆಂದು ಭಾವಿಸಿದ ವಿದ್ಯಾರ್ಥಿಗಳು; ಮತ್ತೆ ಇಬ್ಬರು ಮೂವರು ಕವಿಯ ರಸಕೃತಿಗಳನ್ನು ಸವಿದು ಮೆಚ್ಚಿದ ರಸಿಕರು. ಬಹಳ ಜನರು ಕವಿಗೆ ಮಾಹಾತ್ಮ್ಯದ ತೊಡಿಗೆ ತೊಡಿಸುವ ಮಾತುಗಳನ್ನೇ ಹೆಣೆದಿರುವರು. ವ್ಯಕ್ತಿಯ ಕೃತಿಯ ಪರಿಚಾಸುವನ್ನು ಕಾಣುವ ಸೂಕ್ಷ್ಮದೃಷ್ಟಿಯಿಲ್ಲದ ವ್ಯಾವಹಾರಿಕ ಸ್ಥೂಲದೃಷ್ಟಿಯವರಿಗೆ ಇಲ್ಲಿಯ ಕವಿತೆಗಳು ಕೇವಲ ಬಣ್ಣಗಾರಿಕೆಯ ಮಾತುಗಳ ಮಾಲೆಗಳಾಗಿ ಕಾಣಬಹುದು. ವರ್ಣಿತ ವ್ಯಕ್ತಿಯ ವಿಷಯದಲ್ಲಿ ಶ್ರದ್ಧೆಯಿರದವರಿಗೂ ಇವು ಸುರುಳಿಲ್ಲದ ಹಾಡುಗಳಾಗಿ ತೋರಬಹುದು. ಆದರೆ 'ಅಂಬಿಕಾತನಯದತ್ತ'ರ ಬಗೆಗೆ ಪ್ರೀತಿ, ಆದರ, ವಿಶ್ವಾಸ, ಶ್ರದ್ಧೆಗಳಿದ್ದ ಜನರು ಈ ಕವಿತೆಗಳನ್ನೋದಿ ಆನಂದ ಹೊಂದಬಹುದು.

ವಿಭೂತಿ ಪೂಜೆಯ ಮಾತು ಸಾರ್ವಕಾಲಿಕವಾಗದು; ಸಾರ್ವದೇಶಿಕವಾಗದು; ಸರ್ವಜನತೆಯದಾಗದು. ಆದುದರಿಂದಲೆ ಇಲ್ಲಿಯ ಶಿಷ್ಯಮಿತ್ರ ಕವಿಗಳಾದ 'ಗೀತಾಪ್ರಿಯ' 'ವಿನಾಯಕ' ಇವರ ಕವಿಯ ಚರಿತ್ರಪೂರಿತ ಕವನಗಳು, ಎಲ್ಲರಿಂದ ಸಮನಾದ ಸೌಹಾರ್ದವನ್ನು ಪಡೆಯಲಾರವು. ಶ್ರೀನಿವಾಸರ ಅಷ್ಟಷಟ್ಪದಿ ಹೊಸದೇನೂ ಅಲ್ಲ; ಈ ಹೊದಲೆ 'ಮುಲಾರ'ದಲ್ಲಿ ಪ್ರಕಟವಾದುದು. ಕವಿಯ ರಸಸೃಷ್ಟಿಯ ಸಹಜತೆಯ ಬಣ್ಣನೆಯೆ ಇದರಲ್ಲಿರುವುದರಿಂದ, ಬಹುಜನರ ಮೆಚ್ಚಿಕೆಯನ್ನು ಪಡೆಯಬಲ್ಲದು. ಇದರಂತೆಯೆ 'ಗೀತಗಾರುಡ' 'ಉಡುಗೊರೆ' 'ಜೇಂಪ್ರಿ'ಕವನಗಳೂ ಕವಿಯ ಕವಿತ್ವಗುಣವನ್ನೆ ಎತ್ತಿ ಹೇಳುವುದರಿಂದ ಬಹುಜನರಿಂದ ಸಮಾನವಾದ ಸ್ವಾಗತವನ್ನು ಪಡೆಯಬಹುದು. 'ನೂರುಕಾಲ ಬಾಳು' 'ಚಿರಕಾಲ ಬಾಳಿ!' ಕವಿತೆಗಳು ಮಂಗಲಸಮಯದ ಹಾರೈಕೆಗಳು. ಕಲ್ಪನೆ-ರಸ-ಸೌಂದರ್ಯಗಳಿಗಿಂತ ಭಾವನೆಗೇ ಇಲ್ಲಿ ಮಹತ್ವ ಹೆಚ್ಚು. ಹಾಡಿತೋರಿಸಿದಾಗ ಜನರು ಹಾಡಿಗಾಗಿ ತಲೆಹಾಕಬಹುದು— ದಾಸರ ಪದಗಳಂತೆ.

ಹೊದಿಕೆಯ ಪುಟದ ಮೇಲಿದ್ದ ಕವಿಯ ರೇಖಾಚಿತ್ರವು ಸುಂದರವಾಗಿದೆ. ಸಂಪಾದಕರಾದ ಶ್ರೀ. ಶೇ. ಗೋ. ಕುಲಕರ್ಣಿಯವರು ಕವನಗಳನ್ನೆಲ್ಲ ಕೂಡಿಸಿ, ಇಷ್ಟೊಂದು ಒಳ್ಳೆಯ ರೀತಿಯಿಂದ ಅಚ್ಚುಹಾಕಿಸಿ ಪ್ರಕಟಿಸಿದುದು, 'ಅಂಬಿಕಾತನಯದತ್ತ'ರ ವಿಷಯದಲ್ಲಿ ಇರಿಸಿಕೊಂಡಿರುವ ಆದರ-ವಿಶ್ವಾಸಗಳಿಗೆ ಸ್ಪಷ್ಟವಾದ ಪ್ರಮಾಣವಾಗಿದೆ.

—ಕುಂಜವಿಹಾರಿ.

೩೩. ಭಾರತೀಯ ರಾಜ್ಯಶಾಸನದ ಬೆಳವಣಿಗೆ

ಬರೆದವರು : ಕೆ. ಎಫ್. ಪಾಟೀಲ, ಎಂ. ಎಲ್. ಎ.
ಪ್ರಕಾಶಕರು : ಬೀ. ಬಿ. ಸಂಕೇತ್ಕರ, ಸರಸ್ವತೀ ಪುಸ್ತಕ ಭಾಂಡಾರ, ಗದಗ.

ಶ್ರೀ. ಪಾಟೀಲರು ಪಲವು ಪುಸ್ತಕಗಳನ್ನು ಬರೆದು ಈಗಾಗಲೆ ಕನ್ನಡ ಓದುಗರ ಪ್ರೀತಿಗೆ ಪಾತ್ರರಾಗಿದ್ದಾರೆ. 'ಶೂರ ಸುಭಾಸರ ಜೀವನ ಚರಿತ್ರೆ' 'ಮಹಾತ್ಮಾ ಗಾಂಧಿಯವರ ತತ್ತ್ವಜ್ಞೋಧಾಭ್ಯಾಸ,' 'ಗ್ರಾಮೋದ್ಯೋಗ,' 'ಅಸ್ಪೃಶ್ಯತಾ ನಿವಾರಣೆ' ಮುಂತಾದ ಬೇರೆ ಬೇರೆ ವಿಷಯಗಳ ಮೇಲೆ ಇವರ ವಿಚಾರಪ್ರವಾಹವು ಹಲವಾರು ಮುಖದಿಂದ ಹರಿದಿರುವಂತೆ ಕಂಡುಬರುತ್ತದೆ. 'ಬಹಿರಂಗ'ದ ಬಂಡಾಯದ ಸಮಯಕ್ಕೆ ೩೬ ತಿಂಗಳು ಕಾರಾಗೃಹದಲ್ಲಿರುವಾಗ ಕಲೆಹಾಕಿದ ವಿಚಾರಗಳನ್ನು, ಹಳ್ಳಿಯ ಜನಸಾಮಾನ್ಯರಾದ ಅನೇಕ ಗೆಳೆಯರಿಗೆ ಉಪಯೋಗವಾಗುವಂತೆ' ಸರಿಯಾಗಿ ಸೇರಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ.

ವ್ಯಾಪಾರಕ್ಕೆಂದು ಬಂದ ಬ್ರಿಟಿಶರು ರಾಜ್ಯವಾಳುವ 'ಧಣಿಗಳು' ಹೇಗಾದರು— ತಕ್ಕಡಿಯನ್ನು ತಿರಸ್ಕರಿಸಿ ಖಡ್ಗದ ಆಶ್ರಯವನ್ನು ಹೇಗೆ ಹೊಂದಿದರು— ಹಿಂದುಗಳಲ್ಲಿಯದಂತೆ ಹಿಂದುಸ್ತಾನದ ಹಣವನ್ನು ಹೇಗೆ ತೆಗೆದುಕೊಳ್ಳುತ್ತಿದ್ದರು, ರಾಜ್ಯಗಳನ್ನು ಕಸಿದುಕೊಂಡು ತಮ್ಮ 'ಸಾಮ್ರಾಜ್ಯ'ವನ್ನು

ಹೇಗೆ ಬೆಳಸಿಕೊಳ್ಳುತ್ತಿದ್ದರು— ಹಾಗೆ ಮಾಡಲು ಆಗಾಗ ಅವಶ್ಯವೆಂದು ಕಂಡುಬಂದ ಕಟ್ಟಳೆಗಳನ್ನು ಹೇಗೆ ಪಾಸು ಮಾಡಿಕೊಳ್ಳುತ್ತಿದ್ದರು— ಬರುಬರುತ್ತ ಹೇಗೆ ಆ ಕಟ್ಟಳೆಗಳು ಮಂಜಿನಂತೆ ದೂರವಾಗತೊಡಗಿದುವು— ಜನಜಾಗೃತಿ ಯಾವ ಬಗೆಯಾಗಿ ಬೆಳೆಯುತ್ತಾ ಬ್ರಿಟಿಶರಿಗೆ ಹಿಂದುಸ್ತಾನದಿಂದ 'ತೊಲಗಿ' ಎಂದು ಹೇಳುವವರೆಗೂ ಹೇಗೆ ಸಂದರ್ಭ ಬಂದಿತು?— ಇದೆಲ್ಲವನ್ನು ಕೂಲಂಕಷವಾಗಿ ಅಭ್ಯಸಿಸಿ, ಒಂದೊಂದು ಸಲ 'ಸಾಹೇಬರ' ಅವತರಣಗಳನ್ನೇ ಕೇಳಿ, ಅವುಗಳಲ್ಲಿ ಹುದುಗಿಕೊಂಡ ಗರ್ಭಿತಾರ್ಥವನ್ನು ಹೊರಗೆಡಹಲು ಹವಣಿಸಿದ್ದಾರೆ.

ಬ್ರಿಟಿಶರು ಇಲ್ಲಿ ಮಾಡಿದ ವ್ಯಾಪಾರ(!)ಸುಲಿಗೆಗಳು, ದಬ್ಬಾಳಿಕೆ, ಯುದ್ಧ, ಕ್ರೂರಕೊಲೆ, ಕುಹಕತನ, ಕುಟಿಲನೀತಿ— ಇವೆಲ್ಲವುಗಳನ್ನು ಅರಿತರೆ, ಯಾವ ಭಾರತೀಯನಿಗೆ ನೆತ್ತರ ಕಾಯದೆ ಇರುವುದು? ಯಾವ ರಾಷ್ಟ್ರೀಯನಿಗೆ ಸಿಟ್ಟು ಬರಲಿಕ್ಕಿಲ್ಲ? ಶ್ರೀ. ಪಾಟೀಲರು ಅಂತಹ ಎಷ್ಟೋ ಸಂಗತಿಗಳನ್ನು ಬಯಲಿಗೆಳೆದಿದ್ದಾರೆ. ಅಮೃತಸರದ ದುರಂತವನ್ನು ಓದಿದರೆ ಪಿತ್ತ ನೆತ್ತಿಗೇರದಿರದು. 'ಅಯ್ಯೋ! ಏನೇನು ಮಾಡಿದ್ದಾರಪ್ಪಾ, ನಮ್ಮ ಜನಕ್ಕೆ' ಎಂದು ಪ್ರತಿಯೊಬ್ಬ ಭಾರತೀಯನಿಗೆ ಎನ್ನಿಸುವುದು. 'Breathes there a man with soul so dead' ಎಂದು ಕೇಳಬಹುದು. ಈ ಪುಸ್ತಕದಲ್ಲಿ ಅಂತಹ ಸನ್ನಿವೇಶಗಳು ಹಲವಾರು ಮಿಂಚಿಹೋಗಿವೆ.

ಬ್ರಿಟಿಶರು ತಮ್ಮ ಸುಖ-ಸೌಕರ್ಯಕ್ಕಾಗಿ ಆಗಾಗ ಹಿಂದೀಯರ ಸಲಹೆ ಇಲ್ಲದಲೆ ಪಾಸುಮಾಡಿಕೊಂಡ ಕಾಯ್ದೆಗಳನ್ನು, ತಮಗಿದ್ದ ಕಾಯಿದೆಜ್ಞಾನದಿಂದ ಪರೀಕ್ಷಿಸಿ, ಅವುಗಳಲ್ಲಿದ್ದ ಕುಟಿಲನೀತಿಯನ್ನು— ಬಡಕವಾಗಿದ್ದ ಗುಟ್ಟನ್ನ ಶ್ರೀ. ಪಾಟೀಲರು ಒಳ್ಳೆ ಜಾಣ್ಮೆಯಿಂದ ಹೊರಗೆಡಹಿದ್ದಾರೆ. ರೆಗ್ಯುಲೇಟಿಂಗ್ ಆಕ್ಟ್‌ನಿಂದ ಪ್ರಾರಂಭಿಸಿ ಇಂದಿನ ವರೆಗಾದ ಕಟ್ಟಳೆಗಳನ್ನು ಏವರಿಸಿ, ಅವುಗಳ ತೊಡಕುಗಳನ್ನು ಮಾರ್ಮಿಕವಾಗಿ ತೋರ್ಪಡಿಸಿದ್ದಾರೆ.

ಶ್ರೀ. ಪಾಟೀಲರ ವಿಷಯನಿರೂಪಣೆಯು ವಿಧಾನವಾದರೂ ಸೊಗಸಾಗಿದೆ. ರಾಜ್ಯದಾಡಳಿತದಂತಹ ವಿಷಯ, ಕಷ್ಟ-ಕಾದಂಬರಿಗಳನ್ನು ಓದುವ ಜನದ ಮನವನ್ನು ಹಿಡಿಯದು; ಆದರೆ ಶ್ರೀ. ಪಾಟೀಲರ ಶೈಲಿಕೆಯು ತಲೆಬೇಸರು ಹುಟ್ಟಿಸುವುದಿಲ್ಲ. 'ಅರಿತುಕೊಳ್ಳಬೇಕು' ಎಂಬ ಆಶೆಮಾತ್ರ ಬೇಕು. ವಿಷಯದ ಪರಿಚಯವಿದ್ದವರಿಗೆ ಆಷ್ಟೊಂದು ಹಿಡಿಯದಿದ್ದರೂ, ಶ್ರೀಯುತ ಪಾಟೀಲರು ಹೇಳುವಂತೆ 'ಹಳ್ಳಿಯ ಜನಸಾಮಾನ್ಯಕ್ಕೆ' ನಿಜವಾಗಿಯೂ ಇದು ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಭಾರತೀಯ ರಾಜ್ಯಶಾಸನದ ಬೆಳವಣಿಗೆಯ ಮೇಲೆ ಬೆಳಕನ್ನು ಸೀಡುವ ಕೈದೀವಿಗೆ ಆಗುವುದು ಈ ಪುಸ್ತಕ. ವಿದ್ಯಾರ್ಥಿಗಳ ವರ್ಗಕ್ಕಂತೂ ಪರೀಕ್ಷೆಯ ದೃಷ್ಟಿಯಿಂದ ಬಹಳ ಉಪಯುಕ್ತವಾಗುವುದು. ಕನ್ನಡ ಸಾಮಾನ್ಯ ಜನತೆಗೆ "ಇಲ್ಲಿ ಸಾಕಷ್ಟಿದೆ" ಎನ್ನುವಂತೆ ಕ್ರಿಪ್ಸರಕೊಡುಗೆ, ಕೆಂಪುಕೋಟೆಯಲ್ಲಿ 'ಐಝದ್' ಸೇನಾನಾಯಕರ ವಿಚಾರಣೆ'ಯ ವರೆಗೂ ಸಂಗತಿಯು ಸಿಕ್ಕುವುದು

ಒಟ್ಟಿನ ಮೇಲೆ ಭಾರತೀಯರ ಮುನ್ನೂರಾಐವತ್ತು ವರ್ಷಗಳ ಇತಿಹಾಸವನ್ನೂ ಒಬ್ಬ ಕೆಚ್ಚೆದೆಯ ಕಾಂಗ್ರೆಸ್ಸಿಗನು ವಿಹಂಗಮ ದೃಷ್ಟಿಯಿಂದ ನೋಡಿದ ನೋಟವು ಇಲ್ಲಿ ಇದೆ ಎಂದು ಹೇಳಬಹುದು. ಬ್ರಿಟಿಶರ ಕುಟಿಲನೀತಿಯನ್ನು ಹೊರಗೆಡಹಬೇಕಾದರೆ ಕಾಂಗ್ರೆಸ್ಸಿಗರಂತಹ ಪಾತಾಳಯಂತ್ರಿಗಳಿಗೇ ಸಾಧ್ಯ. ಶ್ರೀಯುತ ಪಾಟೀಲರು ಆ ಬಗೆಯ ಪಾತಾಳಯಂತ್ರಿಗಳೇ ಆಗಿದ್ದಾರೆ ಎನ್ನಲು ಚಡ್ಡಿಯಿಲ್ಲ ಕನ್ನಡದಲ್ಲಿ ಇಂತಹ ಹೊತ್ತಿಗೆಗಳು ಅಪರೂಪ.

ಇದರಲ್ಲಿಯು ಭಾಷೆ ಇನ್ನೂ ಪ್ರೌಢವಾದುದಾಗಬೇಕಿತ್ತು. ಇಂತಹ ವಿಷಯುಗಳನ್ನು ವಿವೇಚಿಸಲು ಸ್ಫೂರ್ತಿಯುತವಾದ ಗಂಭೀರಭಾಷೆಯೆ ಅವಶ್ಯಕ.

"ಅನೇಕ ಸಮಸ್ಯೆಗಳನ್ನೊಳಗೊಂಡ ಇದರ ಮುಂದಿನ ಭಾಗವು ತೀಸ್ರುದಲ್ಲಿಯೇ ಹೊರಡಲಿದೆ" ಎಂಬುದನ್ನು ಅವರಿಂದಲೇ ಕೇಳುತ್ತಿರುವುದು ಸಂತೋಷದ ಸಂಗತಿ. ಇನ್ನು ಬರಬಹುದಾದುದು ಇದಕ್ಕೂ ಒಂದು ಕೈಮೇಲೆ ಮಾಡಿಕೊಂಡು ಬರಲಿ ಎಂದು ನಮ್ಮೆಲ್ಲರ ಆಶೆ. ಇಂತಹ ಪುಸ್ತಕಗಳನ್ನು ಕನ್ನಡಿಗರಿಗೆ ಒದಗಿಸಿಕೊಟ್ಟುದಕ್ಕಾಗಿ ಶ್ರೀ. ಪಾಟೀಲರಿಗೆ ಅಭಿವಂದನೆಗಳು.

— ಎಸ್.ಎಸ್.ಬಿ.

(೧೫ನೆಯ ಪುಟದಿಂದ ಮುಂದೆ ಸಾಗಿದ್ದು)

ಕ್ತಿದೆ ಎಂಬುದು, ಇಂದು ಹಿಂದಿನ ಮಾತಾಗಿದೆ ಉಚ್ಚ ಉಪೇಯವನ್ನು ಸಾಧಿಸಲು ಉಚ್ಚ ಉಪಾಯವೇ ಬೇಕು ಅಹಿಂಸೆಯೇ ಇಂದು ನಮ್ಮನ್ನು ಗುರಿಗೆ ಮುಟ್ಟಿಸಬಲ್ಲುದು; ಹಿಂಸೆಯಲ್ಲ.

ಸೂಡಣದಿಂದಲೇ ಬೆಳಕು ಬೀಳುತ್ತದೆಂಬ ಟಾಗೋರರ ಮಾತು ಇಂದು ಸತ್ಯವಾಗಿದೆ. ಕೊನೆಗೂ ಜಗತ್ತು ಇಂದಿನ ಮುಗ್ಗಟ್ಟನ್ನು ಪಾಟಲು ಹಿಂದುಸ್ತಾನದಿಂದಲೇ ಪಾಠಕಲಿಯಬೇಕಾಗಿದೆ. ಹಲವು ವರ್ಷಗಳ ಮುಂಚೆಯೇ ವಿಭೂತಿ ಸೂರ್ಯರು ಸಾಮ್ಯವಾದದಲ್ಲೇ ಸ್ವಾತಂತ್ರ್ಯವನ್ನು ಕಂಡುಕೊಳ್ಳಲು ಸಾರಿದರು; ಆದರೆ ಇಂದು ಮಾರ್ಕ್ಸರ ಜೊತೆಗೆ ಮಹಾತ್ಮರ ಪೆಸರನ್ನು ಜೋಡಿಸಬೇಕಾಗಿದೆ. "ಇನ್ ಕಿಲಾಬ್, ಜಿಂದಾಬಾದ್"ದ ಜೊತೆಗೆ "ಅಹಿಂಸಾ ಹಿ ಪರಮೋಧರ್ಮಃ" ಎಂದು ಘೋಷಿಸಬೇಕಾಗಿದೆ. ಎಂದರೆಯು ಇಂದು ಜಗತ್ತು ತನ್ನನ್ನು ಕವಿದ ಕಾರ್ಮೋಡವನ್ನು ಕರಗಿಸಿ ಸ್ವಾತಂತ್ರ್ಯರವಿಯ ಅರುಣಕಿರಣದಿಂದ ಬೆಳಗೀತು!

ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ

(ಸೃಷ್ಟೀಕರಣದ ೬ನೆಯ ಕಂತು)

ಶ್ರೀಮಾನ್ ಮಂದಲೀಡು ಶೃಷ್ಣರಾಯರು, ಧಾರವಾಡ.

ಇಪ್ಪತ್ತನೆಯ ಶತಮಾನದ ಪ್ರಾರಂಭಕಾಲದಲ್ಲಿಯೂ ಧಾರವಾಡದ ಸಾರ್ವಜನಿಕ ಚಟುವಟಿಕೆಗಳ ಸೂತ್ರಧಾರರು ಅಚ್ಚಕನ್ನಡಿಗರೇ ಇದ್ದರು; ಉಗ್ರಚಳವಳಿಯ ಪುರಸ್ಕರ್ತರಾದ ತರುಣರೂ ಹದಿನಾರಾಣೆ ಕನ್ನಡಿಗರೇ ಆಗಿದ್ದರು.

★

ಪುರಾತನ ಪರಂಪರೆಯಿಂದಲೂ ಅಚ್ಚಗನ್ನಡದ ಕೆಚ್ಚಾಗಿದ್ದ ಧಾರವಾಡದಲ್ಲಿ, ಉತ್ತರದ ಮರಾಟರ ಪ್ರಭಾವವೂ ಅವರ ಸುಪಿಯ ವರ್ಚಸ್ವವೂ ಬೆಳೆಯಲು ಅನುಕೂಲವಾಗದಂತೆ, ಹತ್ತೊಂಬತ್ತನೆಯ ಶತಮಾನದ ಅಧಿಭಾಗದ ಐತಿಹಾಸಿಕ ಘಟನೆಗಳು ಹೇಗೆ ನೆರವಾದವೆಂಬುದನ್ನು ಹಿಂದಿನ ಬರೆಹಗಳಲ್ಲಿ ವಿವರಿಸಲಾಗಿದೆ. ಹೀಗೆ ನಿರ್ವಿಕಲ್ಪ ಕನ್ನಡ ವಾತಾವರಣದಲ್ಲಿಯೆ ಬೆಳೆದು ಬಂದಿದ್ದ ಧಾರವಾಡದಲ್ಲಿ ನಡುವೆ ಹತ್ತೆಂಟು ವರ್ಷ ಅಲ್ಪ ಸ್ವಲ್ಪ ಮರಾಠಿಯ ಇರಸಲು ಹನಿಗಳು, ಇಲ್ಲಿಯ ಸುಶಿಕ್ಷಿತರನ್ನು ಕನ್ನಡದ ವಿಷಯದಲ್ಲಿ ತುಸುಮಟ್ಟಿಗೆ ಕಂಪ್ರಗೊಳಿಸಿರಬಹುದು. ಆದರೆ ಇಷ್ಟರಿಂದ 'ಇಲ್ಲಿಯ ಸಾರ್ವಜನಿಕ ಜನಜೀವನವಲ್ಲಿ ಮರಾಠೀ ಮುಖಂಡರದೇ ವರ್ಚಸ್ಸು; ಕನ್ನಡಕ್ಕೆ ಸ್ಥಾನವೇ ಇದ್ದಿಲ್ಲ; ಕನ್ನಡ ಸುಶಿಕ್ಷಿತರನ್ನು ಕೇಳುವವರೇ ಇದ್ದಿಲ್ಲ!' ಮೊದಲಾದ ಅಪಸಿದ್ಧಾಂತಗಳನ್ನು ಮಾಡುವುದು ಶುದ್ಧ ಭ್ರಮೆಯಾಗಿದೆಯೆಂಬುದನ್ನೂ, ಧಾರವಾಡದ ಕನ್ನಡದ ವರ್ಚಸ್ಸವು ಕುಗ್ಗದಂತೆ ಇಲ್ಲಿಯ ಕನ್ನಡ ಮುಖಂಡರು ಯಾವಾಗಲೂ ದಕ್ಷತೆಯಿಂದ ಇಲ್ಲಿಯ ಮರಾಠಿಗರ ಸ್ವಭಾಷಾ ಪ್ರಸರಣದ ಹಂಬಲಕ್ಕೆ ಎದುರಾಗಿ ಪ್ರತಿಘಟಿಸಿ, ತಮ್ಮ ಕನ್ನಡತನದ ಕೆಚ್ಚನ್ನು ಕಾಯ್ದುಕೊಂಡು ಬಂದಿರುವರೆಂಬುದನ್ನೂ ಹಿಂದೆ ವಿವರಿಸಲಾಗಿದೆ. ಕನ್ನಡ, ಕರ್ನಾಟಕ, ಕರ್ನಾಟಕತ್ವ ಇವುಗಳ ಮಟ್ಟಿಗೆ ಧಾರವಾಡದವರ ಈ ಸ್ವಾಭಿಮಾನವು ಸಂಕುಚಿತವಾಗಿತ್ತೆಂದು ಮಾತ್ರ ಯಾರೂ ತಿಳಿಯಕೂಡದು. ಕರ್ನಾಟಕತ್ವದ ಜೊತೆಯಲ್ಲಿಯೇ ಭಾರತೀಯ ರಾಷ್ಟ್ರೀಯತ್ವವನ್ನೂ ಇಲ್ಲಿಯ ಕನ್ನಡ ಪ್ರಮುಖರೇ ಮೈಗೂಡಿಸಿಕೊಂಡು ಬಂದರೆಂಬುದು ಲಕ್ಷ್ಯದಲ್ಲಿಡತಕ್ಕ ಮಾತಾಗಿದೆ. ಆಗಿನ ಕಾಲದ ಕಾಂಗ್ರೆಸ್ಸಿನ ಸಾಮ್ಯಕಾರ್ಯಗಳಲ್ಲಿಯೂ ಕನ್ನಡಿಗರೇ ಮುಂದಾಗುತ್ತಿದ್ದರು. ಇಲ್ಲಿ ಮೊದಲು ವಕೀಲರಾಗಿದ್ದು ಮುಂದೆ ಮುನಸೂಫರಾಗಿ ಇಲ್ಲಿಯೇ ಒಂದನೆಯ ವರ್ಗದ ವರಿಷ್ಠ ಸಬ್‌ಜಜ್ಜರಾಗಿ ಕೆಲಸಮಾಡಿ ನಿವೃತ್ತರಾಗಿ, ಈಗ ದಿವಂಗತರಾಗಿರುವ ಬೆಟಗೇರಿ ಜೀವಣರಾಯರೂ, ಇಲ್ಲಿಯೇ ಕೊನೆಯವರೆಗೆ ವಕೀಲಿಯ ವ್ಯವಸಾಯದಲ್ಲಿ ಪ್ರಸಿದ್ಧರಾಗಿದ್ದು ಎಷ್ಟೋ ವರ್ಷಗಳ ವರೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿತ್ವದ ಹೊಣೆಯನ್ನು ಹೊತ್ತು, ಕೆಲಸ ಮಾಡಿದ ಕೀರ್ತಿಶೇಷ ಕರಿಗುದರಿ ನಾರಾಯಣರಾಯರೂ, ಇಲ್ಲಿಯ ಡಿಸ್ಟ್ರಿಕ್ಟ ಕಾಂಗ್ರೆಸ್ ಕಮೀಟಿಗೆ ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಿದ್ದುದನ್ನು ನಾನು ಒಲ್ಲೆನು. ಘಾಟಿಕ ಗುರುನಾಥರಾಯರೇ ವಕೀಲರೊಳಗಿನ ಹಿರಿಯರಾಗಿ ಅಧ್ಯಕ್ಷರಾಗಿರುತ್ತಿದ್ದರು. ಆಗಿನ ಕಾಲದ ಕಾಂಗ್ರೆಸ್ ಚಟುವಟಿಕೆಗಳೆಂದರೆ ವಾರ್ಷಿಕ ಅಧಿವೇಶನಕ್ಕೊಂದು ಬಾರಿ ಪ್ರತಿನಿಧಿಗಳನ್ನಾರಿಸುವ ಮಟ್ಟಿಗೆ ಸಭೆ ಗೂಡಿಸುವುದು ಮುಖ್ಯಕಾರ್ಯವಾಗಿರುತ್ತಿತ್ತು. ಈ ಕೆಲಸದಲ್ಲಿ ಕನ್ನಡಿಗರೂ ಮರಾಠಿಗರೂ ಕೂಡಿಯೆ ಹೋಗುತ್ತಿದ್ದರಲ್ಲದೆ ಕನ್ನಡಿಗರಿಗೆ ಅವಕಾಶವೇ ಇರುತ್ತಿರಲಿಲ್ಲವೆಂದು ಸರ್ವಥಾ ಹೇಳಲಾಗದು. ಇದಕ್ಕೆ ದೃಷ್ಟಾಂತವೆಂದು ಒಂದು ಮಹತ್ತ್ವದ ಸಂಘಟನೆಯನ್ನು ಇಲ್ಲಿ ಹೇಳುವುದು ಅಪ್ರಸ್ತುತವಾಗಲಾರದು:

೧೯೦೨ರಲ್ಲಿ ಮುಂಬಯಿ ಸ್ವಾಂತಿಕ ಪರಿಷತ್ತು ಸಾತಾರೆಯಲ್ಲಿ ಕೂಡಿತು. ಇದಕ್ಕೆ ಹೋದ ಧಾರವಾಡದ ಪ್ರತಿನಿಧಿಗಳಲ್ಲಿ ಕನ್ನಡಿಗರೇ ಬಹಳ ಜನ. ಮುಂದಿನ ವರ್ಷದ ಅಧಿವೇಶನವನ್ನು ಧಾರವಾಡದಲ್ಲಿ ಕೂಡಿಸಬೇಕೆಂಬ ವಿಚಾರ ಹೊರಟು, ಎಲ್ಲರ ಅನುಮತಿಯಿಂದ ಆಮಂತ್ರಣ ಕೊಟ್ಟದ್ದಾಯಿತು. ಆಗಿನ ಕಾಲಕ್ಕೆ ತರುಣರಾಗಿದ್ದ ನಮಗೆಲ್ಲ ಲೋಕಮಾನ್ಯರಲ್ಲಿ ಭಕ್ತಿವಿಶ್ವಾಸ ಬಹಳ, ಆದುದರಿಂದ ನಾವು ಸಾತಾರೆಯಲ್ಲಿಯೆ ಅವರೊಂದಿಗೆ ಪ್ರಸ್ತಾಪಿಸಿ, ೧೯೦೩ರ ಧಾರವಾಡದ ಅಧಿವೇಶನಕ್ಕೆ ಅವರೇ ಅಧ್ಯಕ್ಷರಾಗಬೇಕೆಂಬ ಪ್ರಸ್ತಾಪವನ್ನೆತ್ತಿದೆವು. ೧೯೧೬ರಿಂದ ಕಾಂಗ್ರೆಸ್ಸಿನ ಕಾರಭಾರದಲ್ಲಿ ಸೌಮ್ಯಪಕ್ಷ-ಉಗ್ರಪಕ್ಷಗಳು ಒಡೆದು ಕಾಣುವಂತಿದ್ದರೂ, ಉಭಯಪಕ್ಷಗಳ ಮತಭೇದದಲ್ಲಿ ಪ್ರಾಮಾಣಿಕತೆಯನ್ನು ಯಾರೂ ಶಂಕಿಸುತ್ತಿರಲಿಲ್ಲ. ಆದುದರಿಂದಲೇ ಸೌಮ್ಯಪಕ್ಷದ ಕಾಂಗ್ರೆಸ್

ಸೂತ್ರಚಾಲಕರ ಆದರ-ವಿಶ್ವಾಸಗಳಿಗೆ ಪಾತ್ರರಾಗಿದ್ದ — ತಮ್ಮ ಪರಮಮಿತ್ರರಾಗಿದ್ದ — **ದಾಜೀ ಅಬಾಜೀ ಖರೇ** ಎಂಬ ಹಾಯಕೋರ್ಟಿನ ವಕೀಲರನ್ನು ನೀವು ಅಧ್ಯಕ್ಷರನ್ನಾಗಿ ಆರಿಸಿರೆಂದು ಲೋಕಮಾನ್ಯರೇ ನಮಗೆ ಸಲಹೆಯನ್ನಿತ್ತರು. ಆ ಪ್ರಕಾರ ಧಾರವಾಡದಲ್ಲಿ ಸ್ವಾಗತಸಮಿತಿಯು ಏರ್ಪಟ್ಟು ಮುಂದಿನ ಕೆಲಸಗಳೆಲ್ಲ ನಡೆದುವು. **ಅಕವಲೇ ಪಾಂಡುರಂಗರಾಯರು** ಸ್ವಾಗತಾಧ್ಯಕ್ಷರಾಗಿದ್ದರು. ನಾಲ್ಕು ಜನ ಕಾರ್ಯದರ್ಶಿಗಳಲ್ಲಿ ಮೂವರು ಕನ್ನಡಿಗರಿದ್ದರು. ದಿವಂಗತ **ಪೊನ್ನಾಪುರ ಮಂಕಿ ಗದಿಗೈಯನವರು, ರಾ. ಸಾ. ಕಟ್ಟಿ ಅಣ್ಣಾಚಾರ್ಯರು, ನರಗುಂದದ ಜೋಶಿ ವಿಠ್ಠಲರಾಯರು, ಅಮ್ಮಿನಭಾವಿಯ ದೇಶಪಾಂಡೆ ನಾರಾಯಣರಾಯರು** ಇವರೇ ಮೊದಲಾದ ಕನ್ನಡ ವಕೀಲರೇ ಮುಂದಾಳುತನ ವಹಿಸಿ ಕೆಲಸ ಮಾಡುತ್ತಿದ್ದರು. ಭಾಟಿಕ ಗುರುನಾಥರಾಯರೂ ಕರಿಗುದರಿ ನಾರಾಯಣರಾಯರೂ ಹಿರಿಯರಾಗಿದ್ದರು. ಅಕವಲೇ ಪಾಂಡುರಂಗರಾಯರೂ ಕನ್ನಡಿಗರೇ ಎಂಬುದನ್ನು ನಾವು ಮರೆಯಲಾಗದು.

ಆ ಕಾಲದ ಪರಿಷತ್ತುಗಳ ಕೆಲಸವೆಲ್ಲ ಇಂಗ್ಲೀಷಿನಲ್ಲಿಯೇ ನಡೆಯುತ್ತಿದ್ದುದು ಸಂಪ್ರದಾಯವೇ ಆಗಿತ್ತು. ಮುಂಬಯಿ ಪ್ರಾಂತದ ಬೇರೆ ಬೇರೆ ಭಾಗಗಳಿಂದ ಮಾನ್ಯ ಮುಖಂಡರು-ನೇಕರು ಧಾರವಾಡಕ್ಕೆ ಏಕಕಾಲಕ್ಕೆ ಬರುವ ಸಂದರ್ಭ ಒದಗಿದ ಸುಪ್ರಸಂಗವದು. ಇಂತಹ ಪರಿಷತ್ತಿನಲ್ಲಿ ಭಾಷಣಗಳೆಲ್ಲ ಇಂಗ್ಲೀಷಿನಲ್ಲಿಯೇ ಮುಖ್ಯವಾಗಿ; ಬಳಿಕ ಮರಾಠಿಯಲ್ಲಿ ಹತ್ತೆಂಟು ಜಿಲ್ಲೆಗಳ ಪ್ರತಿನಿಧಿಗಳಲ್ಲಿ ಕೆಲವರ ಭಾಷಣಗಳು— ಹೀಗೆ ಪರಿಪಾಠವಿತ್ತು. ಆದರೆ ಧಾರವಾಡದ ಪರಿಷತ್ತಿನಲ್ಲಿ ಕನ್ನಡ ಭಾಷಣಗಳೂ ಆಗದೆ ಹೋಗಲಿಲ್ಲ. ಪರಿಷತ್ತಿನ ಹೊರಗೆ ಪ್ರತಿನಿಧಿಗಳ ಬೀಡಾರಗಳಲ್ಲಿ, ಸ್ವಯಂಸೇವಕರ ಗುಂಪಿನಲ್ಲಿ, ಅಡಿಗೆ-ಊಟದ ವ್ಯವಸ್ಥೆಯಲ್ಲಿ, ಸಭಾಸ್ಥಾನದ ಒಳಹೊರ ಭಾಗಗಳಲ್ಲಿ, ಎಲ್ಲೆಲ್ಲಿಯೂ ಕನ್ನಡವೇ ಕನ್ನಡವಾಗಿ ಕೇಳಿಸುತ್ತಿತ್ತೆಂಬುದನ್ನು ಯಾರೂ ಮರೆಯುವಂತಿಲ್ಲ. ಪದಪ್ರಾಂತೀಯ ಅತಿಥಿ-ಪ್ರತಿನಿಧಿಗಳ ಅನುಕೂಲಕ್ಕೆಂದು ಮರಾಠಿಯ ಮಾತುಗಳು ನಡುನಡುವೆ ಹೊರಹೊಮ್ಮುತ್ತಿದ್ದರೆ ಅದರಲ್ಲಿ ಅಶ್ಚರ್ಯವಿಲ್ಲ. ಆದರೂ ಮುಖ್ಯವಾಗಿ ಪರಿಷತ್ತಿನ ವಾತಾವರಣವು ಕನ್ನಡಮಯವಾಗಿಯೇ ಕಂಗೊಳಿಸುತ್ತಿತ್ತೆಂಬುದನ್ನು ನಾವೆಂದಿಗೂ ಮರೆಯಲಾರೆವು.

ಆ ಕಾಲದ ತರುಣರಾದ ನಮಗೆಲ್ಲ ಲೋಕಮಾನ್ಯರಲ್ಲಿ ಭಕ್ತಿ-ವಿಶ್ವಾಸಗಳು ಬಹಳವೆಂಬುದನ್ನು ಮೇಲೆ ಹೇಳಿದ್ದೇನೆ. ಇಲ್ಲಿಯ ಪರಿಷತ್ತಿನ ಸ್ವಾಗತಮಂಡಲಿಯಲ್ಲಿ ಸಾಮ್ಯಪಕ್ಷದ ಪ್ರಧಾನ ಕರ್ತರೇ ಬಹಳವಾಗಿದ್ದರೆನ್ನಬಹುದು. ಪರಿಷತ್ತಿನ ಪ್ರಮುಖ ಮುಖಂಡರಾಗಿರುತ್ತಿದ್ದ **ಸರ್ ಫಿರೋಜಶಹಾ ಮೇಥಾ, ದಿನಶಾ ಎಡಲಜೀ ವಾಚಾ, ಗೋಪಾಳ ಕೃಷ್ಣ ಗೋಖಲೆ** ಮೊದಲಾದವರಿಗೆಲ್ಲ ಸ್ವತಂತ್ರ ಬಂಗ್ಲೆಗಳ ಬೀಡಾರದ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಕ್ಷರಾಗಿ ಬರುವವರಾಗಿದ್ದ ದಾಜೀಸಾಹೇಬ ಖರೇ ಅವರಿಗಂತೂ ಬೇರೆ ಬಂಗಲೆಯ ಏರ್ಪಾಡು ಇದ್ದದ್ದೇ ಸರಿಯಲ್ಲವೆ? ಲೋಕಮಾನ್ಯರ ಅಭಿಮಾನಿಗಳಾಗಿದ್ದ ನಾವು ತರುಣರು, ಸ್ವಾಗತ ಮಂಡಲಿಯಲ್ಲಿ ತುಂಟತನವನ್ನೆಬ್ಬಿಸಿದೆವು. ಗೋಖಲೆಯವರಂತೆಯೆ ಲೋಕಮಾನ್ಯರಿಗೂ ಒಂದು ಸ್ವತಂತ್ರ ಬಂಗಲೆಯ ಬೀಡಾರವನ್ನೇರ್ಪಡಿಸಬೇಕೆಂದು ಹಟ ತೊಟ್ಟೆವು. ಲೋಕಮಾನ್ಯರ ಅಂತಃಪ್ರವೃತ್ತಿಯೇ ಸಾಮಾನ್ಯರಿಗಿಂದಿಗೆ ಕೂಡಿಕೊಂಡು ಹೋಗುವುದಿದ್ದ ಮೂಲಕ, ಅವರಿಗೆ ವಿರುದ್ಧ ಪ್ರಕೃತಿಯವರಾದ ಮೇಥಾ, ವಾಚಾ, ಗೋಖಲೆಯವರಂತೆ ಬೇರೆ ಸ್ವತಂತ್ರ ಬೀಡಾರ ಬೇಕಾಗುವುದಿಲ್ಲವೆಂಬುದು ಸ್ವಾಗತಮಂಡಲಿಯ ಮುಖಂಡರ ಧೋರಣ. ಲೋಕಮಾನ್ಯರ ಪ್ರಭಾವಶಾಲೀ ಮುಖಂಡತನಕ್ಕೆ ತಕ್ಕುದಾದ ಸ್ವಾಗತದ ವ್ಯವಸ್ಥೆಯು ಸ್ವಾಗತ ಮಂಡಲಿಯಿಂದ ಆಗುವ ಲಕ್ಷಣ ತೋರದಾದ ಕೂಡಲೆ, ನಾವೇ ಹತ್ತಿಪ್ಪತ್ತುಜನ ತರುಣರು, ಲೋಕಮಾನ್ಯರ ಸ್ವಾಗತಮಂಡಲಿಯನ್ನೇ ಬೇರೆ ಏರ್ಪಡಿಸಿದೆವು. ಶುಕ್ರವಾರ ಪೇಟೆಯೊಳಗಿನ ಜೋತೀಯವರ ಮೂರು ಅಂತಸ್ತಿನ ಮನೆಯನ್ನು ಲೋಕಮಾನ್ಯರ ಸ್ವಾಗತಕ್ಕಾಗಿ ಸಿಂಗರಿಸಿದೆವು. ಲೋಕಮಾನ್ಯರೂ ಅವರ ಪರಿವಾರದವರೂ ಆಲ್ಲಿಯೇ ತಂಗುವಂತೆ ವ್ಯವಸ್ಥೆ ಮಾಡಿದೆವು. ಮುಬ್ಬಳ್ಳಿಯ ಲೇಲ್ಸೆ ವಾಲಂಟಿಯರ್ ತಂಡದ "ಬ್ಯಾಂಡ್" ವಾದ್ಯವನ್ನು ಸ್ಟೇಷನಿಗೆ ತರಿಸಿದೆವು. ಊರ ಬೀಡಾರದಲ್ಲಿ ಪ್ರತಿನಿತ್ಯ ಬೆಳಗು ಸಾಯಂಕಾಲ, ರಾಜಕೀಯ ಓಲಗದ ವಾದ್ಯವಿಜೃಂಭಣೆಯನ್ನೇರ್ಪಡಿಸಿದೆವು. ಒಟ್ಟಾರೆ ಪ್ರಜಾಸಂಪನ್ನವಾದ, ಪ್ರಜಾಸಂಪನ್ನವಾದ, ಸಭೂತಪೂರ್ವಭವಿಷ್ಯತಿಯಾದ ಮಹಾ-ಸಮಾರಂಭವೇ ಆಗಿಬಿಟ್ಟಿತ್ತು. ಅಧ್ಯಕ್ಷರನ್ನೆದುರುಗೊಂಡು

ವಿಶ್ವಸಾಹಿತ್ಯಮಾಲೆ ಕುಸುಮ ೧.

ಎಚ್ಚತ್ತ ಆಗ್ನೇಯ ಏಶಿಯ

☆

ಇಂಡೋನೇಶಿಯಾ—ಇಂಡೋಚೀನಗಳ ಕ್ರಾಂತಿ; ಬರ್ಮಾ, ಮಲಯಾ, ಸಯಾಮ್ ಸ್ವತಂತ್ರ ಹೋರಾಟ.
ನಕ್ಷೆಗಳು ಸಹಿತ.

ಲೇಖಕರು:— ಶ್ರೀ. ಎಂ. ಹರಿದಾಸರಾವ್. ಬೆಲೆ ೧-೮-೦

ಎಲ್ಲ ಕಡೆಗಳಲ್ಲಿ ದೊರೆಯುತ್ತದೆ. ಇಲ್ಲದಿದ್ದರೆ 'ರಾವ್ ಬ್ರದರ್ಸ್, ಗದಗ' ಅವರಿಗೆ ಬರೆಯಿರಿ.

ಕರೆತರಲು ಜೋಶೀ ವಿಠ್ಠಲರಾಯರನ್ನು ಲೊಂಡಾದ ವರೆಗೆ ಸ್ವಾಗತಸಮಿತಿಯವರು ಕಳಿಸಿದ್ದರು. ನಮ್ಮ ಸ್ವಾಗತಮಂಡಲಿಯು ಲೋಕಮಾನ್ಯರನ್ನು ಕರೆದುತರಲು ನನ್ನನ್ನು ಆಟ್ಟಿದರು. ಇಬ್ಬರೂ ಕೂಡಿಯೇ ಹೋದೆವು; ಕೂಡಿಯೇ ಬಂದೆವು. ಧಾರವಾಡದ ನಿಲ್ದಾಣದಲ್ಲಿ ಸಾವಿರಾರು ಜನರ ನಡುವೆ ಹುಬ್ಬಳ್ಳಿಯ ವಾಲಂಟಿಯರ್ ಬ್ಯಾಂಡಿನ ಸ್ವಾಗತಘೋಷಣೆಯಲ್ಲಿ, ನಿಯೋಜಿತ ಅಧ್ಯಕ್ಷರಿಗೆ ಮಾಲೆಪಾಕಿ ಆವರನ್ನೊಬ್ಬರನ್ನು ಮಾಟಿಸುವಾಗ, ಪರಿಷತ್ತಿನ ಸ್ವಾಗತಸಮಿತಿಯ ಸಭಾಸದರಿಗೆ ಸಾಕುಬೇಕಾಯಿತು. ಮೇಧಾ, ವಾಚಾ, ಗೋಪಿಲೆ ಮೊದಲಾದ ಮುಖಂಡರನ್ನು ಹಾಗೆ ಹೀಗೆ ಪಾರುಮಾಡಿಕೊಂಡು ಹೋದದ್ದು ನಮಗೆಲ್ಲ ಹಿಂದಿನಿಂದ ತಿಳಿಯಿತು. ಲೋಕಮಾನ್ಯರ ಮೆರವಣಿಗೆಯು ನಿಲ್ದಾಣದಿಂದ ಹೊರಟು, ಊರ ಪ್ರಮುಖ ಬೀದಿಗಳಲ್ಲಿ ಹಾಯ್ದು, ಶುಕ್ರವಾರಪೇಟೆಯ "ಮಂಗನ ಮಡಿಲ"ನ್ನು ಮುಟ್ಟಲಿಕ್ಕೆ, ೩-೪ ತಾಸು ಹಿಡಿದಿರಬಹುದು.

ಪರಿಷತ್ತು ನಡೆದ ಮೂರೂ ದಿನಗಳಲ್ಲಿ ಲೋಕಮಾನ್ಯರೂ ಅವರ ಪರಿವಾರವೂ ನಮ್ಮ ಆತಿಥ್ಯವನ್ನೇ ಹೊಂದಿದರು. ಕರ್ನಾಟಕದ ಆತಿಥ್ಯಪದ್ಧತಿಯ ಯಥಾರ್ಥ ಪರಿಚಯವನ್ನು ನಾವು ಅವರಿಗೆ ಮಾಡಿಕೊಟ್ಟೆವು. ಶ್ರೀ. ನರಸಿಂಹ ಚಿಂತಾಮಣಿ ಕೇಳಕರರು ಇನ್ನೂವರೆಗೆ ಆ ಸ್ವಾಗತಸಮಾರಂಭವನ್ನು ನೆನೆನೆನೆದು ಹಿಗ್ಗುತ್ತಿರುವರು. ಕೊನೆಯ ದಿನ ಪರಿಷತ್ತಿನ ಅಧ್ಯಕ್ಷರಾಗಿದ್ದ ದಾಜೀಸಾಹೇಬರಿಗೂ ಬೇರೆ ಕೆಲವು ಜನರಿಗೂ ಸ್ವಾಗತಸಮಿತಿಯ ಪ್ರಮುಖರಿಗೂ ಲೋಕಮಾನ್ಯರ ಪಜ್ಜಿಯು ಲಾಭವಾಗಲೆಂದು ಒಂದು ಔತಣಸಮಾರಂಭವನ್ನೇರ್ಪಡಿಸಿದ್ದೆವು. ಆದರ ವೈಭವವನ್ನು ಬಣ್ಣಿಸಬೇಕಾದರೆ ನಾನೊಬ್ಬ ರತ್ನಾಕರವರ್ಣಿಯಾಗಬೇಕು. ಆದುದರಿಂದ ಅದೇನು ಬೇಡ. ಅತ್ತ ಪರಿಷತ್ತಿನ ಕಾರ್ಯಕಲಾಪಗಳು ನಡೆದ ವೇಳೆಗೆ ನಾವೆಲ್ಲ ಅಲ್ಲಿಯೂ ಸಿದ್ಧ. ಇಲ್ಲಿ ಈ ಸ್ವತಂತ್ರ ಸ್ವಾಗತಬೀಡಾರದಲ್ಲಿ ವ್ಯವಸ್ಥೆಗೂ ಸಿದ್ಧ. ಹೀಗೆ ಧಾರವಾಡದ ಆಗಿನ ಕಾಲದ ಕನ್ನಡ ತರುಣರ ತಂಡದಲ್ಲಿ. ಕನ್ನಡತನದ ಜೊತೆಯಲ್ಲಿಯೆ ಉಜ್ವಲವಾದ ರಾಷ್ಟ್ರೀಯವೃತ್ತಿಯ ಪ್ರಭಾವವೂ ಹೇಗೆ ಬೆಳೆಯುತ್ತ ಬಂದಿತ್ತೆಂಬುದನ್ನು ವಿವರಿಸುವುದಕ್ಕಾಗಿಯೆ, ಈ ಸಂಗತಿಯನ್ನು ನಿವೇದಿಸಬೇಕಾಗಿ ತೋರಿತು. ಆದುದರಿಂದ ಇದನ್ನಿಷ್ಟು ವಿಸ್ತಾರವಾಗಿಯಾದರೂ ಸಂಕ್ಷಿಪ್ತವಾಗಿಯೇ ಬರೆದಿದ್ದೇನೆ. ಯಾರಿಗೆ ಸೇರಲಿ; ಯಾರಿಗೆ ಸೇರದಿರಲಿ. ಸಂಭವಿಸಿದ ಸಂಗತಿಗಳನ್ನು ನೆನಪಿದ್ದ ಮಟ್ಟಿಗೆ ಹೇಳಿಬಿಡುವುದು ನನ್ನ ಕರ್ತವ್ಯವೆಂದೆಣಿಸಿ, ಅದನ್ನು ಪೂರೈಸಿದ್ದೇನೆ.

ಪೂರ್ಣಜೀವನ

☆

ಶ್ರೀ. ಜಿ. ವಿ. ವಾಲಿ, ಹುಬ್ಬಳ್ಳಿ

(ಇದು ಇಂಗ್ಲಿಷ್‌ಕವಿ Ben Johnson ಅವರ 'The Perfect Life' ಎಂಬ ಕವನದ ಒನುಹಾನ.)

ಎಲೆ ಮನುಜ, ಫಲವೇನು ಬೆಳೆದು ಹೆಮ್ಮರವಂತೆ ?
ಬೆಳೆಬೆಳೆದು ಪನೆಯು ಮರ ಜಾಸಿನೆತ್ತರಕೆದ್ದು
ನಿಲುವಿನಲಿ ಬಹುದಿನವು ನಿಂತೊಡೇಂ, ಕೊನೆಗೊಮ್ಮೆ
ಕೆಡೆವುದದು ರುಕ್ಷವಾಗಿ;

ಬೆಳಗಿನೊಳು ನಗುತರಳಿ ಬೈಗಿನೊಳು ಬೀಳ್ವುದೇಂ
ನಲವೀಯದಿರ್ದಪುದೆ ಮಲ್ಲಿಗೆಯ ಕಿರುವಾಳ್ಗೆ ?
ಜಿಲುವುಗಳ ಕಾಣಬಹುದಣುಗಳಲಿ; ನಸುವೊತ್ತಿ-
ನೊಳು ಬಾಳ ತುಂಬಬಹುದು !

(೧೬೮ ನೆಯ ಪುಟದಿಂದ ಮುಂದುವರಿದಿದ್ದು)

ಸುಭಾಸರಿಗೆ ಸ್ವಾಗತ

ಇಂದಿನ ಸಂಧಿಕಾಲದ ಸ್ವಾತಂತ್ರ್ಯಪ್ರಿಯ ಭಾರತ ಸರಕಾರವು, ಮೊದಲಿನ ಬ್ರಿಟಿಷರ ಕೈಗೊಂಬೆ ಸರಕಾರ ಹೊರಿಸಿದ— ಸ್ವಾತಂತ್ರ್ಯವೀರ ಸುಭಾಸಚೋಸರ ಮೇಲಿನ— ಆಪಾದನೆಗಳನ್ನೆಲ್ಲ ಉಪಸಂಹರಿಸಿಗೊಂಡಿದೆ. ಸುಭಾಸರ ಹತ್ತಿರದ ಬಳಗದವರು ಸುಭಾಸರು ಜೀವಿಸಿಯೆ ಇದ್ದಾರೆಂಬ ಸಂಗತಿಯನ್ನು ಈಗ ಏರ್ಪಾಸಪೂರ್ವಕವಾಗಿ ಎತ್ತಿ ಒತ್ತಿ ಘೋಷಿಸುತ್ತಿದ್ದಾರೆ. ಒಲ್ಲೆ ಇದ್ದಾರೆ, ಇಲ್ಲಿ ಇದ್ದಾರೆ, ಪೇಶಾವರಕ್ಕೆ ಬಂದಿದ್ದಾರೆ, ಸಿಂಧದಲ್ಲಿಯೆ ಇದ್ದಾರೆ— ಎಂಬ ಸುದ್ದಿಗಳು ಜನರನ್ನು ದಿನದಿನವೂ ಕುತೂಹಲಗೊಳಿಸುತ್ತಲಿವೆ. ತನ್ನ ವೀರಕಾರ್ಯದಿಂದ ಭಾರತೀಯರೆಲ್ಲ ತನ್ನ ಬಗೆಗೆ ಅಭಿಮಾನ-ಆತ್ಮೀಯತೆಗಳನ್ನು ತಾಳುವಂತೆ ಮಾಡಿದ ಆ ತ್ಯಾಗಮೂರ್ತಿಯನ್ನು ಪ್ರತ್ಯಕ್ಷವಾಗಿ ಯಾವಾಗ ಕಂಡೇವೆಂದು ಭಾರತೀಯರೆಲ್ಲ ಇಂದು ಕಾತರದೃಷ್ಟಿಯಿಂದ ದಾರಿಕಾಯಲು ತೊಡಗಿದ್ದರೆ, ಅದೊಂದು ಅಚ್ಚರ್ಯದ ಸಂಗತಿಯಲ್ಲ. ಮಹಾತ್ಮಾಜಿ-ಪಂಡಿತಜಿಯವರಂತೆಯೆ ಈ ಜಾಬೂಜಿಯವರೂ ಭಾರತೀಯರಿಗೊಂದು ಹೊಸ ಶಕ್ತಿಯನ್ನು ನೀಡಿದ್ದಾರೆ. ಭಾರತದ ಧೈರ್ಯ-ಶೌರ್ಯದ ಕೀರ್ತಿ ಜಗತ್ತಿನಲ್ಲಿಯೆ ಪಜ್ಜಿಹರಡುವಂತೆ ಮಾಡಿದ್ದಾರೆ. ಇಂತಹ ಅಭಿಮಾನದ ಮೂರ್ತಿ ಮರಳಿಬಂದಾಗ, ನಾವೆಲ್ಲ ಅವರನ್ನು ಸಂಧ್ರಮದಿಂದ ಸ್ವಾಗತಿಸಬೇಕಲ್ಲವೆ ? ಅವರ ಮುಂದಿನ ಕಾರ್ಯಕ್ಕಾಗಿ ತಕ್ಕ ಕಾಣಿಕೆಯನ್ನು ಸಲ್ಲಿಸಬೇಕಲ್ಲವೆ ?

ಜಯಂ

ಒಂದು ನಾಲ್ಕು ನಿಟ್ಟಿನ ನೋಟ

★

ಜಿನ್ನಾ ಅವರನ್ನು ಮುತ್ತಿದ ಕತ್ತಲೆ

ಕಲಕತ್ತೆ-ಮುಂಬಯಿಗಳಲ್ಲಿಯ ಜಾತಿಜಗಳಗಳು ಪ್ರಾರಂಭದ ಉಗ್ರಸ್ವರೂಪದಲ್ಲಿಲ್ಲವಾದರೂ, ನಿಸಿನಿಸಿ ಬೇನೆಯಂತೆ ಇದುವರೆಗೆ ತನ್ನ ಕೆಲಸವನ್ನು ನಡೆಯಿಸಿಯೆ ನಡೆಯಿಸಿದೆ. ಭಾರತದಲ್ಲಿಯ ಬೇರೆ ಬೇರೆ ಪುರ-ನಗರಗಳಲ್ಲಿಯೂ ಈ ಬೇನೆ ಕಂಡುಕಾಣದಂತೆ ಕೆಲಸ ಮಾಡುತ್ತಲಿದೆ. ಇದು ಬರೀ ಪುಂಡರ ಕೆಲಸವೆಂಬ ಕೂಗು ಜಾತೀಯ ಮುಂದಾಳುಗಳು ಬಾಯಲ್ಲಿಯೂ ಸರಕಾರದ ಪ್ರಕಟನೆಗಳಲ್ಲಿಯೂ ಹೊರಡುತ್ತಲಿದೆ. ಆದರೆ ಈ ಜಾತಿಯ ಜಗಳಾಟವು ಬರೀ ಪುಂಡಾಟಿಕೆಯ ಪರಿಣಾಮವಲ್ಲ. ಪುಂಡರೆನಿಸಿಕೊಳ್ಳದೆ ದೊಡ್ಡ ಮನುಷ್ಯರೆಂದು ಪೆರೆಯುವ ಪಲವು ಮುಂದಾಳುಗಳ ಪ್ರಚೋದನೆಯೆ ಇದಕ್ಕೆ ಮುಖ್ಯಕಾರಣ. ಬ್ರಿಟಿಷ್ ಪೋಲಿಪಕ್ಷದವರ ಸೂತ್ರಚಾಲನೆಯೂ ಇದಕ್ಕೆ ಪ್ರಚೋದಕವಾಗುತ್ತಿದೆಯೆಂದು ಗಟ್ಟಿಮುಟ್ಟಾಗಿ ಹೇಳುವವರೂ ಪಲವರಿದ್ದಾರೆ. ಬ್ಯಾ. ಜಿನ್ನಾ ಅವರು ತಮ್ಮೊಂದು ಘೋಷಣೆಯಲ್ಲಿ 'ಇಂಗ್ಲಂಡಿಗೆ ತಮ್ಮನ್ನು ಕರೆಯಿಸಿ ಸಮಾನತತ್ತ್ವದ ಮೇಲೆ ಬೇಕಾದರೆ ಮಾತುಗಳನ್ನಾರಂಭಿಸಲಿ' ಎಂದು ಹೇಳಿದುದು ಮೇಲಿನವರ ಹೇಳಿಕೆಗೆ ಪರಿಪೋಷಣೆ ಕೊಡುತ್ತಲಿದೆ. ಇಂದಿನ ಬ್ರಿಟಿಷ್ ಆಡಳಿತದ ಮುಖ್ಯ ಮುಖ್ಯ ಸೂತ್ರಧಾರಿಗಳೇ ಬಂದು, ಭಾರತದ ಸ್ಥಿತಿ-ಗತಿಗಳನ್ನೆಲ್ಲ ಕಣ್ಣಾರೆ ಕಂಡು ಕಿವಿಯಾರೆ ಕೇಳಿ, ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಂಡು, ಸರ್ವಸಮ್ಮತವಾಗುವಂತಹ ಒಂದು ನಿರ್ಣಯವನ್ನು ಕೊಟ್ಟು, ಭಾರತದ ಸ್ವಾತಂತ್ರ್ಯಸ್ಥಿಗೊಂದು ಮಾರ್ಗಮಾಡಿಕೊಟ್ಟಿರುವಾಗ, ಮತ್ತೆ ಮಾತಿಗಾಗಿ ಎಲ್ಲರೂ ಇಂಗ್ಲಂಡಿಗೇತಕ್ಕೆ ಹೋಗಬೇಕು. ನಮ್ಮ-ನಮ್ಮಲ್ಲಿಯ ಮತಭೇದಗಳನ್ನು ಸಮಾನುಭೂತಿ-ಸಹಕಾರ ಪ್ರಸಾರಕವಾದ ಚರ್ಚೆಗಳಿಂದ ನಿರ್ಣಯಿಸಿಕೊಳ್ಳಬೇಕಾಗಿದೆಯಲ್ಲದೆ, ಮತ್ತೆಯೂ ನಮ್ಮ ಜೆನ್ಮೈಯುಗವಿಗೆಯ ಪಾಲಿನ ಜಗಳಾಟ ತೀರಿಸಲು ಮಂಗನ ಬಳಿಗೆ ಹೋಗಬೇಕೇನಾವು? ಇಂಗ್ಲಂಡಿಗೆ ಕರೆಯಿಸಿರೆಂದು ಹೇಳುವುದರಲ್ಲಿ ಜಿನ್ನಾರವರ ಕಂಗೇಡಿತನವು ಕಾಣುವುದಲ್ಲದೆ, ರಾಜಕಾರ್ಯ ನೈಪುಣ್ಯವು ಸ್ವಲ್ಪವೂ ಇಲ್ಲವೆಂದು ಯಾರೂ ಹೇಳಬಹುದಾಗಿದೆ. 'ನನ್ನ ಮುಂದೆ ಕಗ್ಗತ್ತಲೆ ಮುಸುಕಿ ನಿಂತಿದೆ' ಎಂದು ಹೇಳುವುದರಲ್ಲಿ ಜಿನ್ನಾ ಅವರ ಪ್ರಾಮಾಣಿಕತನವಿರುವುದಾದರೂ, ಆ ಕಗ್ಗತ್ತಲೆಯನ್ನು ತರಿದಿಡುವುದು ತಮ್ಮ ಹಟ, ಕಾಂಗ್ರೆಸಿನ ವಿಷಯದಲ್ಲಿರುವ ದ್ವೇಷ, ಮುಯ್ಯಿ ತೀರಿಸಿಕೊಳ್ಳಬೇಕೆಂಬ ಈರ್ಷೆ ಇವೇ ಕಾರಣವೆಂಬುದನ್ನರಿತರೆ, ಅವರ ದಾರಿ ಬೆಳಕಿನದಾಗುವುದು; ಮಿಕ್ಕ ಅವರ ಅನುಯಾಯಿವರ್ಗವೂ ಬೆಳಕನ್ನು ಕಾಣುವುದು.

ಕಲಕತ್ತೆ-ಮುಂಬಯಿಗಳು ಕಲಿಸಿದ ಪಾಠ

ಒಟ್ಟಿನಮೇಲೆ ಭಾರತದ ಪರಿಸ್ಥಿತಿಯಿಂದು ಕುದಿಯುವುದರಲ್ಲಿದೆ. ಕೂಲಿಕಾರ ಪಕ್ಷವಲ್ಲದೆ ಚರ್ಚಿಲ್ ಪಕ್ಷದ ಆಡಳಿತ ಇಂಗ್ಲಂಡಿನಲ್ಲಿ ಇದ್ದುದಾಗಿದ್ದರೆ, ಕುದಿಯುತ್ತಿರುವಾಗಲೆ ಇದು ಮೂರುಸಲ ಹಳಸಿಹೋಗುವಂತೆ ಆದುಹದಗೆಡಿಸಿಬಿಡುತ್ತಿದ್ದಿತು. ಆದರೆ ಇದ್ದುದರಲ್ಲಿಯೆ ಉದಾರಧೋರಣದಿಂದ ನಡೆಯುವ ಮಂತ್ರಿವರ್ಗ ಅಲ್ಲಿ ಸಟ್ಟುಗ ಹಿಡಿದುಕೊಂಡು ನಿಂತಿರುವುದರಿಂದ, ಈ ಕುದಿಯುತ್ತಿರುವ ಪರಿಸ್ಥಿತಿ ಬೇಗನೆ ಪರಿಪಾಕಕ್ಕೆ ಬರಬಹುದೆಂದು ಆಶೆಯಿರಿಸಿಕೊಳ್ಳುವಂತಿದೆ. ಭಾರತದ ಸಂಧಿಕಾಲದ ರಾಜಕಾರ್ಯದ ಸೂತ್ರ ಜನತೆಯ ನಿಜವಾದ ಪ್ರತಿನಿಧಿಗಳಾದ ಕಾಂಗ್ರೆಸ್ಸಿಗರ ಕಡೆಗೆ ಬಂದುದು ಈ ಆಶೆಯನ್ನು ಹೆಚ್ಚಿಸಲಿಕ್ಕೆ ಕಾರಣವಾಗಿದೆ ಆದರಂತೆಯೆ ಪ್ರತ್ಯಕ್ಷ ಹೋರಾಟದ ಪ್ರತಿಜ್ಞೆಯನ್ನು ಘೋಷಿಸಿದ ಜಿನ್ನಾಸಾಹೇಬರು, ತಾವಾಗಿಯೆ ವೈಸ್‌ರಾಯರನ್ನು ಕಾಣಲು ಸಿದ್ಧರಾಗಿ ಒಪ್ಪಂದದ ಮಾತನಾಡಲು ಮುಂದುವರಿದುದು, ನಮ್ಮ ಆಶೆಗೆ ಇನ್ನಿಷ್ಟು ಪುಟಕೊಡುತ್ತದೆ. ಕಲಕತ್ತೆ-ಮುಂಬಯಿಗಳ ಜಾತೀಯ ದಂಗೆಗಳು ಜಿನ್ನಾರವರನ್ನು ಕವಿದ ಕತ್ತಲೆಯನ್ನು ಕಳೆಯಲು ಸ್ವಲ್ಪ ನೆರವುಕೊಟ್ಟಿರಬಹುದೆಂದು ನನ್ನ ಭಾವನೆ. ಮುಸ್ಲಿಂ ಲೀಗಿನ ಪ್ರತ್ಯಕ್ಷ ಹೋರಾಟ ಬ್ರಿಟಿಷರಿಂದಿನಿಗಲ್ಲ; ಕಾಂಗ್ರೆಸಿಗರಿಂದಿಗೆ—ಹಿಂದುಗಳಿಂದಿಗೆ. ಎರಡು ಪಕ್ಷಗಳಲ್ಲಿ ಹೋರಾಟ ನಡೆದಲ್ಲಿ ಎರಡೂ ಪಕ್ಷಗಳೂ ಕಷ್ಟ-ನಷ್ಟಗಳನ್ನು ಅನುಭವಿಸಬೇಕಾಗುವುದೆಂಬುದು ಬ್ಯಾ. ಜಿನ್ನಾ ಅವರಿಗೆ ಇದುವರೆಗೆತ್ತಹೊಳೆದಿರಲಿಲ್ಲವೋ ಏನೋ! ಮುಸ್ಲಿಂ ವೀರರ ವೀರತನದಲ್ಲಿ ಜಿನ್ನಾ ಅವರು ತುಂಬ ವಿಶ್ವಾಸವನ್ನಿರಿಸಿಕೊಂಡಿರಬಹುದು; ತಮ್ಮವರ ಕೂದಲು ಕೊಂಕದಂತೆ ಹೋರಾಟ ನಡೆಯುವುದೆಂದು ಭಾವಿಸಿರಬಹುದು. ಹಿಂದುಗಳು ಹೇಡಿಗಳೂ ಅಂಜುಬುರುಕರೂ ಇರುವರೆಂಬ ಅವರ ಗಟ್ಟಿಮುಟ್ಟಾದ ನಂಬುಗೆ, ಜಿನ್ನಾ ಅವರ ಪ್ರತ್ಯಕ್ಷ ಹೋರಾಟದ ಕಲ್ಪನೆಗೆ ಪುಷ್ಟಿಕೊಟ್ಟಿರಬಹುದು. ಆದರೆ ಮಾನವನ ಮೂಲ ಪ್ರವೃತ್ತಿಯಾದ 'ಬದುಕಬೇಕು' ಎಂಬ ಹಟವು, ಸಾವು-ನೋವುಗಳ ನಂದರ್ಭದಲ್ಲಿ ಎಂತಹ ಹೇಡಿಗಳನ್ನೂ ಹೆದರುಗುಳಿಗಳನ್ನೂ ನಿರ್ಭೀತಿಯಿಂದ ಹೋರಾಡಲು ಹಚ್ಚುವುದೆಂಬುದನ್ನು ಇನ್ನುವರೆಗೆ ಜಿನ್ನಾ ಅವರು ಮರೆತಿದ್ದರು. ಮುಂಬೈ-ಕಲಕತ್ತೆಗಳಲ್ಲಿಯ ಪ್ರಳಯ ಅವರ ಮರೆವನ್ನು

ಹಾರಿಸಿರಬೇಕು. ಆದುದರಿಂದಲೇ ಅವರು ವೈಸ್‌ರಾಯರನ್ನು ಕಾಣಲು ಹಾರಿಬಂದರು. ಮಾತು-ಕತೆಗಳು ಆರಂಭವಾಗಿ ನಡೆದಿದೆಯೆಂದು ಗಾಳಿಯಲ್ಲಿ ನಾರ್ತೆಗಳೂ ಹಾರಾಡುತ್ತಲಿವೆ.

ಕಾಂಗ್ರೆಸಿಗಿರುವ ಬಹುಜನಸಮತೆಯ ಬೆಂಬಲ

ಈಗ ಮುಸ್ಲಿಂ ಲೀಗೊಂದನ್ನುಳಿದರೆ ಭಾರತದ ಎಲ್ಲ ಪಕ್ಷಗಳ ಹೃದಯದ ಬಿಸುಪೆಯೂ ಕೂಡಿದಂತಾಗಿದೆ. ಪಾಕಿಸ್ತಾನವು ಎಂದೂ ಸಾಧ್ಯವಿಲ್ಲವೆಂದು ಸಾರಿದುದರಿಂದ, ಕಾಂಗ್ರೆಸಿನ ಬಗೆಗೆ ಹಿಂದೂ ಮಹಾಸಭೆ ತಳೆದಿದ್ದ ಅಸಮಾಧಾನ ಕಡಿಮೆಯಾಗಿದೆ. ಸಿಂಧದಲ್ಲಿ ನಡೆಯಲಿರುವ ಶಾಸನಸಭೆಯ ಚುನಾವಣೆಯಲ್ಲಿ, ಹಿಂದೂ ಮಹಾಸಭೆಯವರು ಕಾಂಗ್ರೆಸಿಗರನ್ನು ಎದುರಿಸದಿರಲು ನಿಶ್ಚಯಿಸಿದ್ದುದು ಇದಕ್ಕೆ ಪ್ರತ್ಯಕ್ಷ ಪ್ರಮಾಣವಾಗಿದೆ. 'ಪಾಕಿಸ್ತಾನ ಇಲ್ಲವಿದ್ದರೆ ಸೀಪಿಸ್ತಾನ ಬೇಕಿಲ್ಲ ನಮಗೆ!' ಎಂದು ಸೀಪ ಪ್ರಮುಖರು ಖಂಡಿತವಾಗಿ ನುಡಿದಿದ್ದಾರಲ್ಲದೆ, ಕಾಂಗ್ರೆಸಿನಲ್ಲಿ ತಮಗಿರುವ ಅಚಲಶ್ರದ್ಧೆಯನ್ನು ತೋರಿಸಿದ್ದಾರೆ. ಸ್ವಜಾತಿಯವರಿಂದ ಎಂತಹ ಉಗ್ರ ವಿರೋಧವಿದ್ದರೂ ಅದನ್ನು ಗಣಿಸದೆ ಕಾಂಗ್ರೆಸಿನೊಂದಿಗೆ ಸಹಕರಿಸಿ, ಸಂಧಿಕಾಲದ ಸರಕಾರವನ್ನು ಸ್ಥಾಪಿಸಿದುದು, ಲೀಗೇತರ ಮುಸಲ್ಮಾನರ ಕಾಂಗ್ರೆಸಿನ ವಿಶ್ವಾಸಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ. ಅಲ್ಪಸಂಖ್ಯಾಕರಾದ ದೇಶೀಯ ಕ್ರೈಸ್ತರೂ, ಪಾರಸಿಗಳೂ, ಆಂಗ್ಲೋ ಇಂಡಿಯನರೂ ಇಂದು ಕಾಂಗ್ರೆಸಿನೊಂದಿಗೆ ಸಮರವಾಗಿ ಹೋಗಿದ್ದಾರೆ. ಅಂಬೇಡಕರ ಪಕ್ಷದ ಕೆಲವು ಜನ ದಲಿತವರ್ಗದವರು ಹಟಕ್ಕೆ ಬಿದ್ದು, ಕಾಂಗ್ರೆಸಿನೊಂದಿಗೆ ಮೋರಾಟ ಹೂಡುವೆವೆಂದು ಹೆದರಿಸುತ್ತಿದ್ದರೂ, ಬಹು ಸಂಖ್ಯಾಕ ದಲಿತರ ಸಹಕಾರವುಳ್ಳ ಕಾಂಗ್ರೆಸ್ಸು ಅವರಿಗೆ ಹೆದರಿ ಕೈಕೊಂಡ ಮಹತ್ತ್ವದ ಕಾರ್ಯದಿಂದ ಚ್ಯುತವಾಗಬೇಕಾದ ಸಂದರ್ಭವೇನೂ ಇಲ್ಲ. ಅದರಂತೆಯೆ ಮುಸ್ಲಿಂ ಲೀಗಿನವರ ಗಪ್ಪರಣೆಗೆ ಹೆದರಿ ಹಿಂಜರಿಯುವ ಕಾರಣವೂ ಇಲ್ಲ. ಭಾರತಕ್ಕೆ ಏನಾದರೂ ಈಗ ಒಳ್ಳೆಯ ಪರಿಸ್ಥಿತಿ ಬಂದಿದ್ದರೆ, ಮುಂದೆ ಬರಲಿದ್ದರೆ—ಅದೆಲ್ಲಕ್ಕೂ ಪ್ರಮುಖ ಕಾರಣವೆಂದರೆ ಕಾಂಗ್ರೆಸಿಗರು ೬೦ ವರ್ಷಗಳಿಂದಲೂ ಜೀವಭಾವದಿಂದ ಮಾಡಿದ ಪ್ರಯತ್ನ. ಆ ಪ್ರಯತ್ನದ ಫಲವನ್ನವರು ಭಾರತ ನಿವಾಸಿಗಳಿಗೆಲ್ಲ ಸಮಾನವಾಗಿ ಹಂಚಿಕೊಡುವ ಉದಾರಭಾವದಿಂದ ನಿಂತಿದ್ದರೂ, ದುರಾಶೆ-ಮತ್ಸರಂಗಳಿಗೆ ಒಳಗಾದ ಮುಸ್ಲೀಂ ಲೀಗು, ಅಂಬೇಡಕರ ಪಕ್ಷ ಇವು, ಆ ಫಲವು ಸಿಕ್ಕದಂತೆ—ಸಿಕ್ಕಿದ ಫಲವನ್ನೂ ದಕ್ಕಗೊಡದಂತೆ—ಮಾಡಬೇಕೆಂಬ ಹಟದಿಂದ ಕೂಗುತ್ತಿವೆ ಕ್ರಾಂಗ್ರೆಸ್ಸು ಇವುಗಳ ಸ್ನೇಹಹಸ್ತವನ್ನು ಯಾಚಿಸುತ್ತಿದ್ದುದು ಅದರ ಹೆದರಿಕೆಯ ಲಕ್ಷಣವೆಂದಿವು ಭಾವಿಸುತ್ತಿವೆ. ಆದರೆ ಬ್ರಿಟಿಷರಂತಹ ಪ್ರಬಲ ಪ್ರತಿಗಾಮಿ ಶಕ್ತಿಯನ್ನು ಎದುರಿಸಿ ಹಣ್ಣಿಗೆ ತಂದ ಕಾಂಗ್ರೆಸ್ಸಿಗೆ ಇಂದು ಹೆದರಿಕೆಯ ಲವಲೇಶವೂ ಇಲ್ಲ. ಅದಕ್ಕೆಂದು ಬೇಕಾಗಿದೆ ಸಾರ್ವದೇಶಿಕ ಸುಖಶಾಂತಿ. ಆದುದರಿಂದ ಯಾರನ್ನೂ ಆತೃಪ್ತಿ-ಅಸಮಾಧಾನಗೊಳಿಸಬಾರದೆಂದು ಕಾಂಗ್ರೆಸಿನ ಆಶೆ. ಅದಕ್ಕಾಗಿ ಶಕ್ಯವಿರುವ ತ್ಯಾಗವನ್ನು ಮಾತಲಿಕ್ಕೂ ಅದು ಸಿದ್ಧವಿದೆ. ಈ ಮಾತನ್ನು ಜ್ಯಾ. ಜಿನ್ನಾ ಅವರೂ ಜ್ಯಾ. ಅಂಬೇಡಕರರೂ ಮನವರಿಕೆ ಮಾಡಿಕೊಳ್ಳಬೇಕು. ಚರ್ಚಿಲರಿಗಿಂತ ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲರು ಹೆಚ್ಚು ಆತ್ಮೀಯರೆಂಬುದನ್ನು ಗಟ್ಟಿಮುಟ್ಟಾಗಿ ನಂಬಿ, ಅವರೊಂದಿಗೆ ಸಹಕರಿಸಲು ಸಿದ್ಧರಾಗಬೇಕು. ಚಿಕ್ಕ ತಮ್ಮ ದೊಡ್ಡ ಬಟ್ಟಲನ್ನು ಹಾಲುಬೇಕೆಂದು ಹಟ ಹಿಡಿದರೆ, ದೊಡ್ಡ ಅಣ್ಣ ಅದನ್ನು ಕೊಟ್ಟೇ ಕೊಡುತ್ತಾನೆ; ಆದರೆ ಅಲ್ಲಿ ಅಣ್ಣ-ತಮ್ಮರ ಸೌಹಾರ್ದವಿರಬೇಕಲ್ಲದೆ ಭಾಗಾದಿತನದ ಸಂತಾಪವಿರಕೂಡದು.

ಸಿಂಧದ ಗವರ್ನರರಂ ನಡೆಯಿಸಿದ ಗೊಂದಲ

ಸಿಂಧದ ಇಡಳಿತದ ಗೊಂದಲವೊಂದು ಭಾರತೀಯ ರಾಜಕಾರಣದಲ್ಲಿ ಬಿಡಿಸಲಾರದ ಕಗ್ಗಂಟಾಗಿ ಕುಳಿತಿದೆ. ನಾವೆಂದು ಸಮಂಜಸ ವೃತ್ತಿಯವರೆಂದು ತಿಳಿದು ವಿಶ್ವಾಸವಿರಿಸಿದ್ದ ವಾಯಿಸ್‌ರಾಯ ವೇವೆಲ್ ಅವರನ್ನೂ ಸಂಶೋಹದೃಷ್ಟಿಯಿಂದ ನೋಡಲಿಕ್ಕೆ ಪಚ್ಚಿದೆ— ಸಿಂಧದ ಇಂದಿನ ಪರಿಸ್ಥಿತಿ. ಅಲ್ಲಿಯ ಗವರ್ನರ್ ಮುಂಡಿ ಅವರು ಮೋದಿಕಾರರಂತೆ ಅಲ್ಲಿ ರಾಜಕಾರ್ಯದ ಆಟವನ್ನು ಆಡುತ್ತಲಿದ್ದಾರೆ. ಅಸೆಂಬ್ಲಿಯಲ್ಲಿಯ ವಿರುದ್ಧಪಕ್ಷದ ಮುಖಂಡರಾದ ಸಯ್ಯದರು ತಮಗೆ ಅನುಕೂಲವಾಗುವಂತೆ ಪರಿಸ್ಥಿತಿಯನ್ನು ಹಣ್ಣುಗೊಳಿಸಿಕೊಡಲೆಂದೆ, ಗವರ್ನರ್ ಮುಂಡಿಯವರು ತಮ್ಮ ಸ್ಥಾನಬಲದಿಂದ ಎಲ್ಲವನ್ನೂ ಹದಗೆಡಿಸಿಬಿಡುತ್ತಲಿದ್ದಾರೆ. ಯಾವ ತತ್ತ್ವವೂ ಆದರ್ಶವೂ ಇಲ್ಲದ ಸ್ವಾರ್ಥಸಾಧಕರಾದ ಅಲ್ಲಿಯ ಹಲವು ಜನ ಶಾಸನಸಭೆಯ ಸದಸ್ಯರು, ಗವರ್ನರರ ಕೈಗೊಂಬೆಗಳಾಗಿ ಕುಣಿಯುತ್ತಿದ್ದಾರೆ. ಇದರ ಪರಿಣಾಮವೆಂದರೆ ಜನತೆಯ ಹಿತವನ್ನು ಸಾಧಿಸುವಂತಹ ಯಾವ ಸಿಧಾಯಕ ಕಾರ್ಯಗಳೂ ಅಲ್ಲಿಯ ಆಡಳಿತದಿಂದ ನಡೆಯುವಂತಿಲ್ಲ. ಕೈಗೆ ಸಿಕ್ಕಿದ್ದ ಅಧಿಕಾರವನ್ನು ಹೇಗೆ ಉಳಿಸಿಕೊಳ್ಳಬೇಕೆಂಬುದು ಅಧಿಕಾರಪಕ್ಷದ ಮಿಡುಕಾಟ. ಅನಧಿಕೃತವಾಗಿ ಅಧಿಕಾರವನ್ನು ಪಡೆದ ಇವರನ್ನು ಅಧಿಕಾರ ಪದದಿಂದ ಉರುಳಿಸಿ ಜನತೆಯ ಸರಕಾರ ಸ್ಥಾಪಿಸಬೇಕೆಂಬುದು ವಿರೋಧಿ ಪಕ್ಷದ ಹೋರಾಟ. ಆದರಲ್ಲಿ ಮೊರಿ-ಚರ್ಚಿಲ್ ಮುಂತಿಯವರಿಗೆ ಜನತೆಯ ಸರಕಾರ ಸ್ಥಾಪಿಸಗೊಡಬಾರದೆಂದು ಪ್ರಾಣಸಂಕಟ. ಅಸೆಂಬ್ಲಿಯನ್ನು ಅಧಿಕಾರ ಬಲದಿಂದ ರದ್ದುಗೊಳಿಸಿದ್ದಾರೆಯೆ ಹೊರತು, ವಿರೋಧಿ ಪಕ್ಷದವರಿಗೆ ಎಷ್ಟೊಂದು ಪ್ರಯತ್ನಪಟ್ಟರೂ ಮುಂತ್ರಿಮಂಡಲಿ ರಚಿಸಲಿಕ್ಕೆ ಅವಕಾಶ ಕೊಡಲಿಲ್ಲ. ಇದರ ಬಗೆಗೆ ವೈಸ್‌ರಾಯ್ ವೆವೆಲ್ಲರೂ ಬ್ರಿಟಿಷ್ ಪಾರ್ಲಮೆಂಟೂ ತಳೆದ ಮೌನವು, ಆಶ್ಚರ್ಯಸಂತಾಪಗಳಿಗೆ ಕಾರಣವಾಗಿವೆ.

(೧೫ಲ ನೆಯ ಪುಟ ನೋಡಿರಿ)

ಸಾದರ ಸ್ವೀಕಾರ

★

೫೯. **ಕೊಪ್ಪಳದ ವೀರಶೈವ ಫ್ರೀ ಬೋರ್ಡಿಂಗಿನ**—೫೦ನೆಯ ವರ್ಷದ ವರದಿ. ಸದ್ಯದ ಗೌರವ ಕಾರ್ಯದರ್ಶಿಗಳು ಶ್ರೀ. ಆಡೂರ ಬಸವಲಿಂಗನಗೌಡರು ಡೆ ಆ ೨೦ ಪುಟ.

ಶಿಕ್ಷಣ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ನಿಜಾಮ್ ಕರ್ನಾಟಕದ ವೀರಶೈವರಲ್ಲಿ ಜಾಗೃತಿಯನ್ನೂ ಅನುಕೂಲತೆಗಳನ್ನೂ ಒದಗಿಸಿಕೊಡಲು ಹೊರಟು, ಒಳ್ಳೆಯ ರೀತಿಯಿಂದ ಕಾರ್ಯ ಮಾಡುತ್ತಿರುವ ಈ ಸಂಸ್ಥೆಯು ಆತ್ಮಣಭಾಗದ ಬೇರೆ ಕನ್ನಡ ಗುಂಪುಗಳವರಿಗೂ ಆದರ್ಶವಾಗಬೇಕು. ೫೯ನೆಯ ವರ್ಷದಲ್ಲಿ ಈ ವಸತಿಗ್ರಹವು ೨೫ ವಿದ್ಯಾರ್ಥಿಗಳಿಗೆ ಸೌಕರ್ಯವನ್ನೊದಗಿಸಿ ಕೊಟ್ಟಿತು. ವರದಿಯ ವರ್ಷದ ಗಳಿಕೆ ಲಃ೬೯-೬-೬. ಖರ್ಚು ಲಃ೬೫-೧೧-೩. ಉಳಿಕೆ ಲಃ೩-೧೪-೩. ಸಂಸ್ಥೆ ಬಹುಕಾಲ ಬಾಳಿ ನಾಡಿನ ಸುಸಂಘಟನೆಗೆ ಕಾರ್ಯಮಾಡುತ್ತಿರಲಿ.

೬೦. **ಅಂದು ಇಂದಿನ ಹಳ್ಳಿಗಳು** (ಒಂದು ಪ್ರಬಂಧ). ಬರೆದವರು: ಶ್ರೀ. ಬಸವ, ಆಡವೀಮಪಟ್ಟ. ಪ್ರಕಾಶಕರು: ಅಡಿವೇಂದ್ರ ಗ್ರಂಥಮಾಲಾ, ಕಲ್ಲೂರ; ಜಿಲ್ಲಾ ರಾಯಚೂರು; ನಿಧೂಮಸ್ಟೇಟ್. ಕ್ರಾ. ಆ. ೧೪ ಪುಟಗಳು. ಬೆಲೆ ೦-೪-೦.

ಇಂದಿನ ಹಳ್ಳಿಯ ದುಸ್ಥಿತಿಗಾಗಿ ಕುದಿದು ಬರೆದ ಪ್ರಜಾತ್ಮಕ ಪ್ರಬಂಧವಿದು. ಲೇಖಕರ ಮೊದಮೊದಲಿನ ಲೇಖನ ಪ್ರಯತ್ನ. ನಿಜಾಮ್ ಕರ್ನಾಟಕದಲ್ಲಿ ಪುಸ್ತಕಗಳು ಪ್ರಕಟವಾಗ ತೊಡಗಿರುವುದೇ ಒಂದು ಕನ್ನಡದ ಶುಭಭವಿಷ್ಯದ ಸೂಚನೆ.

೬೧. **ಜ್ಞಾನಪ್ರಭಾ** (ಚಿಕ್ಕ ಕಾದಂಬರಿ). ಬರೆದವರು 'ಧನ್ವಂತ.' ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರಾ. ಆ. ೮೮ ಪುಟಗಳು. ಬೆಲೆ ೧-೧-೦.

೬೨. **ಕಥಾವಳಿ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ ಜೂಲೈ ೧೯೪೬). ಸಂಪಾದಕ ಮತ್ತು ಪ್ರಕಾಶಕ ಶ್ರೀಮಾನ್ ಒಲೇಟಿ ವಿ. ಗುಪ್ತ, ಬೆಂಗಳೂರು ಸಿಟಿ. ಕ್ರಾ. ಆ. ೨೪೦ ಪುಟಗಳು. ಚಿತ್ರದ ಪುಟಗಳು ಬೇರೆ. ಬೆಲೆ ೧-೦-೦.

ಮೂರು ಬಣ್ಣದ ಸುಂದರ ಚಿತ್ರದ ಹೊದಿಕೆಯಿಂದ ಕೂಡಿದ ಮನೋಹರವಾದ ಈ ವಾರ್ಷಿಕ ಸಂಚಿಕೆ, ಕಳೆದ ವರ್ಷದ ವಿಶೇಷ ಸಂಚಿಕೆಯಂತೆಯೆ ವಿಷಯವೈವಿಧ್ಯದಿಂದ ಕೂಡಿದೆ. ಲೇಖಕವರ್ಗದಲ್ಲಿ ಶ್ರೀಯುತರುಗಳಾದ 'ಕ್ಷೀರಸಾಗರ; ವರಾಮು ಕಾರಂತ, ಗೋರೂರು ರಾಮುಸ್ವಾಮಯ್ಯಂಗಾರ್, ಸುದೇವ ಭೂಪಾಲಂ, ಬಿ. ಎಚ್. ಶ್ರೀಧರ, ಕೆ. ಟಿ. ಪುರಾಣಿಕ, ಎಂ. ವಿ. ಸೀತಾರಾಮಯ್ಯ, ಜಿ. ವರದರಾಜರಾವ್, ಬಸವ ರಾಜ ಕಟ್ಟೀಮನಿ, ಮತಿಘಟ್ಟ ಕೃಷ್ಣಮೂರ್ತಿ ಮೊದಲಾದ ಸುಪರಿಚಿತ ಲೇಖಕರಿರುವರು. ಹಲವು ಮನೋರಂಜಕ ವಿಷಯಗಳಿಂದ ಕೂಡಿದ ಈ ಸಂಚಿಕೆಯು ನಿಜವಾಗಿಯೂ ಸಂಗ್ರಹಯೋಗ್ಯವಾಗಿದೆ.

೬೩. **ಕರ್ನಾಟಕ ಬಂಧು** (ವಾರಪತ್ರಿಕೆ) ಸಂಪಾದಕರು ಶ್ರೀ. ಜೆನ್ನಬಸವಸ್ವಾಮಿ ಹಿರೇಮಠ, ಗದಗ. ಪ್ರಕಾಶಕರೂ ಅವರೇ. ಕ್ರೌನ್ ಫೋಲಿಯೊ ೨೦ ಪುಟಗಳು. ಬಿಡಿಸಂಚಿಕೆಗೆ ಎರಡು ಆಣೆ.

ಉತ್ತರ ಕರ್ನಾಟಕದಲ್ಲಿಯು ಒಂದೊಂದು ವಾರಪತ್ರಿಕೆಯಿದು. ದೇಶ-ವಿದೇಶದ ಪ್ರಜಲಿತ ವಿಷಯಗಳನ್ನು ಪರಿಚಯ ಮಾಡಿಕೊಡಲಿಕ್ಕೆ ತಕ್ಕುದಾಗಿದೆ. ಆದರೆ ಪ್ರಾಂತೀಯ ಜನ ಜೀವನವನ್ನೂ ರಾಜಕೀಯ ಚಟುವಟಿಕೆಗಳನ್ನೂ ಇನ್ನಿಷ್ಟು ಹೆಜ್ಜಾಗಿ ಕೊಡುತ್ತಿರಬೇಕೆಂದು ನಮ್ಮ ಸೂಚನೆ.

೬೪. **ಧರ್ಮ ಸಂಕಟ್ಟ** (ಅನುವಾದಿತ ಕಾದಂಬರಿ). ಅನುವಾದಕರು ವಾಡೇದ ರಘುನಾಥಭಟ್ಟರು, ಮಿಟ್ರಿಕೋಟಿ. ಭಾರತ ಪಾಡದ ಪ್ರತಿಭಾ ಗ್ರಂಥಮಾಲೆಯ ೬ನೆಯ ವರ್ಷದ ೪ನೆಯ ಕಿರಣ. ಕ್ರಾ. ಆ. ೨೧೬ ಪುಟಗಳು, ಬೆಲೆ ೨-೦-೦.

೬೫. **ಕ್ರಾಂತಿ** (ಕೈಬರೆಹದ ಮಾಸಪತ್ರಿಕೆ). ಸಂಪಾದಕರು 'ವಿಶಾಲಾಕ್ಷಿ,' ಸಂಚಾಲಕರು ಆರ್. ಬಿ. ಕುಲಕರ್ಣಿ ಅವರು. ಬಾಗಿಲುಕೋಟೆಯ 'ಪ್ರಗತಿಶೀಲ' ಸಂಘದ ಕೈಬರೆಹದ ಪತ್ರಿಕೆ. ಜಯಂತಿಯ ೪೪ನೆಯ ೪೮ ಪುಟಗಳು.

ಆಚ್ಚಾದ ಕೆಲವು ಪತ್ರಿಕೆಗಳಲ್ಲಿ ಕನ್ನಡನಾಡಿನ ಸಾಹಿತ್ಯಿಕ ಮತ್ತು ರಾಜಕೀಯ ವ್ಯಕ್ತಿಗಳನ್ನು, ಪಕ್ಷಾಭಿಮಾನ ಮಹಿಮ ಕಟುವಾಗಿ ಟೀಕಿಸುವ ಮಾದರಿಯನ್ನಿರಿಸಿಕೊಂಡು, ಈ ಪತ್ರಿಕೆಯಲ್ಲಿ ಬಾಗಿಲುಕೋಟೆಯ ತರುಣರಾರಾರನ್ನೋ ಪಕ್ಷಾಭಿಮಾನದಿಂದ ತೀಕ್ಷ್ಣವಾಗಿ ಟೀಕಿಸಿದ ಬರೆಹಗಳಿವೆ. ಮತ್ತೆ ಆ ಟೀಕೆಗಳಿಗೆ ಇರಬೇಕಾದ ಗಾಂಭೀರ್ಯ ಇಲ್ಲವೆ ಇಲ್ಲ. ಇದು ಕನ್ನಡಕುಲದ ಒಂದುಗೂಡುವಿಕೆಯ ಆದರ್ಶಕ್ಕೆ ಸಹಕಾರಿಯಾಗದು. ವಿಧಾಯಕಮಾರ್ಗದಿಂದ ಆಗುವಷ್ಟು ಪ್ರಯೋಜನ ವಿಧ್ವಂಸಕಮಾರ್ಗದಿಂದಾಗದು. 'ವೈರಿಯ ಬಗೆಗೆ ಮಾತನಾಡಬೇಕಾದರೂ ಒಳ್ಳೆಯ ರೀತಿಯಿಂದ ಮಾತನಾಡು; ಏಕೆಂದರೆ ಆವನು ಯಾವಾಗ ನಿನ್ನ ಮಿತ್ರನಾದಾನೆಂಬುದನ್ನು ನೀನು ಅರಿಯೆ' ಎಂದು ತತ್ತ್ವಜ್ಞಾನಿ ರಸ್ಕಿನ್ ಹೇಳಿದ್ದಾನೆ. ಕಿರಿಯ ಲೇಖಕರು ಈ ನೂತನ್ನು ಮರೆತು ನಡೆಯಲಾಗದು. ಕಿರಿಯರ ಈ 'ಕ್ರಾಂತಿ' ಮುಂದಿನ ಅನುಭವದಿಂದ ಬೆರೆತುದಾಗಿ ಕನ್ನಡದ ಉನ್ನತಿಗೆ ಕಾರಣವಾಗಲಿ.

೬೬. **ಕವಿವರ ಚೇಂದ್ರೆ** (ವ್ಯಕ್ತಿ ಪರಿಚಯಾತ್ಮಕ ಪ್ರಬಂಧಗಳ ಸಂಕಲನ.) ಬೇರೆ ಬೇರೆ ಲೇಖಕರು ಬರೆದುದನ್ನು ಚೇಂದ್ರೇ ಸತ್ಕಾರ ಸಮಿತಿಯ ಪ್ರಕಾಶನ ಶಾಖೆಯವರು ಸಂಪಾದನೆ ಮಾಡಿದ್ದಾರೆ. ಘಾಶವಾಡದ ಲಲಿತ ಸಾಹಿತ್ಯಮಾಲೆಯ ೧೫ನೆಯ ಕುಡಿ. ಕ್ರಾ ಆ. ೧೦೦ ಪುಟಗಳು. ಬೆಲೆ ೧-೪-೦.

R. No. B. 4116

JAYANTI October 1946

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಪಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜರ್
ಎಮ್. ಗೋವರ್ಧನರಾವ

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಸುದೃಢಕಾಯರೂ ಆನಂದವೃತ್ತಿಯವರೂ ಆದ ಬಾಲಕರಿಂದರೆಯೇ
ಗೃಹರಾಜ್ಯದಲ್ಲಿಯ ಪ್ರತ್ಯಕ್ಷವಾದ ಆನಂದ!

ತಮ್ಮ ಮನೆಯಲ್ಲಿಯ ಬಾಲಕನು ಇದಕ್ಕೆ ಅಪವಾದವಾಗಿ ಇದ್ದರೆ,

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್ ಅವರ

ಕುಮಾರೀ ಆಸವ ನಂ. ೩

(೫೦ ತೊಲೆಗೆ ಒಂದೂಕಾಲು ರೂಪಾಯಿ)

ಈ ಔಷಧಿಯನ್ನು ಅವನಿಗೆ ಕೊಡಿರಿ. ಕೆಮ್ಮು, ದಮ್ಮು, ಜ್ವರಗಡ್ಡೆ, ಯಕೃತ್ತಿನವಿಕಾರ, ಪಾಂಡುರೋಗ—ಮೊದಲಾದ ಬಾಲರೋಗಗಳನ್ನು ಹೊಡೆದುಹಾಕುವುದಲ್ಲದೆ ಮಕ್ಕಳ ಶಕ್ತಿಯನ್ನೂ ಹೆಚ್ಚಿಸುವುದು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ

ಹುಬ್ಬಳ್ಳಿ ಶಾಖೆ—ಸ್ಟೇಶನ್ ರೋಡ್, ಹುಬ್ಬಳ್ಳಿ

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—8872-46-1200.

ಸಂಪದ

ಸಂಪಾದಕರು
ಪಟಗೇರಿ ಕೃಷ್ಣಶರ್ಮರು

ಪ್ರೊ. ಧಾರವಾಡಕರ, ಶ್ರೀ. ಎನ್. ಎಸ್. ಗದಗಕರ,
ಶ್ರೀ. ನಾಗೇಶ ಶಾನಭಾಗ, ಶ್ರೀ. ಪಿ. ಸಿ. ಪಿಜ್ಜಲವಾಸಿ,

ಮುಖ್ಯ ವಿಷಯಗಳು

ಯೆಮ್ಮೆ (ಕವನ)
ಶ್ರೀ. ಕೆ. ಮಂಜುನಾಥ. ನಿತ್ಯನುಂಡಲಿ, ಕೋಟೇಶ್ವರ ೧೬೧

ತಮಸೋ ಮಾ ಜ್ಯೋತಿರ್ಗಮಯ ! (ಸಂಪಾದಕೀಯ)
ಸಂಪಾದಕರು ೧೬೨

ಗಂಟು (ಸಣ್ಣಕತೆ)
ಶ್ರೀ. ಎಚ್. ಗುಡ್ಡಪ್ಪ, ಹಾವೇರಿ ೧೬೫

ಕನ್ನಡಪಲ್ಲಿ ವಿಜ್ಞಾನಸಾಹಿತ್ಯದ ಆಭ್ಯಾಸ (ಸಾಹಿತ್ಯವಿಮರ್ಶೆ)
ಪ್ರೊ. ರಾ. ಯ. ಧಾರವಾಡ ಎಂ.ಎ. ಧಾರವಾಡ ೧೬೮

ಸ್ವಾತಂತ್ರ್ಯದೇವಿಗೆ (ಕವನ)
ಶ್ರೀ. ಎಂ. ರಾಮಕೃಷ್ಣಭಟ್ಟ, ಉಡುಪಿ ೧೭೨

ಸುರಳಿ ಮುಲಗದಿರಿ (ಕವನ)
ಶ್ರೀ. ಸಂಗಣ್ಣ ಮುನೇನೂರ, ಹರಪನಹಳ್ಳಿ ೧೭೨

ಕೆಲ್ಸೀರ ಕಾವುಜ್ಜಿ (ಒಂದು ಜಾಳಜಿತ್ರ)
ಶ್ರೀ. ಬಾಲೇಹೊಸೂರು ನಾರಾಯಣರಾಯರು ೧೭೩

ಕೆಲಸ-ಕಸುಬು (ವಿಚಾರಪ್ರಚೋದಕ ಪ್ರಬಂಧ)
ಹೆಗಡೆ ಬಂಧುಗಳು, ಕುಮಟಾ ೧೭೫

ನಾನು ಟಾಂಗಾ ಪಣಾರಿಯಲ್ಲಿದ್ದಾಗ (ಲಲಿತ ಪ್ರಬಂಧ)
ಶ್ರೀ. ಎಸ್. ಎಸ್. ಗವಡಗಕರ ಬಿ.ಎ. ಧಾರವಾಡ ೧೭೭

ಹಸಿರು ಚೆಕ್ಕು (ಅನುವಾದಿತ ಕಥೆ)
ಶ್ರೀ. ನಾಗೇಶ ಶಾನಭಾಗ, ಮುಂಬಯಿ ೧೭೯

ಸೋಯಾಬೀನ್ (ಕೃಷಿವಿಜ್ಞಾನ)
ಶ್ರೀ. ವಿ ಸಿ. ಹಿತ್ತಲಮನೆ, ಪುಣೆ ೧೮೩

ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ
ಶ್ರೀ. ಮುದವೀಡು ಕೃಷ್ಣರಾಯರು, ಧಾರವಾಡ ೧೮೭

ಅಲ್ಲದೆ ' ಬೀರಣ್ಣನ ಬಡಿನುಡಿ ' (೧೭೩), ಸಾದರ ಸ್ವೀಕಾರ (೧೭೪), ಪುಸ್ತಕ ವಿಮರ್ಶೆ (೧೮೯), ನಾಲ್ಕೂ ನಿಟ್ಟಿನ ನೋಟ (೧೯೧).

ವಿ. ಸೂ:— ೧೭೫ ನೆಯ ಪುಟದಿಂದ ೧೭೭ ನೆಯ ಪುಟಗಳ ವರೆಗಿನ ಅಂಕೆಗಳು ಕಣ್ತಪ್ಪಿನಿಂದ ೧೭೧ ರಿಂದ ೧೭೮ ರ ವರೆಗೆ ಬಿದ್ದಿವೆ. ದಯೆಯಿಟ್ಟು ತಿದ್ದಿಕೊಂಡು ಓದಬೇಕು.

ಅದರಂತೆಯೆ ೧೮೬ ನೆಯ ಪುಟದಲ್ಲಿ ಇರಬೇಕಾದ ವಿಷಯ ೧೮೫ ನೆಯ ಪುಟದಲ್ಲಿಯೂ ೧೮೬ನೆಯ ಪುಟದಲ್ಲಿ ಇರಬೇಕಾದದು ೧೮೫ ನೆಯ ಪುಟದಲ್ಲಿಯೂ ಆಚ್ಚಾಗಿದೆ. ವಾಚಕರು ಮುದ್ರಣ ಪಿಶಾಚದ ಈ ದೋಷಕ್ಕಾಗಿ ನಮ್ಮನ್ನು ಕ್ಷಮಿಸಿ ಸರಿಮಾಡಿಕೊಂಡು ಓದಬೇಕಾಗಿ ಬಿನ್ನಹ.

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂಪಲು ಉದುರುವುದು, ಸರೆಯುವುದು, ಹೊಟ್ಟು, ಉದುರುವುದು, ಪಟ್ಟೆತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಆಪೋಷಧವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ನೆಯ ನವಂಬರ್ ೧೯೪೬ | ಸಂಚಿಕೆ ೬

ಯುದ್ಧ!

ಶ್ರೀ. ಕೆ. ಮಂಜುನಾಥ 'ಮಿತ್ರಮಂಡಲಿ', ಕೋಟೇಶ್ವರ

ಹೋಯಿತೇ ಯುದ್ಧ ? ಜೀವನದ ಸಂದಿಗ್ಧ ?
ಆಯಿತೇ ಕೋಟಲೆಯ ಕೋಟಿಯದು ದಗ್ಧ ?
ಸಂಕಟದ ಸುಳಿಯನ್ನು ಬದುಕು ತಡಹಾಯ್ತೆ ?
ಕೋಟಿ ಕೀಟಲೆಗಳನು ದಾಟಿ ಜಸಕಾಯ್ತೆ ? ೧

ತೃಪ್ತಿಗೊಂಡುದೆ ಕೋಳು ತೀಟೆಯಲಿ ಹೆಣಗಿ ?
ಮೌನಗೊಂಡುದೆ ಕಾರ್ಯ ಬವರದಲಿ ಮುಣುಗಿ ?
ಅಂದು ಕೊಂಡಾ ಕೊಳೆಯ ಹೆಸರಡಗಿತೇ ?
ಅಧಿಕಾರ-ದರ್ಪಗಳ ಉಸಿರುಡುಗಿತೆ ? ೨

ಹುರಿದುಂಬಿಸಿದ ಸೊಗಸಿನಾ ನಾಡು ನೋಟಗಳ
ಸಂಪದದ ಸೌಭಾಗ್ಯ ಕಾಣಲಿಲ್ಲ ;
ನುಡಿ-ನಡೆಯೊಳೊಂದಾಗಿ ಮುಳುವಾದ ಗೊಣಸುಗಳ
ತೊಡರ ತಳಮಳವೇನು ಮಾಣಲಿಲ್ಲ ; ೩

ಗೆಲುವಿನೊಲವಿನ ನೆಳಲೊಳೊಳಿತಾಗಿ ಬಾಳಲೆಂ-
ದೆಣಿಸಿ ದುಡಿದಿಹ ಜೀವಕೆಲ್ಲ ಗೆಲವು ;
ಅಳಿಕೆಯ ನುಗ್ಗಿನಲಿ ಸಿಡಿದು ಹಲವಾಗುತಿವೆ
ಬಾಳಿಕೆಯ ಭೀತ ಭೂತಗಳ ಬಲವು ! ೪

ಏರು-ತಗ್ಗುಗಳನೊಂದೇ ಸಮಕೆ ಕರಲೆಂದು
ಹೋರುವೆವು ಏನಿಯೆ ನಿಷಮತೆಯ ಕತ್ತಿ
ನಡಿಲಾದ ನಡೆವಳಿಯ ಬಿಗುಮಾನವನು ಬಿಗಿದು
ಕಾಳೆಗದ ರಕ್ತದಲಿ ಬೆಸೆಯಲೊತ್ತಿ ! ೫

ಬದುಕು ಎಚ್ಚರುಗೊಂಬುದಾಹವದ ಗದ್ದಲದಿ
ಮತ್ತೆ ಮಲಗುವುದು ಇರವನ್ನು ಮರೆದು ;
ಇಚ್ಛೈಗಳ ದೊಚ್ಚು ಮುಗುದೊಮ್ಮೆ ಸಮರವ ಕೆದಕೆ
ಏಳುವುದು ; ಕಣ್ಣಕಟ್ಟಿನ ಪರೆಯ ಹರಿದು ! ೬

ಮುಗಿಯುವುದೆ ಯುದ್ಧ ? ಹಬ್ಬಿರುವ ದ್ವಂದ್ವಗಳೊಳಗೆ
ಸಾಲಾಗಿ ಅಳವಂತೆ ಬದುಕುವುದನು ತಿರುಗಿ—
ಪತತ ಕಾಳೆಗದ ಕಣವಲ್ಲಿ ಕಣ್ಮರೆಯಾಗಿ—
ಸಮ್ಮನಿರೆ ಹಿಂದಾಗಿ ಕಾಣುವುವು ಮಿರುಗಿ. ೭

ಬಾಳ ಜಯಲಿನಲಿ ಹೋರಾಡುವೆವು ; ಏಗುವೆವು ;
ಅನವರತ ಸಾಗುವುದು ಹೊಟ್ಟೆಯುದ್ಧ !
ಸಿಲ್ಲದದು ; ನಿಲುಕದದು ; ಹೊಲ್ಲ ಸೆಣಸಾಟವನು
ಸಲ್ಲಿಸಿಯೆ ಮೂಡುವರು ಸಿದ್ಧ ಬುದ್ಧ ! ೮

ತಮಸೋ ಮಾ ಜ್ಯೋತಿರ್ಗಮಯ!

ಮಹಾಯುದ್ಧದ ಕಾರ್ಗತ್ತಲೆ ಇದುವರೆಗೆ ಪ್ರಪಂಚವನ್ನೆಲ್ಲ ಆವರಿಸಿತ್ತು. ಈಗ ಯುದ್ಧದ ಮುಗಿಲಾಯವೊಂದಿಗೆ ಜಯಶಾಲಿಗಳಾದ ರಾಷ್ಟ್ರಗಳು ಆ ಕಾರ್ಗತ್ತಲೆಯನ್ನು ಕಳೆದುಕೊಂಡಿವೆ; ದೀಪಾವಳಿಯ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿ ಆನಂದದಿಂದ ಬಾಳಬೇಕೆಂಬ ಆಶೆಯಲ್ಲಿವೆ. ಪರಾಜಿತ ರಾಷ್ಟ್ರಗಳಲ್ಲಿ ಜೇತೃರಾಷ್ಟ್ರಗಳು ದಿನದಿನವೂ ಹಬ್ಬಿಸುತ್ತಿರುವ ಕತ್ತಲೆಯು, ಇಂದು ಆ ಆ ರಾಷ್ಟ್ರಗಳನ್ನು ಮೊದಲಿಗಿಂತ ಹೆಚ್ಚಾಗಿ ತಲ್ಲಣಿಸಲು ಹಚ್ಚಿದೆ. ನಿಜವಾದ ದೀಪಾವಳಿಯನ್ನಾಚರಿಸಬೇಕೆಂಬ ತವಕದಲ್ಲಿರುವ ಜೇತೃರಾಷ್ಟ್ರಗಳಾದರೂ ಬೆಳಕನ್ನಾಶಿಸಿ ಹೊರಟಿನೆಯಿಂದಲು ಹೇಳಬೇಕೇ? ಅದೂ ಇಲ್ಲ ಪರಸ್ಪರರಲ್ಲಿಯ ಅವಿಶ್ವಾಸ, ಸಂದೇಹವೃತ್ತಿ, ಸ್ವಾರ್ಥಬುದ್ಧಿ, ಮಾತ್ಸರ್ಯ, ನೋಲಾಟಗಳು, ಆ ರಾಷ್ಟ್ರಗಳ ಜನರನ್ನೂ ಇಂದು ಬೆಳಕಿನಿಂದ ಕತ್ತಲೆಯ ಲೋಕದ ಕಡೆಗೇ ಸೆಳೆಯುತ್ತಲಿವೆ. ಆದುದರಿಂದಲೆ, ನೋಡುವ ಕಣ್ಣಿದ್ದು ನೀಗಿಸುವ ಸಾಮರ್ಥ್ಯ ಸಾಲದೆ ಮರುಗುವ ಜೀವಿ:

'ಜೀವ ದೀವಳಿಗೆಗಾರಯ್ಕುತಿಹುದು,
ಕಾರ್ಯ ಕಾವಳದತ್ತ ತುಯ್ಕುತಿಹುದು'

ಎಂದು ನಿರಾಶೆಯಿಂದ ನಿಟ್ಟುಸಿರುಬಿಡುತ್ತ ಕಳೆತುಕೊಳ್ಳುವ ಪ್ರಸಂಗಬಂದಿದೆ.

ಪಶ್ಚಿಮದ ಯಾವ ಸಮುದ್ಧರಾಷ್ಟ್ರದಲ್ಲಿಯೂ ಇಂದು ದೀಪಾವಳಿಯನ್ನಾಚರಿಸಬೇಕಾದ ಮಾನವನಿಗೆ ತಲೆಯೆತ್ತಿಲ್ಲ. ಬೆಳಕನ್ನು ಕಾಣಲು ಹೊದಲು ಬೇಕು— ಮಾನವನಿಗೆ ಮೈತ್ರಿ, ಕರುಣ, ಮೋದಗಳು. ಇಂದು ಅವುಗಳಿಗೆ ಎಲ್ಲಿಯವಾದರೂ ಎಡೆಯಿದೆಯೆ? ವ್ಯಕ್ತಿ—ವ್ಯಕ್ತಿಗಳಲ್ಲಿಯೂ ಗುಂಪು—ಗುಂಪುಗಳಲ್ಲಿಯೂ ಇಂದು ನೆಲೆನಿಂತು ಕೆಣಕುತಿದ್ದುದು ಮೈತ್ರಿಯಲ್ಲ; ದ್ವೇಷ—ವೈರ. ಅವರಂತೆಯೆ ಮೈಷವನ್ನು ಪೂರ್ಣವಾದ ಸೃಷ್ಟಿಯಲ್ಲಿ ಸಮತೆ ಸ್ಥಾಪಿತವಾಗಬೇಕಾದರೆ, ಮಾನವನ ಹೃದಯದಲ್ಲಿ ಕರುಣೆಯ ಕಡಲು ಉಕ್ಕಬೇಕಾಗುವುದು. ಬಲಿಷ್ಠನ ನೆರವು ಬಲಹೀನನಿಗೂ ಸಿರಿವಂತನ ನೆರವು ಬಡವನಿಗೂ ಜ್ಞಾನಿಯ ನೆರವು ಅಜ್ಞಾನಿಗೂ ಸಿಕ್ಕಿ ಮಾನವಸಮಾಜವೆಲ್ಲ ಒಂದೆ ಹಾದಿಯಲ್ಲಿ ನೋಲೆ ಒಕ್ಕೂಟದಿಂದ ನಡೆಯಬೇಕಾದರೆ, ಮಾನವನ ಕರುಣೆ ಅವಿಚ್ಛಿನ್ನವಾಗಿ ಕಾರ್ಯ ಮಾಡಬೇಕಾಗುವುದು. ಆದರೆ ಇಂದು ಆ ಕರುಣೆಯ ಸಾಗರ ಬತ್ತಿಹೋಗಿ, ಅಸಹನೆ ತನ್ನ ಕಸರತ್ತನ್ನು ನಡೆಯಿಸಿದೆ. ಇನ್ನು ತೃಪ್ತಿಯಿಂದ ಹುಟ್ಟಿದ ಮೋದದ ವಾತಾವರಣ ದೀಪಾವಳಿಯನ್ನು ಕರೆಯಲು ತಕ್ಕುದು. ಆದರೆ ಈಗ ಎಲ್ಲಿ ನೋಡಿದರೂ ಅತೃಪ್ತಿಯಿಂದ ಕೆರಳಿದ ಹೃದಯಗಳೇ ನಮಗೆ ಕಾಣುತ್ತಲಿವೆ. ಕೋಟ್ಯಧೀಶರಿದ್ದರೂ ಇನ್ನಿಷ್ಟು ಕೋಟಿಗಳಿಗೆ ಅಧೀಶನಾಗಬೇಕೆಂಬ ಅತೃಪ್ತಿ; ರಾಜ್ಯ—ಸಾಮ್ರಾಜ್ಯಗಳಿಗೆಲ್ಲ ಸಾರ್ವಭೌಮತೆಯನ್ನು ಪಡೆಯಬೇಕೆಂಬ ಅತೃಪ್ತಿ. ಈ ಮಹಾ ಅತೃಪ್ತಿಗಳು ಜನತೆಯ ತೃಪ್ತಭಾವವನ್ನೆ ಹೊನೆದೋಡಿಸಿಬಿಟ್ಟಿವೆ. ತೃಪ್ತಿಯಿಲ್ಲದಲ್ಲಿ ಮೋದವೆಲ್ಲಿಂದ ಬಂದೀತು? ಮೋದವಿಲ್ಲದವರಿಗೆ ಉತ್ಸಾಹ-ಉತ್ಸವಗಳೆಲ್ಲಿಂದ ಬರಬೇಕು?

ಎಲ್ಲರಿಗಿಂತ ಹೆಚ್ಚಾಗಿ ಭಾರತೀಯರು ಬೆಳಕಿನ ಉಪಾಸಕರು. 'ಅಸ್ಮೇ ನಯ ಸುಪಥಾ ರಾಯೇ ಅಸ್ಮಾನ್' ಎಂದು ಬೆಳಕನ್ನು ಬೇಡಿಕೊಂಡವರು. ತಮ್ಮ ಬುದ್ಧಿ—ಜ್ಞಾನಗಳನ್ನು ಪ್ರಜ್ವೋದಿಸಲು ನಿತ್ಯವೂ ಬೆಳಕಿನ ದೇವತೆಯನ್ನು ಬಿನ್ನವಿಸಿಕೊಳ್ಳುವವರು ಬೆಳಕಿನ ಸ್ವರೂಪವನ್ನು ಕಂಡು, ಹಲವು ಸಾವಿರ ವರ್ಷ ಬೆಳಕಿನ ನೆರವಿನಿಂದ ಶಾಂತಿ—ಸುಖಗಳಲ್ಲಿ ಬಾಳಿದವರು. ಆದರೆ ಇಂದು ಅಜೇ ಭಾರತೀಯರು ಎಲ್ಲಿ ಇದ್ದಾರೆ? ಬೆಳಕಿನ ಕಲ್ಪನೆ ಕೂಡ ಬಾರದ ಅಂಧಂತಮಿಸ್ರನ ಕೂಪದಲ್ಲಿ ಬಿದ್ದಿದ್ದಾರೆ. ಆದುದರಿಂದಲೆ ಭಾರತದಲ್ಲಿ:

"ಮುಳಿಗಾಲ ಕಳೆದರೂ ಇಳೆ ಬರಿದು ಬರಿದೆ!
ಬತ್ತದಿದ್ದರೆ ಬರಿಯ ಮಣ್ಣು ಬೆಳೆ ತಹುದೆ?
ಹಸಿಹಸಿದು ಒರಲುತಿದೆ ಜೀವಕುಲವು
ಇದು ನಮ್ಮ ನಿಷ್ಕರ್ಮ ಬೆಳೆದ ಫಲವು!"

ಕತ್ತಲೆಯಲ್ಲಿಯ ಅತೃಪ್ತಿ—ಅಸಂತುಷ್ಟಿಗಳು ಭಾರತೀಯರನ್ನಿಂದು ಕಳವಳದಿಂದ ಕೈಕಾಲು ಝಾಡಿಸಲು ಹಚ್ಚಿವೆ. ಇದರ ಪರಿಣಾಮವೇನು? ನೆರೆಯಲ್ಲಿದ್ದ ಸ್ವಜನರ ಪ್ರಾಣನಾಶ, ವಿತ್ತನಾಶ, ಜೀವಿತನಾಶ. ಇದರ ಪ್ರತ್ಯಕ್ಷ ಉದಾಹರಣೆಗಳೆಂದರೆ ಮುಂಬಯಿ ಕಲಕತ್ತೆ, ನೌಕಾಲಿಗಳಲ್ಲಿ ನಡೆದಿರುವ ಪ್ರಳಯಗಳು. ಬೆಳಕನ್ನಾಶಿಸುವ ಮಾನವನು ಮಾಡಬೇಕಾದ ಕಾರ್ಯಗಳೇ ಅವು? ಅಲ್ಲಿ ಹೆಣ್ಣು ತಾಯಿತನ ನುಚ್ಚಿತು ಹೋಗಿದೆ; ಮಾನವಧರ್ಮದ ಸಹಿಷ್ಣುತೆ ದ್ವೇಷ—ದ್ವೇಷಗಳು ಹೇಳಹೆಸರಿಲ್ಲದಂತಾಗಿವೆ. ಎಷ್ಟು ಜನ ತಾಯಿ—ತಂದೆಗಳು ಅಲ್ಲಿ ಮಕ್ಕಳನ್ನು ಕಳೆದುಕೊಂಡಿದ್ದಾರೆ; ಎಷ್ಟು ಜನ ಹಸುಮಕ್ಕಳು ಅಲ್ಲಿ ತಾಯಿ—ತಂದೆಗಳನ್ನು ಕಳ್ಪಿಸಿಕೊಂಡಿದ್ದಾರೆ? ಎಷ್ಟು ಜನ ದಂಪತಿಗಳ ಪ್ರೇಮ ಅಲ್ಲಿ ಜೋಳಿಯಾಗಿದೆ; ಎಷ್ಟು ಜನ ಗೆಯರಗೆಳೆತನ ಅಲ್ಲಿ ಕೊಲೆಗೊಂಡಿದೆ? ಎಷ್ಟುಜನರಿಗೆ ನೆರಳು ಕೊಟ್ಟಿದ್ದ ಮನೆ ನೆಲಸಮವಾಗಿದೆ; ಎಷ್ಟು ಜನರ ಹಸಿವನ್ನು ಕಳೆಯಲಿದ್ದ ಅನ್ನ—ಆಹಾರ ಸುಟ್ಟು ಬೂದಿಯಾಗಿದೆ? ಮನುಷ್ಯನೆನಿಸಿಕೊಳ್ಳುವವನು ಮಾಡಬೇಕಾದ ಕೆಲಸವೇ ಇದು? ಈ ಕಾಲ ಹೋದಾಗಲೆ ಭಾರತಕ್ಕೆ ನಿಜವಾದ ದೀಪಾವಳಿ ಬರುವುದು. ಭಾರತದ ದೀಪಾವಳಿಯೇ ಲೋಕಕ್ಕೆ ದೀಪಾವಳಿಯನ್ನೊದಗಿಸಬಲ್ಲದು, 'ಅಸತೋ ಮಾ ಸದ್ಗಮಯ!' ಎಂದು ಅದು ಮತ್ತೆ ಕೈಹಿಡಿದು ನಡೆಯಿಸಬಲ್ಲದು.

—ಸಂಪಾದಕರು



ಪ್ರಶ್ನೆಗೆ ಉತ್ತರ

ಪ್ರ:— ಬೆಳಗಾಂವಿಯಲ್ಲಿ ಕನ್ನಡದ ಅಭಿಮಾನಿಗಳಾದ ಶ್ರೀ. ಮಾನ್ ಅವರಿಂದ ಜೋತಿಯವರನ್ನು, ಮುಂಬಯಿ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿಯೆ ಮರಾಟ ಪುಂಡರು ಹೊಡೆದರಂತೆ. ಆಗ ಸಭೆಯಲ್ಲಿರುವ ಕನ್ನಡಿಗರು ಏನು ಮಾಡಿದರು?

ಉ:— ನಮಗೆ ಗೊತ್ತಿದ್ದಂತೆ ಹೊಡೆಯುವವರನ್ನೂ ಹೊಡೆಸಿಕೊಳ್ಳುವವರನ್ನೂ ನೋಡುತ್ತ ಸುಮ್ಮನೆ ಕುಳಿತಿದ್ದರು. ಈ ಸಂಘರ್ಷವನ್ನು ಕುರಿತು ಕೇಳಬೇಕಾದ ಕಾರಣವೇ ಇಲ್ಲ. ಬೇರೆಯವರು ಏನು ಮಾಡಿದರೂ ಸುಮ್ಮನೆ ನೋಡುತ್ತ ಹೋಗುತ್ತಿರುವುದು ಕನ್ನಡಿಗರ ಪರಂಪರೆಯಾಗಿದೆ. ಅದಕ್ಕೆ ಪ್ರತ್ಯಕ್ಷ ಉದಾಹರಣೆಗಳೆಂದರೆ ಉತ್ತರಕರ್ನಾಟಕದ ಸಂಸ್ಥಾನಗಳು; ಮುಂಬಯಿ ಮದರಾಸ್ ಸರಕಾರಗಳು.

* * * *

ಪ್ರ:— 'ಮಾನಪತ್ರದ ಒಂದು ಪಾಠ್ಯವನ್ನಾದರೂ ಕನ್ನಡದಲ್ಲಿ ಓದಿದರೆ ಸಾಕು' ಎಂದು ಬೆಳಗಾಂವಿಯ ಕನ್ನಡ ತರುಣರ ಮುಂದಾಳುಗಳಾದ ಡಾ. ತೆರಗುಂಡಿಯವರು ಬೆಳಗಾಂವಿಯ ಮ್ಯುನಿಸಿಪಲ್ ಪ್ರೆಸಿಡೆಂಟರನ್ನು ಬೇಡಿಕೊಂಡರಂತೆ. ಕನ್ನಡದ ಒಂದು ರಬ್ಬವನ್ನೂ ಉಚ್ಚರಿಸಲಾರೆನೆಂದು ಪ್ರತಿಜ್ಞೆ ಮಾಡಿದ ಶ್ರೀ. ಭಾತಕಾಂಡೆಯವರು ನುಡಿದಂತೆ ನಡೆದೇ ಬಿಟ್ಟರಂತೆ. ಇದಕ್ಕೆ ಬೀರಣ್ಣಾ, ನೀನು ಹೇಳುವ ಸಮಾಧಾನವೇನು?

ಉ:— ಡಾಕ್ಟರ್ ತೆರಗುಂಡಿಯವರಿಗೆ ಕನ್ನಡದಲ್ಲಿಯೇ ಮಾನಪತ್ರ ಓದುವುದು ಬೇಕಾಗಿರಲಿಲ್ಲ. ತಮ್ಮ ಸಹಚರರಾದ ಕನ್ನಡ ತರುಣರನ್ನು ಹೇಗಾದರೂ ಸಮಾಧಾನ ಮಾಡಬೇಕಾದುದು ಬೇಕಾಗಿದ್ದಿತು. ಆದುದರಿಂದಲೇ ಕನ್ನಡಿಗರ ಇಂದಿನ ಸ್ವಭಾವವಾಗಿರುವ ಅಲ್ಪಸಂತುಷ್ಟಿಯ ಪ್ರಾತಿನಿಧ್ಯವನ್ನ ವರು ಮಾಡಿದರು. ಮರ್ವ್ ನುರಾಠಾ ವೀರರಾದ ಭಾತಕಾಂಡೆಯವರು ತಮ್ಮ ಎತ್ತಿದ ಬಿನಕೆಯ ಪಟ್ಟನ್ನು ಕನ್ನಡಿಗರ ತಲೆಯ ಮೇಲೆ ಪಾಕೆಯೆ ಬಿಟ್ಟರು. ಡಾ. ತೆರಗುಂಡಿಯವರು ಕನ್ನಡದ ಅಭಿಮಾನವನ್ನೇ ಪಿಡಿದಿದ್ದರೆ, ಶ್ರೀ. ಅವರಿಂದ ಜೋತಿಯವರು ತೆರಗುಂಡಿಯವರ ಮುಖ್ಯಸಿಪಾಲಿಟಿಯನ್ನೆಯೆ ಪಟು ತಿನ್ನಬೇಕಾಗಿರಲಿಲ್ಲ.

* * * *

ಪ್ರ:— ಪಮುಗೆ ಕೊಡಬೇಕಾದ ಮಾನಪತ್ರ ಹಿಂದಿಯಲ್ಲಿಯೆ ಇರಬೇಕೆಂದು ಮುಖ್ಯಮಂತ್ರಿ ಬೇರೆಯವರು ಮ್ಯುನಿಸಿಪಾಲಿಟಿಯವರಿಗೆ ಸ್ಪಷ್ಟವಾಗಿ ತಿಳಿಸಿದರಂತೆ. ಬೇರೆಯ ಈ ನಡತೆ ಸರಿಯಾದುದೆ? ಬೆಳಗಾಂವಿ ಕರ್ನಾಟಕವಂಬುವನ್ನು ಮಾನ್ಯ ಬೇರೆಯವರೂ ಒಪ್ಪುವುದಿಲ್ಲವೆ?

ಉ:— ಮಾನ್ಯ ಬೇರೆಯರಿಗೆ ಬಡಿವಾಟ ಬೇಡವಾಗಿದ್ದಿತು; ಮಾನಪತ್ರ ಬೇಕಾಗಿದ್ದಿತು. ರಾಷ್ಟ್ರಭಾಷೆಯ ಆಜ್ಞೆ ಹಾಕಿದರೆ 'ಕಾನಡೀ ಕಾನಡಾ' ಗಳೆಲ್ಲ ತೆಪ್ಪಗೆ ಕಾಳಿತುಕೊಳ್ಳುವುವೆಂದು, ಮಂತ್ರಿಗಳು ತೋರಿಸಿದ ಮುತ್ಸದ್ದಿತನವಿದು. ಇನ್ನು ಬೆಳಗಾಂವಿ ಕರ್ನಾಟಕದಲ್ಲಿರುವ ವಿಚಾರ: ನಮ್ಮಲ್ಲಿಯ ಹಲವು ಪ್ರಮುಖ ಪ್ರಮುಖ ಮುಂದಾಳುಗಳಿಗೆ 'ಕರ್ನಾಟಕ' ಬೇಕಾಗಿದೆ; ಕರ್ನಾಟಕದಲ್ಲಿ ಕನ್ನಡ ಭಾಷೆ ಬೇಡವಾಗಿದೆ. ಆ ಮುಂದಾಳುಗಳ ಮನೋವೃತ್ತಿಯನ್ನರಿತ ಮೇರೆಗೂ, ಬೆಳಗಾಂವಿಯನ್ನು ಕರ್ನಾಟಕ ಎಂದೊಪ್ಪಬಹುದು; ಆದರೆ ಬೆಳಗಾಂವಿಯ ಭಾಷೆ ಕನ್ನಡವೆಂದು ಒಪ್ಪಲಾಂದವರಾಗಿರಬಹುದು.

* * * *

ಪ್ರ:— ಜೀವಭಕ್ಷ ಕೇಶವರಾವ್ ಗೋಪಿಲೇಯವರು 'ಬೆಳಗಾಂವಿಯ ಕನ್ನಡತ್ವ ಕರ್ನಾಟಕತ್ವ ಇನ್ನೂ ಸಮ್ಯಮಾಣ ಸಿದ್ಧವಾಗಿಲ್ಲ' ಎಂಬ ಮಾತುಗಳನ್ನು ತಮ್ಮ ಪ್ರಣಿಪತ್ರಿಕೆಯಲ್ಲಿ ಬರೆದಿದ್ದಾರೆ. ಇದರ ಅರ್ಥವೇನು?

ಉ:— ಬೆಳಗಾಂವಿಯ ಕನ್ನಡತ್ವ ಕರ್ನಾಟಕತ್ವಗಳು ಇನ್ನೂ ಸಮ್ಯಮಾಣವಾಗಿ ಸಿದ್ಧವಾಗಿಲ್ಲ. ಅದರಂತೆಯೆ ಶ್ರೀಮಾನ್ ಗೋಪಿಲೆ ಕೇಶವರಾಯರ ಮನುಷ್ಯತ್ವವೂ ಇನ್ನೂ ಸಮ್ಯಮಾಣವಾಗಿ ಸಿದ್ಧವಾಗಿಲ್ಲ. ಅವರ ಮನುಷ್ಯತ್ವ ಮೊದಲು ಸಮ್ಯಮಾಣವಾಗಿ ಸಿದ್ಧವಾಗಲಿ ತೆಂದರೆ, ಅವರಿಗೆ ಬೆಳಗಾಂವಿ ಕರ್ನಾಟಕವೂ ಮಹಾರಾಷ್ಟ್ರವೂ ಎಂಬ ಅರಿವು ತಾನಾಗಿ ಉಂಟಾಗುವದು.

ಪ್ರ:— ಕನ್ನಡ ಭಾಷೆ ಬೇಡವಾಗಿದ್ದರೂ ನಮ್ಮಲ್ಲಿಯ ಬಹಳ ಜನ ಮುಂದಾಳುಗಳಿಗೆ ಕರ್ನಾಟಕ ಬೇಕಾಗಿದೆಯಲ್ಲಾ— ಇದಕ್ಕೆ ಕಾರಣವೇನು?

ಉ:— ಛೇ ಛೇ, ಕರ್ನಾಟಕವು ಬೇಕೇ. ಬೇಕಾಗಿದೆಯೆಂದೇನೂ ಅಲ್ಲ; ಅವರಿಗೆ ನಿಜವಾಗಿ ಬೇಕಾದುದು ಬರಿಯ ಮುಂದಾಳತನ. ಮಹಾರಾಷ್ಟ್ರ ಅಧಿಪತ್ಯಗಳೆಂದು ಒಪ್ಪಿಕೊಂಡು ಬಿಟ್ಟರೆ ನಮ್ಮ ವರನ್ನು ಯಾರು ಕೇಳಬೇಕು? ಅಲ್ಲಿಯ ಮಹಾ ಮಹಾ ವ್ಯಕ್ತಿಗಳಿದುವು ಇವರ ಬೆಳಕು ಹೇಗೆ ಬೀಳಬೇಕು? ಅದುದರಿಂದ ತಮ್ಮ ಮುಂದಾಳುತನದ ಅಸ್ತಿತ್ವಕ್ಕಾಗಿ 'ಕರ್ನಾಟಕ' ಸ್ಥಾಂಕವನ್ನು ಒಪ್ಪುತ್ತಿದ್ದಾರೆ ಇವರು. ಬೇಕಾದರೆ ಈ ಮಾತನ್ನು ಶ್ರೀಮತಿ ಕಮಲಾದೇವಿಯವರಿಗೂ ಶ್ರೀ. ಮಲ್ಯರಿಗೂ ಬೇರೆ ಹಲವರಿಗೂ ಅಡಿಯಿಕ್ಕಿ ಕೇಳಿ ಮನವರಿಕೆ ಮಾಡಿಕೊಳ್ಳಬಹುದು.

* * * *

ಪ್ರ:— ಬೆಳಗಾಂವಿಯಲ್ಲಿಯ ಕನ್ನಡ ತರುಣರನ್ನು ಮರಾಟಿಯ ಪುಂಡರು ಅಲ್ಲಲ್ಲಿ ತರುಬಿ ಹೊಡೆಯುತ್ತಿದ್ದಾರೆ; ಇದಕ್ಕಾಗಿ ಬೆಳಗಾಂವಿಯ ಕನ್ನಡಿಗರು ಏನು ಮಾಡಬೇಕು.

ಉ:— ನಿಮ್ಮ ಮನೆಯಲ್ಲಿ ಕಳ್ಳರು ನುಗ್ಗಿದರೆ ನೀವು ಏನು ಮಾಡುತ್ತೀರಿ? ಸಮರ್ಥರಾದರೆ ಅವರೊಂದಿಗೆ ಹೋರಾಡುತ್ತೀರಿ; ಅಸಮರ್ಥರಾದರೆ ಇದ್ದುದೆಲ್ಲವನ್ನೂ ಒಪ್ಪಿಸಿ ಕಾಲಿಗೆ ಬಿದ್ದು ಬಿಡುತ್ತೀರಿ! ಬೆಳಗಾಂವಿಯ ಕನ್ನಡಿಗರು ಸಮರ್ಥರೋ ಅಸಮರ್ಥರೊ?

ಪ್ರ:— ಬೆಳಗಾಂವಿಯ 'ಸಾಧ್ಯಸಿದ್ಧ' ಮುಂದಾಳುಗಳಾದ ಬಾಬೂರಾವ್ ಠಾಳೂರರು ಭೆಟ್ಟಿಯಾದಾಗ ನನಗೆ ಹೇಳಿದರು: 'ಶ್ರೀ. ಅವರಿಂದ ಮೋಕೆಯವರನ್ನು ಬಡಿದವರು ಮರಾಟಿಗರಲ್ಲ; ಕನ್ನಡಿಗರೇ ಅದ—ಬೆಳಗಾಂವಿಯಲ್ಲೇ ಗಣ್ಣಿಯೊಳಗಿನ ಪೈಸರು' ಎಂದು. ಇದು ನಿಜವಿರಬಹುದೆ?

ಉ:— ಶ್ರೀ ಠಾಕೂರರು ರಾಜಕಾರಣಿಗಳು; ಜನಗಳ ಹಚ್ಚಿ ರಾಜಕಾರಣ ಸಾಧಿಸಿಕೊಳ್ಳುವ ಹಿರಿಯ ರಾಜಕಾರಣಿಗಳ ವಂಗದಕ್ಕೆ ಸೇರಿದವರು. ಹೀಗೆಯೆ ಮಾಡಿ ಬೆಳಗಾಂವಿಯ ಕಾಂಗ್ರೆಸ್ಸಿಗರಲ್ಲಿ ವಾಲೀ ಹೂಲೀ ಗಲ್ಲಿಗಳನ್ನು ಎಬ್ಬಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಕನ್ನಡಿಗರಲ್ಲಿಯೂ ಇಂತಹ ಭೇದನೀತಿಯನ್ನು ಉಪಯೋಗಿಸಬೇಕೆಂದು ಠಾಕೂರರಿಗೆ ಕರಟಕನುನಿಯ ಉಪದೇಶವಾಗಿರಬೇಕು. ರಾಜಕಾರಣದಲ್ಲಿ ನಿಜವಿರುವುದೇ ನೀವೆ ಹೇಳಿ!

ಸಾದರ ಸ್ವೀಕಾರ

★

೬೭. ಸಾಕಿಸ್ತಾನದ ಹೂಲಿ (ವಿಷಯ ವಿವೇಚನಾತ್ಮಕ ಗ್ರಂಥ). ಲೇಖಕರು ಶ್ರೀ. ಬಾ. ಯ. ದೇಶಪಾಂಡೆ (ಅಣ್ಣು ಗುರೂಜಿ). ಧಾರವಾಡದ ಮಿಂಚಿನ ಬಳ್ಳಿಯ ಎರಡನೆಯ ವರ್ಷದ ಎರಡನೆಯ ಕುಡಿ. ಕ್ರೌ. ಆ. ೧೯೨ ಪುಟಗಳು; ಬೆಲೆ ೨-೮-೦.

೬೮. ಮೇಘನಾದ (ಕವನಸಂಗ್ರಹ). ಬರೆದವರು ಶ್ರೀ. ಬಿ. ಎಚ್. ಶ್ರೀಧರ ಎಂ. ಎ ಅವರು. ಪ್ರಕಾಶಕರು ಎಚ್. ಎಸ್. ದೊರೆಸ್ವಾಮಿ ಬಿ ಎಸ್‌ಸಿ. ಮಿತ್ರಸಂಘ, ಬೆಂಗಳೂರು. ಕ್ರೌ. ಆ. ೭೨ ಪುಟಗಳು. ಬೆಲೆ ೧-೦-೦.

೬೯. ಮುಂಬಯಿ ಕರ್ನಾಟಕ ಸಂಘದ ೧೩ನೆಯ ವಾರ್ಷಿಕ ವರದಿ. ಕಾರ್ಯದರ್ಶಿಗಳು ಶ್ರೀ. ಇಮಾರತಿ ಹನುಮಂತರಾಯರು ಮತ್ತು ಶ್ರೀ. ಸಿ. ಕೆ. ಅಣ್ಣಾಸ್ವಾಮಿರಾಯರು. ಡಿ. ಆ. ೧೬ ಪುಟಗಳು.

ಮುಂಬಯಿಯಲ್ಲಿರುವ ಕನ್ನಡಿಗರ ಹಿರಿಯ ಸಂಸ್ಥೆಯಿದು. ಕನ್ನಡಿಗರ ಅಸ್ತಿತ್ವವನ್ನು ಮುಂಬಯಿಯ ಮಹಾಜನರಿಗೆ ಒಳ್ಳೆಯ ರೀತಿಯಿಂದ ಪಿವಿಧ ಚಟುವಟಿಕೆಗಳಿಂದ ಮಾಡಿಕೊಡುತ್ತಲಿದೆಯಲ್ಲದೆ, ಅಖಿಲ ಕರ್ನಾಟಕದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಒಳಗಾಡಿನ ಕನ್ನಡಿಗರಿಗೆ ವಿಶೇಷವಾದ ಸಹಕಾರವನ್ನು ಕೊಡುತ್ತಿರುತ್ತದೆ. ಮುಂಬಯಿ ಕನ್ನಡಿಗರ ಆತ್ಮದಂತಿರುವ ಈ ಸಂಸ್ಥೆ ಇನ್ನೂ ಪರಕಾಯ ಪ್ರವೇಶದಿಂದಲೇ ಕೆಲಸ ನಡೆಯಿಸಿದೆ. ಸ್ವಂತದ ಕಾಯವೆನಿಸಬಹುದಾದ ಕಟ್ಟಡದ ಸಿದ್ಧತೆಯ ವಿಚಾರಗಳು ನಡೆದಿವೆ. ನಿಧಿಸಂಗ್ರಹವೂ ಸಾಗಿದೆ. ಜೊಗನೆ ತನ್ನ ಮಹಾಮನೆ ಕಟ್ಟಿಕೊಂಡು ಈ ಸಂಸ್ಥೆ, ಮಹಾನಗರಿಯಲ್ಲಿ ಪಲೆಯೆತ್ತಿನಿಂತು, ಕರ್ನಾಟಕದ ಕೀರ್ತಿಯನ್ನು ಕೊಂಡಾಡುತ್ತಿರಲಿ.

೭೦. ಮೃಗಜಲ (ಕಥಾಸಂಕಲನ). ಬರೆದವರು ಶ್ರೀಮಾನ್ ಟಿ. ಆರ್. ಭಾಗವತ ಎಂ. ಎ. ಅವರು. ಪ್ರಕಾಶಕರು. ಬಿ ಕೆ ಸರಾ ಬುಕ್ಸ್ ಆಂಡ್ ನ್ಯೂಜ್ ಏಜನ್ಸಿ, ಲಾಲಬಾಗ, ಮುಂಬಯಿ— ೧೩. ಕ್ರೌ. ಆ ೭೬ ಪುಟಗಳು. ಬೆಲೆ ೧-೦-೦.

೭೧. ಸೀತಾ ಪರಿತ್ಯಾಗದ ಸಮಸ್ಯೆಗಳು (ಸಾಹಿತ್ಯ ವಿಮರ್ಶಾತ್ಮಕ ಗ್ರಂಥ). ಬರೆದವರು ಶ್ರೀ. ಜಿ. ವರದರಾಜರಾವ್ ಎಂ. ಎ ಕನ್ನಡ ಭಾಷಾಂತರ ಕಚೇರಿ; ಬೆಂಗಳೂರು ಪ್ರಕಾಶಕರು ಸಾಹಿತ್ಯಮಂದಿರ, ಜಗನ್ಮೋಹನ ಅರಮನೆ ರಸ್ತೆ; ಮೈಸೂರು. ಕ್ರೌ ಆ. ೫೬ ಪುಟಗಳು. ಬೆಲೆ ೦-೮-೦.

೭೨. ಸಂಘಟನ ಸೀಮೋಲ್ಲಂಘನ (ಪರಿಚಯಾತ್ಮಕ ಗ್ರಂಥ). ಮೂಲ ಲೇಖಕರು ಶ್ರೀ. ಉತ್ತಮಚಂದರು. ಕನ್ನಡಿಸಿದವರು ಶ್ರೀ. ಮೇವುಂಡಿ ಮಲ್ಲಾರಿ ಅವರು. ಧಾರವಾಡದ ಪುಟಿಭಾ ಗ್ರಂಥಮಾಲೆಯ ೩ನೆಯ ವರ್ಷದ ೨ನೆಯ ಕೆರಣ. ಕ್ರೌ. ಆ. ೧೧೬ ಪುಟಗಳು. ಬೆಲೆ ೧-೮-೦.

೭೩. ಎಚ್ಚಕ್ಕ ಆಗ್ನೇಯ ವಿಶೇಷ (ಪರಿಚಯಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ಎಂ. ಹರಿದಾಸರಾವ್ ಅವರು. ಪ್ರಕಾಶಕರು ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಮಾರಾಟಗಾರರು ರಾವ್ ಬ್ರದರ್ಸ್ ಗದಗ. ಕ್ರೌ ಆ. ೧೩೮ ಪುಟಗಳು. ಬೆಲೆ ೧ ೮-೦.

೭೪. ಗ್ರಾಮಪಂಚಾನನ (ಸ್ವತಂತ್ರ ಸಾಮಾಜಿಕ ಕಾದಂಬರಿ; ೨ನೆಯ ಭಾಗ) ಬರೆದವರು ಶ್ರೀ. ಬಾ. ಕೃ. ಲಕ್ಷ್ಮೀಶ್ವರ ಅವರು. ಹುಬ್ಬಳ್ಳಿಯ 'ಸಂಜೀವಿನಿ' ಪ್ರಕಾಶನ ಸಮಿತಿಯ ೨ನೆಯ ಗ್ರಂಥ. ಕ್ರೌ. ಆ. ೨೦೪ ಪುಟಗಳು. ಬೆಲೆ ೨-೦-೦.

೭೫. ಏಕತಂತ್ರಿ ಕರ್ನಾಟಕ (ಪರಿಚಯಾತ್ಮಕ ಕಿರುಹೊತ್ತಿಗೆ). ಪ್ರಕಾಶಕರು ಶ್ರೀ. ಹ. ರಾ. ಮೋಹರೆ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ್, ಹುಬ್ಬಳ್ಳಿ. ಕ್ರೌ. ಳಿ ದ ೧೨ ಪುಟಗಳು. ೬ ಒಳ್ಳೆಯ ನಕ್ಷೆಗಳಿವೆ. ಬೆಲೆ ೦-೪-೦.

೭೬. ಗಗನಚುಕ್ಕಿ (ಕವನ ಸಂಗ್ರಹ). ಲೇಖಕರು ಶ್ರೀ. ಎನ್. ಪಿ. ಪರಮೇಶ್ವರಭಟ್ಟ, ಎಂ. ಎ. ಕನ್ನಡ ಅಧ್ಯಾಪಕರು ಇಂಟರ್ ಕಾಲೇಜು, ಶಿವಮೊಗ್ಗ ಪ್ರಕಾಶಕರು ಶ್ರೀ. ಎಚ್.ಎಸ್. ದೊರೆಸ್ವಾಮಿ ಬಿ ಎಸ್ ಸಿ. 'ಮಿತ್ರಸಂಘ' ಬೆಂಗಳೂರು. ಕ್ರೌ. ಆ. ೭೮ ಪುಟಗಳು. ಬೆಲೆ ೧-೪-೦.

೭೭. ತರಕಾರಿಗಳು ಮತ್ತು ಅವುಗಳನ್ನು ಬೆಳೆಯುವ ಬಗೆ (ಕೃಷಿ ವಿಜ್ಞಾನಗ್ರಂಥ). ಲೇಖಕರು ಶ್ರೀ. ಸಿ. ವಿ. ರಾವ್ ಬೆಂಗಳೂರು. ಪ್ರಕಾಶಕರು ಅತ್ರೇಯಿಯಾ ಜನರಲ್ ಏಜನ್ಸಿ, ೩೪ ಸರಸ್ವತೀ ಬಿಲ್ಡಿಂಗ್ಸ್, ನರಸಿಂಹರಾಜರಸ್ತೆ, ಬೆಂಗಳೂರು ನಗರ. ಕ್ರೌ. ಆ ೧೦೮ ಪುಟಗಳು. ಬೆಲೆ ೧-೪-೦.

೭೮. ಮಯೂರ (ಮಾಸಪತ್ರಿಕೆಯ ೧೯೪೬ನೆಯ ಸಪ್ಟಂಬರ್ ಸಂಚಿಕೆ.) ಸಂಪಾದಕರು ಶ್ರೀ. ಮತಿಘಟ್ಟ ಕೃಷ್ಣಮೂರ್ತಿ. ಪ್ರಕಾಶಕರು ಮಯೂರ ಪಬ್ಲಿಕೇಶನ್ಸ್ ೫೫/೧ ಮಾವಳ್ಳಿ, ಬೆಂಗಳೂರು. ಕ್ರೌ. ಆ. ೬೦ ಪುಟಗಳು. ವಾರ್ಷಿಕ ಚಂದಾ ೨-೪-೦. ಒಡಿ ಸಂಚಿಕೆಗೆ ೦-೩-೦.

೭೯. ಜ್ಞಾನಸಾಗರ (ಮರಾಠಿ ವಾರಪತ್ರಿಕೆಯ ೭೨ನೆಯ ವರ್ಷದ ೪ನೆಯ ಸಂಚಿಕೆ) ನೂತನ ಸಂಪಾದಕರು: ಶ್ರೀಯುತ ಪೆಂ. ನ. ಕುಲಕರ್ಣಿ, ಮಹಾದ್ವಾರ್ ಪ್ರೆಸ್, ಕೊಲ್ಲಾಪುರ ಇವರು ಕ್ರೌ. ಫೋ. ೪ ಪುಟಗಳು. ವಾ. ಚಂದಾ ೪-೦-೦.

೮೦. ನಿರ್ಮಲಾ (ಅನುವಾದಿತ ಕಾದಂಬರಿ). ಮೂಲ ಲೇಖಕರು ದಿವಂಗತ 'ಪ್ರೇಮಚಂದರು'. ಕನ್ನಡ ಅನುವಾದಿಕೆ ಶ್ರೀಪತಿ ಎಂ. ಎ ಕುಪ್ಪಣ್ಣ, ಬೆಂಗಳೂರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೭ನೆಯ ವರ್ಷದ ೪-೫ನೆಯ ಕುಡಿ. ಕ್ರೌ. ಆ. ೨೪೦ ಪುಟಗಳು. ಬೆಲೆ ೩-೦-೦.

ಗಂಟು

ಶ್ರೀ. ಎಚ್. ಗುಡ್ಡಪ್ಪ, ಹಾನೇರಿ

★

ಮನಸ್ಸಿನದೊಂದು ವಿಚಿತ್ರ ರೀತಿ. ವಿಧಿಪೂರ್ವಕ ವಿವಾಹವಾದ ಗಂಡ ದೂರದವನಾದ; ಎಂದೂ ಗುರುತು-ಪರಿಚಯಗಳಿಲ್ಲದ ದೂರದ ದೇಸಾಯಿ ಹೃದಯದಲ್ಲಿ ಕುಳಿತ.

★

೧

ನಾಕೆ ಅಳುತ್ತೀನೆಯೆ? ಇದನ್ನು ಸುಮ್ಮನೆ ಕೇಳಿ ಗಾಯದ ಮೇಲೆ ಉಪ್ಪು ಸಿಡಿಸಬೇಡಿರಿ! ಸ್ವಲ್ಪ ತಡೆಯಿರಿ! ಮನವಾರೆ ನೋದಿಸಲು ಅವಕಾಶ ಕೊಡಿರಿ! ಏಕೋ, ಎಷ್ಟೋ ದಿನಗಳ ನಂತರ ಇಂದು ಮನದಣಿ ಅಳಲು ಸಮಯ ಸಿಕ್ಕಿದೆ. ನನಗೆ ಅಳುವುದರಿಂದ ಸುಖವು ಸಿಗುತ್ತದೆ; ಶಾಂತಿ ಸಿಗುತ್ತದೆ. ಅದರಿಂದಲೇ ನಾನು ಅಳುತ್ತೀನೆ. ಇರಲಿ ಬಿಡಿರಿ; ನನ್ನ ಅಳುವಿಗೆ ತಡೆಯನ್ನು ಒಡ್ಡಬೇಡಿರಿ; ಅಳಗೊಡಿರಿ!

ಏನೆಂದಿರಿ? ಯಾರಿಗಾಗಿ ಅಳುತ್ತೀನೆಯೆ? ಅಯ್ಯೋ!! ಅದನ್ನು ಕೇಳಿಯಾದರೂ ಏನು ಮಾಡುವಿರಿ? ಅದರಿಂದ ನಿಮಗೆ ಸ್ವಲ್ಪವೂ ಲಾಭವಿಲ್ಲ; ಕೇಳದಿದ್ದರೆ ಒಳಿತು! ನನ್ನ ಈ ಪೀಡೆಯೆ ನನ್ನ ಸಂಪತ್ತು; ಇದನ್ನು ಬಹಳ ಎಚ್ಚರದಿಂದ ನನ್ನ ಹೃದಯ. ದಲ್ಲಿ ಹೂಳಿಟ್ಟುಕೊಂಡಿದ್ದೇನೆ. ಇಷ್ಟಾದರೂ ನೀವು ಕೇಳ. ಲೇಬಯಸಿದರೆ ಹೇಳುತ್ತೀನೆ; ಆದರೆ ನೋಡಿರಿ! ನಾನು ಹೇಳಿದ್ದ. ನ್ನಷ್ಟೆ ಕೇಳಬೇಕು; ತಿರುಗಿ ಏನನ್ನೂ ಕೇಳಬಾರದು.

ಅವರು ಒಬ್ಬ ಶ್ರೀಮಂತ ತಾಯಿ-ತಂದೆಗಳ ಮಕ್ಕಳು. ವೇವರು ಅವರಿಗೆ ಅನುಪಮವಾದ ರೂಪವನ್ನು ಕೊಟ್ಟಿದ್ದ. ಅವರು ಬಹಳ ಸುಂದರವಾಗಿದ್ದರು; ಅವರಿಗಿಂತಲೂ ಅವರ ಹೃದಯವು ಹೆಚ್ಚು ಸುಂದರವಾಗಿತ್ತು. ಬಹಳ ಒಳ್ಳೆಯವರೂ ಮಾಳುಗಳೂ ಉದಾರರೂ ಆಗಿದ್ದರು. ಊರ ಜಾಲಕರು ರನ್ನು ನೋಡುತ್ತಲೆ ಆನಂದಹೊಂದುತ್ತಿದ್ದರು. ವೃದ್ಧರು ರ್ವಾದದ ಮಳಿಗರೆಯುತ್ತಿದ್ದರು. ಸ್ತ್ರೀಯರು ತಮ್ಮ ೂದರನೊ ಪಿತೃಷಿಯೊ ಎಂದು ತಿಳಿಯುತ್ತಿದ್ದರು. ಮತ್ತು ರು ಅವರ ಸನ್ನೆಯ ಮೇಲೆ ಕುಣಿಯುತ್ತಿದ್ದರು. ೈರ್ಯವಿಷ್ಟೆ:— ಅವರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು; ಗೊಡನೆಯೂ ಅವರ ಸ್ನೇಹವಿತ್ತು.

ನಾನು ಅವರ ಊರಿನ ಸೊಸೆ. ನನ್ನ ಪತಿದೇವರು ಅಲ್ಲಿಯೇ ಕನ್ನಡ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಮನೆಯಲ್ಲಿ ಮುದುಕಿ. ಯಾದ ಅತ್ತೆ, ನನ್ನ ಪತಿದೇವರು ಮತ್ತು ನಾನು. ಅಗ್ಗಳತೆಯ ಕಾಲವಿತ್ತು. ಹಾಗೂ ಹೀಗೂ ೩೮॥ ರೂಪಾಯಿಗಳಲ್ಲಿ ಜೀವನವು ಸಾಗುತ್ತಿತ್ತು. ವಿಶೇಷವಾಗಿ ಮನೆಯ ಸಣ್ಣ-ಪುಟ್ಟ ಕೆಲಸ. ಗಳನ್ನು ಕೈಯಿಂದ ಮಾಡಬೇಕಾಗುತ್ತಿತ್ತು.

ಒಂದು ದಿನ ನಡೆದ ಸಂಗತಿ: ಆದೇ ಮದುವೆಯಾಗಿ ಮನೆಗೆ ಬಂದಿದ್ದೆ. ನಾನು ಪಟ್ಟಣದ ಹುಡುಗಿ. ಅಲ್ಲಿ ನಳಗಳಿಂದ ನೀರಿನ ಕೆಲಸ ಸಾಗುತ್ತಿತ್ತು. ಬಾವಿಯಿಂದ ನೀರು ಜಗ್ಗುವುದು ನನಗೇನು ಗೊತ್ತು? ನನ್ನ ಅತ್ತೆಯವರು ತಮ್ಮ ಜೊತೆಗೆ ಕರೆದೊಯ್ದು ನೀರುಜಗ್ಗುವುದನ್ನು ನನಗೆ ಕಲಿಸುತ್ತಿದ್ದರು. ಅಕಸ್ಮಾತ್ ಎಲ್ಲಿಂದಲೊ ಏನೊ, ಅವರು ಬಂದುಬಿಟ್ಟರು. ನೋಡಿ ನಕ್ಕು ನುಡಿದರು: "ಅಮ್ಮಾ, ನೀರು ಜಗ್ಗುವ ಶಿಕ್ಷಣ ವನ್ನು ಕೊಡುತ್ತಿರುವಿರಾ? ನೀವು ಇಂಥ ಹುಂಬ ಹುಡುಗಿ. ಯನ್ನೇಕೆ ಮದುವಣಗಿತ್ತಿಯನ್ನಾಗಿ ತಂದಿರಿ? ನೀರು ಜಗ್ಗಲು ಕೂಡ ಬರುವುದಿಲ್ಲ!" ನಾನು ನೆರಗಿನ ಮರೆಯಲ್ಲಿಯೇ ಸ್ವಲ್ಪ ನಕ್ಕುಬಿಟ್ಟೆ.

ಅತ್ತೆಯವರು ನುಡಿದರು: "ಮಗು! ಇವಳಿಗೆ ಏನೂ ಬರುವುದಿಲ್ಲ! ಬೊಟ್ಟಿಯನ್ನಷ್ಟು ಚೆನ್ನಾಗಿ ಮಾಡುತ್ತಾಳೆ. ಕುಟ್ಟುವುದು, ಬೀಸುವುದು ಒಂದೂ ಬರುವುದಿಲ್ಲ. ನೆಗಣಿ, ಎಂದರೆ ಹೇಸಿಕೊಳ್ಳುತ್ತಾಳೆ. ಬಹಳ ಹೇಳಿದಮೇಲೆ— ಒಂದೆರಡು ಕುರುಳು (ಕುಳ್ಳು) ತಟ್ಟುತ್ತಾಳೆ; ಅಮೇಲೆ ಸೋಪು ಹಚ್ಚಿ ಉತ್ತು, ಸಾರೆ ಕೈ ತೊಳೆದುಕೊಳ್ಳುತ್ತಾಳೆ. ಮಗು, ನಮಗೆಲ್ಲ ಏತಕ್ಕೆ ಈ ಬಡವಾರ? ನಾವು ಬಡವರು; ಮನೆಯಲ್ಲಿ ನಾವೇ ಎಲ್ಲ ಕೆಲಸವನ್ನೂ ಮಾಡಬೇಕಾಗುತ್ತದೆ."

೨

ಮರುದಿವಸ ನಾನೊಬ್ಬಳೇ ನೀರು ತರಲು ಬಾವಿಗೆ ಹೋಗ. ಬೇಕಾಯಿತು. ಹಗ್ಗ, ಕೊಡ ತೆಗೆದುಕೊಂಡು ನೀರುತರಲಕ್ಕೆ ಹೋದೆ; ಆದರೆ ಹೃದಯವು ಹಾರುತ್ತಿತ್ತು— ನೀರನ್ನು ಸೇದಲಕ್ಕೆ ಆಗುವುದೊ ಇಲ್ಲವೊ ಎಂಬ ಶಂಕೆ ಪೀಡಿಸುತ್ತಿತ್ತು. ಜೊತೆಗೆ ಅತ್ತೆಯವರಿರಲಿಲ್ಲ. ಬಾವಿಕಟ್ಟೆಯ ಮೇಲೆ ಯಾರೂ ಇದ್ದಿಲ್ಲ. ನಾನು ತಲೆಯ ಮೇಲಿನ ಸೆರಗನ್ನು ಸರಿಸಿಕೊಂಡೆ; ಹಗ್ಗವನ್ನು ಸರಿಯಾಗಿ ಕೊಡದ ಕಂಠಕ್ಕೆ ಕಟ್ಟಿ ಬಾವಿಯಲ್ಲಿ ಬಿಟ್ಟೆ. 'ಡಬ. ಡಬ' ಎಂದು ಬಹಳ ಮೊತ್ತಿನ ಮೇಲೆ ಕೊಡದಲ್ಲಿ ನೀರು ತುಂಬಿತು. ಅದನ್ನು ಜಗ್ಗತೊಡಗಿದೆ ಜಗ್ಗಿದರೆ ಕೊಡಮೇಲಕ್ಕೆ ಬರಲೊಲ್ಲದು. ಹಾಗೂ ಹೀಗೂ ಮಾತಿ ಅರ್ಧ ಹಗ್ಗ ಜಗ್ಗಿದೆ. ಇಷ್ಟರಲ್ಲಿ ಅವರು ಎದುರಿಗೆ ಬರುತ್ತಿರುವುದು ಕಾಣಿಸಿತು. ಬಾವಿಯು ಅವರ ಮನೆಗೆ ಸಮೀಪದಲ್ಲಿತ್ತು; ಅವರು ಬಾವಿಯ ಹತ್ತಿರವೆ ಹಾಯ್ದು ತಮ್ಮ ಒಕ್ಕಲ್ಗೇರಿಗೆ ಹೋಗುತ್ತಿದ್ದರು. ಎದುರಿ.

ನಲ್ಲಿ ಅವರು ಕಂಡರು. ಲಜ್ಜೆಯಿಂದ ನಾನು ಸೆರಗನ್ನು ಸರಿಸಿ-ಕೊಳ್ಳಲು ಒಂದು ಕೈಯಿಂದ ಹಗ್ಗವನ್ನು ಬಿಟ್ಟೆ; ಆದರೆ ಇನ್ನೊಂದು ಕೈಯು ತುಂಬಿದ ಕೊಡದ ಭಾರವನ್ನು ಸಹಿಸಲಿಲ್ಲ, ಒಂದೇ ಏಟಿಗೆ ಹಗ್ಗದೊಂದಿಗೆ ಕೊಡವು ಪಾತಾಳವನ್ನು ಕಂಡಿತು. ನಾನೂ ಬೀಳುತ್ತ— ಏಳುತ್ತ— ಹೇಗೋ ಉಳಿದೆ. ಒಂದು ನಿಮಿಷದಲ್ಲಿ ಇಷ್ಟೆಲ್ಲ ಆಯಿತು. ಅವರು ಬಂಗ್ಲೆಯಿಂದ ಬಾವಿಯ ಹತ್ತಿರ ಬಂದಿದ್ದರು. ನಾನು ಬಹಳ ಬೆದರಿದೆ. ಸೆರಗು ಸರಿಮಾಡಿಕೊಳ್ಳುವುದನ್ನು ಮರೆತೆ. ಬಾಗಿ ಬಾವಿಯಲ್ಲಿ ನೋಡ ತೊಡಗಿದೆ. ನನ್ನ ಹತ್ತಿರ ಹಗ್ಗ—ಕೊಡಗಳನ್ನು ತೆಗೆಯುವ ಸಾಧನಗಳಿಲ್ಲಿ! ನಿರುಪಾಯಳಾಗಿ ಕಾತರದೃಷ್ಟಿಯಿಂದ ಅವರ ಕಡೆಗೆ ನೋಡಕೊಡಗಿದೆ. ನನ್ನ ಸ್ಥಿತಿಯನ್ನು ನೋಡಿ ಬಹುಶಃ ಅವರಿಗೆ ದಯೆಬಂದಿರಬೇಕು. ಅವರು ಹತ್ತಿರ ಬಂದು ನುಡಿದರು:— "ಹೆದರಬೇಡಿರಿ, ನಾನು ಈಗಲೆ ಕೊಡ ತೆಗೆಯಿಸಿ ಕೊಡುತ್ತೇನೆ!" ಆ ಮೇಲೆ ಸ್ವಲ್ಪ ತಡೆದು ನಗುತ್ತ ಹೇಳಿದರು: "ನೀವು ಪಟ್ಟಣದ ಹುಂಬ ಹುಡುಗಿಯೆಂಬುದನ್ನು ಸ್ಪಷ್ಟ ಮಾಡಿದಿರಿ!"

ನಾನೂ ಸ್ವಲ್ಪ ನಕ್ಕೆ; ನನ್ನ ಸೆರಗನ್ನು ಸರಿಪಡಿಸಿಕೊಳ್ಳಲು ತೊಡಗಿದೆ. ನಾನು ಸೆರಗು ಸರಿಪಡಿಸಿಕೊಳ್ಳುವುದನ್ನು ನೋಡಿ ಅವರು ಸ್ವಲ್ಪ ನಕ್ಕರು; ನಾನೂ ಸ್ವಲ್ಪ ನಕ್ಕೆ. ಆದರೆ ಏನನ್ನೂ ಮಾತನಾಡಲಿಲ್ಲ ಅವರ ಆಳುಗಳು ಬಂದರು; ನೋಡು-ನೋಡುವಷ್ಟರಲ್ಲಿ ಹಗ್ಗ, ಕೊಡ ತೆಗೆದುಕೊಟ್ಟರು. ನಾನು ಕೊಡ ಹೊತ್ತುಕೊಂಡು ಮನೆಯ ದಾರಿಹಿಡಿದೆ. ಶಬ್ದಗಳಿಂದಲ್ಲ; ಆದರೆ ಕೃತಜ್ಞತೆ ತುಂಬಿದ ನೇತ್ರಗಳಿಂದ ನಾನು ಅವರಿಗೆ ನುಡಿದೆ: "ನಾನು ನಿಮ್ಮ ಉಪಕಾರಕ್ಕೆ ಪ್ರತಿ ಉಪಕಾರವನ್ನು ಈ ಜನ್ಮದಲ್ಲಿ ಮಾಡಲಾರೆ." ಸುಮಾರು ಮುಕ್ಕಾಲು ಗಂಟೆಯನ್ನು ಬಾವಿಯ ಕಟ್ಟೆಯ ಮೇಲೆ ಕಳೆದಿದ್ದೆ. ಅತ್ತೆಯವರ ಅಂಜಿಕೆಯು ಇದ್ದೇ ಇತ್ತು. ಬೇಗ ಬೇಗ ಬಂದೆ; ಕೊಡವನ್ನು ಸಿಂಬಿಯ ಮೇಲಿಟ್ಟೆ. ಹಗ್ಗವನ್ನು ಗೂಟಕ್ಕೆ ತೂಗುಹಾಕುವಾಗ ನೋಡಿದೆ; ಒಂದು ಕೈಯಲ್ಲಿಯ ಕಂಕಣವು ಇದ್ದಿಲ್ಲ. 'ನೀರು ತರುವವಳ ಕೈಯಲ್ಲಿ ಬಂಗಾರದ ಕಂಕಣವೆ?' ಎಂದು ನೀವು ಕೇಳಬಹುದು! ಅದನ್ನೂ ಹೇಳುತ್ತೇನೆ:— ಅದು ನನ್ನ ತಾಯಿಯ ಕಂಕಣ. ಮದುವೆಯಲ್ಲಿ ಬಳಿವಳಿಯ ಉಡುಗೊರೆ. ಯಾಗಿ ಇದನ್ನು ನನಗೆ ಕೊಡಬೇಕೆಂದು, ಸಾಯುವಾಗ ನನ್ನ ತಾಯಿಯು ವಿನಂತಿಮಾಡಿಕೊಂಡಿದ್ದಳು; ಅದೇ ಮೇರೆಗೆ ಕಂಕಣವು ನನಗೆ ದೊರಕಿತ್ತು, ಹಗ್ಗವನ್ನು ಅಲ್ಲಿಯೆ ಜಿಲ್ಲಿ ಪುನಃ ನಾನು ಬಾವಿಯಕಡೆಗೆ ಓಡಿದೆ. ಅವರು ಇತ್ತಕಡೆಗೆಯೆ ಬರುತ್ತಿದ್ದರು. "ನಿಮ್ಮ ಹುಂಬತನಕ್ಕೆ ಎರಡನೆಯ ಗುರುತಿದು!" ಎಂದು ಅವರು ನನ್ನ ಕಡೆಗೆ ಕಂಕಣವನ್ನು ಬಿಸುಟಿದರು. ಕಂಕಣವನ್ನು ತೆಗೆದುಕೊಂಡು ಸುಮ್ಮನೆ ನಾನು ರುಮಾಲಿನ ಬೊಕ್ಕಣದಲ್ಲಿಟ್ಟುಕೊಂಡೆ; ಬೇಗ ಬೇಗ ಮನೆಗೆ ಬಂದೆ.

೫

ಮನೆಗೆ ಬಂದೆ. ಇಷ್ಟರಲ್ಲಿ ಪತಿದೇವರು ಶಾಲೆಯಿಂದ ಬಂದಿದ್ದರು. ಅತ್ತೆಯವರು ಬಹಳ ಸಿಟ್ಟಿನಿಂದ ಹೇಳುತ್ತಿದ್ದರು:

"ನಿನ್ನ ಹೆಂಡತಿಯ ಲಕ್ಷಣವನ್ನು ನೋಡಿದೆಯಾ? ಒಂದು ಕೊಡ ನೀರು ತರಲಿಕ್ಕೆ ಹೋದರೆ, ತಾಸಿನ ಮೇಲೆ ಬಂದಳು ಮತ್ತು ಇಲ್ಲಿ ನೀರಿಳಿಸಿ ಹುಚ್ಚಿಯಂತೆ ಪುನಃ ಬಾವಿಯಕಡೆಗೆ ಓಡಿದಳು. ನಾನು ಮೊದಲೇ ಹೇಳಿದ್ದೆ: ಪಟ್ಟಣದ ಹುಡುಗಿಯನ್ನು ಮದುವೆಯಾಗಬೇಡಾ....ಎಂದು. ಆದರೆ ನೀನು ಕೇಳಲಿಲ್ಲ, ಮಗು! ಸರಿ, ಇದು ಮನೆಯನ್ನು ನೋಡಿಕೊಂಡು ಹೋಗುವ ಲಕ್ಷಣವೆ? ಎಲ್ಲವೂ ವಿಚಿತ್ರ! ದೇಸಾಯಿಯವರ ಮಗನೊಡನೆ ಮಾತನಾಡದಿದ್ದರೆ ಇವಳಿಗೆ ಶಾಂತಿ ಸಿಗುವುದಿಲ್ಲ. ಇವಳು ಇಲ್ಲಿಂದ ಓಡಿ ಹೋಗುತ್ತಿದ್ದಳು; ಅವನು ಆ ಕಡೆಯಿಂದ ಎದುರಿಗೆ ಬರುತ್ತಿದ್ದ. ಅವನು ಏನನ್ನೊ ಕೊಟ್ಟ; ಇವಳು ಅದನ್ನು ತೆಗೆದುಕೊಂಡು ಬೊಕ್ಕಣದಲ್ಲಿಟ್ಟುಕೊಂಡಳು. ನನಗೇನೂ ಇದು ಸೇರುವುದಿಲ್ಲ! ಏನೇ ಆಗಲಿ, ನಿನ್ನ ಹೆಂಡತಿ; ನಿನಗೆ ಗೊತ್ತು! ಅಳಿಸು ಅಥವಾ ಉಳಿಸು!" ನನ್ನ ಕಡೆಗೆ ಮೋರೆ ಮಾಡಿ ಸಿಟ್ಟಿನಿಂದ ನುಡಿದರು: "ನಿನ್ನ ಬೊಕ್ಕಣದಲ್ಲೇನಿದೆ ತೋರಿಸು!"

ನಾನು ಕಂಕಣವನ್ನು ಹೊರದೆಗೆದು ಎದುರಿಗೆ ಇಟ್ಟೆ. ಅವರು ಪುನಃ ಬೆದರಿಸಿ ಕೇಳಿದರು: "ಈ ಕಂಕಣ ಅವರ ಹತ್ತಿರ ಹೇಗೆ ಹೋಯಿತು?"

ನಾನು ಹೆದರುತ್ತ ಹೆದರುತ್ತ, ಅಪರಾಧಿನಿಯಂತೆ ಆದಿಯಿಂದ ಅಂತ್ಯದವರೆಗೆ ಬಾವಿಕಟ್ಟೆಯ ಮೇಲಿನ ಎಲ್ಲ ಕತೆಯನ್ನೂ ಅವರಿಗೆ ಹೇಳಿದೆ. ಇದರಿಂದ ಅತ್ತೆ ಮತ್ತು ಪತಿದೇವ ಇವರಿಬ್ಬರ ಕೋಪವನ್ನು ನಾನು ಸಹಿಸಬೇಕಾಯಿತು. ಅವರೊಡನೆ ಇನ್ನು ಮಾತನಾಡಬಾರದೆಂದು ನನಗೆ ಕಟ್ಟಪ್ಪಣೆಯಾಯಿತು.

* * * *

ಏನು ಕೇಳುತ್ತೀರಿ? ಅವರ ಹೆಸರನ್ನೆ? ಇರಲಿ ಬಿಡಿರಿ. ನನ್ನನ್ನು ಹೆಸರು ಕೇಳಬೇಡಿರಿ! ಅವರ ಹೆಸರನ್ನು ನಾಲಗೆಯ ಮೇಲೆ ತರಲು ನನಗೆ ಯಾವ ಅಧಿಕಾರವಿದೆ? ನಿಮಗೆ ನನ್ನ ಕತೆಯು ಅನಿವಾರ್ಯಕತೆಯಿದೆಯಲ್ಲವೆ? ಹಾಂ, ನಾನೇನು ಹೇಳುತ್ತಿದ್ದೆ?— ನಾನು ಅವರ ಸಂಗಡ ಮಾತನಾಡಬಾರದೆಂದು. ಒಂದು ವೇಳೆ ಮನೆಯವರು— ಪುನಃ ನಾನು ಅವರ ಸಂಗಡ ಮಾತನಾಡುವುದನ್ನು— ನೋಡಿದರೆ, ನಾನು ಉಳಿಯುವುದಿಲ್ಲ. ನಾನು ದೀನಭಾವದಿಂದ ಹೇಳಿದೆ: "ನನ್ನಿಂದ ಮನೆಯ ಎಲ್ಲ ಕೆಲಸಗಳನ್ನೂ ಮಾಡಿಸಿಕೊಳ್ಳಿರಿ; ಆದರೆ ನಾಳೆಯಿಂದ ನಾನು ನೀರನ್ನು ತರಲಿಕ್ಕೆ ಹೋಗುವುದಿಲ್ಲ."

ಇದಕ್ಕೆ ಪತಿದೇವರು ಸಿಟ್ಟಾಗಿ ನುಡಿದರು: "ನೀನೆ ನೀರನ್ನು ತರಲಿಕ್ಕೆ ಹೋಗದಿದ್ದರೆ ನೀರನ್ನು ತರಬೇಕು ಯಾರು?

ನಾನು ನಿನ್ನನ್ನು ರಾಣಿಯಂತೆ ಕುಳ್ಳಿರಿಸಿರಲಾರೆ. ಇಲ್ಲಿ ನಾನು ಹೇಳಿದಂತೆ ಮಾಡಬೇಕಾಗುವುದು!"

ಆಮೇಲೆ ಏನಾಯಿತೆಂಬುದನ್ನೇನು ಹೇಳಲಿ? ನಾನು ಅವರ ಸಂಗಡ ಮಾತನಾಡಬಾರದೆಂದು ಆಗ್ರಹ ಮಾಡಿದಂತೆ, ಅವರ ಸಂಗಡ ಮಾತನಾಡಬೇಕೆಂಬ ನನ್ನ ಇಚ್ಛೆಯು ಪ್ರಬಲವಾಗ ತೊಡಗಿತು. ಆದರೆ ನನ್ನ ಇಚ್ಛೆ ಎಂದೂ ಈಡೇರಲಿಲ್ಲ. ಅವರು ಹೋಗು-ಹೋಗುತ್ತ ಒಂದೆರಡು ಮಾತನಾಡುತ್ತಿದ್ದರು. ಉತ್ತರಕ್ಕೆ ಪ್ರತಿಯಾಗಿ ನಾನು ನಕ್ಕು ಬಿಡುತ್ತಿದ್ದೆ; ಆದರೆ ಜನರಿಗೆ ಇದೂ ಕೂಡ ಸಹನವಾಗಲಿಲ್ಲ. ಉರಿಯುವ್ವದರ ಮೇಲೆ ಎಣ್ಣೆಯನ್ನು ಹಾಕತೊಡಗಿದರು.

ಈಗ ನನಗೆ ಮನೆಯಲ್ಲಿ ಅನೇಕ ಬಗೆಯ ಕಷ್ಟಕೊಡತೊಡಗಿದರು. ೨-೩ ದಿನಕ್ಕೊಮ್ಮೆ ಬಡಿತವೂ ಬೀಳುತ್ತಿತ್ತು: ಆದರೆ ನಾನೇನು ಮಾಡಬಲ್ಲೆ? ಒಂದು ಸಲವೂ ನಾನು ಅವರಿಗೆ ಹೇಳುತ್ತಿದ್ದಿಲ್ಲ; ಮತ್ತು ಅವರ ಮಾತುಗಳನ್ನು ನಿಲ್ಲಿಸುವುದು ನನ್ನ ಶಕ್ತಿಯ ಹೊರಗಿನ ಮಾತು. ಅವರು ಎಂದೂ ಅನುಚಿತವಾದ ಮಾತುಗಳನ್ನು ನನ್ನ ಕೂಡ ಆಡಲಿಲ್ಲ. ವಿಧಾತನು ಅವರಿಗೆ ಅಳುವವರನ್ನು ನಗಿಸುವ ಕಲೆಯನ್ನು ಕಲಿಸಿದ್ದನು. ಅವರು ಬಾಗೆಯೆ ನಗಿಸುತ್ತಿದ್ದರು. ನಾನು ಎಷ್ಟೇ ದುಃಖಿತಳಾಗಿರಲಿ: ಎಷ್ಟೇ ಸಂತಾಪದಲ್ಲಿರಲಿ; ಸಭ್ಯತನದಿಂದ ಕೂಡಿದ ಅವರ ಮಾತುಗಳನ್ನು ಕೇಳಿ ನನಗೆ ನಗೆ ಬರುತ್ತಿತ್ತು.

ಆದರೆ ಮೆಲ್ಲ-ಮೆಲ್ಲಗೆ, ನನಗಾಗುವ ಕಷ್ಟಗಳ ಸಂಗತಿ ಅವರಿಗೆ ಗೊತ್ತಾಯಿತು. ಅವರ ದಯಾಳುಹೃದಯಕ್ಕೆ ಇದರಿಂದ ದೊಡ್ಡ ಪೆಟ್ಟು ತಗಲಿತು. ಆದಿನ, ಕೊನೆಯ ದಿನ ನೀರಿನತರಲು ಬಾವಿಗೆ ಹೋದಾಗ, ಅವರು ಅಲ್ಲಿಗೆ ಬಂದರು: ನನಗೆ ಹೇಳಿದರು: "ನಾನು ನಿನ್ನೊಡನೆ ಸ್ವಲ್ಪ ಮಾತನಾಡಬಯಸುತ್ತೇನೆ."

ಅವರ ಸ್ವರದಲ್ಲಿ ದುಃಖವಿದ್ದಿತು. ಕಣ್ಣುಗಳಲ್ಲಿ ನೀರು ತುಂಬಿದ್ದಿತು. ಕಣ್ಣುಗಳಲ್ಲಿ ಏನಿದ್ದಿತೋ ನಾನರಿಯೆ; ಆದೆಷ್ಟೋ ಅಂತಃಕರಣದ ಸಮುದ್ರವು ಉಕ್ಕಿ ಬರುತ್ತಿರಬಹುದು. ನಾನು ಜಿಜ್ಞಾಸ್ಯದೊಡನೆ ಅವರ ಕಡೆಗೆ ನೋಡಿದೆ; ಅವರು ಈ ಪ್ರಕಾರ ನನ್ನೆದುರಿಗೆ ಮಾತನಾಡಿದ್ದುದು ಇದೇ ಕೊಡಲಸಿದು ಸಲ:

"ನಾನು ನಿನಗೆಹೇಳಬೇಕಾದ ಕೊಡಲನೆಯ ಮಾತಿದು— ನನ್ನ ಸಲುವಾಗಿ ನಿನಗೆ ಅನೇಕ ಕಷ್ಟಗಳು ಆಗುತ್ತಿವೆ ನನಗಿದು ಗೊತ್ತಾಗಿದ್ದರೆ ಅದನ್ನು ಎಂದೋ ದೂರಮಾಡುತ್ತಿದ್ದೆ. ಎರಡನೆಯ ಮಾತು— ಇಂದಿನಿಂದ ನಿಮ್ಮ ಮೇಲಾಗುವ ಅತ್ಯಾಚಾರಗಳ ಜೇರನ್ನು ಕೆತ್ತಿಹಾಗೆಯ ಬಯಸುತ್ತೇನೆ ನೀವು ಆನಂದದಿಂದ ಇರಬಹುದು. ನನ್ನ ಹುಂಬತಾಣೆ! (ಅವರು ನನ್ನನ್ನು ಇದೇ ಹೆಸರಿನಿಂದ ಕರೆಯುತ್ತಿದ್ದರು.) ನಾನು ನಿನ್ನನ್ನು ಮರೆಯಲು ಸಮರ್ಥನಾದರೆ ಮಾತ್ರ ಮರಳಿ ಬರುವೆನು; ಇಲ್ಲವಾದರೆ ಇಂದೇ ಇದೇ ನನ್ನ ಕೊನೆಯ ಪ್ರಣಾಮ!"

ನನ್ನ ಮೇಲೆ ವಜ್ರಪಾತವಾದಂತಾಯಿತು. ನಾನು ಇನ್ನೂ ಏನನ್ನೂ ಮಾತನಾಡಿರಲಿಲ್ಲ; ಅಷ್ಟರಲ್ಲಿ ಅವರು ಕಣ್ಮರೆಯಾದರು. ಆಗಿನ ನನ್ನ ಸ್ಥಿತಿಯು ಅಧಿಕ ವೇದನೆಯಿಂದ ತುಂಬಿತ್ತು. ಯಾವ ಕೆಲಸಕ್ಕೂ ಮನಸ್ಸಾಗುತ್ತಿದ್ದಿಲ್ಲ. ಹೃದಯದಲ್ಲಿ ಸದಾ ಒಂದು ಜ್ವಾಲೆಯು ಪ್ರಜ್ವಲಿಸುತ್ತಿತ್ತು; ಆದರೆ ಬಹಿರಂಗವಾಗಿ ಅಳಲು ನನಗೆ ಅಧಿಕಾರವೆಲ್ಲಿ! ಈಗ ನನಗೆ ಎಲ್ಲರೂ ಹುಚ್ಚಿ ಎನ್ನುತ್ತಾರೆ. ನಾನೇನಾದರೂ ಮಾಡಿದರೆ ಮಾಡಗೊಡುತ್ತಾರೆ; ಆದುದರಿಂದ ಇಂದು ಬಹಿರಂಗವಾಗಿ ಅಳುತ್ತೇನೆ ಮತ್ತು ನಿಮಗೂ ಕೂಡ ನನ್ನ ಕತೆಯನ್ನು ಸಿರುತ್ತೇನೆ. ಅವರು ಎಲ್ಲಿರುವರು? ಏನು, ನೀವು ಹೇಳಲಿಲ್ಲವಾ? ನಾನು ಪುನಃ ಒಂದುಸಾರೆ ಅವರನ್ನು ನೋಡಲಿಚ್ಛಿಸುತ್ತೇನೆ. ನನಗೆ ಈ ಪೀಡೆ. ಈ ಉನ್ಮಾದ ಇವನ್ನು ಅವರೇ ಕೊಟ್ಟಿದ್ದಾರೆ ಯಾರಾದರೂ ಸಹೃದಯರು ಅವರ ವಿಳಾಸವನ್ನು ಹೇಳಿದರೆ, ನಾನು ಅವರ ಈ ಗಂಟನ್ನು ಅವರಿಗೇ ಒಪ್ಪಿಸುವೆನು.

ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

ಆಯುರ್ವೇದೀಯ ಔಷಧಗಳು.

ವೈದ್ಯ ಲೋಂಢೆ ಇವರ 'ಚಳಿಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅನುಲೋಮಗುಳಿಗೆ–ಸರ್ವಪ್ರಕಾರದ ಅಮಲೋಕದ ಮೇಲೆ ಗುಣಕಾರಿ.
ಏಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮ್ಯಾನೇಜರ್— ವೈದ್ಯ ಪಿ. ಕೆ. ಲೋಂಢೇ ಫಾರ್ಮಸಿ,
ಸನಸೇಲ-ಕುಲಾಬಾ

ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.
ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

ಕನ್ನಡದಲ್ಲಿ ವಿಚಾರ-ಸಾಹಿತ್ಯದ ಅಭಾವ*

ಪ್ರೊ. ರಾ. ಯ. ಧಾರವಾಡ ಎಂ. ಎ, ಧಾರವಾಡ,

★

ವಿಚಾರಸಾಹಿತ್ಯ ಮಾನವನ ಬದುಕಿನ ಅಸ್ತಿತ್ವಕ್ಕೇ ಅತ್ಯವಶ್ಯ, ಲಲಿತಸಾಹಿತ್ಯ ಮಾನವನ ಮನೋರಂಜನೆಗೆ ಮಾತ್ರ ಪ್ರಯೋಜಕ. ಕನ್ನಡಿಗರಿಗೆ ಬರಿ ಮನೋರಂಜನೆ ಮಾತ್ರ ಬೇಕೆ? ಹದವಾದ ಬದುಕು ಬೇಕಾಗಿಲ್ಲವೆ?

★

ಜೀವನವು ಬುದ್ಧಿ ಮತ್ತು ಭಾವನೆಗಳ ಬಿತವಾದ ಹೊಂದಿಕೆಯಾದಾಗಲೇ ಬಾಳು ಸಾಧ್ಯ. ಒಂದಿಲ್ಲದೆ ನುತ್ತೊಂದು ಪೂರ್ತಿಯಾಗದು. ಅಂತೆಯೇ, ಜೀವನಕ್ಕೆ ಸಾಧನವಾದ ಸಾಹಿತ್ಯವು ಕೂಡ ಭಾವನಾಪೂರ್ಣವಾಡಬೇಕು, ಬುದ್ಧಿಪೂರ್ಣವೂ ಪ್ರಭಾವಶಾಲಿಯೂ ಆಗಿರುವುದು ಯುಕ್ತಿಯುಕ್ತವಾಗಿದೆ. ಜೀವನದಲ್ಲಿ ಬುದ್ಧಿ ಮತ್ತು ಭಾವನೆಗಳನ್ನು ಸ್ಪಷ್ಟವಾಗಿ ವಿಂಗಡಿಸಬಹುದಾದಂತೆ ಸಾಹಿತ್ಯವಲ್ಲಿ ವಿಂಗಡಿಸುವುದು ಕಠಿನಸಾಧ್ಯವಾದರೂ, ಸಹೃದಯರಿಗೆ ಎಷ್ಟೂ ರೀತಿಗಳ ಅರಿಕೆಯಾಗದಿರದು. ಎಂತಲೇ, ಶೆಲಿ, ಬೈರನ್ನರಲ್ಲಿ 'ಭಾವನೆ' ಹೆಚ್ಚೆಂದು ಹೇಳಿದರೆ, 'ಶಾ', 'ಇಲಿಯಟ್'ರಲ್ಲಿ 'ಬುದ್ಧಿ' ಹೆಚ್ಚೆಂದು ಹೇಳುವುದು. 'ಶಾ'ನ ನಾಟಕಗಳೆಲ್ಲ ಇಂದಿನ ಜೀವನದಲ್ಲಿ ನಡೆದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹೋರಾಟಗಳ ಉಷ್ಣತಾಮಾಪಕದಂತಿವೆ. ಇಂತಹ ಬರೆಹಗಾರರು ಬರಿಯೆ ಆರಾಮ-ಕುರ್ಚಿಯ ಓದುಗರಿಗೆ ಬೇಸರವನ್ನು ತರಿಸಬಹುದು ನಿಜ; ಆದರೆ ಕೆಲವು ಜೀವಿಗಳಿಗಾದರೂ ಬರಿ 'ಆರಾಮ-ಕುರ್ಚಿ'ಯ ಜೀವನ ಬೇಕಿಲ್ಲ.

ಕನ್ನಡ ಸಾಹಿತ್ಯದಲ್ಲು ಕೂಡ ಈ ಬುದ್ಧಿ ಮತ್ತು ಭಾವನೆಗಳ ಭೇದವನ್ನು ಬಹುಮಟ್ಟಿಗೆ ಕಾಣಬಹುದು. ಲಲಿತ-ಸಾಹಿತ್ಯದಲ್ಲಿ, ಕನ್ನಡ ಕಾವ್ಯವು ಬಹುಮಟ್ಟಿಗೆ 'ಭಾವನಾ-ಪ್ರಧಾನ'ವಾಗಿದ್ದರೂ 'ಮಂಕುತಿಮ್ಮನ ಕಗ್ಗ'ದಂತಹ ಕೃತಿಗಳಲ್ಲಿ ಭಾವನೆ ಮತ್ತು ಬುದ್ಧಿಯ ಸುಂದರವಾದ ಹೊಂದಿಕೆಯನ್ನು ಕಾಣುತ್ತೇವೆ.

ಹಲಕೆಲವು ಕಾದಂಬರಿಗಳೂ, ಒಳ್ಳೆಯ ತಾತ್ತ್ವಿಕ ಚರ್ಚೆಯನ್ನೆತ್ತಿಕೊಂಡಿವೆ. ಕಲೆ ಮತ್ತು ಅದರ ಸ್ವರೂಪ, ನಾಡಿನ ಪುರವಸ್ಥೆ ಮತ್ತು ಕಾರಣ ಪುರುಷನ ಬರವು, ದೇಶದ ರಾಜಕೀಯ ಮತ್ತು ಉದ್ಯೋಗತಿ—ಇವೆಲ್ಲ ಸುಂದರವಾಗಿ, ಉಚಿತವಾಗಿ ಚರ್ಚಿಸಲ್ಪಟ್ಟಿವೆ. ಆದರೂ ಈ ವಿಭಾಗದಲ್ಲೂ—ವಿಚಾರ ಸಾಹಿತ್ಯ—ವಿಚಾರ ಪ್ರಚೋದಕ ಸಾಹಿತ್ಯ—ಇನ್ನೂ ಬೇಕು. T. S Eliotನ "Night-Man Abbey"ದಂತಿ, ಸಾಹಿತ್ಯ ಮತ್ತು ಸಾಹಿತಿಗಳ ನಿಪರ್ಣಾಣಕ-ವಿಮರ್ಶೆಯನ್ನು ಕೊಡುವ ಗ್ರಂಥಗಳ ಧಾರಿ ಕನ್ನಡಕ್ಕೆ ಇನ್ನೂ ದೂರ....ಆ ನಾಡಿನ ಬೆಳಕು ಕೂಡ ಇನ್ನೂ ನಮ್ಮಲ್ಲಿ ಮೂಡಿಲ್ಲ; ಅಲ್ಲಿಯ ಒಂದು ಹಕ್ಕಿಯೂ ಈ ಕಡೆ ಮಾರ್ಗ ಬೆಳೆಸಿಲ್ಲ.

ಆದರೆ ಸಮಾಜದ ಪಡಿಗನ್ನಡಿಯಾದ ನಾಟಕಪ್ರಪಂಚದಲ್ಲಿ ಮಾತ್ರ ಹಲವಾರು ಲೇಖಕರಾದರೂ ತುಂಬಾ ವಿಚಾರಪೂರ್ಣವಾದ ಸಾಹಿತ್ಯವನ್ನಿತ್ತಿದ್ದಾರೆ. 'ಹರಿಜನ್ನಾರ'—'ಸರ್ಕಸ್ಸಿನ ಸರಸ್ವತಿ'—'ಪ್ರಪಂಚ ಪಾಣಿಪತ್ತು'—'ನಿರಾಹಾರ'—ಇವೆಲ್ಲ ಇಂದಿನ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಡೆದ ಕ್ರಾಂತಿಯ ಫಲ. ಶ್ರೀರಂಗರ ಸಾಹಿತ್ಯ ಬಹುಮಟ್ಟಿಗೆ ವಿಚಾರ ಪೂರ್ಣವಾದುದು. "ಲೆಕ್ಚರ್ ಕೊಡಲಿಕ್ಕೆ ಹೊರಟ ಕೈಲಾಸವನ್ ನಾಟಕ ಬರೆದರ; ನಾಟಕ ಬರೆಯ ಹೊರಟ 'ಶ್ರೀರಂಗ'ರು ಲೆಕ್ಚರಿಗೆ ಪ್ರಾರಂಭಿಸಿದರು" ಎನ್ನುವುದು, ಸ್ಥೂಲವಾದರೂ ಅಸತ್ಯವಾದ ಅಭಿಪ್ರಾಯವೇನೂ ಅಲ್ಲ. ಕನ್ನಡ ಜನತೆಯನ್ನು ಹೊಡೆದೆಬ್ಬಿಸಿ ಸತ್ತ್ವಯುತವಾಗಿ ವಿಚಾರ-ಮಾಡಹಚ್ಚಿದ ಶ್ರೇಯಸ್ಸು 'ಶ್ರೀರಂಗರ' ವಿಚಾರಸಾಹಿತ್ಯಕ್ಕಿರಲೇ ಬೇಕು.

ಹಳಗನ್ನಡದಲ್ಲಿ ಕೂಡ 'ಕ್ರಾಂತಾಸಮ್ಮಿತತಯಾ' ಉಪದೇಶ ಮಾಡಹೊರಟ ಕನ್ನಡ ಕಾವ್ಯ, ಈ ಬುದ್ಧಿಯ ಅಂಶವನ್ನು ಕಾಯ್ದುಕೊಂಡೇ ಬಂದಿತು.

ಆದರೂ ಸಮಗ್ರ ಕನ್ನಡ ಸಾಹಿತ್ಯದ ಸಿಂಹಾವಲೋಕನವನ್ನು ಮಾಡಿದರೆ ಈ ವಿಚಾರಸಾಹಿತ್ಯದ ಪಾಹ ಕಡಮೆಯಾಗದು. ನೆರೆಹೊರೆಯ ಮರಾಠಿ-ಗುಜರಾಥಿ ಸಾಹಿತ್ಯಗಳನ್ನು ನೋಡಿದರಂತೂ, ಅವರ ಕೊರತೆ ತುಂಬಾ ಕಂಡು ಬರುತ್ತದೆ.

'ಒಣಿಗೊಬ್ಬ ಕವಿ' ಎಂದು ಸಾಮಾನ್ಯರು ಗೇಲಿ ಮಾಡಬಹುದಾದರೂ ಕನ್ನಡದಲ್ಲಿ ಬರೆಹಗಾರರ ಸಂಖ್ಯೆ ಇನ್ನೂ ಕಡಮೆ; ಗ್ರಂಥಗಳೂ ಕಡಮೆ. ನೆರೆಹೊರೆಯ ಸಾಹಿತ್ಯವನ್ನು ನೋಡಿದಾಗ ಈ ಕನಿಕರ ಇನ್ನೂ ಹೆಚ್ಚಾಗಿ ಎದ್ದು ಕಾಣುತ್ತದೆ.

---

* ಶ್ರೀಯುತರು ತಾ. ೧೮-೯-೪೬ರ ದಿವಸ ಮೈಸೂರು ಆಕಾಶವಾಣಿಯಿಂದ ಮಾಡಿದ ಭಾಷಣ: ಆಕಾಶವಾಣಿ ಅಧಿಕಾರಿಗಳ ಅನುಮತಿ ಪಡೆದು ಪ್ರಕಟಿಸಲಾಗಿದೆ. ಸಂ. ಜ.

ಕಾವ್ಯದಲ್ಲಿ ಬೇಂದ್ರೆ-ಪುಟ್ಟಪ್ಪನವರ ಜೊತೆ ನಿಲ್ಲಬಹುದಾದ ಕವಿ-ಗಣಬೇಕು; ನಾಟಕದಲ್ಲಿಯ ಹಳೆಯ 'ತ್ರಿಮೂರ್ತಿ'ಗಳ ಆರಾಧನೆಯ ಜೊತೆಗೆ ಹೊಸ ವಿಗ್ರಹಗಳೂ ಬರಬೇಕು. ಸೃಷ್ಟಿ-ಸ್ಥಿತಿಗಳಾಗಿ ಲಯಕ್ಕೇ ನಿಂತಂತಿದೆ ಕನ್ನಡ-ತ್ರಿಮೂರ್ತಿ-ನಾಟಕ-ಪ್ರಪಂಚ. 'ಎನ್ಕೆ' ಅವರ ಅನೇಕ ಗ್ರಂಥಗಳು ಇತ್ತೀಚೆ ಈ ಕೊರತೆಯನ್ನು ಪೂರಯಿಸಿದಂತೆ ಹೊಸಹುಟ್ಟು ಬರಬೇಕು. ಅದರ ಜೊತೆಗೆ ವಿಚಾರಸಾಹಿತ್ಯವಂತೂ ಇಮ್ಮಡಿಯಾಗಿ-ಮುಮ್ಮಡಿಯಾಗಿ-ಹುಟ್ಟಬೇಕು.....

"ಶುದ್ಧ ವಿಚಾರಸಾಹಿತ್ಯ"ದ ಗ್ರಂಥಗಳಿಗಂತೂ ಕನ್ನಡದಲ್ಲಿ ತುಂಬಾ ಕಾರ್ಪಣ್ಯ. ಜಗತ್ತಿನಲ್ಲಿ ನಡೆದ ಅನೇಕ ಆಂದೋಲನಗಳ ವಿಷಯವಾಗಿ ಶಾಸ್ತ್ರೀಯವಾಗಿ—ಸತ್ತ್ವಯುತವಾಗಿ—ಹೇಳುವ ಉದ್ಗ್ರಂಥಗಳು ಕನ್ನಡದಲ್ಲಿ ತೀರ ಕಡಮೆ. "ನೇತಿ" "ನೇತಿ"ಯ ಕಡೆಗೇ ಕನ್ನಡದ ಮಾರ್ಗ. ನಾಡಿನಲ್ಲಿ ನಡೆದ ಪ್ರಚಂಡವಿಪ್ಲವಗಳ ವಿಷಯ ಕನ್ನಡದಲ್ಲಿ ಇನ್ನೂ ಮಾಸಪತ್ರಿಕೆಗಳಿಗೆ ಮೀಸಲು. ತತ್ತರಿಸುತ್ತಿರುವ ಸಾಮ್ರಾಜ್ಯವಾದ, ಹೊಸ ಹುಟ್ಟು ತೋರಿಸಿದ ಸಮತಾವಾದ, 'ರಾಯ್‌ವಾದ,' ಜಾಗತಿಕ ವರ್ಣದ್ವೇಷ, ಸಮಾಜಸ್ವಾಸ್ಥ್ಯ, 'ಬಿವರಿಜ್-ಯೋಜನೆ,' ಕರೆನ್ಸಿ—ಇವೆಲ್ಲ ಪ್ರಚಲಿತ ವಿಷಯಗಳ ಬಗ್ಗೆ ಕನ್ನಡದಲ್ಲಿ ಗ್ರಂಥಗಳೆಷ್ಟು? ಎಷ್ಟರಮಟ್ಟಿಗೆ ಕನ್ನಡ ವಿಚಾರಸಾಹಿತ್ಯ ಈ ದಿಸೆಯಲ್ಲಿ ಜನರನ್ನು ಬಡಿದೆಬ್ಬಿಸಿದೆ? ಇಪ್ಪ ಗ್ರಂಥಗಳೋ, ಬರಿಯ ಕೈಬೆರಳಿನಿಂದೆಣಿಸುವಷ್ಟು....

ಈ ಆಂತರ-ದೇಶೀಯ ವಿಷಯಗಳೂ ಹೋಗಲಿ; ಭಾರತದ ಆಂತರಿಕ ಸಮಸ್ಯೆಗಳ ಬಗ್ಗೆಯಾದರೂ ಇರುವ ಅಧಿಕೃತ ಮತ್ತು ಶಾಸ್ತ್ರೀಯ ಗ್ರಂಥಗಳೆಷ್ಟು? ಅಸ್ಪೃಶ್ಯತೆ, ಆಹಾರ-ಸಮಸ್ಯೆ, ಆಹಾರ-ನಿಯಂತ್ರಣದ ಕ್ರಮ, ಸಂಸ್ಥಾನಗಳ ಭವಿತವ್ಯ, ಗಾಂಧೀವಾದ ಮತ್ತು ಅಮಿಂಡ ಹಿಂದುಸ್ಥಾನ ಈ ಬಗೆಯ ವಿಷಯಗಳ ಸಲುವಾಗಿ ಇರುವ ವಿವೇಚನಾತ್ಮಕ ಗ್ರಂಥಗಳಾದರೂ ಎಷ್ಟು? ಇವೆಲ್ಲವೂ—"ಒಳಗೆ ಬರಬೇಕೋ ಬರಬಾರದೋ" ಎಂದು ಕನ್ನಡದ ಮನೆಯ ಮುಂದು ಸುಳಿಯುತ್ತಿರುವ ಅಗಂತುಕ ಅತಿಥಿಗಳು....ಅಷ್ಟೇ ಏಕೆ? ೧೮೫೭ರ ರಾಜ್ಯಕ್ರಾಂತಿ, ೧೯೪೨ರ ಸ್ವಾತಂತ್ರ್ಯಯುದ್ಧ— ಇವೆಲ್ಲ ಪುಸ್ತಕಕ್ಕೇನು ಕಡಮೆಯವಸ್ತುವೇ? ಇಂಗ್ಲಿಷ್‌ನಲ್ಲಿ ಈ ವಿಷಯವಾಗಿ ಇರುವ ಗ್ರಂಥಗಳೆಷ್ಟು? ಆದರೆ ಕನ್ನಡದಲ್ಲಿ?.....

ಅದೂ ಹೋಗಲಿ; ನಾಡಿನ ಪ್ರಸಿದ್ಧ ರಾಜಕಾರಣಿಗಳ ವಿಷಯವಾಗಿರುವ ಶಾಸ್ತ್ರೀಯ ಮತ್ತು ಸತ್ತ್ವಯುತವಾದ ಗ್ರಂಥಗಳಾವರೂ ಎಷ್ಟು? "ಸತ್ಯಶೋಧನಮಾಲೆ," ಕಂದಾಡೆಯವರ "ನೆಹರೂ ಆತ್ಮಚರಿತ್ರೆ," ಗೋರೂರ ಮತ್ತು ಕೃಷ್ಣಶರ್ಮರ ಗ್ರಂಥಗಳು—ಇವೇ ನಾಲ್ಕಾರು ಪುನಃ ಪುನಃ ಹೇಳಬೇಕಾದ ಗ್ರಂಥಗಳು. ಇಂದು ಕನ್ನಡ ರಾಜಕಾರಣಿಗಳ ವಿಷಯವಾಗಿಯೇ ಬರೆಯಬಹುದಾದಷ್ಟು ಸ್ವಾರ್ಥತ್ಯಾಗ ಕನ್ನಡ ನಾಯಕರಲ್ಲಿ ಕೊಡಿಲ್ಲವೇ?..... ಇವೆಲ್ಲ ಕನ್ನಡ-ವಿಚಾರ ಸಾಹಿತ್ಯಮಾಲೆಗೆ ಅವಶ್ಯ ಬರಬೇಕು.

ಹಾಗೆಯೇ ಭಾರತದ ಆಸ್ಥಾನವನ್ನೇ ಉಂಡು, ಭಾರತದ ನೆರಳಲ್ಲಿ ಆದರಾತಿಥ್ಯ ಹೊಂದಿ, ಭಾರತದಲ್ಲಿ ವಿಷಾರಾಮವಾಗಿ ಸುಖ-ಕೊಚ್ಚಿ, ಸ್ವದೇಶಗಳಿಗೆ ಮರಳಿದ ಎಷ್ಟು ಜನ ಪರಕೀಯರು ಭಾರತಕ್ಕೆ ಅನ್ಯಾಯ ಬಗೆದಿಲ್ಲ?....ಮಿಸ್ ನೇಯೋ ಫಾದರ್ ದುಬಾ, ಬಿವರ್ಲೆ ನಿಕೋಲ್ಸ್—ಒಬ್ಬರೇ ಇಬ್ಬರೇ—ಹಲವಾರು ಜನ ಈ ಸುರಿಗೆಯನ್ನು ಕ್ರೂರವಾಗಿ ಭಾರತದ ಬೆನ್ನಲ್ಲಿ ಇರಿದಿದ್ದಾರೆ. ಇಂಗ್ಲಿಷ್‌ನಲ್ಲಿಯಂತೂ ಹೆಚ್ಚು ಕಡಿಮೆ ಈ ಗ್ರಂಥಗಳು ಪ್ರಕಟವಾದ ಮರುತಿಂಗಳಲ್ಲಿಯೇ ಪ್ರತಿಹೊಡೆತ ಬಂದಿದೆ. "Sister India;" "Father India," ಲಜಪತರಾಯರ "Unhappy India"; N. G. Jog ಅವರ "Judge or Judas?"; K. L. Gauba ಅವರ "Verdict on England"—ಎಷ್ಟೋ ಉತ್ತರಗಳು ಹುಟ್ಟಿಕೊಂಡುವು. ಇವೆಲ್ಲವುಗಳನ್ನು ಬರಿಯ ಭಾಷಾಂತರ ಮಾಡದೆ—ಎಲ್ಲವನ್ನೂ ಒಂದುಗೂಡಿಸಿ—ವಿಚಾರಪ್ರಜೋದಕವಾದ ಸಾಹಿತ್ಯವನ್ನು ನಿರ್ಮಿಸುವ ಆವಶ್ಯಕತೆಯಿಲ್ಲವೇ?..ಇಂತಹ ವಿಚಾರಪ್ರಜೋದಕ ಸಾಹಿತ್ಯ ಕನ್ನಡಕ್ಕೆ ಆವಶ್ಯಬೇಕು... "ಸತ್ಯಶೋಧನ ಪ್ರಕಟನಮಂದಿರ" "ಪ್ರಭಾತ ಸಾಹಿತ್ಯಮಾಲೆ," "ಮಿಂಚಿನ ಬಳ್ಳಿ," "ಸಮಾಜ ಪುಸ್ತಕಮಾಲೆ," "ರಾಷ್ಟ್ರೀಯ ಪಾಠ್ಯಾಯ ಪ್ರಕಾಶನ ಸಮಿತಿ," "ಜನತಾ ಸಾಹಿತ್ಯಗಳು"—ಈ ದಿಶೆಯಲ್ಲಿ ಅವಿರತವಾದ ಪ್ರಯತ್ನಮಾಡುತ್ತಿವೆ. ಆದರೆ ಇಷ್ಟೇ ಸಾಲದು; ಬರಿಯ ಬೇಸಗೆಗೊಮ್ಮೆ ಹಾರಿಬಂದ ಕೋಗಿಲೆಯ ಗಾನದಿಂದ ಸಂಗೀತತೃಷ್ಣೆ ಪೂರ್ತಿತೀರದು.

ಅದೂಅಲ್ಲದೆ, ಈ ವಿಭಾಗದಲ್ಲಿ ಬರಿಯ ಭಾಷಾಂತರಗಳಿಂದಲೂ ಕೆಲಸವಾಗದು. ಕನ್ನಡ ರಾಜಕಾರಣಿಗಳಲ್ಲಿ ಮೇಧಾವಿಗಳೂ ಲೇಖಕರೂ ಅನೇಕರಿದ್ದಾರೆ. ಕನ್ನಡ ಮುಟ್ಟಿದ ರಾಜಕೀಯದ ಮಡಿವಂತಿಕೆಯ ಕಾಲವೂ ಇಂದು ಸಂದುಹೋಗಿದೆ. ಜನರ ನಾಯಕರು—ಅವಶ್ಯವಾಗಿ ಜನರ ವಾಣಿಯಲ್ಲಿ ಜೋಧವಾಗುವ ಹಾಗೆ ಹೇಳಬೇಕು; ಬರೆಯಬೇಕು. ರಾಜಕಾರಣಿಗಳ ಈ ಲೇಖನ ಸಂನ್ಯಾಸ ನಿಂತು ಜನರಲ್ಲಿ ಹೆಚ್ಚಿನ ಜಾಗೃತಿ—ಉತ್ಸಾಹ—ಆತ್ಮೀಯತೆಗಳು ಬೆಳೆಯಬೇಕು. ಮರಾಠಿಯಲ್ಲಿ ವೀರ ಸಾವರ-ಕರ್, ನ. ಚಿ. ಕೇಳಕರ್, ಸಾನೇ ಗುರುಜಿ ಜವರು—ಗುಜರಾಥದಲ್ಲಿ ಕನಯಲಾಲ್ ಮುನಷಿ, ರಾಮನಾರಾಯಣ ನಾಠಕ ಅವರು ಮಾಡಿದ ಸೇವೆಯಂತೆ ಕನ್ನಡದಲ್ಲಿಯೂ ಸವ್ಯಸಾಚಿಸೇವೆ ಬೇಕು. ದೇಶಪತ್ರಿಕ ದಿವಾಕರ ಅವರು ಹಾಕಿದ "ಸತ್ಯಾಗ್ರಹ"ದ ದಾರಿ ಕನ್ನಡದ ಮುಂದಿನ ಅಲೆಯನ್ನು ಕುದುರಿಸಬೇಕು.

ರಾಜಕೀಯರಂಗವು ಈ ಸ್ಥಿತಿಯಲ್ಲಿದ್ದರೆ, ವಿಜ್ಞಾನದ ವಿಷಯವೂ ಅಷ್ಟೇ. ವಿಜ್ಞಾನವನ್ನು ಬಿಟ್ಟರಲಾಗದ ಇಂದಿನ ಜೀವನದಲ್ಲಿ ಈ ಬಗ್ಗೆ ಇರುವ ಶಾಸ್ತ್ರೀಯ ಗ್ರಂಥಗಳಾದರೂ ಎಷ್ಟು? ಪ್ರಾದೇಶಿಕ

ಭಾಷೆಗಳಲ್ಲಿಯೆ ಎಲ್ಲ ವಿಷಯಗಳನ್ನು ಕಲಿಸಬೇಕೆಂದು ರಾಷ್ಟ್ರೀಯ ಸರಕಾರವು ಇಂದಿನ ಕಾಲದಲ್ಲಿ ವಿಚಾರಮಾಡುತ್ತಿರುವಾಗ, ಈ ಲಾಭವನ್ನು ಪಡೆಯುವ ಸಾಮರ್ಥ್ಯ ಕನ್ನಡಕ್ಕಿದೆಯೆ? ತಾನಾಗಿಯೇ ನಡೆದು ಬಂದ ಧಾನ್ಯರಕ್ಷಣೆಗೆ ಬಾಗಿಲುಕಾಲೆಯುವ ಪ್ರಜ್ಞೆಯಾದರೂ ನಮ್ಮಲ್ಲಿದೆಯೆ?..... ..... ವಿಚಾರಿಸಬೇಕು.... ಆದರೆ ಇಲ್ಲಿಯೂ ಪುನಃ ಅದೇ "ನಾಸ್ತಿ". ಮೈಸೂರು ವಿಶ್ವವಿದ್ಯಾಲಯದ ಹಲವು ಪ್ರಕಟನೆಗಳು, "ವಿಜ್ಞಾನಿಗಳ ಕಷ್ಟಗಳು" "ವಿಜ್ಞಾನ ಮತ್ತು ಸಾಹಿತ್ಯ" "ನವಜೀವನ ಗ್ರಂಥಮಾಲೆಯ ಪ್ರಕಟನೆಗಳು"— ಇವುಗಳನ್ನು ಬಿಟ್ಟರೆ ಪುನಃ ಘೋರ್ಣವಿರಾಮ. ಇನ್ನೆಲ್ಲ ಕಾರಣಗಳೇನೇ ಇರಲಿ— ಸಾಹಿತ್ಯಿಕರ ಅನಾಸಕ್ತಿಯೇ ಇರಲಿ, ಅಥವಾ ಈ ವಿಷಯಗಳನ್ನೆಲ್ಲ ಕನ್ನಡ ವಿದ್ವಾಂಸರ ಅನಾಸಕ್ತಿ-ಅಯೋಗ್ಯತೆಗಳೇ ಇರಲಿ— ಇಲ್ಲಿಯೂ ಈ ಸಾಹಿತ್ಯ ಬೆಳೆಯುವ ಅನಿವಾರ್ಯತೆ ಕಾಣುತ್ತಿಲ್ಲ. ಹೊರಪ್ರೇರಣೆ ಅನಿವಾರ್ಯತೆಯನ್ನಾದರೂ ಅರಿಸಿಕೊಳ್ಳುವ ಸಾಮರ್ಥ್ಯ ನಮ್ಮಲ್ಲಿ ಬರಲಿ!...

ರಾಜಕಾರಣ, ವಿಜ್ಞಾನಗಳಿಂದ; ಧಾರ್ಮಿಕತೆಯಿಂದ ಕನ್ನಡದ ಧಾರ್ಮಿಕ ಸಾಹಿತ್ಯವಾದರೂ ಸರಿಯೊಂದಿಗೆ ವ್ಯಾಂಕಗಳ ಸ್ಪರ್ಧೆಗೆ ನಿಲ್ಲಬಹುದೇ? ನೋಬೆಲ್ ಭಾರತ-ಭಾಗವತ-ಪುರಾಣಾದಿಗಳು ಧಾರಾಳಂತರ ಹೊಂದಿದರೂ ದೇಸ-ಲುಸಿಸಿಪತ್ತು ಗಳ ಸಮಗ್ರ ಧಾರಾವಾಹಿ ಇನ್ನೂ ಬರಬಲ್ಲ ವಿಜ್ಞಾನಿಗಳೂ, ಇದ್ದಂಥ ಧಾರಾಂತರಗಳ ಬಾಯಿಪಾಠಕ್ಕೆ- ಸಮ್ಮಾಬ್ಲಿ ವಿಕೆ ನಿಲ್ಲಬೇಕು? ಈ ಎಲ್ಲ ಗ್ರಂಥಗಳನ್ನು ಓದಿ ಅರಗಿಸಿ, ಇವುಗಳ ಸ್ವಂತ ವಿವೇಚನೆಯನ್ನು ಪಡಿಸಿ, ವಿಮರ್ಶಾತ್ಮಕ ಸಾಹಿತ್ಯವನ್ನು ನಿರ್ಮಿಸುವ ಸಾಮರ್ಥ್ಯ ಕನ್ನಡಕ್ಕಿದೆಯೇ? ಜರಾಸಂಧನಲ್ಲಿ ಲೋಕಮಾನ್ಯರ "ಗೀತಾರಹಸ್ಯ" ಸಿ.ವಿ.ವೈದ್ಯರ "ಮಧ್ಯಯುಗೀನ ಭಾರತ" ಮತ್ತು ಜವಾಹರ್‌ಲಾಲ್ ನೆಹರೂ ಅವರ "ಭಾರತೀಯ ಚರಿತ್ರಕೋಶ" ಇವಕ್ಕೆ ಸರಿಸಾಟಿಯಾದ ಗ್ರಂಥಗಳು ನಮಗೆ ಬೇಡವೇ? ಕನ್ನಡದಲ್ಲಿ ಈ ವಿಷಯಲ್ಲಿ ಜನರಿಲ್ಲವೆಂದಲ್ಲ; ಆದರೆ ಕನ್ನಡದ ಬಗ್ಗೆ ಆದರ ಇನ್ನೂ ಅಲ್ಲಿ ಅಂಕುರಿಸಬೇಕು. ಮೈಸೂರು ವಿಶ್ವವಿದ್ಯಾನಿಲಯ, ಆಲೂರ ವೆಂಕಟರಾಯರು, ಹೊಸಕೆರೆ ಜಿವಂಬುರಯ್ಯನವರು—ಇವೇ ಕೆಲವು ಹೆಸರು ಪುನಃ ಇಲ್ಲಿ ಹೇಳಲ್ಪಡಬೇಕು. ಅಲ್ಲದೆ ಇನ್ನೂ ಒಂದು ದೃಷ್ಟಿಯಿಂದಲೂ ಕನ್ನಡದಲ್ಲಿ ಧಾರ್ಮಿಕ ವಿಚಾರ ಸಾಹಿತ್ಯ ಬೆಳೆಯಬೇಕು. ಅದೆಂದರೆ ಧಾರ್ಮಿಕ ಪರಿಭಾಷೆಯ ಕೋಶ ಮತ್ತು ಪೌರಾಣಿಕ ವ್ಯಕ್ತಿಗಳ ಬಗ್ಗೆ ಒಂದು ವಿಶ್ವಕೋಶ. ಕನ್ನಡವನ್ನು ಕಲಿಸಬೇಕಾದ ಅಧ್ಯಾಪಕರಿಗಂತೂ ಇದು ಬಿಡಲಾರದ ಕರ್ಮ; ಇಲ್ಲದ ತೊಂದರೆ. ಪಲ್ಲೇಪನ, ಸಿದ್ಧತಿಲೆ, ಶಲಾಕಾಪುರುಷ, ಆಣುವ್ರತ, ಪಾನೋಪಹೆ, ಜಂಗಮ, ವಿಭವಸ್ವರೂಪ— ಈ ಮೊದಲಾದ ಪಾರಿಭಾಷಿಕಗಳ ಬಗ್ಗೆ ಪುನಃ ನಾವು ಇನ್ನೂ ಆ ಈ ಗ್ರಂಥಗಳನ್ನು ನೋಡುವ ತೊಂದರೆ ತಪ್ಪಿಲ್ಲ. ಪಂಡಿತ ಪೂಜಾರ ಅವರ ಗ್ರಂಥ ಇನ್ನೂ ಇತರ ಗ್ರಂಥಗಳ ದಾರಿಕಾಯುತ್ತಿದೆ. ಜೈನಧರ್ಮದ ಸಲುವಾಗಿ ಶ್ರೀ. ರಾಜರತ್ನಮ್ ಅವರು ಮಾಡಿದ ಸೇವೆ ಈ ರೀತಿಯಿಂದ ಅಮೋಘವಾಗಿದೆ. ಇಪ್ಪೆಲ್ಲವುಗಳ ವಿಷಯವಾಗಿ ನಿರ್ದುಷ್ಟ ಮತ್ತು ಶಾಸ್ತ್ರೀಯವಾದ ಕೋಶದ ಆವಶ್ಯಕತೆ ತುಂಬಾ ಇದೆ.

ಹಾಗೆಯೇ ಪೌರಾಣಿಕವ್ಯಕ್ತಿಗಳ ವಿಷಯವೂ ಅಷ್ಟೇ! ಕನ್ನಡದ ಅಭ್ಯಾಸದಲ್ಲಿ ನೂರಾರು ಇಂಥ ಹೆಸರುಗಳು ಬರುತ್ತವೆ. ಪೃಥು, ಪುರೂರವ, ದಧೀಚಿ, ನಾಗಾರ್ಜುನ— ಈ ಮೊದಲಾದ ವ್ಯಕ್ತಿಗಳು ಯಾರು? ಇವರ ಉಪಲಬ್ಧ ಜೀವನ ಚರಿತೆಯೇನು? ಇವರ ಜೀವನದ ವೈಶಿಷ್ಟ್ಯಗಳಾವುವು? ಯಾವುದಕ್ಕಾಗಿ ಇವರ ಹಿರಿಮೆ? ಇವರ ಉಲ್ಲೇಖಗಳೆಲ್ಲಿ? ಹೆಚ್ಚಿನ ವಿವರಗಳಿಗಾಗಿ ಸಂದರ್ಭ ಗ್ರಂಥಗಳಾವುವು?— ಈ ಎಲ್ಲ ವಿಷಯಗಳನ್ನು ಹೇಳುವ ಒಂದು ಬೃಹದ್ವಿಶ್ವಕೋಶ ತೀರ ಅವಶ್ಯ. ಇದಿಲ್ಲದೆ ಕನ್ನಡದ ಅಭ್ಯಾಸ ಬಹುಮಟ್ಟಿಗೆ ಪ್ರಯಾಸಕರ; ಅಪೂರ್ಣ. "ಪುರಾಣ ನಾಮ ಚೂಡಾಮಣಿ" ಕೆಲಮಟ್ಟಿಗೆ ಈ ಉದ್ದೇಶವನ್ನು ಯಶಸ್ವಿಯಾಗಿ ಸಾಧಿಸಿದೆ. ಇಂಥ ಪರಿಪೂರ್ಣ ಮತ್ತು ಸರ್ವಧರ್ಮಸಮನ್ವಿತ ಗ್ರಂಥಗಳು ಬೇಕು. ಮರಾಠಿಯಲ್ಲಿ "ಭಾರತೀಯ ಚರಿತ್ರಕೋಶ" ಆಗಿಹೋಯಿತು. ಆದರೆ ಕನ್ನಡದಲ್ಲಿ?.....

ಇಲ್ಲಿಗೇ ಕನ್ನಡ ವಿಚಾರಸಾಹಿತ್ಯದ "ನಾಸ್ತಿ"— ಯಾದಿ ಮುಗಿಯಲಿಲ್ಲ. ಕನ್ನಡದ ಸಾಮಾನ್ಯ ಓದುಗನಿಗೆ ಇನ್ನೂ ಅನೇಕ ಆವಶ್ಯಕತೆಗಳು ಕ್ಷಣಕ್ಷಣಕ್ಕೆ ಜೀಕೆಸಿಸುತ್ತವೆ.

ಇವುಗಳಲ್ಲಿ ಸಾಹಿತ್ಯವಿಮರ್ಶೆಯನ್ನೇ ತೆಗೆದುಕೊಳ್ಳೋಣ. ವಿಮರ್ಶೆಯ ಬಗ್ಗೆ ಶುದ್ಧ ಮತ್ತು ಶಾಸ್ತ್ರೀಯವಾದ ಅನೇಕ ಗ್ರಂಥಗಳು ಬೇಕು. ನಾಸ್ತಿ, ಬೇಂದ್ರೆ, ರಂಗಣ್ಣ, ಗೋಕಾಕ್— ಇವರ ಗ್ರಂಥಗಳ ಜೊತೆಗೆ ವಿಮರ್ಶೆಯ ಸ್ವರೂಪವನ್ನು ನಿರ್ದುಷ್ಟವಾಗಿ ಹೇಳುವ ಇನ್ನೂ ಹೆಚ್ಚು ಗ್ರಂಥಗಳು ಬೇಕು.

ಅಲ್ಲದೆ ಬೇರೆ ಬೇರೆ ಕವಿಗಳ ಬಗ್ಗೆಯೂ ಒಳ್ಳೆಯ ವಿಮರ್ಶಾ ಗ್ರಂಥಗಳ ಆವಶ್ಯಕತೆ ಇನ್ನೂ ತುಂಬಾ ಇದೆ. ಪಂಪ, ನಾಗಚಂದ್ರ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣರಿಗೆ ಪೊರೆತ ವಿಮರ್ಶೆ-ಪ್ರಶಸ್ತಿಗಳ ಭಾಗ್ಯ— ಇನ್ನೂ ಅನೇಕ ಕವಿಗಳಿಗೆ ಪೊರೆಯಬೇಕು.

ಆ ರೀತಿ ಇಂಗ್ಲಿಷಿನಲ್ಲಿಯ "Men of Letters" ಮಾಲಿಕೆಯಂತೆ, ಪ್ರಮುಖರಾದ ಕನ್ನಡ ಕವಿಗಳ ಮಾಲಿಕೆಯೂ ಪ್ರಾರಂಭವಾಗಬೇಕು. ಪ್ರತಿಯೊಂದು ಗ್ರಂಥದಲ್ಲಿಯೂ ಆ ಆ ಕವಿಗಳ ಕಾಲ; ಉಪಲಬ್ಧ ಜೀವನವೃತ್ತಾಂತ; ಗ್ರಂಥಗಳು; ಅವುಗಳ ಗುಣವಿಮರ್ಶೆ; ಅವುಗಳ ಸ್ಥಾನ; ಮತ್ತು ಇತರ ಕವಿಗಳ ಮೇಲಾದ ಆ ಕವಿಯ ಪ್ರಭಾವ ಈ ಎಲ್ಲ ಅಂಶಗಳ ವಿವರಣೆ ಬೇಕು.

ಅದರಂತೆಯೇ "Age Series" ಮಾದರಿಯಲ್ಲಿ "ಯುಗ ಸಾಹಿತ್ಯ ಮಾಲಿಕೆ"ಯೂ ಅವಶ್ಯ. ಸರ್ವಗ್ರಾಹಿಯಾದ

"Encycloplaedia Britanica" ಮತ್ತು ಆಧುನಿಕ ಗ್ರಂಥಕರ್ತರ ಬಗ್ಗೆ ಹೇಳುವ "Oxford companion to English Literature" ನಂತಹ ಗ್ರಂಥಗಳೂ ತುಂಬಾ ಉಪಕಾರಿಯಾಗಿವೆ.

ಹೀಗೆಯೇ ಕನ್ನಡದ 'ನಾಸ್ತಿ' 'ದದಾತಿ'ಗಳು ಮುಗಿಯುವಂತಿಲ್ಲ. ಆಗಿದಷ್ಟು ಹೊರಡುವ ಜೇತಾಳದ ಹೊಟ್ಟೆಯಂತೆ ಕನ್ನಡದ ಅಭಾವ ಹೊರಡುತ್ತಲೇ ಇದೆ. ಈ ಪುಪಂಚಕ್ಕೇ ಕೆಳಗಿನ ಕೊರತೆಗಳನ್ನೂ ಸೇರಿಸಬಹುದು:—

(೧) ಶಾಸ್ತ್ರೀಯವಾದ ಕನ್ನಡ ಇತಿಹಾಸ ಗ್ರಂಥಗಳ ಅಭಾವ; ಈ ವಿಭಾಗದಲ್ಲಿ ಇದ್ದ ಬಹುಮಟ್ಟಿಗಿನ ಗ್ರಂಥಗಳು ಇಂಗ್ಲಿಷಿನಲ್ಲಿಯೇ ಇವೆ. ಇವಾದರೂ ನಿಧಾನ ಕನ್ನಡಕ್ಕೆ ಬರಬೇಕು.

(೨) ಕನ್ನಡ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕಠಿನ ಶಬ್ದಗಳ – ಸರಿಯಾದ ಅರ್ಥ—ವ್ಯುತ್ಪತ್ತಿ, ಪ್ರಯೋಗ-ಮತ್ತು ಸಂದರ್ಭಗಳನ್ನು ಹೇಳುವ ಒಳ್ಳೆಯ ಕನ್ನಡ–ಕನ್ನಡ ಕೋಶ.

(೩) ಭಾಷಾಶಾಸ್ತ್ರದ ಬಗ್ಗೆ ಗ್ರಂಥಗಳು: "ಕೈ ಪಿ ಡಿ" "ವ್ಯಾಕರಣೋಪನ್ಯಾಸ ಮಂಜರಿ" ಮತ್ತು ಕಂ. ಬಾ. ಆವರ ಗ್ರಂಥಗಳನ್ನುಳಿದರೆ ಕನ್ನಡ ಭಾಷಾಶಾಸ್ತ್ರವೆಲ್ಲ ಇಂಗ್ಲಿಷ್ ಮೂಲಕವಾಗಿಯೇ ಅಭ್ಯಸಿಸಲ್ಪಡಬೇಕಾದುದು ವಿಷಾದದ ಸಂಗತಿ. ಈ ವಿಷಯದಲ್ಲಿ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಗೋಳನ್ನಂತೂ ದೇವರೇ ಬಲ್ಲ! ಕನ್ನಡ ಭಾಷಾಶಾಸ್ತ್ರವನ್ನು ಅಭ್ಯಾಸ ಮಾಡಬೇಕಾದ ಈ ವಿದ್ಯಾರ್ಥಿಗಳು ರಾಮಕೃಷ್ಣಯ್ಯ, ಕಾಲ್ಡ್ವೆಲ್, ನರಸಿಂಹಾಚಾರ್ಯರ ಗ್ರಂಥಗಳ ಇಂಗ್ಲಿಷನ್ನು ಓದಿ—ಆ agglutinative, inflexional ಅರ್ಥಮಾಡಿಕೊಂಡು–ಆನಂತರ ಕನ್ನಡದಲ್ಲಿ ಭಾಷಾಂತರಿಸಿ ಪರೀಕ್ಷೆಗೆ ಕೈ ಎತ್ತಬೇಕು ಈ "ಲುಟ to wallow" ಪರಂಪರೆಯೂ ನಿಲ್ಲಬೇಕು. ಇದೆಲ್ಲ ಶುದ್ಧ ದ್ರಾವಿಡಪ್ರಾಣಾಯಾಮ! ಕನ್ನಡ ವಿದ್ಯಾರ್ಥಿಗಳು ಇನ್ನಾದರೂ ತಮ್ಮ "ಸೊಂಡೆಯಿಂದಲೇ" ನೀರು ಕುಡಿಯುವಂತಾಗಬೇಕು.... ಅದಕ್ಕಾಗಿ ಗ್ರಂಥಗಳೆಲ್ಲಿ? ಗ್ರಂಥಕರ್ತರೆಲ್ಲ?....

ಹಾಗಾದರೆ ಈ ಪ್ರಶ್ನಾರ್ಥಕ್ಕೆ ಪರಿಹಾರವಿದೆಯೆ? ವಿಚಾರಿಸಬೇಕು. ಇಂಥ ಕೆಲಸಗಳನ್ನು ಕೈಕೊಳ್ಳಲು— ಏಕಾಂಗ ವೀರರಾಗಿ ದುಡಿಯಲು— ಡಾ. ಜಾನ್ಸನ್‌ರಂಥವರಿಗೆ ಮಾತ್ರ ಸಾಧ್ಯ! ಅಂಥ ಪ್ರತಿಭಾ ಸೌಲಭ್ಯವಿಲ್ಲದಿದ್ದಲ್ಲಿ ಕನ್ನಡದ ಸಂಘ-ಸಂಸ್ಥೆಗಳು ಈ ಕೆಲಸವನ್ನು ಅಂಗೀಕರಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯವು ಕನ್ನಡಕ್ಕೆ ಮಾಡಿದ ಸೇವೆಯನ್ನು ದಷ್ಟು ಸಹ ಮಾಡಿರದ ಮುಂಬಯಿ ವಿಶ್ವವಿದ್ಯಾಲಯವಂಥ ಸಂಸ್ಥೆಗಳು ಮುಂದಾಗಿ ಪಾಠ ಹಾಕಿಕೊಡಬೇಕು. ಒಳ್ಳೆಯ ವಿದ್ವಾಂಸರ ಮಂಡಲಗಳನ್ನು ನಿಯಮಿಸಿ ನಿಧಾನ ತನ್ನು ಪಠ್ಯ ಪುಸ್ತಕಗಳಾದರೂ ಸಕಾಲಕ್ಕೆ ದೊರಕುವಂತೆ ಮಾಡಿಕೊಳ್ಳಬೇಕು. ಪ್ರತಿವರ್ಷಾಂತ್ಯದಲ್ಲಿ ವಿದ್ಯಾಲಯದಿಂದ ಒಂದಾದರೂ ಪುಸ್ತಕ ಹೊರಬೀಳುವಂತೆ ಜಾಗ್ರತೆವಹಿಸಬೇಕು.

ಸಾಹಿತ್ಯಪರಿಷತ್ತು-ವಿದ್ಯಾವರ್ಧಕ ಸಂಘಗಳಾದರೂ ಕೂಡ ನಿಶ್ಚಿತ ಸಮಿತಿಗಳನ್ನಿಟ್ಟುಕೊಂಡು ಕೆಲಸ ಸಾಗಿಸಬಹುದು. ಈ ಸಂಸ್ಥೆಗಳು ಈಗಾಗಲೇ ಕೈಕೊಂಡ ಕನ್ನಡಕೋಶ ಮತ್ತು ಇತಿಹಾಸಯೋಜನೆಗಳನ್ನು ಕನ್ನಡ ಜನತೆ ಆತುರವಾಗಿ ಎದುರು ನೋಡುತ್ತಲಿದೆ.

ಕರ್ನಾಟಕದ ರಾಜಮನೆತನಗಳು ಕೂಡ ಈ ಋಣದಿಂದ ನಿರ್ಲಿಪ್ತವಾಗುಳಿಯವು. ಮೈಸೂರು ಆಸ್ಥಾನವು ಹಾಕಿಕೊಟ್ಟ ಮಾದರಿಯು ಕರ್ನಾಟಕದ ಇತರ ಚಕ್ಕ ಪುಟ್ಟ ಸಂಸ್ಥಾನಗಳಿಗೂ ಮಾದರಿಯಾಗಬೇಕು. ಕನ್ನಡದ ನೆಲದ ಪುಣ್ಯವನ್ನು ಪಡೆದು, ಕನ್ನಡತಾಯ ಕೃಪೆಯಲ್ಲಿ ಪೋಷಿತರಾದ ಕನ್ನಡ ನಂಸ್ಥಾನಿಕರು ಈ ಸಾಂಸ್ಕೃತಿಕದಿವಿಜೆಯಲ್ಲಿ ತುಂಬಾ ಸೇವೆಯನ್ನು ಮಾಡುವಂತಿದೆ.

ಅಮೇರಿಕಾದಂತಹ ರಾಷ್ಟ್ರಗಳಲ್ಲಿ ನಗರಸಭೆಗಳು ಒಂದೊಂದು ಕಾಲೇಜನ್ನೇ ನಡೆಯಿಸಬಹುದಾದಲ್ಲಿ, ನಮ್ಮ ನಗರಸಭೆಗಳೂ ಈ ಸಾಂಸ್ಕೃತಿಕ ಜವಾಬ್ದಾರಿಕೆಯಲ್ಲಿ ಏಕೆ ಭಾಗವಹಿಸಬಾರದು? ಪಟ್ಟಣವೃದ್ಧಿ ನಗರಸಭೆಗಳೆಲ್ಲವೂ ಪ್ರಜೆಗಳ ಹಿತಕ್ಕಾಗಿ ಇಂತಹ Extension ಭಾಷಣಮಾಲೆಯನ್ನು ಏರ್ಪಡಿಸುವುದು ಕ್ರಮಬದ್ಧವಾಗಿದೆ.

ಹಾಗೆಯೇ ಕರ್ನಾಟಕದಲ್ಲಿಯ ಕಾಲೇಜುಗಳ ಕನ್ನಡ—ಸಂಘಗಳೂ ಈ ಕಾರ್ಯದಲ್ಲಿ ಸಹಾಯ ಮಾಡಬಲ್ಲವು.

ಹೀಗೆ ಒಟ್ಟಿನಿಂದ ಸಮಾಜ ಮೊದಲಾಗಿ ಮಾತ್ರ ಕನ್ನಡದ ವಿಚಾರ ಸಾಹಿತ್ಯ ಉಜ್ಜೀವನವಾಗಿ— ಏಕ್ಯಲವಾಗಿ— ಬೆಳೆಯಬಹುದಾಗಿದೆ. ಅಂದರೆನೇ ಬುದ್ಧಿ-ಭಾವನೆಗಳ ಹವಣು ಸರಿಯಾಗಬಹುದು.

ಕನ್ನಡಜನ ಮನಸ್ಸನ್ನು ಹಾಡಿಹಳಿಯಾವುದು ಜಾನಪದಸ್ವಾರ್ಥೆ?....

"ಪ್ರೀಯುತನೊಳ್ ಉದಾರತೆ ವಾಕ್-

ಪ್ರೀಯುತನೊಳ್ ಅಮತ್ಸರತ್ವಂ" ನೆಲೆಗೊಂಡರೆ, ಆ ಕಾಲವೂ ಈಗ್ಲೆ ಬಂದೀತು; ಬರಲಿ.

ಬಹು ವರ್ಷಗಳಿಂದ ಅನುಭವಪಟ್ಟ

ಕರ್ಕಶ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆ.

ಬಾಟ್ಲಿಗೆ ೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ಸಂಪರ್ಕಿಸಿ...

ಗಣೇಶ ರಾವುಜೆಂಡ್ರ ಕರ್ಕಶ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ಸ್ವಾತಂತ್ರ್ಯದೇವಿಗೆ:

★

ಶ್ರೀ. ಎಂ. ರಾಮಕೃಷ್ಣಭಟ್ಟ, ಉಡುಪಿ

ಭಾರತವ ಹೆಗ್ಗುರಿಯೆ— ಸ್ವಾತಂತ್ರ್ಯ ದೇವಿಯೇ,
ಒಂದಿನಿತು ದಯೆ ನಿನಗೆ ಬಾರದಾಯ್ತೆ ?
ಶತಮಾನ ಬಂದರಲಿ ಎನಿತು ನೆತ್ತರ ಕೊಂಡೆ
ರುಧಿರದಾಹವು ಇನ್ನು ತೀರದಾಯ್ತೆ ? ೧

ವೀರಸೋದರರು ಅಂದು ದಾಸ್ಯಶೃಂಖಲೆ ಕಡಿವ
ಯತ್ನದೊಳು ಛಿದಿಯಾದರೆನಿತು ಮಂದಿ ?
ಟಿಪ್ಪುವಿನ ವಿಸಿರಕ್ತ ಝಾನ್ಸಿಯರಸಿಯ ರಕ್ತ
ತಣಿಸದಿಹ ದಾಹಕೆನ್ನೆನಿತು ಮಂದಿ ? ೨

ಪಶುಗಳನು ಮಾಂಸಕೆಗೆ ಬಲಿಗೊಡುವ ತೆರದಲ್ಲಿ
ನರಮೇಧ ಒಂದಾಯ್ತು ಪಂಜಾಬಿನಲ್ಲಿ ;
ಹಸುಳೆ ಪೆಣ್ಣೆನ್ನದಲೆ ಪಡೆದಿದ್ದೆ ಆಹುತಿಯ
ಜಾಲಿಯನ್‌ವಾಲಾದ ನರಯಜ್ಞದಲ್ಲಿ ! ೩

ನಿನ್ನ ಕೃಪೆಯೊಂದಕ್ಕೆ ವರ್ಷ ಸೂವತ್ತರಲಿ
ಎನಿತು ಬಲಿಯನು ನಾಡು ಅರ್ಪಿಸಿತ್ತು !
ಅಷ್ಟೇಕೆ, ನಾಡಿನಲಿ ಚಿತ್ರಭಾನುವಿನಲ್ಲಿ
ಎಂಥ ರಕ್ತದ ಕೋಡಿ ಹರಿಯುತಿತ್ತು ! ೪

ಇತ್ತ ವಂಗದೊಳಂದು ಕ್ಷಾಮದೇವಿಯು ಬಂದು
ಕೊಂಡಿರುವ ಬಲಿಯನ್ನು ತಿಳಿದಿರುವೆಯಾ ?
ದಾಸ್ಯಬಂಧಿತ ನಾಡು ಹೆರವರಾಳ್ವಿಕೆಯಲ್ಲಿ
ಪಟ್ಟಿರುವ ಪಾಡನ್ನು ಅರಿತಿರುವೆಯಾ ? ೫

ದುರ್ಭಾಗ್ಯ ಭಾರತದ ನಗರಗಳು ಕೆಲವಲ್ಲಿ
ಮತ್ತೆ ಹೊಮ್ಮುತ್ತಲಿದೆ ನೆತ್ತರಿನ ಕೋಡಿ;
ನಿನ್ನುದಯ ಕಾಲದಲೆ ರಕ್ತಪಾತವು ಸಲದು
ದಯೆದೋರಿ ನಿಲಿಸಮ್ಮ ಕೆನ್ನೀರ ಕೋಡಿ! ೬

ಚೈತನ್ಯ, ಗುರುದೇವ, ಗಾಂಧಿ, ಬುದ್ಧರ ನಾಡು
ಇತ್ತ ನೀ ನೀಗಮ್ಮ ರುದ್ರರೂಪ—
ಸ್ವಾತಂತ್ರ್ಯ ತಾಯೆ ನೀ ತೋರಿ ತವ ಶಾಂತಮುಖ
ಕೃಪೆದೋರಿ ಹರಿಸಮ್ಮ ನಾಡ ತಾಪ. ೭

ಮರಳಿ ಮಲಗದಿರಿ!

★

ಶ್ರೀ. ಸಂಗಣ್ಣ ಮುದೇನೂರ, ಹರಪನಹಳ್ಳಿ

ಹೊಸ ಹರಯ ಹುಮ್ಮನದಿ ಸಿಂಗರಿಸಿ ಬಹುವಿಧದಿ
ತೋಷದಲಿ ಬರುತಿರುವ ಮದುವೆ-ಗಂಡಿನೊಲು
ಬರುತಿಹವು, ಬರುತಿಹವು, ನೋಡಲ್ಲಿ ನೋ ಸೋದರನೆ
ಮೊದಲಿನೊಲು ಸಂತಸದಿ ಮೆರೆವ ಸುದಿನಗಳು! ೧

ಉರುತರದಿ ಬಿಗಿದಿದ್ದ ಆಲುಗದೊಲು ಮಾಡಿದ್ದ
ಪರತಂತ್ರ ಜೀವಿಗಳು ಬರಿದು ಬಿದ್ದಿಹವು!
ಸುಲಿಗೆಯಾ ಕೂರಲಗಿನಿಂದಾದ ಘಾಯಗಳು,
ಹುಣ್ಣುಗಳು ಕಣಗಟ್ಟಿ ಮಾಯುತಿಹವು! ೨

ಶತಮಾನ ಕಾಲದಿಂ ದಾಸ್ಯವನು ಕಳೆಯಲ್ಕೆ
ಹಗಲಿರುಳು ಕಲಿತನದಿ ಕಾದಿದೆವು ನಾವು!
ಸ್ವಾತಂತ್ರ್ಯದೇವತೆಗೆ ಆತ್ಮಬಲಿ ಮಾಡುತಲಿ
ರುಧಿರಾಂಬುಪಾನವನು ನೀಡಿದೆವು ನಾವು! ೩

ಅಪಮಾನ, ಹಿಂಸೆಗಳ ಶಾಂತಿಯಲಿ ಸಹಿಸಿದೆವು !
ಹಸಿವು ತೃಷೆಗಳನು ತಾಳ್ಮೆಯಲಿ ತಾಳಿದೆವು!
ಆ ದುಡಿಮೆ ಫಲವಾಗಿ ಆ ತಪದ ವರವಾಗಿ
ಇಂದು ಈ ದಾಸ್ಯದಿಂ ಬಿಡುವ ಹೊಂದಿಹೆವು! ೪

ಇನ್ನೇನು! ಬರಗಾಲ-ದಾರಿದ್ರ್ಯಗಳು ಕಳೆದು
ಹೊನ್ನಬೆಳೆ ಹುಲುಸಾಗಿ ಮತ್ತೆ ಬೆಳೆಯುವುದು
ಹಸಿದಿರುವ ಒಡಲಿಂಗೆ ಬತ್ತಲೆಯ ಕಾಯಕ್ಕೆ
ತಪ್ಪದಲೆ ಅಶನ-ವಸನಗಳು ಜೊರೆಯುವುವು! ೫

ನಮ್ಮ ಮನೆ ನಮಗಾಗಿ, ನಮ್ಮ ಸಿರಿ ನಮಗಾಗಿ,
ಎಲ್ಲರಿಗು ಬಲವಾಗಿ, ಸುಖದ ನಿಧಿಯಾಗಿ,
ಅಧ್ಯಾತ್ಮದಮರ್ದಾಗಿ, ಸಂಸ್ಕೃತಿಯ ನೆಲೆಯಾಗಿ
ಬಾಳುವುದು ಭಾರತವು ಇಳೆಯ ಬೆಳಕಾಗಿ! ೬

ಇನ್ನೇನು! ಹಾಡೋಣ ಒಕ್ಕೊರಲ ದನಿಯಿಂದ
ಕೈಯೆತ್ತಿ ಸ್ವಾತಂತ್ರ್ಯ ಪರಗೀತೆಯನ್ನು!
ಇನ್ನೇನು! ಹಾಡೋಣ ನಮ್ಮ ಈ ಭಾರತವ
ಮೊದಲಿನೊಲು ವೈಭವದ ಸಿರಿಸಗ್ಗವನ್ನು! ೭

ಕೆಲ್ಸೇರ ಕಾಮಣ್ಣ

(ಒಂದು ಬಾಳ ಚಿತ್ರ)

ಶೀ. ಬಾಲೇ ಹೊಸೂರ ನಾರಾಯಣರಾಯರು, ಶಿರಹಟ್ಟಿ

★

ಕೆಲ್ಸೇರ ಕಾಮಣ್ಣನಿಗೆ ಗೊತ್ತಿರುವಷ್ಟು ಸಮಾಜ-ಶಾಸ್ತ್ರ-ಅರ್ಥಶಾಸ್ತ್ರಗಳು, ನಮ್ಮಲ್ಲಿಯ ಕಲಿತು ಪದವಿಗಳಿಸಿದ ಶಾಮಣ್ಣ-ರಾಮಣ್ಣರಿಗಿಲ್ಲ. ಬದುಕುವುದರ ಗುಟ್ಟನ್ನು ಕಲಿಸದಿರುವ ಬರಿಯೋದಿನಿಂದ ಸುರಿದು ಉಣ್ಣುವ ಸುಖವೆಂತಹದು? ಮನೆಯವರಿಗೆ ಮಾರಿ, ಹೆರವರಿಗೆ ಉಪಕಾರಿ!

★

ಅಂದೆಯೆ ನಾನು 'ಮೇಲಿಗೆ' ನನ್ನ ನಲ್ಲೆಯ ಊರಿಗೆ ತೆರಳಬೇಕಾಗಿದ್ದಿತು. ಮೋರೆಯ ಮೇಲೆ ಕೈಯಾಡಿಸಿ ನೋಡಿಕೊಂಡೆ. ಕೈಯೆಲ್ಲಾ ಕೊರೆದಂತಾಯಿತು, ಕನ್ನಡಿಯಲ್ಲಿ ನೋಡಿದಾಗಂತೂ, ನನ್ನ ನಲ್ಲೆಯು ಇದೇ ಸ್ಥಿತಿಯಲ್ಲಿ ನೋಡಿದರೆ ನನ್ನನ್ನು ಗುರುತಿಸುವಳೋ ಇಲ್ಲವೋ ಎನ್ನುವಷ್ಟು ಭಯವಾಯಿತು.

ಸರ್ರನೆ 'ಸಲೂನ್'ಗೆ ಹೋಗಿ ನೋಡಿದೆ. ಸೀಟು 'ಭರ್ತಿ' ಇದ್ದಿತು. 'ಇನ್ನೂ ಕನಿಷ್ಟ ಎರಡು ತಾಸಾದರೂ ಬೇಕು ರಾಯರ' ಎಂದ ಆ ಲಾರ್ಡ್!

'ಕೂದಲಂತೂ ಅತಿ ಬೆಳೆದಿದೆ. ನಲ್ಲೆಯನ್ನಂತೂ ಇಂದೇ ಕಾಣಬೇಕಾಗಿದೆ.... ಇನ್ನೇನು ಮಾಡಲಿ ದೇವಾ!' ಎಂದು ಆಲೋಚಿಸುತ್ತ ಬರುತ್ತಿರಲು, ಹೆಗಲಿಗೊಂದು 'ಠೇಂಕೀ' ಪೆಟ್ಟಿಗೆ ಹಾಕಿಕೊಂಡು, ಎದುರಿಗೇ ಬಂತು ಒಂದು ಆಸಾಮಿ. ಅದರಿಂದ ನನಗೆ ಅವನನ್ನು ಮಾತನಾಡಿಸಲಿಕ್ಕೇ ಸ್ವಲ್ಪ ನಾಚಿಕೆಯಾದಂತಾಯಿತು. ಆದರೂ ನಿರ್ವಾಹವಿಲ್ಲವೆಂದು ಹಿಂದೆಮುಂದೆ ನೋಡಿ ಅವನನ್ನೇ ಮನೆಗೆ ಕರೆದುಕೊಂಡು ಹೋದೆ. 'ಪಜಾಮತಿಗೆ' ಕುಳಿತುದೂ ಆಯಿತು.

'ಏನ್ ಮಾಡ್ಲಿರಿ?' ಆತ ಕೇಳಿದ.

'ಮತ್ತೇನ ಮಾಡತಾನಪಾ ಇಂವಾ ಹಳ್ಳಿಯ ಹೆಂಬ! ಕತ್ತಿ ಇದ್ದರ ಕತ್ರಿ ಇಲ್ಲ; ಮುತ್ತೊಂದು ಬಟ್ಟು ಮತ್ತೊಂದು ಒಳ್ಳೇ ಮುತ್ತೀನು' ಇಲ್ಲ!' ಎಂದು ಮನಸ್ಸಿನಲ್ಲೆಯೆ ಎಂದುಕೊಂಡು "ಏನ ಮಾಡತೀ" ಎಂದು ಅವನಿಗೆ ಮರುಸವಾಲು ಹಾಕಿದೆ.

"ನೀವೇನ ಹೇಳ್ತೀರಿ ಅದನ್ನ ಮಾಡತೀನ್ರಿ ಯಪ್ಪಾ!" ಎಂದನವ.

"ಕ್ರಾಪ್ ಕತ್ತರಸಾಕ ಬರತೈತೇನು?" ನಾನು ಕೇಳಿದೆ.

"ಕಲ್ತೀನ್ರಿ!"

"ಅಗದೀ ಛಿಲೋ ಮಾಡತೀಯಾ?"

"ಯಪ್ಪಾ, ನಿಮ್ಮ ಮನಸ್ಸಿಗೆ ಬರೋಹಂಗ ಆಗದಿದ್ದರ, ನಾ ಇವತ್ತಿನಿಂದ ಧಂದೇನs ಮಾಡಾಕಿಲ್ಲರಿ ಮತ್ತ!" ಎಂದು ಭೀಷ್ಮ-ಪ್ರತಿಜ್ಞೆಯನ್ನೇ ಮಾಡಿದನಾತ.

"ಆಗಲಿ ನೋಡೋಣ" ಎಂದು ನಾನೂ ತಯಾರಾಗಿ ಪದ್ಮಾಸನ ಹಾಕಿ ಕುಳಿತು ಬಿಟ್ಟೆ. ಆ ಬಳಿಕ ನಾನಾಗಿಯೇ ಮಾತಿಗೆ ಮೊದಲು ಮಾಡಿದೆ: "ನೀನು ಇದs ಊರಾಂವ ಏನು?"

"ಹೌದರೀ ಯಪ್ಪಾ, ಇಲ್ಲಿಯವನs! ಈಗ ಕೆಲ್ಸ ಮಾಡಾಕ ಹತ್ತಿ ಆಗಲೇ ಇಪ್ಪತ್ತು ವರಸಾದೂರಿ! ಇಲ್ಲೇ ಅರೇರೋಣೇ ಅಳ್ಳೀಕಟ್ಟಿ ಹಂತ್ಯಾಕ ನಮ್ಮ ಮನೀ ಐತಿರಿ!"

"ಹೀಂಗೇನು, ನಿನಗೇನು ಅಂತಾರ?"

"ಕೆಲ್ಸೇರ ಕಾಮಣ್ಣ ಅಂತಾರ್ರಿ!"

ನನಗೆ ನಗೆ ತಡೆಯದಾಯಿತು. ಆದರೂ ಅದನ್ನು ನುಂಗಿ ಮತ್ತೆ "ಇಪ್ಪತ್ತು ವರ್ಷಾದ್ವ?" ಎಂದು ಆಶ್ಚರ್ಯದಿಂದ ಕೇಳಿದೆ.

"ಅದಕ್ಕೂ ಹೆಚ್ಚಂದರೂ ಅಡ್ಡೀ ಇಲ್ಲರಿ; ನಾ ಕೆಲ್ಸ ಸುರು ಮಾಡಿದಾಗ ಇನ್ನೂ ಈ ಪರದೇಶೀ ಸಾಮಾನು ಬಂದಿದ್ದಿಲ್ಲ ನೋಡ್ರಿ. ಆ ದೊಂ ದು ದೊಡ್ಡ ಕತೀನ ಐತಿ ಬಿಡ್ರಿಯಪ್ಪಾ; ತಗೊಂಡು ಏನ ಮಾಡತೀರಿ!" ಎಂದು ನಿಟ್ಟುಸಿರುಬಿಟ್ಟು ನೀರು ಹೆಚ್ಚಲಾರಂಭಿಸಿದ. ಆತನ ಕಥೆಯನ್ನು ಕೇಳಬೇಕಂಬ ಆಶೆಯಾಗಿ "ಅದೇನಪಾ ಆ ಕಥೀ?" ಎಂದೆ.

"ಅದಂದಾ?ಯ್? ಅದು ನನ್ದರೀ. ಬಾಳ ದೊಡ್ಡದಾಕ್ಕೈತಿರಿ! ಹಾಂಗs 'ಕಷ್ಟಾ' ಮಾಡಿಕೋತ, ಸ್ವಲ್ಪದರಾಗs ಹೇಳ ಮುಗಿಸಿ ಬಿಡತೀನ್ರಿ. ಈಗs.... ಎಡ್ಡೂರಸಾತು ನೋಡ್ರಿ; ಕೈ ಬಾಳಽ ಕಟ್ಟಾಗೈತಿ. ಅದs ಹೊಸತಾಗಿ ಧಂದೇ ಸುರುಮಾಡಿದಾ?ಂತೂ ಏನ ಹೇಳಲ್ರಿ— ಒಳೇ ದೊಡ್ಡ ನಸಕೆನಾಗs ಎದ್ದು ಎಡ್ಡೂಟ್ಟ ಹೊಡೆದು ಹೊಂಟನಂದ್ರು ಹಾರೂರೋಣ, ಮ್ಯಾಗೇರಿ, ಎಲ್ಲಾ ಓಣೀ ಸುತ್ಹಾಕಿ, ಕಚೇರೀ ಒಳಗ ಬಂದಬಿಡೋದಕ್ಕs ಅಂದರ.... ಕೈತುಂಬ ರೊಕ್ಕಾ ಮಾಡಿಕೊಂಡs ತಿರಗತಿದ್ದೆ. ಸುಳ್ಳಹೇಳ ಬಾರದು ರಾಯರs, ಆದರೊಳಗ ಬ್ಯಾರೆ ಅದs ಹೊಸಬಾಗಿ ನಮ್ಮಪ್ಪನ ಕೈಯಾಗ ಕಲ್ತಿದ್ನಿ; ಒಳೇ 'ಮಜಬೂತ' ಕೆಲ್ಸಾ ಮಾಡಾಂವ ಮತ್ತ. ಎಲ್ಲಾದೂ ನನ್ನs ಕರ್ಯೋರ್ರಿ! ನಂಮೊಂದ ಗುಣಾ ಅಂದರ ನನಗ ರೊಕ್ಕಾಪಾಸೇ ಏಟೇಟೂ ಇಲ್ಲ ನೋಡ್ರಿ. ನಿಮ್ಮಂತಾ ನಾಕು ಮಂದಿನ್ನ ಹಚ್ಚಿಗೊಂಡಿದ್ದರ ರೊಕ್ಕ ಏಸ ಬೇಕರೀ? ಒಜವರ ಓಣ್ಯಾಗಂತೂ ಮತ್ತೊಬ್ಬ ಕೆಲ್ಸೇರಂವ ಕಾಲ್ಹಾಕಾಂಗಿಲ್ಲ ಬಿಡ್ರಿ. 'ಬಗರೀ ಜಂಡಿಕಿ' 'ಸಂಜಾಪು' ಮಾಡಾಕ ಮೇಲಗೈರಿ ನಂದು. ಆಗೇನು ಅಗಿನ್ಹಾಂರ 'ಕರಾವ ಗಿರಾಪ್ಪೇ? ಬರೇ 'ಬೊಳಸೋದು' ನೋಡ್ರಿ."

"ಅದರೊಳಗೇನಯ್ತೊ?" ಅಂತ ನಾನು ಅನ್ನುವುದರೊಳಗೇ ಅವನೇ ಮತ್ತೆ ಪ್ರಾರಂಭಿಸಿದ:

"ಹೇಂಗಂದ್ರೇನ್ರೀಯಪ್ಪಾ! ಎಲ್ಲಾದ್ರಾಗೂ 'ಶ್ಯಾಣೇತನಾ' ಐತಿರಿ. ಅದು ಕೆಲ್ಸನು ನನ್ಹಂಗ ಈಗ ಯಾಂವ ಮಾಡತಾನ ಮಾಡಸ್ನರಿ ನೋಡೋಣ! ಹೆಂಗು ಅಂದೇನ್ರಿ. ಅದೂ ಬಲು 'ತರಾಸ್ಯೆತೇಳ್ರಿ. ಈಟ ವರಸ ಮಾಡಿ ಮಾಡಿ ಕೈಕೂತಾ ಪೊಗ್ಯೆತಿ ನೋಡ್ರಿ! ಈಗ ಬೇಕಾರ ಕಣ್ಮುಚ್ಚಿ ಮಾಡ್ತಿನಿ ನೋಡ್ರಿ, ಅಂಧಂಗ ನೆಪ್ಪಾದ ಕೈಲೆ ಹೇಳೇಬಿಡ್ರೀನಿ. ಇದೇನು ನಾ ಈಗ ಸುತ್ತೀನಿ ನೋಡ್ರಿ; ಇದನ್ನ ಮುದ್ದಾಂ ನನ್ನ ಸಲುವಾಗಿನು ಮೂಲೀನುನಿ ಧನವಂತಪ್ಪನವರು ಗದಿಗಿನಿಂದ ತರಿಸಿ ಕೊಟ್ಟದು ನೋಡ್ರಿ" ಎಂದು ನಕ್ಕ.

"ಯಾತಕ್ಕಾಗಿ?" ನಾ ಕೇಳ್ದೆ.

"ಯಾತಕಂತೀರಾ? ಒಮ್ಮೆ ಅವರ ಕಷ್ಟಕ್ಕೆ ಹೋಗಿದ್ನಿರೇ; ಕಷ್ಟಾ ಮಾಡಮಾಡತಕ ಧನೇರ್ಗೆ ನಿದ್ದೇ ಹತ್ತಿಹೋತರಿ. ಇನ್ನೂ ಅರ್ಧಾ ಕಷ್ಟ ಸುದ್ದಾ ಆಗಿದ್ದಿಲ್ಲರಿ. ನಾ ಏನ ಹೇಳ್ಬಿ ಅದರ 'ಪಜೂತೀ'ನ! ಇಲ್ಲಿ ಅಂದವನ, ಅವರು ಕಣ್ಣ ತಗೋದರೊಳಗಸ ಹಂಗು ಒಳೇ ಒಳೇ ನಾಜೂಕ ಕಲ್ಸಾ ನೂಡಿ ಮುಸ್ಸೇ ಬಿಟ್ಟದ್ದೆ. ಧನೇರಿಗನಕಾ ಬಾರೀ ಆಶ್ಚರ್ಯಾತರಿ. ಅವರದನ್ನ ಎಲ್ಲಾರಿದರಿಗೂ ಹೇಳಿದ್ರು ನೋಡ್ರಿ ಮರದಿನಾನಸ ಈ ರುಮಾಲಾ ತರಿಸಿ ಕೊಟ್ಟರ್ರೀಯಪ್ಪಾ! ಈಗಿನನೇನ ಮಾಡ್ಯಾಪರೀ?" ಎಂದು. ಸ್ವಲ್ಪ ಕತ್ತಿ-ಯನ್ನು ಕಾಲಿಗೆ ತಿಕ್ಕಿ ತಿರುಗಿ ಕೂಡಲಿಕ್ಕೆ ಹೇಳದ. "ಆತೇನು?" ಎಂದು ನಾನು ಕೇಳದೆ.

"ಇಲ್ಲಿಗೆ ಅರ್ಧಾ ಆತರಿ, ಮುಂದ ಯಾವಾಗ 'ಬಿಲೇಡು' ಬಂದುವು ನೋಡ್ರಿ! ಹಾಂಗು ಒಂದೊಂದು ಗಿರಾಕಿ ಬಿಡಾಕ ಹತ್ತಿದ್ದುರೀ. ಮತ್ತ ಆಗು ಕರಾಪೂ ಸುರು ಆತರಿ! ಎಲ್ಲಾರೂ—ಆಚಾರೂ ಸುದ್ದಾ—ಕರಾಪಿಗೇ ಗಂಟು ಬಿದ್ರು. ನನ್ನ ಕೂದ್ಲು ಬೆಳ್ಳಗಾಗಾಕ ಬಂದಿದ್ದು; ನನಗರ ಕರಾಪು ಬರತಿದ್ದಿಲ್ಲಾ. ಆದರೂ ಕಲ್ಯಾಕ ಹತ್ತಿದೆ. ಯಪಾ; ಆಗಿನಿಂದನು ನೋಡ್ರಿ, ಎಲ್ಲಾರೂ ಹಜಾಮರಾಗಾಕ ಹತ್ತಿದ್ದು. ನಾನೂ ಸುಮ್ಮನು ಕೂಡಲಿಲ್ಲರಿ; ಹಾಂಯ್ದಿಗ ಸಣ್ಣಾಗಿ ಕರಾಪು ಕತ್ತರನಾಕ ಹತ್ತಿ....ಅದೇನರೀ ಅಂತಾ ಒಳೇ ಬಿಗೀ ಆಲ್ಲರಿ... ಚಿಮಟಿಗೀ ಕೆಲ್ಸ ಅದು ನನ್ನ ಕೈಗಾಡತೈತ್ರಿ. ನರಗುಂದ ಬಾಬಾಸಾಹೇಬರ ಹಂತ್ಯಾಕೆದ್ದ ಕೆಲ್ಸೀರಂವಾ ಬರೇ ಚಿಮಟೀಗೀ ಕೆಲ್ಸಾನು ಮಾಡಾವಂತ ನೋಡ್ರಿ. ಅದು ಬಾಳ ತೆಗವ್ರರಿ! ಅಂತಂತಾ ಯಿದ್ಯಾ (ನಿದ್ಯೆ) ಎಲ್ಲಾ ಎಲ್ಲಿ ಹಳ್ಳಾಕೂಡಿ ಹೋದ್ವೋ ಎನೋ. ನನ್ನ ಕೆಲ್ಸಾ ನೋಡಿ, ನನ್ನ ಗಿರಾಕಿ ನೋಡಿ ಧನೇರು 'ಎಲೇ ಕಾವ್ಯಾ, ದೇವ್ರರು ನಿನಗ ನಾಕ ಕೈ ಯಾಕ ಕೊಟ್ಟರಲಿಕ್ಕಿಲ್ಲಲೇ?' ಅಂತ ಅಂದದ್ದು ನನಗ ಇನ್ನೂ ಧ್ಯಾಸದಾಗ ಐತಿರಿ! ಅಂತಾದು ಅದು ಧನೇರ ಮುಕ್ಕಳು ಈಗ ಗದಿಗ್ಗೆ ಹೋಗಿ 'ಕರಾವು' ಕತ್ತರಿಸಿಕೊಂಡು ಬರತಾರ್ರಿ. ಇವೇನು ಜೆಲೋ ಏನ್ರಿ? ದೊಕ್ಕ ಹಾಳು. ಅದೂ ಹೋಗ್ಲೆಪಾ ಅಂದ್ರ ಹೊತ್ತಿಗೆ ಆಗವರ್ಯಾರ್ರಿ? ಇರ್ಲೀ ಅಂತ ನಾನೂ ಸುಮ್ಮನಕ ಬಿಟ್ಟೀನ್ರಿ. ಕರಾಪಿಗೆ ಒಂದು ಹೋಗತಾರ.... ಹೋಗ್ಲಿ; ಅದು ನನಗಿನ್ನೂ ಬರೂದಿಲ್ಲಾ. ಆದರ 'ಮಕಷ್ಟ'ಕ್ಕರ ಯಾಕ ಕರೀಬಾರದ್ರೀ ನನ್ನಕ? ಆ ಸುಡಗಾಡ 'ಬಿಲೇಡ್ಲೆ' ಮಾಡಿಕೋತಾರ. ಅವೂ ಈಗ ದಿಡೀ ದುಪ್ಪಟ್ಟಾಗ್ಯಾವಂತ! ಹೋಗ್ಲಿ, ಕರದರಕ ಕರೀಲಿ. ಬಿಟ್ಟರ ಬಿಡ್ಲಿ; ನನಗೂ ದಿನಾ ಒಬ್ಬರು ಇಬ್ಬರು ನಿಮ್ಮಂತಾ ಪುಣ್ಣೆವಂತರು ಸಿಕ್ಕಕ ಸಿಗತಾರೆ. ಆಗಕ ಅವರ ಮುಂದ ನನ್ನ'ಯಿದ್ಯಾ' ತೋರಿಸೇ ಬಿಡತೀನ್ರೀ ಆದರೂ ಒಂದು ಮಾತು ಕರೇವ್ರಿ: ನಾವು ನಮ್ಮವರಂತ ಹಚ್ಚಿಗೊಂಡು, ಹೊತ್ತಿಲ್ಲದ ಯಾಳ್ಯಾಯಿಲ್ಲದ ಮಾಡಾಕ ಹೋದ್ರೂ, ನಮ್ಮ ತಲೀಮ್ಯಾಗ ಮೆಣಸ ಅರೀತಾರರಿ! ಆತು ಅವರದರ ಏನ ತಪ್ಪರೀ! ಇದೆಲ್ಲಾ ಆಗಾಕ ಆ 'ಬಿಲೇಡು,' ಕರಾಪಕ ಮೂಲಕಾರಣ ನೋಡ್ರಿ. ಆವು ಬಂದು, ನಮ್ಮ ಹಳ್ಳೀ ಬಡಮಕ್ಕಳ ಹೊಟ್ಟೇಮ್ಯಾಗ ಕಾಲುಕೊಟ್ಟು. ನಂದೊಬ್ಬಾಂವಂದಕ ಯಾಕರಿ ಅವು ಬಂದಾಗಿನಿಂದ ಸಾಣೇ ಹೀಡೆವರು ಕಾಣವಲ್ಲರು; ದೇಸೀ ಕತ್ತೀ ಮಾಡವರ ಬಾಯಿ ಬಂದಾವ್ವು. ಈ ಸುಟ್ಟ ಇಂಗ್ರೆಜೀ ಮೋತೀ ಬಿಲೇಡು ಕೊಂದ್ಲು ನೋಡ್ರಿ ಎಲ್ಲಾರ್ನೂ. ಆ ಕರಾಪನ್ಯಾಗ ಅರ ಏನ್ಯೆತರೀ; ಅದನ್ನೂ ಈಗ ಕಲ್ತು ಎಲ್ಲಾರ ಮಾರೀಮ್ಯಾಗ ಹೊಡ್ಯೊಡಂಗ ಮಾಡ್ತೀನಿ ನೋಡ್ರಿ. ಆದರೂ ನನಗಿದೇನು ಮನಸ್ಸಿಗೆ ಬಂದಿಲ್ನೋಡ್ರಿ! ದೊಡ್ಡ ದೊಡ್ಡ ಮನಸ್ಯಾರೆಲ್ಲಾ 'ಈ ಪರದೇಶೀ ಸಾಮಾನಕ್ಕ ಮುಳ್ಳಾಗಬ್ಯಾಡ್ರಿ' ಅಂತ ಹೇಳತಾರ; ಆದರೂ ನಮ್ಮ ಮಂದಿ ಕೇಳೋಹಂಗಿಲ್ಲರಿ! ಹೋಗ್ಲಿ ಬಿಡ್ರಿ, ಅವರೊಂದು ಜೆಂದಕಂಡರಾತು....ನಮ್ಮಂತವರು ಸತ್ತರೂ ಆಟಕ ಇದ್ದರೂ ಆಟಕ" ಎನ್ನುವ ಹೊತ್ತಿಗೆ ಕಾವಣ್ಣನ ಕಣ್ಣಲ್ಲಿ ನೀರು ತುಂಬಿದುವು. ಅಂತಹದರಲ್ಲೆಯೆ "ನೋಡಕೊಳ್ಳರೀ ಯಪ್ಪಾ ಕನಡೀನಸ" ಎಂದು ನನ್ನ ಕೈಯಲ್ಲಿ ಕನ್ನಡಿ ಕೊಟ್ಟು, ನನ್ನ ಕಡೆಗೇ ನೋಡುತ್ತ ಕುಳಿತಿದ್ದ. ನಾನೂ ಕನ್ನಡಿಯಲ್ಲಿ ನೋಡಿ ಕೊಂಡು, ನೊಂದ ಮನದವನಾಗಿ ಅವನೆಡೆಗೆ ತಿರುಗಿದೆ.

ವಿಶ್ವಸಾಹಿತ್ಯಮಾಲೆ ಕುಸುಮ ೧.

ಎಚ್ಚತ್ತ ಆಗ್ನೇಯ ಏಶಿಯ

★

ಇಂಡೋನೇಶಿಯಾ—ಇಂಡೋಚೀನಗಳ ಕ್ರಾಂತಿ; ಬರ್ಮಾ, ಮಲಯಾ, ಸಯಾಮ್ ಸ್ವಾತಂತ್ರ್ಯ ಹೋರಾಟ.
ನಕ್ಷೆಗಳು ಸಹಿತ.

ಲೇಖಕರು: — ಶ್ರೀ. ಎಂ. ಹರಿದಾಸರಾವ್. ಬೆಲೆ ೧-೮-೦

ಎಲ್ಲ ಕಡೆಗಳಲ್ಲಿ ದೊರೆಯುತ್ತದೆ. ಇಲ್ಲದಿದ್ದರೆ 'ರಾವ್ ಬ್ರದರ್ಸ್, ಗದಗ' ಅವರಿಗೆ ಬರೆಯಿರಿ.

ಕಲೆ-ಕಸುಬು

ಲೇ. ಹೆಗಡೆ ಬಂಧುಗಳು, ಕುಮಟಾ

★

ಕಲೆಯನ್ನು ಹೊಟ್ಟೆಪಾಡಿಗಾಗಿ ಬಳಸುತ್ತಿದ್ದರೆ ಅದು ಆ ಕಲಾವಿದನ ಕಸುಬು ಎನಿಸಿಕೊಳ್ಳುತ್ತದೆ; ಹೊಟ್ಟೆಯ ಚಿಂತೆ ತಪ್ಪಿದ ಮರುಕ್ಷಣದಲ್ಲಿಯೆ ಕಸುಬು ಕಲೆಯಾಗಿ ಮಾರ್ಪಡುತ್ತದೆ. ಕಸುಬು ಎನಿಸಿಕೊಳ್ಳುತ್ತಿರುವಾಗ ಕಲೆಯ ವಿಕಾಸವಾಗಲಾರದು.

★

ಕುಂಬಾರನೊಬ್ಬನು ದಿನದಿನವೂ ತಿಗರಿಯಮೇಲೆ ಹಸಿಯ ಮಣ್ಣಮುದ್ದೆಯನ್ನಿಟ್ಟು ತಿರ್ರನೆ ತಿರುಗಿಸಿ ಪಾತ್ರೆಗಳನ್ನು ಸಿದ್ಧಗೊಳಿಸುತ್ತಾನೆ. ಅವನ ಅಪ್ಪ-ಅಜ್ಜಂದಿರು ಅದೇ ತಿಗರಿಯ ಮೇಲೆ, ಅದೇರೀತಿಯಿಂದ ಪಾತ್ರೆಗಳನ್ನು ಮಾಡುತ್ತಿದ್ದರು. ಅವರು ಸಾಗುತ್ತಿದ್ದ ದಾರಿಯಲ್ಲಿ ಒಂದು ಹೆಜ್ಜೆಸಹ ಮುಂದೆ ಹೋಗಿಲ್ಲ; ಆಚೆ ಈಚೆ ಸರಿದಿಲ್ಲ. ಅದನ್ನು ಅಲಂಕಾರವಾಗಿ ಕಾಣುವಂತೆ ಮಾಡಬಲ್ಲ... ಅದರಂತೆಯೆ ಅದಕ್ಕೇ ಮುಲಾಮು ತೆಗೆದು ಅದರ ಮೇಲೆ ಬಣ್ಣಬಣ್ಣದಿಂದ ಚೆಂದವಾದ ಚಿತ್ರಬರೆದು ಅವನು 'ಚಿನ್ನೀ ಮಣ್ಣಿನ' ಪಾತ್ರೆಗಳನ್ನು ಮೀರಿಸಬಹುದು. ಅವೆಲ್ಲ ಅವನ ಕೃತಿಗಳದೇ ಮುನ್ನಡೆ ಅಷ್ಟೆ? ಆದರೂ ಅವನನ್ನು ಅವನು ಮಾಡಲಾರ. ಅವನಲ್ಲಿ ಹಾಗೆ ಮಾಡಲು ಬುದ್ಧಿಯಿಲ್ಲವೆಂದಲ್ಲ, ಮಾಡಬೇಕೆಂದು ಎನಿಸುವುದಿಲ್ಲವೆಂದಲ್ಲ; ಆದರೆ ಅದಕ್ಕೆ ಕೈ ನಿಲುಕದು. ಈಗ ಸಿದ್ಧವಾಗುವ ಒಡವೆಯು ಮತ್ತಿಪ್ಪತ್ತುಬೇಗ ಖರ್ಚಾಗಿ, ಮಧ್ಯಾಹ್ನದ ಗಂಜಿ ಸಿಕ್ಕಿದರೆ ಅವನಿಗೆ ಹೆಚ್ಚು ಸಮಾಧಾನ. ಅಷ್ಟರಲ್ಲೇ ಅವನಿಗೆ ತೃಪ್ತಿ. ತನ್ನ ಕಸುಬಿನಿಂದ ಇದ್ದ ನಾಲ್ಕುದಿನ ಹೇಗಾದರೂ ಮರ್ಯಾದೆ ಮುಚ್ಚಿಕೊಂಡು ಬಾಳಿದರೆ ಅವನು ಗೆದ್ದಹಾಗೆ. ಅವನಲ್ಲಿಯ ಅಜ್ಞಾನ, ಅಲ್ಪತೃಪ್ತಿಗಳು ಅವನನ್ನು ಮುನ್ನಡೆಯಲೀಯವು. ಅಂಧಶ್ರದ್ಧೆ ಅವುಗಳೀಡಾದರ ನುಥನದಿಂದ ಹುಟ್ಟಿದ ನಿಷ್ಠ. ಅದರ ಉಸಿರಿನಿಂದ ಅವನ ಬಾಳು ಕಮರಿಹೋಗಿದೆ.

ತಿರುಪೆಯ ದಾಸಯ್ಯ ಸುಶ್ರಾವ್ಯವಾಗಿ, ಮಧುರವಾಗಿ ಕೀರ್ತನೆಗಳನ್ನು ಹೇಳುತ್ತಾನೆ ಹಾಡುವುದರ ಚಿಂತೆಗಿಂತಲೂ ತನಗೆ ಸಿಕ್ಕುವ ತಿರುಪೆಯಮೇಲೆ ಕಣ್ಣು. ಅದರಿಂದ ಅವನು ಹಾಡುವುದು ಚೆನ್ನಾಗಿದ್ದರೂ, ಆ ಹಾಡಿಕೆಯನ್ನು ಕೇಳುವ ತಾಳ್ಮೆ ನಮಗಿರುವುದಿಲ್ಲ. ಹಾಗೆ ಕರಕರೆ ಕೊಡುವ ಅವನ ಕಸುಬು, ಅದೇ ಸಂಗೀತ ಕಚೇರಿಯಾದರೆ ೪-೬ ರೂಪಾಯಿ ಟಿಕೀಟುಕೊಟ್ಟು, ತಾಸುಗಟ್ಟಲೆ ಕುಳಿತು ಮೆಚ್ಚಿಬರುತ್ತೇವೆ ಸಂಗೀತಗಾರನಿಗೆ ಒಂದು ದಿನದ ದುಡಿತದಿಂದ ಸಿಕ್ಕುವ ಹಣ, ದಾಸಯ್ಯನಿಗೆ ಒಂದು ವರ್ಷದ ದುಡಿತದಿಂದ ಸಿಕ್ಕುವುದಿಲ್ಲ. ಅವನಿಗೂ ತನ್ನಲ್ಲಿಯ ಕಲೆಯನ್ನು ಬೆಳೆಯಿಸಿಕೊಳ್ಳಲು ಬಿಡುವಿಲ್ಲ. ಅವನ ಕಸುಬು ಹೊಟ್ಟೇಪಾಡಿಗಾಗಿ. ಇಂದು ದಾಟಿದರೆ ನಾಳೆಯದು ನಾಳೆ ಅವನಿಗೆ

ಕಸುಬು ಸಾಗಿಸುವಾಗ ಕಸುಬುದಾರನ ಶಕ್ತಿಯೆಲ್ಲ ಬರಿಯ ಅನ್ನದೇವರನ್ನೊಲಿಸುವುದರಲ್ಲಿಯೆ ಪೆಚ್ಚಾಗಿ ಹೋಗುತ್ತದೆ. ಆದರಿಂದ ಕಸುಬಿನಲ್ಲಿ ಕಲೆಯನ್ನು ಕೂಡಿಸುವುದು ಅವನಿಂದ ಸಾಧ್ಯವಾಗುವುದಿಲ್ಲ. ಅವನ ಮನಸ್ಸಿಗೆ ಶಾಂತಿದೊರಕಿದಾಗ ಕಲಾದೃಷ್ಟಿ ಅವನಲ್ಲಿ ಮೂಡುವುದು. ಅವನಿಗೀಗ ತೃಪ್ತಿಯಿಲ್ಲ. ಕಲೆ ತೃಪ್ತಿಯ ಮಗು. ಅತೃಪ್ತಮನಸ್ಸಿರುವಾಗ ಹುಟ್ಟಿದ ಕೃತಿ ಕಲಾಕೃತಿಯಾಗದು ಪ್ರತಿಯೊಬ್ಬನಲ್ಲಿಯೂ ಕಲಾಭಿರುಚಿ ಇದ್ದರೂ, ತಲೆ ಶಾಂತವಾಗಿದ್ದರೆ ಮಾತ್ರ ಅದು ಬೆಳೆದು ಕೃತಿಯಲ್ಲಿ ಬಂದೀತು. ಅದಕ್ಕೆ ಸರಿಯಾದ ಸಂಸ್ಕಾರ ಕೊಡುವುದಕ್ಕೆ ಅನುಕೂಲವಾದ ವಾತಾವರಣ ನಿರ್ಮಾಣವಾಗುವದು ಆಗ. ಆ ಶಾಂತಿ ದೊರಕುವುದಕ್ಕೆಹೊಟ್ಟೆಯ ಚಿಂತೆಯೊಂದು ತಪ್ಪಬೇಕು. ಅದನ್ನು ತಪ್ಪಿಸುವ ಹೊಣೆಯನ್ನು ಸಮಾಜ ಹೊರಬೇಕು.

ಕ್ಷೌರಿಕನು ಕೂದಲನ್ನು ಕತ್ತರಿಸುವಾಗ, ಬೇರೆ ಬೇರೆ ಮೋರೆಗಳಿಗೆ ತಕ್ಕಂತೆ ಬೇರೆ ಬೇರೆ ರೀತಿಯಾಗಿ ಕತ್ತರಿಸುತ್ತಾನೆ ಉದ್ದ ಮೋರೆಯಿದರೆ ಒಂದು ರೀತಿ, ಮೋರೆಯ ಎಲುವು ಎದ್ದಿದ್ದರೆ ಇನ್ನೊಂದು ರೀತಿ. ದುಂಡಗಿನ ತಲೆಯಿದ್ದರೆ ಮತ್ತೊಂದು ರೀತಿ; ಹೀಗೆ ಪ್ರತಿಯೊಬ್ಬನಿಗೂ ಚೆಂದಕಾಣುವಂತೆ ಕೂದಲನ್ನು ಕತ್ತರಿಸುವುದು ಅವನಲ್ಲಿಯ ವಿಶೇಷವಾದ ಕಲೆ. ಅವನು ಎಡಕ್ಕೆ ಕತ್ತರಿಸಿದ ರೀತಿಗೂ ಬಲಕ್ಕೆ ಕತ್ತರಿಸಿದ ರೀತಿಗೂ ಸರಿಬಂದಿಜೇ ಎಂದು ನೋಡುವಾಗ, ಶ್ರೇಷ್ಠನಾದ ಶಿಲ್ಪಿಯೊಬ್ಬನು ತಾನು ಕಟಿಯುತ್ತಿದ್ದ ಮೂರ್ತಿಯ ಅಂಗಾಂಗಗಳು ಪ್ರಮಾಣಬದ್ಧವಾಗಿವೆಯೆ?—ಎಂದು ನಿರೀಕ್ಷಿಸುವಾಗಿನ ದೃಷ್ಟಿಗಿಂತಲೂ ಯಾವ ಮಾತಿನಲ್ಲಿಯೂ ಕಡಿಮೆಯಿರುವದಿಲ್ಲ. ಆದರೆ ಅವನ ಕಲೆಗೆ ನಮ್ಮಲ್ಲಿ ಆದರವಿಲ್ಲ. 'ಆದು ಅವನ ಕಸುಬು' ಎಂದು ಬಿಡುತ್ತೇವೆ ಅವನಿಗೂ ತನ್ನಲ್ಲಿಯ ಶಕ್ತಿಗಾಗಿ ವಿಶೇಷವೆನಿಸುವುದಿಲ್ಲ ಹಳೆಯರಿಂದ ನಡೆದು ಬಂದ ಕಸುಬು ಅದು. ಅದನ್ನು ಸಾಗಿಸಿಕೊಂಡು ಹೋಗಬೇಕಾಗಿದೆಯೆಂದು ಹೋಗುವನು ಅವನು

ಕಲಾವಿದರ ಬಳಗದಲ್ಲಿ ಇಂಥವನೇ ಇರಬೇಕೆಂದು ಪ್ರಾಚೀನ ಭಾರತೀಯರು ನಿರ್ಧರಿಸಿರಲಿಲ್ಲ. ಬೆಳೆದ ಹತ್ತಿದುನ್ನು ಸೂಕ್ಷ್ಮವಾದ ಎಳೆಗಳಲ್ಲಿ ನೂತು, ವಿಧವಿಧದ ಬಣ್ಣಗಳಲ್ಲಿ ಅದ್ದಿ ನಯವಾದ ಬಟ್ಟೆಯನ್ನು ನಿರ್ಮಿಸುವ ನೇಕಾರ, ಬೇರೆ ಬೇರೆ ರೀತಿಯ ಪಾಪರಕ್ಷೆಗಳನ್ನು ಮಾಡುವ ಚಮಗಾರ, ತಗಡುಗಳನ್ನು ಬಗ್ಗಿಸಿ ಬಡಿದು ಆಕಾರಕೊಟ್ಟು ಸುಂದರವಾದ ಪಾತ್ರೆಗಳನ್ನು ಮಾಡುವ ತಾಂಬಟಿಗ, ಬೀಸಾಗಿ ಬೆಳೆದು ನಿಂತಿರುವ ಮರಗಳನ್ನು ಕತ್ತರಿಸಿ ಕೊರೆದು, ಮನೆಯನ್ನು ಕಟ್ಟಿಕೊಟ್ಟು ಸೆಪ್ಪನ್ದಿಸೊಡುವ ಬಡಿಗ ಬಿದ್ದಹಾಳಕೆಯನ್ನು ಕೂಡಿಸಿ ನೆಯ್ದು ಕೊಡೆಗಳನ್ನು ಮಾಡುವವ. ಎಲ್ಲರೂ ಕಲಾವಿದರೆ. ರೂಢಿಯಿಂದ ಬಹುಕಷ್ಟಸಾಧ್ಯವಾದ ಕಲೆಗಳನ್ನು ಪಳಗಿಸಿಕೊಂಡಿರುವ ಕಲಾವಿದರು. ಅವರು ಪ್ರಾಚೀನರ ದೃಷ್ಟಿಯಲ್ಲಿ ಅವರವರ ಅಭಿರುಚಿಗನುಸಾರವಾಗಿ ಒಂದೊಂದು

ದಾರಿಯಲ್ಲಿ ನಡೆಯು ತಮ್ಮ ಶ್ರಮದ ಫಲವನ್ನು ಎಲ್ಲರಿಗೂ ಹಂಚಿರುವವರು. ಜೀವನದ ಮುಖ್ಯ ಉದ್ದೇಶಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳ ಗಳಿಕೆಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತವೆಯೊ, ಅಷ್ಟು ಅದರ ಮಹತ್ವ ಹೆಚ್ಚೆಂದು ಕಲೆಯ ಮಹತ್ವದ ವಿಚಾರವಾಗಿ ನಮ್ಮ ಹಿಂದಿನವರ ತಿಳಿವಳಿಕೆಯಾಗಿತ್ತು.

ಕಸುಬು ಮಾಡುವವನು ಕಲೆಯನ್ನು ನಮ್ಮ ಬಾಗಿಲಿಗೆ ತಂದು ಕೊಡುತ್ತಾನೆ. ನಮ್ಮ ಕೈಗೆ ಸುಲಭವಾಗಿ ನಿಲುಕುವಂತೆ ಮಾಡುತ್ತಾನೆ. ಭಾರತದ ಕಸುಬುದಾರರಲ್ಲಿಯ ಕಲಾದೃಷ್ಟಿಗೆ ಜಗತ್ತು ಆಶ್ಚರ್ಯಪಡುತ್ತಿದ್ದ ಕಾಲವೊಂದಿತ್ತು. ಆದರೆ ಆ ಕಾಲ ಹೋಗಿದೆ. ಇಂದು ಅವರ ಬಾಳು ಕೆಟ್ಟುಹೋಗಿದೆ. ಅವರ ಕೆಲಸಕ್ಕೊಂದು ಪ್ರೋತ್ಸಾಹವಿಲ್ಲ. ಅವರಿಗೆ ಮರ್ಯಾದೆಯಿಂದ ಜೀವಿಸುವುದಕ್ಕಿಲ್ಲ.

ವ್ಯಕ್ತಿಗೆ ತನ್ನ ಬದುಕು ಮುಖ್ಯ. ಅವನ ಬಾಳು ಜಿನ್ನಾಗುವಂತೆ ಮಾಡಿದರೆ, ಅವನು ಅದಕ್ಕೆ ಪ್ರತಿಯಾಗಿ ಸಮಾಜ ಬೆಳೆಯುವುದಕ್ಕೆ ಸಹಾಯಮಾಡುತ್ತಾನೆ. ಅವನ ಸಂತಸ ಅವನ ಕೃತಿಯಲ್ಲಿ ಕಾಣುತ್ತದೆ. ಅವನ ಪ್ರತಿಭೆ ಹೊರಗೆ ಬರುವುದಕ್ಕೆ ಅವಕಾಶ ಸಿಕ್ಕುವುದು ಆಗ. ಅದರ ಸಂಪರ್ಕದಿಂದ ಸಮಾಜದಲ್ಲಿಯ ಕೊಳಕಿಗೆ ಸೂರ್ಯರಶ್ಮಿಯು ತಾನಿದಂತಾಗಿ ಅದು ಶುದ್ಧವಾಗ ತೊಡಗುತ್ತದೆ. ಕಸುಬುದಾರನ ಸಂತಸ ಸಮಾಜದ ಸೌಖ್ಯಕ್ಕೆ ಪರ್ಯಾಯವಾಗಿ ಕಾರಣವಾಗುತ್ತದೆ.

ಹೊಟ್ಟೆಪಾಡಿಗಾಗಿ ಕಲೆಯ ಉಪಯೋಗವಾಗಿರುವತನಕ ಅದು ನಿರ್ಮಾತೃವಿನ ಕಸುಬು ಹೊಟ್ಟೆಯ ಚಿಂತೆಯು ತಪ್ಪಿದ ಮರು ಕ್ಷಣದಲ್ಲಿಯೆ ಕಸುಬು ಕಲೆಯಾಗಿ ಮಾರ್ಪಡುವುದು. ಕಸುಬುದಾರನು ತಾನುಮಾಡುವುದು ಕಸುಬು ಎಂದುಕೊಂಡಾಗ, ಅವನ ಕೃತಿಯಲ್ಲಿ ಕಲೆಯ ಅಂಶ ಕಡಿಮೆಯಾಗುತ್ತದೆ. ಆಗ ಅದು ಜೀವನಸತ್ವವನ್ನು ಎಳೆದುಕೊಂಡು ಇಳಿಮೊಗವಾಗುತ್ತದೆ. ಕಲೆ 'ಕಸುಬು' ಆಗಿರುವತನಕ ಅದರ ವಿಕಾಸವಾಗದು. ಕಸುಬಿನ ಆವರಣಬಿಟ್ಟು ಕಲೆಯ ಆಸ್ತಿತ್ವದ ಅರಿವಾಗಿ ಕಬುಸುದಾರನು ಕೆಲಸ ಸಾಗಿಸುವಂತಾಗಬೇಕು.

ಪೇರೀಸಿನ ಕಲಾ ಪ್ರದರ್ಶನದಲ್ಲಿ ಕೆತ್ತಿಗೆಯ ಕೆಲಸದ ಸಲುವಾಗಿ ಬಂಗಾರದ ಪದಕವನ್ನು ಪಡೆದವರ ಮನೆಯವರು ನಮ್ಮಲ್ಲಿ ಇದ್ದಾರೆ. ಅವರ ಮನೆಯವರು ಈಗಲೂ ಅದೇ ಕಸುಬನ್ನು ಸಾಗಿಸುತ್ತಿದ್ದಾರೆ. ಆದರೆ ಅವರಲ್ಲೀಗ ತಮ್ಮನ್ನು ಹೊತ್ತ ನಾಡಿಗೆ ಕೀರ್ತಿತರುವ ಸ್ಥೈರ್ಯವಿಲ್ಲ. ಅವರ ಕಲೆಯಲ್ಲಿ ಕಸುಬು ಸೇರಿಕೊಂಡು ಅವರಲ್ಲಿಯ ಕಲಾವಿದ ಸತ್ತುಹೋಗಿದ್ದಾನೆ.

ಕಸುಬುದಾರನಲ್ಲಿ, ತನ್ನ ಕೃತಿಗಳಲ್ಲೆಲ್ಲ ನಾವೀನ್ಯ ಉಳ್ಳತ್ತಿರಬೇಕು; ಪ್ರತಿಯೊಂದೂ ಕಲಾಪೂರ್ಣವಾಗಿರಬೇಕು; ಅವುಗಳೆಲ್ಲ ತನ್ನ ಹಿಂದೆಯೆ ಹೋಗಬಾರದು—ಎನ್ನುವ ಪ್ರವೃತ್ತಿ ಮೂಡುವಂತಾಗಬೇಕು. ಅವನಲ್ಲಿ ತಾನೊಬ್ಬ ಕಲಾವಿದ ಎನ್ನುವ ಅರಿವುಂಟಾದರೆ ಮಾತ್ರ ತನ್ನಲ್ಲಿಯ ಕಲೆಗೆ ಸಂಸ್ಕಾರಕೊಡುವುದಕ್ಕೆ ಹವಣಿಸುತ್ತಾನೆ. ಕೆಲಸಮಾಡುವಾಗ ಯಂತ್ರದಂತೆ ಮಾಡದೆ, ಮಾಡಿದ ಕೆಲಸವೆಲ್ಲ ಜೀವಗೊಂಡು ನಿಂತಿರುವಂತೆ ಮಾಡುತ್ತಾನೆ.

ಕಲೆಯ ಸಾಮಿಪ್ಯ, ಸಂಪರ್ಕಗಳಿಂದ ನಮ್ಮ ಜೀವನ ಸುಸಂಸ್ಕೃತವಾಗುವುದು. ಕಲೆ ನಮ್ಮ ಜೀವನದೊಡನೆ ಸಮರಸವಾದಷ್ಟೂ ಅದರ ಮಟ್ಟ ಬೆಳೆಯುವುದು. ಅದನ್ನು ನಮ್ಮ ಹತ್ತಿರಕ್ಕೆ ಕಸುಬುದಾರನು ತಂದುಕೊಡುತ್ತಾನೆ. ಅವನನ್ನು ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯ.

ಅದಕ್ಕಾಗಿ ನಾವು ಸ್ವತಃ ಕಲಾದೃಷ್ಟಿಯನ್ನು ಪಡೆದುಕೊಳ್ಳಬೇಕು. ನಮ್ಮ ರುಚಿಗನುಸಾರವಾಗಿ ನಮಗೆ ವಸ್ತುಗಳನ್ನು ಕಸುಬುದಾರನು ಒದಗಿಸುತ್ತಾನೆ. ಅದರಿಂದ ನಾವು ಅವನಿಂದ ಹೆಚ್ಚಿನದನ್ನು ಚೆನ್ನಾದುದನ್ನೇ ಅಪೇಕ್ಷಿಸಬೇಕು. ಪ್ರತಿಯೊಂದು ಕೆಲಸದಲ್ಲಿ ಕಲೆಯ ಕುರುಹು ಕಾಣುವಂತಾಗಬೇಕು. ನಾವು ಬಳಸುವ ಪ್ರತಿಯೊಂದು ವಸ್ತುವೂ ಕಲಾಪೂರ್ಣವಾಗಿರಬೇಕು. ಆಗ ಕಲೆಯನ್ನು ಕಾಣುವ, ಅದರ ನಿರ್ಮಾತೃವನ್ನು ಆದರಿಸುವ ಶಕ್ತಿ ನಮ್ಮಲ್ಲಿ ಬೆಳೆಯುವುದು.

ಕಸುಬುದಾರರನ್ನು ಕಲಾವಿದರೆಂದು ಗೌರವಿಸುವ ಕಾಲ ಬಂದಾಗ, ನಾಡಿನ ಕಸುಬುಗಳೆಲ್ಲ ಏಳ್ಗೆಹೊಂದುವುವು. ನಾಡಿನ ಸರ್ವತೋಮುಖ ಅಭಿವೃದ್ಧಿಯಾಗುವುದು.

ನಾನು ಟಾಂಗಾ ಸವಾರಿಯಲ್ಲಿದ್ದಾಗ!

(ಲಲಿತ ಪ್ರಬಂಧ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

★

ಜೀವನದಲ್ಲಿ ಪ್ರತಿಯೊಂದು ಘಟನೆಯಲ್ಲಿಯೂ ಒಂದು ರಹಸ್ಯ ಹುದುಗಿಕೊಂಡಿರುವುದು. ಕಣ್ಣಿದ್ದವರು ಅದನ್ನು ಕಂಡು ಜೀವನಗ್ರಂಥದ ಒಂದೊಂದು ರಹಸ್ಯವನ್ನು ಟೀಕೆ-ಟಿಪ್ಪಣಿಗಳೊಂದಿಗೆ ಬರೆಯುವರು. ಈ ಟಾಂಗಾಸವಾರಿಯಲ್ಲಿಯೂ ಅಂತಹ ರಹಸ್ಯದ ಟೀಕೆ-ಟಿಪ್ಪಣಿಗಳಿವೆ.

★

ಮೊಹರಮ್ ಹಬ್ಬ. ಮರುದಿನವೇ 'ಕತ್ತಲರಾತ್ರಿ'! 'ಕತ್ತಲಿದ್ದು ರಾತ್ರಿಯೊ, ಕತ್ತಲಿಲ್ಲದ ಹಗಲೊ?' ಎಂಬ ಸಂಶೋಧನೆಯ ಗಲಭೆಗೆ ಬೀಳದೆ, ನನ್ನ ಕೈಗಡಿಯಾರದ ವೇಳೆಯೊಡನೆ ಶಾಲೆಯ ಕಡೆಗೆ— ನನ್ನ ಕಾಲುಸರಿಸಡಿಸಿಕೊಂಡು— ಹೊರಟೆ ಊರಲ್ಲಿಯ ಗಡಿಯಾರಗಳೆಲ್ಲ ಆಡ್ಡ ಹಾದಿಹಿಡಿದಿದ್ದುಪ್ಪೊ ಇಲ್ಲವೆ ನನ್ನದೇ ಸುಣ್ಣದ ಡಬ್ಬಿಯಾಗಿತ್ತೊ....! ಒಂದು ಮನೆಯ ಮಹಾದ್ವಾರದಲ್ಲಿಯ ಗಡಿಯಾರದ ನಿತ್ಯದ ಸ್ಟ್ಯಾಂಡರ್ಡ್ ನೋಳಿ ನೋಡುತ್ತೇನೆ. ಆಬ್ಬಾ! ಅರ್ಧತಾಸು ನನ್ನ ಗಡಿಯಾರ ಹಿಂದೆ. ಸಿಡುಕಿನಿಂದ ಅದನ್ನು ಒಮ್ಮೆಲೇ ಬಿಸಾಡಬೇಕೆಂದು ಮನಸ್ಸಾದರೂ, ಅದರ ಪೂರ್ಣ ಹಣ ಮುಟ್ಟಿಸಿಲ್ಲವೆಂಬ ವಿವೇಕ ಮುಂದೆ ಬಂದು, ದುಡುಕುತನಕ್ಕೆ ತಡೆಹಾಕಿತು. ಊಟವಾದಮೇಲೆ ಇನ್ನು ಆನೆಯ ವೇಗದಿಂದ ಸಾಗಿದರೆ ಶಾಲೆಗೆ ಮುಟ್ಟುವೆನೊ ಇಲ್ಲವೊ—ಎಂಬ ಸಮಸ್ಯೆ ಎದ್ದು, ತಿಂಗಳಲ್ಲಿಯೊಂದು ದಿನ ಇಂದು ಟಾಂಗಾ ಹುಡುಕಿ ಅದರಲ್ಲಿ ಹೊರಡುವುವೆಂದು ನಿರ್ಧಾರವೂ ಆದಂತಾಯಿತು. ಟಾಂಗಾನ್ವೇಷಣೆಗೆ ಪ್ರಾರಂಭವಾಯಿತು. ಕೊನೆಗೊಮ್ಮೆ ಸಮೀಪದಲ್ಲಿ ಒಂದು ಟಾಂಗೆಯೂ ಅದಕ್ಕೆ ಸಂಬಂಧಪಟ್ಟ ಇಬ್ಬರು ಮಾಲಕರೂ ಚಹದ ಅಂಗಡಿಯ ಕಟ್ಟೆಗೆ ಸ್ಥಿತಪ್ರಜ್ಞಾವಸ್ಥೆಯಲ್ಲಿ ಕುಳಿತುದೂ ಕಂಡುಬಂತು. ಬಹುತರವಾಗಿ ಅಂದಿನ ಹಬ್ಬದಲ್ಲಿ ಭಾಗವಹಿಸಲು ಆವಶ್ಯವಾಗಿತ್ತೇನೊ ಅವರಿಗೆ! ಏನೇ ಇರಲಿ, 'ಭಾಡೆ ರಾವಸಾಬ್' ಎನ್ನುತ್ತಲೇ, ಅವರಿಬ್ಬರ ಉತ್ಸಾಹದ ಇಮ್ಮಡಿವೇಗದಿಂದ ಸಿಂಹಾಸನಾರೂಢನಾಪೆ ನಾನು!

ಇಬ್ಬರು ಟಾಂಗೆಯ ಮಾಲಕರು ಮುಂದೆ; ರೊಕ್ಕಕೊಟ್ಟು ಈಗಿನ ಮಟ್ಟಿಗೆ ಸ್ವಾಮಿತ್ವ ಸ್ಥಾಪಿಸಿದ ಮಾಲಕ ಹಿಂದೆ. ರಥ ಸಾಗಿತು. ಇಬ್ಬರ ನೇತೃತ್ವದಲ್ಲಿ ವಾಹನವು 'ಪೆಕ್ಕನ್ ಕ್ವೀನ್' ಎಲ್ಲಿ ಆಗುವುದೋ ಎಂಬ ಭಯದಿಂದ ಮೊದಲೇ ಹೇಳಿಟ್ಟಿದ್ದೆ— ಸಮೀಪದ ಒಂದು ಅಂಗಡಿಯ ಮುಂದೆ ಎಲೆಅಡಕೆಗಾಗಿ ನಿಲ್ಲಿಸು— ಎಂದು. ಕುದುರೆಯು ದಿನಾಲು ನಿಲ್ಲುವ ಅನೇಕ ತಾಣಗಳು ನಮ್ಮ ಪ್ರವಾಸದ ಮುಖ್ಯ ಬೀದಿಗೇ ಬಹಳವಿದ್ದುದರಿಂದ, ಮೇಲಿನ ಒಬ್ಬ ಮಾಲಕನಿಗೆ ಕೆಳಗಿಳಿದು ಕುದುರೆಯ ಸಂಗಡ ಓಡಿ ಸ್ಪರ್ಧೆಯ ಸೌಂದರ್ಯವನ್ನು ತೋರ್ಪಡಿಸುವ ಪ್ರಸಂಗಬಂದಿತು. ದ್ವಿದಳಪದ್ಧತಿಯ ಅನಾಹುತದ ಪ್ರತೀಕವೇನೊ ಎನ್ನುವಂತೆ, ಎಲೆಯಡಕೆಯ ಅಂಗಡಿ ಹಿಂದುಳಿಯಿತು. ಟಾಂಗಾ ಫರ್ಲಾಂಗು ಮುಂದೆ ಹೋದಮೇಲೂ ಮಾಲಕರಿಗೆ ನಿಲ್ಲಿಸುವುದರಲ್ಲಿ ಸಾಕುಬೇಕಾಯಿತು. ಜನಕ್ಕಿಂತ ಜನಾವರಗಳ ಸಂಗತಿಯು ಒಮ್ಮೊಮ್ಮೆ ಕಠಿಣವೆಂದು ಮನವರಿಕೆಯಾದರೂ, ಒಟ್ಟು ಒಮ್ಮೆ ಎಲೆಯಡಕೆಯ ಯೋಗ ಒದಗಿತಲ್ಲ-ಎಂಬ ಉನ್ಮಾದದಲ್ಲಿ ಒಂದು ಕ್ಷಣ ನೋರೆಯಮೇಲೆ ಸನಾಧಾನದ ಮಿಂಚು ಮೂಡಿ ಮಾಯವಾಯಿತು.

ಚಲಚ್ಚಿತ್ರದಲ್ಲಿಯ ಚಾರ್ಲಿ ಚಾಪ್ಲಿನ್, ಫೋರಿ, ದೀಕ್ಷಿತರ ಹಾಸ್ಯಸನ್ನಿವೇಶದ ಉಜ್ವಲ ಮಾದರಿಯಂತೆ ಹೊರಟ ವಾಹನವು, ಇದೀಗ ನಾಲ್ಕು ಬೀದಿಗಳು ಒಂದೆಡೆ ಕೂಡಿದ ಜನಸಮುದಾಯದ ಸಮೀಪಕ್ಕೆ ಬಂದು 'ಥಕ್' ಎಂದು ನಿಂತಿತು. ಕೆಲವು ವಯಸ್ಕರು ಮನಸ್ಸಿನಲ್ಲೆಯೆ ಪಸಿಸಿದರು ತೊಂದರೆಗಾಗಿ. ಯುವಕರು ತಿರಸ್ಕಾರದ ನಗೆಯೊಡನೆ ಮತ್ತೆ ತಮ್ಮ ಕೆಲಸದಲ್ಲಿ ತಾದಾತ್ಮ್ಯ ತಳೆದು ಹೊರಡಲನುವಾದರು. ಆದರೂ ಅಂಗಡಿಯಲ್ಲಿ ಹೆಸರಿಗೆ ಕೆಲಸವಿದ್ದ ಅನೇಕರು— ಒಬ್ಬನು ಓಡುವುದು. ಇಬ್ಬರು ಒಳಗೆ ಮಹಾರಾಜರ ಠೀವಿಯಲ್ಲಿ ಕುಳಿತಿರುವುದು— ಸೌಂದರ್ಯದ ರಹಸ್ಯವನ್ನು ಬೆರಗುವಡೆದಂತೆ ಎವೆಯಿಕ್ಕದೇ ನೋಡಿ, ಗಹಗಹಿಸಿ ನಕ್ಕು, ನಿಕ್ಕವರಿಗೆ ಕಾಲಕ್ಷೇಪ-ರಂಜನೆಯ ಧ್ಯೇಯದಿಂದ ಚಿತ್ರಮಯವಾಗಿ ಬಣ್ಣಿಸಿರಲೂ ಸಾಕು. ಹೀಗೆ ಸುಸೂತ್ರವಾಗಿ ಎರಡು ಮೂರು ನಿಮಿಷ ನೆಟ್ಟಗೆ ಕುದುರೆ ಓಡುತ್ತಿದೆ ಎನ್ನುವಾಗ, ಒಮ್ಮೆಲೇ ಬೀದಿಯ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಸ್ವೇಚ್ಛೆಯಾಗಿ ಓಡಾಡಿ ಕಾಲೇಜ ಹಾಯ್‌ಸ್ಕೂಲುಗಳಿಗೆ ಹೋಗುವ ಕುಮಾರ-ಕುಮಾರಿಯರ ತೀರ ಸಮೀಪಕ್ಕೆ ಹಾಯ್ದು ಹೋಗಿ ಸಾಮಾಜಿಕಗಲಭೆ ಎಬ್ಬಿಸಿತು. ಮುಂದೆ ಹತ್ತುಹೆಜ್ಜೆ ಹೋಗುವಷ್ಟರಲ್ಲಿ, ಈ ವಾಹನದ ಅವತಾರವನ್ನೂ ನನ್ನ ಪೆಚ್ಚುತನವನ್ನೂ

ನೋಡಿ, 'ಇನ್ನು ಮೇಲೆ ನಡೆಯುತ್ತಲೇ ಹೋದಲಾಗದೇ?' ಎಂದು ನನ್ನ ತೀರ ಪರಿಚಿತ ಗೆಳೆಯರಿಬ್ಬರು ಸೂಚಿಸಿದರು. ಹಾಗೆ ಮಾಡಿದ್ದರೆ ನೆಟ್ಟಗಿತ್ತು. ಆದರೆ ಒಮ್ಮೆ ಕಾರಾರುಮಾಡಿ ಕುಳಿತ ಮೇಲೆ ಇಷ್ಟೊಂದು ನಿರಾಕೆಯಿಂದ ಈ ಸಣ್ಣ ಘಟನೆಗೆ ಎಡೆಗುಂದಿ ಹಿಂತೆಗೆಯುವುದೇ—ಎಂಬ ಕ್ಷಣಿಕ ವೀರ ವನಿತೆಯಾದರೂ ಮೈದೋರಿತು. ರಥವಾಹಕನಾದರೊ, ತನ್ನ ಕೌಶಲದ—ಅನುಭವದ—ರಸವತ್ತಾದ ಪುರಾಣಬಿಚ್ಚುತ್ತಾ ಹುಬ್ಬಳ್ಳಿ, ಬೆಳಗಾಂವ, ಹೊಸಪೇಟೆಯಂತಹ ಗಂಡುನೆಟ್ಟನೆ ಸ್ಥಳಗಳಲ್ಲಿಯೂ ಜಾತ್ರೆ-ಉರುಸಿನಂತಹ ಗಲಭೆ-ಜನಸಂದಣಿಗೆ ಪ್ರಾಸಿದ್ಧವಾದ ಸ್ಥಳಗಳಲ್ಲಿಯೂ ಯಾತಕ್ಕೂ ಲೆಕ್ಕಿಸದೆ—ಅಸ್ತಿಪಾನಿ ಪ್ರಾಣಹಾನಿ ಮಾಡಗೊಡದೆ— ವಾಹನದೊಡನೆ ಸಂಸಾರಸಾಗಿಸಿದ್ದನ್ನು ಉಪ್ಪು-ಖಾರಹಚ್ಚಿ ಜೇಳುವಾಗ ಮೈಮೆರೆತು ಕೂತು ಕೇಳಿ, ಕೊನೆಗೆ ಕೆಳಗಿಳಿದು, ಕುದುರೆಯನ್ನೂ ಆದರ ಮಾಲಕನನ್ನೂ ಅವನಾತನಿಗೊಳಪಡುವುದು ನನಗೆ ಸರ್ವಥಾ ಸರಿದೋರಲಿಲ್ಲ.

ಇನ್ನೇನು? ಮೂರುಫರ್ಲಾಂಗುಗಳು ಕಳೆದರೆ ಶಾಲೆ; ಅಷ್ಟಾದರೂ ಒಳ್ಳೆಯ ರೀತಿಯಿಂದ ಕಳೆಯುವುದೊ ಇಲ್ಲವೊ ಎಂಬ ಚಿಂತೆ ಹತ್ತಿದರೂ, ಬೀದಿಯಲ್ಲಿಯ ಪರಿಚಯದವರ ನಗೆನೋಟಗಳನ್ನು ಎದುರಿಸುವುದು ದುಸ್ತರವಾಗಿತ್ತು. ನಾಗಾಲೋಟದಿಂದ ಟಾಂಗಾ ಒಮ್ಮೆ ಸಾಗಿದಂತೆ ತೋರಿದರೂ, ಕುದುರೆ ಆಗಾಗ ನಡುವೆ ನಿಂತು ಸ್ವೈರವೃತ್ತಿ ತೋರಿಸುತ್ತಿದ್ದುದರಿಂದ, ಗಡಿಯಾರ ನೋಡುವ ಆವಶ್ಯಕತೆ ಬೀಳಲಿಲ್ಲ. ಅಷ್ಟು ತೀವ್ರವಾಗಿಯೇ ನಾನು ಮನೆಯಿಂದ ಹೊರಟದ್ದು.

ಮಾರ್ಗದಲ್ಲಿ ಶಿಕ್ಷಕ ಗೆಳೆಯರೊಬ್ಬರು ಕಂಡರು. ಅವರನ್ನು ಟಾಂಗೆಯಲ್ಲಿ ಕರೆಯಬೇಕೆಂದು ದುರ್ಬುದ್ಧಿ ಹುಟ್ಟಿತು. ಅಲ್ಲವೇ ಮತ್ತೆ? ನಾನೇ ಶಾಲೆಗೆ ಮುಟ್ಟುವ ಆಲೆಮನೆಯನ್ನು ತೊರೆದಾಗ, ಆಘಾತ-ನಗೆಗೀಡುಗಳ ವಿಷಮಿಷಗಳು ಅವರಿಗೇಕೆ? ಬಿಟ್ಟದ್ದೇ ನೆಟ್ಟಗಾಯಿತು. ನಗದು ರೊಕ್ಕ ಕೊಟ್ಟು ಇಷನೊಬ್ಬ ಕಾಮಣ್ಣನೇ ಟಾಂಗಾ ಹತ್ತುವವನೇ— ಇಂಥ ಟಾಂಗೆಯಲ್ಲಿ— ಎಂದು ನನ್ನ ದರ್ಪಕ್ಕಾಗಿ ನಾಪ, ಅವರು ಮೂಗು ಮುರಿದಿರಬಹುದು!

ಏನೇ ಆಗಲಿ; ಉಳಿದ ಮಾರ್ಗಕ್ರಮಣವೆಲ್ಲ ಒಬ್ಬನೇ ರಥವಾಹಕನ ನೇತೃತ್ವದಲ್ಲಿ ಸಾಗಿತು. ಏಕೆಂದರೆ ಕುದುರೆಯು ಸಿಲ್ವಾಣಗಳೇ ಆ ಬೀದಿಗೆ ಬಹಳ ಇದ್ದಿಲ್ಲವಂತೆ!

ತೀವ್ರವಾಗಿ— ಅಘಘಾತಗಳಿಲ್ಲದೆ— ಒಯ್ಯಲೆಂದು ಮೊದಲೇ ಕೊಕ್ಕ ಕೊಟ್ಟದ್ದು ನನಗೆ ನೆಟ್ಟಗೇ ಆಗಿತ್ತು. ಇಲ್ಲದಿದ್ದರೆ ಇನೂ ಹೆಚ್ಚುವೇಳೆ ಜನರ ಕುತೂಹಲ ಕೆರಳಿಸಿದಂತಾಗುತ್ತಿತ್ತು. ಅದೊಂದು ಸಮಾಧಾನ!

ಕೊನೆಗೊಮ್ಮೆ ಅಶ್ವರತ್ನದ—ರಿಪೇರಿಗೆ ಬಂದ ಟಾಂಗೆಯ—ಧರ್ಮಸೆರೆ ಬಿಡಿಸುವುದಾದ ಮೇಲೆ, ಶಾಲೆಯ ಕ್ಲಬ್ಬಿಗೆ ಬಂದು ನೋಡುತ್ತೇನೆ: ನನ್ನನ್ನು ಹಾದಿಯಲ್ಲಿ ಕಂಡ ಶಿಕ್ಷಕಮಿತ್ರರು ನನಗಿಂತ ಮೊದಲು ಬಂದು ಕುಳಿತಿದ್ದಾರೆ! ಕುದುರೆ ಎನ್ನುವುದಕ್ಕಿಂತ ಒಂಟೆಯ ವೇಗನೇ ಆದರದೆಂದು ಎಲ್ಲರಿಗೂ ಮನವರಿಕೆಯಾಗಿದ್ದರೂ, ಜನರ ನಗೆಗೆ ಮಿತಿ ಉಳಿಯಲಿಲ್ಲ. ಎಲ್ಲರೂ ಹೊಳ್ಳಿಂದು ಬಿದ್ದು ಬಿದ್ದು ನಗುವವರೆ! ಎಲ್ಲರಿಗೂ ಹೊಟ್ಟೆತುಂಬ ನಗೆಯುಂಟಾದರೂ ಉಪದ್ವ್ಯಾಪಿಗಳೊಬ್ಬರು—'ನಿಮ್ಮ ಟಾಂಗಾದ ಅಶ್ವರತ್ನ ಅಂದರ ಪಂಢರಪುರದ ಕುದುರೆ ನೋಡ್ರಿ, ರಾಯರೆ' ಎಂದು ಉದ್ಗಾರ ತೆಗೆದರು. ನಿರುತ್ತರಕುಮಾರನಾದ ನನ್ನ ಪರವಾಗಿ ಇನ್ನೊಬ್ಬ ತತ್ತ್ವಜ್ಞಾನ ವಿಷಯದ ಶಿಕ್ಷಕರು 'he is too good to retaliate' ಎಂದರು. ಮುಂದೆ 'too gentle to retaliate' ಎಂದು ತಿದ್ದುಪಡೆ ಮಾಡಿಕೊಂಡರು. ಮೂರನೆಯವರಂತೂ 'he is too helpless to retaliate' ಎಂದು ನುಡಿದು ತಮ್ಮ ಆಂಗ್ಲವಿದ್ಯೆಯ ಭಾಂಡಾಗಾರ ಉರುಳಿಸಿ ಹಾಸ್ಯದ overboundary ಹೊಡೆದು, ಎಲ್ಲ ಜನರನ್ನು ಕೆಲಕಾಲ ನಗೆಗಡಲಿನಲ್ಲಿ ತೇಲಾಡಿಸಿದರು.

ಜನರೆದುರು ಈ ನನ್ನಿವೇಶ ಒಂದು ರೂಪಕ: ಒಳಗೆ ಜನರಿದ್ದಾರೆ; ಹೊರಗೆ ಕುದುರೆ ಇದೆ; ಮೇಲಾಗಿ ಅದು ಜಲಿಸುತ್ತಿದೆ—ಕೆಲವೇಳೆ ಹಿಂದೆ, ಕೆಲವೇಳೆ ಮುಂದೆ—ಹೀಗಿದ್ದರೂ ಅಂತಹ ಟಾಂಗಾ ಸಮಾಜಕ್ಕೆ ಅಸ್ಪೃಶ್ಯವಸ್ತುವಲ್ಲ. ಒಳ್ಳೇ ವಾಹನಗಳು ಸ್ಟೈ ಎನಿಸಿಕೊಳ್ಳುವಂತೆ ಓಡಿದರಾಗದೇ? ಎಲ್ಲರೂ ಏಕಾದಶಿವ್ರತ ಕೈಕೊಳ್ಳುವುದು ಸಾಧ್ಯವೇ? ಕೆಲವರು ಹೆಸರಿಗಾಗಿ ಕೈಕೊಂಡರೂ ನಾಲಗೆ ಅಂದಿನ ದಿನವ ಮಟ್ಟಗಾದರೂ ರುಚಿ ತೊರೆಯುವುದಿಲ್ಲ. ಸಂಯಮದಿಂದ ಕೆಲವರಷ್ಟೇ ಉಪವಾಸ ಮಾಡಿದರೂ ಸಾರ್ಥಕ! 'Doth god exact day labour when light denied' ಎಂಬ ಅಸಾಹಾಯ್ಯಕ ಸ್ಥಿತಿಯೇ ಕೆಲವರಿಗಾಗಿ ನಿರ್ಮಾಣವಾಗಿರಲು ಸಾಕು. ಹಾಗೇ ಇನ್ನೇನು? ಟಾಂಗಾ ಎಂತಿದ್ದರೂ ಮಾಲಕನು ಅದರಿಂದಲೇ ಹೊಟ್ಟೆ ಹೊರೆದುಕೊಂಡು ತನ್ನನ್ನವಲಂಬಿಸಿದ ಪ್ರಪಂಚದ ಉದ್ಧಾರಕ್ಕಾಗಿ ಹೆಣಗುವನೆಂದಮೇಲೆ, ಅವನನ್ನು ಬೀಳುಗಳೆಯಬೇಕೆ? ಈಗಂತೂ ಇಬ್ಬರು ಮಾಲಕರು ನನ್ನ ಪ್ರವಾಸದ ಟಾಂಗೆಗೆ. ಎಂದ ಮೇಲೆ ಸಮಸ್ಯೆ ಹೆಚ್ಚು ಗಂಭೀರರುದ್ರ! ನಾನು ಕೊಟ್ಟ ೮-೧೦ ಆಣೆಗಳಿಂದ ಅವನ ಹೊಟ್ಟೆತುಂಬದಿದ್ದರೂ, ತಾತ್ತ್ವಿಕವಾಗಿ ವಿಚಾರಿಸಲಾಗಿ ಮುರುಕು ಟಾಂಗೆ, ವಯಸ್ಸು ಮಾಲಕ ಇಬ್ಬರೂ ಕಾಲುಕಸವಲ್ಲ. ಜೀವವಿದ್ದ ಉದಾತ್ತ ವ್ಯಕ್ತಿಗಳು. ಸಮಾಜದ ಮಹತ್ತ್ವದ ಘಟಕಗಳು.

ಚಿರಸ್ಮರಣೀಯವಾದ ನನ್ನ ಅಂದಿನ ಪ್ರವಾಸವು ಬೀದಿಯಲ್ಲಿಯ ಸುಸಂಸ್ಕೃತ ಹೆಂಗುಸರಿಗೆ ಗಂಡುಸರಿಗೆ ಚಿಕ್ಕಮಕ್ಕಳಿಗೆ ನಗೆಯ ಕಾರಂಜಿಯಾಗಿ ಪರಿಣಮಿಸಿರಬಹುದು. ನಕ್ಕರೆ ನಾಪ ಎಂದು, ಬಾಯಿತೆರೆದರೆ ಆಧಿಕವ್ಯಸಂಗತನವೆಂದು ತಿಳಿದುಕೊಳ್ಳುವ ಸಾಧುಗಳು ಅಂದು ನಿಯಮ ಮುರಿದೂ ಮನರಂಜಿಸಿಕೊಂಡಿರಬಹುದು. ಕಂಡಾಗದಿದ್ದ ಗೆಳೆಯರಿಗೆ ಸೌಮ್ಯರೀತಿಯಿಂದ ಸೇಡು ತೀರಿಸಿಕೊಳ್ಳಲು ಅವಕಾಶ ದೊರೆತಿರಬಹುದು. ಆದರೆ ಇಷ್ಟು

(ಉಳಿದದ್ದು ಪುಟಕ್ಕೆ ಮುಂದುವರಿದಿದೆ.)

ಹಸಿರು ಬೆಕ್ಕು*

ಶ್ರೀ. ನಾಗೇಶ ಶಾನಭಾಗ, ಮುಂಬಯಿ

★

ಮಾನವನ ಸ್ಪರ್ಧೆ-ಮತ್ಸರಗಳು ಬೆಕ್ಕು-ನಾಯಿಗಳಂತಹ ಅಜ್ಞಾನಿಪ್ರಾಣಿಗಳನ್ನೂ ಹಗೆಯನ್ನಾಗಿ ಮಾಡುವುವು. ಹಾಗಿಲ್ಲವಾದರೆ ಝಾಂಝುಬ್ರಿನ್ ಬೆಕ್ಕನ್ನು ಹಾಗೆ ಹಿಂಸಿಸಲು ಕಾರಣವೇನು?

★

ನನ್ನ ಕೋಣೆಯ ಕಿಟಕಿಯು ಸಾಕಷ್ಟು ಎತ್ತರವಿದ್ದುದರಿಂದ, ಅದರೊಳಗಿಂದ ನೋಡುವವರಿಗೆ ಜೇಲಿನ ಅವಾರಣದೊಳಗಿನ ದೃಶ್ಯವು ಸ್ಪಷ್ಟವಾಗಿ ಕಾಣಬರುತ್ತಿತ್ತು. ಕಿಟಕಿಯೆಂದರೆ ಬೆಳಕು ಬರಲು ಮಾಡಿದ ಕಂಡಿಯೇ ಸೈ. ಅದಕ್ಕೆ ಹೊಂದಿಯೇ ಪಾರಿ. ವಾಳದ ಜೋಡೊಂದು ಗೂಡುಕಟ್ಟಿಕೊಂಡಿತ್ತು. ಗೋಡೆಯ ಬಳಿ ಮೇಜನ್ನೆಳೆದು ಜೇಲಿನ ಆವಾಂದಲ್ಲಿಯ ತಮಾಷೆ ನೋಡುತ್ತಿದ್ದಾಗ, ತಲೆಯ ಮೇಲೆ ಪಾರಿವಾಳಗಳು ಹಾರಾಡುತ್ತಿದ್ದುವ.

ಜೇಲಿನಲ್ಲಿದ್ದ ಕೈದಿಗಳ ಗುರುತು ಹೂಡಿಕೊಳ್ಳುವ ಪ್ರಸಂಗಗಳು ನನಗೆ ಹಲವು ಸಲ ಬರುತ್ತಿದ್ದ ಕಾರಣ, ನಾನು ಎಲ್ಲರನ್ನೂ ಗುರುತಿಸುತ್ತಿದ್ದೆ. ಈ ಕೈದುಖಾನೆಯಲ್ಲಿ ಝಾಂಝುಬ್ರಿನ್ ಎಂಬ ವ್ಯಕ್ತಿಯೊಬ್ಬ ಅನಂದವ್ಯಕ್ತಿಯವ, ನಗುಮುಖದವ— ಎಂದು ಹೆಸರು ಪಡೆದಿದ್ದ.

ಚೆನ್ನಾಗಿ ಉದ್ದ—ಅಗಲದ ಮನುಷ್ಯನವನು. ಧನ್ಯವಾದ ಹಣೆ, ಉಬ್ಬಿದ ಗಲ್ಲ ಇವುಗಳ ನಡುವೆ ದೊಡ್ಡ ದೊಡ್ಡ ಕಣ್ಣುಗಳು ಹೊಳೆಯುತ್ತಿದ್ದುವು. ತಲೆಯ ಟೊಪ್ಪಿಗೆಯಂತೂ ಯಾವಾಗ ನೋಡಿದರೂ ತಲೆಯ ಹಿಂದೆಯೆ. ಕೊಟ್ಟುಕೊಂಡ ಶರ್ಟಿನ ಗುಂಡಿಗಳನ್ನಂತೂ ಹಾಕಿಕೊಳ್ಳುವ ಅಭ್ಯಾಸವೆ ಅವನಿಗೆ ಇರಲಿಲ್ಲ. ಅವನ ಪ್ರತಿಯೊಂದು ಚಲನವಲನವು ಅವನಲ್ಲಿಯ ಆನಂದ ವ್ಯಕ್ತಿಯ ದ್ಯೋತಕವಾಗಿದ್ದಿತು. ಸಿಟ್ಟು ಮತ್ತು ಉದಾಸೀನತೆಯ ಸಂಪರ್ಕವೇ ಅವನಿಗಿರಲಿಲ್ಲ.

ಯಾವಾಗಲೂ ನಕ್ಕುನಗಿಸುವ ಚಂಚಲಮನಸ್ಸು ಅವನದು. ಸಹಜವಾಗಿಯೆ ಅವನ ಸುತ್ತಲೆಲ್ಲ ಕೈದಿಗಳು ನೆರೆಯುತ್ತಿದ್ದರು. ತಿರತಿರನಾದ ಯುಕ್ತಿಪ್ರಯುಕ್ತಿಗಳಿಂದ, ನಿರಾಶಾಮಯವಾದ ದುಃಖಪೂರ್ಣವಾದ ಜೀವನದಲ್ಲಿಯೂ, ಯಾವ ಬಗೆಯಿಂದಲಾದರೂ ಒಂದು ಹೊರು ರಮ್ಯತೆಯನ್ನು ತರಲು ಅವನು ಪ್ರಯತ್ನಿಸುತ್ತಿದ್ದ.

ಒಮ್ಮೆ ಮೂರು ಹೆಗ್ಗಣಗಳನ್ನು ಹಿಡಿದು, ಅವುಗಳನ್ನು ಕಟ್ಟಿ, ಸವಾರಿಯ ಕುದುರೆಗಳಂತೆ ತಯಾರು ಮಾಡಿದ. ಅವನ ತಮಾಷೆ ಯಾವಾಗಲೂ ವಿನೋದಕರವಾಗಿಯೆ ಇರುತ್ತಿರಲಿಲ್ಲ. ಒಮ್ಮೊಮ್ಮೆ ತ್ರಾಸದಾಯಕವೂ ಆಗಿರುತ್ತಿತ್ತು. ಒಂದು ಸಲ ಬಬ್ಬ ಹರಯದ ಕೈದಿ ಗೊಡೆಗೆ ತಲೆಕೊಟ್ಟು ಮಲಗಿ ನಿದ್ರಿಸುತ್ತಿದ್ದ; ಅವನ ತಲೆಗೂದಲುಗಳು ತುಸು ಉದ್ದವಾಗಿದ್ದುವು. ಝಾಂಝುಬ್ರಿನ್‌ನು ತಮಾಷೆಗಾಗಿ ಅವನ ಕೂದಲುಗಳನ್ನು ಗೋಡೆಗೆ ಗಟ್ಟಿಯಾಗಿ ಅಂಟಿಸಿ ಬಿಟ್ಟ. ಪಾಪ! ಕೊನೆಗೆ ಅವನ ಕೂದಲುಗಳನ್ನು ಕತ್ತರಿಸಿಯೇ ಅವನನ್ನು ಬಿಡುಗಡೆ ಮಾಡಬೇಕಾಯ್ತು.

ಝಾಂಝುಬ್ರಿನ್‌ನ ಹೊರತು ಇನ್ನೊಂದು ಪ್ರಾಣಿ ಅಲ್ಲಿ ಎಲ್ಲರಿಗೂ ಬೇಕಾಗಿತ್ತು. ಅದೆಂದರೆ ಒಂದು ಬೆಕ್ಕು. ಪುಷ್ಟವಾದ ದೇಹದ— ಇನ್ನೂ ಮರಿಯೆ ಎನಿಸಿಕೊಳ್ಳಬಹುದಾದ— ನಸುಗೆಂಪು ಬಣ್ಣದ ಬೆಕ್ಕು, ನಮ್ಮೆಲ್ಲರ ತಮಾಷೆಗೆ ಸಾಧನವಾಗಿರುತ್ತಿತ್ತು. ಅದರ ಬೆನ್ನುಹತ್ತಿ ಓಡುವುದು, ಜಾಲಹಿಡಿದು ಜಗ್ಗುವುದು, ಅದನ್ನು ಒಂದು ಕೈಯಿಂದ ಇನ್ನೊಂದು ಕೈ ಮೇಲೆ ತೆಗೆದುಕೊಳ್ಳುವುದು, ಅದಕ್ಕೆ ಸರ್ಕಸ್ಸಿನ ಆಟಗಳನ್ನು ಕಲಿಸುವುದು— ಮುಂತಾದ ಆಟಗಳೇ ಅಲ್ಲಿಯ ಮಂಡಳಿಗೆ ಜೀವಾಳುವುಗಳು.

ಬೆಕ್ಕು ಕಣ್ಣಿಗೆ ಬಿದ್ದ ಕೂಡಲೆ, ಎಲ್ಲರ ಲಕ್ಷ್ಯ ಆ ಕಡೆಗೆ ಹರಿಯುವುದು. ಝಾಂಝುಬ್ರಿನ್‌ನ ಕಡೆಗೆ ನೋಡುವವರಿಲ್ಲ. ಎಂತಲೇ ಅದು ಝಾಂಝುಬ್ರಿನ್‌ನಿಗೆ ಸೇರುತ್ತಿರಲಿಲ್ಲ. ಅವನು ಕಲಾವಂತನಾಗಿದ್ದ. ಆದುದರಿಂದ ಅವನಿಗೆ ಸರ್ವಸಾಧಾರಣ ಕಲಾವಂತರಲ್ಲಿರುವಂತೆ ಸ್ವಂತದ ವಿಷಯದಲ್ಲಿ ಕುಂಬ ಅಭಿಮಾನವಿದ್ದಿತು. ಬರೇ ಒಂದು ಬೆಕ್ಕು ತನ್ನ ರಸಿಕವರ್ಗವನ್ನು ಸೆಳೆದೊಯ್ಯುವುದೆಂದರೆ ಅವನಿಗೆ ಅದು ಸಹನವಾದೀತೆ? ಆಗ ಅವನು ಒಬ್ಬನೇ ಒಂದು ಮೂಲೆಗೆ ಹೋಗಿ ಕೂಡುವನು. 'ಇವನು ಆ ಜಿಕ್ಕ ಬೆಕ್ಕನ್ನು ಕೊಲ್ಲದೆ ಬಿಡನು' ಎಂದು ನನಗೆ ಆಗಾಗ ಎನಿಸುತ್ತಿತ್ತು. ಎಲ್ಲರ ವಿಚಾರಗಳ ಕೇಂದ್ರವು ತನ್ನಲ್ಲಿಯೇ ನೆಲಸಿರಲೆಂದು ಹೆಣಗಾಡುವ ಆ ವ್ಯಕ್ತಿಯ ಬಗ್ಗೆ ನನ್ನಲ್ಲಿ ಕಿರಸ್ಕಾರವು ಉತ್ಪನ್ನವಾದರೆ ಅದು ಆಶ್ಚರ್ಯಕರವೆ? ಜನರನ್ನು ಈ ರೀತಿ ತನ್ನೆಡೆಗೇ ಸೆಳೆದಿಡಬೇಕು ಎಂಬ ಮನೋಗತಿ ಮುಂಡೆ ಮನುಷ್ಯನ ವಿಲ್ಲಿಗೆ ಮಾರಕವಾಗುತ್ತದೆ.

ಜೇಲಿನ ವಾಸದಲ್ಲಿಯ ಆ ಒಂದೇ ಸಮನಾದ— ತಡೆಯಿಲ್ಲದ ಜೀವನವನ್ನು ಬದಲಿಸಿಕೊಳ್ಳಲು ಪ್ರಯತ್ನಿಸುವ ವ್ಯಕ್ತಿಯ ಜೀವನವೂ ಮನೋರಂಜಕವಾಗಿ ತೋರುವುದು. ಬೆಕ್ಕಿನ ಆಟ ನೋಡುವುದಕ್ಕೆ ಇದ್ದ ಉತ್ಸುಕತೆ ಹಾಗೂ ಝಾಂಝುಬ್ರಿನ್‌ನ ಗೆಳೆಯರು ಅವನನ್ನು ತಿರಸ್ಕರಿಸುವ ಬಗೆ ಇವೆಲ್ಲದರಲ್ಲಿಯ ರಹಸ್ಯ, ಯಾರಿಗೆ ಜೇಲುವಾಸದ ಪ್ರಸಂಗ ಬಂದಿದೆಯೋ ಅವರಿಗೆ ತಿಳಿದೀತು.

*ಸುಪ್ರಸಿದ್ಧ ರಷ್ಯನ್ ಕತೆಗಾರ ಮಕ್ಸಿಮ್ ಗಾರ್ಕಿಯವರ ಕತೆಯೊಂದರ ಅನುವಾದವಿದು. —ಲೇ.

ಸೂರ್ಯನು ಅಂದು ಚೆನ್ನಾಗಿ ಪ್ರಕಾಶಮಾನನಾಗಿದ್ದ. ಜೈಲಿನ ಆವಾರವೆಲ್ಲ ಕೈದಿಗಳಿಂದ ತುಂಬತೊಡಗಿತ್ತು. ಹೇಲಿನ ಗೋಡೆಗಳಿಗೆ ಅಗ ತಾನೇ ಹಸಿರು ಬಣ್ಣ ಬಳಿದಿದ್ದರು. ಬಣ್ಣದ ಬಾರ್ಡಿಯು ಅಲ್ಲೇ ಇನ್ನೂ ಬಿದ್ದು ಕೊಂಡಿತ್ತು.

ಝಾಂಝುಬ್ರಿನ್‌ನ ತಲೆಯಲ್ಲಿ ಏನೋ ಒಂದು ವಿಚಾರ ಹೊಳೆಯಿತು. ಕೂಡಲೆ ತನ್ನ ಬಾಸನಗಳಿಗೆ ಹಸಿರು ಬಣ್ಣವನ್ನು ಹಚ್ಚಿಕೊಂಡ. ಕೆಂಡದಂತಹ ಅವನ ಮುಖಮುದ್ರೆಯ ಮೇಲೆ ಹಸಿರು ಬಾಸನಗಳನ್ನು ನೋಡಿ ಎಲ್ಲರಿಗೂ ನಗು ಬಂದಿತು. ಇದರ ಅನುಕರಣವೆಂದು ಇನ್ನೊಬ್ಬ ತನ್ನ ಮೇಲ್ದುಟಿಗೆ ಬಣ್ಣ ಕೊಡಹತ್ತಿದ. ಝಾಂಝುಬ್ರಿನ್‌ನಿಗೆ ಅದು ರುಚಿಸಲಿಲ್ಲ. ಫಕ್ಕನೆ ಎದ್ದು ಬಾರ್ಡಿಯೊಳಗಿಂದ ಬಣ್ಣವನ್ನು ತಂದು, ಅವನ ಮೈಮೇಲೆ ಚೆಲ್ಲಿದನು. ಅವನ ಮುಖವೆಲ್ಲ ಚಿತ್ರವಿಚಿತ್ರವಾಯಿತು. ನಾಚಿಕೆಯಿಂದ ಅವನು ಕೊರಳು ತಿರುವಿದ. ಝಾಂಝುಬ್ರಿನ್ ಒಂದೇ ಸಮನೆ ಚಪ್ಪಾಳೆಯಿಕ್ಕುತ್ತ ಅವನ ಸುತ್ತಲೂ ಕುಣಿಯುತ್ತಲಿದ್ದ. ಉಳಿದ ಮಂಡಲಿಯೆಲ್ಲ ತಮಾಷೆ ನೋಡುತ್ತ ಬಂದೀಸವನೆ ನಗುತ್ತಿತ್ತು.

ಅಷ್ಟರಲ್ಲಿ ಎಲ್ಲಿಂದಲೋ ಒ ಬೆಕ್ಕು ಬಂದಿತು. ಅದು ಬಹಳೇ ಚೀವಿಯಿಂದ ನಡೆಯುತ್ತಿತ್ತು. ಜನರ ಕಾಲುಬಡದಲ್ಲಿ ಸಿಕ್ಕೀನೆಂಬುದರ ಫಲವನ್ನ ಕೂಡ ಅದಕ್ಕಿರಲಿಲ್ಲ.

"ಬೆಕ್ಕು ಬಂತು" ಯಾರೋ ಅತ್ತಕಡೆಗೆ ನೋಡಿದರು.

"ಮಿಯಾಂವ್ ಮಿಯಾಂವ್ ಬಾ ಇಲ್ಲಿ" ಪ್ರತಿಯೊಬ್ಬನೂ ಬೆಕ್ಕನ್ನು ಹಿಡಿಯಲು ಹೋದ.

"ಎಷ್ಟು ಗಮ್ಮತ್ತಿರವಪ್ಪಾ ಈ ಬೆಕ್ಕು?"

"ಮತ್ತೆ ಅದರ ಕಾಲ ಪಂಜರವನ್ನಾದರೂ ನೋಡಿ!"

"ಹೋಗಗೊಡಿರಪ್ಪಾ ಅದನ್ನು: ಸುಮ್ಮನೆ ಹೋಗಲದು!"

ಎಲ್ಲರೂ ಬೆಕ್ಕಿನೊಡನೆ ಆಟ ಪ್ರಾರಂಭಿಸಿದ್ದರು. ಝಾಂಝುಬ್ರಿನ್ ಒಬ್ಬ ಮಾತ್ರ ಮೀಸೆಗೆ ಹತ್ತಿದ ಬಣ್ಣ ಬರಸಿಕೊಳ್ಳುತ್ತಿದ್ದ. ಎಲ್ಲರ ಕಡೆಗೂ ಹಾರಾಡಿ ಕುಣಿದಾಡುವ ಬೆಕ್ಕಿನ ಕಡೆಗೆ ಅವನ ಲಕ್ಷ್ಯವೂ ಹೋಗುತ್ತು. ಆ ಮಂಡಲಿಯೆಲ್ಲ ಅವನನ್ನು ಪೂರಾ ಮರೆತುಬಿಟ್ಟಂತೆ ತೋರುತ್ತಿತ್ತು.

"ನಾವ್ ಬೆಕ್ಕಿಗೆ ಬಣ್ಣ ಬಳಿಯುವಾ" ಎಂಬ ಸೂಚನೆಯನ್ನು ಝಾಂಝುಬ್ರಿನ್‌ನೇ ಮೊದಲು ಮಂಡಿಸಿದ. ತಾನು ಮನೋರಂಜನೆಯ ಹೊಸ ಹಾದಿ ತೋರುತ್ತಿರುವೆನೆಂದು ಅವನ ವಿಚಾರ. ಅದರೊಡನೆ ಒಂದು ತರದ ಚಿನ್ನಪದ ದನಿಯೂ ಅವನ ಮಾತಿನಲ್ಲಿ ಕೂಡಿಕೊಂಡಿತ್ತು.

ಮಂಡಲಿಯಲ್ಲಿ ಗೊಂದಲವಾಯಿತು:

"ಅದರ ಹಾಗೆ ಮಾಡುವುದರಿಂದ ಅದು ಸಾಯಲಿಕ್ಕಿಲ್ಲವೆ?"

"ಪಾಪ! ಮೂಕ ಪ್ರಾಣಿಗೆ ಬಣ್ಣ ಬಳಿಯುತ್ತಾನಂತೆ! ದಾರೇವಾ!"

"ಜೀವಂತ ಪ್ರಾಣಿಗೆ ಬಣ್ಣ ಬಳಿಯುವುದೇ? ಝಾಂಝುಬ್ರಿನ್! ವಿಚಿತ್ರ!"

"ನನಗೆ ಖಂಡಿತ ಮೋಜಾಗಿ ಕಂಡೀತು" ಯಾವನೋ ಒಬ್ಬ ಝಾಂಝುಬ್ರಿನ್‌ನಿಗೆ ಉತ್ತೇಜನ ಕೊಟ್ಟ.

ಬೆಕ್ಕು ಝಾಂಝುಬ್ರಿನ್‌ನ ಕೈಯೊಳಗಿತ್ತು. ಇಷ್ಟರೊಳಗೆ ಬಣ್ಣದ ಬಾರ್ಡಿಯ ವರೆಗೂ ಅದನ್ನು ತಕ್ಕೊಂಡು ಹೋಗಿದ್ದ. ಮುಂಜಯೇ ಅವನದು ಉಲ್ಲಾಸದ ವೃತ್ತಿ. ಮತ್ತೆ ಈ ಹೊಸ ಮನೋರಂಜನ ಕಾರ್ಯ! ಮೆಲ್ಲಗೆ ಹಾಡುತ್ತಾ ಮುಂದುವರಿದ. ಅವನ ಹಾಡನ್ನು ಕೇಳಿದವರಿಗೆ ನಗು ಉಮ್ಮಳಿಸಿ ಬಂತು. ಈ ರೀತಿ ಎಲ್ಲರೂ ನಗುತ್ತಿದ್ದಾಗಲೇ ಅವನು ಆ ಬೆಕ್ಕನ್ನು ಬಾಲ ಹಿಡಿದು ಬಣ್ಣದಲ್ಲಿ ಮುಳುಗಿಸಿ ತೆಗೆದಿದ್ದ.

ಈಗ ಅವನು ಕುಣಿಯುತ್ತ ಸುತ್ತಲೂ ತಿರುಗಹತ್ತಿದ. ಹಾಡು ನಡೆದೇ ಇತ್ತು. ಇದೀಗ ದನಿ ದೊಡ್ಡದಾಗಿತ್ತು.

ಮಂಡಲಿಯೆಲ್ಲ ನಸುತ್ತಲೇ ಇತ್ತು. ಕ್ಷಣಕ್ಷಣಕ್ಕೆ ನಗುವಿನ ಸದ್ದು ಹೆಚ್ಚುತ್ತಲೇ ಇತ್ತು. ನಗು ತಡೆಯಲಾರದೆ ಹಲವು ಜನರು ನೆಲದ ಮೇಲೆ ಉರುಳಾಡತೊಡದರು. ಮತ್ತೆ ಕೆಲವರು ನಗು ತಡೆಯಲು ಟಾವೇಲು ಹಿಡಿದು ಬೇರೆ ಕಡೆಗೆ ನೋಡಹತ್ತಿದರು.

ಝಾಂಝುಬ್ರಿನ್‌ನಿಗೆ ಸ್ವಂತದ ಎಚ್ಚರವೇ ಇರಲಿಲ್ಲ. 'ಜನರ ನಿರರ್ಥಕ ನಗುವಿಗೆ ತಾನೇ ಮೂಲ' ಎಂಬುದನ್ನು ಅವನು ಅರಿತಿದ್ದ. ಅವನ ರೋಮ-ರೋಮಗಳಿಂದ ವಿಜಯೋನ್ಮಾದ ಹೊರ ಸೂಸುತ್ತಿತ್ತು. ಜನರ ಮನದ ಮೇಲೆ ತನ್ನ ಪ್ರಭಾವ ಚೆನ್ನಾಗಿ ಬಿದ್ದಿದೆ ಎಂಬುದನ್ನು ಮರೆತಿರಲಿಲ್ಲ ಅವನು. ಅತನ ಕುಣಿತ ಮತ್ತು ಹಾಡಿಗೆ ತಡೆಯಿರಲಿಲ್ಲ; ಓತಿಯಿರಲಿಲ್ಲ. ಆ ಆವಾರದೊಳಗಿನ ಜರಾಚರ ವಸ್ತುಗಳೆಲ್ಲ ನಗುವಂತೆ ಭಾಸವಾಗುತ್ತಿತ್ತು. ಹೆಂಗುಸರ ವಿಭಾಗದಿಂದ ಅವರು ಕೂಡ ಇಣಕಿ ನೋಡುತ್ತಿದ್ದರು. ನಿರಂತರವಾದ ಜಡ, ಉದಾಸೀನ, ಪಾರುಣ, ಯಾತನಾಮಯ ಜೀವನವೂ ಕೆಲವು ಕ್ಷಣ ಮರೆಯಾಗಿತ್ತು.

ಜೈಲಿನ ಒಳ ಅಂಗಳದಲ್ಲಿಯೆ ತುಸು ಹಸಿರು ಹುಲ್ಲು ಬೆಳೆದು ಕೊಂಡಿತ್ತು. ಅದರ ಮೇಲೆ ಆ ಬೆಕ್ಕನ್ನು ಇರಿಸಿದ. ದಣಿವಿನ ಮೂಲಕ, ಹಣೆಯ ಮೇಲೆಲ್ಲ ಬೆವರ ಹನಿಗಳು ಮಿನುಗುತ್ತಿದ್ದುವು. ಆದರೆ ಅವನು ತನ್ನ ಉನ್ಮಾದಕ ಕುಣಿತ ಮುಗಿಸಲೆ ಇಲ್ಲ.

ಆದರೆ ನಗುವಿನ ಜೋರು ತುಸು ಕಡಿಮೆಯಾಗಿತ್ತು; ಎಲ್ಲಾ ವಿಚಿತ್ರವಾಗಿ ತೋರುತ್ತಿತ್ತು. ಜನರಿಗೆಲ್ಲ ಬೇಸರು ಬಂದಿತು. ನಡುನಡುವೆ ಇನ್ನೂ ಒಬ್ಬೊಬ್ಬರಿಗೆ ನೆನಪಾಗಿ ತಿರುಗಿ ನಗೆಗೆ ಸುರುವಾಗುತ್ತಿತ್ತು. ನಿದಾನವಾಗಿ ಎಲ್ಲರೂ ಸುಮ್ಮಗಾದರು. ಪಾಪ! ಬೆಕ್ಕು ಮಾತ್ರ ಹುಲ್ಲಿನ ಮೇಲೆ ಬಿದ್ದು ಚಡಪಡಿಸುತ್ತಿತ್ತು. ಮಲ್ಲಿಗೆಯಲ್ಲ ಬೆಕ್ಕು ಇದೆಯೆನ್ನಲೂ ಬರುತ್ತಿರಲಿಲ್ಲ; ಅಷ್ಟು ಸಮನಾದ ಬಣ್ಣ ಬಂದಿತ್ತು ಬೆಕ್ಕಿಗೆ. ಬೆಕ್ಕಿನ ಕಣ್ಣಲ್ಲಿ ಬಣ್ಣ ಬಿದ್ದುದರಿಂದ ಅದಕ್ಕೆ ಕಣ್ಣು ಕಾಣಿಸುತ್ತಿರಲಿಲ್ಲ. ಅದರ ಜಲನ-ವಲನವೆಲ್ಲ ಸ್ತಬ್ಧವಾಗಿತ್ತು. ಕಾಲುಗಳೆಲ್ಲ ಥರಥರನೆ ನಡುಗು-

ತ್ತಿದ್ದುವು; ನೆಲಕ್ಕೆ ಗಟ್ಟಿಯಾಗಿ ಹತ್ತಿಕೊಂಡಿದ್ದುವು. ಮೇಲಿಂದ ಮೇಲೆ 'ಮಿಯಾಂವ್ ಮಿಯಾಂವ್' ಎಂದು ಕಿರುಚುತ್ತಲೇ ಇತ್ತು. ಪಾಪ!

"ನಿಜವಾಗಿಯೂ ಬೇಟೆಯ ನಾಯಿಯಾಯಿತೀಗ" ಯಾರೋ ನುಡಿದರು.

ಜನರೆಲ್ಲ ಉತ್ಸುಕತೆಯಿಂದ ಅತ್ತಲೇ ನೋಡಹತ್ತಿದರು.

"ನಾಯುವ ವರೆಗೂ ಹೀಗೆ ಹಸಿರಾಗಿಯೇ ಉಳಿಯುವುದೇ ಇದು?" ಒಬ್ಬ ಕೇಳಿದ.

"ಇದೀ ಜನ್ಮ! ಎಷ್ಟು ಹೊತ್ತು ಬದುಕಿ ಉಳಿದೀತೋ ಅದೇ ಸಂಶಯ! ಸಾವಿನ ಛಾಯೆ ಈಗಲೇ ಬೀಳಲಿಕ್ಕೆ ಪ್ರಾರಂಭವಾಗಿದೆ ಅದರ ಮೇಲೆ!" ಒಬ್ಬ ಮುದಿ ಕೈದಿಯು ನುಡಿದ.

ಬೆಕ್ಕು ನಡುಗುತ್ತಲೇ ಇದ್ದಿತು. ಕೈದಿಗಳ ಭಾವನೆಗಳೆಲ್ಲ ಒದ. ಲಾಯಿಸುತ್ತಲೇ ಇದ್ದುವು.

"ಹಾಗಾದರೆ ಖಂಡಿತ ಸಾಯುವುದು!"

ಯಾರೂ ತಿರುಗಿ ಮಾತನಾಡಲಿಲ್ಲ. ಅವನು ಆ ಬೆಕ್ಕನ್ನು ತನ್ನ ಬಳಿ ಇರಿಸಿಕೊಂಡು ಕನಿಕರದಿಂದ ನೋಡತೊಡಗಿದ.

"ಹುಶ್, ಸಾಕಾಯಿತಪ್ಪಾ" ಎಂದು ರೂಯಾಂಝುಬ್ರಿನ್ ನೆಲದ ಮೇಲೆ ಒರಗಿದ. ಆದರೆ ಒಂದು ರವದಪ್ಪಾದರೂ ಯಾರೂ ಅತ್ತ ಕಡೆಗೆ ಲಕ್ಷ್ಯಕೊಡಲಿಲ್ಲ. ಒಬ್ಬ ತರುಣನು ಆ ಬೆಕ್ಕನ್ನು ಎತ್ತಿಕೊಂಡ; ಆದರೆ ತಿರುಗಿ ಅಲ್ಲಿಯೇ ಇಟ್ಟ. ದೇಹವೆಲ್ಲ ಉರಿಯುತ್ತಿರಬೇಕು: ಪಾಪ! ಇನ್ನು ಹೆಚ್ಚು ವೇಳೆ ಬದುಕುವ ಆಶೆಯಿರಲಿಲ್ಲ. "ಏನಪ್ಪಾ ಆ ಮೂಕ ಪ್ರಾಣಿಗೆ ಬಣ್ಣ ಬಳಿದು ನಿನಗೇನು ಸಿಕ್ಕಿತಪ್ಪಾ" ಎಂದು ಆ ತರುಣ ಕೇಳಿದ.

"ತಡೆಯಿರಿ; ಏನೋ ತುಸು ಸುಧಾರಿಸಿದಂತೆ ತೋರುತ್ತದೆ!" ಇನ್ನೊಬ್ಬ ಆಶೆ ತೋರಿಸಿದ.

ಇನ್ನೂ ಆ ಬೆಕ್ಕು ಚಡಪಡಿಸುತ್ತಲೇ ಇದ್ದಿತು. ೪೦ ಜನರ ಲಕ್ಷ್ಯವೆಲ್ಲ ಒಂದು ಬೆಕ್ಕಿನ ಕಡೆಗೆ ನೆಲೆದಿತ್ತು. ಒಬ್ಬರ ಮುಖದ ಮೇಲೂ ಹಾಸ್ಯದ ಗೆರೆಯೂ ಇರಲಿಲ್ಲ. ಬೆಕ್ಕಿಗೆ ಆಗುವ ಯಾತನೆಗಳೆಲ್ಲ ಅವರ ಮುಖದ ಮೇಲೆ ಮೂಡುತ್ತಿದ್ದುವು.

"ಸುಧಾರಿಸಿತಂತೆ: ಪಾಪ! ಸಾಯಲಿಕ್ಕೆ ಬಿದ್ದಿದೆ. ನಮಗೊಂದು ಜೀವಾಧಾರದ ಆಟದ ಪ್ರಾಣಿಯಾಗಿತ್ತು. ನಾವೇಕೆ ಅದಕ್ಕೆ ದುಃಖಿಸಿಕೊಳ್ಳಬೇಕಿತ್ತು? ಈಗ ಅದರ ವಿಷಯ ಮಾಡಲು ಯಾರಿಂದಲೂ ಸಾಧ್ಯವೇ ಇಲ್ಲವೆ?" ಎಂದೊಬ್ಬ ತುಂಬಾ ಕನಿಕರದಿಂದ ನುಡಿದ.

"ಮತ್ತೆ ಇದಕ್ಕೆಲ್ಲ ಕಾರಣ, ಅದೋ ನೋಡಿ— ಅವನು. ನೋಜುನೋಜುಟ್ಟಿದ್ದಾನೆ!" ಎಂದ ಇನ್ನೊಬ್ಬ.

"ನನ್ನೊಬ್ಬನನ್ನೇ ಯಾಕೆ ದೂರುತ್ತೀರಿ ನೀವು? ನೀವೆಲ್ಲರೂ ಸಹಾಯ ಕೊಡಲಿಲ್ಲವೆ?" ಎಂದು ಶಾಂತನಂತೆ ಸಂಧಾನಕ್ಕೆ ನಿಂತ ರೂಯಾಂಝುಬ್ರಿನ್.

"ಕೇಳಿರೋ ಕೇಳಿ. ಎಲ್ಲರೂ ಕಬೂಲಿ ಕೊಟ್ಟರಂತೆ! ನಾನು ಖಂಡಿತ ಬೇಡವೆಂದಿದ್ದೆ. ಆದರೆ ನಿನಗೆ ಅದರ ಕಡೆಗೆ ಲಕ್ಷ್ಯವೆಲ್ಲಿ? ಇದರ ಪಾಪವೆಲ್ಲ ನಿನ್ನ ಹಣೆಯ ಮೇಲಿದೆ ನೋಡು!" ಒಬ್ಬ ತರುಣ ಕೂಗಿಕೊಂಡ.

"ದಯೆಮಾಡಿ ಹೀಗೆ ಕೂಗಬೇಡಪ್ಪಾ" ರೂಯಾಂಝುಬ್ರಿನ್‌ನ ಧನಿಯಲ್ಲಿ ಮಾರ್ದವತೆ ಇದ್ದಿತು. ಒಬ್ಬ ಮುದುಕ ಆ ಬೆಕ್ಕನ್ನು ಎತ್ತಿಕೊಂಡ. "ನೀವೆಯೆಣ್ಣೆಯಲ್ಲಿ ಮುಳುಗಿಸಿ ತೆಗೆದರೆ ಬಣ್ಣ ಹೋದೀತೋ ಏನೋ!" ಎಂದು ಅವನು ತನ್ನ ಮತವನ್ನು ಪ್ರದರ್ಶಿಸಿದ.

"ನನ್ನ ಮಾತನ್ನು ಕೇಳುವುದಾದರೆ, ಜಾಲವನ್ನು ಹಿಡಿದು ಗೋಡೆಗೆ ಬಡಿಯಿರಿ; ಎಂದರೆ ಬಣ್ಣವೆಲ್ಲ ಗೋಡೆಗೆ ಹತ್ತಿಕೊಳ್ಳುವುದು. ಇದು ಸುಲಭ ಮತ್ತು ಖಾತ್ರಿಯ ಉಪಾಯ ನೋಡಿ!" ನಗುತ್ತ ರೂಯಾಂಝುಬ್ರಿನ್‌ನು ನಡುವೆಯೆ ಬಾಯಿಹಾಕಿದ.

"ಸೈತಾನ, ಇಲ್ಲಿದ್ದರೆ?" ಮುದುಕನ ಕೈಯಿಂದ ಬೆಕ್ಕನ್ನು ಎಗೆದುಕೊಂಡು ಒಬ್ಬ ತರುಣ ಓಡಿಹೋದ. ಮುದುಕ ಮತ್ತು ಇತರರು ಅವನ ಜೊತ್ತು ಹತ್ತಿದರು. ಉಳಿದ ಮಂಡಲಿಯೆಲ್ಲ ರೂಯಾಂಝುಬ್ರಿನ್‌ನ ಸುತ್ತಲೂ ನೆರೆದಿತ್ತು. ಅವರ ಕಣ್ಣಲ್ಲಿ ದ್ವೇಷ ತುಂಬಿತ್ತು. ಆದರೆ ಮಾತನಾಡುವ ಇಚ್ಛೆ ಯಾರಿಗೂ ಇರಲಿಲ್ಲ.

"ಲಕ್ಷ್ಯವಿಲ್ಲದಿರಿ; ಎಲ್ಲ ದೋಷಕ್ಕೂ ನಾನೇ ಹೊಣೆಗಾರನಲ್ಲ," ರೂಯಾಂಝುಬ್ರಿನ್ ಗುಡುಗಿದ.

"ಜುಪ್! ಒಬ್ಬನ ಕಡೆಗೆ ಅಲ್ಲದಿದ್ದರೆ, ಇನ್ನಾರು ಸಂಗಡಿಗರು ಇದ್ದರು ನಿನಗೆ?"

"ಹೀಗೇಕೆನ್ನುತ್ತೀರಪ್ಪಾ? ನಿಮ್ಮಲ್ಲಿ ಪ್ರತಿಯೊಬ್ಬರೂ ನನಗೆ ಉತ್ತೇಜನ ಕೊಡಲಿಲ್ಲವೇ?" ರೂಯಾಂಝುಬ್ರಿನ್ ತುಸು ಭೀತಿಯಿಂದಲೇ ಮಾತು ಮುಗಿಸಿದ.

"ಏನು ಬೊಗಳುತ್ತೀಯದು? ನಾಯಿ, ಜುಪ್!"

ಒಬ್ಬ ರೂಯಾಂಝುಬ್ರಿನ್‌ನ ಹಲ್ಲು ಮುರಿಯಲು ಮುಷ್ಟಿ ಎತ್ತಿದ. ಆದರೆ ಅವನು ಜನಲತೆಯಿಂದ ಕೊರಳು ತಿರುವಿದ. ಅದುದರಿಂದ ಹಲ್ಲು ಉಳಿದುವು, ಒರೆ ಕೆನ್ನೆಗೆ ಏಟು ಬಿತ್ತು.

"ಗೆಳೆಯರೇ" ಅವನು ಕಕ್ಕುಲತೆಯಿಂದ ಪ್ರಾರಂಭಿಸಿದ. ಆದರೆ ಎಲ್ಲರ ಲಕ್ಷ್ಯವೂ ವಾರ್ಡರನ್ನೆಲ್ಲಿದ್ದಾನೆಂದು ನೋಡುವ ಕಡೆಗೆ ಇದ್ದಿತು. ವಾರ್ಡರು ಹತ್ತಿರದಲ್ಲೆಲ್ಲಿಯೂ ಇಲ್ಲವೆಂಬುದನ್ನು ಅರಿತು, ರೂಯಾಂಝುಬ್ರಿನ್‌ನ ಮೇಲೆ ಗುದ್ದು ತುಳಿತದ ಸುರಿಮಳೆಗೈಯಹತ್ತಿದರು. ದೂರದಿಂದ ನೋಡುವವರಿಗೆ ಇದರ ಕಲ್ಪನೆಯೇ ಒರುತ್ತಿರಲಿಲ್ಲ. ಏನಾದರೂ ಮಾತನಾಡಲು ಇದ್ದಿರಬೇಕು ಎಂದವರಿಗೆ ಎನಿಸುತ್ತಿತ್ತು. ರೂಯಾಂಝುಬ್ರಿನ್ [illegible] ಬುಡದಲ್ಲಿ ಬಿದ್ದಿರುತ್ತಿದ್ದ. ಅವನಿಗೆ ಎದ್ದು ನಿಲ್ಲಲು ಕೂಡ ಆಗುತ್ತಿರಲಿಲ್ಲ. ಕೈದಿಗಳ ಕಾಲುಗಳೆಲ್ಲ ವ್ಯವಸ್ಥಿತ ರೀತಿಯಿಂದ ರೂಯಾಂಝುಬ್ರಿನ್‌ನನ್ನು ತುಳಿಯುತ್ತಿದ್ದುವು.

ಎರಡು ಮೂರು ನಿಮಿಷ ಈ ರೀತಿ ಕಳೆದಿರಬಹುದು. ಒಮ್ಮೆಲೆ ವಾರ್ಡರನ ಕೂಗು ಕೇಳಿಸಿತು. ಝಾಂಝುಬ್ರಿನ್‌ನಿಗೆ ಕಡೆಯ ಲತ್ತಿಯನ್ನು ಕೊಟ್ಟು ಎಲ್ಲರೂ ಅಲ್ಲಿಂದ ಹೋದರು.

ಆ ಆವಾರದಲ್ಲಿ ಇನ್ನು ಯಾರೂ ಉಳಿಯಲಿಲ್ಲ; ಬರೀ ಝಾಂಝುಬ್ರಿನ್ ಮಾತ್ರ. ಅದೇ ಸ್ಥಿತಿಯಲ್ಲಿ ನೆಲದ ಮೇಲೆ ಬಿದ್ದುಕೊಂಡಲ್ಲೇ ನರಳುತ್ತಿದ್ದ. ಅವನನ್ನು ಪೆನ್ಸಿಲಿಯಿಂದ ತುಳಿದದ್ದರಿಂದ ತುಸು ತ್ರಾಸವಾಗಿತ್ತು. ಅವನು ನಡು-ನಡುವೆ ಅಳುತ್ತಿರಬೇಕು. ಮುಖದಲ್ಲಿ ಆಗಾಗ ಕೆಮ್ಮು ಬರುತ್ತಿತ್ತು. ನಿಧಾನವಾಗಿ ಎಡಗೈಯ ಮೇಲೆ ಭಾರಹಾಕಿ ಎದ್ದು ಕುಳಿತನು. ತಾನು ತೂಕತಪ್ಪಿ ಬೀಳಬಹುದೆಂಬ ಭೀತಿ ಅವನಿಗಿದ್ದಿತು. ಹಸಿದ ನಾಯಿಯಂತೆ ಉಬ್ಬಸ ಪಡುತ್ತಿದ್ದ.

"ನಮ್ಮನ್ನೆ ನಟನೆ ಮಾಡಬೇಡ" ಒಬ್ಬ ದರ್ಪದಿಂದ ಕೂಗಿದ. ಝಾಂಝುಬ್ರಿನ್‌ನು ತನ್ನ ಶಕ್ತಿಯೆಲ್ಲವನ್ನೂ ಸಂಪಾದಿಸಿ, ಸಾವಕಾಶವಾಗಿ ತನ್ನ ಕಾಲಮೇಲೆ ಎದ್ದುನಿಂತ. ಅವನ ಕೈಯೊಂದು ಎದೆಯಮೇಲಿದ್ದಿತು; ತನ್ನ ಭಾರ ಸಂಭಾಳಿಸಿಕೊಳ್ಳುವದಕ್ಕೆ ಮತ್ತೊಂದು ಕೈಯನ್ನು ಚಾಚಿ ಹೇಗೋ ಗೋಡೆಯ ಸಹಾಯಕ್ಕೆ ಪ್ರಯತ್ನ ಜೋರಾಗಿ ಕೆಮ್ಮುತ್ತಿದ್ದ. ಅವನು ನೆಲದ ಕಡೆ ತಲೆ ಹಾಕಿದ.

ಕೆಲಸಾವ ಜನಿಗಳು ಉದುರುತ್ತಿದ್ದುವು. ಬಿಸಿಲಿನಲ್ಲಿ ಚಕಚಕಿಸುತ್ತಿದ್ದುವು.

ಜನಿಗಳು ಗೋಡೆಯ ಮೇಲೆ ಬಿದ್ದು ಸರಕಾರಿ ಸ್ಥಳವಾಗಿರಬಾರದೆಂದು, ತನ್ನ ಮಸ್ತಕವನ್ನು ನೆಲಕ್ಕೆ ಬಡಿದ; ಕೈಯಿಂದ ಜನಿಗಳನ್ನು ಗೋಡೆಯ ಬದಿಗೆ ತೆಗೆದುಕೊಂಡಿದ್ದ.

ಉಳಿದ ಮುಂಡಲಿಯಲ್ಲಿ ಎದುರಿಗೆ ನಿಂತು ಕುಚೇಷ್ಟೆ ಮಾಡುತ್ತಿತ್ತು.

ಇದರ ನಂತರ ಬೆಕ್ಕು ಮಾತ್ರ ಆ ಆವಾರದಲ್ಲಿ ಕಾಣಿಸಲಿಲ್ಲ. ಮತ್ತು ಝಾಂಝುಬ್ರಿನ್‌ನಿಗೆ ಇನ್ನಾರೂ ಎದುರಾಳಿಗಳು ಉಳಿಯಲಿಲ್ಲ. ಕೈದಿಗಳನ್ನು ಆಕರ್ಷಿಸುವ ವ್ಯಕ್ತಿಯೆಂದರೆ ಆವನೇ ಅದ.

(೧೬೪ನೆಯ ಪುಟದಿಂದ ಮುಂದುವರಿದುದು)

ರಿಂದಲೇ 'ಹತ್ತಿದರೆ ಒಳ್ಳೇ ಟಾಂಗೆಯಲ್ಲಿ, ಇಲ್ಲದಿದ್ದರೆ ಇಲ್ಲವೇ ಇಲ್ಲ' ಎಂದು ನಿರ್ಧರಿಸಬಾರದೆನಿಸುವುದು. ಮುಖ್ಯವಾಗಿ ಅಂದಿನ ಘಟನೆ ನಡೆದಿರದಿದ್ದರೆ ಸಂತೆಪೇಟೆಯ ಯಂತ್ರಮಯ ಪ್ರಪಂಚದಲ್ಲಿ, ವೈವಿಧ್ಯದ ಸೊಗಸು ಹೇಗೆ ತಾನೇ ಹೊರಹೊಮ್ಮುತ್ತಿತ್ತು? ನಾನು ಮೇಲು ನೀನು ಕೀಳೆಂಬ ಕಲ್ಪನೆಯಿಂದ ಇಳಿವಯಸ್ಸು ತಂದುಕೊಳ್ಳುವ ಕೆಲ ವಿದ್ಯಾವಂತರಿಗೆ, ಕ್ಷಣಕಾಲವಾದರೂ ಸರಿಸಮಾನಸ್ಕಂದತೆಯಿಂದ ೧೫-೨೦ ನಿಮಿಷ ಮೈಮರೆತು ಹರಟೆ ಹೊಡೆಯಲು, ಕೋಲಾಹಲವೆಬ್ಬಿಸಲು ಅವಕಾಶ ಕಲ್ಪಿಸಿಕೊಟ್ಟ ಈ ಸಂಗತಿ ಸಾಮಾನ್ಯವೇ? ಕತ್ತೆಗಳಿಗೆ ಸರಿಎನಿಸಬಹುದಾದ— ರೂಪದಲ್ಲಿ ಹಾಗೂ ವೇಗದಲ್ಲಿ— ಕೆಲ ಕುದುರೆಗಳು, ಆಟದ ಗೊಂಬೆಯಂತಹ ಕೆಲವು ಟಾಂಗೆಗಳು, ಮೈಮುರಿದು ಪ್ರಾಮಾಣಿಕ ರೀತಿಯಿಂದ ದುಡಿಯುವ ಹಲವು ಪಂಗಡಗಳು ಇರುವವಲ್ಲ- ಎಂಬ ಕಲ್ಪನೆ ನನಗೆ ಬಂದುದನ್ನು ಕಡೆಗಣಿಸಬೇಕೇ? ಶಾರೀರಿಕ ಶ್ರಮದಿಂದ ಹೊಟ್ಟೆ ಹೊರೆದುಕೊಳ್ಳುವವರನ್ನು ದಲಿತರೆಂಬ ವಿಭಾಗ ನಿರ್ಮಿಸಿ ಸಮಾಜದಲ್ಲಿ ಅಪಹಾಸ್ಯಕ್ಕೀಡುಮಾಡುವ ಸಿರಿವಂತರ ಹೇಡಿತನವೂ ಈ ಘಟನೆಯಿಂದಲೆ ಹೊಳೆಯಿತಲ್ಲವೇ?

ಆ ದಿನ ಅಷ್ಟೊಂದು ಲಗುಬಗೆಯಿಂದ ಹೋಗುವಷ್ಟು ಅತಿ ಮಹತ್ವದ ಯಾವ ಕಾರ್ಯದ ಒತ್ತಡವಿರಲಿಲ್ಲ. ಯಾರ ಸಂದರ್ಶನದ ಆವಶ್ಯಕತೆ ಇದ್ದಿಲ್ಲ. ಹಣಗಳಿಸುವ ಯಾವ ಯೋಗವೂ ಇದ್ದಿಲ್ಲ. ಹಾಸ್ಯದ ಹೊನಲಿನಲ್ಲಿ ಹಾಸುಹೊಕ್ಕಾದ ಜನರ ಮಾತುಗಳೂ ನನಗೆ ಯಾವ ಅನ್ಯಾಯ ಹಾನಿ ಉಂಟು ಮಾಡಲಿಲ್ಲ. ಹೆಚ್ಚಾಗಿ ಮೇಳೆಗೆ ಸರಿಯಾಗಿಯೆ ಶಾಲೆಯಲ್ಲಿ ಕಾಲಿಟ್ಟು, ಎಂದಿನಂತೆ ಅದೇ ಉತ್ಸಾಹದಿಂದ ಕೆಲಸದಲ್ಲಿ ತೊಡಗಿದೆ. ಆದರೆ ಆ ದಿನದ— ಕಣ್ಮುಟ್ಟ ಕಟ್ಟಿದಂತಿರುವ— ಜನತೆಯ ರಂಜನೆ, ದಲಿತರ ಸಮಸ್ಯೆ, ಪ್ರಾಮಾಣಿಕ ದುಡಿತ, ಸಿರಿವಂತರ ಅಲಕ್ಷ್ಯ, ಕೀಳು-ಮೇಲೆಂಬ ಭೇದಭಾವ ಮೊದಲಾದ ಸಮಸ್ಯೆಗಳ ಮುಖಾಂತರ ಉಂಟಾದ ಪ್ರಪಂಚಪರಿಚಯವನ್ನು ಮರೆಯಬಹುದೇ?

ಸುಶಿಕ್ಷಿತರ ವಸತಿ

☆

ಒಮ್ಮೆ ಒಂದು ಉಗಿಹಡಗ ಬಿರುಗಾಳಿಗೆಸಿಕ್ಕಿ ಮುಳುಗಿಹೋಯಿತು. ಒಬ್ಬನೇ ಒಬ್ಬ ನಾವಿಕ ಹೇಗೋ ಬದುಕಿಕೊಂಡ. ಈಜುತ್ತ ಈಜುತ್ತ ಒಂದು ನಡುಗಡ್ಡೆಗೆ ಹೋಗಿ ಹತ್ತಿಕೊಂಡ. ಅಜ್ಞಾತಪ್ರದೇಶವದು. 'ನಂಥಕ್ಷುಕರಾದ ಕಾಡು ಜನರು ಈ ಪ್ರದೇಶದಲ್ಲಿರಬಹುದೇನೋ' ಎಂದು ಆ ನಾವಿಕ ಪಚ್ಚೆ ಬಿದರಿ ಅಲ್ಲಿ ಇಲ್ಲಿ ಅಡಿಯಾಡುತ್ತಲಿದ್ದ. ಅಷ್ಟರಲ್ಲಿಯೆ ಯಾವುದೋ ಒಂದು ಶಬ್ದ ಕೇಳಿಸಿದಂತಾಗಲು, ನಾವಿಕ ಬಂಡೆಯೊಂದರ ಮರೆಯಲ್ಲಿ ಅಡಗಿ ಕುಳಿತ.

'ಎಲೆ, ಬದ್ಮಾಷ, ನೀನು ಈ ರೀತಿ ಕತ್ತೆಯಂತೆ ವರ್ತಿಸುತ್ತೀ ಎಂದು ನನಗೆ ಕಲ್ಪನೆಯಿರಲಿಲ್ಲ!' ಎಂದು ಯಾರೋ ಕೂಗಿ ಬೈಗುಳ ನುಡಿದರು.

'ಹಾಗಾದರೆ (ಇಲ್ಲಿಯೂ ಸುಶಿಕ್ಷಿತ ಜನರ ವಸತಿ ಇದೆ ಎಂದ ಹಾಗಾಯಿತು; ಇನ್ನು ಮೇಲೆ ನನಗೆ ಯಾವ ಹೆದರಿಕೆಯೂ ಇಲ್ಲ' ಎಂದು ನಾವಿಕ ತನ್ನಲ್ಲಿ ತಾನೇ ನುಡಿದುಕೊಂಡ.

ಸೋಯಾಬೀನ್

ಶ್ರೀ. ವಿ ಸಿ. ಹಿಪ್ಪಲಿಮನೆ
ಒಕ್ಕಲುತನ ಕಾಲೇಜ್, ಪುಣೆ

★

ಧಾನ್ಯದ ಗುಣ, ಹೈನದ ಗುಣ ಎರಡನ್ನೂ ಒಳಗೊಂಡ ಈ ಪರದೇಶೀಯ ಆಹಾರಧಾನ್ಯ, ಭಾರತಕ್ಕೆ ಹೊಸತಾಗಿ ಬಂದಿದೆ. ಇದನ್ನು ಎಲ್ಲೆಲ್ಲಿಯೂ ಬೆಳಸಿ ನಾವಿಂದು ಪ್ರಯೋಜನ ಪಡೆಯಬೇಕಾಗಿದೆ.

★

ಇಂದಿನ ಜಗತ್ತಿನಲ್ಲಿ ಒಬ್ಬರಿಗೊಬ್ಬರು ತೀರ ಪರಿಚಯದವರಾಗಿ ಬಿಟ್ಟಿದ್ದಾರೆ; ಉತ್ತರ-ದಕ್ಷಿಣದವರಲ್ಲಿಯೂ ಬಳಕೆ ನಡೆದಿದೆ. ಒಂದು ದೇಶದವರ ನಡೆ-ನುಡಿ; ಉಡಿಗೆ-ತೊಡಿಗೆ; ಆಚಾರ-ವಿಚಾರ; ಬೆಳೆ-ಆಹಾರ; ಸಾಧನ-ಸಲಕರಣಿಗಳು ಇನ್ನೊಂದು ದೇಶದವರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಈ ಮಾತಿನ ಸತ್ಯತೆಯು, ಎಷ್ಟೋ ಬೆಳೆಗಳ ಚರಿತ್ರೆಗಳಲ್ಲಿಯೂ ಕಂಡು ಬರುತ್ತದೆ. ಇಂದು ನಮ್ಮಲ್ಲಿ ಹಲವಾರು ಬೆಳೆಗಳನ್ನು ಬೆಳೆಯುತ್ತೀವೆ; ಅವೆಲ್ಲವುಗಳ ಹುಟ್ಟುನೆಲ ಭಾರತವೇ ಆಗಿಲ್ಲ. ಎಷ್ಟೋ ಬೆಳೆಗಳು ಹೊರಗಿನಿಂದ ಬಂದಿವೆ. ಹಲವು ಸಂಶೋಧನೆಗಳ ಪರಿಣಾಮವಾಗಿ ತಮ್ಮ ಮೂಲಸ್ಥಿತಿಗಳಲ್ಲಿ ಬದಲಾವಣೆ ಹೊಂದಿವೆ. ಹೊರಗಿನಿಂದ ಬಂದ ಎಷ್ಟೋ ಬೆಳೆಗಳ ಚರಿತ್ರೆಗಳು ಆದ್ಭುತವಾಗಿವೆ. ನಾವು ಬೇಕೆಂದೇ ತಂದುವು ಕೆಲವು; ನಮಗೆ ಬೇಡವಾಗಿದ್ದರೂ ಬಂದುವು ಹಲವು. ತಂಬಾಕು, ಆಲೂಗಡ್ಡೆ, ಕ್ಯಾಬೇಜು, ನವಲುಕೋಲು, ಬೀಟಗಡ್ಡೆ, ಸೋಯಾಬೀನ್ ಇತ್ಯಾದಿಗಳನ್ನು ಬುದ್ಧಿಪೂರ್ವಕವಾಗಿ ಬೇಕಾಗಿಯೆ ತಂದಿದ್ದಾರೆ. ಆದರೆ ನಿರುಪಯುಕ್ತವಾಗಿ ಪ್ರಗತಿಗೆ ಕಾಲ್ತೊಡಕಾದ ಹಲವು ಜಾತಿಯ ಹುಲ್ಲಿನ ಮತ್ತು ಕಸಗಳ (Grasses and weeds) ಬೀಜಗಳು, ಹೊರನಾಡಿನಿಂದ ಬರುವ ಪ್ಯಾಕುಗಳಲ್ಲಿ ತುಂಬಿದ ಹುಲ್ಲು-ಕಸಗಳೊಂದಿಗೆ ಬಂದು ಸೇರಿವೆ. ಇನ್ನೂ ಎಷ್ಟೋ ಪಶುಪಕ್ಷಿ, ಗಾಳಿ-ನೀರುಗಳೊಂದಿಗೆ ಸಾಗಿಬಂದು ನಮ್ಮಲ್ಲಿ ಪಸರಿಸಿವೆ. ಹೊರಗಿನಿಂದ ನಮ್ಮಲ್ಲಿ ಬಂದುವುಗಳಲ್ಲಿ ಕೆಲವು ನಮಗೆ ಅತ್ಯುಪಯುಕ್ತವಾಗಿವೆ. ಅವುಗಳಲ್ಲಿ ಶೀತ್ಯ-ಸ್ಥಾನ ಸೋಯಾಬೀನಿಗೆ ಸಲ್ಲುತ್ತದೆ. ಹಲವಾರು ರೀತಿಯಲ್ಲಿ ಉಪಯೋಗ ಬೀಳುತ್ತಿದ್ದ ಬೆಳೆಗೇ ಇಂದು ಪುಷ್ಕತ್ಯವಿದೆ. ಸೋಯಾಬೀನು ಇಂದು ಅಸಂಖ್ಯಾತ ಜನರಿಗೆ ಬೇಳೆಯ ಕಾಳಾಗಿದೆ; ಕೋಟ್ಯವಧಿ ಜನರಿಗೆ ಎಣ್ಣೆಯ ಕಾಳಾಗಿದೆ; ಲಕ್ಷಾವಧಿ ಜನರಿಗೆ ಕೃತಕ ಹಾಲು ಹುಟ್ಟಿಸುವ ಕಚ್ಚಾ ಪೂಲಾಗಿದೆ.

ಸೋಯಾಬೀನಿನ ಹುಟ್ಟುನೆಲ ಪೂರ್ವ 'ಏಸಿಯಾ' ಎಂದು ಹೇಳುತ್ತಾರೆ. ಸಾವಿರಾರು ವರ್ಷಗಳಿಂದಲೂ ಚೀನಾ, ಕೋರಿಯಾ, ಜಪಾನು, ಜಾವಾ ಇತ್ಯಾದಿ ದೇಶಗಳಲ್ಲಿ ಇದು ಬೆಳೆಯುತ್ತಿದೆ ಎಂಬುದನ್ನು ಅಲ್ಲಿನ ಅನೇಕ ವಿದ್ವಾಂಸರು ಸೋಯಾಬೀನುಗಳನ್ನು ಮುಂಜೂರಿಯಾದಿಂದ ಲಂಡನ್ನಿಗೆ ಒಯ್ದರು. ಅಲ್ಲಿ ಅದು ಎಣ್ಣೆಯ ಕಾಳೆಂದು ಅತಿ ಪ್ರಸಿದ್ಧವಾಯಿತು. ಅಲ್ಲಿ ಈ ಬೆಳೆಯ ಬಗೆಗೆ ಸಂಶೋಧನೆಗಳು ನಡೆದುವು. ಸಾವಿರಾರು ಎಕರೆ ಭೂಮಿಗಳು ಸೋಯಾ ಬೆಳೆಗೆಂದೇ ಮೀಸಲಾದುವು; ಆದರೂ ಅವರಿಗೆ ಬೇಕಾದ ಪೂರೈಕೆ ತುಂಬಿ ಬರುವ ಲಕ್ಷಣಗಳು ತೋರಿ ಬರಲಿಲ್ಲ. ಕಣ್ಣಾಪೂಲಿನ ಪೂರೈಕೆಯ ದೃಷ್ಟಿಯಿಂದ. ಬ್ರಿಟಿಷರೇ ಮುಂಜೂರಿಯಾದಿಂದ ಬೀಜಗಳನ್ನು ತಂದು ಭಾರತದಲ್ಲಿ ಬೆಳೆಯಿಸಲಿಕ್ಕೆ ಮೊದಲುಮಾಡಿದರು. ಇದು ತೀರ ಇತ್ತೀಚಿನ ಸುದ್ದಿ. ಕಾಲಿರಿಸಿದ ಸ್ವಲ್ಪೇ ದಿನಗಳಲ್ಲಿ ಜನತೆಯ ಅಗತ್ಯಗಳಿಗೆ ಆಸರಾಗಿ ನಿಂತ ಧಾನ್ಯ ಇನ್ನೊಂದಿಲ್ಲ. ಹೊಸ್ತೆ ಹೊಸ್ತೆ ಕೃತಕ ಹಾಲನ್ನು ಸೋಯಾಬೀನುಗಳಿಂದ ಸಿದ್ಧಮಾಡುವ ವಿಧಾನ ತಿಳಿದ ಮೇಲಂತೂ ಇದರ ಪ್ರೇಕ್ಷ ವಿಶ್ವವ್ಯಾಪಕವಾಗಿದೆ ಈ ಬೆಳೆಯನ್ನು ಎಲ್ಲ ದೇಶಗಳವರೂ ಸ್ವಲ್ಪ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಲಿದ್ದಾರೆ. ಜಗತ್ತಿನ ಇಂದಿನ ಜೀವಿಕೆಗಳನ್ನೆಲ್ಲ ಪೂರೈಸುವಷ್ಟು ಕಾಳುಗಳನ್ನು ಅಮೆರಿಕೆ-ಹಿಂದುಸ್ತಾನಗಳೆಡೆಯೇ ಬೆಳೆಯುತ್ತಿವೆ.

'ಸೋಯಾ-ಬೀನ್' ಹೆಸರು ಹೇಗೆ ಬಂದಿತೆಂಬುದು ಖಚಿತವಾಗಿ ತಿಳಿಯುವಂತಿಲ್ಲ. 'ಬೀನ್' (Been) ಎಂದರೆ ಇಂಗ್ಲೀಷಿನಲ್ಲಿ 'ಅವರೆ' ಯೆಂದರ್ಥ. ಇದು ಅವರೆಯ ಜಾತಿಗೆ ಸೇರಿದ ಒಂದು ಗಿಡವು. ಕಾಳುಗಳೂ ಸುಂದಿನಿಸು ದಪ್ಪವಿದ್ದು ದುಮ್ಮಗಳಾಗಿ ನಣ್ಣ ಅವರೆಯ ಬೀಜಗಳನ್ನೇ ಹೋಲುತ್ತವೆ; ಆಂತೆಯೇ ಇವುಗಳಿಗೆ ಸೋಲಿನ ಹೆಸರಿನಿಂದ ಕರೆದಿರಬೇಕು; ಈ ಅವರೆಯ ಜಾತಿಯನ್ನು ಉಳಿದ ಅವರೆಗಳಿಂದ ವಿಂಗಡಿಸುವದಕ್ಕಾಗಿ ಹಿಂದೆ 'ಸೋಯಾ' ಎಂದು ಹುಟ್ಟಿದ್ದಾರೆ 'ಸೋಯಾ' ಎಂದರೆ ಇದೊಂದು ಚೀನಾದೇಶದಲ್ಲಿಯ ಆಹಾರವಾದರ್ಥ. ವಿಶೇಷ. ಇದು ನಮ್ಮ ಸಾರಿನಂತಿರುತ್ತದೆ; ಅನ್ನದೊಂದಿಗೆ ಇದನ್ನು ಉಪಯೋಗಿಸುತ್ತಾರೆ. ಜಪಾನ್ ದೇಶದಲ್ಲಿ 'ನಟ್ಟೊ' (Natto) ಎಂಬ ಮೊಸರಿನಂತಹ ಗಣ್ಣನ್ನು ತಯಾರಿಸುವ ರೂಢಿಯಿದೆ. ಈ ಎರಡನ್ನೂ ಸೋಯಾಬೀನಿನಿಂದಲೇ ಸಿದ್ಧಗೊಳಿಸುವರು. ಆಂತೆಯೇ 'ಸೋಯಾಬೀನ್'ಗಳೆಂಬ ಹೆಸರು ಇದಕ್ಕೆ ಬಂದಿರಬೇಕು.

ದಕ್ಷಿಣ ಹಿಂದುಸ್ತಾನಕ್ಕಿಂತಲೂ ಉತ್ತರಹಿಂದುಸ್ತಾನ ಈ ಬೆಳೆಗೆ ತಕ್ಕುದಾದುದು. ದಕ್ಷಿಣಹಿಂದುಸ್ತಾನದಲ್ಲಿಯೂ ಇದು ಅಲ್ಲಲ್ಲಿ ಬೆಳೆಯುತ್ತವೆ. ಇದು ಮುಂಗಾರಿನ ಬೆಳೆಯು. ನಾಲ್ಕು-ನಾಲ್ಕು ವಾರ ತಿಂಗಳುಗಳಲ್ಲಿ ಬೆಳೆಯು ಬಂದುಬಿಡುತ್ತದೆ. ಮಳೆಯ ನೀರಿನಿಂದಲೇ ಬೆಳೆದುನ್ನು ತಕ್ಕೊಳ್ಳುತ್ತಾರೆ. ನಿತ್ಯವ

ತಿಂಗಳಿನಿಂದ ಆಗಸ್ಟ್ ತಿಂಗಳ ವರೆಗೆ. ಆಗಸ್ಟ್ ತಿಂಗಳಲ್ಲಿ ಬಿತ್ತಿದರೆ, ಬೆಳೆಗೆ ಸುಗ್ಗಿ ಬರುವವರೆಗೆಗಾಗಿ ಒಂದೆರಡು ಸಲ ನೀರು ಹಾಯಿಸಬೇಕಾಗುತ್ತದೆ. ಜಾಸ್ತಿ ಅತಿ ಫಲವತ್ತಾದ ಭೂಮಿಯೇನೂ ಬೇಕಿಲ್ಲ. ಸಾಧಾರಣ ಫಲವತ್ತಾದ ಮಣಿಕಟ್ಟೂ ನಡೆಯುತ್ತದೆ. ಯಾವುದೇ ರಸಗೊಬ್ಬರವನ್ನೂ ಕೊಡಬಹುದು; ಆದರೆ 'ನಾಯಟ್ರೇಟ್ ಆಫ್ ಸೋಡಾ (NaNO$_3$)' ತುಂಬಾ ಯೋಗ್ಯವಾದ ಗೊಬ್ಬರವೆಂದು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ.

ಸೋಯಾಬೀನು 'ಲೆಗುಮಿನೋಸೀ' (Leguminosea) ಜಾತಿಗೆ ಸೇರಿದ ಒಂದು ಬೆಳೆಯು. ಈ ಜಾತಿಗೆ ಸೇರಿದ ಬೆಳೆಗಳು ಭೂಮಿಯ ಸತ್ತ್ವವನ್ನು ಕಾಯ್ದಿಡುವ ದೃಷ್ಟಿಯಲ್ಲಿ ತುಂಬಾ ಮಹತ್ವದವು; ಸಾಧಾರಣವಾಗಿ ಬೆಳೆಗಳು, ತಮ್ಮ ಬೆಳೆಗೆ ಭೂಮಿಯಲ್ಲಿಯ ಸತ್ತ್ವವನ್ನು ಹೀರಿಕೊಂಡು ಭೂಮಿಯನ್ನು ಬರಡಾಗಿ ಮಾಡುತ್ತವೆಂಬುದು ಒಂದು ನಿಸರ್ಗದ ನಿಯಮ. ಆದರೆ ಈ ಜಾತಿಯ ಗಿಡಗಳು ಅದಕ್ಕೆ ಅಪವಾದವಾಗಿವೆ. ಇವುಗಳ ಬೇರುಗಳಲ್ಲಿ ಸಾರಜನಕವನ್ನು ಸಂಗ್ರಹಿಸುವ ಬ್ಯಾಕ್ಟೀರಿಯಾಗಳು (Nitrifying Bacteria) ಹವೆಯೊಳಗಿನ ಸಾರಜನಕವನ್ನು ಸಣ್ಣ ಸಣ್ಣ ಗಂಟುಗಳಲ್ಲಿ ಹಿಡಿದಿಡುತ್ತವೆ. ಹವೆಯೊಳಗಿನ ಸಾರಜನಕವು ನೇರವಾಗಿ ಬೆಳೆಗೆ ನಿಲುಕಲಾರದು; ಆ ಕೆಲಸವನ್ನು ಇವು ಮಾಡುತ್ತವೆ. ಇದೇ ಜಾತಿಗೆ ಸೇರಿದ ಇನ್ನೂ ಕೆಲವು ಬೆಳೆಗಳೆಂದರೆ ಸೆಂಗಾ, ಅಲಸಂದಿ, ಸಣಬು ಇತ್ಯಾದಿಗಳು. ಸೋಯಾಬೀನುಗಳಲ್ಲಿ ಹಲವಾರು ಜಾತಿಗಳಿವೆ; ಕೆಲವು ಕಂಟಿಗಳಾಗುತ್ತವೆ; ಕೆಲವು ಬಳ್ಳಿಗಳಾಗುತ್ತವೆ. ಬಳ್ಳಿಯ ಜಾತಿಯ ಬೆಳೆಯು ಸ್ವಲ್ಪ ಹೆಚ್ಚು-ಕಡಮೆ ಅವರೆಯ ಬಳ್ಳಿಯಂತೆಯೇ ಕಾಣಿಸುತ್ತದೆ. ಎಲೆಗಳು ಅವರೆಗಿಂತ ಕೊಂಚ ಚಿಕ್ಕವಿರುವವು. ಎಲೆಗಳು ಸಂಯುಕ್ತ ತ್ರಿದಲಗಳಾಗಿದ್ದು ಚಟ್ಟೆ ಮೆಸರಿನಿಂದ ಮೆರೆಯುತ್ತವೆ. ಸಣ್ಣ ಕೂದಲಿನಂತಹ ಬಿರಿಯು ಮೃದುವಾದ ಮುಳ್ಳುಗಳು ಗಿಡದ ಎಲ್ಲ ಭಾಗಗಳಲ್ಲಿ ಕಂಡುಬರುತ್ತವೆ (ಬೇರುಗಳನ್ನುಳಿದು). ಕಾಯಿಗಳು ದುಂಡಗೆ, ಸುಮಾರು ಒಂದು ಬಂದುವರೆ ಇಂಚು ಉದ್ದವಾಗಿರುತ್ತವೆ. ಅವುಗಳಲ್ಲಿ ನಾಲ್ಕರಿಂದ ಆರರವರೆಗೆ ಬೀಜಗಳಿರುತ್ತವೆ. ಜೆನ್ನಾಗಿ ತುಂಬಿ ಬೆಳೆದ ಒಣಗಿದ ಕಾಯಿ, ಈ ಜಾತಿಗೆ ಸೇರಿದ ಇತರ ಕಾಯಿಗಳಂತೆ ಎರಡೂ ಬದಿಯಿಂದ ಸೀಳುತ್ತದೆ. ಕಾಳುಗಳು ಸಿಡಿದು ಹೊರಗೆ ಬರುತ್ತವೆ; ಆದುದರಿಂದ ಕಾಳುಗಳು ಸಿಡಿಯುವ ಮೊದಲೇ ಇವನ್ನು ಕೊಡಹಾಕಬೇಕಾಗುತ್ತದೆ. ಇದು ಅವರೆಯ ಜಾತಿಯಾದರೂ ಕಾಳುಗಳು ಹೆಚ್ಚಾಗಿ ಹೋಲುವುದು ಅಲಸಂದಿಗಳನ್ನು. ಅಲಸಂದಿಗಳು ದುಂಡಗೆ ಉದ್ದವಾಗಿದ್ದರೆ, ಇವು ಒಂದಿನಿತು ಚಪ್ಪಟೆಯಾಗಿರುತ್ತವೆ.

ನಮ್ಮ ದೇಶದವರೇನೋ ಈ ಕಾಳುಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಾರೆ; ಆದರೆ ಈ ಕಾಳುಗಳ ಸರಿಯಾದ ಉಪಯೋಗ ತಿಳಿದಿಲ್ಲ ಅವರಿಗೆ. ಎಷ್ಟೋ ಕಡೆಗೆ ಇವನ್ನು ಸಾದಾ ಬೇಳೆಯ ಕಾಳೆಂದು ನಿತ್ಯ ಪಲ್ಲೆಗೆ ಉಪಯೋಗಿಸುತ್ತಾರೆ. ಮತ್ತೆ ಕೆಲವರು ಇವನ್ನು ಸರಿಯಾಗಿ ಹಿಟ್ಟುಮಾಡಿ, ಗಂಜೀ ತಯಾರಿಸುತ್ತಾರೆ. ಇನ್ನೂ ಕೆಲವೆಡೆಯಲ್ಲಿ ಈ ಕಾಳುಗಳಿಂದ ಎಣ್ಣೆ ತೆಗೆಯುತ್ತಾರೆ—ಎಣ್ಣೆಯ ಪ್ರಮಾಣವು ಸಾಕಷ್ಟಿದ್ದರೂ ಇದರಲ್ಲಿ ಒಂದು ತರದ ನಾರಿನಂತಹ ಪದಾರ್ಥ (Fibre) ಎರುತ್ತದೆ. ಕೆಲವು ದಿವಸಗಳನಂತರ ಎಣ್ಣೆಗೆ ದುರ್ಗಂಧ ವಾಸನೆಯು ಬಂದು ಬಿಡುವುದು. ಆದುದರಿಂದ ಈ ಕ್ಷೇತ್ರದಲ್ಲಿ ದುಡಿಯುವವರು ನಿರಾಶರಾಗಿದ್ದಾರೆ. ಇದು ಪಾಚಕ ಮತ್ತು ಆರೋಗ್ಯದೃಷ್ಟಿಗಳಿಂದಲೂ ಒಳ್ಳೆಯ ಆಹಾರಧಾನ್ಯಗಳ ಮಾಲಿಕೆಗೆ ಸೇರುವುದೆಂದು ಕೆಳಗಿನ ಅಂಕಿ-ಸಂಖ್ಯೆಗಳಿಂದ ಗೊತ್ತಾಗದಿರದು.

ಸೋಯಾಬೀನುಗಳ ವಿಭಜನೆ :

ನೀರು	೧೦.೪೧ %
ಎಣ್ಣೆ	೧೭.೪೭ %
ಸಾರಜನಕಯುಕ್ತ ಪದಾರ್ಥಗಳು	೪೦.೫೦ %
ಪಿಷ್ಟ ಮತ್ತು ಪಾಚಕ ನಾರಿನ ಪದಾರ್ಥಗಳು	೨೨.೩೮ %
ಅಪಾಚಕ ನಾರಿನಂತಹ ಪದಾರ್ಥಗಳು	೪.೨೧ %
ಖನಿಜ ಪದಾರ್ಥಗಳು	೪.೦೩ %
	೧೦೦.೦೦ %

ಮೇಲಿನ ಸಾರಜನಕಯುಕ್ತ ಪದಾರ್ಥಗಳಲ್ಲಿ ಸಾರಜನಕವು (Nitrogen) ೬.೫. ಅಂಶದಷ್ಟಿರುತ್ತದೆ. ಸೋಯಾಬೀನಿನಲ್ಲಿ ಮಾನವನ ದೇಹದ ಪೋಷಣೆಗಿಷ್ಟೇ ತಕ್ಕವುಗಳಾದ ಆಹಾರ ಪದಾರ್ಥಗಳಿರದೆ, ದನಗಳಿಗೂ ಬೇಕಾದ ಆಹಾರಪದಾರ್ಥಗಳಿರುತ್ತವೆ. ಮಾನವನಿಗಿಷ್ಟೇ ಯೋಗ್ಯ ಆಹಾರವಾಗಿರದೆ, ಇದು ದನಗಳಿಗೂ ಪೌಷ್ಟಿಕ ಆಹಾರವಾಗಿದೆ. ಸೋಯಾಬೀನಿನ ಹಿಂಡಿಯನ್ನು ದನಗಳಿಗೆ ಹಾಕುತ್ತಾರೆ.

ಸೋಯಾ ಹಿಂಡಿಯ ವಿಭಜನೆ :

ನೀರು	೧೧.೪೦ %
ಎಣ್ಣೆ	೬.೫೨ %
ಸಾರಜಕಯುಕ್ತ ಪದಾರ್ಥಗಳು	೪೨.೭೮ %
ಪಿಷ್ಟ ಇತ್ಯಾದಿ	೩೮.೪೧ %
ಖನಿಜಪದಾರ್ಥಗಳು	೫.೫೯ %
	೧೦೦.೦೦ %

ಈ ಹಿಂಡಿಯಲ್ಲಿ ಸಾಕಷ್ಟು ಸಾರಜನಕ, ರಂಜಕಾಮ್ಲ, ಪೊಟ್ಯಾಶ್‌ಗಳಿರುವುದರಿಂದ, ಫಲಭರಿತವೂ ಪರಿಪೂರ್ಣವೂ ಆದ ನೈಸರ್ಗಿಕ ಗೊಬ್ಬರವಾಗಿದೆ.

ಸಾರಜನಕ	೬.೮೫ %
ರಂಜಕಾಮ್ಲ	೧.೩ %
ಪೊಟ್ಯಾಶ್	೨.೩ %

ಒಟ್ಟಾರೆ ಗೊಬ್ಬರದ ದೃಷ್ಟಿಯಲ್ಲಿಯೂ ಸೋಯಾ ಹಿಂಡಿಯು ಬೇರೆ ಹಿಂಡಿಗಳಿಗಿಂತ ಹಿಂದುಳಿಯಲಾರದು.

ಸೋಯಾಬೀನುಗಳಿಂದ ಕೃತಕಹಾಲನ್ನು ಸಿದ್ಧಗೊಳಿಸಲು ಮೊದಲುಮಾಡಿದಂದಿನಿಂದ, ಇಡಿಯ ವಿಶ್ವದ ದೃಷ್ಟಿಯೇ ಈ ಕಾಳುಗಳ ಕಡೆಗೆ ತಿರುಗಿದೆ. ಪ್ರಪಂಚದ ಬಹುಭಾಗದ ಜನರು ಇಂದು ಆಕಳ ಹಾಲಿನ ಬದಲು ಸೋಯಾ ಹಾಲನ್ನೇ ಉಪಯೋಗಿಸುತ್ತಿದ್ದಾರೆ. ಚೀನಾ, ಜಪಾನು ಇಂಡೋ ಚೀನಾ ಮೊದಲಾದ ದೇಶಗಳಲ್ಲಿ ದನಗಳ ಕೊರತೆ ಬಹಳ; ಆದುದರಿಂದ ಅವರು ತಮಗೆ ಬೇಕಾದ ಹಾಲನ್ನು ಸೋಯಾಬೀನುಗಳಿಂದ ಪಡೆಯುತ್ತಾರೆ. ಅಮೇರಿಕೆಯಲ್ಲಿ ಹಾಲಿನ ಕೊರತೆಯಿಲ್ಲ. ಆದರೂ ಅಲ್ಲಿ ಸೋಯಾ ಹಾಲು ದಿನದಿನಕ್ಕೆ ಜನಪ್ರಿಯವಾಗುತ್ತಲಿದೆ. ಕಾರಣವಿಷ್ಟೆ: ನೈಸರ್ಗಿಕ ಹಾಲಿಗಿಂತ ಈ ಕೃತಕಹಾಲು ಪಚನಕ್ಕೆ ಹಗುರಾಗಿದೆ. ಕಾನಡಾ ದೇಶದಲ್ಲಿ ಸೋಯಾಬೀನುಗಳಿಂದ ಒಂದು ತರದ ಮೊಸರನ್ನು ತಯಾರಿಸುತ್ತಾರೆ; ಮಕ್ಕಳಿಗೆ ಇದರ ಮೇಲೆ ತುಂಬಾ ಮಮತೆ! ಆರೋಗ್ಯದೃಷ್ಟಿಯಿಂದಲೂ ಇದಕ್ಕೆ ಮಹತ್ತ್ವವಿದೆ. ಇಡಿಯ ರಶಿಯ ದೇಶವೇ ಇಂದು ಈ ಕೃತಕಹಾಲಿನ ಸಿದ್ಧತೆಗೆ ಹೊಂಕ-ಕಟ್ಟಿದೆ. ಎಷ್ಟೋ ಸಂಶೋಧನಾಕೇಂದ್ರಗಳಲ್ಲಿ ಈ ಬಗೆಗೆ ಎಡೆಬಿಡದೆ ಸಂಶೋಧನೆಗಳು ನಡೆದಿವೆ. ಆಸ್ಟ್ರೇಲಿಯಾದಲ್ಲಿ ಸಾಕಷ್ಟಕ್ಕಿಂತ ಹೆಚ್ಚು ನೈಸರ್ಗಿಕ ಹಾಲಿನ ಉತ್ಪಾದನೆಯಿದ್ದರೂ ಈ ಕೃತಕಹಾಲಿನ ಬೇಡಿಕೆ ಬಹಳವಾಗಿದೆ. ಸೋಯಾ ಹಾಲಿನಲ್ಲಿ ನೈಸರ್ಗಿಕ ಹಾಲಿನಲ್ಲಿರುವ ಎಲ್ಲ ಸತ್ತ್ವಗಳೂ ಇವೆ. ಕೆಳಗಿನ ತೋಷ್ಟಕದಿಂದ ಈ ಮಾತಿನ ಸತ್ಯತೆ ತಿಳಿದೀತು.

ಆಕಳು ಮತ್ತು ಸೋಯಾ ಹಾಲುಗಳಲ್ಲಿಯ ಆಹಾರಪದಾರ್ಥಗಳು :

ಆಹಾರ ಪದಾರ್ಥಗಳು	ಸೋಯಾ ಹಾಲು	ಆಕಳ ಹಾಲು
ಒಟ್ಟು ಘನಪದಾರ್ಥಗಳು	೧೦.೧೫ %	೧೨.೫ %
ಸಾರಜನಕ ಪದಾರ್ಥಗಳು	೪.೨ %	೩.೫ %
ಸೆಣ	೨.೪ %	೩.೬ %
ಇಂಗಾರಕ ಪದಾರ್ಥಗಳು	೧.೮ %	೪.೭ %
ಲವಣಗಳು	೦.೭೫ %	೦.೭ %

ಸೋಯಾ ಹಾಲಿನಲ್ಲಿ ಪಿಷ್ಟಪದಾರ್ಥವಿರುವುದಿಲ್ಲ. ೧.೪ % ಸಕ್ಕರೆ ಮಾತ್ರ ಇರುತ್ತದೆ.

ಸೋಯಾ ಹಾಲಿನಲ್ಲಿ ಸಾಕಷ್ಟು ಜೀವಸತ್ತ್ವಗಳೂ (Vitamins) ಇವೆ. ಆದರೆ ಆಕಳಹಾಲಿಗಿಂತ ಬಿಂದಿನಿತು ಕಮಿ ಪ್ರಮಾಣದಲ್ಲಿರುತ್ತವೆ.

ಒಂದು ಲೀಟರ್ (ಸಾಸಿರಘನಸೆಂಟಿಮೀಟರ್) ಸೋಯಾ ಮತ್ತು ಆಕಳ ಹಾಲಿನಲ್ಲಿಯ ಜೀವಸತ್ತ್ವಗಳು.

ಜೀವಸತ್ತ್ವಗಳು	ಸೋಯಾ ಹಾಲು	ಆಕಳ ಹಾಲು
ಜೀವಸತ್ತ್ವ 'ಅ' (Vitamin A)	೬೫೦ ಅ. ಅ.* (I.V.)	೧೦೫೦ ಅ. ಅ. (I.V.)
ಥಾಯಿಮಿನ್ (Thiamine)	೦.೮೩ ಮಿ. ಗ್ರಾಮು	೦.೪೬ ಮಿ.ಗ್ರಾ.
ರಿಬೊಫ್ಲಾವಿನ್ (Riboflavin)	೧.೧೦ ,,	೧.೩೮ ,,
ನಿಕೋಟಿನಿಕ್ ಆಮ್ಲ (Nicotinic acid)	೨.೪೯ ,,	೧.೧೬ ,,
ಎಸ್ಕೊಟಿಕ್ ಆಮ್ಲ (Ascotic acid)	೨೧.೬ ,,	೧೭.೪ ,,

ಸೋಯಾ ಹಾಲು ಹಲವು ಗುಣಗಳಲ್ಲಿ ಆಕಳ ಹಾಲಿಗಿಂತ ಶ್ರೇಷ್ಠವೂ, ಹಲವು ಗುಣಗಳಲ್ಲಿ ಕನಿಷ್ಠವೂ ಆದುದು ಮೇಲಿನ ಸಂಖ್ಯೆಗಳಿಂದ ತಾನೇ ತಿಳಿಯುವುದು. ಅತ್ಯುತ್ತಮ ಆಕಳ ಹಾಲಿನಲ್ಲಿ ಜೀವದ ಬೆಳೆಗೆಗೆ ಬೇಕಾದ ಆಹಾರಪದಾರ್ಥಗಳ ಪ್ರಮಾಣ '೧೦೦' ಎಂದು ತಿಳಿದರೆ, ಸೋಯಾ ಹಾಲಿನಲ್ಲಿಯ ಪ್ರಮಾಣವು '೯೦' ಆಗುತ್ತದೆ. ಆದರೆ ಎಲ್ಲರಿಗೂ ಅಂತಹ ಅತ್ಯುತ್ತಮವಾದ ಆಕಳ ಹಾಲು ದೊರೆಯುವುದಿಲ್ಲ. ಈಗ ಬೇಟೆಯಲ್ಲಿ ಸಿಕ್ಕುವ ಹಾಲಿಗಿಂತ ಸೋಯಾ ಹಾಲು ಎಷ್ಟೋ ಪಾಲು ಶ್ರೇಷ್ಠವಾಗಿರುವುದೆಂಬುದು ನಿರ್ವಾದ!

ಬೆಂಗಳೂರಿನ 'ಭಾರತಸೇವಾಶ್ರಮ'ದಂತಿರುವಲ್ಲಿ, ಸಾಮಾನ್ಯರಾದ ಕೆಲಸಗಾರರು ಎಡೆಬಿಡದೆ ಹದಿನೆಂಟು ತಿಂಗಳುಗಳ ಪರೆಗೆ ಸಂಶೋಧನೆಗಳನ್ನು ನಡೆಯಿಸಿ, ಸೋಯಾಬೀನುಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಅಷ್ಟೇ ಅಲ್ಲದೆ ಅವರು, ಮುಂಬಯಿ ಸರಕಾರದವರು ಸೋಯಾಬೀನುಗಳನ್ನು ಪೂರಯಿಸಿದಲ್ಲಿ ಇಡಿಯ ಪ್ರಾಂತಕ್ಕೆ ಸಾಕಾಗುವಷ್ಟು ಹಾಲನ್ನು ಪೂರಯಿಸಬಹುದೆಂಬ ಸೂಚನೆಯೊಂದನ್ನು ಮುಂಬಯಿ ಸರಕಾರಕ್ಕೆ ಕಳಿಸಿಕೊಟ್ಟುದು ಆನಂದದ ಸಂಗತಿಯೆ ಸರಿ. ಸೋಯಾಬೀನುಗಳನ್ನು emulsion ಸ್ಥಿತಿಗೆ ಪರಿವರ್ತಿಸಿದರೆ, ಅದರಲ್ಲಿಯ ಸಾರಜನಕಯುಕ್ತ ಪದಾರ್ಥಗಳ ಪ್ರಮಾಣ ಇಮ್ಮಡಿಯಾಗುವುದೆಂದು ಅವರು ಮನಗಂಡಿದ್ದಾರೆ. ಬೀಜಗಳು ಮೊಳಕೆಯೊಡೆಯುವ ಸ್ಥಿತಿಯಲ್ಲಿರುವಾಗ, ಅವುಗಳಲ್ಲಿಯ ಆಹಾರಪದಾರ್ಥಗಳ ಮತ್ತು ಜೀವಸತ್ತ್ವಗಳ ಪ್ರಮಾಣ ಹೆಚ್ಚುತ್ತದೆ. ಆಕಳ ಹಾಲಿನಲ್ಲಿರುವಷ್ಟೆ

* ಅ. ಅ—ಅಂತರರಾಷ್ಟ್ರೀಯ ಅಳತೆ (Inter-National Unit).

ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರಾಗಿದ್ದ ದಿವಂಗತ ರಾಮಚಂದ್ರ ಹಣಮಂತ ದೇಶಪಾಂಡೆಯವರು, ಇನ್ನೂ ಒಬ್ಬಿಬ್ಬರು, ಬೆಂಗಳೂರು ನ್ಯೆಸೂರುಗಳ ಕಡೆಗೆ ಹೋಗಿ ಅಲ್ಲಿಯ ಪ್ರಮುಖರೊಂದಿಗೆ, ಹಾಗೆಯೇ ನ್ಯೆಸೂರು ಸರಕಾರದ ಅಧಿಕಾರಿಗಳೊಂದಿಗೆ ಕನ್ನಡ ಭಾಷೆಯ ಬೆಳೆವಣಿಗೆಗೆ ಆಖಂಡ ಕರ್ನಾಟಕ-ತ್ವದ ಕಲ್ಪನೆಯು ಅವಶ್ಯವಾಗಿರುವುದನ್ನು ಚರ್ಚಿಸಿ ಅವರಿಗೆ ಮನ ಗಾಣಿಸಿಕೊಟ್ಟುದರ ಫಲವಾಗಿಯೆ ೧೯೧೫ ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು. ಇದೇ ಅವಧಿಯಲ್ಲಿ ಪ್ರಕಟವಾದ ಶ್ರೀಮಾನ್ ಆಲೂರವರ "ಕರ್ನಾಟಕ ಗತನೈಭವ" ಗ್ರಂಥವು. ಆ ಕಾಲದ ಕನ್ನಡ ತರುಣರಲ್ಲಿ ವಿಚಿತ್ರವಾದ ಹೊಸ ಸ್ಫೂರ್ತಿಯನ್ನುಂಟು ಮಾಡಿತು.

ಸ್ವರ್ಗಸ್ಥ ಶ್ರೀ. ಶಾಂತಕವಿಗಳಂಥ---ಆ ಕಾಲದ--- ಮುಪ್ಪಿನ ಮುದುಕರಲ್ಲಿಯೂ ಇತ್ತ ಕಡೆಗೆಲ್ಲ ಒಳಗೊಳಗೇ ಹಬ್ಬುತ್ತ ನಡೆದಿದ್ದ ರಾಷ್ಟ್ರೀಯ ಮನೋಭಾವನೆಯು ತನ್ನ ವ್ಯಖರವಾದ ಪ್ರಭಾವವನ್ನು ಬೀರದಿರಲಿಲ್ಲ ೧೯೧೬ ರಲ್ಲಿ ಶ್ರೀ. ಶಾಂತಕವಿಗಳು ಬರೆದು ಸ್ವತಃ ಕೀರ್ತನ ಮಾಡಿ ಇಲ್ಲಿಯ ಜನಜೀವನವನ್ನೇ ಸ್ಮರಣಗೊಳಿಸಿದ ಶ್ರೀವಿದ್ಯಾರಣ್ಯರ ಕೀರ್ತನವು, ಹೊಸಗನ್ನಡ ನಾಡಿನ ರಾಷ್ಟ್ರೀಯತ್ವದ ಉಜ್ವಲ ದೃಷ್ಟಾಂತವಾಗಿದೆ. "ನಮ್ಮದೀ ನಮ್ಮದೀ ಭರತ ಭೂಮಿ" "ಇಳಿಯುತಿವೆ ಸಾತಾಳ ಜಾತಕೆ ಬೆಳೆವ ಭಾರತ ದೇಶವು || ಕಳಚುತಿವೆ ಧರ್ಮಾಲಯದ ಹೊಂಗಳರ ಕನ್ನಡಿ ಧ್ವಜಗಳು" "ಪಾರತಂತ್ರ್ಯವೆ ಸಕಲಸುಖ-ಕಪಕಾರಿಯದುವೆ ಅಧೋಗತಿ || ಪಾರತಂತ್ರ್ಯಸ್ಥಿತಿಯು ಕುಲ ಸಂಹಾರವೇ ಸುತಪಃಕೃತಿ" "ನರೆಯುತ್ತರದೊಳ್ ಜರುಗಿದದ್ಭುತವನೊರೆಯಲು ನಾಲಗೆಯೊಂದಿಹುದು" ಇವೇ ಮೊದಲಾದ ಸ್ಫೂರ್ತಿದಾಯಕ ಪದ್ಯಗಳನ್ನು ಆ ಕಾಲದ ತರುಣ ವಿದ್ಯಾರ್ಥಿಗಳು ಬೀದಿಬೀದಿಗಳಲ್ಲಿಯೂ ಹಾಡುತ್ತ ಒಬ್ಬರನ್ನೊಬ್ಬರು ಸಂಭಾವಿಸುತ್ತ ನಡೆದುದನ್ನು ಕಣ್ಣಾರೆ ಕಂಡ ನನಗೆ ಶ್ರೀ. ಶಾಂತಕವಿಗಳ ಈ ಕೃತಿಯ ಅದ್ಭುತ ಪರಿಣಾಮದಿಂದ ಸ್ಫೂರ್ತಿಯುಬ್ಬಿ ಬಂದದ್ದೂ ಉಂಟು.

ಹೀಗೆ ಕರ್ನಾಟಕತ್ವವೂ ಭಾರತೀಯ ರಾಷ್ಟ್ರೀಯತ್ವವೂ ಸಮರಸವಾಗಿ ಕೂಡಿಕೊಂಡು, ನವ್ಯ ಭಾಗದಲ್ಲಿ ಬೆಳೆಯಹತ್ತಿದ್ದರಿಂದಲೇ ಭಾರತೀಯ ಸ್ವಾತಂತ್ರ್ಯಕ್ಕೆ ಪ್ರಯತ್ನಿಸುತ್ತಿದ್ದ ಕಾಂಗ್ರೆಸ್ಸಿನ ಅಧಿಕಾರಿಗಳಲ್ಲಿಯೂ ಕರ್ನಾಟಕವು ತನ್ನ ಪ್ರಭಾವವನ್ನು ಬೀರಿ, ರಾಷ್ಟ್ರೀಯ ಸಭೆಯ ಆಡಳಿತದಲ್ಲಿ ಸ್ವತಂತ್ರ ಪ್ರಾಂತೀಯತೆಯನ್ನು ಪಡೆಯಬೇಕೆಂಬ ಪ್ರಯತ್ನವನ್ನು ಕೈಕೊಂಡು ಮುಂದುವರಿಸಲಾಯಿತು. ೧೯೧೬ ರಲ್ಲಿ ಬೆಳಗಾವಿಯಲ್ಲಿ (ಪುಣೆಯಲ್ಲಲ್ಲ) ಕೂಡಿದ ಮುಂಬಯಿ ಪ್ರಾಂತಿಕ ಪರಿಷತ್ತಿನ ಕಾಲಕ್ಕೆ, ಲೋಕಮಾನ್ಯ ಬೆಳಕರ ಪ್ರಭಾವದಿಂದ ಸ್ಥಾಪಿತವಾದ "ಹೋಮರೂಲ್‌ಲೀಗ" ಅಥವಾ "ಸ್ವರಾಜ್ಯ ಸಂಘ"ದ ಕಾರ್ಯನಿರ್ವಾಹಕ್ಕಾಗಿ, ಕರ್ನಾಟಕಕ್ಕೆ ಬೇರೆ ಶಾಖೆಯೇ ಬೇಕೆಂಬುದನ್ನೂ ಇದರ ಪ್ರಚಾರವೆಲ್ಲವೂ ಕನ್ನಡದಲ್ಲಿಯೆ ಆಗಬೇಕೆಂಬುದನ್ನೂ ಲೋಕಮಾನ್ಯರೇ ಒಪ್ಪಿಕೊಂಡು, ಶ್ರೀಮಾನ್ ಆಲೂರ ವೆಂಕಟರಾಯರ ಕಡೆಗೆ ಇದರ ಹೊಣೆಯನ್ನೆಲ್ಲ ವಹಿಸಿಕೊಟ್ಟರು. ಶ್ರೀ. ಆಲೂರವರು ಸಂತೋಷದಿಂದ ಈ ಹೊಣೆಯನ್ನು ಹೊತ್ತು ಕೆಲವು ದಿವಸ ಕೆಲಸ ಮಾಡಿ, ಕೆಲವು ಚಿಕ್ಕ ಚಿಕ್ಕ ಪುಸ್ತಕಗಳನ್ನು ಬರೆದು ಮುದ್ರಿಸಿ, ಪ್ರಕಟಗೊಳಿಸಿ, "ಸ್ವರಾಜ್ಯ"ವೆಂದರೇನು? ಅದನ್ನು ನಾವೇಕೆ ಗಳಿಸಲು ಹೆಣಗಬೇಕೆಂಬ ವಿಷಯವಾಗಿ ಇತ್ತಕಡೆಯ ಕನ್ನಡ ತರುಣರಿಗೆ ತಿಳಿವಳಿಕೆಯುಂಟಾಗುವಂತೆ ಮಾಡಿದರು.

ಹೀಗೆ ಕರ್ನಾಟಕತ್ವದ ಚಳವಳಿಯು ಆ ಕಾಲದ ಪುರಸ್ಕರ್ತರೆಲ್ಲರೂ ಉಜ್ವಲವಾದ, ನಿಸ್ಸೀಮವಾದ ರಾಷ್ಟ್ರೀಯತ್ವದ ಭಾವನೆಯಿಂದಲೇ ಪ್ರೇರಿತರಾದವರಾಗಿದ್ದರೆಂಬುದನ್ನು ನಾವು ಮುಖ್ಯವಾಗಿ ಗಮನಿಸತಕ್ಕದ್ದು. ಆದುದರಿಂದಲೇ ಕರ್ನಾಟಕದ ಏಕೀಕರಣ ಚಳವಳಿಯು ಆ ಕಾಲದ ಸುಸಂಸ್ಕೃತ ಜನಜೀವನದಲ್ಲಿ ತನ್ನ ಅದ್ಭುತ ಪ್ರಭಾವವನ್ನು ಬೀರಿ, ಅದಕ್ಕೊಂದು ವಿಶಿಷ್ಟವಾದ ಹೊಸ ಬೆಳಕನ್ನು ತೋರಿ, ಅದನ್ನು ಬಡಿದೆಬ್ಬಿಸಿ ಕಾರ್ಯೋನ್ಮುಖಿ ಮಾಡಿತು. ಈ ಸುದಿನಗಳನ್ನು ಕಾಣಬಹುದಾದ ಭಾಗ್ಯವು ನಮಗೆ ಈ ಮೂಲಕ ದೊರೆಯಿತೆಂದು ನಿಃಸಂದೇಹವಾಗಿ ಹೇಳಬಹುದು.

ಒಬ್ಬೊಬ್ಬರ ವೈಶಿಷ್ಟ್ಯ

ಇದೀಗ ನಿಂತ ಮಹಾಯುದ್ಧಕ್ಕಿಂತ ಮೊದಲಿನ ಕತೆಯಿದು. ಕಡಲಲ್ಲಿ ಹೊರಟ ಒಂದು ಆಗೆ ಹಡಗು ಬಿರುಗಾಳಿಗೆ ಸಿಕ್ಕಿ, ಯಾವುದೊ ಒಂದು ಕೇಳದ ಕಾಣದ ನಡುಗಡ್ಡೆಗೆ ಬಂದು ಅಪ್ಪಳಿಸಿತು. ಆದರೆ ಅದರಲ್ಲಿದ್ದ ೧೦೦-೧೬೦ ಜನ ಪ್ರಯಾಣಿಕರು, ಸುದ್ದೆಪದಿಂದ ಲೇನೊ—ಬದುಕಿಕೊಂಡರು.

ನಡುಗಡ್ಡೆಯ ಮೇಲೆ ಇಳಿದೊಡನೆಯೆ, ಪ್ರಯಾಣಿಕರಲ್ಲಿದ್ದ ಜರ್ಮನರು ಮಿಲಿಟರಿ ಡ್ರಿಲ್ಲು ನಡೆಯಿಸಿದರು; ಅಮೇರಿಕನರು ಅಲ್ಲಿ ತಮ್ಮದೊಂದು ಸ್ಟೋರನ್ನೂ ಮೋಟಾರಿನ ಆಂಗಡಿಯನ್ನೂ ತೆರೆಯುವ ಸಿದ್ಧತೆ ನಡೆಯಿಸಿದರು; ಫ್ರೆಂಚರು ಒಂದು ಕಾಣೆತದ ಮನೆಯನ್ನೂ ಉಪಾಹಾರಾಲಯವನ್ನೂ ಆರಂಭಿಸಿದರು; ಆಸ್ಟ್ರೇಲಿಯನರಿದ್ದವರು ಕುದುರೆಜೂಜಿನ ಬಯಲನ್ನು ಹಡಗೊಳಿಸಿದರು; ಸ್ಕಾಟಿಶ್ ಜನರು ಸಾವುಕಾರಿಕೆಯ ಉದ್ಯಮ ಶುರು ಮಾಡಿದರು. ಇಟಾಲಿಯನ್ ಜನರು ಚಿತ್ರ ತೆಗೆಯಲು ತೊಡಗಿದರು. ರಶಿಯದ ಕಮ್ಯೂನಿಸ್ಟ್ ಜನರು, ತಮ್ಮ ಜುಂಜುದಲೆ ಬಿಟ್ಟುಕೊಂಡು ವ್ಯಾಖ್ಯಾನ ಕೊಡುವ ಎತ್ತುಗಡೆ ನಡೆಯಿಸಿದರು. ಒಬ್ಬನೆ ಒಬ್ಬನಾಗಿ ಇರುವ ಭಾರತೀಯನು ಸಮುದ್ರದಲ್ಲಿ ಸೊಂಟದ ವರೆಗೆ ಮುಳುಗಿ ನಿಂತು, 'ದೇವಾ, ನಮ್ಮೆಲ್ಲರಿಗೂ ಮಂಗಲವನ್ನುಂಟು ಮಾಡು' ಎಂದು ಪ್ರಾರ್ಥಿಸತೊಡಗಿದ. ಇಬ್ಬರು ಇಂಗ್ಲಿಷ್ ಜನರು ಮಾತ್ರ ದೂರವಾಗಿ ಕುಳಿತು, ಈ ಎಲ್ಲ ಜನರಲ್ಲಿ ಒಳಜಗಳ ಹುಟ್ಟಿಸಿ, ತಮಗೆ ಲಾಭ ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಕುರಿತು ಮಂತ್ರಾಲೋಚನೆ ನಡೆಯಿಸಿದ್ದರು.

ಕರ್ನಾಟಕದ ಚಳವಳಿಯಲ್ಲಿ ★ ★ ಧಾರವಾಡದ ಭಾಗ

(ಸ್ಪಷ್ಟೀಕರಣದ ಒನೆಯ ಕಂಪು)

ಶ್ರೀಮಾನ್ ಮುದವೀಡು ಕೃಷ್ಣರಾಯರು, ಧಾರವಾಡ.

ಧಾರವಾಡದಲ್ಲಿ ಪರಂಪರೆಯಿಂದ ನಡೆದುಕೊಂಡು ಬಂದಿದ್ದ ಕರ್ನಾಟಕತ್ವವೇ 'ವಿದ್ಯಾವರ್ಧಕ ಸಂಘ'ದ ಉದಯಕ್ಕೆ ಕಾರಣವಾಯಿತು. ಶ್ರೀ. ಆಲೂರ ವೆಂಕಟರಾಯರ ಮುಂದಾಳುತನ ಕೊಟ್ಟಿತು. ಸಾಂತಕವಿಗಳಲ್ಲಿ ನಾಡಿನ ಅಭಿಮಾನವನ್ನು ಹರಿಯಿಸಿತು.

★

ಕರ್ನಾಟಕತ್ವದ ಜೊತೆಯಲ್ಲಿಯೆ ಭಾರತೀಯ ರಾಷ್ಟ್ರೀಯತ್ವವನ್ನೂ ಇಲ್ಲಿಯ ಕನ್ನಡ ಪ್ರಮುಖರೇ ಬೆಳೆಗೂಡಿಸಿಕೊಂಡು ಬಂದರೆಂಬ ಸಂಗತಿಯನ್ನು ಹಿಂದಿನ ಬರೆಹದಲ್ಲಿ ವಿವರಿಸಲಾಗಿದೆ. ೧೮೯೫ರಿಂದಿನ ಗಣಪತ್ಯುತ್ಸವಗಳಲ್ಲಿ, ಹಾಗೆಯೆ ಶಿವಾಜೀ ಉತ್ಸವಗಳಲ್ಲಿ ಲೋಕಮಾನ್ಯರ ತಿಲ್ಯಕೋಟಿಗೆ ಸೇರಿದ್ದವರ ಪ್ರಭಾವಕ್ಕೊಳಗಾಗಿ ಅವರ ಅನುಯಾಯಿಗಳೇ ಆಗಿದ್ದ ತರುಣರೇ ಪ್ರಮುಖ ಕಾರ್ಯಕರ್ತರಾಗಿದ್ದರೆಂಬುದನ್ನು ಹೇಳದೆ ಗತ್ಯಂತರವಿಲ್ಲ. ೧೯೦೭ರ ಪ್ಲೇಗಿನ ಹಾವಳಿಯಲ್ಲಿ ಅಧಿಕಾರಿಗಳ ದುರ್ದಮನೀಯ ಉಪಟಳದಿಂದ ಸಂತ್ರಸ್ತರಾದವರ ಸಂಕಷ್ಟಗಳನ್ನು ಆಗಿನ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕೊಟ್ಟು, ಆದಷ್ಟು ಪರಿಹಾರವನ್ನೊದಗಿಸುವ ಪ್ರಯತ್ನವನ್ನು ಇದೇ ತರುಣರು ಯಾವ ಆತಂಕವಿಲ್ಲದೆ ಮಾಡಿದ್ದುಂಟು. ಪ್ಲೇಗ ನಿವಾರಣೋಪಾಯದಲ್ಲಿ ಅಧಿಕಾರಿಗಳು ನಡಿಸಿದ ಅನೇಕ ಪಟ್ಟುವಟಿಕೆಗಳಲ್ಲೊಂದರಿಂದ ತನ್ನ ಧಾರ್ಮಿಕ ಕೈತ್ಯಕ್ಕೆ ಅಡೆತಡೆಯುಂಟಾಯಿತೆಂಬ ಭಾವನೆಯಿಂದ, ಇಲ್ಲಿಯ ಜಿಜ್ಞಿಯವರ ಛಾವಣಿಯಲ್ಲಿ ಹಾರಿಕೊಂಡು ಪ್ರಾಣಕೊಟ್ಟ ಹಯಗ್ರೀವಾಚಾರ್ಯನ ಪ್ರಕರಣವು ಧಾರವಾಡದ ರಾಷ್ಟ್ರೀಯತ್ವದ ಇತಿಹಾಸದಲ್ಲಿಯೆ ಒಂದು ಮಹತ್ತ್ವದ ಘಟ್ಟವಾಗಿರುವುದೆಂಬುದು ಸುಪ್ರಸಿದ್ಧವಾಗಿದೆ. ಈ ಸಂಗತಿಯು ನಾಡಿನಲ್ಲೆಲ್ಲ ಕೋಲಾಹಲವನ್ನೆಬ್ಬಿಸಿತಲ್ಲದೆ, ಪಾರ್ಲಮೆಂಟಿನ್ನೂ ಮುಟ್ಟಿ ಮೆರೆಯಿತು. ಧಾರವಾಡದ ಆಗಿನ ಕಾಲದ ತರುಣರಲ್ಲಿ ಒಡಮೂಡಿದ್ದ ಈ ರಾಷ್ಟ್ರೀಯ ಮನೋವೃತ್ತಿಗೆ ಗರಿಯಿರಲ್ಲಾದ ಲೋಕಮಾನ್ಯರ ಅಪೂರ್ವ ಸತ್ಕಾರಸಮಾರಂಭವೆ ಜನ್ಮಾಗಿಯ ಪುಟಕೊಟ್ಟಿತೆಂದು ಹೇಳಬಹುದು. ಅದೇ ವರ್ಷ ದಿವಂಗತ ಜನಗಲ್ ರಾಮರಾಯರಿಂದ ಧಾರವಾಡದಲ್ಲಿಯೆ ಉದ್ಘೋಷಿತವಾಗಿದ್ದ ಕರ್ನಾಟಕದ ಏಕೀಕರಣ ವಿಚಾರವೂ ಧಾರವಾಡದ ವಾತಾವರಣದಲ್ಲಿ ಘನ-ಋಣವಿದ್ಯುತ್ತುಗಳ ಸಮಾಗಮವಾದಂತಾಗಿ, ಕನ್ನಡನಾಡಿನ ರಾಷ್ಟ್ರೀಯ ವೃತ್ತಿಯ ಪೋಷಣೆಗಾಗಿಯೆ ಕರ್ನಾಟಕದ ಏಕೀಕರಣವು ಸಾಂಸ್ಕೃತಿಕ ದೃಷ್ಟಿಯ ಮಟ್ಟಿಗಾದರೂ ಆಗಬೇಕೆಂಬ ಅತ್ಯಗ್ಯವಾದ ಮಾತೆಂಬ ವಿಚಾರಕ್ಕೆ ಪ್ರಚೋದನೆ ಕೊಡೆಯಿತು.

ಈ ವಿಚಾರವನ್ನು ಕೈಕೊಂಡು, ಇದರ ಪ್ರಚಾರ-ಪ್ರಸಾರಕ್ಕಾಗಿ ಪ್ರಯತ್ನವಾಗಬೇಕೆಂಬ ಮುಂದಿನ ಸಾಹಸವನ್ನು ಮುಂದಿನ ಪೀಳಿಗೆಯ ತರುಣರು ಅಂಗೀಕರಿಸಿದರು. ದಿವಂಗತ ನರಗುಂದ ರಾಮರಾಯರನ್ನೂ ಶ್ರೀಮಾನ್ ಆಲೂರ ವೆಂಕಟರಾಯರನ್ನೂ ಈ ಪೀಳಿಗೆಯ ಪ್ರಮುಖ ಕಾರ್ಯಕರ್ತರೆಂದು ಉಲ್ಲೇಖಿಸಬಹುದಾಗಿದೆ. ಲೋಕಮಾನ್ಯರ ಪ್ರತ್ಯಕ್ಷ ತಿಲ್ಯಕೋಟಿಗೆ ಸೇರಿದ್ದ ದಿವಂಗತ ಹೊನ್ನಾಪುರಮಠ ಗದಿಗೆಯ್ಯನವರನ್ನೂ ಈ ಸಂದರ್ಭದಲ್ಲಿ ಅಗತ್ಯವಾಗಿ ಸ್ಮರಿಸಬೇಕಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಸೂತ್ರಧಾರಕರೂ ಕಾರ್ಯಕರ್ತರೂ ಮತ್ತು ಇನ್ನೂ ಹಲಕೆಲವು ಧಾರವಾಡದ ಪ್ರಮುಖ ಮಹನೀಯರೂ ಈ ವಿಚಾರದ ಪ್ರಚಾರ-ಪ್ರಸಾರಕ್ಕೆ ತಮ್ಮ ಪೂರ್ತಿಪೂರ್ವಕವಾದ ಪೆಂಬಲವನ್ನಿತ್ತುದರಿಂದಲೆ, ೧೯೨೨ ಮತ್ತು ೧೯೨೪ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಪರೀಕ್ಷೆ ಮತ್ತು ಅಧಿವೇಶನಗಳ ಸಂದರ್ಭದಲ್ಲಿಯೆ, (ಅಮಲ) ಕರ್ನಾಟಕ ಗ್ರಂಥಕಾರರ ಸಮ್ಮೇಲನಗಳು, ಮೈಸೂರಿನ ದಿವಂಗತ ಎಸ್. ಜಿ. ನರಸಿಂಹಾಚಾರ್ಯರೆಂಬ ಸುಪ್ರಸಿದ್ಧ ವಿದ್ವಾಂಸರ ಅಧ್ಯಕ್ಷತೆಯಲ್ಲಿ, ಇಲ್ಲಿ ಆಗ ಇದ್ದ ಏಕೈಕ ಯೂನಿವರ್ಸಿಟಿಯಾದ ಕರ್ನಾಟಕ ಕಾಲೇಜಿನಲ್ಲಿ ಸಾಂಗವಾಗಿ ನಡೆದುವು. ಇದೇ ಸಂದರ್ಭದಲ್ಲಿ ಶ್ರೀಮಾನ್ ಆಲೂರ ವೆಂಕಟರಾಯರು ಕರ್ನಾಟಕ ಸಂಪಾದನ ಸ್ಥಾಪನಾಚಾರ್ಯರೆಂದು ಪ್ರಸಿದ್ಧರಾಗಿದ್ದ ಶ್ರೀಮದ್ವಿದ್ಯಾರಣ್ಯರ ಜೀವ್ಯಹೊಂದು ಚರಿತ್ರೆಯನ್ನು, ಆವರ ಜೀವನದ ಐತಿಹಾಸಿಕ ವಿನ್ಲೇಷಣೆಯ ಸಂಶೋಧನ ದೃಷ್ಟಿಯಿಂದ ಹೊರಹೊಮ್ಮಿ ಪ್ರಕಟಿಸಿರುವುದೂ ಕರ್ನಾಟಕದ ಐತಿಹಾಸದ ಉಜ್ವಲ ಪರಂಪರೆಯನ್ನು ಜತ್ತಿಗೆಯೆತ್ತರಿಸಲು ನೆರವಾಯಿತು. ಇಲ್ಲಿ ಕೂಡಿದ ಎರಡು ಗ್ರಂಥಕಾರರ ಸಮ್ಮೇಲನಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡೆಯಿದ ಮೂಲಕ ಶ್ರೀಮಾನ್ ಆಲೂರವರು,

ವಷ್ಟೇ 'ಬ' ಜೀವಸತ್ವವು ಸೋಯಾ ಹಾಲಿನಲ್ಲಿರುತ್ತದೆ. ಹಲವಾರು ಸಲ ಕುದಿಸಿದರೂ ಜೀವಸತ್ವಗಳು ನಾಶವಾಗಿ ಹೋಗುವುದಿಲ್ಲ. ಆಕಳ ಹಾಲಿಗಿಂತ ಸೋಯಾ ಹಾಲಿನಲ್ಲಿ ಒಂದಿನಿತು ಕ್ಯಾಲ್ಸಿಯಮ್ ಪ್ರಮಾಣವು ಕಡಿಮೆ ಇರುತ್ತದೆ. ಸೋಯಾ ಹಾಲಿಗೆ ಕ್ಯಾಲ್ಸಿಯಮ್ ಹೈಡ್ರೋಜನ್ ಫಾಸ್ಫೇಟ್ (CaH_4Po_4) ಕೂಡಿಸುವುದರಿಂದ ಕ್ಯಾಲ್ಸಿಯಮ್ (Ca)ದ ಪ್ರಮಾಣವನ್ನು ಆಕಳ ಹಾಲಿನಲ್ಲಿರುವ ಕ್ಯಾಲ್ಸಿಯಮ್ ಪ್ರಮಾಣಕ್ಕೆ ಏರಿಸಬಹುದು. ವಿಜ್ಞಾನಿಗಳ ಅವಿರತ ಪ್ರಯತ್ನದ ಫಲವಾಗಿ ಇಂದು ಸೋಯಾಹಾಲಿನಿಂದ ಹಾಲಿನ ಕೊರತೆಯನ್ನು ತುಂಬಿಕೊಳ್ಳುವುದು ಸುಲಭಸಾಧ್ಯವಾಗಿದೆ. (ಈ ವಿಷಯಕ್ಕೆ ಇನ್ನೂ ಹೆಚ್ಚಿಗೆ ವಿಷಯ ತಿಳಿಯಬೇಕೆಂಬ ಜಿಜ್ಞಾಸುಗಳು 'ಜಯಂತಿ'ಯಲ್ಲಿ 'ಮೇ' ಸಂಚಿಕೆಯಲ್ಲಿಯ 'ಕೃತ್ರಿಮ ಹಾಲು' ಮತ್ತು 'ವಿಜ್ಞಾನ ಮತ್ತು ಸಂಸ್ಕೃತಿ (Science and Culture) ಮಾಸಿಕದ 'ಜೂನ್' ಸಂಚಿಕೆಯಲ್ಲಿಯ 'A practical approach to the milk-problem in India' ಎಂಬ ಲೇಖನಗಳನ್ನೂ ಓದಬಹುದು) ಇದೂ ಅಲ್ಲದೆ ಮಹಾತ್ಮಾ ಗಾಂಧಿಯವರು ಸೋಯಾಬೀನುಗಳ ವಿಷಯವಾಗಿ ಹರಿಜನದಲ್ಲಿ ಎಷ್ಟೋ ಲೇಖನಗಳನ್ನು ಬರೆದು ಅವುಗಳ ಮಹತ್ತ್ವವನ್ನು ತಿಳಿಸಿ ಹೇಳಿದ್ದಾರೆ.

ಸೋಯಾಬೀನಿಗೆ ಭಾರತದಲ್ಲಿ ಇಷ್ಟೊಂದು ಮಹತ್ತ್ವ ತಂದು ಕೊಟ್ಟ ಕೀರ್ತಿ ಕನ್ನಡಿಗರಿಗೆಯೆ ಸಲ್ಲುತ್ತದೆ. ಆದರೂ ಅವುಗಳ ಉಪಯೋಗವನ್ನು ನಾವು ಸಾಕಷ್ಟು ಮಾಡಿಕೊಂಡಿಲ್ಲ. ಕರ್ನಾಟಕದಲ್ಲಿ ಸೋಯಾಬೀನುಗಳನ್ನು ಬೆಳೆಯಲಿಕ್ಕೆ ತಕ್ಕ ನೆಲ, ಹವಾಮಾನ ಇತ್ಯಾದಿ ಉಪಯುಕ್ತ ಸಾಧನಗಳಿದ್ದರೂ, ನಮ್ಮ ಒಕ್ಕಲಿಗರು ಆ ಕಡೆಗೆ ಲಕ್ಷ್ಯವಿತ್ತಿಲ್ಲ. ಆದುದರಿಂದ ಕನ್ನಡ ಒಕ್ಕಲಿಗರು, ವ್ಯವಸಾಯಗಾರರು ಸೋಯಾಬೀನಿನ ಕಡೆಗೆ ಲಕ್ಷ್ಯ ಕೊಡಿ ನಾವಿನ ಸಂಸ್ಕರಣವನ್ನು ಹೆಚ್ಚಿಸುವುದರಲ್ಲಿ ನೆರವಾಗಬೇಕು.

ಪ್ರತಿಕ್ರಿಯೆ

★

'ಸಿರಿ' ಮಂಗಳೂರು

"ಎಳೆಯರಾಗಿರೆ ನಾವು 'ಪ್ರಿಯೆ, ಸತಿನೀ' ಎಂದು
ಜೊಂದುಟಗಳನೊಮ್ಮೆ ಮುದ್ದಿಸಲು-
ಜಿಂಗುಲಾಬಿಯ ನೊಂಪ ಮೊಗವೆಲ್ಲ ತಳೆದರೂ,
'ಇದೊ, ಅಮ್ಮನೊಡನುಸುರುವೆ!' ಎಂದೆ ಜಾಣೆ.

ಇಂದಾನು ನೂರೊಮ್ಮೆ ಒಂದಾಗಿ ಮುದ್ದಿಸುವೆ;
ತಂದೆಯೊಡನೆ ದೂರುವೆಯೇನು?" ಎಂದೆ.

ಅರೆಬಿರಿದ ಮಂದಾರದ ಮುಗುಳು ಎನ್ನರಸಿ,
"ಅಂದಿನ ಕೂಸೇನು ಇಂದು ನಾನು?

ಸರುವಾಧಿಕಾರಿತ್ವ, ಮಡದಿಯ ಮುಡಿಪಾದು-
ದಿಂದೆನ್ನೊಳರಲು ತಂದೆಯ ನೆರವೇಕೆ?

ಬಿಡುನೆನೆ? ನೀಡಿಸುರಿಯ ಸಂತವಿಡುವೆನು-
ಪ್ರತಿಕ್ರಿಯೆಯನೆಸಗಿಯೆ" ಎನ್ನ ಬೇಕೆ?

ಎಲ್ಲಿರುವೆ ಬಾ!

★

'ಶಿವಲಿಂಕ' ಹೈದರಾಬಾದ್

ಅಗಲಿಕೆಯ ವೇದನೆಯ ಸಹಿಸುತಲಿ ಈ ಜಗದಿ
ಎನಿತು ದಿನ ಬಾಳ್-ಶಕಟ ನಡಸುತಿರಲಿ?

ಪ್ರಾಣಪಕ್ಷಿಯು ಜವನ ಬಲೆಗೆ ಬೀಳದ ಮುನ್ನ
ನಿನ್ನ ಕೂಡುವ ಸುದಿನ ಬೇಗ ಬರಲಿ.

ನೀಲ ಗಗನದಿ ಪೊಳೆವ ಸುಂದರೇಂದುಪ್ರಭೆಯ
ನೋಡಿ ಹೆಚ್ಚುವುದೆನ್ನ ಪ್ರೇಮ ಜಲಧಿ;

ಎಂದಿಗೂ ಅಳಿಯದಿಹ ಹೃದಯಾಗಸದ ಮೇಘ-
ಗರ್ಜನೆಯ ನಿಲಿಸು ಬಾ ನೆಲಸಿ ಮನದಿ!

ಮಾಣಾತನೆಸೆಯುತಿಹ ಆಂಬುಗಳ ನೋವಿನಲಿ
ಸಲುಕಿ ಮನ ನವೆಯುವಿಪ ಜವಧಾರಿಸು!

ನೀನಿರುವುದೆಲ್ಲಿಯದು ಬಿಟ್ಟಲೆ? ಎಲ್ಲಿಯೆಂಬುದನರಿಯೆ,
ಕಾಡದಿರು ಬಾರೆ ಪ್ರಿಯೆ. ಮೊಗವೋರಿಸು!

೧ ರಾಜನೀತಿಶಾಸ್ತ್ರ

ಲೇಖಕರು ಶ್ರೀಮಾನ್ ಕೃಷ್ಣಾಚಾರ್ಯ ಜೋಶಿ, ಬಿ. ಎ. ಎಲ್. ಎಲ್. ಬಿ, ಎಡ್ವೊಕೇಟ್ ಹೈದರಾಬಾದ್; ಪ್ರಕಾಶಕರು ಹೈದರಾಬಾದ್. ಸಂಸ್ಥಾನ ಕರ್ನಾಟಕ ಪರಿಷತ್ತು, ಹೈದರಾಬಾದ್. ಬೆಲೆ ೨-೦-೦.

ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿ ಪ್ರತಿಯೊಬ್ಬನಿಗೂ ರಾಜನೀತಿಯ ಪರಿಚಯವಿರಬೇಕಾದುದು ಅತ್ಯವಶ್ಯ. ಹಳ್ಳಿಯಲ್ಲಿಯ ಸಾಮಾನ್ಯ ಜನರೂ ಇಂದು ಪ್ರಭುತ್ವವನ್ನು ಆರಿಸಿ ನಿರ್ಮಿಸುವ ಹಕ್ಕು ಪಡೆದಿರುವರಾದುದರಿಂದ, ಆ ಹಕ್ಕಿನ ಸದುಪಯೋಗವಾಗುವ ಬಗೆಯನ್ನರಿತುಕೊಳ್ಳಲಿಕ್ಕೆ ಅವರಿಗೆ ರಾಜನೀತಿಯ ಹೊರರೇಷೆಗಳ ಪರಿಚಯವಿರುವುದಾದರೂ ಅಗತ್ಯದ ವಿಷಯ. 'ರಾಮನೇ ಬರಲಿ, ರಾವಣನೇ ಬರಲಿ, ರೈತನಿಗೆ ರಾಗಿಬೀಸುವುದು ತಪ್ಪದು' ಎಂಬ ಗಾದೆಗೆ ಇಂದು ಬೆಲೆಯೆ ಇಲ್ಲವಾಗಿದೆ; 'ರಾಗಿಬೀಸಲು ಬಲ್ಲವನೇ ರಾಜ್ಯವಾಳಬೇಕು!' ಎಂಬ ಪ್ರಜಾಪ್ರಭುತ್ವವಾದಿಗಳ ಒತ್ತಾಯದ ಚಳವಳಿ ಆ ಗಾದೆಯ ಮೂಲವನ್ನು ಬೆಲೆಯಿಲ್ಲದಂತೆ ಮಾಡಿಬಿಟ್ಟಿದೆ. ರಾಗಿಬೀಸುವವನೇ ರಾಜ್ಯವಾಳಬೇಕೆಂದಾದರೆ, ರಾಗಿ ಬೀಸುವವನು ರಾಜನೀತಿಯನ್ನೂ ಅರಿತಿರಬೇಕಾಗುವುದು. ಇಲ್ಲವಾದರೆ ಮೇಲಾಟದ ಇಂದಿನ ಕಾಲದಲ್ಲಿ, ರಾಜನೀತಿಯನ್ನರಿಯದ ಜನತೆಯ ಪ್ರಭುತ್ವಕ್ಕೆ ಸ್ಥೈರ್ಯವೇ ಇಲ್ಲದಂತಾಗುವುದು. ನಮ್ಮಲ್ಲಿ ಸ್ವಾತಂತ್ರ್ಯದ ಜಾಗೃತಿಹುಟ್ಟಿದ್ದರೂ, ಅದನ್ನು ಪಡೆಯಲು ನಾವು ಮನವಾರೆ ಹವಣಿಸುತ್ತಿದ್ದರೂ, ಅದನ್ನು ನಮಗೆ ದೊರೆಯದಂತೆ ದೂರ ದೂರಕ್ಕೆ ಓಡಿಸುತ್ತಿರುವ ಬ್ರಿಟಿಷರ ರಾಜನೀತಿ ಸ್ಥೈರ್ಯಶೂನ್ಯ. ನಮ್ಮಲ್ಲಿಯ ರಾಜನೀತಿವಿಷಯಕವಾದ ಅಜ್ಞಾನವು ಪುತ್ಸರ, ಸ್ವಕೀಯಕಲಹ, ಸ್ವಾರ್ಥಸಾಧನೆಯ ಪ್ರವೃತ್ತಿಯನ್ನು ಹೆಚ್ಚಿಸಿ, ಬೇಕಾಗಿರುವ ಸ್ವಾತಂತ್ರ್ಯವನ್ನು ಕಣ್ಣಿಗೆ ಕಾಣಿಸದಂತೆ ಸಾಡುತ್ತಲಿದೆ.

ಸಮಾಜಸಂಘಟನೆ, ಸಂರಕ್ಷಣೆ, ಸುಖಜೀವನಕ್ಕಾಗಿ ರಾಜನೀತಿ ಬೇಕು. ಪರಕೀಯರ ಆಕ್ರಮಣಬುದ್ಧಿ, ವೈರ, ಸ್ಪರ್ಧೆಗಳನ್ನು ತಡೆಯಲಿಕ್ಕೂ ರಾಜನೀತಿ ಬೇಕು. ಆಹಾರ-ನೀರು-ಸಂಸ್ಕೃತಿಗಳಷ್ಟೇ ಇಂದು ಪ್ರತಿಯೊಬ್ಬ ಮಾನವನಿಗೆ ರಾಜನೀತಿಯ ತಿಳಿವಳಿಕೆ ಅಗತ್ಯವಾಗಿದೆ. ಇಂತಹ ತಿಳಿವಳಿಕೆ ಮಾಡಿಕೊಡಬಲ್ಲ ಗ್ರಂಥಗಳು ಕನ್ನಡದಲ್ಲಿ ಇದುವರೆಗೆ ಇರಲೇ ಇಲ್ಲವೆಂದು ಹೇಳಬಹುದು. ಮೈಸೂರು ವಿಶ್ವವಿದ್ಯಾಲಯದವರು ತಮ್ಮ ಕನ್ನಡ ಪ್ರಕಟನೆಯಲ್ಲಿ ರಾಜನೀತಿ ಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಪುಸ್ತಕ ಪ್ರಕಟಿಸಿದ್ದಾರೆ. ಎರಡನೆ ದಾಗಿ ಶ್ರೀಮಾನ್ ಕೃಷ್ಣಾಚಾರ್ಯ ಜೋಶಿಯವರಿಂದ ಈ ಪುಸ್ತಕ 'ರಾಜನೀತಿಶಾಸ್ತ್ರ' ಪ್ರಕಟವಾಗಿ ಕನ್ನಡಿಗರೆದುರು ಬಂದಿದೆ.

ಈ ಪುಸ್ತಕದ ಪೂರ್ವಾರ್ಧದ ೬ ಪ್ರಕರಣಗಳಲ್ಲಿ ರಾಜನೀತಿ ಶಾಸ್ತ್ರದ ತತ್ತ್ವವಿವೇಚನೆಯೂ ಇತಿಹಾಸ ಪರಂಪರೆಯೂ ಅಡಕವಾಗಿವೆ. 'ವಿಷಯಪ್ರವೇಶ' ಎಂಬ ಮೊದಲನೆಯ ಪ್ರಕರಣದಲ್ಲಿ ರಾಜನೀತಿಯೆಂದರೇನು?— ಸಮಾಜದ ಸುಖ-ಶಾಂತಿ-ಸ್ವಾಸ್ಥ್ಯಗಳಿಗೆ ಅದರ ಸಂಬಂಧವೆಷ್ಟಿದೆ?— ಸಮಾಜಶಾಸ್ತ್ರದ ಒಂದು ಮಹತ್ತ್ವದ ಅಂಗ ರಾಜನೀತಿಯೆ ಹೇಗೆ ಆಗಿದೆ— ಇತ್ಯಾದಿ ವಿಷಯಗಳನ್ನು ಪ್ರಮುಖ ರಾಜನೀತಿಜ್ಞರ ಪ್ರಮಾಣಭೂತ ಅಭಿಪ್ರಾಯಗಳೊಂದಿಗೆ ವಿವರಿಸಲಾಗಿದೆ. 'ರಾಜ್ಯದ ಉತ್ಪತ್ತಿವಾದ' ಎಂಬ ಎರಡನೆಯ ಪ್ರಕರಣದಲ್ಲಿ ೧ ರಾಜ್ಯದ ಉತ್ಪತ್ತಿ, ೨ ರಾಜ್ಯದ ಸ್ವರೂಪ, ೩ ರಾಜ್ಯದ ಮುಖ್ಯ ಅಂಗಗಳು, ೪ ರಾಜ್ಯದ ಉದ್ದೇಶ ಇವುಗಳನ್ನು ಕುರಿತು ಸಾಧಾರ ವಿವೇಚನೆಗಳಿವೆ. ಮೂರನೆಯ 'ಮಾನವನ ಮೂಲಭೂತ ಹಕ್ಕುಗಳು' ಎಂಬ ಪ್ರಕರಣದಲ್ಲಿ ೧ ಸ್ವಾತಂತ್ರ್ಯ, ೨ ಸಮಾನತೆ, ೩ ನಾಗರಿಕತೆ ಇವುಗಳನ್ನು ಕುರಿತು ವಿವರ ವಿವೇಚನಾಪೂರ್ವಕ ವಿವೇಚನೆ ಮಾಡಲಾಗಿದೆ. ೪ನೆಯ ಪ್ರಕರಣದಲ್ಲಿ 'ಶಾಸನ'ಗಳನ್ನು ಕುರಿತ ವಿಸ್ತಾರವಾದ ಚರ್ಚೆಯಿದೆ. 'ರಾಜ್ಯದ ಆಧುನಿಕ ಕರ್ತವ್ಯಗಳು' ಎಂಬ ಐದನೆಯ ಪ್ರಕರಣದಲ್ಲಿ ವ್ಯಕ್ತಿವಾದ, ಸಮಷ್ಟಿವಾದ, ಕ್ರಾಂತಿವಾದ, ಉತ್ಕ್ರಾಂತಿವಾದ ಮೊದಲಾದ ರಾಜಕೀಯ ವಾದಗಳ ತಿಳಿಯಾದ ವಿವೇಚನೆಯಿದೆ. ೬ನೆಯ ಪ್ರಕರಣವಾದ 'ಭಾರತೀಯ ರಾಜನೀತಿ' ಎಂಬುದರಲ್ಲಿ ನಿರಾಜ್ಯರಾಜ್ಯ ತಯುದ್ಧ ಶಾಸ್ತ್ರಗಳೆಂಬ ಮೂರು ಮಾದರಿಗಳ— ಸಮನ್ವಯವಾದ— ವಿವೇಚನೆಯಿದೆ. ಪ್ರಾಚೀನ ಭಾರತದ ರಾಜ್ಯವ್ಯವಸ್ಥೆಯ ಬಣ್ಣನೆಯನ್ನು ೬ನೆಯ ಪ್ರಕರಣದಲ್ಲಿ ಕಾಲಾನುಸಾರವಾಗಿ ಮಾಡಲಾಗಿದ್ದು, ಅದು ನಮ್ಮ ಪೂರ್ವಜರ ರಾಜನೀತಿ ಪ್ರಾವೀಣ್ಯದ ಬಗೆಗೆ ಹೆಮ್ಮೆ-ಪುಳಕಗಳನ್ನು ಹುಟ್ಟಿಸುವಂತಿದೆ.

ಉತ್ತರಾರ್ಧದಲ್ಲಿರುವ ಏಳು ಪ್ರಕರಣಗಳಲ್ಲಿ ರಾಜಕೀಯ ಸಂಸ್ಥೆಗಳ ವಿವಿಧಮುಖವಾದ ಪರಿಚಯ, ವರ್ಣನೆ, ಚರ್ಚೆಗಳಿವೆ. ರಾಜ್ಯದ ಪ್ರಕಾರಗಳು, ರಾಜ್ಯದ ಘಟನೆ ಮತ್ತು ಆಯ್ಕೆ. ರಾಜ್ಯತಂತ್ರದ ವಿಭಾಗಗಳು (೧ ಶಾಸನಸಭೆ, ೨ ಕಾರ್ಯನಿರ್ವಾಹಕ ಸಭೆ, ೩ ನ್ಯಾಯಸಭೆ) ಸಂಘಟಿತ ರಾಜ್ಯಪದ್ಧತಿ (ಇದರಲ್ಲಿ ಫೆಡರೇಷನ್ನಿನ ವಿಚಾರವೂ ಇದೆ), ಎಂಬ ಮೊದಲಿನ ನಾಲ್ಕು ಪ್ರಕರಣಗಳಲ್ಲಿ ಪ್ರತ್ಯಕ್ಷ ರಾಜ್ಯಯಂತ್ರದ ಶಾಸ್ತ್ರೀಯ ವಿವರಣೆಯಿದೆಯಲ್ಲದೆ, ಮುಂದಿನ ಮೂರು ಪ್ರಕರಣಗಳಲ್ಲಿ

'ಇಂಗ್ಲಂಡಿನ ಪ್ರಭುತ್ವ' 'ಹಿಂದುಸ್ತಾನದ ಪ್ರಭುತ್ವ' 'ಹೈದರಾಬಾದಿನ ಪ್ರಭುತ್ವ'ಗಳನ್ನು ತಿಳಿಯಾಗಿ ಸಂಚಯ ಮಾಡಿಕೊಡಲಾಗಿದೆ. ಕೊನೆಯ (ಅ) ಪರಿಶಿಷ್ಟದಲ್ಲಿ 'ವೆವೆಲ್' ಅವರ ಯೋಜನೆ'ಯ ಸಾರಾಂಶವನ್ನು (ಬ) ಪರಿಶಿಷ್ಟದಲ್ಲಿ 'ರಾಜಕೀಯ ಶಬ್ದಕೋಶ'ವೂ (ಕ) ಪರಿಶಿಷ್ಟದಲ್ಲಿ 'ಸಾಂಭಾಷಿಕ ಶಬ್ದ'ಗಳೂ ಇವೆ. ಈ ಪುಸ್ತಕವನ್ನು ಬರೆಯುವುದಕ್ಕೆ ಆಧಾರಭೂತವಾದ ೪೪ ಬೇರೆ ಬೇರೆ ಗ್ರಂಥಗಳ ಪಟ್ಟಿ ಕೊನೆಯಲ್ಲಿದೆ.

ಇದು ಗ್ರಂಥದ ಮುಖಪರಿಚಯ ಮಾತ್ರ; ವಿಮರ್ಶೆಯಲ್ಲ. ಇಂತಹ ಗ್ರಂಥಗಳನ್ನು ಮುಂದೆ ಕರೆದು ಸ್ವಾಗತಿಸುವ ಕಾಲವಿದು. ಗುಣ-ದೋಷಗಳನ್ನು ಚರ್ಚಿಸಿ ಲೇಖಕರನ್ನು ಅಸಮಾಧಾನವಿಷಾದಗಳಿಗೆ ಗುರಿಮಾಡುವ ಸಂವರ್ಧ—ಇಂತಹ ಶಾಸ್ತ್ರೀಯ ಗ್ರಂಥಗಳ ಬಗೆಗೆ—ನಮ್ಮಲ್ಲಿ ಇನ್ನೂ ಬಂದಿಲ್ಲ. ಅಲ್ಲವೆ ಶ್ರೀಮಾನ್ ಕೃಷ್ಣಾಚಾರ್ಯ ಜೋಶಿಯವರು ಅಧ್ಯಯನ, ಪರಿಶ್ರಮಗಳ ಬಲದಿಂದ ಸಿದ್ಧಪಡಿಸಿದ ಈ ಪುಸ್ತಕದಲ್ಲಿ ಗುಣಗಳೇ ಹೆಚ್ಚಾಗಿ ತುಂಬಿರುವು ಕಾಣುತ್ತಿದೆ ನಮಗೆ ಕನ್ನಡದಲ್ಲಿ ಸರ್ವಮಾನ್ಯವಾದ ರಾಜಕೀಯ ಪರಿಭಾಷೆಯಿನ್ನೂ ನಿರ್ಮಾಣವಾಗಿಲ್ಲ. ಪ್ರಸ್ತುತ ಲೇಖಕರು ನಿರ್ಮಿಸಿದ ಪರಿಭಾಷಾ ಪದಗಳಲ್ಲಿ ಕೆಲವು ಸರ್ವಮಾನ್ಯತೆ ಪಡೆಯುವಂತಿವೆ. ಇನ್ನು ಕೆಲವು ಸರ್ವಮಾನ್ಯವೆನಿಸವಿದ್ದರೂ ಪ್ರಸ್ತುತ ಗ್ರಂಥದಲ್ಲಿಯ ವಿಷಯವನ್ನು ನಿಃಸಂದಿಗ್ಧವಾಗಿ ತಿಳುಹಲು ಯೋಗ್ಯವೆನಿಸುವಂತಿವೆ. ಮುದ್ರಣದ ಕರದು ಕಾಗದಗಳನ್ನು ಇನ್ನಿಷ್ಟು ಕಣ್ಣಿಟ್ಟು ನೋಡಿದ್ದರೆ ಚೆನ್ನಾಗಿತ್ತು.

ಕನ್ನಡದಲ್ಲಿರುವ ರಾಜನೀತಿ ವಿಷಯಕ ವಾಙ್ಮಯದ ಕೊರತೆಯನ್ನು ಪರಿಹರಿಸಲು ಕಾರಣವಾದ ಈ ಗ್ರಂಥದ ಲೇಖಕರೂ ಪ್ರಕಾಶಕರೂ ನಿಸ್ಸಂಶಯವಾಗಿಯೂ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

—ಬಿ. ಎ. ಎಸ್. ರಾವ್.

೫೧ ನಾರಿ

(ನೀಳ್ಗತೆ)

ಬರೆದವರು ಶ್ರೀ. ರಮಾನಂದ ಅವಿನಾಶರು. ಪ್ರಕಾಶಕರು ರಂಗ-ಮಂಗ ಪ್ರಕಾಶನ, ಧಾರವಾಡ. ಬೆಲೆ ೦-೬-೦.

ಹೊಸ ಬರೆಹಗಾರರೊಬ್ಬರ ಕೃತಿಯ ಪ್ರಕಟನೆಯಿದು. ಹೊಸಬರ ಕೃತಿಗಳನ್ನು ವಿಮರ್ಶಕರು ಸಹಾನುಭೂತಿಯಿಂದ ಕಾಣಬೇಕೆಂಬುದರ ಮನವರಿಕೆ ನಮಗೆ ತುಂಬ ಇದೆ ಆದರೆ ಬರೆದು ಪನ್ನೆಲ್ಲ ಪ್ರಕಟಿಸಿಯೆ ಬಿಡಬೇಕೆಂಬ ತರುಣ ಲೇಖಕರ ಆತುರ ಅಷ್ಟು ಒಳ್ಳೆಯದಲ್ಲವೆಂದು ಈ ಪುಸ್ತಕವನ್ನೋದಿದ ಯಾರೂ ಹೇಳುವಂತಿದೆ. ಮೊದಲನೆಯದಾಗಿ ಲೇಖಕರಿಗೆ ಕನ್ನಡ ಭಾಷೆಯ ಶುದ್ಧ ಸ್ವರೂಪವೂ ಗೊತ್ತಿಲ್ಲ, ಜಾನಪದ ಸ್ವರೂಪಗಳೂ ತಿಳಿದಿಲ್ಲ. ಆದುದರಿಂದ ಭಾಷೆ ವೈಷಮ್ಯದ ಆಗರವಾಗಿದೆ. ವಾಕ್ಯಗಳನಡಿಗೆ ವ್ಯಾಕರಣದ ಶುದ್ಧತೆಯನ್ನು ಅನುಸರಿಸುವುದು; ಶಬ್ದಗಳ ಪ್ರಯೋಗ ಕನ್ನಡದ ಯಾವ ಒರೆಗಲ್ಲಿಗೆ ತಿಕ್ಕಿ ನೋಡಿದರೂ ಒರೆಗೆ ಹತ್ತುವಂತಿಲ್ಲ. ಕತೆಗಾರಿಕೆಗೆ ಭಾಷೆಯ ಮೇಲಿನ ಪ್ರಭುತ್ವ ಪೊಂದು ಅವಶ್ಯಕ ಅಂಶವಾಗಿರುವುದೆಂಬುದನ್ನು ಲೇಖಕರು ಮರೆಯಬಾರದು.

ಕಥಾವಸ್ತು ಪೊಂದು ಮೂರನೆಯ ತರಗತಿಯ ಚಲಚ್ಚಿತ್ರದ ಕತೆಗೆ ಸಮಾನವಾಗಿದೆ. ಅಸಮಂಜಸವಾದ ಅದ್ಭುತ ಘಟನೆಗಳನ್ನೂ ಮದುವೆಯ ವಿಚಾರದಲ್ಲಿರುವ ತಮ್ಮ ಅಪಕ್ವ ಅಭಿಪ್ರಾಯಗಳನ್ನೂ ವಾಚಕರ ತಲೆಯಲ್ಲಿ ತುಂಬಬೇಕೆಂದೂ ಲೇಖಕರ ಆಪೇಕ್ಷೆಯಿದೆ.

ನಾಯಿಕೆಯಾದ ನಳಿನಿ— ಸುಶಿಕ್ಷಿತ ಮಹಿಳೆಯಾಗಿದ್ದರೂ— ಕೊನೆಯವರೆಗೂ ನಮಗೆ ಕಾಣುವುದು ಸ್ವೈರಿಣಿಯಂತೆ; ಗಂಡನ್ನು ಬೆನ್ನಟ್ಟಿ ಬೇಟೆಯಾಡಬಯಸುವ ಕಾಮುಕ ಹೆಣ್ಣಿನಂತೆ. ತಂದೆ ಮೃತ್ಯುಶಯ್ಯೆಯಲ್ಲಿ ಮಲಗಿದಾಗಲೂ ಅವನನ್ನು ಬಿಟ್ಟು ನಲ್ಲನೊಂದಿಗೆ ಪ್ರೇಮಯಾತ್ರೆಗೆ ಹೊರಡುವಷ್ಟು ಕಾಮಾಂಧಳು. ಅಂತಹಳು ಕೊನೆಯ ಒಂದು ನಿಮಿಷದಲ್ಲಿ ಪರಿವರ್ತಿತ ಹೃದಯದಿಂದ ಪಾಠಕರಿಗೆ ದರ್ಶನಕೊಟ್ಟು, ಅವರನ್ನು ಮಂಕುಗೊಳಿಸುತ್ತಾಳೆ. ಇದೊಂದೇ ಪಾತ್ರ ಹೀಗೆಂದಲ್ಲ; ಎಲ್ಲವೂ ಮಣ್ಣು ಮುದ್ದೆಯ ಪಾಪೆಗಳು. ಲೇಖಕರು ತಮಗೆ ಬೇಕಾದಾಗ ಬೇಕಾದಂತೆ ಕೈಕಾಲುಗಳನ್ನು ಹಚ್ಚಿ ಅವುಗಳನ್ನು ಎತ್ತಿ ತೋರಿಸುವರು.

ನಾಯಕನಾದ ಅಜಯ ಮನೆಬಿಟ್ಟು ಹೋದ ಮೇಲೆ. ಬರಿ ನೀರು ಕುಡಿದೇ ಎಷ್ಟುದಿನವಿದ್ದನೋ! ಹೊಳೆಯಲ್ಲಿ ಮುಳುಗಿದ ಕಮಲೆ ಮುಂದೆ ಹರಿದು ಹೋಗದೆ ಮುಳುಗಿದ ಸ್ಥಳದಲ್ಲಿಯೆ 'ಗುಳುಂ ಗುಳುಂ' ಎಂದು ಶಬ್ದಮಾಡುತ್ತ ಹೇಗೆ ಇದ್ದಳೋ! ಅವಳನ್ನು ಹೊರಕ್ಕೆ ತೆಗೆದ ಮೇಲೆ ಪ್ರಥಮೋಪಚಾರ ಮಾಡಿದ ಜಯನು ಅವಳಿಗೆ ಒಣಬಟ್ಟೆ ಒದಗಿಸಿದ್ದನೆ? ಒದ್ದೆ ಬಟ್ಟೆಯಿಂದಲೆ ಅವರು ಒಬ್ಬರ ನೈಗೆ ಒಬ್ಬರು ತಗಲುವಂತೆ ನದಿಯ ದಂಡೆಯ ಗಿಡದಡಿಯಲ್ಲಿ ಮಲಗಿಕೊಂಡರೆ? ಅಂದೆಯೆ ಆಗಲಿ ಪರಿಚಯ ಹೊಂದಿದ್ದ ಕಮಲೆ, ಜಯನೊಂದಿಗೆ ಹಾಗೆ ಮಲಗಲು ಸಿದ್ಧಳಾಗಬಹುದೆ? ಒಂದೇ ಎರಡೇ? ಇಂತಹ ಅಸಮಂಜಸತೆ—ಅಬದ್ಧತೆಗಳನ್ನು ಕತೆಯುದ್ದಕ್ಕೂ ಕಾಣಬಹುದಾಗಿದೆ. ಇಂತಹದನ್ನು ಪ್ರಕಟಿಸುವ ಸಾಹಸ ಮಾಡಿದ ಪ್ರಕಾಶಕರು, ಇದರಲ್ಲಿ ಯಾವ ಗುಣವನ್ನು ಕಂಡುಹಿಡಿದಿದ್ದಾರೋ ಕಾಣೆವು. ತಮ್ಮ ಕೃತಿಯನ್ನು ತಾವು—ಎಂತಹದಿದ್ದರೂ— ಪ್ರಕಟಿಸಿದರೆ ಸಹ್ಯವೆನಿಸೀತು; ಆದರೆ ಒಳ್ಳೆಯ ಕೃತಿಗಳನ್ನು ಒದಗಿಸುವ ಸಂಕಲ್ಪವಿರಿಸಿಕೊಂಡಿರುವ ಪ್ರಕಾಶಕರೂ ಇಂತಹ ಬಾಲಿಶಕೃತಿಗಳನ್ನು ಹೊರಕ್ಕೆ ಹಾಕುವುದರ ಅವಶ್ಯಕತೆ—ಔಚಿತ್ಯಗಳೇನೆಂಬುದು ತಿಳಿಯದ ವಿಷಯವಾಗಿದೆ.

—'ಕುಂಜವಿಹಾರಿ'

ನಾಲ್ಕಾ ನಿಟ್ಟಿನ ನೋಟ

★

ಬ್ರಿಟಿಷರನ್ನು ನಂಬಿ ಬದುಕಿದವರಿಲ್ಲ!

ಪರಂಪರಾವಾದಿಯಿರಲಿ, ಉದಾರಮತವಾದಿಯಿರಲಿ, ಕೂಲಿಕಾರಪಕ್ಷದವನಿರಲಿ, ಭಾರತೀಯನಿಗೆ ಬ್ರಿಟಿಷನು ಬ್ರಿಟಿಷನೇ ಎಂಬುದು ಕ್ಷಣಕ್ಷಣಕ್ಕೂ ಅನುಭವಕ್ಕೆ ಬರುತ್ತಲಿದೆ. ಒಳದೇಶದ ರಾಜಕಾರ್ಯಕ್ಕಾಗಿ ಬ್ರಿಟಿಷರಲ್ಲಿ ಈ ಪಕ್ಷಭಿನ್ನತೆ ತೋರುತ್ತಿದ್ದರೂ ಹೊರದೇಶದ ರಾಜಕಾರ್ಯದಲ್ಲಿ ಪ್ರತಿಯೊಂದು ಪಕ್ಷದವರೂ ಸಮಾನದೃಷ್ಟಿಯವರಾಗಿರುವರು. ಆದರಲ್ಲಿಯೂ ಹಿಂದುಸ್ತಾನದ ಬಗೆಗಂತೂ ಬ್ರಿಟಿಷರಲ್ಲಿ ಇರುವ ಮೋಹವು ಅನಿವಾರ್ಯವಾದದ್ದು. ಅವರ ಸುಖಜೀವನ-ಭೋಗವಿಲಾಸಗಳೇ ಹಿಂದುಸ್ತಾನದ ಪರಾಧೀನತೆಯ ನೆರವಿನ ಮೇಲೆ ನಿಂತಿರುವುದೆಂದ ಮೇಲೆ, ಅದರ ಸ್ವಾಧೀನಜೀವನವನ್ನು ಯಾವ ಬ್ರಿಟಿಷನು ಮನವಾರೆ ಇಚ್ಛಿಸಬಹುದು? ಇಂದು ಇಂಗ್ಲಂಡಿನಲ್ಲಿ ಅಧಿಕಾರಸೂತ್ರಗಳನ್ನು ವಹಿಸಿರುವ ಕೂಲಿಕಾರರು, ಹಿಂದುಸ್ತಾನದ ಸ್ವಾತಂತ್ರ್ಯವನ್ನು ಬಾಯಿಮಾತಿನಲ್ಲಿಯಾದರೂ ಒಪ್ಪುತ್ತಾರೆ; ಆದರೆ ಭಾರತದ ಜನಬಲ-ಧನಬಲ-ಅನ್ನಬಲದ ಸಂಪೂರ್ಣ ಸಾಹಾಯ್ಯದಿಂದಲೇ ಜರ್ಮನಿ-ಇಟಲಿ-ಜಪಾನುಗಳನ್ನೆದುರಿಸಿ ವಿಜಯಶಾಲಿಯಾಗಿ ಮೆರೆಯುತ್ತಿರುವ ಕೃತಘ್ನ ಶಿಖಾಮಣಿ ಚರ್ಚಿಲನು, ಕೂಲಿಕಾರ ಪಕ್ಷದವರಾಡುವ ಭಾರತಸ್ವಾತಂತ್ರ್ಯದ ಬರಿ ಮಾತುಗಳನ್ನೂ ಕೇಳಲಾರದವನಾಗಿರುವನು. ಹಿಂದುಸ್ತಾನದ ರಾಷ್ಟ್ರೀಯ ಮಹಾಸಭೆಯ ಹೆಸರನ್ನೆತ್ತಿದರೆ, ಮೂಕನ ಮುಂದೆ ಮೂಗನ್ನು ತುರಿಸಿಕೊಂಡಂತಾಗುವುದು ಚರ್ಚಿಲನಿಗೆ. ಬ್ಲ್ಯಾಕ್‌ಪೂಲಿನಲ್ಲಿ ಸೇರಿದ ಬ್ರಿಟಿಷ್ ಟೋರಿಪಕ್ಷದ ಸಭೆಯೊಂದರಲ್ಲಿ ಈ ಮಹಾರಯನು ಆಡಿದ ಮಾತುಗಳೆಂದರೆ, ಭಾರತದ ಸ್ವಾತಂತ್ರ್ಯದ ಬಗೆಗಿರುವ ಬೊಚ್ಚಿನ ವಿಷದಪೂತ್ಕಾರಗಳೇ ಆಗಿವೆ. ಹಿಂದೂ-ಮುಸ್ಲಿಮ್ ವಿತುಷ್ಟಿಯನ್ನು ಹುಟ್ಟಿಸಿ ಉರಿಯೆಬ್ಬಿಸಿದ ಹಿರಿಯ ನರಿಯೇ ಚರ್ಚಿಲ್. ಭಾರತದ ಬಗೆಗೆ ಮಾತನಾಡಲು ಬಾಯೆತ್ತಿದಾಗೆಲ್ಲ ಈ ಉರಿಯಲ್ಲಿ ಹುಲ್ಲುಚೆಲ್ಲುವ ಕೆಲಸವಾಡುತ್ತಾನೆ. ಈ ಕೃತಘ್ನನ ಹೃದಯವೆಂದರೆ ಕೊಳಕುವಿಚಾರದ ಸೆಲೆಯೆ ಆಗಿದೆ. ಭಾರತೀಯ ರಾಜಕಾರ್ಯವನ್ನು ನೋಡುವ ಈತನ ದೃಷ್ಟಿಯಲ್ಲಿ, ಸ್ವಾರ್ಥ, ಅಹಂಕಾರ, ದ್ವೇಷಗಳು ತುಂಬಿರುವುವಲ್ಲದೆ, ಸಹಾನುಭೂತಿ-ಸ್ನೇಹಗಳ ಲವಲೇಶವೂ ಇಲ್ಲ. ಕೋತಿ ತಾನೊಂದೇ ಕೆಡುವುದಲ್ಲದೆ ಮೂರು ಲೋಕವನ್ನೇ ಕೆಡಿಸಿತೆಂಬಂತೆ, ಭಾರತದ ಬಗೆಗೆ ಬ್ರಿಟಿಷ್ ಜನಸಾಮಾನ್ಯರಲ್ಲಿ ತಿರಸ್ಕಾರ-ಮತ್ಸರಗಳು ಉಂಟಾಗುವಂತೆ— ಮನಃಪೂರ್ವಕವಾಗಿ— ಪ್ರಯತ್ನ-ಪ್ರಚಾರಗಳನ್ನು ಎಡೆಬಿಡದೆ ಈತ ನಡೆಯಿಸಿರುತ್ತಾನೆ. ಅವನ ಪ್ರಯತ್ನ-ಪ್ರಚಾರಗಳ ಕಟುಫಲಗಳನ್ನು ಹಿಂದುಸ್ತಾನವಿಂದು ಉಂಡೇ ಉಣ್ಣುತ್ತಲಿದೆ.

ವೇವೆಲ್ಲರೂ ಚರ್ಚಿಲರ ಕುಲದವರೇ?

ಬಹಿರಂಗವಾಗಿ ಧೀರೋದಾತ್ತ ನಾಯಕನ ವಾತ್ಸಲ್ಯವನ್ನು ವಹಿಸಿ ನಿರ್ವಹಿಸುತ್ತ ನಡೆದಿದ್ದ ವೈಸರಾಯ್ ವೇವೆಲ್ಲರ ಅಂತರಂಗದ ಆರ್ಥ, ಭಾರತೀಯರಿಗೆ ಇನ್ನು ಮೇಲೆ ಜೆನ್ನಾಗಿ ಆಗಬೇಕಾಗಿದೆ. ಬಹುಜನ ಪ್ರಭುತ್ವದ ರಸಪ್ಯವನ್ನು ಜಾತಿವಂತ ಬ್ರಿಟಿಷರಾದ ವೇವೆಲ್ ಸಾಹೇಬರು ಸಾಕಷ್ಟು ಜೆನ್ನಾಗಿ ಅರಿತಿದ್ದಾರೆ. ಆದುದರಿಂದಲೇ ಭಾರತದಲ್ಲಿ ಬಹುಸಂಖ್ಯಾಕರ ಸ್ಥಾನ-ಹಕ್ಕುಗಳೇನೆಂಬುದರ ಕಲ್ಪನೆಯೂ ಅವರಿಗೆ ತುಂಬಾ ಇದೆ. ಆದರೂ ಅವರು ನಡೆಯಿಸಿರುವ ಇಂದಿನ ಕಣ್ಣುಮುಚ್ಚಾಲೆಯ ಆಟವನ್ನು ನೋಡಿದರೆ, ಭಾರತೀಯರ ಸಂದಿಗ್ಧ ದೃಷ್ಟಿ ಚರ್ಚಿಲರ ಪಾಲಿಕೆಯಲ್ಲಿಯೆ ವೇವೆಲ್ಲಿರನ್ನೂ ಸೇರಿಸಲು ಬಯಸುತ್ತದೆ ಒಸ್ಸಂದ ಮಾಡಲು ಪೂರ್ಣ ಪ್ರಯತ್ನಿಸಿದಂತೆ ತೋರಿಸಿ, ಕೂಜಲಾರದ ಹೃದಯಗಳಿಗಾಗಿ ಬೇಸರು-ವಿಷಾದಗಳನ್ನು ಪ್ರಕಟಿಸಿ, ಬಳಿಕ ಬಹುಸಂಖ್ಯಾಕರ ಹಕ್ಕು-ಬಾಧ್ಯತೆಗಳನ್ನು ಒಪ್ಪಿದವರಂತೆ ನಟಿಸಿ, ಕಾಂಗ್ರೆಸಿಗರನ್ನು ನಡುಗಾಲ ಸರಕಾರ ರಚಿಸಲು ಕರೆದರು. ನಡುಗಾಲ ಸರಕಾರ ಸ್ಥಾಪಿತವಾಗಿ ಸುಯಂತ್ರಿತವಾಗಿ ಕಾರ್ಯವನ್ನಾರಂಭಿಸಿತು ಭಾರತ ಸ್ವಾತಂತ್ರ್ಯದ ಬಗ್ಗೆ ವೈಸ್‌ರಾಯರು ಸದುದ್ದೇಶದವರೇ ಆಗಿದ್ದರೆ, ಈಗಿವ್ವ ನಡುಗಾಲ ಸರಕಾರಕ್ಕೆ ಸಾಕಷ್ಟು ಸಹಾಯವನ್ನು ಕೊಟ್ಟು ತಮ್ಮ ಸದುದ್ದೇಶವನ್ನು ಸಾಧಿಸಬಹುದಾಗಿದ್ದಿತು. ನಡುಗಾಲ ಸರಕಾರವನ್ನು ನಡೆಯಿಸಲಿಕ್ಕೆ ಸಮರ್ಥರಾವೆ—ಬಹುಜನಪಕ್ಷವ— ಮುಖಂಡರು ಮುಂಬಿ ಬಂದಿದ್ದರು. ಯಾವ ಸ್ವತಂತ್ರ ರಾಷ್ಟ್ರದ ರಾಜಕಾರ್ಯವಿವರನ್ನೂ ನಿಃಕ್ಕಿ ನಿಹಾರುವಂತೆ ಅತಳಿತವ ರೂಪ-ರೇಷೆಗಳನ್ನು ಪಾಕುತ್ತಿದ್ದರು. ಎಲ್ಲವೂ ಸುಸೂತ್ರವಾಗಿ ನಡೆದಿರುವಾಗ, ತಿವಪ್ಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ. ಮತ್ತೆ ಮುಸ್ಲಿಂ ಲೀಗಿನ ಧುರೀಣರನ್ನು ನಡುಗಾಲ ಸರಕಾರದಲ್ಲಿ ಸೇರಲು ಆಮಂತ್ರಿಸಿದರು. ಕಾಂಗ್ರೆಸಿಗರನ್ನು ಲೆಕ್ಕಿಸದೆ ತಾವೊಬ್ಬರೆ ಸಹಕಾರ ಹಸ್ತವನ್ನು ನೀಡಿ, ಲೀಗಿನ ಪ್ರತಿನಿಧಿಗಳನ್ನು ನಡುಗಾಲ ಸರಕಾರದಲ್ಲಿ ಸೇರಿಸಿಕೊಂಡರು. 'ನಾವು ಪ್ರತಿಜ್ಞೆ ಮಾಡಿದಂತೆ, ಪಾಕಿಸ್ತಾನಕ್ಕಾಗಿ ಪ್ರತ್ಯಕ್ಷ ಹೋರಾಟವನ್ನು ಹೂಡಲಿಕ್ಕೆಂದೇ ನಾವು ನಡುಗಾಲ ಸರಕಾರದಲ್ಲಿ ಸೇರಿಕೊಂಡಿದ್ದೇವೆ!' ಎಂದು ಲೀಗಿನ ಪ್ರಮುಖರು ಈಗ ಉಗ್ಗಡಿಸುತಿರುವುದನ್ನು ನೋಡಿದರೆ, ನಡುಗಾಲ ಸರಕಾರದ ಅಪಯರಸ್ಸಿನ ಭವಿಷ್ಯಕ್ಕಾಗಿ ನಾವು ಸಂದೇಹವನ್ನೇ ಪಡಬೇಕಾಗಿಲ್ಲ. ನಡುಗಾಲ ಸರಕಾರಕ್ಕೆ ಸೇರಿಕೊಳ್ಳುವುದರಲ್ಲಿ ಮುಸ್ಲಿಂ ಲೀಗಿನವರ ಉದ್ದೇಶ ಒಳ್ಳೆಯದಿದ್ದರೆ, ಬಂಗಾಲದ ನೌಕಾಲಿಯ ಪ್ರಳಯ ಪ್ರಾರಂಭವಾಗುತ್ತಿರಲೇ ಇಲ್ಲ. ಅಲ್ಲಲ್ಲಿ ಎದ್ದ ಗಲಭೆಗಳು

ತಡೆದು ನಿಂತು ಸ್ನೇಹದ ಮಾತು-ಕತೆಗೆ ಪ್ರಾರಂಭವಾಗುತ್ತಿತ್ತು. ಇದರ ಲಕ್ಷಣ ವೈಸ್‌ರಾಯರಿಗೆ ಗೊತ್ತಿಲ್ಲವೇನು? ಗೊತ್ತಿದ್ದೂ ನಡೆಯಿಸಿರುವ ಅವರ ಈ ರಾಜಕಾರ್ಯವನ್ನು ನೋಡಿದರೆ, ನೀವೆಲ್ಲರೂ ಚರ್ಚಿಲರ ಕುಲಕ್ಕೆ ಸೇರಿದವರೇ ಎಂದು ಹೇಳಬೇಕಾಗುವುದು.

ಬಲವೇ ಬಲದ ಕಾಟವನ್ನು ಕಳೆಯಬಲ್ಲದು!

ಹಿಂದುಸ್ತಾನದ ಇತಿಹಾಸವನ್ನು ಬರೆದ ಬ್ರಿಟಿಷರು, 'ಭಾರತೀಯರು ಹೇಡಿಗಳು— ಹೆದರುಗುಳಿಗಳು—' ಎಂದು ಸಾರಿಹೇಳಿ, ಭಾರತೀಯರ ಸ್ವಸ್ವರೂಪವನ್ನೇ ನುಂಗಿಸಿಬಿಟ್ಟಿದ್ದಾರೆ. ಅವರಲ್ಲಿ ಕೀಳುತನದ ಭಾವನೆಯು ಹುಟ್ಟುವಂತೆ, ಪ್ರಾಥಮಿಕ ಶಾಲೆಯ ಪಾಠಗಳನ್ನು ಕಲಿಯುವಂದಿನಿಂದಲೂ ಮನಸ್ಸಿಗೆ ಜುಜ್ಜುಮುದ್ದನ್ನು ಕೊಡುತ್ತಬಂದಿದ್ದಾರೆ. ಇದರ ಪರಿಣಾಮ ಭಾರತೀಯರ ವಿರೋಧಿಗಳಲ್ಲಿ ಇನ್ನೊಂದು ಬಗೆಯಿಂದಾಗಿದೆ: ಗಟ್ಟಿಯಾಗಿ ನಿಂತು ಹೆದರಿಸಿದರೆ ಭಾರತೀಯರು ಬಾಲಗುಂಡಾಡಿಸುತ್ತ ಓಡಿಹೋಗುವರೆಂದು ಅವರು ತಿಳಿದಿದ್ದಾರೆ. ಮುಸ್ಲಿಂ-ಲೀಗಿನವರು 'ಪ್ರತ್ಯಕ್ಷ ಹೋರಾಟ'ದ ಪೆದರಿಕೆಯನ್ನು ಹಾಕಿದುದೂ ಹಾಕುತ್ತಿರುವುದೂ ಇದೇ ವಿಶ್ವಾಸದಿಂದಲೆ. ಆದರೆ ಬ್ರಿಟಿಷರು ಬರೆದ ಇತಿಹಾಸ ನಿಜವೆಂದು ನಂಬಿದರೂ, ಇತಿಹಾಸ ಕಾಲದ ಪರಿಸ್ಥಿತಿ ಈಗ ಉಳಿದಿಲ್ಲವೆಂಬುದನ್ನು ಹಿಂದೀಯರೆಲ್ಲ ಈಗ ಮನವರಿಕೆಮಾಡಿಕೊಳ್ಳಬೇಕಾಗಿದೆ. ಅರುವತ್ತು ವರುಷದ ಭಾರತ ರಾಷ್ಟ್ರೀಯ ಸಭೆಯ ಕಾರ್ಯ 'ಆಸೇತುಹಿಮಾಚಲ ಭಾರತರಾಷ್ಟ್ರ ಅಖಂಡವಾದುದು; ಭಾರತೀಯರೆಲ್ಲ ಒಂದೆ ಕುಲಕ್ಕೆ ಸೇರಿದವರು'— ಎಂಬ ಮಾತನ್ನು ಭಾರತೀಯರ ಹೃದಯದ ಮೇಲೆ ಕೆತ್ತಿಬಿಟ್ಟಿದೆ. ಇಂದು ಬಂಗಾಲದ ಸುಭಾಸಬಾಬು ಸಂಯುಕ್ತಪ್ರಾಂತದ ಪಂಡಿತ ಜವಾಹರಲಾಲರು, ಗುಜರಾತಿನ ಮಹಾತ್ಮಾಜಿ, ಸೀಮಾಪ್ರಾಂತದ ಅಬ್ದುಲ್ ಗಫರ್‌ಖಾನರು, ಆಂಧ್ರದ ಪಟ್ಟಾಭಿ ಸೀತಾರಾಮಯ್ಯನವರು, ಮಹಾರಾಷ್ಟ್ರದ ಅಚ್ಯುತ ಬಳವಂತ ಪಟವರ್ಧನರು, ಕರ್ನಾಟಕದ ದಿವಾಕರ ರಂಗರಾಯರು ಅಖಿಲ ಭಾರತೀಯರ ಸಮಾನಪ್ರೀತಿಗೆ ಪಾತ್ರರಾಗಿದ್ದಾರೆ ಒಂದು ಭಾಗದ ವರಿಗೆ ಒದಗಿದ ಕಷ್ಟ-ನಷ್ಟಗಳು, ಇನ್ನೊಂದು ಭಾಗದವರಿಗೆ ತಮ್ಮವೆಂದೇ ತೋರಿಕೆಯಹುಟ್ಟಿಸುತ್ತವೆ ಈ ಮಾತನ್ನು ಭಾರತೀಯರಲ್ಲಿ ಭೇದವನ್ನು ಹುಟ್ಟಿಸುತ್ತಿರುವ ಬ್ರಿಟಿಷರೂ, ಅವರ ತಾಳಕ್ಕೆ ತಕ್ಕಹಾಗೆ ಕುಣಿಯುತ್ತಿರುವ ಮುಸ್ಲಿಂ ಲೀಗಿನ ಮುಂದಾಳುಗಳೂ ಮರೆತು ನಡೆಯಬಾರದು. ಸ್ನೇಹಸಂಬಂಧದ ಆವ್ಯಾಹತಸಿಂಚನದಿಂದ ನಂದನವನವಾಗಲಿದ್ದ ಭಾರತವನ್ನು, ದ್ವೇಷನಿಬಂಧದ ರಕ್ತಸಿಂಚನದಿಂದ ನರಕಕೂಪವನ್ನಾಗಿಸಬಾರದು. ಇದನ್ನೆಲ್ಲ ಮಿಾರೀ ಮುಸ್ಲಿಂ ಲೀಗಿನವರು ತಮ್ಮ ಕಾಯಕವನ್ನೆ ನಡೆಯಿಸತೊಡಗಿದರೆ, ಭಾರತೀಯರೆಲ್ಲ ಸುಸಂಘಟಿತರಾಗಿ 'ಬಲದ ಕಾಟವನ್ನು ಬಲವೇ ಕಳೆಯಬಲ್ಲದು' ಎಂಬ ನೈಸರ್ಗಿಕ ಸತ್ಯವನ್ನು ತಿಳಿದು, ಪ್ರತ್ಯಕ್ಷ ಹೋರಾಟವನ್ನು ತಮ್ಮಬಲದಿಂದಲೇ ತಡೆಯಬೇಕಾಗುವುದು. ಲೀಗಿನವರನ್ನು ಅವರು ಹಿಂಸಿಸಬೇಕಾಗಿಲ್ಲ; ಅವರ ಹಿಂಸೆಗೆ ಮೈಯೊಡ್ಡಿ ನಿಂತು ಅವರ ಹಿಂಸಾಬುದ್ಧಿಯನ್ನು ಕುಂದಿಸಿದರೆ ಸಾಕು. ತಮ್ಮ ಹೋರಾಟ ವ್ಯರ್ಥವಾಗುವುದರಿಂದಲೂ ವಿರೋಧಿಗಳಿಗೆ ಸಾಕಷ್ಟು ಬುದ್ಧಿಬರುವುದು.

ಶತ್ರುವೂ ಮಿತ್ರನಾಗಬಲ್ಲ!

ಲೀಗಿನ ಆಂತರಿಕ ಪ್ರಚೋದನೆಯಿಂದಲೇ ನಡೆದಿರುವ ಬಂಗಾಲದ ನೌಕಾಲಿಯಲ್ಲಿಯ ಅತ್ಯಾಚಾರವು ಭಾರತೀಯರಲ್ಲಿ ಬೆದರಿಕೆಯನ್ನುಂಟು ಮಾಡಿಲ್ಲ; ದ್ವೇಷವನ್ನುಂಟು ಮಾಡಿದೆ; ಸೇಡು ತೀರಿಸಬೇಕೆಂಬ ಬೆಂಕಿಯನ್ನು ಹೃದಯದಲ್ಲಿ ಹೊತ್ತಿಸಿ ಇದೆ. ಮಹಾತ್ಮಾಜಿ— ಮೌಲಾನಾರಂತಹ ಸಮಂಜಸ ಬುದ್ಧಿಯ ಮುಂದಾಳುಗಳಿಲ್ಲದೆ ಹೋಗಿದ್ದರೆ, ಕಾಂಗ್ರೆಸ್ ಬಹುಸಂಖ್ಯಾಕ ಪ್ರಾಂತಗಳಲ್ಲಿ ಲೀಗಿನ ಅನುಯಾಯಿಗಳಿಗೆ ಉಳಿಗಾಲವೇ ಇರುತ್ತಿರಲಿಲ್ಲವೆಂದು, ಇಂದಿನ ಪರಿಸ್ಥಿತಿಯನ್ನರಿತ ಯಾವ ರಾಜಕಾರ್ಯವಿದನೂ ಹೇಳಬಹುದಾಗಿದೆ. ಲೀಗು ಕಾಂಗ್ರೆಸಿಗರನ್ನು ವೈರಿಗಳೆಂದು ಬಗೆಯುತ್ತಿದೆ; ಕಾಂಗ್ರೆಸ್ಸು ಲೀಗಿನ ಮುಸಲ್ಮಾನರನ್ನು 'ಮಾನವರು' ಎಂಬ ದೃಷ್ಟಿಯಿಂದ ನೋಡುತ್ತದೆ. ಒಂದು ಕ್ಷಣದಲ್ಲಿ ಮಾಡಿದ ತಪ್ಪು ಮಾನವನಿಗೆ ಇನ್ನೊಂದು ಕ್ಷಣದಲ್ಲಿ ತಿಳಿದು; ಅವನು ಸರಿಯಾದ ದಾರಿಯಲ್ಲಿ ನಡೆಯಬಹುದು. ಇಂದು ತಪ್ಪು ತಿಳಿವಳಿಕೆಯಿಂದ ಶತ್ರುವೆಂದು ತಿಳಿದಿದ್ದವನ ಕೃತಿಯೆ ನಾಳೆ ನಮ್ಮ ಕಲ್ಯಾಣಸಾಧಕ ಕೃತಿಯೆಂದು ಕಂಡು ಅತನ ಮಿತ್ರತ್ವವನ್ನು ನಾವು ಅಪೇಕ್ಷಿಸಬಹುದು. ಮನುಷ್ಯನೆನಿಸಿಕೊಳ್ಳುವವರು ಒಬ್ಬರನ್ನೊಬ್ಬರು ಇದೇ ದೃಷ್ಟಿಯಿಂದ ನೋಡಿ ನಡೆಯಿಸಿಕೊಳ್ಳಬೇಕಲ್ಲದೆ, ವೈರಿಗಳೆಂದು ಕಲ್ಪಿಸಿದವರನ್ನೆಲ್ಲ ಕೊಲ್ಲುತ್ತ ನಡೆಯಲಾಗದು. ಕೊಲೆ-ಸುಲಿಗೆಗಳು ಲೋಕದಲ್ಲಿ ರಾಕ್ಷಸತ್ವವನ್ನು ಹೆಚ್ಚಿಸುವುವು ಹೊರತು ಮಾನವನ ಸಂಸ್ಕೃತಿಗೆ ಪೋಷಣೆಯನ್ನು ಕೊಡಲಾರವು. ನಾಝೀ ನಾಯಕರನ್ನು ಗಲ್ಲಿಗೇರಿಸಿದ ಮಿತ್ರರಾಷ್ಟ್ರಗಳವರೂ, ಮಾನವತೆಯ ದೃಷ್ಟಿಯಿಂದ ನ್ಯಾಯವಿಚಾರಣೆಯನ್ನು ಮಾಡಿದ್ದರೆ, ಅವರನ್ನು ಕ್ಷಮಿಸಿ ಜೀವದಾನಮಾಡುತ್ತಿದ್ದರು. ಆದರಿಂದ ಅವರು ಪಶ್ಚಾತ್ತಾಪಪಟ್ಟು ಮನುಷ್ಯವರ್ಗದಲ್ಲಿ ಕೂಡಿಕೊಳ್ಳಬಹುದಾಗಿತ್ತು. ಆದರೆ ಇಂದಿನ ಮಿತ್ರರ ಸೇಡು ತೀರಿಸುವ ರಾಕ್ಷಸಬುದ್ಧಿ, ಭವಿಷ್ಯಕಾಲದಲ್ಲಿ ನೂರಾರು ಗೋರಿಂಗರ ಜನ್ಮಕ್ಕೆ ಕಾರಣವಾದೀತು; ನಾವಿರಾರು ರಿಬನ್‌ಟ್ರಾಪ್— ಹೆಸ್ಸರನ್ನು ಹುಟ್ಟಿಸೀತು. ಭಾರತೀಯ ರಕ್ತವೇ ಹರಿದಾಡುತ್ತಿರುವ ಲೀಗಿನ ಧುರೀಣರು ಮಾನವರಂತೆ ವರ್ತಿಸಿ, ತಮಗೆ ಸಲ್ಲಬಹುದಾದ ಹಕ್ಕುಗಳನ್ನೆಲ್ಲ ಸಂಪಾದಿಸಲಿ! ಇದರಿಂದ ಯಾರಿಗೂ ಅಕಲ್ಯಾಣವಿಲ್ಲ.

ಜಯಂತಿಯ ಸಣ್ಣಕತೆಗಳ ಮೇಲಾಟ

ಆಕರ್ಷಕವಾದ ಮೂರು ಬಹುಮಾನಗಳು

೧ ನೆಯ ಬಹುಮಾನ ೨೦ ರೂಪಾಯಿ ! ★ ೨ ನೆಯ ಬಹುಮಾನ ೧೫ ರೂಪಾಯಿ !! ★ ೩ ನೆಯ ಬಹುಮಾನ ೧೦ ರೂಪಾಯಿ !!!

೧೯೪೭ ಜನವರಿ ೧೫ ನೆಯ ತಾರೀಖಿನೊಳಗಾಗಿ ಕತೆಗಳನ್ನು ಕಳುಹಬೇಕು !

ಮೇಲಾಟದ ನಿಯಮಗಳು.

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕಕತೆಗೆ ಈ ಮೇಲಾಟವಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ಮಿಾರದಷ್ಟು, ಎಂದರೆ ಕೈಬರೆಹದಲ್ಲಿ ಫುಲ್‌ಸ್ಕ್ಯಾಪ್ ಅರ್ಧಹಾಳೆಗಳು ೧೦ ಕ್ಕೆ ಮಿಾರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನು ಬಿಟ್ಟ ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗವಹಿಸಬಹುದು.

೫. " ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ " ಎಂದು ಕೈಬರೆಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು. ಆದರೆ ಎರಡು ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ೧೫ನೆಯ ಜನವರಿ ೧೫ನೆಯ ತಾರೀಖು. ಫೆಬ್ರುವರಿ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನು ಪ್ರಕಟಿಸಲಾಗುವದು; ಮಾರ್ಚ್ ಸಂಚಿಕೆ ಸಣ್ಣಕತೆಗಳ ವಿಶೇಷ ಸಂಚಿಕೆಯಾಗಿ ಪ್ರಕಟವಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು 'ಜಯಂತಿ' ಧಾರವಾಡ.

JAYANTI November 1946 R. No. B. 4116

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮಿ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಕೂಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ಶಕ್ತುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಪುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜರ್
ಎಮ್. ಗೋವರ್ಧನರಾವ

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಸುದೃಢಕಾಯರೂ ಆನಂದವೃತ್ತಿಯವರೂ ಆದ ಬಾಲಕರೆಂದರೆಯೇ
ಗೃಹರಾಜ್ಯದಲ್ಲಿಯ ಪ್ರತ್ಯಕ್ಷವಾದ ಆನಂದ!

ತಮ್ಮ ಮನೆಯಲ್ಲಿಯ ಬಾಲಕನು ಇದಕ್ಕೆ ಅಪವಾದವಾಗಿ ಇದ್ದರೆ,
ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್ ಅವರ
ಕುಮಾರೀ ಆಸವ ನಂ. ೩

(೩೦ ತೊಲೆಗೆ ಒಂದೂಕಾಲು ರೂಪಾಯಿ)

ಈ ಔಷಧಿಯನ್ನು ಅವನಿಗೆ ಕೊಡಿರಿ. ಕೆಮ್ಮು, ದಮ್ಮು, ಜ್ವರಗಡ್ಡೆ, ಯಕೃತ್ತಿನವಿಕಾರ, ಪಾಂಡುರೋಗ— ಮೊದಲಾದ ಬಾಲರೋಗಗಳನ್ನು ಹೊಡೆದುಹಾಕುವುದಲ್ಲದೆ ಮಕ್ಕಳ ಶಕ್ತಿಯನ್ನೂ ಹೆಚ್ಚಿಸುವುದು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ

ಹುಬ್ಬಳ್ಳಿ ಶಾಖೆ—ಸ್ಟೇಶನ್ ರೋಡ್, ಹುಬ್ಬಳ್ಳಿ

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—8966-46-1250.

ಸಂಪಾದಕರು
ಬೆಟಗೇರಿ ಕೃಷ್ಣಶರ್ಮರು

ಭಾರತದಲ್ಲಿ ಶ್ರೇಯ-ಪ್ರೇಯಗಳ ಸಮನ್ವಯ ಮಾರ್ಗದ ಅವಶ್ಯಕತೆಯನ್ನು
ಪ್ರಚಾರಗೊಳಿಸಿ ಕಣ್ಮರೆಯಾದ
ಮಹರ್ಷಿ ಮದನಮೋಹನ ಮಾಲವೀಯಾಜಯಂತರು.

ಬಿ. ಪಿ. ಎಸ್. ರಾವ್, ಎಂ. ಜಿ. ವಿರೂಪಾಕ್ಷನ್, ಬಿ. ಎಚ್. ಶ್ರೀಧರ,
ಟಿ. ಸರ್ವಮಂಗಳಾಂಬಾ, ಜಯಂತಿಯ 'ಸಾಹಿತ್ಯಸಂಜಯ'
ಮುದ್ದೆಮೂರ ಸಂಗಣ್ಣ

ಸಂಪುಟ ೯ | ೧ ನೆಯ ಡಿಸೆಂಬರ್ ೧೯೪೬ | ಸಂಚಿಕೆ ೬

ಮುಖ್ಯ ವಿಷಯಗಳು

ಇಂದಿನ ಯೋಧ! (ಕವನ)
ಶ್ರೀ. ಆಧ್ಯಪ್ಪ ನಾರಾಯಣರಾವ್, ಬನಾರಸ ೧೯೩

ಮಹರ್ಷಿ ಮೂಲವೀಯರಅಗಲಿಕೆ (ಸಂಪಾದಕೀಯ)
ಸಂಪಾದಕರು ೧೯೪

ಬೀರಣ್ಣನ ಬಡಿಸಂಡಿಗಳು
'ಗುಡದಪ್ಪ' ೧೯೫

ಧಾರವಾಡ ಜಿಲ್ಲೆಯ ಒಂಟಿನೆಯ ಸಾ. ಸಮ್ಮೇಳನ (ವರದಿ)
'ಪಂ. ಪೆಂ' ೧೯೬

ಉಪ್ಪೋಗೆ (ಅನುವಾದಿತ ಸಣ್ಣ ಕತೆ)
ಶ್ರೀ. ಬಿ. ಪಿ. ಎಸ್. ರಾವ್ ೧೯೭

ಕನ್ನಡ ಪಾಕ್ಷಿತ್ರೋವ್ಯದುಯ ಭವಿಷ್ಯ (ರೇಡಿಯೋ ಭಾಷಣ)
ಶ್ರೀ. ಎಂ. ಜಿ. ಏಯೂಣಪ್ಪನ್, ಧಾರವಾಡ ೨೦೨

ಬಾಳಪಕ್ಷಿ (ಕವನ)
ಶ್ರೀ. ಸಿ. ಕೆ: ವೀಕ್ಷಿತ, ಧಾರವಾಡ ೨೦೪

'ನಿಲಕ್ಷಣ ಸುಖ' (ಸಣ್ಣ ಕತೆ)
ಶ್ರೀ. ಮುದೇನೂರು ಸಂಗಣ್ಣ, ಹರಪನಹಳ್ಳಿ ೨೦೬

ಭಾವನೆಯ ದೃಷ್ಟಿ (ಸಾಹಿತ್ಯವಿಮರ್ಶೆ)
ಶ್ರೀ. ಜಿ. ಎಚ್. ಶ್ರೀಧರ ಎಂ. ಎ. ಧಟಕಲ ೨೦೯

ಮನಸ್ಸಿನ ಬಾಧೆಗೆ ಶೀಷರ್ಷಾಸನವು ವಜ್ರಾಯುಧ
ಶ್ರೀ. ಮು. ಸಿ. ಸೋಮಶೇಖರ ಶರ್ಮ, ಕಾತಿ ೨೧೨

ಉಳಿ ಮುಟ್ಟಿಸಿ ವಿಗ್ರಹ (ಕಂದ ಕತೆಯೊಂದು)
ಶ್ರೀಮತಿ ತೊಗರಿ ಸರ್ವಮಂಗಳಾಂಬಾ, ಬಳ್ಳಾರಿ ೨೧೩

ಗಡುಗಿನಲ್ಲಿ ಶಾರದೋತ್ಸವ (ವರದಿ)
ಜಯಂತಿಯ 'ಸಾಹಿತ್ಯಸಂಜಯ' ೨೧೬

ಪುಸ್ತಕ ವಿಮರ್ಶೆ (ರೇಡಿಯೊ ನಾಟಕಗಳು ಮತ್ತು ಒಡೆದಕನ್ನಡಿ)
ಶ್ರೀ. ಬೆಟಗೇರಿ ಕೃಷ್ಣಶರ್ಮ, 'ಕುಂಜವಿಹಾರಿ' ೨೧೯

ಸಾಹಿತ್ಯ ಸ್ವೀಕಾರ ೨೨೧

ನಾಲ್ಕೂ ನಿಟ್ಟಿನ ನೋಟ ೨೨೩

ವಿ. ಸೂ:— ಜಯಂತಿಯ ಆನೆಯ ಸಂಪುಟದ ಹನೆಯ ಸಂಚಿಕೆ (ಸಪ್ಟಂಬರ್ ೧೯೪೬) ಕಾರ್ಯಾಲಯದಲ್ಲಿ ಒಂದೂ ಇಲ್ಲ. ಕಾರ್ಯಾಲಯದ ಫಾಯ್‌ಲಿಗಾಗಿ ಬೇಕಾಗಿದೆ. ನಮ ವಿಜಂಟರ ಬಳಿಯಲ್ಲಿ ಆದರ ಪ್ರತಿಗಳು ಉಳಿದಿದ್ದರೆ, ದಯೆ ಯಿಟ್ಟು ಕೂಡಲೆ ಕಳುಹಜೇಕು. ಅವುಗಳ ಬೆಲೆಯನ್ನು ಕೊಡ ಲಾಗುವುದು. ನಮ್ಮ ಜಂದಾದಾರರಲ್ಲಿ ಯಾರ ಬಳಿಯಲ್ಲಾದರೂ ಇದ್ದರೆ ದಯೆಯಿಟ್ಟು ಕಳುಹಿದಲ್ಲಿ, ಕೃತಜ್ಞತಾಪೂರ್ವಕ ಸ್ವೀಕರಿಸ ಲಾಗುವುದು. ಆಜೇಕ್ಷಿಸಿದರೆ ಬೆಲೆಯನ್ನೂ ಕೊಡಲಾಗುವುದು

ಸಂ. ಜ.



ರೀಟಾ: ತಲೆಯನು ಕೂದಲನ್ನು ಬೆಳೆಸುವುದು.

ರೀಟಾ ಮುದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ತೂದಲನ್ನು ಬೆಳೆಸಲು ಅಪ್ಪತಪಾಪ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರು ವುದು, ಹಟ್ಟೆತಲೆ, ಜೇನಿನ ಜಾಡೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯೋಷ್ಠವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣ ವನ್ನು ಹೊಂದಿದ್ದಾರೆ. ನೀವು ಕೂಡ ಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.



ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಸಮೇತ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೯ | ೧ನೆಯ ಡಿಸೆಂಬರ್ ೧೯೪೬ | ಸಂಚಿಕೆ ೩

ಇಂದಿನ ಯೋಧ

"ಅಶ್ವತ್ಥ"

ನಾನೊಬ್ಬ ಯೋಧ; ನನಗಿರಲಿ ಯುದ್ಧ!
ನನಗಲ್ಲ ಈ ತ್ಯಾಗ,
ಸಂನ್ಯಾಸ, ಏಕಾಂತವಾಸ,
ಪೂಜೆ, ವ್ರತ, ಉಪವಾಸ,
ವಿಧವಿಧವ ಬರಿ ಸುತ್ತು;
ನನಗಲ್ಲ ದಾರಿದ್ರ್ಯ,
ದೀನತೆಯ ಆತ್ಮಹತ್ಯ,
ದಾಸ್ಯದಾಡಂಬರ!
ದೇವರಿಗು ನಾನೆಂದು
ದಾಸನಾಗುವನಲ್ಲ.
ನನಗಿರಲಿ
ಆಸೆ, ಆಕಾಂಕ್ಷೆ,
ಹಗೆ, ರಾಗಗಳು,
ಉದ್ರೇಕ, ಉದ್ವೇಗ;
ಹರಿಯಲವು ಧಮನಿಯಲಿ
ಹೊಸ ಹೊಳಿಯ ಹುಚ್ಚಂತೆ;
ಅವ ನೆಳಿದು ಬೆಳಬೆಳಿವ
ಸಾಹಸವು ನನಗಿರಲಿ!
ಈ ಸೊಗದ ಲೋಕದಲಿ
ಸುಖವಿರುವುದೇಕೆ?
ನಮ್ಮ ಅನುಭವಕೆ,
ಎಸೆಯುವುದಕಲ್ಲ!
ದುಃಖವೋ?
ನಾನು ತೊಡೆವುದಕೆ—
ನೋಡುತಿರುವುದಕಲ್ಲ!
ನನಗಿಲ್ಲವೇ
ಚೇತನ, ಜ್ಞಾನ, ದಾರ್ಢ್ಯ?
ನಾನು ಯಾರಿಗೆ ಕಡಿಮೆ?
ಏಕೆ 'ನನೊ ನನೊ' ಎನಲಿ?
ಯಾರಿಗೆ ಏತಕೆ ಅಳು?
ನನಗೆರಡು ತೋಳಿದ್ದು
ದುಡಿವವರೆಗೆ,
ಎದೆ ಬಸಿಯೆ
ಸಿದ್ಧನಾಗಿರ.ವವರೆಗೆ
ನನ್ನ ಶುತ್ರನು ಜಗದಿ
ಕತ್ತು ಉಣ್ಣುವೆನು.
ದುಡಿಮೆ, ಶುತ್ರುಗಳೆರಡು
ನನ್ನ ಹಕ್ಕು!
ಕೂಳಿಗೇ ಆದವನು, ಆಳು
ಮಾನವನೆ?—ಹುಳು.
ಧನಕೆ ದಾಸನಾದವನೊ?
ಬರಿಯ ಧೂಳು.
ನಾನೊಬ್ಬ ಮನುಜ,
ಮನುಜನಾಗಿಯೆ ಇರುವೆ.
ಜಗದ ಸೋದರನಾಗಿ
ಇವರ ಸುಖ ದುಃಖ—
ಬಲ, ದೌರ್ಬಲ್ಯ—
ಎಲ್ಲ ದೂಳು ತೊರುವೆನು
ಸಂತೋಷದಿಂದ.
ಇದನೆಲ್ಲ ಬಿಟ್ಟು,
ಮೇಲಿದ್ದು ಮುದಿತೊಟ್ಟು,
ಇವರನೇ ಮುಟ್ಟಿದಿಹ
ನಿಸ್ಸಾರ ದೇವತ್ವ
ಎನಗೆ ಬೇಡ—ಬೇಡ!
ನನಗಿರಲಿ
ಬಲು ಜನ್ಮ ಹೋರಾಟ
ಈ ಜಾಡ್ಯ ಕೇಡು
ಕೊರತೆ ಕಷ್ಟಗಳೊಡನೆ;
ಈ ಬಗೆಯ ಶಕ್ತಿ ವ್ಯಯ
ನನಗೆಲ್ಲ—ಎಲ್ಲ ಸಿದ್ಧಿ.
ದೇವಪಾದದಿ ಹೊಗುವ
ನಿರರ್ಥಕ ಶೂನ್ಯ ಮುಕ್ತಿ,
ಬಾಳಿಂದ ಹಾರಿಕೊಳೆ ಯುಕ್ತಿ,
ನನಗೆ ಬೇಡ,
ಎಂದೆಂದಿಗೂ ಬೇಡ!
ನಾನೊಬ್ಬ ಯೋಧ,
ನನಗಿರಲಿ ಯುದ್ಧ!
ಆರಿ ಇರುವವರೆಗೆ
ಆಳಿಪು ಉಳಿವಿನ ಚಿಂತೆ
ನಿರ್ವ್ಯಾಂತಿ, ಶಾಂತಿ
ಏಕೆ ನನಗೆ?
ಏಕೆ ನಿಜವಾಗಿ?

ಮಹರ್ಷಿ ಮಾಲವೀಯರ ಅಗಲಿಕೆ

ಭಾರತೀಯ ಪುರಾಣದಲ್ಲಿಯ ವಸಿಷ್ಠ, ಯಾಜ್ಞವಲ್ಕ್ಯ, ವ್ಯಾಸ ಮೊದಲಾದ ಮಹರ್ಷಿಗಳ ಚರಿತ್ರಗಳನ್ನರಿತವರಲ್ಲಿ ಬಹುಜನರಿಗೆ ಎನಿಸಬಹುದು: ಇವು ಆದರ್ಶಸಾಧನೆಗಾಗಿ ಕಲ್ಪಿಸಿದ ಪಾತ್ರಗಳೆಂದು. ಲೌಕಿಕ ವಿಚಾರದಲ್ಲಿಯೂ ಪಾರಲೌಕಿಕ ವಿಚಾರದಲ್ಲಿಯೂ ಪ್ರಾವೀಣ್ಯವನ್ನು ಪಡೆದು, ಎರಡು ಕೈಗಳಿಂದಲೂ ಶ್ರೇಯಸ್-ಪ್ರೇಯಸ್‌ಗಳ ಕಜ್ಜಿಗಳನ್ನು ಸಹಜವಾಗಿ ಪರಿಹರಿಸಿ, ತಾವು ಜೀವನದ ಸಿದ್ಧಿಯನ್ನು ಪಡೆದರಲ್ಲದೆ, ಸಮಕಾಲೀನ ಜನರಿಗೂ ಗುರಿಯು ದಾರಿಯನ್ನು ತೋರಿಸಿದ ದಿವ್ಯಮಾನವರು ಆ ಮಹರ್ಷಿಗಳು. ಅವರು ಕಲ್ಪಿತ ವ್ಯಕ್ತಿಗಳೇನೋ ಎಂದು ಸಂದಿಗ್ಧದೃಷ್ಟಿಯಿಂದ ನೋಡುತ್ತಿದ್ದ ಜನಸಾಮಾನ್ಯರಿಗೆ, ದೀರ್ಘಕಾಲದ ಮಾಲವೀಯರ ಮಹರ್ಷಿಸದೃಶ ಜೀವನವು ಪ್ರತ್ಯಕ್ಷ ಪ್ರಮಾಣವಾಗಿ ಕೋಟಿ, ಅವರ ಸಂದೇಹ ಬಯಲಾಗಿ ಹೋಗುವುದರಲ್ಲಿ ಸಂದೇಹವೆ ಇಲ್ಲ.

ಮಾಲವೀಯರ ಜೀವನ ಆದರ್ಶ ಬ್ರಾಹ್ಮಣನ ಜೀವನ. ವೈಯಕ್ತಿಕ ವಿಕಾಸ, ಸಮಾಜದ ಕಲ್ಯಾಣಚಿಂತನೆ ಇವೇ ನಿಜವಾದ ಬ್ರಾಹ್ಮಣ್ಯದ ಲಕ್ಷಣ. ಇಂತಹ ಬ್ರಾಹ್ಮಣ್ಯವನ್ನುಲೋಕದಲ್ಲಿಯಾರೂ ವಿರೋಧಿಸಲಾರರು; ವಿರೋಧಿಸಿ ಗೆಲುವನ್ನೂ ಪಡೆಯಲಾರರು ಮಾಲವೀಯರ ಅಗಲಿಕೆಗಾಗಿ ಕಣ್ಣೀರಿಡುತ್ತಿರುವ ಅಖಿಲಭಾರತೀಯ ಸಮಾಜವೇ ಇಂದು ಈ ಮಾತಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಕಾರಖಾನಿಕೆ ಗಳಿಸಲು ಹವಣಿಸುವ 'ಬ್ರಾಹ್ಮಣ'ನನ್ನು— ಲೋಕಲ್‌ಬೋರ್ಡ್–ಅಸೆಂಬ್ಲಿಗಳಿಗೆ ಆರಿಸಿ ಹೋಗಲು ಹವಣಿಸುವ 'ಬ್ರಾಹ್ಮಣ'ನನ್ನು—ಅಧಿಕಾರಸ್ಥಾನಗಳಿಗಾಗಿ ಮೇಲಾಟ ನಡೆಯಿಸುವ 'ಬ್ರಾಹ್ಮಣ'ನನ್ನು—ತಾನೇ ಬುದ್ಧಿವಂತನೆಂಬ ಅಹಂಕಾರದ ಕೋಡು ಮೂಡಿದ 'ಬ್ರಾಹ್ಮಣ'ನನ್ನು— ಸ್ವಾರ್ಥಸಾಧನೆಗಿಂತೇ ತನ್ನ ಹರಿತವಾದ ಬುದ್ಧಿಯನ್ನು ಬಳಸುವ 'ಬ್ರಾಹ್ಮಣ'ನನ್ನು, ಸಮಾಜದಲ್ಲಿಯ ಹಲವು ಸ್ವಾರ್ಥಿಜನರು ವಿರೋಧಿಸಲು ಸಿದ್ಧರಾಗಬಹುದು. ಆದರೆ ಈ ವಿರೋಧ ಮಾನವನ ಸ್ವಾರ್ಥ-ಲೋಭಗಳನ್ನು ಎದುರಿಸಲು ಇರುವುದಲ್ಲದೆ, 'ಬ್ರಾಹ್ಮಣ್ಯ'ವನ್ನು ಎದುರಿಸಲು ಇರುವುದಿಲ್ಲ. ಇಂಥ 'ಬ್ರಾಹ್ಮಣ-ಬ್ರಾಹ್ಮಣೇತರ' ಜಗಳಾಟದ ಕೂಗನ್ನೆಬ್ಬಿಸಿ, ಕಲಹವನ್ನೇಕ್ಷಿಸಿ ಲೋಕದ ಕಡೆಗೆ ನೋಡುವವರು, ಮಾಲವೀಯರ ದಿವ್ಯ ಚಾರಿತ್ರ್ಯವನ್ನೆ ಕಣ್ಣೆರಿಸಿ ನೋಡಬೇಕು. ಮನವಿತ್ತು ಅಭ್ಯಾಸಿಸಬೇಕು. ಬ್ರಾಹ್ಮಣ ಬ್ರಾಹ್ಮಣನಾಗಿ ಬಾಳದೆ ಇನ್ನೇನೋ ಆಗಿ, ಮತ್ತೊಬ್ಬರ ಕಾರ್ಯಪಥದಲ್ಲಿ ಕಾಲಿರಿಸತೊಡಗಿದರೆ, ಅವನ ಕಾಲುಗಳಿಗೆ ಅಡ್ಡಗಾಲು ಬೀಳುವುದು ಸಹಜವೆ. ಆದರೆ ನಿಜವಾದ ಬ್ರಾಹ್ಮಣರಾಗಿ ಬಾಳಲು ಹವಣಿಸಿದ ಮಾಲವೀಯರು, ತಮ್ಮ ಕಾರ್ಯಕ್ಷೇತ್ರದಲ್ಲಿ ನಿರಾತಂಕವಾಗಿ ಹೆಜ್ಜೆಗಾಲ್ಮಿಕ್ಕುತ್ತ ಮುಂದುವರೆದರು; ಸಮಾಜದಲ್ಲಿಯ ಪ್ರತಿಯೊಬ್ಬರೂ ಅವರ ಮುಂದುವರಿಕೆಗೆ ಅನುವು ಮಾಡಿಕೊಟ್ಟರು. ಇದರಿಂದ ಮಾಲವೀಯರು ವೈಯಕ್ತಿಕವಾಗಿ ಮಹರ್ಷಿಗಳಾಗಿ ರೋಭಿಸಿದರಲ್ಲದೆ, ಸಮಾಜದ ಕಲ್ಯಾಣವನ್ನೂ ಸಾಧಿಸಿದರು.

ಈ ಸಂಕ್ರಮಣಕಾಲದಲ್ಲಿ 'ಹಳೆಯದನ್ನು ಹಿಂಡಿಯಬೇಕೋ ಹೊಸದನ್ನು ಹಿಡಿಯಬೇಕೋ' ಎಂಬ ಸಂದೇಹಭಾವ ಭಾರತೀಯರನ್ನೆಲ್ಲ ಕಂಗೆಡಿಸಿಬಿಟ್ಟಿದೆ. ಹೊಸದರಲ್ಲಿಯ ಹುರುಳನ್ನರಿಯದೆ ಸನಾತನ ಪಕ್ಷದವರು ಹಳೆಯದೇ ಇರಬೇಕೆನ್ನುವರು; ಹಳೆಯದರಲ್ಲಿಯ ಸೊಗಸು-ಶಾಶ್ವತತೆಗಳನ್ನು ಬಗೆಯದೆ ಸುಧಾರಣಾವಾದಿಗಳು ಹೊಸದನ್ನೇ ಹಿಡಿಯಬೇಕೆನ್ನುವರು. ಇಬ್ಬರೂ ಅತಿವಾದಿಗಳು. ಇಬ್ಬರೂ ಪಕ್ಷಾಭಿನಿವೇಶದ ಭೂತ ಹಿಡಿದವರು. ಇಂತಹ ಕಾಲದಲ್ಲಿಯೇ ಯೋಗದೃಷ್ಟಿಯುಳ್ಳವನು ಬಡಿದಾಡುತ್ತ ಕುಳಿತುಕೊಳ್ಳುವುದಿಲ್ಲ. ಆದರ್ಶಸಾಧನೆಗಾಗಿ ಯಾವುದು ಶಕ್ತ, ಸಾಧನ, ವೇಗಗಳನ್ನು ಸಹಜವಾಗಿ ಒದಗಿಸಿಕೊಡುವುದೊ— ಅದು ಹೊಸದರಲ್ಲಿಯೆ ಇರಲಿ, ಹಳೆಯದರಲ್ಲಿಯೆ ಇರಲಿ—ಆ ಆ ಆಚಾರ-ವಿಚಾರಗಳನ್ನೆಲ್ಲ ಮೈಗೂಡಿಸಿ ಮುಂದುವರೆಯುತ್ತಾನೆ; ಆದರ್ಶವನ್ನು ಸಾಧಿಸುತ್ತಾನೆ. ಆ ಯೋಗಿಯ ಚಾರಿತ್ರ್ಯವನ್ನೂ ಸಿದ್ಧಿಯನ್ನೂ ಕಂಡು ಸಂಭ್ರಾಂತರಾಗಿ, ಸನಾತನಿಗಳು 'ಈತ ತಮ್ಮ ಮಾರ್ಗದವನು' ಎಂದು ಪುರಸ್ಕರಿಸುವರು; ಸುಧಾರಕರು 'ಈತ ತಮ್ಮ ಅಭಿಪ್ರಾಯದವನು' ಎಂದು ಆತ್ಮೀಯತೆಯಿಂದ ಕಾಣುವರು. ಮಹರ್ಷಿ ಮಾಲವೀಯರ ಮಾರ್ಗ ಇಂತಹ ಕರ್ಮಯೋಗಿಗಳ ಮಾರ್ಗ. ಎಂತಲೇ ಅವರನ್ನು ಎಲ್ಲ ಬಗೆಯ ಜನತೆ ಭಕ್ತಿ-ವಿಶ್ವಾಸಗಳಿಂದ ನೋಡುತ್ತಿದ್ದಿತು. ಅವರ ಅಗಲಿಕೆಗಾಗಿ ಎಲ್ಲರೂ ಇಂದು ಕಂಬನಿಯ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಲಿದ್ದಾರೆ.

ಮಹರ್ಷಿ ತಾನು ಕಂಡ ಬೆಳಕನ್ನು—ಜೀವಿತ ಕಾಲದಲ್ಲಿ—ಜನತೆಗೆ ಒದಗಿಸಿ, ಒಳ್ಳೆಯದರ ಕಡೆಗೆ ಕರೆದೊಯ್ಯುತ್ತಾನೆ. ಅದರಂತೆಯೆ ತನ್ನ ಬೆಳಕು ನಂದಾದೀಪವಾಗಿ ಬೆಳಗುವಂತೆ ಸ್ಥಿರವಾದ ವಿಶ್ವಾರ್ಪಣವನ್ನು ಮಾಡುತ್ತಾನೆ. ಕುಲಪತಿ ಮಾಲವೀಯರು, ಹಿಂದೂ ವಿಶ್ವವಿದ್ಯಾನಿಲಯವನ್ನು ನೆಲೆಗೊಳಿಸಿ, ಭಾರತೀಯರಿಗೆಲ್ಲ ಜೀವಾವಶ್ಯಕವಾದ ಶ್ರೇಯಸ್-ಪ್ರೇಯಸ್‌ಗಳನ್ನು ಸಾಧಿಸುವ ಶಾಶ್ವತವಾದ ಅನುಕೂಲತೆ ಮಾಡಿಕೊಟ್ಟು ಹೋಗಿದ್ದಾರೆ. ಭಾರತದ ಮಹರ್ಷಿಗಳು ಆಗಿಹೋಗಿ ಯುಗಯುಗಗಳು ಕಳೆದು ಹೋಗಿದ್ದರೂ, ಅವರ ಜ್ಞಾನಮಯ ಪ್ರದೀಪಗಳು ಇಂದಿನವರೆಗೂ ಅಖಂಡವಾಗಿ ಪ್ರಜ್ವಲಿಸುತ್ತಿರುವಂತೆ, ಮಾಲವೀಯರ ಜ್ಞಾನಮಯ ಪ್ರದೀಪದ ಪ್ರತ್ಯಕ್ಷ ಪ್ರತೀಕವಾದ ಹಿಂದು ವಿಶ್ವವಿದ್ಯಾನಿಲಯವು ಯುಗಯುಗಾಂತರಗಳಲ್ಲಿಯೂ ಜ್ಞಾನದ ಹೊನಲನ್ನು ಹೊತ್ತುಕೊಂಡು ಹೋಗುವಂತಾಗಲಿ!

(೨೨ನೆಯ ಪುಟ ನೋಡಿರಿ.)



ಪ್ರಶ್ನೆ:—ಬೀರಣ್ಣಾ, ಬಂದು ಮಹತ್ತ್ವದ ವಿಷಯ ನನಗೆ ಗೊತ್ತಾಗಿ ತುಂಬ ಆನಮಾನಾನ ವಾಗಿದೆ. ಬಿ. ಎಂ. ಶ್ರೀ.ಯವರು ಬ್ರಿಟಿಷರ ಅಭಿಮಾನಿಗಳೇ? ಹಿಂದುಸ್ತಾನ ಬ್ರಿಟಿಷರ ಅಧೀನದಲ್ಲಿಯೆ ಉಳಿಯಬೇಕೆಂಬ ಅಪೇಕ್ಷೆ ಅವರಿಗಿದ್ದಿತೆ? ಹುಬ್ಬಳ್ಳಿಯಲ್ಲಿ ನೇರಿದ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ತಮ್ಮ ಮಾತಿನಲ್ಲಿ ಈ ಸಂಗತಿಯನ್ನು ಸ್ಪಷ್ಟವಾಗಿ ಸಾರಿದ್ದಾರೆ: 'ಕನ್ನಡ ಜನತೆಯ ನೋಟವನ್ನು ಇಂಗ್ಲಿಷ್ ನೋಟ ಮಾಡಿ, ಇಂಗ್ಲೆಂಡ್-ಭಾರತಗಳ ಸಂಬಂಧ ಎಂದಿನಂತೆ (ಸ್ವಾಮಿ-ಸೇವಕ) ಸುಭದ್ರವಾಗಿರುವಂತೆ ಯತ್ನಿಸಿದರು' ಎಂದು. ಇದು ಸರಿಯಾದ ಮಾತೇ? ಇಷ್ಟೆ ಅಲ್ಲದೆ, 'ಕೋತಿ ತಾನು ಕೆಡುವುದಲ್ಲದೆ ತನ್ನೂರ ನೆರೆಯನ್ನೂ ಕೆಡಿಸಿತು' ಎಂಬ ಗಾದೆಯಂತೆ, ಬಿ. ಎಂ. ಶ್ರೀ. ಯವರು ತಮ್ಮ ಶಿಷ್ಯಕೋಟಿಯ ನಿರ್ಧಾರವನ್ನೂ ತಮ್ಮಂತೆಯೆ ಮಾಡಿದರಂತೆ ನಿಜವೆ?

ಉತ್ತರ:—ಅಣ್ಣಾ, ಸ್ವಲ್ಪ ತಾಳ್ಮೆಯಿರಲಿ. ಅಂತಹ ರಾವಣಚಂದ್ರನನ್ನೆ ಹಳಿದು ನುಡಿದನಂತೆ, ಒಬ್ಬ ಮುದಿವಳರ ಮುಡ್ಡಿ; ಎಂದ ಮೇಲೆ 'ಬಿ. ಎಂ. ಶ್ರೀ' ಅವರನ್ನು ಬೈಯುವುದೆಂದರೆ ಆದೊಂದು ದೊಡ್ಡ ಮಾತೇನು? ಬಿ. ಎಂ. ಶ್ರೀ. ಅವರು ಬ್ರಿಟಿಷ್ ಸಾಹಿತ್ಯ – ಸಂಸ್ಕೃತಿಗಳ ಸೌಂದರ್ಯವನ್ನು ಮೆಚ್ಚಿದವರಿರಬಹುದು. ಆದರೆ ಅವರು ಬ್ರಿಟಿಷರ ಸ್ವಾಮಿತ್ವವನ್ನು ಬಯಸುತ್ತಿರಲಿಲ್ಲವೆಂಬುದು. 'ಭರತ ಮಾತೆಯೆ ಭರತ ಮಾತೆಯೆ ಎಂದು ನೀ ತಲೆಯೆತ್ತುವೆ?' ಎಂದು ಹಾಡಿದ ಹಾಡಿನಲ್ಲಿ—ಇಂಗ್ಲಿಷ್ ಗೀತೆಗಳಿಗಿಂತ ಮೊದಲೆ ಪ್ರಕಟವಾಗಿದೆ—ಅವರ ದೇಶಭಕ್ತಿ, ಸ್ವಾತಂತ್ರ್ಯ ಪ್ರೀತಿಗಳು ಸ್ಪಷ್ಟವಾಗಿ ಪ್ರಕಟಗೊಂಡಿವೆ. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಮೈಸೂರು ಸರಕಾರದ ಪ್ರೇಷಿತ ವಿದ್ವಾಂಸರಾಗಿ ಬಂದು 'ಕನ್ನಡ ನಾಡು ತಲೆ ಎತ್ತುವ ಬಗೆ' ಎಂಬ ವಿಷಯದ ಮಾತನಾಡಿದಾಗ, ಶ್ರೀಮಾನ್ ಆಲೂರ ವೆಂಕಟರಾಯರು 'ಕರ್ನಾಟಕ ಗತವೈಭವ' 'ವೀರರತ್ನ'ಗಳು ಇನ್ನೂ ಪ್ರಕಟವಾಗಿರಲಿಲ್ಲ, ಬ್ರಿಟಿಷರ ಬೇರೆ ಬೇರೆ ಭಾವನೆಗಳ ಉತ್ಕಟತೆಯು ಮೂಡರಿಗಳನ್ನು ಕನ್ನಡಿಗರಿಗೆ ತೋರಿಸಲು 'ಆಳಾ ಬ್ರಿಟಾನಿಯಾ ಕಳು ತೆನೆಗಳನು, ಎಂದಿಗೂ ಬ್ರಿಟನನಡಿಯಾಳೆನಿಸಿಕೊಳನು' 'ಆರ್ಸೂರು ರಾಷ್ಟ್ರತರು ನುಗ್ಗಿದರು ಸುಲಭದೆ' 'ಸರ್ ಜಾನ್ ಮಂಗರವನ್ನು ಹೂಳಿದುದು' ಮೊದಲಾದ ಗೀತಗಳನ್ನು ಭಾಷಾಂತರಿಸಿರುವರು. ಮಾರ್ಟಿನ್ ಗಾರ್ಕಿ, ಜೋಹಾನ್ ಇವರ ಕೃತಿಗಳನ್ನು ಅನುವಾದಿಸಿ ಕನ್ನಡಿಗರಿಗೆ ಕೊಟ್ಟ ಸೂತ್ರಕ್ಕೆ, ಅವರಿಗುಲಾಮರಾಗಬೇಕೆಂದು ಅಪೇಕ್ಷೆಪಟ್ಟಂತಾಗುತ್ತದೆಯೆ? ಆ ಕಿಟ್ಟಕೋತಿ ಕೆಡಿಸಿದ ಶಿಷ್ಯರು ಹುಟ್ಟಿ ಮುಂದೆ ಬಾರದೆ ಹೋಗಿದ್ದರೆ, ಮೈಸೂರು ಕರ್ನಾಟಕ ಇಂಗ್ಲೆಂಡಿನ ಮುಂಬಯಿಗೆ ಬಿಸುತ್ತಿತ್ತೆಂದು ಯಾರೂ ಹೇಳಬಹುದಾಗಿದೆ. ಹಾಗಾದರೆ ಅಧ್ಯಕ್ಷರು ಹೀಗೇಕೆ ಹೇಳಿದ್ದಾರೆ? ಎಂಬುದಾಗಿ ನೀವು ಕೇಳಬಹುದು 'ಕುಚೇಷ್ಟೆಮಾಡದೆ ಪ್ರತಿಷ್ಠೆ ಬೆಳೆಯುವುದಿಲ್ಲ' ಎಂದು ಕನ್ನಡ ಗಾದೆ ಹೇಳುತ್ತದೆ. 'ಗಾದೆಯ ಮಾತು ವೇದಕ್ಕೆ ಸಮಾನ' ಎಂಬ ಗಾದೆ ನಿಮಗೆ ಗೊತ್ತಿದೆಯೊ ಇಲ್ಲವೊ? 'ಸಾವಿರ ಜನರ ಆನುಭವ ಹೂತು, ಹುಟ್ಟಿತೊಂದು ಗಾದೆಯ ಮಾತು'! ವಿವರಣೆ ಸಾಕಲ್ಲವೆ?

* * * *

ಪ್ರಶ್ನೆ:—ಕಾವನಾಡಿದಲ್ಲಿ ಕೊಂಕಣಿಗರು ಕನ್ನಡಿಗರ ಮೇಲೆ ನಡೆಯಿಸಿದ ದಾಳಿಯ ಬಗ್ಗೆ ಒಬ್ಬ ಕನ್ನಡದ ಅಭಿಮಾನಿಗಳು ಜಯಂತಿಗೆ ಲೇಖನ ಬರೆದು ಕಳುಹಿಸಿದ್ದರಂತೆ; ಅದನ್ನು ಪ್ರಕಟಿಸದೆ ಜಯಂತಿಯ ಸಂಪಾದಕರು ಅನ್ಯಾಯ ಮಾಡಿದ್ದಾರಂತೆ. ಇದರ ನಿರ್ಣಯವನ್ನು ನೀವು ಬಲ್ಲಿರಾ ಬೀರಣ್ಣಾ?

ಉತ್ತರ:— ನಿಮ್ಮ ಪ್ರಶ್ನೆಯ ಬಗೆಗೆ ಸಂಪಾದಕರನ್ನು ಕೇಳಿದೆ ಮಹಾಸ್ವಾಮಿ! ಬಂದ ಲೇಖನಗಳನ್ನೆಲ್ಲ ಮುದ್ರಿಸಲಿಕ್ಕೆ ಅವರಿಗೆ ಕಾಗದದ ಅನುಕೂಲವಿಲ್ಲವಂತೆ. ಅಲ್ಲದೆ ತೂಕದಸ್ಪು ಬರೆದ ಲೇಖನಗಳಿಗೆ ಅವಕಾಶ ಕಲ್ಪಿಸಿಕೊಡುವ ಪದ್ಧತಿಯನ್ನೆ ಪರು ಇಟ್ಟುಕೊಂಡಿಲ್ಲವಂತೆ. ಅಲ್ಲದೆ 'ಕಾರವಾರವು ಕರ್ನಾಟಕ ಎಂಬ ಮಾತನ್ನು ಹೊಸತಾಗಿ ಸಿದ್ಧಮಾಡುವ ಅವಶ್ಯಕತೆಯೇನೂ ಇಲ್ಲವಂತೆ. ಪರಾಪೆಗಾಗಿ ನಾನೇ ಬದು ತರ್ಕ ಮಾಡುತ್ತೇನೆ ನೋಡಿ: ಕಾರವಾರ ಜಿಲ್ಲೆಯಲ್ಲಿ ಕನ್ನಡಿಗರಿದ್ದಾರೆ. ಅವರ ಸಮಬಜೀವನಕ್ಕಾಗಿ ಕನ್ನಡ ನಾಡು-ನುಡಿಗಳ ಸಂಘಟನೆ ಅತ್ಯಾವಶ್ಯಕ. ಕನ್ನಡ ನುಡಿ-ನಾಡುಗಳು ಅವರ ಅಭಿಮಾನದ ಪಸ್ತುಗಳೂ ಆಹುದು. ಇವುಗಳನ್ನು ಸಂರಕ್ಷಿಸುವುದು ಅವರ ಕರ್ತವ್ಯವೆ ಆಗಿದೆ. ಇನ್ನಾದರೂ ಧಾರಿಯಲ್ಲಿ ಅಡ್ಡಬಂದರೆ ಚತುರೋಪಾಯಗಳಿಂದ ಅವರನ್ನು ಎದುರಿಸಿ, ಹಿಂದೆ ಸರಿಸುವುದು ಅವರ ಕರ್ತವ್ಯ. ಸಂತಲ್ಲಿ ನಿಂತು, ಕೆಲಸವನ್ನೇನೂ ಮಾಡದೆ 'ಅಯ್ಯೋ, ಇವರು ನಮ್ಮ ಧಾರಿಯಲ್ಲಿ ಬಂದು ಕಾದುತ್ತಿದ್ದಾರೆ' ಎಂದು ಶಪಿಸಿ ಗೊಳಿಡುವುದು ಗಂಡುತನದ ಲಕ್ಷಣವಲ್ಲ. ಬದುಕಿ ಬಾಳಬೇಕೆನ್ನುವವರಿಗೆ ಕಾದಾಟದ ಸ್ಥಾನಗಳು ಬರುವುದು ಅನಿವಾರ್ಯ. ಅದಕ್ಕಾಗಿ ಶಕ್ತಿಯಿಂದ ಕಾದಾಟ ಹೂಡಬೇಕು; ಗೆಲ್ಲಬೇಕು ಅಂಜಿ ಕೂಗತೊಡಗಿದರೆ—ಬಾಯಿಗೆ ಬಂದಂತೆ ಬೈಯತೊಡಗಿದರೆ—ಬಲಶಾಲಿಯಾದ ವಿರೋಧಿ ಬಿದ್ದುವುದಿಲ್ಲ; ಬೈಗಳನ್ನು ಗಣಿಸುವುದಿಲ್ಲ. ಬೈಗಳನ್ನು ಪ್ರಕಟಿಸಲಿಕ್ಕೆ ಪತ್ರಿಕೆ ನೆರವು ಕೊಡಲಿಲ್ಲವೆಂದು ಜಯಂತಿಯ ಸಂಪಾದಕರನ್ನು ಬೈದರೆ, ಕೊಂಕಣಿಗರೂ ಮಾರಾಟಗಾರೂ ಕಾರವಾರವನ್ನು ನುಂಗುವುದನ್ನು ಬಿಡುವುದಿಲ್ಲ. ನುಂಗದಿರುವಂತೆ ಮಾಡಬೇಕಾದರೆ ಕಾರವಾರದ ಕನ್ನಡಿಗರು ಮನುಷ್ಯರಾಗಬೇಕು; ಮನುಷ್ಯತ್ವದ ಪಕ್ಕುಗಳ ಸಂರಕ್ಷಣೆಗಾಗಿ ಕರ್ತವ್ಯನಿಷ್ಠರಾಗಬೇಕು.

ನಮ್ಮ ವಿಳಾಸಂಟರಿಗೆ:—

ಕಾಗದದ ಕೊರತೆಯ ಮೂಲಕ ಜಯಂತಿಯ ಪ್ರತಿಗಳನ್ನು ನಿಯಮಿತ ಸಂಖ್ಯೆಯಲ್ಲಿ ಪ್ರಕಟಿಸಲಾಗುವುದು. ಆದುದರಿಂದ ಪ್ರತಿಯೊಬ್ಬ ವಿಜಂಟರೂ, ತಮಗೆ ಬೇಕಿರುವ ಪ್ರತಿಗಳ ಸಂಖ್ಯೆಯನ್ನು ಆ ಆ ತಿಂಗಳ ೧೦ನೆಯ ತಾರೀಖಿನೊಳಗಾಗಿ ಕಾರ್ಯಾಲಯಕ್ಕೆ ಬರೆದು ತಿಳಿಸಬೇಕು.

ಧಾರವಾಡ ಜಿಲ್ಲೆಯ ೬ನೆಯ ಸಾಹಿತ್ಯ ಸಮ್ಮೇಳನ

(ಪಿ. ವೆಂ. ಅವರ ಸಂಗ್ರಹಿತ ವರದಿ)

ಧಾರವಾಡ ಜಿಲ್ಲೆಯ ಆರನೆಯ ಕನ್ನಡ ಸಾಹಿತ್ಯ ಸಮೇಳನವು ಹುಬ್ಬಳ್ಳಿಯಲ್ಲಿ ಅಕ್ಟೋಬರ್ ೨೬, ೨೮ ಮತ್ತು ೨೯ ರಲ್ಲಿ ಶ್ರೀ. ಅ. ನ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಕನ್ನಡ ಬಾವುಟದ ವಂದನೆಯೊಂದಿಗೆ ಆರಂಭವಾಗಿ ಸಮ್ಮೇಳನ ಕಾರ್ಯಕ್ರಮಗಳೆಲ್ಲವೂ ಮಲ್ಲಿಕಾರ್ಜುನ ನಾಟಕಗೃಹದಲ್ಲಿಯೇ ನಡೆಯುವು. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ನಾಂದೀ ಗೀತೆಯಾದ ನಂತರ, ಶ್ರೀ. ವಾಲಿ ಗಂಗಪ್ಪನವರು ತಾವು ಈ ಸಮಯಕ್ಕೆಂದು ಬರೆದ "ಬನ್ನಿರಿ" ಎಂಬ ಸ್ವಾಗತಗೀತೆಯನ್ನು ಸ್ತೋದಿದರು. ಮುಂಬಯಿ ಸರಕಾರದ ಉಪಮಂತ್ರಿಗಳಾದ ಮಾನ್ಯ ಶ್ರೀ. ಪಾಟೀಲ ಕಲ್ಲನಗೌಡರು, ಸಾಹಿತಿಗಳು ಸತ್ಯ ಸಾಹಿತ್ಯವನ್ನು ಸೃಷ್ಟಿಸಿ, ರಾಷ್ಟ್ರಸಾಹಿತ್ಯ ನಿರ್ಮಾಣಕಾರ್ಯದಲ್ಲಿ ಜೆಟ್ಟಿನ ಸಹಾಯಮಾಡಬೇಕೆಂದು ತಮ್ಮ ಉದ್ಘಾಟನ ಭಾಷಣದಲ್ಲಿ ಹೇಳಿದರು. ಸಮ್ಮೇಳನದ ಸಿದ್ಧತೆ ಮತ್ತು ಊರ ಜನರು ನೀಡಿದ ಸಹಕಾರದ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಧಾರವಾಡ ಜಿಲ್ಲಾಪ್ರಾದೇಶಿಕ ಸಮಿತಿಯ ಅಧ್ಯಕ್ಷರೂ, ಸಮ್ಮೇಳನ ಕಾರ್ಯಾಧ್ಯಕ್ಷರೂ ಆದ ಶ್ರೀ. ಏ ವೆಂಕೋಬಾಚಾರ್ಯರು ತಮ್ಮ ವರದಿಯನ್ನು ಓದಿದ ನಂತರ, ಸ್ವಾಗತಾಧ್ಯಕ್ಷರಾದ ಎಸ್. ಡಿ. ಘೋಡಕೆ ಅವರು ಎಲ್ಲರನ್ನೂ ಸ್ವಾಗತಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಕನ್ನಡ ಸಾಹಿತ್ಯೋದ್ಧಾರವಾಗಬೇಕಾದರೆ ಕನ್ನಡ ಪ್ರಾಂತದ ಏಕೀಕರಣವೇ ಗತಿಯೆಂದೂ, ಅದನ್ನು ಸಾಧಿಸುವ ಹೊಣೆ ಸಾಹಿತಿಗಳದೂ ಎಂದು ಹೇಳಿ, ಕನ್ನಡದ ಸಮಸ್ಯೆಗಳ ಮಹತ್ವಕ್ಕೆ ತಮ್ಮ ಬೆಂಬಲವಿದೆಯೆಂದು ಸೂಚಿಸಿದರು.

ಮಧ್ಯಾಹ್ನ ಶ್ರೀ. ಒ ಎನ್. ಲಿಂಗಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಪದ್ಯಗೋಷ್ಠಿ ಸೇರಿತು. ಶ್ರೀ. ಮಿರ್ಜಿ ಪರೀಲರು, ಹುಬ್ಬಳ್ಳಿಯ ಸಾಹಿತಿಗಳು ಇದೇ ಸಮಯಕ್ಕೆ ಹೊರಡಿಸಿದ "ಸಮ್ಮೇಮುಡುಪು" ಸಂಕಲನದ ಉದ್ಘಾಟನೆಯನ್ನು ಮಾಡಬೇಕೆಂದು ಪ್ರೊ. ಬಸವ ನಾಳರನ್ನು ಕೇಳಿಕೊಂಡರು. ಪ್ರೊ. ಬಸವನಾಳರು ಗ್ರಂಥದ ಮುಖ್ಯ ಅಂಶಗಳನ್ನು ವಿವರಿಸಿ ಹೇಳಿ, ಇಂತಹ ಸಂಕಲನಗಳ ಉಪಯೋಗವನ್ನು ತಿಳಿಸಿ, ಪುಸ್ತಕವು ಸರ್ವಜನರ ಆದರಕ್ಕೆ ಪಾತ್ರವಾಗಿದೆಯೆಂದು ಸೂಚಿಸಿದರು. ಸಾಯಂಕಾಲ ಪ್ರೊ. ದ ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನೆರೆದ ನಾಟಕಗೋಷ್ಠಿಯಲ್ಲಿ ನಾಟಕದ ಮುಖ್ಯವಿಷಯಗಳ ಬಗ್ಗೆ ಶ್ರೀ. ಕುಳುಕುಂದ ಶಿವರಾಯರು, ಸ್ಪೀರಸಾಗರರು, ಎಕ್ಕುಂಡಿ ಇವರ ಚರ್ಚೆ ನಡೆದು, ಪ್ರೊ. ಬೇಂದ್ರೆಯವರು ನಿಜವಾದ ನಾಟಕಕಾರನಾರು, ಅವನು ಜನತೆಗೆ ಮಾಡುವ ಉಪಕಾರವೇನೆಂಬುದರ ಬಗ್ಗೆ ಅಧ್ಯಕ್ಷ ಭಾಷಣ ಮಾಡಿದ ನಂತರ, ಈ ಗೋಷ್ಠಿ ಮುಗಿಯಿತು. ರಾತ್ರಿ ಶ್ರೀರಂಗರ ಸಂಧ್ಯಾಕಾಲ ನಾಟಕದ ಪ್ರದರ್ಶನವಾಯಿತು.

ಎರಡನೆಯ ದಿನ ಬೆಳಗು, ಶ್ರೀ. ವಿ ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಗದ್ಯಗೋಷ್ಠಿ ನಡೆಯಿತು. ಮಧ್ಯಾನ್ಹ ಶ್ರೀಮತಿ ಪದ್ಮಾವತೀದೇವಿ ಅಂಗಡಿಯವರ ಅಧ್ಯಕ್ಷತೆಯಲ್ಲಿ ಮಹಿಳಾಗೋಷ್ಠಿ ನಡೆಯಿತು. ಸ್ತ್ರೀಯರನೇಕರು ಭಾಗವಹಿಸಿದ್ದುದರಿಂದ, ಸಭೆಯು ಯಶಸ್ವಿಯಾಗಿ ನಡೆಯಿತು. ಮುಂಜೆ ಪ್ರೊ. ಕೇ. ಎಸ್. ನರಸಿಂಹರವರ ಅಧ್ಯಕ್ಷತೆಯಲ್ಲಿ ನಡೆದ ವಿಜ್ಞಾನಗೋಷ್ಠಿಯಲ್ಲಿ, ಅನೇಕ ಮಹನೀಯರು ವಿವಿಧ ವಿಷಯಗಳ ಮೇಲೆ ಭಾಷಣಮಾಡಿದರು. ಸಂಜೆ, ಶ್ರೀ. ಎನ್. ಕೇ. ದೀಕ್ಷಿತರವರ ಅಧ್ಯಕ್ಷತೆಯಲ್ಲಿ ನೆರೆದ ವಿದ್ಯಾಪೀಠ ಗೋಷ್ಠಿ ಮಹತ್ತ್ವದ್ದಾಗಿದ್ದಿತು. ಕರ್ನಾಟಕ ವಿದ್ಯಾಪೀಠದ ರಚನೆಯ ಬಗ್ಗೆ ಮಹತ್ತ್ವದ ಭಾಷಣಗಳಾದುವು. ಜಿಲ್ಲೆಯ ಪ್ರಮುಖರೆಲ್ಲರೂ ಭಾಗವಹಿಸಿದರು. ರಾತ್ರಿ ಶ್ರೀ. ಭಾಗವತರ ಕಾವ್ಯಗಾಯನ, ಬೇರೆ ಬೇರೆಯವರ ನರ್ತನ ಕಾರ್ಯಕ್ರಮಗಳಾದುವು.

ಮೂರನೆಯ ದಿನ ಮುಂಜಾನೆ ಮಕ್ಕಳಗೋಷ್ಠಿ ನೋಡತಕ್ಕು ದಾಗಿತ್ತು. ಅಧ್ಯಕ್ಷರಾದ ಹಾವೇರಿಯ ಶ್ರೀ. ಶ್ರೀನಿವಾಸ ಕೋಟೀಶ್ವರರು ಸಭೆಯನ್ನು ಒಳ್ಳೆ ರೀತಿಯಲ್ಲಿ ನಡೆಯಿಸಿಕೊಂಡು ಹೋದರು. ಅವರ ಭಾಷಣವೂ ವಿಚಾರಪೂರಿತವಾಗಿದ್ದಿತು. ಮನರಂಜನೆಯ ಕಾರ್ಯಕ್ರಮವನ್ನೂ ಅಂದು ಏರ್ಪಡಿಸಿತ್ತು.

ಮಧ್ಯಾನ್ಹ, ಬಹಿರಂಗ ಅಧಿವೇಶನದಲ್ಲಿ ಕರ್ನಾಟಕದ ನಾನಾ ಭಾಗದ ಪ್ರತಿನಿಧಿಗಳು ತಮ್ಮಲ್ಲಿಯ ಸಾಹಿತ್ಯ ಚಟುವಟಿಕೆಗಳ ವರದಿಯನ್ನೊಪ್ಪಿಸಿದನಂತರ, ಕರ್ನಾಟಕಪ್ರಾಂತ ನಿರ್ಮಾಣ, ವಿದ್ಯಾಪೀಠದ ಸ್ಥಾಪನೆ, ಕರ್ನಾಟಕದಲ್ಲಿ ವ್ಯಾಪಾರ ಮತ್ತು ಉದ್ಯೋಗಗಳ ಪ್ರಗತಿ, ಸಾಹಿತ್ಯಪ್ರಗತಿಯ ಗ್ರಂಥಪ್ರಕಟನೆಯ ಯೋಜನೆ ಮುಂತಾದ ಮಹತ್ತ್ವದ ಗೊತ್ತುವಳಿಗಳು ಸ್ವೀಕೃತವಾದುವು.

ಅಧ್ಯಕ್ಷರು, ಕನ್ನಡ ಸಾಹಿತ್ಯ ಬೆಳೆದು ಅದು ಸಾಮಾನ್ಯ ಜನರನ್ನು ಮುಟ್ಟಬೇಕು—ಹಳ್ಳಿಗಳಲ್ಲಿ ಚಟುವಟಿಕೆಗಳು ಹೆಚ್ಚಾಗಿ ಬೆಳೆಯಬೇಕು—ಎಂದೂ, ಸಾಹಿತ್ಯವು ಜೀವನದ ಪಡಿನೆರಳು, ಎಲ್ಲ ಸಮಸ್ಯೆಗಳನ್ನು ಸಾಹಿತಿಯೇ ನೋಡಿಕೊಳ್ಳುವವನಾಗಬೇಕು, ರಾಜಕಾರಣ ಸಾಹಿತಿ ಹೀಗೆ ಭೇದಮಾಡುವುದು ಸರಿಯಲ್ಲವೆಂದೂ ತಮ್ಮ ಸಮಾರೋಪ ಭಾಷಣದಲ್ಲಿ ಹೇಳಿ ಮುಗಿಸಿದ ನಂತರ, ಪುಷ್ಪಹಾರ—ಧನ್ಯವಾದಗಳ ಸಮರ್ಪಣೆಯೊಂದಿಗೆ ಅಂದಿನ ಕಾರ್ಯಕಲಾಪ ಮುಗಿಯಿತು.

ರಾತ್ರಿ ಶ್ರೀ. ಜೋಳದರಾಶಿ ದೊಡ್ಡನ ಗೌಡರ ಸ್ವಾರಸ್ಯವಾದ ಕಾವ್ಯಗಾಯನವಾಯಿತು ಹಾವೇರಿಯ ಗೆಳೆಯರು ಮೂರು ಏಕಾಂಕ ನಾಟಕಗಳನ್ನು, ಹುಬ್ಬಳ್ಳಿಯ ಬಾಲಸಾಹಿತ್ಯ ಮಂಡಲಿಯವರು 'ಬೆಳಕು' ಎಂಬುದನ್ನು ಪ್ರದರ್ಶಿಸಿದರು. ಕೊನೆಯಲ್ಲಿ ಆಭಾರಮನ್ನಿಸಿದ ನಂತರ 'ವಂದೇ ಮಾತರಂ' ಹಾಡಿನೊಂದಿಗೆ ಸಮ್ಮೇಳನವು ಮುಗಿಯಿತು.

ಉದ್ಯೋಗ

(ಸಣ್ಣಕಥೆ)*

೧

ಶ್ರೀ. ಬಿ. ಪಿ. ಎಸ್. ರಾವ್ ಅವರಿಂದ ಅನುವಾದಿತ

★

ಸಮಾಜಕ್ಕೆ ಬೇಡ್ದವಾದ ಸೂಳೆಗಾರಿಕೆ, ಅದೇ ಸಮಾಜದ ಒಂದು ಘಟಕವಾದ ವ್ಯಕ್ತಿಗೆ ಅವಶ್ಯವಾಗಿ ಬೇಕಾಗುತ್ತದೆ. ಈ ಪರಸ್ಪರ ವಿರುದ್ಧ ಬಯಕೆಗಳ ಪರಿಣಾಮ ಹೇಗಾಗುವುದೆಂಬುದಕ್ಕೆ ಜಾನಕೀಯ ಚಿತ್ರ ಅತ್ಯುತ್ತಮ ಉದಾಹರಣೆಯಾಗಿದೆ.

★

ಇಂದು ಬೆಳಗಿನಲ್ಲಿ ಮಾಸ್ತರರು ಎಂತಹದೊ ಕೆಲವು, ಉದ್ದ ಉದ್ದವಾದ ಕಾಗದ ಹಿಡಿದುಕೊಂಡು ತರಗತಿಯಲ್ಲಿ ಬಂದರು. ನಲವತ್ತಕ್ಕಿಂತ ಹೆಚ್ಚಾಗಿರುವ ಅಲ್ಲಿಯ ಚಿಕ್ಕ ಚಿಕ್ಕ ಹುಡುಗರ ಕಣ್ಣುಗಳು ಆ ಕಾಗದಗಳ ಕಡೆಗೆ ಒಟ್ಟುಗೂಡಿದುವು. ಮಕ್ಕಳಿಗೆ ಸಹಜವಾಗಿರುವ ಮುಗ್ಧ ಕಲ್ಪನೆಗಳು ಅವರಲ್ಲಿ ಮೂಡತೊಡಗಿದುವು: 'ಚಿತ್ರಗಳಿರಬಹುದು' ಎಂದು ಕೆಲವರು; 'ವೃತ್ತಪತ್ರಗಳಿರಬೇಕು!' ಎಂದು ಇನ್ನು ಕೆಲವರು; 'ಮಾರ್ಕುಗಳ ಪಟ್ಟಿಯಿರಬೇಕು' ಎಂದು ಬೇರೆ ಕೆಲವರು. ಅವೇನೆಂದು ತಿಳಿದುಕೊಳ್ಳಲು ಎಲ್ಲರಿಗೂ ಆತುರ— ಕುತೂಹಲ.

ಬಂದೊಡನೆಯೆ ಮೊದಲು ಮಾಸ್ತರು ತರಗತಿಯ ಹುಡುಗರ 'ಹಾಜರಿ' ತೆಗೆದುಕೊಂಡರು. ಬಳಿಕ ಕೈಯಲ್ಲಿದ್ದ ಕಾಗದಗಳನ್ನು ಬಿಚ್ಚಿ ಟೇಬಲಿನ ಮೇಲೆ ಇರಿಸಿದರು. ಹುಡುಗರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಎದ್ದುನಿಂತು, ಕೊರಳನ್ನು ಮೇಲಕ್ಕೆಬ್ಬಿಸಿ, ಅದೇನೆಂದು ನೋಡಲು ಹವಣಿಸಿದರು. ಮಾಸ್ತರರು ಮೇಲೆ ಕೈಯೆತ್ತಿ ಕೂಗಿ ಹೇಳಿದರು:

"ಹಂ, ಸುಮ್ಮನೆ ಕುಳಿತುಕೊಳ್ಳಿರಿ; ನಾನೇನು ಹೇಳುತ್ತೇನೋ ಅದನ್ನು ಮನಸ್ಸುಗೊಟ್ಟು ಕೇಳಿರಿ! ತಿಳಿಯಿತೇ?"

"ಹೌಸ್ರಿ ಮಾಸ್ತರ್" ಹುಡುಗರೆಲ್ಲ ಒಟ್ಟಾಗಿ ಕೂಗಿದರು.

"ಸರಿ, ಹಾಗಾದರೆ ಈ ತರಗತಿಯಲ್ಲಿ ಮಲಯಾಳ ಬ್ರಾಹ್ಮಣರ ಹುಡುಗರು ಯಾರಿದ್ದೀರೋ ಅವರೆಲ್ಲ ಎದ್ದುನಿಲ್ಲಿರಿ.... ಎಂದರೆ ಪಿಟ್ಟೆ, ನಂಬುದ್ರಿ ಮೊದಲಾದ ಜಾತಿಯ ಹುಡುಗರೆಲ್ಲಾ ಏಳಿರಿ!"

ಯಾರೂ ಎದ್ದು ನಿಲ್ಲಲಿಲ್ಲ. ಮಾಸ್ತರು ಕಾಗದಗಳ ಮೇಲೆ ಏನೋ ಬರೆದುಕೊಂಡು, ಆ ಮೇಲೆ ಮತ್ತೆ ಹೇಳಿದರು:

"ಸರಿ! ಇನ್ನು ತಮಿಳು ಬ್ರಾಹ್ಮಣರು— ಎಂದರೆ ಪಟ್ಟರ್, ಅಯ್ಯರ್ ಮೊದಲಾದ ಜಾತಿಯವರು ಎದ್ದು ನಿಲ್ಲಿರಿ!"

ಇಪ್ಪತ್ತು— ಇಪ್ಪತ್ತೊಂದು ಹುಡುಗರು ಎದ್ದು ನಿಂತರು. ಮಾಸ್ತರರು ಅವರನ್ನು ಎಣಿಕೆ ಮಾಡಿ, ಕಾಗದದ ಮೇಲೆ ಏನನ್ನೊ ಬರೆದುಕೊಂಡು, ಬಳಿಕ ಮತ್ತೆ ಹೇಳಿದರು:

"ಹುಂ, ಇನ್ನು ನಾಯರ್....."

ಹೀಗೆಯೆ ಅವರು, ತರಗತಿಯ ನಲವತ್ತು ಹುಡುಗರನ್ನೂ ಜಾತಿಗೆ ಅನುಸರಿಸಿ ವಿಂಗಡಿಸಿ ವಿಂಗಡಿಸಿ ಬರೆದುಕೊಳ್ಳಲಾರಂಭಿಸಿದರು. ಮಲಯಾಳ ಬ್ರಾಹ್ಮಣರು, ತಮಿಳು ಬ್ರಾಹ್ಮಣರು, ನಾಯರರು, ವೆಲ್ಲಾಳರು, ನಾಂಚನಾಟ್ಟರು, ಪಿಳ್ಳೈಗಳು, ಪಾಂಡಿಪಿಳ್ಳೈಗಳು, ಈಡವರು, ಸೀರಿಯನ್ ಕ್ರೈಸ್ತರು, ಲೈಟಿನ್ ಕ್ರೈಸ್ತರು, ರೋಮನ್ ಕ್ಯಾಥೋಲಿಕರು, ಮುಸಲ್ಮಾನರು, ಪರಾಣರು ಹೀಗೆ ಬೇರೆ ಬೇರೆ ಜಾತಿಗಳ ಉದ್ದವಾದ ಪಟ್ಟಿಯನ್ನು ಮಾಡಿದರು. ಕೊನೆಯಲ್ಲಿ 'ಇತರ' ಎಂಬ ಸಾಲನ್ನೂ ಸೇರಿಸಿ, ಪಟ್ಟಿಯ ಅಪೂರ್ಣತೆಯನ್ನು ಪೂರ್ಣಗೊಳಿಸಿದರು. ಅನಂತವಾದ ಸಂಖ್ಯೆಯಲ್ಲಿ ವಿಭಾಗಿತವಾಗಿರುವ ಭಾರತದಲ್ಲಿಯ ಜಾತಿವಿಸ್ತಾರವು ಯಾರಿಗೂ ಎಣಿಸಲಿಕ್ಕೂ ಅಸಾಧ್ಯ; ಬರೆದುಕೊಳ್ಳಲಿಕ್ಕೂ ಅಸಾಧ್ಯ ಇದೊಂದು ಭಾರತವು ಪಡೆದ ಅಭಿಶಾಪವೆಂದೇ ಹೇಳಬೇಕಲ್ಲವೆ?

ಕೊನೆಯಲ್ಲಿ ಮಾಸ್ತರರು ಅಸ್ಪೃಶ್ಯ ಜಾತಿಯ ಹೆಸರನ್ನೆತ್ತಿ ಕೂಗಿದಾಗ, ಎಲ್ಲರಿಗಿಂತ ಹಿಂದಿನ ಬೆಂಚಿನ ಮೇಲೆ ಕುಳಿತ ಇಬ್ಬರು ಬಡಹುಡುಗರು ಜೊತೆಯಾಗಿ ಎದ್ದುನಿಂತರು. ಮಿಕ್ಕಿ ಹುಡುಗರೆಲ್ಲರೂ ಅವರಿಬ್ಬರ ಕಡೆಗೆ ತಿರಸ್ಕಾರದ ದೃಷ್ಟಿಯಿಂದ ನೋಡುತ್ತಿದ್ದರು; ಅವರಿಬ್ಬರೂ ರಕ್ತಹೀನವಾದ ನಿಸ್ತೇಜ ಮುಖಗಳಿಂದ ನಿಂತುಕೊಂಡಿದ್ದರು. ಮಾಸ್ತರು ಮಾಡಿದ ಜಾತಿಯ ಪಟ್ಟಿ, ಪರಸ್ಪರರ ಜೊತೆಯನ್ನೂ ಕೆಳೆಯನ್ನೂ ಅಳಿಸುವ ಆ ಸುಕುಮಾರ ಹೃದಯದ ಬಾಲಕರಲ್ಲಿಯೂ, ಜಾತಿ-ಜಾತಿಗಳ ಬೇಲಿಯನ್ನು ಬಲಿಯದೆ ಬಿಡಲಿಲ್ಲ.

ಬ್ರಾಹ್ಮಣ ಹುಡುಗರು ಎದ್ದುನಿಂತಾಗ ಅವರೆಲ್ಲ ಒಬ್ಬರನ್ನೊಬ್ಬರು ನೋಡುತ್ತ ಮುಗುಳುನಗೆ ನಗುತ್ತಿದ್ದರು. ಮಿಕ್ಕ ಜಾತಿಯವರು ಎದ್ದುನಿಂತಾಗ ಬ್ರಾಹ್ಮಣ ಹುಡುಗರು ಅವರನ್ನು ನೋಡಿ ಮುಖ ಮುನುಡಿಸಿದರಲ್ಲಿವೆ, ಇವರೆಲ್ಲರಿಗಿಂತ ಹೆಚ್ಚಿನ ಜಾತಿಯವರು ತಾವೆಂಬ ಗರ್ವದಿಂದ ಉಬ್ಬಿದರು ಅಬ್ಬಾ ಇದೊಂದೇ ಒಂದು ಜಾತಿಯ ಪಟ್ಟಿ ಎಷ್ಟೊಂದು ಅನರ್ಥಕಾರಿಯಾಗಿ ಪರಿಣಮಿಸಿಲ್ಲವು!

ಜಾತಿಗಳ ಪಟ್ಟಿ ಮುಗಿದ ಮೇಲೆ, ಪಾಲಕರ ಉದ್ಯೋಗವೇನೆಂಬುದರ ವಿಚಾರ ನಡೆಯಿತು. ಮಾಸ್ತರರು ಕೇಳಿದರು:

* ಪ್ರಸಿದ್ಧ ಮಲೆಯಾಳು ಕತೆಗಾರರಾದ ಶ್ರೀ. ನಾಗವಲ್ಲಿ ಆರ್. ಎಸ್. ಕುರುಪ್ ಅವರ ಕತೆಯೊಂದರ ಅನುವಾದವಿದು.

"ಏನಯ್ಯಾ! 'ಪಾಲಕರು' ಎಂದರೆ ಯಾರು—ಎಂಬುದು ನಿಮಗೆ ಗೊತ್ತಿದೆಯೆ?"

"ಗೊತ್ತಿದೆ ಸರ್!" ಕೆಲವು ಹುಡುಗರು ಹೇಳಿದರು.

"ಹೇಳಿರಿ ಹಾಗಾದರೆ ಯಾರು?"

"ನಮಗೆ ಫೀ, ಪುಸ್ತಕ ಮೊದಲಾದದ್ದನ್ನ ಒದಗಿಸಿಕೊಡುವವರೇ ಪಾಲಕರು ಸರ್!"

"ಹಾಂ, ಸರಿಯಾಗಿ ಹೇಳಿದಿರಿ! ಇನ್ನು ಹೀಗೆ ಮಾಡಿರಿ: ಯಾರ ಪಾಲಕರು ಸರಕಾರೀ ನೌಕರರಿದ್ದಾರೋ ಅವರು ಎದ್ದು ನಿಲ್ಲಿರಿ!"

ಒಬ್ಬ ಹುಡುಗನಿಗೆ ಸಂದೇಹವೆಂಟಾಗಿ ಕೇಳಿದ:

"ವಕೀಲರೂ ಸರಕಾರೀ ನೌಕರರೇನು ಸರ್?"

"ಛೇ, ಇಲ್ಲ!" ಮಾಸ್ತರರು ಹೇಳಿದರು.

ಸರಕಾರಿ ನೌಕರರು, ವಕೀಲರು, ವೈದ್ಯರು, ಪುರೋಹಿತರು, ವ್ಯಾಪಾರಿಗಳು, ಕೂಲಿಕಾರರು, ಒಕ್ಕಲಿಗರು— ಇತ್ಯಾದಿ ಎರಡನೆಯ ಪಟ್ಟಿಯೂ ಪೂರ್ಣವಾಯಿತು.

"ಇನ್ನಾರಾದರೂ ಹೇಳುವವರು ಇದ್ದಾರೆಯೆ?" ಎಂದು ಮಾಸ್ತರರು ಕೇಳಿದರು. ಹುಡುಗಿಯರು ಕುಳಿತ ಬೆಂಚಿನಲ್ಲಿಂದ ಒಬ್ಬ ಹುಡುಗಿ ಎದ್ದು ನಿಂತಳು. ಮಾಸ್ತರರು ಸ್ವಲ್ಪ ಬಿರುನುಡಿಯಲ್ಲಿ ಕೇಳಿದರು:

"ಇದುವರೆಗೆ ನೀನು ಏಕೆ ಎದ್ದು ನಿಲ್ಲಲಿಲ್ಲ?"

ಹುಡುಗಿ ಬೆದರಿದ ನೋಟದಿಂದ ಮಾಸ್ತರರ ಕಡೆಗೆ ನೋಡಿದಳು. ಎಲ್ಲ ಹುಡುಗರು ಹುಡುಗಿಯ ಕಡೆಗೆ ನೋಡುತ್ತಿದ್ದರು.

"ನಿನ್ನ ಪಾಲಕರು ಯಾರು?" ಮಾಸ್ತರರು ಕೇಳಿದರು. ಹುಡುಗಿ ಮಾತನಾಡಲಿಲ್ಲ. ಕಣ್ಣುಗಳಲ್ಲಿ ಗಾಬರಿ ತುಂಬಿ ಹೊರಸೂಸುತ್ತಿತ್ತು.

"ನಿನಗೆ ಫೀಹಣ, ಪುಸ್ತಕ ಇವನ್ನೆಲ್ಲ ಯಾರು ಒದಗಿಸುತ್ತಾರೆ?" ಮಾಸ್ತರರು ಪ್ರಶ್ನೆಯನ್ನು ಸುಲಭಗೊಳಿಸಿ ಕೇಳಿದರು. ಹುಡುಗಿ ತಟ್ಟನೆ ಹೇಳಿದಳು:

"ನಮ್ಮ ಅಮ್ಮ!"

"ನಿನಗೆ ತಂದೆಯಿಲ್ಲನೆ?"

"ಇಲ್ಲ, ನಮ್ಮ ತಂದೆ ಸತ್ತುಹೋಗಿದ್ದಾರೆಂದು ಅಮ್ಮ ನನಗೆ ಹೇಳಿದ್ದಾಳೆ!"

ನಸುವೇಳೆ ಮಾಸ್ತರರು ಮಾತನಾಡದೆ ಇದ್ದರು. ಕಣ್ಣು ಒದ್ದೆಯಾದಂತೆ ಕಂಡಿತು. ಅವರಿಗೆ ತಮ್ಮ ಗತಿಸಿದ ತಂದೆಯ ಜ್ಞಾಪಕವಾಯಿತೇನೊ! ಬಳಿಕ ಮೆಲ್ಲಗೆ ಹೇಳಿದರು:

"ನಿಮ್ಮ ಅಮ್ಮ ಏನು ಮಾಡುತ್ತಾಳೆ? ಅವಳ ಉದ್ಯೋಗ ಯಾವುದು?"

"ನನಗೆ ಗೊತ್ತಿಲ್ಲ ಸರ್!"

"ನಿನಗೆ ಸೋದರಮಾವ, ಅಣ್ಣ ಮೊದಲಾದವರು ಯಾರಾದರೂ ಇದ್ದಾರೆಯೆ?"

"ಯಾರೂ ಇಲ್ಲ. ನಾನು, ನನ್ನ ಅಮ್ಮ, ಒಬ್ಬ ಚಿಕ್ಕ ತಮ್ಮ— ಇಷ್ಟೇ ಇದ್ದೇವೆ!"

"ನಿನಗೆ ಫೀಹಣ ಮೊದಲಾದದ್ದನ್ನೆಲ್ಲಾ ನಿನ್ನ ಅಮ್ಮನೇ ಕೊಡುತ್ತಾಳಲ್ಲವೆ?"

"ಹೌದು ಸರ್!"

ಮಾಸ್ತರರು ಅಡಿಯಿಂದ ಮುಡಿಯ ವರೆಗೆ ಆ ಹುಡುಗಿಯನ್ನು ನೋಡಿದರು. ಇಂತಹ ಕಂಟ್ರೋಲಿನ ದಿನಗಳಲ್ಲಿಯೂ ಹುಡುಗಿಯ ಮೈಮೇಲೆ ಒಳ್ಳೆಯ ಬಟ್ಟೆ-ಬರೆಗಳಿದ್ದುವು; ಕೊರಳಲ್ಲಿ ಬಂಗಾರದ ಚೇನು, ಕೈಗಳಲ್ಲಿ ಚಿನ್ನದ ಬಳೆ, ಕಿವಿಗಳಲ್ಲಿ ಹರಳಿನ ಲೋಲಕ.... ಸರಿ, ಏನೆಲ್ಲಾ ಇದ್ದಿತು. ಮಾಸ್ತರರು ಮತ್ತೆ ಕೇಳಿದರು:

"ಗಂಡುಸರು ಯಾರೂ ಇಲ್ಲವೆ ನಿಮ್ಮ ಮನೆಯಲ್ಲಿ?"

"ಯಾರೂ ಇಲ್ಲ ಸರ್!"

"ನಿಮ್ಮ ಅಮ್ಮ ಹಾಲು, ಬೆಣ್ಣೆ ಇವುಗಳ ವ್ಯಾಪಾರವನ್ನೇನಾದರೂ ಮಾಡುತ್ತಾಳೇನು?"

"ಛೇ, ನಮ್ಮ ಮನೆಯಲ್ಲಿ ಎಲ್ಲಿಯ ಹಾಲು ಬೆಣ್ಣೆ? ನಾವೇ ಹಣಕೊಟ್ಟು ತೆಗೆದುಕೊಳ್ಳುತ್ತೇವೆ!"

ಮಾಸ್ತರರಿಗೆ ಏನೂ ತಿಳಿಯದಂತಾಯಿತು. ಇನ್ನೇನು ಕೇಳಬೇಕೆಂಬುದು ಸ್ವಲ್ಪವೇಳೆ ಗೊತ್ತಾಗದೆ ಹೋಯಿತು. ಆಮೇಲೆ ಮತ್ತೆ ಕೇಳಿದರು:

"ನಿಮ್ಮ ಅಮ್ಮನಿಗೆ ತೋಟ-ಪಟ್ಟಿ, ಹೊಲ-ಮನೆ ಏನಾದರೂ ಇನೆಯೇನು?"

"ಏನೇನೂ ಇಲ್ಲ ಸರ್!"

ಮಾಸ್ತರರು ಸೋತುಹೋದರು. ಮತ್ತೆ ಕೊನೆಯ ಮಾತಾಗಿ ಅವರು ಕೇಳಿದರು:

"ಹಾಗಾದರೆ ನಿಮ್ಮ ಅಮ್ಮ ಯಾವ ಉದ್ಯೋಗ ಮಾಡುತ್ತಾಳೆ?"

"ಕೇಳಿಕೊಂಡು ಬಂದು ನಾಳೆ ಹೇಳುತ್ತೇನೆ ಸರ್!"

"ಒಳ್ಳೆಯದು, ಕುಳಿತುಕೋ!"

೨

ಸಾಯಂಕಾಲ ಮನೆಗೆ ಬಂದೊಡನೆ ಹುಡುಗಿ ತಾಯಿಯನ್ನು ಕೇಳಿದಳು:

"ಅಮ್ಮಾ, ನಿನ್ನ ಉದ್ಯೋಗವೇನು?"

ಪ್ರಶ್ನೆಯನ್ನು ಕೇಳಿ ತಾಯಿ ಒಮ್ಮೆಲೆ ಬೆಚ್ಚಿಬಿದ್ದಳು. ಹುಡುಗಿ ಒಂದೆ ಸಮನೆ ತಾಯಿಯನ್ನು ಕೇಳತೊಡಗಿದಳು:

"ನಮ್ಮ ಮಾಸ್ತರರು ಕೇಳಿದ್ದಾರವ್ವಾ! ನಮ್ಮ ತರಗತಿಯಲ್ಲಿಯ ಎಲ್ಲ ಹುಡುಗರ ತಾಯಿ-ತಂದೆಗಳ ಉದ್ಯೋಗವನ್ನೂ ಕೇಳಿಕೊಂಡು ಒಂದು ಕಾಗದದ ಮೇಲೆ ಬರೆದುಕೊಂಡಿದ್ದಾರೆ. ನನಗೆ ಗೊತ್ತಿದ್ದಿಲ್ಲವಾದ್ದರಿಂದ ನನಗೇನೂ ಹೇಳಲಿಕ್ಕೆ ಬರಲಿಲ್ಲ.

ಮತ್ತೆ ನಾಳೆ ಅವರು ಕೇಳಿದಾಗ ಹೇಳಬೇಕಾಗುವುದು. ಅದುದರಿಂದ ಹೇಳು, ನಿನ್ನ ಉದ್ಯೋಗವೇನು? ಏನು ಕೆಲಸಮಾಡುತ್ತೀಯೆ ನೀನು?"

ತಾಯಿ ಒಂದನೂ ಮಾತನಾಡಲಿಲ್ಲ. ನಿಂತಲ್ಲಿ ನಿಂತುಕೊಂಡು ಹುಡುಗಿಯತ್ತ ನೋಡತೊಡಗಿದಳು. ಹುಡುಗಿ ತಾಯನ್ನು ತಬ್ಬಿಕೊಂಡು ಮುಖ ಮೇಲೆತ್ತಿ ಕೇಳಿದಳು:

"ಇದೇನಮ್ಮಾ? ನೀನು ಹೀಗೆಯೇಕೆ ನೋಡುತ್ತಿದ್ದೀಯೆ? ನನಗೆ ಹೆದರಿಕೆ ಎನಿಸುತ್ತದೆ. ನೀನು ಹೀಗೆ ಏಕೆ ನಿಂತುಕೊಂಡೆ? ಏನಾಗುತ್ತಲಿದೆ?"

"ಏನೂ ಇಲ್ಲ ಮಗು, ನನಗೆ ಏನೂ ಆಗಿಲ್ಲ!" ಮಾತಿನ ಕೊನೆಯೊಂದಿಗೆ ತಾಯಿ ಮಗಳನ್ನು ಮುದ್ದಿಸಿದಳು.

"ಹಾಗಾದರೆ ಹೇಳು ಅಮ್ಮಾ, ನೀನು ಯಾವ ಉದ್ಯೋಗ ಮಾಡುತ್ತಿದ್ದೀಯೆ?"

"ಹೇಳಬೇಕಾದಂತಹ ಯಾವ ಉದ್ಯೋಗವೂ ಇಲ್ಲ!" ತಾಯಿಯ ಕಣ್ಣುಗಳು ಅದೇನನ್ನೋ ದೂರದಲ್ಲಿ ನೋಡುತ್ತಿದ್ದುವು.

ಹುಡುಗಿ ನೋಡಿದಳು; ತಾಯ ಕಣ್ಣು ಕಂಬನಿಗಳನ್ನು ಚೆಲ್ಲುತ್ತಿದೆ. ಬೆಚ್ಚಿದ ದನಿಯಲ್ಲಿ ಅವಳು ಕೇಳಿದಳು:

"ಇದೇನಮ್ಮಾ? ಅಳುತ್ತಿದ್ದೀಯಲ್ಲಾ ನೀನು!"

"ಇಲ್ಲ ಮಗು, ನಾನೆಲ್ಲಿ ಅಳುತ್ತಿದ್ದೇನೆ?" ಕಂಬನಿಗಳನ್ನು ಒರಸಿಕೊಳ್ಳುತ್ತಲೆ ತಾಯಿ ಕೇಳಿದಳು.

"ನಮ್ಮ ಅಮ್ಮ ಯಾವ ಉದ್ಯೋಗ ಮಾಡುವಳೆಂಬುದನ್ನು ಕೇಳಿ ನಾಳೆ ಹೇಳುತ್ತೇನೆಂದು ನಾನು ಮಾಸ್ತರರಿಗೆ ಮಾತು ಕೊಟ್ಟು ಬಂದಿದ್ದೇನೆ!"

"ಹಾಗಿದ್ದರೆ ಅವರಿಗೆ ಹೇಳು 'ನಮ್ಮ ಅಮ್ಮ ಯಾವ ಉದ್ಯೋಗವನ್ನೂ ಮಾಡುತ್ತಿಲ್ಲ' ಎಂದು!"

"ಮಾಸ್ತರರು ನಾನು ಹೇಳಿದುದನ್ನು ಒಪ್ಪಬಹುದೇ? ಉದ್ಯೋಗವನ್ನೇನೂ ಮಾಡದಿದ್ದರೆ ಹಣ ಎಲ್ಲಿಂದ ಬರುತ್ತದೆ? ನಮ್ಮ ಪುಸ್ತಕದಲ್ಲಿ ಬರೆದಿದೆ: ಉದ್ಯೋಗ ಮಾಡಿದರೆ ಹಣ ಸಿಕ್ಕುತ್ತದೆ—ಎಂದು. ಹೇಳು ಅಮ್ಮಾ, ನಿನಗೆ ಹಣಸಿಕ್ಕಬೇಕಾದರೆ ನೀನು ಯಾವ ಉದ್ಯೋಗ ಮಾಡುತ್ತೀಯೆ?"

"ನಿಮ್ಮ ಅಮ್ಮ ಏನೂ ಮಾಡುತ್ತಿಲ್ಲ ಮಗು!"

"ಉಹುಂ, ಹೀಗೆ ಹೇಳುವುದರಿಂದ ಅಲ್ಲಿ ಕೆಲಸ ನಡೆಯುವಂತೆ ಇಲ್ಲ. ಎಲ್ಲ ಹುಡುಗರ ತಾಯಿ-ತಂದೆಗಳು ಒಂದಿಲ್ಲೊಂದು ಉದ್ಯೋಗವನ್ನು ಮಾಡಿಯೆ ಮಾಡುತ್ತಾರೆ; ಹೀಗಿರುವಾಗ ನನ್ನ ತಾಯಿಯೂ ಏನಾದರೂ ಉದ್ಯೋಗ ಮಾಡುತ್ತಿರಲೇ ಬೇಕು!"

"ಹೋಗು ಮಗು, ನೀನೀಗ ಆಟವಾಡಲಿಕ್ಕೆ ಹೋಗು!"

"ಇಲ್ಲ, ನಾನದನ್ನು ತಿಳಿದುಕೊಳ್ಳದೆ ಹೋಗುವುದಿಲ್ಲ!"

"ಈಗ ಅದನ್ನು ಹೇಳಲಾರೆ!"

"ಹಾಗಾದರೆ ನಾನೀಗ ಹೋಗಲಾರೆ!"

"ನಾನು ಹೇಳುತ್ತೇನೆ; ನೀನೀಗ ಇಲ್ಲಿಂದ ಹೊರಟು ಹೋಗು! ಹುಂ, ಹೋಗು! ಇಲ್ಲವಾದರೆ ಏಟು ತಿನ್ನುತ್ತೀಯೆ ನೋಡು!" ತಾಯಿ— ಜಾನಕಿಯು ಕೋಪದಿಂದ ಕೂಗಿದಳು.

ಹುಡುಗಿ ಅಳಲು ತೊಡಗಿದಳು. ಜಾನಕಿಯ ಕಣ್ಣುಗಳು ಕಂಬನಿಗೂಡಿದುವು; ಹುಡುಗಿಯನ್ನು ಎತ್ತಿ ಎದೆಗೆ ಅಪ್ಪಿಕೊಂಡಳು. ತಾಯಿ, ಮಗಳು ಇಬ್ಬರ ಕಣ್ಣುಗಳಿಂದಲೂ ಕಣ್ಣೀರ ಕೋಡಿ ಹರಿಯಿತು. ಕೆಲವು ನಿಮಿಷ ಕಳೆದ ಮೇಲೆ, ತಾಯಿ ಕಂಪಿಸುವ ಕಂಠದಿಂದ ಮೆಲ್ಲಗೆ ಹೇಳಿದಳು:

"ಅಳಬೇಡ ಮಗು, ನೀನೀಗ ಆಡಲಿಕ್ಕೆ ಹೋಗು! ನಾಳೆಯ ದಿನ ನಿನಗೆ ಎಲ್ಲವನ್ನೂ ಹೇಳುವೆನಂತೆ!"

ಹುಡುಗಿಯ ಬಾಡಿದ ಮುಖ ಅರಳಿಬಿಟ್ಟಿತು. ಅವಳು ತಾಯಿಯ ಮುಖದ ಕಡೆಗೆ ನಿಟ್ಟಿಸುತ್ತ ಕೇಳಿದಳು:

"ನಿಜವಾಗಿಯೂ ಹೇಳುತ್ತೀಯಾ?"

"ನಿಜವಾಗಿಯೂ ಹೇಳುತ್ತೇನೆ!"

"ಓ, ನಮ್ಮ ಅಮ್ಮ ಒಳ್ಳೆಯವಳು.... ಬಂಗಾರದ [illegible] ನಮ್ಮಮ್ಮ!" ಎಂದು ತಾಯನ್ನು ಮತ್ತೊಮ್ಮೆ ಮುದ್ದಿಸಿ, ಹುಡುಗಿ ಆಟಕ್ಕೆಂದು ಓಟಬಿಟ್ಟಳು. ಅವಳನ್ನು ನೋಡಿ-ನೋಡುತ್ತ ಜಾನಕಿಯು ನಿಂತಲ್ಲಿಯೆ ಕೆಲಹೊತ್ತು ನಿಂತುಕೊಂಡಿದ್ದಳು. ಇದ್ದುದಿದ್ದಹಾಗೆಯೆ ಅವಳ ಕಣ್ಣುಗಳಲ್ಲಿ ಮಿಂಚು ಮೂಡಿತು. ನೋಟಗಳು ಕಂಬನಿಗಳಿಂದ ಮುಸುಕಿ ನಿಂತುವು. ಬಿಗಿದುಬರುತ್ತಿರುವ ಕಂಠದಿಂದವಳು ನುಡಿದಳು:

"ನಾಳೆ.... ನಾಳೆ...."

ಅಂದಿನ ಇರುಳು ಜಾನಕಿಗೆ ಕಣ್ಣಿಗೆ ಕಣ್ಣು ಹಚ್ಚಗೊಡಲಿಲ್ಲ. 'ನಾಳೆ ಏನು ಹೇಳಬೇಕು!' ಎಂಬ ಯೋಚನೆಯಲ್ಲಿಯೆ ಅವಳು ಮಗ್ಗಿಲುಗಳನ್ನು ಬದಲಿಸುತ್ತಿದ್ದಳು. 'ನಾಳೆ' ಎಂಬುದು ಭೀಕರಾಕಾರದಿಂದ ಅವಳೆದುರು ಕುಣಿದು ಎದೆಯನ್ನು ನಡುಗಿಸುತ್ತಿತ್ತು.

ಹಿಂದೆ ಆ ಒಂದು ದಿನದ ಏಕಾಂತರಾತ್ರಿಯ ಭೀಕರತೆಯಲ್ಲಿ, ಹಸಿವು-ಬಾಯಾರಿಕೆಗಳಿಂದ ಕಳವಳಿಸುತ್ತಿರುವ ಯಾವ ಚಿಕ್ಕ ಮಗುವಿನ ಪ್ರಾಣರಕ್ಷಣೆಗೆಂದು ಆ ವಿಧವೆಯಾದ ಜಾನಕಿಯು ಕಾಮುಕನೊಬ್ಬನ ತೋಳ ತಕ್ಕೆಗೆ ತನ್ನನ್ನು ಒಳಗಾಗಿಸಬೇಕಾಗಿ ಬಂದಿತೊ, ಆದೇ ಆ ಹಸಿದು ಕಂಗೆಟ್ಟ ಹುಡುಗಿ ದೊಡ್ಡವಳಾಗಿ ಇಂತಹ ಸಮಸ್ಯೆಯೊಂದನ್ನು ಒಡ್ಡಿ ಜಾಯಿಬಿಡಬಹುದೆಂಬ ಕಲ್ಪನೆಯು ಸುಳಿವು ಕೂಡ ಅಂದು ಮೂಡಿರಲಿಲ್ಲ ಅದಾದ ಮೇಲೆ ತಾನು ಪುಷ್ಟಿ-ತುಷ್ಟಿಕರವಾದ ಅನ್ನ-ಪಾನಗಳನ್ನಿತ್ತು ಪ್ರೀತಿಯಿಂದ ಕಾಪಾಡುತ್ತಿರುವಾಗಲೂ, ಎಂದೂ, ಇಂತಹದೊಂದು ಸಮಸ್ಯೆಯನ್ನು ತನ್ನ ಪ್ರೀತಿಯ ಮಗಳು ತನ್ನೆದುರು ನಿಲ್ಲಿಸಬಹುದೆಂದು ಎನಿಸಿರಲಿಲ್ಲ. ಪ್ರೀತಿ-ವಾತ್ಸಲ್ಯಗಳಿಂದ ಮುಂಡಾಡಿ ಮುದ್ದಾಡಿ

ಬೆಳೆಯುತ್ತಿರುವ ಆ ಮಗುವು ಮುಂದೊಂದು ದಿನ ತನ್ನನ್ನು ಇಂತಹ ಭೀಕರ ಪ್ರಶ್ನೆಯನ್ನು ಎದುರಿಸಹಚ್ಚಬಹುದೆಂದು ಜಾನಕಿ ಒಮ್ಮೆಯೂ ಕೂಡ ನೆನೆದಿರಲಿಲ್ಲ. ನೆರೆಹೊರೆಯ ಹುಡುಗರೊಂದಿಗೆ ಮಗಳನ್ನು ಶಾಲೆಗೆ ಕಳುಹಿಸಿದವಳಲ್ಲವೆ? ಆಗ ಕೂಡ ಜಾನಕಿ, ತನಗೆ ಇಂತಹದೊಂದು ಪ್ರಶ್ನೆಗೆ ಉತ್ತರಿಸಬೇಕಾಗಬಹುದೆಂಬ ವಿಚಾರ ಹೊಳೆದಿರಲಿಲ್ಲ.

ನವಿನಿದ್ದೆಯಲ್ಲಿ ನುಲಿಗಿದ ಮಗಳನ್ನು ಜಾನಕಿಯು ನೋಡಿದಳು. ಹುಡುಗಿ ನೆಮ್ಮದಿದು ಮಲಗಿದ್ದಳು. ಆದರೆ ನಸುಕಿನಲ್ಲಿ ಎದ್ದು ಆಕೆ ಅದೇ ಪ್ರಶ್ನೆಯನ್ನೇ ಕೇಳುವಳಲ್ಲವೆ? ಆಗ ಏನು ಹೇಳಬೇಕು? ಮಲಗುವಾಗ ತಾಯಿಗೆ ಆದರ ನೆನಪನ್ನು ಕೊಟ್ಟೇ ಮಲಗಿದ್ದಳು. ಹಾಗೆಯೆ ಜಾನಕಿಯು ತೊಟ್ಟಿಲಲ್ಲಿ ಮಲಗಿದ ಚಿಕ್ಕ ಮಗುವನ್ನು ನೋಡಿದಳು. ಹುಡುಗಿಯ ಪುಟ್ಟ ತಮ್ಮನವ. ಆತನೂ ದೊಡ್ಡವನಾಗಿ ಪಾಠಶಾಲೆಗೆ ಹೋಗುವವನು; ಅಲ್ಲದೆ ಅವನೂ ಒಂದು ಸಂಜೆ ಹೀಗೆಯೆ ಪಾಠಶಾಲೆಯಿಂದ ಮರಳಿ ಬಂದು, ಎದೆಯನ್ನು ಪರಿಸುವಂತಹ ಇದೇ ಪ್ರಶ್ನೆಯನ್ನೇ ತನ್ನನ್ನು ಕೇಳಬಹುದಲ್ಲವೆ?

ಯಾವುದೋ ಬಾಗಿಲನ್ನು ಬಡಿದ ಸಪ್ಪಳ ಕೇಳಿತು. ಜಾನಕಿಯು ನುಲಿಗಿದಲ್ಲಿ ಮಲಗಿದ್ದಳು; ಅಲುಗಾಟ ಇಲ್ಲ; ಉಲುಕಾಟ ಇಲ್ಲ.

ಸ್ನೇಹಪೂರ್ಣವಾದ ಧ್ವನಿಯಲ್ಲಿ ಹೊರಗಡೆಯಿಂದ ಯಾರೋ ಕೂಗಿದರು:

"ಜಾನಕೀ!"

ಜಾನಕಿಯು ಓ ಕೊಡಲಿಲ್ಲ. ಕಿಟಕಿಯ ಹೊರಗೆ ಯಾವನೋ ಪ್ರತ್ಯಕ್ಷನಾಗಿ ಮೆಲ್ಲಗೆ ಕೂಗಿದ:

"ಜಾನಕೀ!"

ಸಿಟ್ಟಿನಿಂದ ಸಿಡಿಯುತ್ತ ಜಾನಕಿ ಕೇಳಿದಳು:

"ಯಾರದು? ಯಾರು ನೀವು?"

"ನಾನು, ಜಾನಕೀ ನಾನು!"

"ನಾನು-ಾ ನೀನು! ಹೊರಟು ಹೋಗು ಇಲ್ಲಿಂದ!"

"ನಾನು ಇದ್ದೇನೆ; ಜಾನಕೀ! ನಾನೇ, ನಾನೇ!"

"ಹೋಗೋ, ಕೊಲೆಗಾರ! ಹೊರಟು ನಡೆ, ನನ್ನ ಎದುರಿಂದ!"

"ಇದೇನೇ ಇದು!" ಪ್ರಣಯಿಯು ಯಾಚನಾಭಾವದಿಂದ ಬಿನ್ನವಿಸಿದ.

"ಒಂದೂ ಮಾತು ಬೇಕಿಲ್ಲ! ತೊಲಗು ಇಲ್ಲಿಂದ! ನನ್ನ ನೋಟದೆದುರು ನಿಲ್ಲಬೇಡ! ದೂರ ನಡೆ!" ಜಾನಕಿಯ ಸ್ವರದಲ್ಲಿ ಸಿಡಿಲಿನ ಶಕ್ತಿ ಬಂದಿದ್ದಿತು.

"ಉಪಕಾರಗೇಡಿ!" ಹೊರಗಿನ ಗಂಡುಸೂ ಕ್ರೋಧದಿಂದ ನುಡಿದ.

"ಮೊದಲು ಹೊರಡು ಇಲ್ಲಿಂದ!" ಜಾನಕಿ ಗದ್ದರಿಸಿದಳು. ಅಪಮಾನಕ್ಕೆ ಪೆದರುತ್ತಿದ್ದ ಆ ಗೆಣೆಯ ಅಲ್ಲಿಂದ ಕಣ್ಮರೆಯಾಗಿಬಿಟ್ಟ. "ಅಯ್ಯೋ, ಇದೇ ಕೊಲೆಗಾರನ ಸಲುವಾಗಿಯೆ ನಾನು ನನ್ನ ಮಗಳಿದುರು ತಲೆತಗ್ಗಿಸಿ ನಿಲ್ಲಬೇಕಾಗಿದೆಯಲ್ಲವೆ!" ಎಂದು ಅವಳು ನಿಟ್ಟುಸಿರಿಕ್ಕಿ, ಮಗ್ಗಿಲನ್ನು ಬದಲಿಸಿ, ಮಲಗುವುದಕ್ಕೆ ಪ್ರಯತ್ನಿಸತೊಡಗಿದಳು.

"ಹೇಳವೆ ಹೋದರೆ ಮಾಸ್ತರರು ನನ್ನನ್ನು ಹೊಡೆಯುತ್ತಾರೆ ಅಮ್ಮಾ....!" ಹುಡುಗಿ ನಿದ್ದೆಯಲ್ಲಿಯೆ ಕನವರಿಸಿದಳು. ಜಾನಕಿಯು ಒಮ್ಮೆಲೆ ಬೆಚ್ಚಿಬಿದ್ದಳು. ಕರುಳನ್ನು ಜುಟ್ಟಿ ಹೊರಕ್ಕೆ ತೆಗೆದಂತಾಯಿತು. ತಲೆಯನ್ನೆತ್ತಿ ಮಗಳ ಕಡೆಗೆ ನೋಡಿದಳು. ಹುಡುಗಿ ಹಾಗೆಯೆ ಮೈಮರೆದು ನಿದ್ರಿಸುತ್ತಿರುವುದನ್ನು ಕಂಡು ಜಾನಕಿಯ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸಿತು. ಪಾಪ, ಹುಡುಗಿಯನ್ನು ನಿದ್ದೆಯಲ್ಲಿ ಕೂಡ ಅದೇ ಅದೇ ವಿಚಾರವೇ ಪೀಡಿಸುತ್ತಿತ್ತು.

ಹತಭಾಗಿನಿಯಾದ ಆ ತಾಯಿ—ಜಾನಕಿಯ ಮನದೆದುರು ನಿಂತ ಭೂತಕಾಲದ ಘಟನೆಗಳು, ಸ್ಮಶಾನಯಾತ್ರೆಯ ಕಾಲದ ಶಬ್ದಗಳಂತೆ ಭಯಂಕರವಾಗಿ ತೋರತೊಡಗಿದುವು. ಆಗ ಅವಳು ಹಾಸಿಗೆಯಲ್ಲಿ ಬಿದ್ದುಕೊಂಡು, ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದಳು. ಯಾವ ಸಮಾಜ ಅವಳನ್ನು ದೂರಕ್ಕೆ ಬಿಸುಡಿಬಿಟ್ಟಿದ್ದಿತೋ, ಅದೇ ಸಮಾಜವು ಇಂದು ಅವಳನ್ನು ನಿನ್ನ ಉದ್ಯೋಗವೇನೆಂದು ಪ್ರಶ್ನೆ ಕೇಳುತ್ತಲಿದೆ. ಕ್ರೋಧದಿಂದ ಹೆಲ್ಲುಕಡಿಯುತ್ತ ಜಾನಕಿಯು ಏನನ್ನೋ ಬಡಬಡಿಸತೊಡಗಿದಳು. ಕೋಳಿ ಕೂಗಲು ತೊಡಗಿದಾಗಲೂ ಜಾನಕಿ ನಿದ್ದೆಯೆಂಬುದನ್ನು ಕಾಣಲಿಲ್ಲ.

ಹುಡುಗಿ ಬೆಳಗಿನಲ್ಲಿ ಎದ್ದು ಹಲ್ಲುಜ್ಜಿ ಮುಖ ತೊಳೆದುಕೊಂಡಳು. ಬಳಿಕ ಗಂಜಿಯನ್ನು ಕುಡಿದು ಪಾಠಶಾಲೆಗೆ ಹೊರಡುವ ಸಿದ್ಧತೆಮಾಡಿಕೊಂಡಳು. ಪುಸ್ತಕದ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ನಿಂತು ತಾಯನ್ನು ಕೇಳಿದಳು:

"ಅಮ್ಮಾ, ಈಗಲಾದರೂ ಹೇಳು!"

ಜಾನಕಿ ಮೈಮರೆತಿದ್ದಳು. ಮಗಳ ಮಾತನ್ನು ಕೇಳಿ ಹಾರಿಬಿದ್ದವಳಾಗಿ ಪೆಲ್ಲಗೆ ಕೇಳಿದಳು:

"ಏನು? ಹೇಳಲೇಬೇಕೇ ಹಾಗಾದರೆ!"

"ಅಹುದು ಅಮ್ಮಾ, ಮಾಸ್ತರರು ಕೇಳಿಕೊಂಡು ಬರಲಿಕ್ಕೆ ಹೇಳಿದ್ದಾರಲ್ಲವೆ?"

"ಸರಿ! ಹಾಗಾದರೆ ನಿಮ್ಮ ಮಾಸ್ತರರಿಗೆ ಹೀಗೆ ಹೇಳು..."

ತಾಯಿಯ ಮುಖದ ಕಳೆಯನ್ನು ನೋಡಿ ಹುಡುಗಿ ಬೆಚ್ಚಿಬಿದ್ದಳು; ಕರುಣಾಸ್ವರದಲ್ಲಿ ಅವಳು ಕೇಳಿದಳು:

"ಅಮ್ಮಾ, ನೀನು ಹೀಗೆಯೇಕೆ ಮಾಡುತ್ತಿದ್ದೀಯೆ?"

"ಮಗು, ನನ್ನನ್ನು ನೋಡಿ ನೀನಿಂದು ಹೆದರುತ್ತಿದ್ದೀಯೆ; ನಾಳೆಯ ದಿನ ನೀನೆ ನನ್ನನ್ನು ನೋಡಿ ತಿರಸ್ಕಾರ ಮಾಡಬಹುದು!"

"ಇಲ್ಲವಮ್ಮಾ!"....

"ಮಗು, ನಿನಗೆ ತಿಳಿವಳಿಕೆ ಸಾಲದು! ನಿನಗೆ ಎಲ್ಲ ಮಾತು ತಿಳಿಯುವ ಮೊದಲೇ ನಾನು ಸತ್ತು ಹೋಗಬೇಕು!"

"ಬೇಡ, ಅಮ್ಮಾ, ನೀನು ಹೀಗೆಲ್ಲ ಮಾತನಾಡಬೇಡ!" ಹುಡುಗಿ ತಾಯನ್ನು ತಬ್ಬಿ ನಿಂತಳು: "ಅಮ್ಮಾ, ನೀನು ಸತ್ತು ಹೋದರೆ ನಾನು, ನನ್ನ ಪುಟ್ಟ ತಮ್ಮ ಎಲ್ಲಿ ಇರಬೇಕು?" ಎಂದು ನುಡಿದು ಹುಡುಗಿ ಅಳಲು ಕೊಡಗಿದಳು.

ಮಗಳ ತಲೆಯ ಮೇಲೆ ತನ್ನ ಮೆಲುಗೈಗಳನ್ನಾಡಿಸುತ್ತ ತಾಯಿ ಗದ್ಗದ ಕಂಠದಿಂದ ಹೇಳಿದಳು:

"ಇಲ್ಲವಮ್ಮಾ, ಅಳಬೇಡ! ನಿಮ್ಮನ್ನು ಬಿಟ್ಟು ನಿಮ್ಮ ತಾಯಿ ಸಾಯುವುದಿಲ್ಲ!"

ಹುಡುಗಿ ಮತ್ತೆ ಅದೇ ಮಾತನ್ನು ಕೇಳಿದಳು:

"ಹೊತ್ತಾಯಿತಮ್ಮಾ ನನಗೆ! ಬೇಗನೆ ಹೇಳುವುದಿಲ್ಲವೆ?"

"ಇಲ್ಲ ಮಗು, ನೀನು ಹೋಗಿ ಹೇಳು: ನನ್ನ ಅಮ್ಮ ಯಾವ ಉದ್ಯೋಗವನ್ನೂ ಮಾಡುವುದಿಲ್ಲ—ಎಂದು!"

"ಹೀಗೆ ಹೇಳಿದರೆ ಕೆಲಸ ನಡೆವಂತಿಲ್ಲ ಅಮ್ಮಾ! ಅಲ್ಲದೆ ನೀನು ನಾಳೆ ಹೇಳಿಯೆ ಹೇಳುತ್ತೇನೆಂದು, ಆಣೆಯಿಟ್ಟು ಮಾತು ಕೊಟ್ಟಿದ್ದೆಯಲ್ಲ?"

ಈಗಲೂ ಜಾನಕಿ ಬಾಯಿ ಬಿಚ್ಚಲಿಲ್ಲ.

"ಹಾಗಾದರೆ ನಾನು ಪಾಠಶಾಲೆಗೆ ಹೋಗುವುದೇ ಇಲ್ಲ. ಅಲ್ಲದೆ ಏನೂ ತಿನ್ನುವುದಿಲ್ಲ, ಉಣ್ಣುವುದಿಲ್ಲ! ಬಿದ್ದಲ್ಲೆಯೆ ಬಿದ್ದುಕೊಂಡು ಸತ್ತು ಹೋಗುತ್ತೇನೆ!" ಹುಡುಗಿ ಮತ್ತೆ ಅಳಲು ಮೊದಲು ಮಾಡಿದಳು.

ಜಾನಕಿಯ ತಾಳ್ಮೆ ತಪ್ಪಿತು. ತಟ್ಟನೆ ಮೇಲಕ್ಕೆದ್ದು ಮುಖವನ್ನೆತ್ತಿ ನಿಂತಳು. ಹೃದಯವನ್ನು ಸುಟ್ಟುಬಿಡುವಂತಹ ಕಣ್ಣುಗಳಿಂದ ಮಗಳನ್ನು ನಿಟ್ಟಿಸುತ್ತ ಕೂಗಿದಳು:

"ಹೋಗು, ನಿಮ್ಮ ಮಾಸ್ತರರಿಗೆ ಹೇಳು: 'ನಮ್ಮ ಅಮ್ಮ ಸೂಳೆಗಾರಿಕೆ ಮಾಡುತ್ತಾಳೆ'—ಎಂದು! ಹೋಗು, ಹುಂ, ಹೊರಡು!" ಎಂದು ಕೂಗಿಕೊಳ್ಳುತ್ತಲೇ ಜಾನಕಿಯು ಒಳಗೆ ಹೋದಳು. ಹುಡುಗಿ ಇದಾವುದರ ಮರ್ಮವನ್ನೂ ಅರಿಯಳು. ಉತ್ಸಾಹದ ನಡೆಯಲ್ಲಿ ಅವಳು ಪಾಠಶಾಲೆಗೆ ಹೊರಟು ಬಿಟ್ಟಳು.

* * *

ಮಾಸ್ತರರು ತರಗತಿಯಲ್ಲಿ ಕಾಲಿರಿಸಿದೊಡನೆಯೆ ಹುಡುಗಿ ತಟ್ಟನೆ ಎದ್ದುನಿಂತಳು; ಉತ್ಸಾಹದ ಧ್ವನಿಯಲ್ಲಿ ಹೇಳಿದಳು:

"ನಾನು ನಮ್ಮ ತಾಯಿಯನ್ನು ಕೇಳಿಕೊಂಡು ಬಂದಿದ್ದೇನೆ ಮಾಸ್ತರ್!"

"ಅಹುದೇನು? ಚೆನ್ನಾಯಿತು. ಯಾವ ಉದ್ಯೋಗ ಮಾಡುತ್ತೇನೆಂದು ನಿಮ್ಮ ತಾಯಿ ಹೇಳಿದರು?"

ತಿಳಿವಳಿಕೆಯಿಲ್ಲದ ಹುಡುಗಿ ಗಿಳಿಯಂತೆ ತಾಯಿ ಹೇಳಿದ ಮಾತನ್ನು ಒಪ್ಪಿಸಿದಳು:

"ನಮ್ಮ ಅಮ್ಮ ಸೂಳೆಗಾರಿಕೆ ಮಾಡುತ್ತಾಳೆ ಸರ್!"

ಯಾವುದೋ ಹೊಸ ಉದ್ಯಮದ ಹೆಸರನ್ನು ಕೇಳಿದಂತೆ ಎನಿಸಿ ಹುಡುಗರೆಲ್ಲರೂ ಹುಡುಗಿಯ ಕಡೆಗೆ ಸುಮ್ಮಗೆ ನೋಡಲು ತೊಡಗಿದರು. ಅವರು ಇವರ ಅರ್ಥವೊಂದನ್ನೂ ಅರಿಯರು. ಆದರೆ ಏನೆಲ್ಲವನ್ನೂ ತಿಳಿದ ಮಾಸ್ತರರು ತೆಪ್ಪಗೆ ಕುಳಿತುಕೊಂಡರು, ಕರುಳು ಚುಚ್ಚಿದ ನೋವನ್ನು ಅನುಭವಿಸಿದರು.

ಯಾವ ಸಮಾಜವು ಬಹಿರಂಗವಾಗಿ ವೇಶ್ಯಾವೃತ್ತಿಯನ್ನು ಹೀಗಳೆದು ಅಂತರಂಗದಲ್ಲಿ ಅದನ್ನು ಪ್ರೀತಿಯಿಂದ ಪರಿಪೋಷಿಸುವುದೊ, ಅದೇ ಆ ಸಮಾಜದೆದುರು ಇದೊಂದು ಪ್ರತ್ಯಕ್ಷ ಆಹ್ವಾನ! ಆ ತಿಳಿವಳಿಕೆ ಸಾಲದ ಚಿಕ್ಕ ಹುಡುಗಿಯ ಬಾಯಿಂದ ಹೊರಟ ಮಾತುಗಳು ನಾಲ್ಕೂ ಕಡೆಗಳಲ್ಲಿ ಗುಂಯ್‌ಗುಡಲಾರಂಭಿಸಿದುವು:

"ನಮ್ಮ ಅಮ್ಮ! ಸೂಳೆಗಾರಿಕೆ ಮಾಡುತ್ತಾಳೆ ಸರ್!"

ಕನ್ನಡ ವಾಕ್ಚಿತ್ರೋದ್ಯಮದ ಭವಿಷ್ಯ*

ಶ್ರೀ, ಎಂ. ಜಿ. ವಿರೂಪಾಕ್ಷನ್, ಧಾರವಾಡ

★

ಹೊಸ ಜಗತ್ತಿನಲ್ಲಿ ಬದುಕಿ ಬಾಳಬೇಕಾದವರಿಗೆ ಚಲಚ್ಚಿತ್ರದ ನಿರ್ಮಾಣ, ಪ್ರದರ್ಶನ, ಪ್ರೇಕ್ಷಣಗಳು ಬಿಡಲಾರದ ಕರ್ಮಗಳಾಗಿವೆ. ನಮ್ಮ ಸಂರಕ್ಷಣೆಗೂ ಸಂಸ್ಕೃತಿ ಸಂವರ್ಧನೆಗೂ ಚಲಚ್ಚಿತ್ರದ ಉದ್ಯಮ ಪರಿಪೋಷಣೆ ಕೊಡುವಂತಹದಾಗಿದೆ. ಹೀಗಿದ್ದರೂ ಕನ್ನಡಿಗರಾದ ನಾವು ಅದನ್ನು ಎಷ್ಟೊಂದು ಉಪೇಕ್ಷೆಯಿಂದ ನೋಡುತ್ತಿದ್ದೇವಲ್ಲ!

★

ನಾನೊರ್ವ ಭವಿಷ್ಯವಾದಿಯಲ್ಲ ಕನ್ನಡ ನಾಡಿನ ವಾಕ್-ಚಿತ್ರ ಉದ್ಯಮದ ಭಾವೀ ಸಾಧಕ ಬಾಧಕಗಳನ್ನು ಕುರಿತು ವಿವೇಚಿಸುವ ವಿಮರ್ಶಕ ಮಾತ್ರ ವಿಶ್ವದ ಎಲ್ಲೆಡೆಯಲ್ಲಿ ಕಾಲಚಕ್ರಕ್ಕನುಸರಿಸಿ ಹೊಸ ಹೊಸ ವಿಜ್ಞಾನಗಳಿಂದ ಉದ್ಯಮವನ್ನು ಬೆಳೆಯಿಸಬೇಕೆಂಬ ಸೊಲ್ಲು— ಈಗೇಕೆ, ದ್ವಿತೀಯ ಮಹಾಯುದ್ಧವು ಕೊನೆಗೊಳ್ಳುವ ಮೊದಲೇ ಪ್ರತಿಯೊಂದು ಉದ್ಯಮದ ಯುದ್ಧೋತ್ತರ ಯೋಜನೆಗಳನ್ನು ಸಿದ್ಧಪಡಿಸತೊಡಗಿದುದು—ಕೇಳಬರುತ್ತಿತ್ತು. ಭಾರತದಲ್ಲಿ ಎಲ್ಲ ಉದ್ಯಮದ ಯೋಜನೆಗಳಂತೆ ವಾಕ್-ಚಿತ್ರದ ಉದ್ಯಮದ ಭಾವೀ ರೂಪ-ರೇಷೆಗಳೂ ಮೂಡಿಬಂದುವು. ಆದರೆ ಕಾರ್ಯರಂಗಕ್ಕಿಳಿದು ಫಲಕಾರಿಯಾದುದು ಎಷ್ಟು? — ಎಂದು ಪ್ರಶ್ನಿಸಿದಾಗ ಮೌನ ತಾಳಬೇಕಾಗಿದೆ.

ಪ್ರಾರಂಭದಿಂದ ಇಂದಿನ ವರೆಗೆ, ಕನ್ನಡ ದೇಶಕ್ಕೆ ಯಾವ ಯೋಜನೆಯೂ ಇಲ್ಲದೆ ಅಲ್ಲೊಂದು ಇಲ್ಲೊಂದು ಚಿತ್ರಗಳು ನಿರ್ಮಾಣವಾಗಿ ಪ್ರದರ್ಶಿತವಾದುವು. ಈಗಿನ ಕನ್ನಡದ ವಾಕ್-ಚಿತ್ರೋದ್ಯಮದ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ಭಾರತದ ವಾಕ್ಚಿತ್ರದ ಉದ್ಯಮದಲ್ಲಿ ಅದಕ್ಕೊಂದು ಸ್ಥಾನ ಉಂಟೆಂದು ಹೇಳಲು ಕಠಿನವಾಗಬಹುದು. ೧೯೩೭ಕ್ಕೆ ಮೇಲ್ಪಡುವ ಪ್ರದರ್ಶನ ಮಂದಿರಗಳು, ೧೫–೨೦ಕ್ಕೆ ಮೀರಿದ ಚಿತ್ರಗಳು, ಕೆಲವೊಂದು ಚಿತ್ರ ಹೆಂಚುವ ಸಂಸ್ಥೆಗಳು ಮತ್ತು ಇತ್ತೀಚೆಗೆ ಏರ್ಪಾಡಾಗಿರುವ ಒಂದು ಸ್ವತಂತ್ರ ಸ್ಟುಡಿಯೋ— ಈ ಪ್ರಮಾಣಕ್ಕನುಸರಿಸಿ ನಡೆಯುತ್ತಿರುವ ೪–೫ ಪತ್ರಿಕೆಗಳು— ಇಷ್ಟೆ ಕನ್ನಡ ವಾಕ್ಚಿತ್ರದ ಉದ್ಯಮದ ಭಂಡವಲು.

ಈ ಕ್ಷೇತ್ರದಲ್ಲಿ ಸೋದರ ಪ್ರಾಂತಗಳ ಸಾಹಸವೇನೆಂಬುದನ್ನು ನೋಡುವುದು ಅವಶ್ಯವಿದೆ. ಮುಂಬಯಿ ನಗರದ 'ರಣಜಿತ್ ಫಿಲ್ಮ್ ಕಂಪನಿ'ಯವರು ೧೦೦ ಕ್ಕೆ ಮೇಲ್ಪಟ್ಟು, 'ಬೋಂಬೆ ಟಾಕೀಸ್'ನವರು ೩೦ ಕ್ಕೆ ಹೆಚ್ಚಾಗಿ ಚಿತ್ರಗಳನ್ನು ನಿರ್ಮಿಸಿರುವರು. ಈ ಪ್ರಮಾಣಕ್ಕೆ ನಮ್ಮ ನಾಡಿನಲ್ಲಿ ಸಿದ್ಧವಾದ ಚಿತ್ರಗಳ ಒಟ್ಟು ಸಂಖ್ಯೆಯನ್ನು ಹೋಲಿಸಿ ನೋಡಿದರೆ, ಅಲ್ಲಿಯ ಒಂದು ಸ್ಟೂಡಿಯೋ ಮಾಡಿರಷ್ಟು ಕಾರ್ಯವನ್ನೂ ಕರುನಾಡು ಇನ್ನೂ ಸಾಧಿಸಿಲ್ಲವೆಂಬುದು ಕಂಡುಬರುವುದು. ನಿರ್ಮಿತವಾದ ಚಿತ್ರಗಳ ಸಂಖ್ಯೆ ಒಂದೆಡೆ ಇರಲಿ; ಅವುಗಳಲ್ಲಿ ಕಲಾಕೌಶಲ್ಯ, ಉನ್ನತ-ಮಟ್ಟವನ್ನಾದರೂ ಕಾಣುವೆವೆ?—ಎಂದು ಬಯಸಿದರೆ, ಅದೂ ಕೂಡ ದೊರೆಯುವಂತಿಲ್ಲ. ಇಷ್ಟು ಕಾಲದವರೆಗೆ ದೇವ-ಮಾನವರ ನೋಡಿಯಾಟದ ಚಿತ್ರಗಳನ್ನು ತೋರಿ ಆಯಿತು; ಫಲಪ್ರದವಾಗದ ಸಾಮಾಜಿಕ ಚಿತ್ರಗಳನ್ನು ಪ್ರದರ್ಶಿಸಿ ಆಯಿತು;— ಐತಿಹಾಸಿಕವಲ್ಲದ ಒಂದೆರಡು ಐತಿಹಾಸಿಕ ಚಿತ್ರಗಳನ್ನು ನೋಡಿಯೂ ಆಯಿತು;—ಇವರಿಂದ ದೇವನು ಮತ್ತಷ್ಟು ದೂರವಾದನು. ಮಾನವನ ಜೀವನ ಹದಗೊಳಲಿಲ್ಲ; ಹಸನಾಗಲಿಲ್ಲ. ಚಿತ್ರೋದ್ಯಮದ ಉನ್ನತ ಪ್ರಯೋಜನದ ಫಲ ಲವಲೇಶವಾದರೂ ನಮ್ಮಲ್ಲಿ ಕಂಡು ಬರಲಿಲ್ಲ. ಹೀಗಾಗಿ ಮೂಢ ನಂಬಿಗೆಯ ಆಶಿಕ್ಷಿತ ಜನತೆಯನ್ನು ಮುನ್ನಡಿಸುವ ಬದಲು ೧೦೦ ವರ್ಷ ಹಿಂದಕ್ಕೆ ತಳ್ಳಿ ಅವರ ಮೂಢ ಭಾವನೆಗಳ ಮತ್ತಷ್ಟು ಬಲಿಯಲು ಅವಕಾಶ ಮಾಡಿಕೊಟ್ಟಿದಾಯಿತು.

ಇಂತಹ ತೋಚನೀಯಸ್ಥಿತಿಯಲ್ಲಿರುವ ಒಂದು ಉದ್ಯೋಗದ ಭವಿತವ್ಯತೆಯನ್ನು ಎಣಿಸುವುದು ಸ್ವಲ್ಪ ಸಾಹಸದ ಮಾತಾಗಬಹುದು. ಆದರೂ ಭಾರತದಲ್ಲಿ ಈ ಉದ್ಯಮದ ನೆಲೆ-ಕಲೆಗಳೇನು? ಈ ದಿಶೆಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಎತ್ತ ಸಾಗಿವೆ? ಮತ್ತು ಅವರ ಧೋರಣೆ ಏನಿದೆ?— ಎಂಬುದನ್ನು ಅನುಲಕ್ಷಿಸಿ ಕನ್ನಡದ ಚಿತ್ರಗಳ ಪ್ರಗತಿ ಮತ್ತು ಬೆಳೆವಣಿಗೆಯ ಮಾರ್ಗಗಳನ್ನು ಕಂಡುಹಿಡಿಯುವುದು ಉಚಿತವೆನಿಸಬಹುದು.

---

* ಶ್ರೀ. ೧೯೫೦–೫೧ ನೆಯ ದಿನದೈಸೂರು ಆಕಾಶವಾಣಿಯಲ್ಲಿ ಮಾಡಿದ ಭಾಷಣವಿದು. ಆಕಾಶವಾಣಿಯು ಅಧಿಕಾರಿಗಳ ಒಪ್ಪಿಗೆ ಪಡೆದು ಪ್ರಕಟಿಸಲಾಗಿದೆ. —ಲೇ.

ಭಾರತವು ಚಿತ್ರನಿರ್ಮಾಣಸಂಖ್ಯೆಯ ದೃಷ್ಟಿಯಿಂದ, ಜಗತ್ತಿನ ಚಿತ್ರನಿರ್ಮಾಣ ಮಾಡುವ ೩೧ ರಾಷ್ಟ್ರಗಳಲ್ಲಿ ೩ನೆಯದಾಗಿ ಪರಿಗಣಿತವಾಗಿದೆ. ಆದರೆ ಕಲೆಯ ನೈಪುಣ್ಯ, ಕೃತಿಯ ಮಟ್ಟ, ಶಾಸ್ತ್ರೀಯ ಕೌಶಲ್ಯ, ಪ್ರಗತಿಶೀಲ ಕಥಾವಸ್ತು ಇವುಗಳ ಕೊರತೆಯಿಂದಾಗಿ ಪಾಶ್ಚಾತ್ಯ ಚಿತ್ರಗಳ ಮಟ್ಟವನ್ನು ಹೊಂದಲು ಇನ್ನೂ ಕೆಲಕಾಲ ಬೇಕಾಗಿದೆ ಈ ಉದ್ಯಮದಲ್ಲಿ ಭಾರತೀಯರು ಅವರನ್ನು ಸರಿಗಟ್ಟುವ ಕಾಲಾವಧಿಯೊಳಗೆ ಅವರು ವಿವಿಧ ಯೋಜನೆಗಳಿಂದ ನಮಗಿಂತಲೂ ಹತ್ತುವರ್ಷ ಮುಂದುವರಿದು ಮಿಗಿಲಾಗಿ ನಿಲ್ಲುವರು. ಇನ್ನು ಸೋದರನಾಡವರಿಗಿಂತಲೂ ಮುಂದಗತಿಯಿಂದ ಸಾಗಿರುವ ಕನ್ನಡನಾಡು ಅವರನ್ನು ಸಮಗಟ್ಟಲು ಎಷ್ಟುಕಾಲ ಬೇಕೆಂಬುದನ್ನು ಯೋಚಿಸಿರಿ. ಈ ದೃಷ್ಟಿಯಿಂದ ನಮ್ಮ ಮುಂದಿನ ಮಾರ್ಗವನ್ನು ಹುಡುಕಬೇಕಾಗಿದೆ.

ಭಾರತದ ವಿಶಾಲಪ್ರದರ್ಶನಕ್ಷೇತ್ರದ ಅರಿವು ಪಾಶ್ಚಾತ್ಯರಿಗೆ ಸಾಕಷ್ಟು ಇದೆ. ಇದರ ತುಂಬು ಪ್ರಯೋಜನವನ್ನು ಹೊಂದಲು ಅವರು ಬಹುಮುಖವಾಗಿ ಪ್ರಯತ್ನಿಸುತ್ತಲಿರುವರು. ಭಾರತದ ಇತಿಹಾಸ, ಸಾಮಾಜಿಕ ಜೀವನ, ಸಂಸ್ಕೃತಿ, ಕಲೆಯನ್ನು ಪ್ರದರ್ಶಿಸುವ ಉತ್ತಮವಸ್ತುಗಳನ್ನು ಆಯ್ದು ಚಿತ್ರಗಳನ್ನು ನಿರ್ಮಿಸಬೇಕೆಂಬ ಹೆಬ್ಬಯಕೆ ಅವರಲ್ಲಿ ದಿನದಿನಕ್ಕೂ ಬಲಿಯತೊಡಗಿದೆ ಇಂತಹ ನಾಲ್ಕಾರು ಚಿತ್ರಗಳನ್ನು ಅವರು ಈಗಾಗಲೇ ಸಿದ್ಧಪಡಿಸಿ, ಭಾರತೀಯರ ಆತ್ಮಗೌರವಕ್ಕೆ ಕುಂದು ತಂದಿರುವರು. ಇದನ್ನು ಹಾಗೆಯೆ ಸಾಗಗೊಟ್ಟರೆ ನಮ್ಮಲ್ಲಿ ಉಳಿಯಬಹುದಾದ ಧನವನ್ನು ಅವರಿಗೆ ತೆತ್ತು, ಜೊತೆಗೆ ವಿಶ್ವದಲ್ಲಿ ಭಾರತದ ಬಗೆಗೆ ಕೀಳುಕಲ್ಪನೆಗಳನ್ನು ಪ್ರಚಾರಮಾಡಲು ಅನುವುಮಾಡಿಕೊಟ್ಟಂತಾಗುವುದು ಅಲ್ಲದೆ, ಈಗಿನ ೩೫ ಮಿಲಿಮಿಟರಿನ ಬದಲು ೧೬ ಮಿಲಿಮಿಟರಿನ ಚಿತ್ರಗಳನ್ನು ನಿರ್ಮಿಸಿ, ಭಾರತದ ಮೂಲೆಮೂಲೆಯಲ್ಲಿಯೂ ಪ್ರದರ್ಶಿಸಬೇಕೆಂಬ ಆಸುರೀಮಹತ್ವಾಕಾಂಕ್ಷೆಯನ್ನು, ಅಮೆರಿಕಾದ ಎಂ.ಜಿ.ಎಂ., ಆರ್.ಕೆ.ಒ, ರೇಡಿಯೋ ಚಿತ್ರಸಂಸ್ಥೆ ಮೊದಲಾದವರು ತೋರುತ್ತಿರುವರು. ಒಂದು ಎಚ್ಚರವಹಿಸಾತು; ಈ ಕೃತಿಗಳೆಲ್ಲ ಭಾರತೀಯರ ಸಹಕಾರದಿಂದಲೇ ನಡೆಯುತ್ತಿವೆ ಎಂಬುದು ಗಮನಾರ್ಹವಾದುದು. ಈ ಹದಿನಾರು ಮಿಲಿಮಿಟರಿನ ಚಿತ್ರಗಳಿಗಾಗಿಯೆ ಹಲವಾರು ಪ್ರದರ್ಶನಮಂದಿರಗಳನ್ನು ಭಾರತದ ಬೇರೆ ಬೇರೆ ಜಾಗಗಳಲ್ಲಿ ನಿರ್ಮಿಸಲು ಅವರು ಹವಣಿಸುತ್ತಿರುವರು. ಇನ್ನೊಂದು ವಿಷಯ, ಅಮೆರಿಕನ್ನರು ತಾವು ಸಿದ್ಧಪಡಿಸಿದ ಚಿತ್ರಗಳನ್ನು ಭಾರತದ ರಾಷ್ಟ್ರಭಾಷೆ ಮತ್ತು ಪ್ರಾಂತೀಯ ಭಾಷೆಗಳಲ್ಲಿ ಪರಿವರ್ತಿಸಿ ಪ್ರದರ್ಶಿಸಬೇಕೆಂಬ ಪ್ರಯತ್ನಗಳು ಈಗಾಗಲೇ ನಡೆದಿವೆ. ವಾಲ್ಟ್‌ಡಿಸ್ನಿ ನಿರ್ಮಿತ 'ಬಾಂಬಿ' ಚಿತ್ರವನ್ನು ಭಾರತದ ಬೇರೆ ಬೇರೆ ಪ್ರಮುಖ ಭಾಷೆಗಳಲ್ಲಿ ತಯಾರಿಸುವ ಕಾರ್ಯ ಇದೀಗ ಪುಣೆ ಪಟ್ಟಣದ ಪ್ರಭಾತ ಸ್ಟುಡಿಯೋದಲ್ಲಿ ನಡೆದಿದೆ ಎಂಬುದು ತಿಳಿದುಬರುತ್ತದೆ. ರಾಷ್ಟ್ರದ ಸ್ವಾತಂತ್ರ್ಯೋದಯ ಕಾಲದಲ್ಲೂ ಈ ಮನೆಮುರುಕ ಕೃತಿಗಳು ಭಾರತೀಯರ ಸಹಕಾರದಿಂದಲೇ ನಡೆದರೆ, ಈ ಉದ್ಯಮಕ್ಕೆ ಗಂಡಾಂತರ ಕಟ್ಟಿಟ್ಟದ್ದು. ಈ ರೀತಿಯ ಸುಲಿಗೆ ಮುಂದುವರಿದರೆ ನಮ್ಮ ಉದ್ಯಮದ ಗೋರಿ ಕಟ್ಟಿದಂತೆಯೇ ಸರಿ. ಇದನ್ನು ಆದಷ್ಟು ಬೇಗ ತಡೆಯಬೇಕು. ಈ ಎಲ್ಲ ಕುತ್ತಗಳನ್ನು ಮನದಂದು ಕನ್ನಡ ಚಿತ್ರೋದ್ಯಮ ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗಿದೆ.

ಇದುವರೆಗೆ ಬಾಲ್ಯಾವಸ್ಥೆಯನ್ನು ಕೂಡ ದಾಟದ ಕನ್ನಡ ಚಿತ್ರೋದ್ಯಮ ಇಷ್ಟೆಲ್ಲ ಸ್ಪರ್ಧೆಗಳನ್ನು ಎದುರಿಸಲು ನಾನಾಬಗೆಯ ಯೋಜನೆಗಳಿಂದ ಸಾಹಸಮಾಡಬೇಕಾಗಿದೆ. ಪರರಾಷ್ಟ್ರಗಳು ಹವಣಿಸಿರುವಂತೆ, ಸೋದರ ನಾಡವರೂ ನಮ್ಮಲ್ಲಿಯ ನಟ-ನಟಿಯರನ್ನೊಳಗೊಂಡು ಈಗಾಗಲೇ ಕನ್ನಡ ಚಿತ್ರಗಳನ್ನು ನಿರ್ಮಿಸಿ, ನಮ್ಮ ಹಣವನ್ನು ಮೋಜಿದ್ದಾರೆ. ಇಂತು ನಮ್ಮ ಕ್ಷೇತ್ರದಲ್ಲಿ ತಮ್ಮ ಕಾಲು ಜಾಚಿದ್ದಾರೆ. ಕನ್ನಡ ಚಿತ್ರೋದ್ಯಮ ಒಂದು ಸ್ಥಾನಕ್ಕೆ ಬರುವವರೆಗಾದರೂ ಈ ಪ್ರಯತ್ನಗಳನ್ನು ತಡೆಯುವುದು ಅವಶ್ಯವಿದೆ. ಅಂತಹ ಚಿತ್ರಗಳನ್ನು ನಮ್ಮ ನಾಡಿನ ಪ್ರದರ್ಶನ ಮಂದಿರಜೊಡೆಯರು ಪ್ರದರ್ಶಿಸಲು ನಿರಾಕರಿಸಬೇಕು. ಇನ್ನು, ಈ ದಿಶೆಯಲ್ಲಿ ನಮ್ಮ ನಟ-ನಟಿಯರನ್ನು ದೂರಿ ಫಲವಿಲ್ಲ. ತಮ್ಮ ಅಭಿನಯ, ನಾಟ್ಯಕಲೆಗಳಿಗೆ ಕನ್ನಡದಲ್ಲಿ ಅನುವು ದೊರೆಯದಿದ್ದರೆ ಅವರೇನು ಮಾಡಬೇಕು? ಕಾರಣ ನಮ್ಮ ಚಿತ್ರೋದ್ಯಮವನ್ನು ಅವರೆಲ್ಲರಿಗೆ ನೆಲೆಸ ಕೊಡುವಂತೆ ಬೆಳೆಯಿಸಬೇಕು. ನಾಡಿನಲ್ಲಿ ಶೀಘ್ರವೇ ಸ್ಟುಡಿಯೋಗಳನ್ನು ನಿರ್ಮಿಸಿ ಚಿತ್ರನಿರ್ಮಾಣಕ್ಕೆ ಪ್ರಯತ್ನಿಸುವುದು ಮಹತ್ವದ ಮಾತಾಗಿದೆ. ನುರಿತ ನಿರ್ದೇಶಕರು, ಶಾಸ್ತ್ರಜ್ಞರು, ಕಲಾನಿಪುಣರ ಕೊರತೆಯನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನಮಾಡಬೇಕು. ಚಿತ್ರಗಳನ್ನು ಕನ್ನಡ ಭಾಷೆಯಲ್ಲಿ, ಅಲ್ಲದೆ ಅವುಗಳಿಗೆ ವಿಶಾಲ ಪ್ರದರ್ಶನಕ್ಷೇತ್ರವನ್ನು ದೊರಕಿಸಲು ಹಿಂದೀ ಭಾಷೆಯಲ್ಲಿಯೂ ತಯಾರಿಸಬೇಕು. ಕೆಲ ಕಾಲದ ನಂತರ ಇಂಗ್ಲಿಷ್ ಭಾಷೆಗೂ ಪರಿವರ್ತನಗೊಳಿಸುವುದು ಅವಶ್ಯವಿದೆ. ಈಗಾಗಲೆ ಹೊರನಾಡುಗಳಲ್ಲಿ ಈ ಉದ್ಯಮದಲ್ಲಿ ಸೇವೆಡೆಯಾಗಿರುವ ನಮ್ಮ ಕಲಾನಿಪುಣರನ್ನು ಬರಮಾಡಿಕೊಂಡು ಅವರ ಸಹಕಾರದಿಂದ ಕಾರ್ಯಮಾಡಬೇಕು. ಕಲೆಗಾಗಿ ಕಲೆ, ಅಥವಾ ದುಡ್ಡಿಗಾಗಿ ಕಲೆ ಎಂಬ ಯಾವುದೊಂದು ತತ್ವಕ್ಕೆ ಗಟ್ಟಿಯಾಗಿ ಅಂಟಿಕೊಳ್ಳದೆ ನಮ್ಮ ನಾಡಿನ ನಿರ್ಮಾತೃಗಳು ಮಧ್ಯಮ ಮಾರ್ಗವನ್ನು ಹಿಡಿದು ಸಾಗಬೇಕಾಗುವುದು ಎಲ್ಲ ವಿಧದಿಂದಲೂ ಒಳಿತು.

ರಾಷ್ಟ್ರೀಯ ಸರಕಾರ ಉದಯಿಸಿರುವ ಈ ಸಂಧಿಕಾಲದಲ್ಲಿ ಭಾಷಾನ್ವಯ ಪ್ರಾಂತರಚನೆಗೆ ಒಂದು ಮೂರ್ತಸ್ವರೂಪ ಬಂದಿದೆ. ಕಳೆದ ೩ ಶತಮಾನಗಳ ತಪಸ್ಸು ಇಂದುನಾಳೆ ಫಲಕೊಡಲಿದೆ. ಕನ್ನಡವ ಸಂಘರಕ್ಕೆ ಬೆಳೆದು ಒಕ್ಕೂಟವಾಗುವ ಈ ಸಂದರ್ಭವನ್ನು ನಾಡಿನ ಎಲ್ಲಂದವ ಬೆಳವಣಿಗೆಗೆ ಪೂರಕವಾಗುವಂತೆ ಉದ್ಯೋಗ ವ್ಯವಹಾರಗಳ ಕ್ಷೇತ್ರವನ್ನು ಬೆಳೆಯಿಸಿ ಅಭಿವೃದ್ಧಿಮಾರ್ಗಕ್ಕೆ ತರಲು ಉಪಯೋಗಿಸಿಕೊಳ್ಳಬೇಕು. ಚಿತ್ರೋದ್ಯ-

ಮದ ಬೆಳೆವಣಿಗೆಗೆ ಎಂದಿಗಿಂತ ಇಂದು ಸಾಧನ ಸಂಪತ್ತುಗಳು ವಿಶೇಷವಾಗಿವೆ. ಅವುಗಳ ಪ್ರಯೋಜನವನ್ನು ಈಗ ಮಾಡಿಕೊಳ್ಳದಿದ್ದರೆ ಮುಂದೆ ಎಂದಿಗೂ ಆಗಲಿಕ್ಕಿಲ್ಲ.

ಈ ಉದ್ಯಮದ ಬಗೆಗೆ ಪಾಶ್ಚಾತ್ಯರ ಕಿಳನಳಿಕೆ ಅದೆಷ್ಟು ಮುಂದುವರಿದಿದೆ ಎಂಬುದು ಗಮನಾರ್ಹವಾಗಿದೆ. ಹಾರ್ವರ್ಡ್, ಎಲೆ, ಬರ್ಕ್ಲೇ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು ಚಿತ್ರೋದ್ಯಮಕ್ಕೆ ಪ್ರತ್ಯೇಕ ಸ್ಥಾನಕೊಟ್ಟಿವೆ. ಮಾಸ್ಕೋ ನಗರಗಳಲ್ಲಿ ಈ ಉದ್ಯಮಕ್ಕಾಗಿಯೆ ಒಂದು ವಿಶ್ವವಿದ್ಯಾನಿಲಯ ಏರ್ಪಟ್ಟಿದೆ. ಮೈಸೂರು ವಿಶ್ವವಿದ್ಯಾಲಯ ಹಾಗು ಶೀಘ್ರದಲ್ಲಿಯೇ ಅಸ್ತಿತ್ವದಲ್ಲಿ ಬರಲಿರುವ ಕರ್ನಾಟಕ ವಿಶ್ವವಿದ್ಯಾಲಯಗಳೇಕೆ ಈ ಮಾರ್ಗ ಅನುಸರಿಸಬಾರದು? ಕಳೆದ ಮಹಾಯುದ್ಧದ ಕಾಲಾವಧಿಯಲ್ಲಿ, ಪ್ರಚಾರ ಕಾರ್ಯಕ್ಕೆ ಚಿತ್ರವು ಎಂತಹ ಉಪ್ಪುತ ಸಾಧನವೆಂಬುದನ್ನು ಸರಕಾರವು ಮನಗಂಡಿದೆ. ನಾಡಿನ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಬೆಳೆವಣಿಗೆ ಮತ್ತು ರಕ್ಷಣೆಯ ಹೊಣೆಯನ್ನು ಹೊತ್ತ ಸರಕಾರವು, ಚಿತ್ರೋದ್ಯಮದ ಪೃದ್ಧಿ ಹಾಗು ರಕ್ಷಣೆಯ ಭಾರವನ್ನು ತೆಗೆದುಕೊಂಡು ಆಶ್ರಯನೀಡಬೇಕು. ಚಿತ್ರವು ಕೇವಲ ಮನೋರಂಜನೆಗಾಗಿ ಎಂಬ ಮಾತು ಹಿಂದಾಯಿತು. ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡುವಲ್ಲಿ, ಜನಜೀವನದ ಸಮಸ್ಯೆಗಳನ್ನು ಎದುರಿಸುವಲ್ಲಿ, ರಾಷ್ಟ್ರನಿರ್ಮಾಣ ಕಾರ್ಯದಲ್ಲಿ, ನಮ್ಮ ಸಂಸ್ಕೃತಿ, ಇತಿಹಾಸ-ಕಲೆಗಳನ್ನು ಹೊರನಾಡವರು ತಿಳಿಯುವಂತೆ ಪ್ರಚಾರ ಮಾಡುವಲ್ಲಿ ಚಿತ್ರೋದ್ಯಮಕ್ಕೆ ಒಂದು ಭವ್ಯವಾದ ಮುನ್ನೆಲೆಯಿದೆ. ಈ ಧ್ಯೇಯಗಳ ಸಾಧನೆಗಾಗಿ ಕನ್ನಡದ ಚಿತ್ರೋದ್ಯೋಗಿಗಳು ಹೆಣಗಬೇಕಾಗಿದೆ; ತನ್ಮೂಲಕ ತನಗೊಂದು ಯೋಗ್ಯಸ್ಥಾನವನ್ನು ಉಂಟುಮಾಡಿಕೊಳ್ಳಬೇಕಾಗಿದೆ.

ಇನ್ನು ಮುಂದೆ, ಈ ಕಾರ್ಯಗಳಿಗಾಗಿ ವಿವಿಧ ಯೋಜನೆಗಳನ್ನು ನೇರ್ಪಡಿಸಿಕೊಂಡು ಸಾಗುವುದು ವಿಹಿತವಾಗಿದೆ. ಕನ್ನಾಡಿನಲ್ಲಿ ಈಗಿರುವ ಪ್ರದರ್ಶನ ಮಂದಿರಗಳ ಸಂಖ್ಯೆ ಹಾಗು ಚಿತ್ರಗಳ ನಿರ್ಮಾಣ ಶಕ್ತಿಯನ್ನು ಬೆಳೆಯಿಸುವುದೇ ನಮ್ಮ ಗುರಿಯಾಗಬೇಕು. ಭಾರತದ ೪ ಜನಸಂಖ್ಯೆಯುಳ್ಳ ಅಮೆರಿಕಾದಲ್ಲಿ ೧೬,೦೦೦ ಚಿತ್ರಮಂದಿರಗಳಿವೆ. ೪೦ ಕೋಟಿ ಜನವಸತಿಯುಳ್ಳ ಭಾರತಕ್ಕೆ ೧೫೦೦; ೨ ಕೋಟಿ ಕನ್ನಡಿಗರಿಗೆ ೧೫೦ ಕ್ಕಿಂತ ಕಡಿಮೆ ಚಿತ್ರಮಂದಿರಗಳೆಂದರೆ— ಈ ಉದ್ಯಮದ ಅಭಿವೃದ್ಧಿಗೆ ಅದೆಷ್ಟು ವಿಶಾಲ— ಕ್ಷೇತ್ರವಿದೆ ಎಂಬುದು ತಿಳಿದು ಬರುವುದು.

ಈ ದೃಷ್ಟಿಯಿಂದ ಕನ್ನಡನಾಡಿನಲ್ಲಿ:—

೧. ಶೀಘ್ರದಲ್ಲಿಯೆ ೫-೬ ಚಿತ್ರನಿರ್ಮಾಣ ಸಂಸ್ಥೆಗಳು (Studios) ನಿರ್ಮಾಣದ ಎಲ್ಲ ಸಲಕರಣೆಗಳನ್ನೊಳಗೊಂಡು ಅಸ್ತಿತ್ವದಲ್ಲಿ ಬರಬೇಕು.

೨. ಕನಿಷ್ಟಪಕ್ಷ ೨೫೦ ರಿಂದ ೩೦೦ ಚಿತ್ರಪ್ರದರ್ಶನ ಮಂದಿರಗಳು ಒಟ್ಟೆಡೆಯಲ್ಲಿ ಏರ್ಪಡಬೇಕು.

೩. ಚಿತ್ರನಿರ್ಮಾತೃಗಳು ವರ್ಷಕ್ಕೆ ೨೫-೩೦ ಚಿತ್ರಗಳನ್ನಾದರೂ ನಿರ್ಮಿಸುವ ಹೊಣೆ ಹೊರಬೇಕು.

೪. ಕೇವಲ ಕನ್ನಡದಲ್ಲಿ ಅಲ್ಲದೆ ಹಿಂದೀ ಭಾಷೆಯಲ್ಲಿಯೂ ಚಿತ್ರನಿರ್ಮಿಸುವುದು ಅವಶ್ಯವಿದೆ.

೫. ಸುಮಾರು ೨೫೦ ಟೂರಿಂಗ್ ಟಾಕೀಸ್‌ಗಳಾದರೂ ಅಸ್ತಿತ್ವದಲ್ಲಿ ಬರಬೇಕು ಈ ಕಾರ್ಯ ವಿಶೇಷ ಲಾಭದಾಯಕವಿದೆ; ಇದಕ್ಕಾಗಿ ವಿಶಾಲ ಕಾರ್ಯಕ್ಷೇತ್ರವಿದೆ.

೬. ಉದ್ಯಮಕ್ಕೆ ಸರಕಾರದ ರಕ್ಷಣೆ ಮತ್ತು ಆಶ್ರಯ ದೊರೆಯುವಂತೆ ಪ್ರಯತ್ನ ವೆಸಗಬೇಕು.

೭. ಹಳ್ಳಿಗಳ ಪುನರ್‌ನಿರ್ಮಾಣ ಹಾಗು ಸಾಕ್ಷರತಾಪ್ರಸಾರಕ್ಕಾಗಿ ೧೬ ಮಿಲಿಮಿಟರಿನ ಸಣ್ಣ ಸಣ್ಣ ಚಿತ್ರಗಳ ನಿರ್ಮಾಣ ಭರದಿಂದ ಸಾಗಬೇಕು.

೮. ಉದ್ಯಮದ ವಿವಿಧಶಾಖೆಗಳಲ್ಲಿ ತಜ್ಞತೆಹೊಂದಲು ಉತ್ಸಾಹಿ ಸಾಹಸಿಗ ತರುಣರನ್ನು ಅಮೆರಿಕಾ, ರಷ್ಯಾ, ಜರ್ಮನಿ ಬ್ರಿಟನ್ ದೇಶಗಳಿಗೆ ಕಳಿಸಿಕೊಡಬೇಕು. ಇದಕ್ಕಾಗಿ ಸರಕಾರದ ಶಿಷ್ಯವೃತ್ತಿ ದೊರೆಯುವಂತೆ ಏರ್ಪಡಬೇಕು.

೯. ಚಿತ್ರನಿರ್ಮಾಣ ಸಂಸ್ಥೆಗಳಿಗೆ ಸಾಕಷ್ಟು ಭಂಡವಲ ಹೊರಕಿಸಲು ಕೇವಲ ಆಪುಗಳ ಸಲುವಾಗಿಯೇ ಬ್ಯಾಂಕುಗಳನ್ನು ಸ್ಥಾಪಿಸುವುದು.

೧೦. ಕಾಲಾನುಕ್ರಮದಲ್ಲಿ ಕಚ್ಚಾಫಿಲ್ಮ್ ತಯಾರಿಕೆ, ಯಂತ್ರ ಮತ್ತು ಇತರ ಸಣ್ಣ ಪುಟ್ಟ ಸಲಕರಣೆಗಳನ್ನು ನಮ್ಮ ನಾಡಿನಲ್ಲಿಯೇ ಸಿದ್ಧಪಡಿಸುವ ಯೋಜನೆಗಳನ್ನಿಟ್ಟುಕೊಂಡು ಮುಂದೆ ಸಾಗಬೇಕು.

ಇವಿಷ್ಟು, ಉದ್ಯಮದ ಬೆಳೆವಣಿಗೆಯ ಗುರಿಯನ್ನಿಟ್ಟುಕೊಂಡು ಮಾಡಬೇಕಾದ ಕೆಲಸವಾಯಿತು. ಇದರೊಡನೆ ಚಿತ್ರಗಳ ತರಗತಿ, ಯೋಗ್ಯತೆ ಮತ್ತು ಕಲಾಕುಶಲತೆಯ ಪುಟ್ಟ ಸುಧಾರಿಸದಿದ್ದರೆ, ಸೋದರನಾಡವರ, ಪಾಶ್ಚಾತ್ಯರ ವಿರಾಟಗಳಲ್ಲಿ ನಮ್ಮ ಉದ್ಯಮ ಹೇಳಹೆಸರಿಲ್ಲದಾಗಬಹುದು. ಇದನ್ನು ಮನದಂದು ನಮ್ಮ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ.

ಒಂದು ಚಿತ್ರದ ಸೋಲು ಅಥವಾ ಗೆಲವಿಗೆ ಸಾಮಾನ್ಯವಾಗಿ ನಿರ್ದೇಶಕನೊಬ್ಬನ ಹೆಸರು ಮುಂದಿಟ್ಟಿರುವುದಾದರೂ ವಸ್ತುಸ್ಥಿತಿಯಲ್ಲಿ ಹಲವಾರು ಕಲಾವಿದರ ಕೈವಾಡ ಅದರಲ್ಲಿ ಕೂಡಿರುತ್ತದೆ. ನಿರ್ದೇಶಕ, ಸೆಟ್-ನಟಿಯರು, ಛಾಯಾಗ್ರಾಹಕ, ಸಂಯೋಜಕ, ಗೀತನಿಯೋಜಕ, ಸಂಗೀತನಿರ್ದೇಶಕ, ಸನ್ನಿವೇಶಕ್ಕೆ ಸೊಗಸುವಂತಹ ದೃಶ್ಯಗಳನ್ನು ನಿರ್ಮಿಸುವ ಕಲಾನಿಪ— ಇವರೆಲ್ಲರೂ ತಂತಮ್ಮ ಕಾರ್ಯದಲ್ಲಿ ನಿಪುಣರಿದ್ದು ಕೆಲಸವನ್ನು ತೃಪ್ತಿಕರವಾಗಿ ಎಸಗಿದಾಗಲೇ ಚಿತ್ರದ ಶ್ರೇಯಸ್ಸು, ಸಾರ್ಥಕತೆ. ಇದಕ್ಕೂ ಮಿಗಿಲಾಗಿ ಕಥಾವಸ್ತು ಹೆಚ್ಚು ಮಹತ್ವವಿದ್ದಾಗಿದೆ. ಪ್ರತಿಯೊಂದು

(೨೦೭ನೆಯ ಪುಟಕ್ಕೆ ಮುಂದುವರಿದಿದೆ)

ಬಾಳಹಕ್ಕಿ

ಶೀ. ಸಿ. ಕೆ. ದಿಕ್ಷಿತ, ಧಾರವಾಡ

★

ಯುಗದ ಹೊಂಚಿನಲಿ ಹಂತ ಕಟ್ಟಿತೋ ನಮ್ಮ ಬಾಳ ಹಕ್ಕಿ
ಮುಗಿಲನಂತದಲಿ ಗುರಿಯ ಹವಣಿಸಿತು, ಬಿಳಿಯ ಬೆಳ್ಳಿ ಚುಕ್ಕಿ! ೧

ಭೂಮಿ-ವ್ಯೋಮಕೆ—ತೇಲುಸೇತುವೆಯ
ಹೆಣೆಯಲೆಂದು ಬಗೆದು,
ಇಂದ್ರಧನುವನೇ ನಡುವೆ ನಿರ್ಮಿಸಿತು
ಹವೆಯ ಹೊಳೆಯಲಿಳಿದು. ೨

ಯಾತ್ರಿ-ದಿಬ್ಬಣದ ವಾದ್ಯ ಸೊಳಗಿತೋ
ಹವಿನ್ಮಂಡಲಕ್ಕೆ;
ವೇದ ಋಕ್-ಯಜುಸ್ಸಾಮ ಹಾಡಿದುವೊ
ತಿರೆಯ ಮಂಗಲಕ್ಕೆ. ೩

ಋಷಿಯ ಮಂಡಲಕೆ ಹಕ್ಕಿ ತಂಗಿತೋ
ಹರಕೆಗೆಂದು ಬಂದು;
ಉಪನಿಷತ್ತುಗಳು ಗೆಲುವ ತೋರಿದುವು
ವಿಶ್ವದಂಚೆ ತಂದು. ೪

ಬೃಹತ್-ಕಂಠದಲಿ ಒಸಗೆ ಒಕ್ಕಿದುವೊ :
" ಕರ್ಮಯೋಗ ನಿತ್ಯ "
ಹಿರಿ ಪುರಾಣಗಳು ದನಿಯ ಕೊಟ್ಟುವೋ :
" ಬಾಳೆ ಬದುಕು ಸತ್ಯ! " ೫

ಶುಭದ ಹಕ್ಕಿ ಮನದಣಿಯೆ ಕುಣಿದಿತೋ
ಸುರರ ಲೋಕದೊಳಗು;
ನನ್ನಿವಳ್ಳಿ ಕುಡಿಯೊಡೆದು ಹೂತಿತೋ
ಇರುಳೆ ಆಗ ಬೆಳಗು! ೬

ಬಾನ ಚುಕ್ಕಿಗಳು ಜೊನ್ನ ಸುರಿದುವೋ
ಸಗ್ಗದಾರಿಯಲ್ಲಿ,
ನೇಸರಾಡಲದು ಕಳ್ತಲೋಡಿದುದೊ
ರಾತ್ರಿ ಹಿಂಗಿತಲ್ಲಿ. ೭

ಹಗಲು ಉರುಳಿದುವು; ದಿನವು ತೆರಳಿದುವು;
ತಿಂಗಳೊಂದು ಮಾಡೆ—
ಮಾಸ ಮರಳಿತೋ; ವರುಷ ಹೊರಳಿತೋ;
ಯುಗದ ಎಣಿಕೆಗೂಡೆ ೮

ಋತುಗಳೋಟದಲಿ ಪ್ರಕೃತಿ ನಡುಗಿತೋ
ಪಯಣ ತಪ್ಪಲಿಲ್ಲ;
ಒಡಲ ಹಿಂಗಿಸಲು ನಂಜ ಕುಡಿದರೂ,
ಹವಣಿ ಮಿಕ್ಕಲಿಲ್ಲ. ೯

ನೋಡ ಕಡೆಯೆ ನೀರ್ಗೋಡಿವರೆದುವೋ
ಕಡಲು ಬಾನು ಬಯಲು;
ಮಿಂಚುಹಳ್ಳದಲಿ ಹಕ್ಕಿ ಈಜಿತೋ
ಪ್ರಗತಿಯರಸುತಿರಲು. ೧೦

ನಾಡು ನರಳಿದುವೊ; ಕಾಡು ಕೆರಳಿದುವೊ;
ಭವ್ಯಯಾನ ಕಂಡು.
ಜಗದ ಸಿಂಡಗಳು ಬಾಯ ಬಿಟ್ಟುವೋ
ಬರಿಯೆ ನೋಹಗೊಂಡು. ೧೧

ರಾಜದಂಡಗಳ ಸೊಕ್ಕ—ಖಂಡಗಳ
ಮತ್ತ ಸತ್ತೆ ತೊಡೆದು,
ಬಂಜೆ ನಾಡಿಗರ ನೆತ್ತರೀಂಟಲದು,
ತೇಗು ಬಂತು ಜಡಿದು. ೧೨

ಕೊನೆಯ ಮುಟ್ಟಿದೀ ಚಲನ ಸೃಷ್ಟಿಯಲಿ
ಹರಹೆ ತನ್ನ ಪಕ್ಕ—
ಬೆಳಿಯ ಬಂದುದೋ ಬರಿಯ ಬಾಲ, ಹೋ!
ಧೂಮಕೇತು ಲೆಕ್ಕ! ೧೩

ಯಂತ್ರ-ಮಂತ್ರಗಳ ಬುದ್ಧಿ ತಂತ್ರಗಳ
ಗಂಡುಬಂಡಿಯೇರಿ,
ಗಾಳಿ ಜಕ್ರದಲಿ ದಾಳಿ ನಡೆಸಿತೋ
ವಕ್ರವಾಗಿ ಹಾರಿ. ೧೪

ಆದೊ!—ನೋಡು ಬೀಡುಗಳ ಯುದ್ಧ ಕಾಡುಗಳ,
ಬೆಂಕಿ, ಮಂಜ ಸೂದು!
ಬದುಕಿನಾಲಯಕೆ ಹೋಳಿ ಹೊಕ್ಕಿತೋ.
ಎಂಥ ಬಲವ ಜೋಡು? ೧೫

ಓ! ಮುಗಿಲ ಗಂಗೆಯಲಿ ದೋಣಿ ಅಡಿದುವೊ!
ಹಕ್ಕಿ ಸಮರ ಕಟ್ಟಿ,
ಸತ್ಯ-ಶಾಂತಿಗಳ ನೊಟ್ಟೆಯೊಡೆದಿತೋ
ಉಳಿಯಲಿಲ್ಲೂ ಹುಟ್ಟು! ೧೬

ಯುಗದ ಹೊಂಚಿನಲಿ ಹಂತ ಕಟ್ಟಿತೋ
ನಮ್ಮ ಬಾಳ ಹಕ್ಕಿ;
ಮ[illegible]ಂತದಲಿ ಗುರಿಯ ಹವ[illegible]
ಬಿಳಿಯ ಬೆಳ್ಳಿ ಚುಕ್ಕಿ. ೧೭

"ವಿಲಕ್ಷಣ ಸುಖ!"

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

★

ಲಾಭಬಡಕತನ, ಲಂಚಗುಳಿತನಗಳನ್ನು ಕುರಿತು ಸರಕಾರ ನಡೆಯಿಸುವ ನ್ಯಾಯನಿರಾಕರಣೆಯೆಂತಹುದು? ಲಕ್ಷಾವಧಿ ರೂಪಾಯಿ ಲಾಭಸಂಪಾದಿಸಿದ ಸೆಟ್ಟಿ ತನ್ನ ಸಿರಿಮನೆಯಲ್ಲಿ ಉಳಿದ; ಒಪ್ಪೊತ್ತಿನ ಊಟಕ್ಕಾಗಿ ಅವನಲ್ಲಿ ದುಡಿಯುತ್ತಿದ್ದ ಕೂಲಿಯಾಳು ಕನಕಣ್ಣ ಸೆರೆಮನೆ ಸೇರಿದ!

★

ರಾಲದು, ನಾನು ತಪ್ಪುಗಾರ....ಅಪರಾಧಿ! ನನ್ಮೂಲಕ ಕೊಣ್ಣೂರಿಗೆ, ಕಾನೂನನ್ನು ವಿಾರಿ ಕಾಳುಸಾಗಿಸಿದೆ; ಸಾಗಿಸುತ್ತಿದ್ದೆ! ಅದಕ್ಕಾಗಿಯೆ ನನ್ನನ್ನೀಗ ಈ ಜೈಲುಖಾನೆಯಲ್ಲಿ ಹಾಕಿದ್ದಾರೆ; ಮೂರು ವರ್ಷದ ಕಠಿನ ಶಿಕ್ಷೆಯನ್ನು ವಿಧಿಸಿವ್ದಾರೆ!.... ಆದರೆ ನನ್ನ ತಪ್ಪಿನ ಕಾರಣವನ್ನು ಸರಕಾರವು ನ್ಯಾಯವಾದ, ಸರಿಯಾದ ರೀತಿಯಲ್ಲಿ ವಿಚಾರಿಸಿತೇನು? ಪಾಪ! ಅದಕ್ಕೇಕೆ ಬೇಕು ಆ ವಿಚಾರ! ಇಂತಹ ಕೇಸುಗಳು' ಗಡಿಕಾಯುವ ಅಧಿಕಾರಿಗಳಿಗೆ ಸಿಕ್ಕರಂತೂ ತುಪ್ಪದ ಕೊಡ ಸಿಕ್ಕಂತೆ! ಹಸಿದ ಹೆಬ್ಬಲಿಗೆ ಒಳ್ಳೆಯ ಪುಷ್ಟವಾದ ಬೇಟೆ ಸಿಕ್ಕಂತೆ!! ಅವನಿಗೆ ಉನ್ನತಪದವಿ ದೊರೆಯುವುದಲ್ಲವೆ?

ಹೌದು; ಅಂದು ಕಾಳಿಗಾಗಿ ಇಡಿ ಊರನ್ನೆಲ್ಲಾ ಅಲೆದೆ ನಾನು! ಆದರೆ ದೊರತುವೇನು? ನನ್ನಂತಹ ಬಡವನಿಗೆ— ಭಿಕಾರಿಗೆ— ಸಿಗಲಿಕ್ಕೆ ಸಾಧ್ಯವೇ? ಸಿಕ್ಕರೂ ರೂಪಾಯಿಗೆ ಎರಡುವರೆ ಸೇರಿನಂತೆ— ಹುಳಿತ, ಮುಗ್ಗು ನಾರುವ— ಜೋಳವನ್ನು ಕೊಂಡು, ನನ್ನಂತಹ ಬಡವರು.... ಜೀವಿಸಲು ಸಾಧ್ಯವೇ? ಹಗಲೆಲ್ಲಾ ನಾನು, ನನ್ನ ಹೆಂಡತಿ, ನನ್ನ ಹಿರಿಯ ಮಕ್ಕಳಿಬ್ಬರು ದುಡಿವ. ತಂದ ಒಂದೂವರೆ ರೂಪಾಯಿಗೆ ಜೋಳ ತಂದರೆ— ನನಗೂ ನನ್ನ ಹೆಂಡತಿಗೂ ಬೇಡ— ಕೊನೆಗೆ ಮಕ್ಕಳಿಗಾದರೂ ಹೊಟ್ಟೆತುಂಬ ಉಣ್ಣಲಿಕ್ಕಾಗುತ್ತದೆಯೆ? ಪ್ರತಿದಿನವೂ ತಪ್ಪದೆ ನಾಲ್ಕೈದು ಸಲ ಹೋಳಿಗೆ, ಪಾಯಸ, ಒಡೆ ಮುಂತಾದ ಮೃಷ್ಟಾನ್ನಭೋಜನಗಳನ್ನು ಹೊಟ್ಟೆಬಿರಿಯುವಂತೆ ಕುತ್ತಿಗೆಯವರೆಗೆ ತಿಂದು, ಸುಖದ ಮೇಜವಾನಿ ನಡೆಯಿಸುವುದು ಕೇವಲ ದುಡ್ಡಿದ್ದವರ- ಧನಿಕರ- ಪಾಲಿನ ಸೊತ್ತಲ್ಲವೆ? ನಮ್ಮದೆಲ್ಲಿದೆ ಆ ಸುಖ!....

ನನಗೂ ನನ್ನ ಹೆಂಡತಿಗೂ, ನಮ್ಮ ಆರು ಜನ ಮಕ್ಕಳಿಗೂ ದಿನಕ್ಕೆ ಎರಡು—ಬೇಡ, ಹೋಗಲಿ—ಒಪ್ಪತ್ತಾದರೂ, ಕೊನೆಗೆ ಅರೆಹೊಟ್ಟೆಗಾದರೂ ಬೇಡವೆ? ಇದ್ದವರಂತೆ ತಿನ್ನುವುದಕ್ಕಾಗಿ ಬದುಕುವುದು ಬೇಡ; ಬದುಕುವುದಕ್ಕಾದರೂ ತಿನ್ನಲಿಕ್ಕೆ ಬೇಡವೆ?....

"ಬೇಕು... ನಿಜ! ಆದರೆ ದೇವರು—ಅನ್ನದಾತ, ದೀನಪಾಲ, ಬಡವರ ಬಂಧು— ನಮಗೆ ಇಷ್ಟನ್ನಾದರೂ ಕರುಣಿಸಿರುವನೇನು? ಇಲ್ಲ! ಸುಖದ. ಬಾಗಿಲನ್ನು ಕೇವಲ ದುಡ್ಡಿದ್ದವರಿಗಾಗಿ,— ಧನಕರಿಗಾಗಿ— ತೆರೆದಿದ್ದಾನಲ್ಲವೆ?.....

ನಮಗೂ ತೆರೆದಿದ್ದಾನಲ್ಲ: ಹಸಿವೆಯು ಗೋಳಿನ ದುಃಖದ ಹೆಬ್ಬಾಗಿಲನ್ನು!...

ಈ ರೀತಿಯ ಅವನ ಪಕ್ಷಪಾತಕ್ಕೇ ಕಾರಣವೇನಿರಬಹುದು? ತಿಳಿದವರು (!) ಹೇಳುವಂತೆ ನಾವು ಹಿಂದಿನ ಜನ್ಮದಲ್ಲಿ ಮಾಡಿರುವ ಪಾಪದ ಫಲವಿರಬಹುದೇನು?

* * *

ಅಂದು ಆ ನಡುರಾತ್ರಿಯಲ್ಲಿ ಊರ ಧನಿಕ ಧರ್ಮಶೆಟ್ಟಿ, ನನ್ನನ್ನು ಅಸಕ್ತಿಯಿಂದ ತನ್ನ ಮನೆಗೆ ಕರೆಯಿಸಿಕೊಂಡ; ಅತ್ಯಂತ ಆದರದಿಂದ ನನ್ನ ಯೋಗಕ್ಷೇಮವನ್ನು ಕೇಳಿದ. ಅವನ ಸಹಾನುಭೂತಿಪರ ಕುಶಲಪ್ರಶ್ನೆಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು; ಆನಂದವೂ ಆಯಿತು. ನನ್ನ ಸಂಸಾರದುಃಖವನ್ನೆಲ್ಲಾ ಶೆಟ್ಟಿಯ ಮುಂದೆ ತೋಡಿಕೊಂಡೆ.

ಶೆಟ್ಟಿ ಕನಿಕರದ ವನಿಯಲ್ಲಿ "ಕನಕಣ್ಣಾ, ನಿನ್ನ ಕಷ್ಟದ ಕರುಣೆಯ ಕತೆಯನ್ನು ಕೇಳಿ ನನಗೆ ಅತೀವ ದುಃಖವಾಗುತ್ತಿದೆ. ನಿನ್ನ ಬಡತನವನ್ನು ನೀಗಿಸಲು ನಾನು ನನ್ನ ಕೈಯಲ್ಲಾದ ಸಹಾಯಮಾಡಬೇಕೆಂದಿದ್ದೇನೆ— ನೀನಾಗಿ ಒಪ್ಪಿದರೆ!" ಎಂದ. ನನ್ನ ಮುಖ ಹೂವಿನಂತರಳಿತು! ಕಣ್ಣುಗಳಲ್ಲಿ ಸಂತೋಷದ, ಕೃತಜ್ಞತೆಯ ಹೊನಲು ಉಕ್ಕಿತು!

"ಆಗಲಿ ತಂದೆ, ನಿಮ್ಮ ದಯೆ!" ಎಂದೆ.

"ಹಾಗಾದರೆ, ಇಲ್ಲಿಂದ ಕೊಣ್ಣೂರಿಗೆ— ಗುಪ್ತವಾಗಿ—ಕಾಳು ಸಾಗಿಸುವುದರಲ್ಲಿ ನಷ್ಟವಿಲ್ಲದೆ ನೆರವಾಗುತ್ತೀಯಾ? ತಿಂಗಳಿಗೊಂದು ಚೀಲ ಜೋಳ ಕೊಡುತ್ತೇನೆ" ಎಂದ ಶೆಟ್ಟಿ ಉತ್ಸಾಹದಿಂದ.

ನಾನು ಬೆಚ್ಚಿಬಿದ್ದೆ. ಕೇಳಿದೊಡನೆಯೆ ನನ್ನ ಸಂತೋಷ ಮಾಯವಾಯಿತು. ಮನಸ್ಸು ಕಳವಳಕ್ಕೀಡಾಯಿತು! ಬಾಯಿಂದ ಮಾರುತ್ತರವೇ ಹೊರಡಲಿಲ್ಲ!

ಶೆಟ್ಟಿ ನನ್ನ ಹೆದರಿಕೆಯ ಇಂಗಿತವನ್ನರಿತುಕೊಂಡಿರಬೇಕು! ಅದಕ್ಕಾಗಿಯೇ ಮತ್ತೆ ಇಂತು ನುಡಿದ: "ನೀನೇನೂ ಹೆದರಬೇಕಾವ ಕಾರಣವಿಲ್ಲ. ನಿನ್ನ ಮೇಲೆ ಏನೂ ಬಾರದಂತೆ ನೋಡಿಕೊಳ್ಳುತ್ತೇನೆ!"

ನಾನು ಸುಮ್ಮನಿದ್ದೆ... ಆಲೋಚಿಸುತ್ತಾ.

ಶೆಟ್ಟಿ ಮುಂದುವರಿಸಿದ: "ನೋಡು, ತಿಂಗಳಿಗೆ ಒಂದು ಚೀಲ ಜೋಳವೆಂದರೆ ಕಡಿಮೆಯಾಗಲಿಲ್ಲ! ಐವತ್ತು ರೂಪಾಯಿಯಾಯಿತು! ಬಿ.ಎ. ಓದಿದವನಿಗಿಲ್ಲ ಇಷ್ಟು ಸಂಬಳ! ನೋಡು... ಇದರಲ್ಲಿ ಆಲೋಚಿಸುವಂಥ ವಿಷಯವೇನಿದೆ? ನಿನ್ನ ಬಡತನವೆಲ್ಲಾ ಮಾಯವಾಗುವುದರಲ್ಲಿ ಸಂಶಯವಿಲ್ಲ!"

ಜಯು

ನನಗೆ ಯೋಚನೆಗಿಟ್ಟುಕೊಂಡಿತು. ಕೊನೆಗೆ "ಮನೆಯಲ್ಲಿ ಎಂಟುಜನ ಉಪವಾಸ ಸಾಯುತ್ತಿದ್ದೇವೆ; ಶೆಟ್ಟಿ ಹೇಳಿದಂತೆ ಕಾಳುಸಾಗಿಸುವುದರಲ್ಲಿ ನೆರವಾದರೆ, ನಮ್ಮೆಲ್ಲರಿಗೂ—ಕೊನೆಗೆ ಮಕ್ಕಳಿಗಾದರೂ—ಹೊಟ್ಟೆ ತುಂಬ ರೊಟ್ಟಿ ದೊರೆಯುವುದಲ್ಲವೆ? ಅಲ್ಲದೆ ತಿಂಗಳಿಗೊಂದು ಚೀಲವೆಂದರೆ ಕಡಮೆಯಾಯಿತೆ? ಅದರಲ್ಲೂ—ರಾತ್ರಿ, ಇಲ್ಲಿಂದ ಒಂದು ಮೈಲು ದೂರಕ್ಕೆ ಸಾಗಿಸುವುದೊಂದು ದೊಡ್ಡ ಕೆಲಸವೆ? ಊರಲ್ಲಿ ಯಾರೂ ನನ್ನ ಮೇಲೆ ದ್ವೇಷ ಉಳ್ಳವರಿಲ್ಲವಲ್ಲ? ಆದರೆ ಶೆಟ್ಟಿಗೆ ವೈರಿಗಳಿದ್ದಾರೆ; ಇದ್ದರೆ ನನಗೂ ಅವರ ವೈರತ್ವಕ್ಕೂ ಯಾವ ಸಂಬಂಧ? ಅದರಲ್ಲೂ ಶೆಟ್ಟಿ 'ಏನು ಬಂದರೂ ನೋಡಿಕೊಳ್ಳುತ್ತೇನೆ' ಎಂದು ಮಾತು ಕೊಟ್ಟಿದ್ದಾನಲ್ಲ! ಆದ್ದರಿಂದ ಒಪ್ಪುವುದೇ ಒಳಿತು. ಒಳಿತಲ್ಲದೆ ಮತ್ತಿನ್ನೇನು?" ಎಂಬ ಆಲೋಚನೆಯಿಂದ—ಅಹುದು, ಒಪ್ಪಿಕೊಂಡೆ! ಆಗ ಶೆಟ್ಟರ ಪ್ರತಿಯೊಂದು ಮಾತನ್ನೂ ಹರಿಶ್ಚಂದ್ರನ ವಾಕ್ಯವೆಂದುಕೊಂಡೆ! ಸೂರ್ಯ-ಚಂದ್ರರಷ್ಟು ನಿಜ.... ಎಂದುಕೊಂಡೆ!

ಅಂಟು, ಹಸಿವೆಯು ದಳ್ಳುರಿಯಿಂದ ತಪ್ತನಾಗಿ, ದೇವರನ್ನು ಬಾಯಿಗೆ ಬಂದಂತೆ ಬೈದದ್ದಕ್ಕಾಗಿ ತುಂಬಾ ದುಃಖಪಟ್ಟೆ! ತಪ್ಪನ್ನು ಕ್ಷಮಿಸಲು ಅನೇಕ ವಿಧಗಳಿಂದ ಬೇಡಿಕೊಂಡೆ! "ದೇವರು ನಿಜವಾಗಿಯೂ 'ಅನಾಥ ರಕ್ಷಕ', 'ಬಡವರ ಬಂಧು' ಎಂಬುದು ಪದಿನಾರಾಣೆ ನಿಜ! ಸತ್ಯವಾಗಿಯೂ ಹುಟ್ಟಿಸಿದ ಅವನು ಹುಲ್ಲು ಮೇಯಿಸುವುದಿಲ್ಲ!" ಎಂದು ಒಪ್ಪಿಕೊಂಡೆ!.....

ಮೂರು ತಿಂಗಳಲ್ಲಿ ಕೊಣ್ಣೂರಿಗೆ ಕಳವಿನಿಂದ—ಒಬ್ಬನೇ—ನಲವತ್ತು ಬಂಡಿ ಜೋಳವನ್ನು ಸಾಗಿಸಿದೆ! ಶೆಟ್ಟಿಯ ತ್ರಿಜೂರಿಗೆ.ಸಾವಿರಗಟ್ಟಲೆಯ್ತಾಗಿ ಹಣನ ಹೊಳೆಯನ್ನೇ ಹರಿಸಿದೆ!

ಹಸಿವೆಯ ಕಾಳ್ಗಿಚ್ಚನ್ನಡಗಿಸಲಿಕ್ಕಾಗಿ, ಒಂದು ಚೀಲ ಜೋಳಕ್ಕಾಗಿ, ಇಡೀ ಊರವರೊಂದಿಗೆ ವೈರ ಕಟ್ಟಿಕೊಂಡೆ! ಕೆಲವು ಸಲ ಕೊಡನೆ ಹೊಡೆದಾಡಿದ್ದೂ ಆಯಿತು! ಆಗ ನನಗೇತರ ಭಯ? ಶೆಟ್ಟಿಯಿದ್ದಿಲ್ಲವೆ ಬೆಂಬಲಕ್ಕಾಗಿ? ಬೇಕಾದಷ್ಟು ಹಣದ ಹಿಂಬಲ ನಿನ್ನವನಾತ.....

ಏನಾದರೂ ಆಗಲಿ! ಶೆಟ್ಟಿ ತಾನಿತ್ತ ಮಾತಿನಂತೆ ನಡೆದನೇನು? ಪ್ರತಿ ತಿಂಗಳೂ ಒಂದು ಚೀಲವಂತೆ ಜೋಳ ಕೊಟ್ಟನೇನು? ಅನೇಕ ಸಲ "ಪದೇ ಪದೇ ಕೇಳಿ ನನ್ನನ್ನು ರೇಗಿಸಬೇಡ; ಕೊಟ್ಟಾಗ ಒಯ್ಯಿ!" ಎಂದು ಗರ್ವದಿಂದ ಗದರಿಸಿದ!

"ಕಳಸವ ಕಾಳಿನ ಸಂಗ್ರಹ ಮುಗಿದನ್ನಕ್ಕಾಗಿ ಈ ಮಾತ ಹೊರಡುತ್ತಿದೆ ಇವನ ಬಾಯಿಯಿಂದ" ಎಂದು ನನ್ನ ಈ ಕೆಸರು ತುಂಬಿದ ತಲೆಗೆ ಆಗ ಹೊಳೆಯಲಿಲ್ಲ!

ಆದರೆ ನಾನು ಕೇಳುವುದನ್ನು ಬಿಡಲಿಲ್ಲ! ಬಿಡಲಿಕ್ಕೆ ಸಾಧ್ಯವಿತ್ತೆ? ಆದರಲ್ಲೂ ಇಷ್ಟು ಊರೊಡನೆಯೇ ವೈರ ಬೆಳೆದರೂ ಈ ನಿರ್ಲಜ್ಜ ಹೆಮ್ಮಾರಿ—ಹಸಿವೆ—ಈ ಕಳ್ಳ ಕೆಲಸವನ್ನು ಬಿಡಿಸಿರಲಿಲ್ಲ! ಇನ್ನು ಇದರ ಮುಂದೆ ಶೆಟ್ಟಿಯ ಸಿಟ್ಟು ಯಾವ ಗಿಡವ ತೊಪ್ಪಲು!

ಅಂತೂ ಕೊನೆಗೆ ನನ್ನ ಕಾಟ ತಾಳಲಾರದೆ, ಶೆಟ್ಟಿ ಒಂದು ಚೀಲ—ಹುಳಿತ—ಜೋಳ ಕೊಟ್ಟ! ಅಬ್ಬಾ! ಒಂದು ಚೀಲಕ್ಕೇ ಇಷ್ಟು ಕೋಣ-ಕುರಿಗಳು ಬಿದ್ದುವೆ! ಇನ್ನೆರಡನ್ನು ಕೊಡಿರೆಂದು ಹೇಗೆ ಕೇಳಲಿ? 'ಇವಾಗಲಿ; ಆಮೇಲೆ ನೋಡೋಣ' ಎಂದು ಅಷ್ಟಕ್ಕೆ ತೃಪ್ತಿ ಪಟ್ಟುಕೊಂಡೆ!

ಮತ್ತೆ ಹದಿನೈದು ದಿನಗಳುರುಳಿದುವಲ್ಲವೆ? ಹದಿನೈದು ರಾತ್ರಿಗಳಲ್ಲೂ ಹದಿನೈದು ಬಂಡಿ ಜೋಳ ಸಾಗಿಸಿದೆ ನಾನು!

ಅಂದಿಗೇ—ಹದಿನೈದು ದಿನಗಳಿಗೇ—ಶೆಟ್ಟಿ ಕೊಟ್ಟ ಒಂದು

(೨೪ನೆಯ ಪುಟದಿಂದ ಮುಂದುವರಿದುದು)

ಶಾಲೆಯಲ್ಲಿ ಸುರಿತ ಕಲಾವಿದರನ್ನು ಕಲೆಹಾಕಿ ಕಾರ್ಯಪ್ರವೃತ್ತಗೊಳಿಸುವುದನ್ನು ನಮ್ಮ ನಿರ್ಮಾತೃಗಳು ಆಚರಣೆಯಲ್ಲಿ ತರಬೇಕು. ಉತ್ತಮ ಸಾಹಿತ್ಯಕರನ್ನು ಆರಿಸಿ ಪ್ರಗತಿಪರವಾದ, ಪರಿಣಾಮಕಾರಿಯಾದ ಕಥಾವಸ್ತುಗಳನ್ನು ಅವರಿಂದ ಪೂರೈಸಿಕೊಳ್ಳಬೇಕು. ನಟ-ನಟಿಯರ ಅಭಿನಯ, ಹಾವ-ಭಾವ, ಆಯಾ ಸಂದರ್ಭಕ್ಕನುಸರಿಸಿ ತೀವ್ರವೇ ಬದಲಾಗುವ ಮುಖಭಂಗಿ, ಇವುಗಳ ವೈಶಿಷ್ಟ್ಯವನ್ನರಿತು ನಮ್ಮ ಕುಂದನ್ನು ತುಂಬಿಕೊಳ್ಳುವುದು ಅತಿ ಅವಶ್ಯವಿದೆ. ಇತ್ತೀಚೆಗೆ ಮೈಸೂರು ನಗರದಲ್ಲೊಂದು ನಟ-ನಟಿಯರಿಗೆ ತಿಕ್ಷಣಕೊಡುವ ಸಂಸ್ಥೆ ಏರ್ಪಟ್ಟಿರುವುದು ತುಂಬ ಸಂತಸದ ಸಂಗತಿ. ಚಿತ್ರದ ಸರ್ವತೋಮುಖ ಯಶಸ್ಸಿಗೆ ಅವಶ್ಯವಿರುವ ಪ್ರತಿಯೊಂದು ಶಾಖೆಯ ವಿವರಣೆಗಳನ್ನು ಕೊಟ್ಟು ಹೇಳಲು ಇಲ್ಲಿ ಸಮಯವಿಲ್ಲ.

ಒಟ್ಟಿನಲ್ಲಿ, ಪಾಶ್ಚಾತ್ಯರು ಈ ಉದ್ಯಮದಲ್ಲಿ ಯಾವ ಬಗೆಯ ಬದಲಾವಣೆಗಳಿಂದ ಮುಂದುವರಿಯುತ್ತಿರುವರು; ಅವರ ಧ್ಯೇಯ, ಧೋರಣೆಗಳೇನೆಂಬುದನ್ನು ತಿಳಿದುಕೊಳ್ಳಬೇಕು. ನೋಡಲಾಡವರು ಈ ದಿಶೆಯಲ್ಲಿ ಯಾವ ಪ್ರಯತ್ನಗಳನ್ನು ಮಾಡುತ್ತಿರುವರು; ಅವರಿಂದ ನಮ್ಮ ಉದ್ಯಮಕ್ಕೆ ಮಾರಕವೋ, ಪೂರಕವೋ— ಇವೆಲ್ಲವನ್ನನುಲಕ್ಷಿಸಿ, ಕನ್ನಡದ ಚಿತ್ರೋದ್ಯಮ ತನ್ನ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳಬೇಕು.

ಮುಖ್ಯವಾಗಿ, "....ಅಂದಿನವರೆಗೆ ನಮ್ಮ ದೇಶದ ಜನರು—ಚಿತ್ರ ಕೆಟ್ಟಿರಲಿ, ಒಳ್ಳೆಯದಿರಲಿ— ನಮ್ಮ ಸಾವಿರಾರು ಜನರಿಗೆ ಅನ್ನವನ್ನೀಯುತ್ತಿರುವ ಭಾರತೀಯರಿಂದ ಸಿದ್ಧಪಡಿಸಲ್ಪಟ್ಟ ಚಿತ್ರಗಳಿಗೇ ಉತ್ತೇಜನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ"— ಎಂದು ಉಗ್ಗಡಿಸಿರುವ ಸರದಾರ ವಲ್ಲಭಭಾಯಿ ಪಟೇಲರ ನುಡಿಗಳಿಗೆ ಕನ್ನಡಿಗರನ್ನೊಳಗೊಂಡು ಎಲ್ಲರೂ ಬೆಂಬಲ ತೋರುವುದು ಅನುಕರಣೀಯವಾಗಿದೆ. ಇಂತಾಗಲಿ; ಕನ್ನಡದ ಚಿತ್ರೋದ್ಯಮ ಬೆಳೆದು ಬಾಳಲಿ!

ಚೀಲ ಜೋಳ ಮಾಯವಾದುವು! ಹಸಿವೆಯ ನೋವಿಗೆ ಒಡಲು ಬಿಕ್ಕಿದೀತು?

* * *

ಅಂದು ರಾತ್ರಿ ವಾಡಿಕೆಯಂತೆ ಕಾಳು ಸಾಗಿಸಲು ಶೆಟ್ಟಿಯ ಮನೆಗೆ ಹೊರಟೆ.

ಹೊರಡುವಾಗ ಬಾಗಿಲಲ್ಲೇ ಎಡವಿ ಬಿದ್ದೆ! ಬೆಕ್ಕು ಅಡ್ಡ ಹೋಯಿತು!! ಹಾದಿಯಲ್ಲಿ ಕಲ್ಲಿಡವಿ ಮುಗ್ಗರಿಸಿದೆ!!!..... ಒಂದೆ?....ಎರಡೆ....? ನೂರಾರು!.....

ಈ ಅಪಶಕುನಗಳಿಂದಾಗಿ 'ಇಂದೇನಾಗುವುದೋ?' ಎಂದು ತುಂಬಾ ಹೆದರಿದೆ!.....

ಶೆಟ್ಟಿ ಬಂದಾಗ ನಾನು ಬಂಡಿಗೆ ಚೀಲಗಳನ್ನು ಹೇರುತ್ತಿದ್ದೆ.

"ಕನಕ, ನಿನ್ನ ಜೋಳ ಒಯ್ಯೋದಿಲ್ಲನೆ?" ಎಂದು ವಾತ್ಸಲ್ಯದಿಂದ ನುಡಿದ ಶೆಟ್ಟಿ.

ಈ ಮಾತನ್ನು ಕೇಳಿ ನನಗೆ ಹಿಡಿಸಲಾರದಷ್ಟು ಸಂತೋಷವಾಯಿತು! ಆವನಲ್ಲಿಟ್ಟಿದ್ದ ನನ್ನ ಸಂಶಯಕ್ಕಾಗಿ ನಾಚಿಕೆಪಟ್ಟುಕೊಂಡೆ.

"ಇರಲೀಲಿ ನಾಳೆ ಒಯ್ತೀನೆ!" ಎಂದೆ. ಶೆಟ್ಟಿಯ ಈ ವರ್ತನೆ ಹಾದಿಯಲ್ಲಾದ ಅಪಶಕುನಗಳನ್ನು ಮರೆಯಿಸಿತು!

ಒಳಗೆ ಕ್ರೂರವಾದ ನೊಸಳೆಗಳಿದ್ದರೂ ಶಾಂತವಾಗಿರುವುದಿಲ್ಲವೆ ಹೆಮ್ಮಡುವು? ಅದರಂತೆಯೆ ಈ ಶೆಟ್ಟಿಯ ಮನಸ್ಸೆಂಬುದನ್ನು ನಾನಾಗ ಅರಿಯಲಿಲ್ಲ! ಅಷ್ಟು ಕುಶಾಗ್ರಬುದ್ಧಿ ಎಲ್ಲಿಯದು ನನಗೆ?

ಗಾಡಿ ಹೊರಟಿತ್ತು ಆ ಕಾರ್ಗತ್ತಲಲ್ಲಿ! ಅಂದಿನ ರಾತ್ರಿಯು ಏಕೋ ನನಗೆ ಹೆದರಿಕೆಯನ್ನು ಹುಟ್ಟಿಸುವಷ್ಟು ಭೀಕರವಾಗಿತ್ತು! ಮೂರುತಿಂಗಳು ಹದಿನೈದು ದಿನದ ರಾತ್ರಿಗಳಲ್ಲಿ ಒಂದುಸಲವೂ ಪೆದರದವನು ಅಂದೆಯೆ ಏಕೋ ಹೆದರಿದೆ! ಹೆದರಿಕೆಗೆ ಪುಟಕೊಡಲು ಊರ ಜನರ ಸೈರ, ಹಾದಿಯಲ್ಲಾದ ಅಪಶಕುನಗಳು— ಇವು ಮನಸ್ಸಿನಲ್ಲಿ ಗುಡುಗಿ, ಮಿಂಚಿ ಭಯಾನಕವಾಗುತ್ತಿದ್ದುವು! ಬಂಡಿಯು ಗತಿಗೆ ತಕ್ಕಂತೆ ಹೃದಯವೂ ಬಡಿದುಕೊಳ್ಳತೊಡಗಿತು!.....

ಚಿಕ್ಕೇರಿಯ ಹಳ್ಳದ ಹತ್ತಿರಕ್ಕೆ ಬಂದಿತ್ತು ಬಂಡಿ! ಗಡಿದಾಟಲು ಇನ್ನು ಒಂದೇ ಒಂದು ಫರ್ಲಾಂಗು!!

ಅಷ್ಟರಲ್ಲಿಯೆ ಒಮ್ಮೆಲೇ ನಾಲ್ಕೈದು ಜನರು ಬಂದು ಬಂಡಿಯನ್ನು ತಡೆದರು! ಅವರು ನಮ್ಮೂರವರೇ ಅಲ್ಲವೆ? ಹೌದು. ಜೋರುಮಾಡಿ ಬಂಡಿ ಹೊಡೆಯಲು ಯತ್ನಿಸಿದೆ ನಾನು! ಆ ಖಾಕೀ ಉಡುಪಿನವ ಜೇಬರಿ ಬಿಟ್ಟು "ತಡಿಯೋಽಽಽ" ಎಂದು ಅದೇನೋ ಇಂಗ್ಲೀಷಿನಲ್ಲಿ ಗರ್ಜಿಸಿದ— ಕೆರಳಿದ ಸಿಂಹದಂತೆ!

ಆವೇಷ, ಆವನಿಗಳನ್ನು ಕಂಡು ನನ್ನ ಜೀವ ಹಾರಿಹೋದಂತಾಯಿತು! ಆಕಾಶ ಕಳಚಿ ನೆಲೆ ಬಿದ್ದಂತಾಯಿತು!!.....

* * *

ಮುಂದೆ ಆದದ್ದೇನು?

—ವಿಚಾರಣೆ!

ಆನಂತರ?

—ಮೂರುವರ್ಷ ಕಠಿಣ ಶಿಕ್ಷೆ!!

ಆದರೆ ಅದು ಸರಿಯಾದ ನ್ಯಾಯವಿಚಾರಣೆಯೆ? ನಾನು ಹೇಳಿದ್ದನ್ನು ಅವರು— ಸರಕಾರದವರು— ಸರಿಯಾಗಿ ವಿಮರ್ಶಿಸಿದರೆ? ನಂಬಿದರೆ? ತಮ್ಮ ಅನುಕೂಲಕ್ಕೆ ತಕ್ಕಂತೆ ಹೇಳಲು ನನ್ನನ್ನು ಒತ್ತಾಯಪಡಿಸಲಿಲ್ಲವೆ?.....

ಆದರೆ ಶೆಟ್ಟಿ ತಾನಿತ್ತ ಮಾತಿನಂತೆ ನಡೆದನೇನು? ನನ್ನನ್ನು ಕುತ್ತಿನಿಂದ ಪಾರುಮಾಡಿದನೇನು? ಪಾರುಮಾಡಲು ಯತ್ನಿಸಿದನೇನು?.. ..

ಅಯ್ಯೋ! ನಾನೆಂತಹ ಹುಚ್ಚ! ನಾನೆಂತಹ ಬೆಪ್ಪುತಕ್ಕಡಿ!! 'ವ್ಯಥೆ ಇದ್ದಾಗ ನೆಂಕಟರಮಣ' ಅಲ್ಲವೆ?

ಸಾಗಿಸುವ ಜೋಳ ಸಾಗಿಸಿದ ಮೇಲೆ, ಅವನೇನು ಸಂಬಂಧನನಗೆ? ಕೊನೆಯ ಒಂದು ಬಂಡಿ ಜೋಳ ಹೋದರೇನಾಯಿತು? ಕೇವಲ ಇನ್ನೂರು ರೂಪಾಯಿ ನಷ್ಟವಲ್ಲವೆ? ಏನು ಮಹಾ? 'ಅಂತಹ ಎಷ್ಟು ಸಾವಿರ ಇನ್ನೂರುಗಳು ಲಾಭ ಬಂದಿಲ್ಲ!' ಎಂದುಕೊಂಡಿರಬೇಕಲ್ಲವೆ ಶೆಟ್ಟಿ?

ಇಂದು ನಿರ್ಗತಿಕರಾದ ನನ್ನ ಹೆಂಡಿರು ಮಕ್ಕಳು ಎಲ್ಲಿದ್ದಾರೋ! ಹೇಗಿದ್ದಾರೋ!! ಬದುಕಿರಬಹುದೇನು? ಇಲ್ಲವೆ ಹಸಿವೆಯ ಹೆಮ್ಮಾರಿಗೆ ಬಲಿಯಾಗಿರಬಹುದೇ? ಇಲ್ಲ! ಬಲಿಯಾಗಿರಲಿಕ್ಕಿಲ್ಲ! ಶೆಟ್ಟಿ ಕೊಡಬೇಕಾಗಿದ್ದ ಎರಡು ಚೀಲ—ಒಂದುವರೆ ಚೀಲ— ಕೊನೆಗೆ ಒಂದು ಚೀಲವನ್ನಾದರೂ—ಜೋಳ ಕೊಟ್ಟಿರಬೇಕು.

ಥೂ! ನಾನೆಂತಹ ಹೆಡ್ಡ! ಆಗ ಮೂರು ತಿಂಗಳ ದೀರ್ಘಕಾಲ ಕಾಡಿಸಿದ್ದಕ್ಕೇ ಒಂದು ಚೀಲ ಜೋಳ ಕೊಟ್ಟವನು, ಈಗ (!) ಅಪರಲ್ಲೂ ನನ್ನ ಹೆಂಡತಿ ಹೋದರೆ ಕೊಡುತ್ತಾನೆಯೇ? ಅವನು ಅಷ್ಟು ವಿಶ್ವಾಸಿಯೇ.....ದಯಾಶಾಲಿಯೆ?

ಈಗ ಮುತ್ತಿ ಹೊಳೆಯುತ್ತದೆ ದೇವರು-ಇದ್ದರೆ—"ಪಕ್ಷಪಾತಿ" ಎಂದು! ಹೌದು. ಪಕ್ಷಪಾತಿಯಲ್ಲದೆ ಮತ್ತಿನ್ನೇನು? ಅವನು ನನ್ನ ಹೆಂಡತಿ ಮಕ್ಕಳಿಗೆ--ಬದುಕಿದ್ದರೆ—ಹುಲ್ಲನ್ನೂ ಸಹ ಮೇಯಿಸುತ್ತಿಲ್ಲ! ಹಸಿವೆಯ, ದುಃಖದ, ನರಕದ ಕೊಳನ್ನು ಅತ್ಯಂತ ದಬ್ಬಾಳಿಕೆಯಿಂದ ತುರುಕುತಿದ್ದಾನೆಂದು ಕೈಯೆತ್ತಿ ಸಾರಿ ಸಾರಿ ಹೇಳುತ್ತೇನೆ.

ಛೆ! ನಾನೆಂತಹ ಹುಚ್ಚ! ಆಗಿಹೋದದ್ದನ್ನು ಚಿಂತಿಸಬಾರದೆಂದು ಪ್ರತಿಜ್ಞೆ ಮಾಡಿಕೊಂಡಿದ್ದಿಲ್ಲವೆ? ಹೌದು! ಆಗಿ ಹೋದದ್ದನ್ನು ನೆನೆದುಕೊಂಡು ಕುದಿದರೆ ಬಂದಿದ್ದೇನು?

ಇಂದು ನಾನು—ಒಂದು ವಿಧದಿಂದ—ಸುಖವಾಗಿದ್ದೇನಲ್ಲವೆ? ಹೌದು, ನಿಜವಾಗಿಯೂ ಸುಖವಾಗಿದ್ದೇನೆ! ಜಗತ್ತಿನ ಜಂಜಡದ ಗಾಳಿಯ ಸೋಂಕೇ ಇಲ್ಲ ನನಗೆ! ಬಾಳ್ವೆಯ ಹೋರಾಟವಂತೂ ಇಲ್ಲವೇ ಇಲ್ಲ! ನಿಜವಾಗಿಯೂ ಈ ಜೈಲುಜೀವನದಲ್ಲೂ— ಒಂದು ವಿಧದ "ವಿಲಕ್ಷಣ ಸುಖ"ವಿದೆ! ಹಾಂ, ಸುಖ! ವಿಲಕ್ಷಣ ಸುಖ!!

ಭಾವಕದೃಷ್ಟಿ

ಶ್ರೀ. ಬಿ. ಎಚ್. ಶ್ರೀಧರ ಎಂ.ಎ. ಭಟಕಳ

★

"ಲಿರಿಕ್" ಅಥವಾ ಭಾವಗೀತವೆಂಬುದು ಇಂದು ಕನ್ನಡದಲ್ಲಿ ಎಲ್ಲೆಲ್ಲೂ ಕಂಡುಬರುತ್ತದೆ. ಕವಿತೆಯ ಬಗೆಗಳಲ್ಲೆಲ್ಲಾ ಇದು ಬಹಳ ಸೂಕ್ಷ್ಮವಾದದ್ದು ಮತ್ತು ಹೆಚ್ಚಾಗಿ ಕವಿಯ ಅತ್ಮಾನುಭವಪ್ರಕಾಶಕವಾದದ್ದು ಎಂದೂ ಸ್ಪಷ್ಟವಿದೆ. "The poetry in which the poet goes down into himself and finds his inspiration and his subjects in his own experiences, thoughts and feelings is called personal or subjective poetry—ಯಾವ ಪದ್ಯದಲ್ಲಿ ಕವಿಯು ತನ್ನೊಳಗೆ ಹೊಕ್ಕು ತನ್ನ ಸ್ಫೂರ್ತಿಪಡೆವನೊ ಮತ್ತು ತನ್ನ ಅನುಭವ, ಆಲೋಚನೆ, ಸಂವೇದನೆ ಇವುಗಳಲ್ಲೇ ತನ್ನ (ವರ್ಣನೀಯ) ವಸ್ತುಗಳನ್ನು ಕಾಣುವನೊ, ಆ ಪದ್ಯ ಆತ್ಮನಿಷ್ಠವಾದುದು" ಎಂದೂ ಹೇಳಲಾಗಿದೆ. ಕನ್ನಡದಲ್ಲಿ ಭಾವಗೀತಗಳ ಸಂಖ್ಯೆ ಹೆಚ್ಚಾಗಿದೆಯೆ ಹೊರತು, ಅವುಗಳ ಗುಣವಲ್ಲ. ಇವುಗಳ ಸೃಷ್ಟಿ ಮತ್ತು ಆಸ್ವಾದ ಎರಡಕ್ಕೂ ವಿಶೇಷವಾದ ಭಾವಕದೃಷ್ಟಿಯಿರಬೇಕು.

ಕವಿತ್ವಧರ್ಮ ಕವಿತ್ವಕಲೆ ಎಲ್ಲವೂ ಜೀವನ್ನಾಗಿ ಉಳ್ಳ ಕವಿಯು ಯಾವುದನ್ನು ಬರೆದರೂ ಸ್ವಾನುಭವದ ಆಧಾರದಿಂದಲೇ ಎಂಬುದು ನಿಜ. ಆದರೆ ಸ್ವಾನುಭವದ ಆಧಾರದಿಂದ ಅನುಮಿತವಾದ ಸಂಗತಿಗಳಿಗಿಂತ ಸ್ವಾನುಭವವು ಹೆಚ್ಚು ವಾಸ್ತವಿಕ. ಭಾವಗೀತ ಅದರ ಅಜಸ್ರಧಾರೆ. ಇದರಲ್ಲಿ ತನ್ನ ಮನಸ್ಸಿನ ಆಶೆ, ಆಕಾಂಕ್ಷೆ ನೋವು, ನಿರಾಶೆ, ದ್ವಂದ್ವ, ದುಃಖ, ಸುಖ ಇವುಗಳನ್ನು ತನ್ನದೆಂದೇ ಹೊರಗೆಡಹುತ್ತಾನೆ—ನಾಟಕದ ಪಾತ್ರಗಳ ಮುಖಾಂತರವಲ್ಲ. ಆದರೆ ಕವಿಗೆ ದೇಶ ಕಾಲ ಸ್ಥಾನ ಭೇದದಿಂದ ನಾನಾ ಅನುಭವಗಳುಂಟಾಗಬಹುದು; ಅದಕ್ಕನುಗುಣವಾಗಿ ಪರಸ್ಪರ ಭಿನ್ನ, ವಿರುದ್ಧ ತಾತ್ಕಾಲಿಕ ಅನುಮಿತಿಗಳನ್ನು ಅವನು ತನ್ನ ಗೀತಗಳಲ್ಲಿ ಹೇಳಬಹುದು. ಭಾವಕದೃಷ್ಟಿಯಿಂದ ಆ ಪ್ರತಿಯೊಂದು ಅನುಭವಗಳೂ ಸತ್ಯ; ಅನುಮಿತಿಗಳು ಹಾಗಿರಬೇಕೆಂಬ ನಿಯಮವಿಲ್ಲ. "It is the truth of things ar. seen, in deed, from a point of view different from that of science—ವಿಜ್ಞಾನಕ್ಕಿಂತ ಭಿನ್ನವಾದ ಒಂದು ದೃಷ್ಟಿಯಿಂದ ಕಂಡು ಹೇಳಿದುದು ಕಾವ್ಯಸತ್ಯ" ಎಂದಿರುವುದರಿಂದ, ಕವಿಯು ಏನಾದೊಂದನ್ನು ಅನುಭವಿಸುವಾಗ, ಅನುಭವವು ಭಾವಕತ್ವಕ್ಕೇರಿದರೆ ಭಾವಗೀತದ ಉದಯವಾಗುತ್ತದೆ. ಅನುಭವಿತೃವು ಸಾಕ್ಷಿತ್ವಕ್ಕೆ ಸಂದು ಕಂಡಬಳಿಕವೂ ಸ್ಮೃತಿಯಿದ್ದರೆ, ಭಾವಗೀತ ಶಬ್ದರೀರೆ ರಸಿಕನ ಸಹೃದಯತೆಗೆ ಸಾಕಷ್ಟು ಭಾವಕದೃಷ್ಟಿಯಿಲ್ಲದೆ ಕವಿತೆ ಇಂದು ಕಾಲಕಸವಾಗಿದೆ; ಕವಿಯ ಕೃತಿಗೆ ಸಾಕಷ್ಟು ಭಾವಕದೃಷ್ಟಿಯಿರದೆ ಕವಿತೆ ಇಂದು ಹಲವೆಡೆ ಕುರೂಪ ಇಲ್ಲವೆ ಕುವಾಕ್ಯವಿಶಿಷ್ಟ ಕನ್ಯೆಯಂತಾಗಿದೆ.

★

ತಾಳುವುದು; ಇಲ್ಲದಿದ್ದರೆ ಕವಿಯ ಮನದಲ್ಲೇ ಇಂಗಿ ಹೋಗಬಹುದು.

ಕವಿಯ ಭಾವಕದೃಷ್ಟಿ ಭಾವಗೀತಗಳ ಬೀಜವೆಂದೂ ಅದು ವಿವಿಧ ಮತ್ತು ಆತ್ಮನಿಷ್ಠ ಎಂದೂ ಹೇಳಲಾಯ್ತು; ಅದರ ಹಿಂದೆ ವಾಸ್ತವಾನುಭವ ಇರುವುದೆಂದೂ ಸ್ಪಷ್ಟಪಡಿಸಲಾಯ್ತು. ಆದರೆ ಪ್ರತಿಭಾದೇವಿಗೆ ಗರ್ಭಸ್ರಾವ ಉಂಟಾದಾಗ, ಕೃತಕತೆ ಕಂಡುಬಂದು, ಕವಿಯ ಸ್ವಾನುಭವದ ಸತ್ಯತ್ವವೂ ಅಸತ್ಯವಾಗಿ ತೋರುತ್ತದೆ. ಕಾವ್ಯಸತ್ಯವು ವೈಜ್ಞಾನಿಕ ದೃಷ್ಟಿಯಿಂದ ಅಭಾಸಿಕವೆನಿಸಬಹುದು, ಅತ್ಯಂತಕವೆನಿಸದಿರಬಹುದು; ಆದರೆ ರಸಿಕರ ಭಾವಕ ದೃಷ್ಟಿಯನ್ನೆಬ್ಬಿಸಿ ವೈಜ್ಞಾನಿಕ ಸತ್ಯದಿಂದಾಗದ ಹೃದಯ ಸಮುದ್ರಮಥನ ಮಾಡಿ ತತ್ಕಾಲದಲ್ಲಿ ಕಲಾನಂದವನ್ನು ವಾಸ್ತವವಾಗಿ ಕೊಡಬಲ್ಲುದು. ಈ ಭಾವಗೀತೆಯನ್ನು ಮಾತಾಡಿಸಲಿಕ್ಕೆ ಹೋಗುವ ಯಾವನೇ ಆಗಲಿ, ವಾಸ್ತವ ಪ್ರಪಂಚದ ವ್ಯಕ್ತಿ-ವಸ್ತುಗಳ ಬಗ್ಗೆ ತನಗಿರುವ ಎಲ್ಲ ನಿಶಿಷ್ಟ ಅಭಿಪ್ರಾಯಗಳನ್ನೂ ಬದಿಗಿಟ್ಟು, ಮಗುವಿನಂತಹ ಮನಸ್ಸಿನವನಾಗಿ ಓದಲು ಇಲ್ಲವೆ ಕೇಳಲು ತೊಡಗಬೇಕು. ಕಷ್ಟದಿಂದಾದರೂ ಮೊದಲು ಕವಿಯ ಆಶಯದ ಹಿನ್ನೆಲೆಯನ್ನು ಅರಿತುಕೊಂಡು, ಅದರಿಂದ ಹೊರಟು, ಕವಿವಾಕ್ಯ ಧಾರಾನುಸಾರಿಯಾಗಿ ಭಾವಸಮುದ್ರಲೀನನಾಗಲು ಹವಣಿಸಿದರೆ, ಕಿಂಚಿತ್ತಾದರೂ ಫಲವುಂಟು. ಪುನಃ ಪುನಃ ಗೀತದ ಸಾಲುಗಳನ್ನು ತನ್ನಲ್ಲಿ ಸೇರಿಸಿಕೊಂಡು, ತನ್ನ ಭಾವಕತ್ವವನ್ನು ಕೂಡಲೆ ಬೆಳೆಸಿಕೊಂಡು, ತನ್ಮೂಲಕ ಕವಿಯೇರಿದ ಅಂತಸ್ತನ್ನೇರಿ ನೋಡಿದಾಗ ಮಾತ್ರ ಭಾವಗೀತದ ಆಸ್ವಾದ ಪೂರ್ಣವೆನಿಸುತ್ತದೆ; ಕವಿ ಕಂಡ ಅನುಭವದ ಸದೃಶಾನುಭವ ಉಂಟಾಗುತ್ತದೆ.

ಮೇಲೆ ಹೇಳಿದ ಭಾವಗೀತದಂತೆ ಭಾವಗವ್ಯಗಳನ್ನಾದರೂ ಪೂರ್ವೋಕ್ತ ಭಾವಕದೃಷ್ಟಿಯಿಂದ—ಕವಿಸ್ಥಾನದಲ್ಲಿ ಕುಳಿತು—ತದನುಭವಸ್ವಾರಸ್ಯವನ್ನು ಪಡೆಯಬೇಕೇ ವಿನಾ, ವೈಜ್ಞಾನಿಕವಾದ ವಿಶ್ಲೇಷಕಪದ್ಧತಿಯಿಂದಲ್ಲ. ಸಾಹಿತ್ಯದಲ್ಲಿ ಶಬ್ದಾರ್ಥಗಳು ಸಾಧನ; ರಸ (ಭಾವ) ಸಿದ್ಧಿ. ರಸೋದ್ಬೋಧಕತ್ವವಿರುವುದು ಸತ್ಯಾವ್ಯ; ಅರ್ಥ ಅದರಲ್ಲಿ ಗುಣೀಭೂತ. ಅಭಿಪ್ರಾಯ, ಅನುಮಿತಿ, ಅರ್ಥಾಂತರನ್ಯಾಸಗಳು ಭಾವಪೋಷಕಾರ್ಥವಾಗಿ ಪದ್ಯಾದಿ ಪ್ರಬಂಧಗಳಲ್ಲಿರುವುದೇ ಹೊರತು, ಸ್ವತಂತ್ರೋದ್ದಿಷ್ಟಗಳಾಗಿ ಅಲ್ಲ. ಇದನ್ನು ಗನುನಿಸಿದರೆ, ವಿಚಾರಿಸಿದರೆ, ಕವಿಯ ನಿರಂಕುಶತ್ವದ ನೆನಹು ಉಂಟಾಗದಿರದು. ಕವಿಗೆ ಇಂತಹ ಅನುಭವ ಇಂತಹ

ದೇಶದಲ್ಲಿ ಇಲ್ಲವೆ ಇಂತಹ ಕಾಲದಲ್ಲಿ ಉಂಟಾಗಬಹುದೆಂದು ಹೇಳಲಾಗುವುದಿಲ್ಲ. ಆದರೆ ಕವಿಯ ನಿರಂಕುಶತೆಗೊಂದು ಕಟ್ಟಪೆ. ಶಬ್ದಾರ್ಥಗಳ ಬಳಕೆಯಲ್ಲಿ ಶಬ್ದಶಾಸ್ತ್ರ-ಛಂದಸ್ಸುಗಳ ಕಟ್ಟಪೆಗೊಳಗಾದಂತೆಯೇ, ಅಭಿಪ್ರಾಯ ಪ್ರಕಟನೆಯಲ್ಲಿ ಕವಿಯು ತನ್ನ ಸಮಾಜದ ನೀತಿ, ಸಂಸ್ಕಾರ, ಕಟ್ಟು-ಕಟ್ಟಳೆ ಇವುಗಳಿಂದ ಬಹುದೂರ ಹೋಗಲಾರ. ಕೇವಲ ದ್ರಷ್ಟಾರನಾಗಿ (Seer) ಭಾವಾನಿಷ್ಕಾರಮಾಡಿದರೂ, ಅದು ಲೋಕದೃಷ್ಟಿಯಿಂದ ಅತ್ಯಂತ ಅನುಪಾದೇಯ ಇಲ್ಲವೆ ಅರುಚಿಕರವಿದ್ದರೆ, ಕವಿಗೆ ಪಾಗ್ವ್ಯವಹಾರದಿಂದ ಪ್ರಯೋಜನವಿಲ್ಲದಂತಾದೀತು. ವ್ಯಕ್ತಿ-ವ್ಯಕ್ತಿಗಳ ಪ್ರತಿಯೊಂದು ಸಂಬಂಧದಲ್ಲೂ ಪರಸ್ಪರತ್ಯಾಗವು ಪರಸ್ಪರ ಹೊಂದಿಕೆಗೆ ಆಗತ್ಯನಿರುವಂತೆ, ಕವಿ-ರಸಿಕರಿಬ್ಬರೂ ಯಾವಾಗಲೂ ಪರಸ್ಪರರಿಗೆ ಆರ್ಥವಾಗುವಂತೆ ನಡೆದರೆ, ಒಂದು ಸಮಾಜದ (Community) ಪ್ರಗತಿಯಾಗುವುದರಲ್ಲಿ ಸಂದೇಹವಿಲ್ಲ. ರಸಿಕನ ಸಹೃದಯತೆಗೆ ಸಾಕಷ್ಟು ಭಾವಕದೃಷ್ಟಿಯಿರದೆ ಕವಿತೆ ಇಂದು ಕಾಲಕಸವಾಗಿದೆ; ಕವಿಯ ವೈಖರಿಗೆ ಸಾಕಷ್ಟು ಭಾವಕದೃಷ್ಟಿಯಿರದೆ ಕವಿತೆ ಇಂದು ಹಲವೆಡೆ ಕುರೂಪ ಇಲ್ಲವೆ ಕುವಾಕ್ಯವಿಶಿಷ್ಟ ಕನ್ಯೆಯಂತಾಗಿದೆ. ಕೆಲವು ಬರಹಗಾರರ ಮತ್ತು ಲೌಕಿಕರ (ರಸಿಕರ) ದೃಷ್ಟಿಗಳು ಆಮಿಶ್ರ, ಆಸಂಗತ ಎನಿಸಿ 'ಕೇವಲ ನಿರಂಕುಶತಾಪಾದ' ಮತ್ತು 'ವಾಸ್ತವವಾದ' ಎಂಬವು ವಿಸರ್ಜಕರ ಹಣೆಯನ್ನು ಸೂರೆಗೊಳ್ಳುತ್ತಿವೆ. ಸುಖ-ಶಾಂತಿ ನೆಲಸಿದಾಗ ಮೊದಲ ವಾದದಂತೆ ಬರೆಪ ಕೃತಿಗಳಿಗೆ ಮೆಚ್ಚುಗೆ ಬರಬಹುದು ಎಂದಕೂಡಲೇ, ದುಃಖ ಅಶಾಂತಿ ಆವರಿಸಿದ ಲೋಕ ಎರಡನೆಯ ನಾಪದಂತೆ ಬರೆದ ಕೃತಿಗಳಿಗೆ ಮನಸೋಲುವುದು ಸಹಜ ಎಂಬುದು ಸ್ಪಷ್ಟ. ಭಾವಗೀತಗಳ ಕವಿ ಬ್ರಹ್ಮಪಟ್ಟದಿಂದ ವಿವಿಧಭಾವಗಳನ್ನು ರೂಪಿಸಬಹುದು; ಆದರೆ ಅದಕ್ಕೊಂದು ನಿಯಮವಿರಬೇಕೆಂದೆನಿಸುತ್ತದೆ. ಮಗುವಿಗೆ ಸಿಟ್ಟುಬಂದಾಗ ತಾಯಿ ಮುತ್ತುಕೊಡಲು ಸ್ವತಂತ್ರಳೂ ಶಕ್ತಳೂ ಆದರೂ, ಕೊಟ್ಟ ಮುತ್ತನ್ನು ಮಗುವು ಧಿಕ್ಕರಿಸಲೂ ಸ್ವತಂತ್ರ ಮತ್ತು ಶಕ್ತ. ಮನೆಯಲ್ಲೊಬ್ಬರು ಸತ್ಯಾಗ ಎಲ್ಲರೂ ಅಳುತ್ತಿದ್ದರೆ, ವೇದಾಂತಿಯಾದ ಆವರಲ್ಲೊಬ್ಬನು ನಿರ್ವಿಕಾರಚಿತ್ತನಿದ್ದರೂ ಲೋಕಯಾತ್ರಾನಿರ್ವಹಣಕ್ಕಾಗಿ ಅತ್ತಂತೆ ಮಾಡಬೇಳಾಗುತ್ತದೆ; ಇಲ್ಲದಿದ್ದರೆ ಅವನು ನಿರ್ಘೃಣನೆಂದು ಅವನ ಹೆಂಡತಿಯೇ ಊರವರೊಂದಿಗೆ ಸೇರಿ ಬೈಯಬಹುದು. ಹಾಗೆಯೇ ಕವಿಯು ಸ್ವೈರನಾಗಿ ಸಂಜಲ್ಪಿಸಿ ವಸ್ತುಸ್ಥಿತಿಗೆ ತೀರ ವ್ಯಾಹತವನ್ನೇ ನುಡಿದಿದ್ದರೆ ರಸಿಕನಿಗೆ ಸೌಹಾರ್ದ ಉಂಟಾಗದೆ, ಭಾವಕದೃಷ್ಟಿ ಬರದೆ ಅವನು ಅದನ್ನು ತ್ಯಜಿಸಬಹುದು. ಹೀಗಾಗಿಯೋ ಏನೋ, ಇಂದು ಜಗತ್ತಿನಲ್ಲಿ "ಪ್ರಗತಿಶೀಲ ಸಾಹಿತ್ಯ" ಎಂಬುದು ತಲೆದೋರಿದೆ. ಸಮಾಜ ಜೀವನವಲ್ಲಿ ಅತ್ಯಂತ ವಿಭಿನ್ನವಾದ ಅನೇಕಮಟ್ಟಗಳಿರುವ ಕಾಲಪಲ್ಲಿ, ಮೊದಲೇ ಭಿನ್ನರುಚಿಯೆನಿಸಿದ ಲೋಕವು ಇಂದು ಪುತ್ತಪ್ಪ ರುಚಿಭೇದವನ್ನು ತಳೆದರೆ ಆಶ್ಚರ್ಯವಲ್ಲ. ಉಂಡುಟ್ಟ ಸುಖಭಾವ ಇಲ್ಲವೆ ಎಲ್ಲಜಿಟ್ಟ ನಿಶ್ಚಿಂತಯಾಭಾವ ಜಗತ್ತಿನ ಪಲವರಿಗೆ ರುಚಿಸದಿರಬಹುದು; ಆ ಭಾವಗಳ ಮುಂದೆ ಅವರ ಭಾವಕತ್ವ ಕಣ್ಣಿಡೆತೆಯಲಾರೆನೆಂದಿರಬಹುದು; ಆ ಜನ ಕಾವ್ಯಾಲಾಪವನ್ನೇ ಒಂದು ಸಲ ಬಹಿಷ್ಕರಿಸೀತು— ಯಾರಿಗೆ ಗೊತ್ತು? ಇದರಿಂದ ಕವಿಯು ಅತಿನಿರಂಕುಶನಲ್ಲವೆಂದಾಗಿ ಕೆಲ ಬರೆಹಗಾರರು ಸಿಡಿಮಿಡಿಗೊಂಡಿದ್ದಾರೆ. ಯಾಕೋ ಏನೋ ದೇವರಿಗೇ ಗೊತ್ತು! ಕವಿ ಕೂಡ ಸಮಾಜದ ಒಂದು ವ್ಯಕ್ತಿಯೆಂದ ಮೇಲೆ, ಅವನಿಗೆ ಪುಚ್ಚನಂತೆ ವಾಕ್ಯವ್ಯವಹಾರ ಮಾಡಲು ಸ್ವಾತಂತ್ರ್ಯವಿಲ್ಲ! ಇದನ್ನು ಸುರೆತೋ ಏನೋ, ಹೊಸ ಪ್ರಯೋಗದ ಹೆಸರಿನಲ್ಲಿ ಇಂದು ಏನೇನನೋ ಬರೆದು ರಸಿಕರು ಮಾನ್ಯಮಾಡುವುದಿಲ್ಲವೆಂದು ಕೆಲವರು ರೇಗಾಡುತ್ತಾರೆ. ಬಂದ ಸಲವೇನು?

ಕವಿಯ ಭಾವಕದೃಷ್ಟಿ ರಸಿಕನಿಗೆ ಗಮ್ಯವಾಗಬೇಕಾದರೆ ಇಬ್ಬರೂ ಸಂಸ್ಕಾರಸಂಪನ್ನತೆಯಲ್ಲಿ ಸಶಕ್ತರಾಗಿರಬೇಕು; ಸಂಸ್ಕಾರ ಎಂದರೆ ಪೂರ್ವಪರಂಪರಾನುಸಾರಿಯಾಗಿ ನಾಡಿನ ನೆಲದ ಗುಣವನ್ನು ಬಿಂಬಿಸುವ ಕಾವ್ಯಾನುಶೀಲನದಿಂದ ಪ್ರಾಪ್ತ-

ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

ಆಯುರ್ವೇದೀಯ ಔಷಧಗಳು.

ವೈದ್ಯ ಲೋಂಫೆ ಇವರ ಜಳಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮಾಂಶಗುಳಿಗೆ-ಸರ್ವಪ್ರಕಾರದ ಅಮಾಂಶದ ಮೇಲೆ ಗುಣಕಾರಿ.
ವಿಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ ಕೆ. ಲೋಂಫೆ ಫಾರ್ಮಸಿ,
ಪನವೇಲ-ಕುಲಾಬಾ

ಬಡತನದ ಬಾಳು

★

'ಆನಂದಕಂದ'ರ ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಜೀಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

ವಾದ ಹೈದ್ವಿಕಾಸ. ಇಂದು ಕನ್ನಡ ರಸಿಕರಲ್ಲಿ ಬಹಳವಾಗಿ ಸಂಸ್ಕಾರ ಸುಪ್ತವಾಗಿದೆ; ಬಕೆಹಗಾರರಲ್ಲಿ ಅದು ಎಚ್ಚತ್ತ ಹೈದ್ವಿಕಾಸವೆನಿಸದೆ, ಅಲ್ಲಲ್ಲಿ ಹೈದ್ವಿಕಾರವೆನಿಸಿದೆ—ಎಂಬುದನ್ನು ಯೋಚಿಸಿದರೆ, ನಮ್ಮ ವಿದ್ಯಾಖಾತೆಯ ಮೇಲೆ ಪರಮಾಣು ಬಾಂಬೆಸೆಯಲೋ ಎನ್ನಿಸುತ್ತದೆ. ಸಮಾಜಜೀವನದಲ್ಲಿ ನವಚೈತನ್ಯ ತುಂಬುವುದರ ಬದಲು ಇಂದಿನ ವಿದ್ಯಾಖಾತೆಗಳು ನಿರುದ್ಯೋಗವನ್ನಷ್ಟೇ ತುಂಬುತ್ತಿವೆಯೆಂಬುದು ಸರ್ವವಿದಿತ; ಎಂದಮೇಲೆ ಯಾರ ಸಂಸ್ಕಾರ ಎತ್ತೆತ್ತ ಲಾಗೋ ?. ಇಂದಿನ ಜೀವನವು ಅರಾಜಕವಾಗಿರುವಂತೆ ಭಾವನೆಯೂ ಅರಾಜಕ ಸ್ಥಿತಿಯಲ್ಲಿದೆ. ಎಲ್ಲೆಲ್ಲೂ ಅತೃಪ್ತಿ ತಲೆಹಾಕಿದೆ. ಇದನ್ನು ಭಾವಕತ್ವದಿಂದ ಮರೆಯಲಾಗುವುದಿಲ್ಲ; ಆಸ್ವಾದಿಸಲಾಗುವುದಿಲ್ಲ; ವಾಸ್ತವವು ಉಗ್ರವಾದಂತೆ ಕಲ್ಪನಾ ವಿಲಾಸ ಕಳೆಗೆಡುತ್ತದೆ; ಭಾವಕದೃಷ್ಟಿ ಬದಲಾಗುತ್ತದೆ; ಬುದ್ಧಿಯ ವಿಶ್ಲೇಷಣದ ಪ್ರಮಾಣ ವ್ಯತ್ಯಸ್ತವಾಗುತ್ತದೆಯಲ್ಲವೇ ?

"By letters are literature is meant the expression of thought in language, whereby 'thought,' I mean the ideas, feelings, views, reasonings and other operations of the human mind— ಸಾಹಿತ್ಯವೆಂದರೆ ಭಾವ, ಸಂವೇದನೆ, ದೃಷ್ಟಿ, ವಾದ ಇವೇ ಮೊದಲಾದ ಮಾನಸಮನನ ಕಾರ್ಯಗಳ ಪ್ರಕಾಶನ" ಎಂಬ ನ್ಯೂಮನ್ನನ ಲಕ್ಷಣಾನುಸಾರವಾಗಿ, ಸಾಹಿತ್ಯವು ಭಾವಪ್ರಧಾನವಾದರೂ ತತ್ಪ್ರಕಾಶನಕ್ಕೆ ಸಹಾಯಕವಾಗಿ ಬುದ್ಧಿ ಸಹಜವಾದ ಅನುಮಿತ್ಯಾತ್ಮಕವಾದಗಳೂ ತಲೆಹಾಕುತ್ತವೆ, ನಿರ್ಣಯ ನಿಶ್ಚಾಯಕ ವಾಕ್ಯಗಳೂ ತಲೆದೋರುತ್ತವೆ. ಹೀಗಿರುವುದರಿಂದಲೇ ಒಂದೊಂದು ಕಾಲದಲ್ಲಿ ಒಬ್ಬೊಬ್ಬ ಮಹಾಸಾಹಿತಿಯ ಕೃತಿಗಳು ಜನಪ್ರಿಯವಾಗುವುವಲ್ಲದೆ ಎಲ್ಲ ಕಾಲದಲ್ಲಲ್ಲ; ಎಲ್ಲ ದೇಶದಲ್ಲೂ ಅಲ್ಲ. ಯಾವ ಆಹಾರವನ್ನಾದರೂ ತೆಗೆದುಕೊಳ್ಳಬಲ್ಲನಾದರೂ ಕಾಹಿಲೆ ಬಂದಾಗ ವೈದ್ಯ ಹೇಳಿದ ಪಥ್ಯವನ್ನೇ ಅನುಸರಿಸುತ್ತೇವಲ್ಲವೇ? ಹಾಗೇ ನಮ್ಮ ಆತ್ಮೋನ್ನತಿಗೆ ಯಾವುದು ಅವಶ್ಯಕವೆಂದು ನಮ್ಮ ಹಿತಚಿಂತಕ ವಿಮರ್ಶಕ ಹೇಳುತ್ತಾನೋ, ಅಂತಹ ಸಾಹಿತ್ಯವನ್ನು ಕವಿಯಿಂದ ಬಯಸಿದರೆ, ಕವಿಯು ಮನಸಿದುಕೊಳ್ಳಬೇಕಾಗಿಲ್ಲ; ಕವಿಗೆ ಅಂತಹ ಅನುಭವ, ದೃಷ್ಟಿ ಇಲ್ಲದಿದ್ದರೆ ಜನವೂ ಬೇಸರಿಸಬೇಕಿಲ್ಲ; ಅವರ ಪ್ರತಿನಿಧಿಯನ್ನು ಬೇರೆ ಹುಡುಕಿಕೊಳ್ಳಬೇಕು ಸ್ವಭಾವ ಭಾವಕನಾದ ಕವಿಯನ್ನು ಒಂದು ಜನಾಂಗ ಕಂಡಾಗ, ಅವನಿಂದ ಬಹುಬೇಗ ಭಾವಾವೇಶ ಹೊಂದಿ ಅವನ ಕೃತಿಗಳ ಪ್ರೇರಣೆಯಿಂದ ದೇಶದೇಳಿಗೆಗಾಗಿ ಕಾರ್ಯಪ್ರಸಕ್ತರಾಗುವುದು ಸಹಜ. ಭಾರತದಲ್ಲೂ ಕನ್ನಡದಲ್ಲೂ ಅಂತಹ ಸಾಹಿತಿಗಳಿದ್ದಾರೆ; ಇನ್ನೂ ಬರುತ್ತಾರೆ. ಆದರಿಂದ ವಿದ್ಯಾಖಾತೆಯು ತನ್ನ ಭಾವಕ ದೃಷ್ಟಿಯನ್ನು ಸ್ವಚ್ಛ ಇಟ್ಟಿರಬೇಕು.

ತಾಳು!

'ಗೀತಾಪ್ರಿಯ'

ಏನಿಲ್ಲವೆಂದಿಲ್ಲಿ ಏಕೆ ತಳಮಳಗೊಳುವೆ?
ಏನೆಲ್ಲ ಬೇಕು ಹೇಳು!
ನಾನಿಲ್ಲಿ ಇರುವಾಗ ಏನೆಲ್ಲ ನನ್ನಲ್ಲಿ
ಇರುವುದನು ಅರಸು, ಏಳು!

ಮಾತೃಭಾವಕೆ ಒಂದು ಪಿತೃಭಾವಕಿನ್ನೊಂದು
ಮೂರ್ತಿ ನೈವೆತ್ತರೇನು?
ಭ್ರಾತೃಭಾವದಿ ಬರುವ ಮಿತ್ರತ್ವವನು ತಳೆವ
ಜನರೆಷ್ಟು ಇದ್ದರೇನು?

ಸರ್ವಭಾವಗಳನ್ನು ಅರಸು ನನ್ನೊಳು ನೀನು,
ರೂಪಾನುರೂಪ ತಾಳು;
ಪರ್ವತದ ಮೇಲಿದ್ದು ಅರಸುತನವನು ಅರಸು,
ಪಡೆವೆ ನನ್ನಲ್ಲಿ ಕೇಳು!

ನನಗಾಗಿ ಇದ್ದವನು ಬಾಗಿಲ್ಲ ನತ್ತವನು
ನನ್ನನ್ನು ಪಡೆನನವನು;
ದಿನದಿನಕೆ ನನ್ನನ್ನು ನೆನೆನೆನೆಯುವಂಥವನು
ಕೊನೆಗೆ ನಾನಾಗುವವನು!

ಮರುಳುಗೊಳಿಸುವ ಮಾತು ಕಣ್ಣುಕಟ್ಟುವ ನೋಟ
ಅಭಿಮಾನ ಕೆರಳಿಸುವುವು;
ಹುರುಳಿಲ್ಲ ಇವರಲ್ಲಿ ಜೀವಕುಡುಕೆಯನೊಯ್ದು
ಮರಣಕ್ಕೆ ಹೂಡಿಸುವುವು.

ಹುಟ್ಟಿ ಬಂದಿಹೆನೆಂದು ಕೊಟ್ಟಿ ಸಂಡವನೆಂದು
ನಿಟ್ಟುಸಿರನೆಳೆಯ ಬೇಡ;
ಹೊಟ್ಟೆಯಲಿ ನಾನಿರುವೆ, ನಾ ಹುಟ್ಟಿ ಹೊರಬರುವೆ;
ತಾಳು ಎದೆಗುಂದ ಬೇಡ!

ದಮ್ಮಿನ ಬಾಧೆಗೆ ಶೀರ್ಷಾಸನವು ವಜ್ರಾಯುಧ!

ಶ್ರೀ. ಮು. ಸಿ. ಸೋಮಶೇಖರ ಶರ್ಮ, ಜಂಗಮವಾಡಿ ಮಠ, ಕಾಶಿ

★

ಅನುಭವ :— ಕೆಮ್ಮು, ದಮ್ಮು, ಶ್ವಾಸಕೋಶಗಳ ವ್ಯಾಧಿಗೆ ಶೀರ್ಷಾಸನವು ದಿವ್ಯವಾದ ಔಷಧವೆಂದು ಪ್ರತ್ಯಕ್ಷವಾಗಿ ನಡಸಿದ ಪ್ರಯೋಗಗಳಿಂದ ಗೊತ್ತಾಗಿದೆ. ಈಗಿನ ಶ್ರೀ ಕಾಶೀ ಜಗದ್ಗುರು ಮಹಾಸನ್ನಿಧಿಯವರು ಯೋಗಶಾಸ್ತ್ರದ ಅನೇಕ ರಹಸ್ಯಗಳನ್ನು ಅರಿತವರಾಗಿದ್ದು, ಶೀರ್ಷಾಸನದ ವಿಶೇಷಜ್ಞರಾಗಿದ್ದಾರೆ. ಇದು ಚಿರಕಾಲ ಅನುಭೂತವಾಗಿರುವುದರಿಂದ, ಸೂಕ್ಷ್ಮಾಂಶಗಳು ಹೊರಬಂದಿವೆ. ಪೃಷ್ಟಿಮಾಂದ್ಯ, ಬುದ್ಧಿದೋಷ, ಪಲಿತಶೀರ್ಷ, ಶಿರಃಪೀಡೆ, ಸನ್ನಿಪಾತ, ಸ್ವಪ್ನದೋಷ, ಕ್ಷಯ, ರಕ್ತವಿಕಾರ, ಪಿತ್ತಜ್ವರ, ಮೂಲವ್ಯಾಧಿ, ದೌರ್ಬಲ್ಯ, ಅಂಡವೃದ್ಧಿ, ಅಜೀರ್ಣ, ಆಲಸ್ಯ, ಅನಾರೋಗ್ಯ ಮುಂತಾದ ರೋಗಗಳಲ್ಲಿಯೂ ಶೀರ್ಷಾಸನವು ಸಮರ್ಥವಾಗಿ ಉಪಕಾರಮಾಡುವುದೆಂದು ತೋರಿದೆ. ಹತ್ತರಲ್ಲಿ ಎಂಟು ಜನಕ್ಕೆ ಗುಣಕಾರಿಯೆಂಬುದು ಶ್ರೀ ಮಹಾಸನ್ನಿಧಿಯವರ ಅನುಭವಕ್ಕೆ ಬಂದಿದೆ.

ಆಸನದ ಪದ್ಧತಿ :— ಪ್ರಾತಃಕಾಲದಲ್ಲಿ ಶೌಚಾದಿಗಳಾದ ಮೇಲೆ, ತಲೆ ಕೆಳಕ್ಕೂ ಕಾಲು ಮೇಲಕ್ಕೂ ಮಾಡಿ ನಿಲ್ಲುವುದು ಶೀರ್ಷಾಸನವಾಗಿದೆ. ಇದಕ್ಕೆ 'ವಿಪರೀತಕರಿಣಿ' ಎಂತಲೂ ಹೆಸರುಂಟು. ಗೋಡೆಯ ಆಧಾರವಿದ್ದ ಸ್ಥಳದಲ್ಲಿ ಬಟ್ಟೆಯ ಅಥವಾ ಉಣ್ಣೆಯ ಸಿಂಬಿಯ ಮೇಲೆ ತಲೆಯನ್ನಿಟ್ಟು, ಕಾಲುಗಳನ್ನು ಮೇಲಕ್ಕೆ ನೆಟ್ಟಗೆ ನಿಲ್ಲಿಸಬೇಕು. ಕೈಗಳನ್ನು ಜಾಲದಂತೆ ಕೂಡಿಸಿ ತಲೆಯ ಕೆಳಗಿರಿಸಬಹುದು; ಅಥವಾ ಎರಡು ಪಕ್ಕಗಳಲ್ಲಿ ಆಶ್ರಯಕ್ಕಾಗಿ ಊರಬಹುದು. ಬರುಬರುತ್ತಾ ಯಾವ ಆಶ್ರಯವಿಲ್ಲದಲೆ ತಲೆಯನ್ನಷ್ಟೆ ಊರಿನಿಲ್ಲಬಹುದು. (ಬರೆ ಕೈಗಳನ್ನಷ್ಟೆ, ಕೆಳಗೆ ಊರಿ, ತಲೆಯನ್ನು ಮೇಲಕ್ಕೆತ್ತಿ ನಿಲ್ಲುವುದೂ ಇದರ ವಿಶೇಷ ವಿಧಾನ. ಇದು ಕೆಲವರಿಗೆ ಮಾತ್ರ ಸಾಧ್ಯ).

ಮೊದಲು ಎರಡು ಮೂರು ನಿಮಿಷ ನಿಲ್ಲುವುದನ್ನು ಸಾಧಿಸಿ, ಆರು ಏಳು ದಿನಕ್ಕೊಮ್ಮೆ ಐದೈದು ನಿಮಿಷಗಳಂತೆ ಅವಧಿ ಹೆಚ್ಚಿಸಬೇಕು ಅರ್ಧ ಘಂಟೆ ನಿಲ್ಲುವದು ಸಿದ್ಧಿಸಿದ ಕೂಡಲೆ, ವ್ಯಾಧಿ ಕಡಮೆಯಾಗುತ್ತ ಬರುವುದು. ಕೆಲವರಿಗೆ ಬೇಗನೆ ಗುಣವಾದರೆ ಕೆಲವರಿಗೆ ಆಲಸ್ಯದಿಂದ ಗುಣವಾಗಬಹುದು. ರೋಗದ ಬಲಾಬಲ, ರೋಗಿಗಳ ಶಕ್ತಿ, ಶುದ್ಧಿಗಳನ್ನನುಸರಿಸಿ ಈ ಗುಣತಾರತಮ್ಯವುಂಟು. ಶೀರ್ಷಾಸನದಿಂದ ಒಟ್ಟಿಗೆ ಎರಡು ಘಂಟೆ ನಿಲ್ಲುವುದು ಸಾಧ್ಯವಾದರೆ, ಅವರು ಸಾಮಾನ್ಯವಾಗಿ ಒಂದು ವಿಧವಾದ ಕಾಯಸಿದ್ಧಿ ಪಡೆದಂತೆಯೇ ಸರಿ. ಇದರ ಆರಂಭದಲ್ಲಿ ಕೆಲವರಿಗೆ ಪಿತ್ತವಿಕಾರ, ದೃಷ್ಟಿಭಾರ, ಬೇಗನೆ ಹಸಿವಾಗುವಿಕೆ ಮುಂತಾದುವು ತೋರಬಹುದು. ಇದು ಹಾನಿಯನ್ನು ಮಾಡುವುದಿಲ್ಲವಾದುದರಿಂದ, ಯಾರೂ ಚಿಂತಿಸಬಾರದು. ಎಲ್ಲರೂ ಅಭ್ಯಾಸ ಮಾಡಬಹುದು. ವಿಶೇಷ ರೋಗಗ್ರಸ್ತರೂ ಕೇವಲ ಶಕ್ತಿಹೀನರೂ ಅಧಿಕ ಪರಿಶ್ರಮಪಡಲಾರರು. ಆದರೆ ಆಲಸ್ಯದಿಂದ ಬಿಡುವುದೂ ಉಚಿತವಲ್ಲ.

ಪಥ್ಯ :— ಆಯಾ ರೋಗಗಳಿಗೆ ಅನುಕೂಲವಾಗಿ ಪಥ್ಯವನ್ನು ಮಾಡುತ್ತ, ಹಗುರವಾಗಿ ಜೀರ್ಣವಾಗುವ ಸಾತ್ತ್ವಿಕಾಹಾರವನ್ನು ಮಾತ್ರ ಸ್ವೀಕರಿಸಬೇಕು. ದಮ್ಮಿನ ಬಾಧೆಯುಳ್ಳವರು ಶೀತ-ವಾತನಂಜು ವಸ್ತುಗಳನ್ನು ವರ್ಜಿಸಬೇಕು. ಗೃಹಸ್ಥರು ಋತುಗಾಮಿಗಳಾಗಿ ನಿಯಮಿತವಾಗಿ ಬ್ರಹ್ಮಚರ್ಯವನ್ನು ಕಾಪಾಡಬೇಕು. ಕೇವಲ ಬ್ರಹ್ಮಚಾರಿಗಳಿಗೆ ವಿಶೇಷ ಲಾಭವುಂಟು. ಬೇರೆಯಾಗಿ ಔಷಧವನ್ನು ಸೇವಿಸಿದರೂ ಇದಕ್ಕೆ ಹಾನಿಯಿಲ್ಲ. ಪ್ರತ್ಯೇಕವಾದ ಪರಿಸ್ಥಿತಿಯಲ್ಲಿ ವೈದ್ಯರು ಬೇಡನೆಂದು ಉಚಿತವಾಗಿ ಹೇಳಿದರೆ ಮಾತ್ರ, ಆ ವಿಶೇಷ ರೋಗಿಗಳು ಆಸನದ ಅಭ್ಯಾಸ ನಿಲ್ಲಿಸಬಹುದು. ವ್ಯಾಧಿಯು ಸಂಪೂರ್ಣವಾಗಿ ನಷ್ಟವಾಗಿ ಆರೋಗ್ಯವುಂಟಾದಾಗ, ಮೇಲಿನ ಪಥ್ಯವನ್ನು ಮಾಡಬೇಕಾಗಿಲ್ಲ ಆದರೆ ಯುಕ್ತವಾದ ಆಹಾರ-ವಿಹಾರಗಳು ಯಾವಾಗಲೂ ಲಾಭಪ್ರದವಾಗಿವೆ. ಶೀರ್ಷಾಸನವನ್ನು ಮಾತ್ರ ಸದಾ ಹಾಕುತ್ತಿರಬೇಕು; ಬಿಡಬಾರದು. ಇದು ಅತ್ಯಂತ ಲಾಭಪ್ರದವೂ ಮಹತ್ತ್ವದಾಯಕವೂ ಆಗಿದೆ. ಇದನ್ನಭ್ಯಾಸಿಸಿ ಎಲ್ಲರೂ ಸುಖಿಗಳಾಗಬೇಕೆಂದು ನಿವೇದಿಸುತ್ತೇನೆ.

೪೨ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿಯ

ಜ್ವರದ ಗುಳಿಗೆ.

ಬಾಟ್ಲಿಗೆ ೧-೮-೦

ಎಲ್ಲ ಬಗೆಯ ಜ್ವರಗಳ ಮೇಲೂ ಮಹೌಷಧ.

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಮಂಜ್ಞು ಕಂಪನಿ

ಗಿರಗಾಂವ, ಮುಂಬಯಿ.

ಉಳಿ ಮುಟ್ಟದ ವಿಗ್ರಹ

(ಕಂಡ ಕತೆಯೊಂದು)

ಶ್ರೀಮತಿ ತೊಗರೆ ಸರ್ವಮಂಗಳಾಂಬಾ, ಬಳ್ಳಾರಿ

★

ಯಾವ ಕಾಡಿನ ಮುಳ್ಳುಕಂಟಿಯಲ್ಲಿ ಎಂತಹ ಪರಿಮಳದ ಹೂವು ಅರಳುತ್ತಿರುವುದೊ, ನೋಡಿದವರಿಗೇ ಗೊತ್ತಾಗ ಬೇಕು. ಖಾಕೀವೇಷದ ಭೀಕರಾಕಾರದ ಬೇಡರ ವೀರಪ್ಪ, ಇಂತಹ ಮುಳ್ಳುಕಂಟಿಯಲ್ಲರಳಿದ ಒಂದು ಹೂ!

★

ಸೈನಿಕರ ಸಂಚಾರದ ಕಾಲ. ಅನ್ನಕ್ಕೆ ರಟ್ಟುರಾಜ್ಯವಾದ ಕಾಲ. ಪ್ರಯಾಣಕ್ಕೆ ದುಡ್ಡುಕೊಟ್ಟು ದ್ವಂದ್ವಗಳಿಸಿ, ದಬ್ಬಿಸಿಕೊಳ್ಳುತ್ತ ನಿಂತೇ ನೆಲ ನೋಡುವ ಶಿಕ್ಷೆಯ ಕಾಲ. ಬಕಪಕ್ಷಿಗಳಂತಹರ ಹೊಂಚಿನಿಂದ ಸುಲಿಗೆಯ ಸೇನೆಯೊಂದುವ ಕಾಲ. ಇಂತಹ ಪ್ರಳಯಕಾಲದಲ್ಲಿ ಪಂಢರೀಪುರ ನೋಡಬೇಕೆನ್ನುವ ಪುಂಡಾಟದ 'ಖಯಾಲು' ಹುಟ್ಟಬೇಕೇ ನನಗೆ! 'ಈಗ ಬೇಡ ಬಿಡು' ಎಂದು ಮನಸ್ಸನ್ನು ವಿವೇಕವು ತಿದ್ದಿದರೆ 'ಗಾಳಿ ಬಟ್ಟಾಗಲೇ ತೂರಿಕೊ' ಎಂದು ವಿವೇಕವನ್ನು ಮನಸ್ಸು ತೀಡುತಿತ್ತು. ಮನಸ್ಸು, ವಿವೇಕ ಇವುಗಳ ಚಕಮುಕಿಯಲ್ಲಿ "ಹೇಗೂ ಪಾಂಡುರಂಗನ ಜಾತ್ರೆ; ಹಿಂದು ಮುಂದು ನೋಡುವುದೇಕೆ? 'ನಾಲ್ವರ ಕೂಡ ನಾರಾಯಣ' 'ಪರಿಜೇ ಕೂಡ ಗೋವಿಂದ' ಎಂದರಾಯಿತು!" ಎಂಬ ನಿರ್ಧಾರದ ಕಿಡಿ ಹೊರಬಿದ್ದಿತು. ಅಂತು ಬುದ್ಧಿಗೆ ಬುದ್ಧಿಹೇಳಿ ಹೊರಟೇಬಿಟ್ಟಿವು— ನಾದಬ್ರಹ್ಮನ ದೇಗುಲ ನೋಡುವುದಕ್ಕೆ. (ಕೇಳುವುದಕ್ಕೆ).

ಬಳ್ಳಾರಿಯಿಂದ ನಾವು ಗುಂತಕಲ್ಲಿಗೆ ಬಂದುಬಿದ್ದೆವು; ಆದರೆ ಅಂದು ಪೂನಾ 'ಮೇಲ್' ಬರುವುದಕ್ಕೆ ಇನ್ನೂ ಎರಡುವರೆ ಗಂಟೆಗಳ ಕಾಲ ನಿಲಂಬವಿದೆ ಎನ್ನುವುದು ತಿಳಿಯಿತು. ಇನ್ನೇನು, 'ಶೆತ್ತೇ ಬಜೇ' ಎಂಬ ತಪಸ್ಸಿಗೆ ಪ್ರಾರಂಭಿಸಿತು .... ಆ ಗಾಡಿಯ ಒಡಲನ್ನಾಶ್ರಯಿಸಲಿರುವ ಜನಜಂಗುಳಿ. ಮನಸ್ಸು ಚಲಿಸಿದಾಗ ಆ ಜಂಕ್ಷನ್ನಿನ ವಿವಿಧ ಜನಾಂಗಗಳ ಸಂಗಮದ ಕಡೆಗೆ ಒಮ್ಮೆ; 'ಭಾಷೆ ಎಷ್ಟುವಿಧ?' ಎಂಬ ಕೇಕೀಕರಣದ ಕಡೆ ಇನ್ನೊಮ್ಮೆ; "ಇದು ಏನು ಗಂಡೋ, ಹೆಣ್ಣೋ?" ಎನ್ನುವ ವೈಚಿತ್ರ್ಯದ ವೇಷಗಳ ಕಡೆ ಮತ್ತೊಮ್ಮೆ. ಇವೆಲ್ಲವು ಸಾಕೆನಿಸಿದಾದ ಮರೆತ ತಪಸ್ಸು ಮತ್ತೆ ಪ್ರಾರಂಭ: "ಗಂಟೆ ಎಷ್ಟು?" ಎಂದು ಗಡಿಯಾರ ನೋಡುವುದಕ್ಕೆ. ಕಣ್ಣಿನ ಕಸರತ್ತಿಗೆ ಕನಿಕರ ತೋರಲು ಕಾಫಿ ಹೋಟೆಲ್ ಕಡೆಗೆ ಹೊರಟರೆ, ಒಂದು ಜಂಕ್ಷನ್ನಿನ ಜನದ ದಾಳಿಗೆ—ಅದು ಮೇಲಿಂದ ಮೇಲೆ ಮಾಡುವ ದಾಳಿಗೆ—ಒಂದೆರಡು ಹೋಟೆಲ್‌ಗಳು ತಡೆದುಕೊಳ್ಳುವ ಬಗೆ ಹೇಗೆ? ದಾಳಿಗೆ ತಡೆದುಕೊಳ್ಳಲಾರದೆ ಪಾತ್ರೆಗಳೆಲ್ಲಾ ತಿಕ್ಕುವವರ ಕೈಗಳ ಅಂಡರ್ ಗ್ರಾವುಂಡ್ ಸೇರಿದ್ದುವು. ಜನರು ತಡೆದುಕೊಳ್ಳಲಾಗದ ಬೇಸರವನ್ನು ಆಗಾಗ 'ಛತ್' ಎಂದು ಗಾಳಿಗೆ ಹೇಳಿಕೊಳ್ಳುತ್ತಿದ್ದರು.

ಇಂತಹ ಬೇಸರದ ಕಾಲವನ್ನು ಬಲವಂತದಿಂದ ತಳ್ಳುತ್ತಿರುವಾಗ 'ಸರ್‌ದಾರ್, ಬಂದಿ; ಸರಿದ್ ನಿಲ್ಲಿ!' ಎಂಬ ಸೊಲ್ಲನ್ನು ಸಾರುತ್ತ, ತನ್ನ ಜೀವನವೆ ಜನಗಳಿಗೆ—ಎಂಬಂತೆ ಆ ಮಹಾದೇಹವನ್ನು ಮಾನವರಿಗೊಪ್ಪಿಸಲು, ತ್ಯಾಗಮಾಡಿದ ಯೋಗಿಯಂತೆ ಪ್ಲ್ಯಾಟ್‌ಫಾರಮ್‌ನಲ್ಲಿ ಬಂದು ನಿಂತಿತು ಪೂನಾಮೇಲು. ಬರಗಾಲದಲ್ಲಿ ಅಧಿಕಮಾಸವೆನ್ನುವಂತೆ. ಮೊದಲೇ ಯುದ್ಧಕಾಲ; ಮೇಲೆ ಎರಡುವರೆ ಗಂಟೆಗಳ ಕಾಲ ನಿಲಂಬ! ಇನ್ನು ಹೇಳಬೇಕೆ ಆ ಭವಣೆಯನ್ನು! ರಶಿಯನ್ನರು, ಜರ್ಮನರು ಸಹ ಅಷ್ಟು ವೀರಾವೇಶದಿಂದ ಮುನ್ನುಗ್ಗುತ್ತಿದ್ದರೋ ಇಲ್ಲವೋ ನಾನಂತೂ ಕಾಣೆ! (ನೀವು ಇರಬಹುದು!) ಆದರೆ ಇಲ್ಲಿ ಇಳಿಯಬೇಕೆನ್ನುವವರ ಅವಸರ! ಹತ್ತಬೇಕೆನ್ನುವವರ ಆತುರ! ಇವೆರಡರ ದಾಯಾದಮತ್ಸರ ನೋಡಿದರೆ, ಆ ಕಾಳೆಗವು ಇದಕ್ಕೆ ಹೊರತೇ?—ಎನಿಸದಿರದು. ಅಲ್ಲಿ ಸೈನಿಕರನಿಸಿಕೊಳ್ಳುವ ಮಾನವರಿಗೆ ಕಬ್ಬಿಣದ ಅಸ್ತ್ರಗಳಾದರೆ, ಇಲ್ಲಿ ಪ್ರಯಾಣಿಕರೆನಿಸಿಕೊಳ್ಳುವ ಸೈನಿಕರಿಗೆ ಕೈಗಳೆ ಶಸ್ತ್ರಗಳು; ಇಷ್ಟೇ ವ್ಯತ್ಯಾಸವೆಂದು ಅಳತೆಗೋಲಾಗಿ ನೋಡುತ್ತಿದ್ದೆ. ನಿಂತು ನಿಂತಂತೆ 'ನಾಲ್ವರಂತೆ ನಾರಾಯಣ' ಎಂಬ ಮಹಾಮಂತ್ರವನ್ನು ಜಪಿಸುವ ಸರತಿ—ಸಮಾಪಿಸಿತು. ಜಪಾನಿನ ಸಬ್‌ಮೆರೀನಿನಂತಾದೆವು.

ಟೈಲಿನಲ್ಲಿ ಹತ್ತಿ ಕುಳಿತುಕೊಳ್ಳುವ ವರೆಗೂ ಮಾನವನಿಗೆ ಅದಾವ ತನ್ಮಯತೆ ತಾಂಡವವಾಡುತ್ತದೆಯೊ ಏನೊ; ಮಾನವನನ್ನು ಸೃಷ್ಟಿಸಿದ ದೇವನಿಗೆ ವೇದ್ಯ ಅಥವಾ ಆ ಆ ಬಗಿಬಂಡಿಗಳ ಮಾಲಿಕರಿಗೆ ವೇದ್ಯ. ಆಲ್ಲಿ ಬುಳಿವವರಿರುವರೆಂಬ ಅರಿವಿಗೆ ಬಂಡಿಗಾಲಿ! ಸ್ಥಳದ ಕಂಪನದಿಂದ ಓಟವನ್ನೇ ಹೋಲುವ ಆ ನಡಿಗೆ ಏನು! ನಿಡಿದು ನಿಡಿದಾಗಿ ಬಿಡುವ ಶ್ವಾಸದ ಅಬ್ಬರವೇನು! ಮುಖದಲ್ಲಿ ಆ ಕಂಗಾಲ ಕಳೆ ಏನು! ಆ ಕಂಗಾಲತನದಲ್ಲಿ, ಒಬ್ಬರಿಂದೊಬ್ಬರಿಗೆ ಅಸಂಬದ್ಧ ಆಲಾಪನೆ ಆಳತೆಯಿಂದಾರಿ ನಡೆದರೂ ಆಕ್ಷೇಪಣೆಯೆ ಬೇಡವೇ—ಸ್ಟೇಷನ್ ಎಂಬ ಇಂದ್ರಜಾಲದಲ್ಲಿ?

ನಾವು ಇಂತಹ ಸ್ಥಳದ ಅವಸ್ಥೆಯಲ್ಲಿ ತೊಳಲಾಡುತ್ತ, ತಬ್ಬಿಬ್ಬಾಗಿ ತೂರಿ ಕುಳಿತುಕೊಂಡೆವು. "ಟಿಕೇಟಿಗೆ ತೆತ್ತ ದುಡ್ಡು. ವ್ಯರ್ಥವಾಗಲಿ ಸ್ಥಳವಂತೂ ಬೊರೆಯಿತಲ್ಲ" ಎಂಬ ಧೈರ್ಯಬಂದ ಮೇಲೆ, ಮುಖದಲ್ಲಿ ಒಂದು ಯಾಗ ಪೂರ್ಣಗೊಳಿಸಿದ ಪೌರುಷದ ಕಳೆ ಮೂಡಿತು. ಕಳೆದುಂಬಿದ ಕಣ್ಣುಗಳಿಂದ ಅತ್ತ ಇತ್ತ ಸುತ್ತ ನೋಡಿದೆವು. ನೋಡಿದರೆ ಡಬ್ಬಿತುಂಬ ಖಾಕೀಬಟ್ಟೆಯ ಭೂತಗಳೆ! ಇಳಿದು ಬೇರೆ ಪೆಟ್ಟಿಗೆಯಲ್ಲಿ ಹತ್ತಬೇಕೆಂದರೆ ಸಮಯವಿರಲಿಲ್ಲ.

ಅಲ್ಲಿಯೇ ಗಟ್ಟಿಯಾಗಬೇಕೆಂದರೆ ಸೈನಿಕರ ವಿಷಯವಾಗಿ ಹಾಂಕೆಯ ಸಮಾಚಾರಗಳನ್ನು ಕೇಳಿದ ದಿಗಿಲು ಕಾಡಹತ್ತಿತು. ಆದರೆ ಇದ್ದ ಧೈರ್ಯಕ್ಕೆ ಧೀರತ್ವದ ಟಾನಿಕ್ ತೆಗೆದುಕೊಳ್ಳಲು, ಆಗ ಭಾರತದ ವೀರ ಮಹಿಳೆಯರ ಸ್ಮರಣೆಯು ಬಾರದೆ ಉಳಿಯಲಿಲ್ಲ. ಅಂತು ಗಾಡಿಯು "ಭಾರ....ಬಹಳ.... ಹೇಗ್ಹೋಗ್ಲಿ! ಭಾರ ಬಹಳ.. ಹೇಗ್ಹೋಗ್ಲಿ!" ಎಂಬ ಪಲ್ಲವಿಯನ್ನು ಮುಗಿಸಿ, "ರುಸ್ತುಮ್ ನಾನೇ.. ನನ್ ಸರಿಯಾರು?" ಎನ್ನುವ ಪರಾಕ್ರಮದ ಹಾಡನ್ನು ಗರ್ಜಿಸುತ್ತಾ, ನೆಲ-ಪೈಪ್ಗಳನ್ನು ಹಿಂದೋಡಿಸುತ್ತಿತ್ತು.

ನಾವು ಕುಳಿತ ಡಬ್ಬಿಯಲ್ಲಿ ಪೃಥ್ವೀಳೆಯ ರಾಜ್ಯದ ಯೋಧರು ಕೆಲವರು; ಹುಕ್ಕ-ಬುಕ್ಕರ ರಾಜ್ಯದವರು ಕೆಲವರು. ಇನ್ನುಳಿದವರು ನಾಲ್ಕಾರು ಜನ ಪ್ರಯಾಣಿಕರು. ಆ ಯೋಧರಲ್ಲಿ ಪಕ್ಕಾ ಕನ್ನಡದ ಯೋಧನೊಬ್ಬ. ಅವನ ನಡೆ, ನುಡಿ, ಮನದ ಧ್ಯೇಯ ಇವು, ಹಿಂದಣ ಧರ್ಮರಾಜ್ಯಗಳ ಸ್ಥೈರ್ಯ, ಗೌರವ, ಉತ್ತಮರ ಪಾಲನೆಯು ಮರ್ಮವನ್ನೇ ಒಳಗೊಂಡಿದ್ದುವು. ಆ ಯೋಧನ ನೂತನದಲ್ಲಿ ಪೂರ್ವಜತ್ವದ ಮಮಕಾರವು ಒಡೆದು ಮೂಡುತ್ತಿತ್ತು. ಜಾಕಿ ಬಟ್ಟೆ ಹಾಕಿಕೊಳ್ಳುವ ಪ್ರಾಣಿಗೆ ಇವನು 'ನಾಲಾಯಿಖು' ಎಂದರೂ, ಆ ಜಾಕಿ ಬಟ್ಟೆಯ ಸೈನ್ಯಸಾಗರಕ್ಕೆಲ್ಲಾ ಗುರುವಾಗಿರಲು ಇವನಿಗೆ ಅರ್ಹತೆ ಇದೆ ಎಂದುಕೊಳ್ಳಬಹುದಿತ್ತು ಅವನ ವಿನಾಕಿನ ಓಜೆ.

ನಾವು ಕುಳಿತುಕೊಳ್ಳುವ ಅವಸರದಲ್ಲಿ ಒಬ್ಬ ಯೋಧನ ಸ್ಥಳವನ್ನು ಅಪಹರಿಸಿ ಬಿಟ್ಟಿದ್ದೆವು. ಆ ಅಪರಾಧಕ್ಕಾಗಿ ಹಾಸಿಗೆ, ಪೆಟ್ಟಿಗೆಗಳನ್ನು ಎತ್ತಿ ಸರಿಸಿ, ನಿಂತ ಯೋಧನಿಗೆ ಸ್ಥಳ ಒದಗಿಸಿ ಕೊಡಲು ಅವಸ್ಥೆಪಡುತ್ತಿದ್ದೆವು. ಆ ಭರದಲ್ಲಿ 'ಸರಿಸು, ಸರಿ' ಎನ್ನುವ ಕನ್ನಡಿಗರ ದಿವ್ಯಮಂತ್ರವನ್ನು ಉಚ್ಚರಿಸುತ್ತಿದ್ದೆವು ನಮಗೆ ನಾವೆ. ಆ ಮಂತ್ರದ ಮಹಿಮೆಗೆ ಮುಗ್ಧನಾದ ಆ ಯೋಧನ ಮುಖವು, ಸಂತಸದಿಂದ ಅಪೆ ಅರಳಿದ ಅಲರಿನಂತಾಯಿತು. ಅಲ್ಲದೆ ಆ ಕಾದಾಳು "ಇರ್ಲಿ ಬಿಡ್ರಿ ಸಾಮಿ! ನಿಂತು, ನಡೆದು ಸುಗ್ಗಾದ ನಮ್ಗೆ ಸ್ವಲ್ಪೊತ್ತು ನಿಂತ್ರೆ ಕಷ್ಟೇನು ಸಾಮಿ? ಹೆಣ್ಮಾಗಳಿಗ್ಯಾಕೆ ಕಷ್ಟ ಕೊಡ್ತೀರಿ! ನಿನ್ನೆ ರಾತ್ರೀ ಒಬ್ಬೆಣ್ಮಾಗ್ಳು ಕೂಸಿನ್ನೆತ್ಕೊಂಡು ನಿಂತೇ ಇದ್ಲು ನೋಡ್ರಿ ಪಾಪ! ನಮ್ಮಿಮಿಲ್ಟ್ರೀ ಜನಕ್ಕೆ ಜಬುರುದಸ್ತಿ ಜಾಸ್ತಿ ಆಲ್ರೀ! ಹೊಟ್ಗೆ ಹಿಟ್ಟಿಲ್ದೆ ಮೈಗೆ ಬಟ್ಟೆಲ್ದೆ ಮಿಲ್ಟ್ರಿ ಸೇರಿದ ಜನ ನಾವು; ಇನ್ ಕೇಳ್ಬೇಕಾ ಸಾಮಿ, ಆ ಬಡಾಯಿನ! ಬೆಂಚಿ ಬೆಂಚಿ ತುಂಬ ಮಲ್ಗಿ ಬಿಟ್ರು. ಆ ಹೆಣ್ಮಾಗ್ಳವಸ್ಥೆ ಬ್ಯಾಡ! ನೋಡೋದು ಯಂಗ್ರೀ? ನನ್ನ ಕೆಟ್ಟ್ ಬ್ಯಾಗ್ ಕೆಳ್ಗಾಕಿ ನಾನು ಆದ್ರ ಮ್ಯಾಲೆ ಕುಂತು, ಆ ಯಮ್ಮಗೆ ಜಾಗ ಮಾಡ್ಕೊಟ್ಟೆ ಏನ್ಮಾಡ್ಬೇಕು ಸಾಮಿ! ನನ್ನ ಕೈಲಾದ್ದು ನಾ ಮಾಡ್ದೆ. ಈ ಕಾಕೀ ಬಟ್ಟೇನೇ ಸ್ಥಿರಾ ಅಂತ ಕೆಲ್ಸರಿಗೆ. ಈ ಬಟ್ಟಿ, ಈ ಜೊತ್ತು ಇಲ್ದಿದ್ರೆ ನಾಳೆ ಹೋಗೋದಂತೂ ಕರೆವ್ರಾ! ಅದಕ್ಯಾಕೆ ಈ ಭೋಗ! ನಾವ್ ನಾನೆಲ್ಲಾ ಒಂದೇ ಅಲ್ವಾ ಸಾಮಿ! ಬಟ್ಟೆ ಬ್ಯಾರ್ಯಾದ್ರೆ ಮನಿಸ್ಯಾ ಬ್ಯಾರ್ಯಾಗ್ಬೇಕಾ! ನನ್ಗೆ ಈ ದಬ್ಬಾಕ್ಕೆ ನೋಡಿ, ನೋಡಿ ರೋಸ್ಕೆ ಬಂದೈತ್ರೀ! ಸಾಕ್ ಮಾಡಿಕೊಳ್ಳಾಕೆ ಬರಾಂಗಿಲ್ಲ; ಇವರ ನಡ್ವೆ ಇರೋದಂದ್ರೆ, ಅದು ಯಂತಾ ಊರಾಗ ಅದು ಯಾರೋ ಇದ್ರೆ ಹುಚ್ಚ ಅಂತಾರಲ್ರೀ ಗಾದೆ ಮಾತು.....ಅಂಗೈತ್ನೋಡ್ರಿ ನನ್ ಕಷ್ಟ! 'ಹೀಂಗಲ್ಲಪ್ಪ ಹೀಂಗೆ' ಅಂತ ಅವ್ರಿಗೆ ಏನಾದ್ರು ತಡಿಲಾರ್ದೆ ಹೇಳಾಕೋದ್ರೆ, 'ನಿನ್ನೆಂತೋನು ಇಂತಲ್ಲಗ್ಯಾಕೆ ಬಂದ್ಯೋ ಪೆಂಗೆ!' ಅಂತ ಎಲ್ಲಾರ್ಗ ನನ್ನ ತೋರ್ಸಿ ತೋರ್ಸಿ ನಗತಾರೆ. ಏನ್ಮಾಡಬೇಕು ಸಾಮಿ! ಎಮ್ಮೀ ಕರೂನ್ದಿಂದೆ ಹೋದ ಆಕಳ ಕರೂನ್ಹಾಂಗಾಗೈತೆ ನನ್ನ ಪಾಡು! ಮಕಾತಪ್ಸಿ ಕುಂದ್ರಾಕ ವಲ್ಲೆನು-ಸ್ತ್ರೀ ಮನ್ಸು! ಮತ್ತೆನಾದ್ರೂ ಅವ್ರಿಗೆ ಸಿಕ್ಕೊ, ಆಯ್ತು ಸಾಮಿ! ನಮ್ಮ ನೂರು ವರುಸ ತುಂಬಿದಂಗೆ! ಸತ್ರು ಸಾಯ್ಬೌದು, ಅವ್ರು ಕೊಡೋ ಅವಸ್ಥಿ ಬ್ಯಾಡ್ರಿ! ಇಗೋ, ಇಲ್ಲಿ ನೋಡ್ರಿ! ಈ ಕೊರಳಾಗಿನ ತಾಳ—ತೌರಮನೀದೊಂದು ಗಂಡನಮನೀದೊಂದು ಇರೋದಿಲ್ರಾ ಹೆಣ್ಮಾಕ್ಕಳ ಕೊರಳಿಗೆ.... ಅಂಗ ಈ ಎರಡು ಪದಕಗ್ಳು! ನಾವೇನಾದ್ರು ಸ್ವರ್ಗಕಂಡ್ವೋ—ಸ್ವರ್ಗ ಏನ್ಕಾಣೋದ್ರಿ ಹಿಡಿ ಮಣ್ಣು ಕಾಣಾಂಗಿಲ್ಲ!—ಈ ತಾಳ ಬೊಟ್ನಾಗ ಒಂದು ತಾಯಿಗೆ ನುಗ, ಇನ್ನೊಂದು ಹೆಂಡ್ತಿಗೆ ಗಂಡಾಗಿ ಅವನ ಮನಿಗೆ ಹೋಗ್ತಾವ್ರಿ! ಹೆಣ್ಣಿನ ಕೊರಳ್ಗೆ ತಾಳಿ ಕಟ್ಟೋ ಗಂಡ್ಸಿನ ಕೊರ್ಕಿಗೆಲ್ಲಾ ತಾಳೀ ಕಟ್ಟೈತ್ನೋಡ್ರಿ, ಈ ಸರ್ಕಾರ! ನನ್ನ ಎಂತೋ ನಂದ್ರೆ ಅನ್ರಿ, ಸರಕಾರಕ್ಕೆ ನರೀಯಿಕ್ತಿ ಜಾಸ್ತಿ ಸಾಮಿ! ನಮ್ಮ ಶಕ್ತಿ ಅವ್ರಿಗೆಲ್ರಿ! ನಮ್ಮ್ ನಮ್ಮೊಳ್ಗೆ ಒಕ್ಕುಟ್ಟೊಂದಿಲ್ರಿ, ಹೊಟ್ಟೆ-ಕಿಚ್ಚೇ ಜಾಸ್ತಿ! ಏನ್ಮಾಡ್ಬೇಕ್ರಿ, ಅದೊಂದಿಪ್ಪೆ ಗಾಂಧೇರು, ನೆಹರೋರು ಜೈಲ್ ಕಂಡು ಬರುತಿದ್ರ್ಯಾ?" ಎಂದು ಸ್ವಾತಿ ಮಳೆ ಸುರಿದ ಹಾಗೆ ಮಾತು ಸುರಿಸಿ, ಶ್ವಾಸವಾಡಿಸಲು ಸ್ವಲ್ಪ ಸಮಯ ತೆಗೆದುಕೊಂಡ.

ಅವನ ಸರಳತನಕ್ಕೂ, ಹೇಗೋ ಪ್ರಾರಂಭಿಸಿ ಎಲ್ಲೋ ನಿಲ್ಲಿಸಿದ ಮಾತಿಗೂ, ಆ ಮಾತಿಗೆ ಮಸಾಲೆ ಹಚ್ಚಿ ಹಂಗಿನ ಒಗ್ಗರಣೆ ಕೊಟ್ಟು ಹೇಳುತ್ತಿರುವ ಗ್ರಾಮ್ಯ ಶೈಲಿಗೂ ಮನಸೋತೆವು ನಾವು. 'ಪರಿಚಯವನ್ನು ಬೆಳೆಯಿಸಲು ಸಾಧನವಾದ 'ನಿನ್ನ ಹೆಸರೇನಪ್ಪಾ?' ಎನ್ನುವ ಸಮ್ಮೋಹನಾಸ್ತ್ರವನ್ನು ಉಪಯೋಗಿಸಿದರು ನನ್ನವರು. ಆ ವೇಳೆಗಾಗಲೆ ನನ್ನ ಭಯವೆಲ್ಲವೂ ಭರದಿಂದ ಬಳಗತ್ವದತ್ತ ನುಗ್ಗುತ್ತಿತ್ತು. "ತಾಯಿ ತೊಟ್ಲದಾಗಿಟ್ಟ ಹೆಸರು ಈರಪ್ಪರೀ! ಈಗ ನಾನೇ ಸಂಪಾದಿಸ್ಕೊಂಡ ಹೆಸ್ರು ಒಂದ್ರ ಬಗಲು ಒಂದು ಬರೀ ಅಂಕಿಗ್ಳೇ ಸಾಮಿ! ನಾನ್ ನೋಡ್ರೀ, ಕನ್ನಡ ಮಾತು ಕೇಳ್ದೆ ಕಂಗಾಲಾಗೀನ್ ಸಾಮಿ ಇಲ್ಲಿ, ಈಗ ನೀವು ಮಾತಾಡೋದು ಕೇಳಿ, 'ನಮ್ಮ್ ಬಳಗಾನ ಕಂಡೆ ಬಿಡು' ಅನ್ನೋಷ್ಟು ಸಂತೋಸ ಆತ್ನೋಡ್ರಿ! ಯಾವ್ದೂಗೆ ಸಾಮಿ ನೀವ್ ಹೋಗೋದು?" ಎಂದ. ಹೆಸರು ಕೇಳಿದುದಕ್ಕೆ ಊರು ಕೇಳಿ ಮುಯ್ಯಿಗೆ ಮುಯ್ಯಿ ಮುಟ್ಟಿಸಿದ ವೀರಪ್ಪ. ಆವ ಇಂತಹ ಊರಿಗೆ ಎಂದು ಹೇಳುವುದರೊಳಗಾಗಿ, ನುಡಿಯ ಪ್ರೇಮ

ಬೀಗಕೊಟ್ಟ ಬಾಯಿಯ ಭರಬರಾಟೆಯನ್ನು ತಡೆದು ಹಿಡಿಯಲು ಸಾಧ್ಯವಾಗಲಿಲ್ಲ ವೀರಪ್ಪನಿಂದ : "ನೋಡಿ ಸಾಮಿ! ನಾವು ಹೋದ ಕಡೆ ನಮ್ಮೂರಿನ ಕಾಗೆ, ಗುಬ್ಬಿಗಳನ್ನಾದರೂ ನೋಡಾನಾ ಅಂದ್ರೆ ಅವ್ನ ಇಲ್ರಿ ಮಿಲ್ಟ್ರೀರು ಹೋದ ಊರ್ಹೆಸ್ರು ಹೇಳ್ಬಾರ್ದಂತ ರೂಲ್ಸು ಸಾಮಿ! ಆದ್ರೂ ಆ ರೂಲ್ಸೇನು ಮಾಡೀತು ಬಿಡ್ರಿ, ನಮ್ ನನ್ಮಮ್ಮ ಮುಂದೆ ಹೇಳಾಕೆ! ಅಂದ್ರೆ ಉಪ್ಪು ತಿಂದದ್ಕೆ ಹುಲ್ಲಾಕ ಒಗೀಬೇಕ್ರಿ? ದೇವ್ರಿಗಂಜಬೇಕು. ಅದನ್ನ ಕೇಳ್ಯಾದ್ರೂ ಮಾಡೋದೇನು ಬಿಡ್ರಿ ಸಾಮಿ! ಆ ಊರು ಹೆಸ್ರು ಯಾರ್ಗೂ ಬ್ಯಾಡ!" ಎಂದ ಕಟ್ಟಾಜ್ಞೆಯ ಕರ್ತವ್ಯಕ್ಕೆ ಕಡೆಗಾಗದ ಕನ್ನಡಿಗ.

ವೀರಪ್ಪನು ತಮ್ಮ ಊಟದ ವಿಷಯವನ್ನು ಹೇಳುತ್ತಾ "ಇಲ್ಲಿ ಅಕ್ಕಿ, ಗೋದಿ, ಚುಮ್ಮೆಣ್ಣೆ ಯಲ್ಲಾದ್ರೂ ಕಷ್ಟ ಅಂತಲ್ರೀ? ಆಗ್ದೇನ್ ಮಾಡೀತ್ರಿ! ನಾವು ಅಲ್ಲಿ ಹೊಟ್ಟೇ ತುಂಬ್ಸೋದೆಲ್ಲಾ ನಮ್ಮ ದೇಶದ ಮುಂದೀ ರಕ್ತನೇ ಸಾಮಿಾ! ಉಣ್ಣಾಗೆಲ್ಲಾ ನನ್ಗೆ ಇದೇ ಧ್ಯಾಸ! ಅಲ್ಲಿ ನೋಡ್ರಿ, ನಿಟ್ಟು ನಿಟ್ಟು ಗೋದೀ ಹಿಟ್ಟಿನ ಚೀಲ, ಮೈದಾ ಹಿಟ್ಟಿನ ಚೀಲಗಳ್ನೆಲ್ಲಾ, ನಾವು ಬಿಟ್ಟು ಬರೋ ಊರ್ನ ಸಮುದ್ರಕ್ಕೆ ಸುರುವಿ ಸೇತ್ಬೆ ಕಟ್ಸೋದ್ರೀ! ಪೆಟ್ರೋಲಂತು ಬ್ಯಾಡ ಸಾಮಿಾ, ಆದ್ರಿಂದೇ ಬಸ್ಸುಗಳ್ನ ತೊಳಿತಾರ್ರಿ. ಅದೇನೋ ಹೇಳ್ತಾರಲ್ರಿ 'ಹುಚ್ಚುಮುಂಡೆಯ ಮದಿವ್ಯಾಗ ಉಂಡೋನೇ ಜಾಣಾ' ಅಂತ. ಈಗ ಅಂಗೇ ನೋಡ್ರಿ ನಮ್ಗೆ: ದಿನ ದಿನಾ, ಡಬ್ಬ್ಯಾಗೀ ತಾವಲ್ರಿ ಹಣ್ಣು! ಆ ಡಬ್ಬಿ ಒಂದು, ಬಿಸ್ಕತ್ತಿನ ಪೊಟ್ಣ ಒಂದು, ಹನುಮಂತದೇವ್ರ ವಂಶಸ್ಥನ ಹೆಸರ್ರೀ ಅದು-ಜಾಂಬೋ, ಜಾಮೊ!— ಅದನ್ನ ಒಂದು ಡಬ್ಬಿ ಕೊಡ್ತಾರ್ರಿ. ಎಷ್ಟಂತ ತಿಂಬೋದು ಸಾಮಿ! ಒಬ್ರಿಗೊಬ್ರು ಕೊಡಾಂಗಿಲ್ಲ, ಯಾರ್ನು ಅವ್ರು ತಿಂದು ದಕ್ಕೆಸ್ಕೊಂಡ್ರೇ ಸಾಕು. ಬರೀ ಅದರ ವಾಸ್ನೇ ಕುಡ್ದು ಕುಡ್ದೇ ಕಕ್ಕಾಂಗ ಆಗತೈತ್ರಿ! ಬೇಕಿದ್ರೆ ತಿಂಬೋದೇ ಸೈ. ಇಲ್ದಿದ್ರೆ ಸಮುದ್ರಾನಾ ಕಾಣುಸೋದ್ರೆ ಅವತ್ಕೆ! ಅಲ್ಲೇನ್ರಿಬ್ರಿ, ಮನಿಸ್ಯಾರ್ನೇ ಕಾಲಿಡ್ದು ಒಗೀತಾರೆ; ಈ ಡಬ್ಬಿಗಳ್ನ ಯಾರು ಕೇಳಬೇಕು! ಸತ್ತವ್ನ ಸುದ್ದಿ ಅವ್ನ ಮನೆಯವ್ರಿಗೆ ತಿಳೀಬೇಕಂದ್ರೆ, ಅಪ್ಪುವ್ರ ಪುಣ್ಯದ ಮೇಲೆ ಅಕ್ತೆ ನೋಡ್ರಿ! ಒಬ್ಬನ್ದು ಮೂರು ದಿನ್ಕೆ ತಿಳ್ದಿದ್ರೆ, ಇನ್ನೊಬ್ಬನ್ದು ಮೂರು ತಿಂಗ್ಳೋ-ತಪ್ಪಿದ್ರೆ ಮೂರು ವರ್ಷ ಆದ್ರೂ ಆಯ್ತೇ! ಮತ್ತೆ, ಪತ್ತೆ ಇಲ್ದೇ ಹೋದ್ರೂ ಹೊಯ್ತೇರ್ರೀ! ಅಲ್ಲಿ ಕ್ಯಾಪ್ಟನ್ನು, ಮೇಜರ್ರು ಅಂತ ಇರ್ತಾರಲ್ರಿ ಆ ಕೆಂಪು ಜನ; ಆ ಜನಕ್ಕೆ ನೋಡ್ರಿ, ಕಂಡಾಗೆಲ್ಲಾ ಒಂದು ಭರ್ಜರೀ ಮಿಲ್ಟ್ರಿ ಸೆಲ್ಯೂಟ್ ಹೊಡದ್ರೆ ಸಾಕು ಸಾಮಿ; ನಮ್ ಜನಕ್ಕೆ ಲಂಚ ಕೊಟ್ಟಾಂಗೇ ನೋಡ್ರಿ!" ಎಂದ ಒರೆಗಲ್ಲಿನಂತಹ ಮಾತನ್ನು.

ಹಾಗೆಯೆ ಮಾತಿನ ಪ್ರವಾಹವು ಕಾಯಿಲೆ, ಗಾಯಾಳುಗಳ ವಿಷಯದ ಕಡೆಗೆ ಹೊರಳಿತು: "ಆಸ್ಪತ್ರೇಲಿ ಇರ್ತಾರಲ್ರಿ ಆ ನರ್ಸಮ್ನೋರು; ಅವರಂತೂ ನೋಡ್ರಿ ಸಾಮಿ! ಮನ್ಯಾಗೆ ತಾಯಿಯಾದ್ರೂ ರೋಸಿಕೊಂಡಾಳು, ಹೇಸಿಕೊಂಡಾಳು! ಅವ್ರು ಮಾತ್ರ ಹೇಸಿಕೆಲ್ದೆ, ರೋಸಿಕೆಲ್ದೆ ತಾಯಿಗಿಂತ ಹೆಚ್ಚಾಗಿ ನೋಡ್ತಾರ್ರಿ! ಅವರ ಕರ್ಮಕ್ಕೋ, ನಮ್ಮ ಕರ್ಮಕ್ಕೋ— ಅಂತೂ ತೊಳೀಬಾರ್ದ ಹೇಸ್ಕೆ ನೆಲ್ಲಾ ತೊಳಿತಾರ್ರೀ ಪಾಪ! ಅವ್ರು ಋಣ ತೀರ್ಸೋದೆಂದಿಗ್ರೀ ನಾವು?" ಎಂದ. ಈ ನುಡಿ ವೀರಪ್ಪನ ಬಾಯಿಂದ ಹುಂಬಿ ಬರುವಾಗ ಹೃದಯದ ನಿರ್ಮಲತೆ, ನಯನಗಳ ನಿಷ್ಕಲ್ಮಷತೆ, ಹಸುಳೆಯ ಮುಗ್ಧತೆ ತಾಂಡವವಾಡುತ್ತಿತ್ತು ವೀರಪ್ಪನ ಮುಖದಲ್ಲಿ. "ಶಹಬಾಸ್ ವೀರಪ್ಪಾ! ನಿನ್ನ ಪವಿತ್ರವಾದ ನಡೆಗೆ ನುಡಿಗೆ ಇದೇ ಕಾಣಿಕೆ" ಎನ್ನುವಂತೆ ಕನ್ನಡ ತಿಳಿದವರ ಕಣ್ಣುಗಳಲ್ಲಿ ಕೃತಜ್ಞತೆಯು ಝರಿ ಜಾರಿದುವು. "ಪರಸ್ತ್ರೀಯರಲ್ಲಿ ಮಾತೆಯ ಪೂಜ್ಯತೆಯಲ್ಲದೆ ಮತ್ತೇನನ್ನೂ ಹೋಲಿಸದ ವೀರಪ್ಪನಂತಹ ಸುಪುತ್ರರಿರುವವರೆಗೂ, ಭಾರತಮಾತೆ ಭಾಗ್ಯವಂತಳಾಗದೆ ಹೋದರೂ ಮಕ್ಕಳ್ಕೊಂದಿಗಳೇ ಸೈ!" ಎಂದುಕೊಂಡೆ. 'you see' ಎಂದು ಮಲೆಯಾಳಿಗಳಿಗೆ ವೀರಪ್ಪನ ವ್ಯಕ್ತಿತ್ವವನ್ನು ವಿವರವಾಗಿ ಕನ್ನಡದಿಂದ ಇಂಗ್ಲೀಷಿಗೆ ತರ್ಜುಮೆಮಾಡಿ ಹೇಳಲು ಪ್ರಾರಂಭಿಸಿದರು ನನ್ನವರು. ಉಪಾತ್ತತನಕ್ಕೆ—ಯಾರಾದರೇನು ಒರಗಲೇಬೇಕಲ್ಲ! ಅವರೆಲ್ಲರೂ ಎದು ಅಡಿ ಎತ್ತರದ ಆ ಕಪ್ಪುದೇಹದಲ್ಲಿ ಧೃಷ್ಟ ಪುಷ್ಟವಾಗಿರುವ ಆ ದೇಹದಷ್ಟೇ ಪ್ರಬಲವಾಗಿ ಪ್ರಜ್ವಲಿಸುವ ಅವನ ಉತ್ಕೃಷ್ಟವಾದ ಗುಣಕ್ಕೆ ಆಪ್ಲಾದಪಟ್ಟು, ಅಡಿಯಿಂದ ಮುಡಿಯವರೆಗೂ ಅವನನ್ನೇ ಅವಲೋಕಿಸಿದರು.

ಮುಂದೆ ಅವನಾನಿಸ್ಟೇಷನ್ನಿನಲ್ಲಿ, ಆ ಡಬ್ಬಿಯಿಂದ ಇಳಿಯುವವರನ್ನೆಲ್ಲಾ ಸಾನಕಾಶವಾಗಿ ಇಳಿಯಗೊಟ್ಟು, ಅವರವರ ಸಾಮಾನುಗಳನ್ನು ಅವರವರಿಗೆ ಹೊಂದಿಸಿಕೊಟ್ಟು, ತಾನು ಇಳಿದು "ಇದು ನಿಲ್ರಿ ಸೆಲ್ಯೂಟ್ ಸಾಮಿ, ನಾನು ಹೋಗಿ ಬರ್ತೀನಿ" ಎಂದು ಸೈನಿಕನ ಸಲಾಮು ಹೇಳಿ, ವೀರಪ್ಪ ತನ್ನ ಗತ್ತಿನ ನಡಿಗೆಯಿಂದ ಮುನ್ನಡೆದ.

"ಕುಲವೇನೋ? ಆನಂದಿರ ಕುಲವೇನೋ?" ಎಂಬ ಅಣ್ಣನ ನುಡಿಯೂ, "ಓದಿದಾ ಓದು ತಾ ಮೋದ ಕಬ್ಬಿನ ಸಿಪ್ಪೆ" ಎಂದ ಸರ್ವಜ್ಞನ ನುಡಿಯೂ ಏಕಕಾಲದಲ್ಲಿ ಮೂಡಿ ನಿಂತುವು ಮನದಲ್ಲಿ. ವೀರಪ್ಪನು ವಿದ್ಯೆಯಲ್ಲಿ ಶೂನ್ಯ, ಕುಲದಲ್ಲಿ ಬೇಡರವ, ರಣರಂಗದ ಬಾಳುವೆಯಲ್ಲಿ ನಾಲ್ಕು ವರುಷ ನುರಿತವ; ಆದರೆ ಗುಣದಲ್ಲಿ? ಸುಸಂಸ್ಕೃತನೆಂದರೆ ಸಲ್ಲಲಾರದೆ? ಆ ಹುಟ್ಟಾ ಸುಸಂಸ್ಕೃತನ ಸಭ್ಯ ನಡತೆಯು ನಮ್ಮನ್ನು ಸೂಜಿಗಲ್ಲಾಗಿ ಸೆರೆ ಹಿಡಿಯಿತು. "ವೀರಪ್ಪನಲ್ಲ, ಎಲ್ಲರಿಗೂ ಆದರ್ಶನಾಗಿ ಇರಪ್ಪ" ಎಂದುಕೊಂಡೆವು, ಆ ಉಳಿ ಮುಟ್ಟದ ವಿಗ್ರಹವನ್ನು.

———o———

ಗದುಗಿನಲ್ಲಿ 'ಶಾರದೋತ್ಸವ'

ಜನ್ಮಾಂತರದ 'ಸಾಹಿತ್ಯಸಂಜಯ'ನ ವರದಿ

★

ಧಾರವಾಡದ ಜೀವನ ಪ್ರಸ್ತಕಾಲಯದ ಒಡೆಯರೂ ಮನೋಹರ ಗ್ರಂಥಮಾಲೆಯ ಸಂಪಾದಕರೂ ಆದ ಶ್ರೀಮಾನ್ ಜಿ. ಬಿ. ಜೋಶಿ ಅವರು 'ಗದುಗಿನಲ್ಲಿ ಶಾರದೋತ್ಸವ ನಡೆಯಿಸಬೇಕೆಂದಿದ್ದೇನೆ: ನೀವು ಅವಶ್ಯವಾಗಿ ಬರಬೇಕು' ಎಂದು ಹೇಳಿದರು. ಹಿಂದೊಮ್ಮೆ, ಮನೋಹರ ಗ್ರಂಥಮಾಲೆಯು ಗ್ರಂಥಕರ್ತರ ಪ್ರಕಟನೆಯ ನೆಪಹಿಗಾಗಿ ಗದುಗಿನಲ್ಲಿಯೆ ಅವರು ನಡೆಯಿಸಿದ ಸಾಹಿತ್ಯೋತ್ಸವವನ್ನು ನೋಡಿದ ನನಗೆ, ಈ ಶಾರದೋತ್ಸವಕ್ಕೂ ಹೋಗಬೇಕೆಂದು ಪಾರಾಯಿಕೆ ಉಂಟಾಯಿತು. ಕಾರ್ಯಕ್ರಮದ ಪಟ್ಟಿಯನ್ನೊಳಗೊಂಡ ಪತ್ರಿಕೆಯ ಓಲೆ ಬಂದ ಮೇಲಂತೂ ಹೋಗಬೇಕೆಂಬ ಸಂಕಲ್ಪ ದೃಢವಾಯಿತು. ಅಕ್ಟೋಬರ್ ೩೦-೩೧ ಎರಡೂ ದಿನ ಉತ್ಸವ ನಡೆಯಲಿದ್ದಿತು. ಮೊದಲನೆಯ ದಿನವು ಕಾರ್ತಿಕ ಶುದ್ಧ ಪಂಚಮಿಯಾದುದರಿಂದ, ಅಂದು ೪ ಗಂಟೆಗೆ ಅದಿಕವಿ ಪಂಪನ ನೆನಹಿನಿಂದ ಶಾರದೋತ್ಸವ ಪ್ರಾರಂಭವಾಗಲಿದ್ದಿತು. ಮರುದಿನ ಬೆಳಗಿನ ೯ ಗಂಟೆಗೆ, ಈ ಮೊದಲೆ ಗದುಗಿನಲ್ಲಿ ಪ್ರಾರಂಭಿಸಲಾಗಿದ್ದ 'ಜ್ಞಾನ ಪ್ರಸಾರ ವ್ಯಾಖ್ಯಾನಮಾಲೆ'ಯ ವ್ಯಾಖ್ಯಾನಗಳು ಮುಂದುವರಿದು ಮುಗಿಯಲಿದ್ದುವು. ಸಂಜೆಯ ಕಡೆಗೆ ಕವಿ 'ಅಂಬಿಕಾತನಯ ದತ್ತ'ರಿಗೆ ಮನ್ನಣೆ ಸಲ್ಲಿಸುವ ಸಮಾರಂಭ ನಡೆಯಲಿದ್ದಿತು. ಎರಡೂ ದಿನ ರಾತ್ರಿ ಮನೋರಂಜಕ ಕಾರ್ಯಕ್ರಮ ಜರುಗುವುದಿತ್ತು. ಶಾರದೋತ್ಸವದ ಎಲ್ಲ ಕಾರ್ಯಕಲಾಪದಲ್ಲಿ ಭಾಗವಹಿಸಲಿದ್ದ ವರ ಹೆಸರುಗಳನ್ನು ನೋಡಿದರೆ, ಯಾವ ಸಾಹಿತ್ಯ ಪ್ರಿಯನಿಗೂ ಈ ರಸದೂಟದ ಸಂದರ್ಭವನ್ನು ಕಳೆದುಕೊಳ್ಳಬಾರದೆಂದು ಎನಿಸುವಂತಿತ್ತು.

* * * *

ಅಕ್ಟೋಬರ್ ೩೦ನೆಯ ಬೆಳಗಿನ ಗಾಡಿಯಿಂದ ಧಾರವಾಡವನ್ನು ಬಿಟ್ಟೆ. ಧಾರವಾಡ ನಿಲ್ದಾಣದಲ್ಲಿಯೂ ಹುಬ್ಬಳ್ಳಿ ನಿಲ್ದಾಣದಲ್ಲಿಯೂ ಶಾರದೋತ್ಸವಕ್ಕೆಂದು ಹೊರಟ ಹಲವು ಜನ ಸಾಹಿತ್ಯಿಕರು ಜೊತೆಗೆ ಕೂಡಿದರು. ಹುಬ್ಬಳ್ಳಿಯಿಂದ ಗದುಗಿನ ವರೆಗೆನನ್ಮಲ್ಲಿ ನಡೆದ ರಸವತ್ತಾದ ಹರಟೆ, ಗಂಟೆಯನ್ನು ನಿಮಿಷದಂತೆ ಮಾಡಿ ಗದುಗಿನ ನಿಲ್ದಾಣಕ್ಕೆ ಒಯ್ದು ನಿಲ್ಲಿಸಿತು. ಉತ್ಸವಕ್ಕೆ ಹಿರಿಯರಾಗಿದ್ದ ಶ್ರೀ. ಬೇಂದ್ರೆಯವರೂ ಕೆಲವು ಜನ ಉಪನ್ಯಾಸಕಾರರೂ ನನ್ನ ಜೊತೆಯಲ್ಲಿಯೆ ಇದ್ದುದರಿಂದ, ಎಲ್ಲರೊಡನೆ ನನಗೂ ಗದಗ ನಿಲ್ದಾಣದ ಮೇಲೆ ಸ್ವಾಗತದ ಸನ್ಮಾನ ಸಿಕ್ಕಿತು. ಹೊರಗಿನಿಂದ ಬಂದವರು ಇಳಿದುಕೊಳ್ಳುವುದಕ್ಕೆ, ಅಲ್ಲಿಯೆ ಬಳಿಯಲ್ಲಿದ್ದ ಭವ್ಯವಾದ ಶಾಲೆಯ ಕಟ್ಟಡವೊಂದನ್ನು ಸಜ್ಜುಗೊಳಿಸಲಾಗಿತ್ತು; ನಿಲ್ದಾಣದ ಬಳಿಯಲ್ಲಿಯೆ ಇರುವ ಧರ್ಮಶಾಲೆಯಲ್ಲಿ ಸ್ನಾನ-ಊಟಗಳ ಏರ್ಪಾಡಾಗಿದ್ದಿತು. ಗದುಗಿನ ಶ್ರೀ. ನವಲಿ ಗೋವಾಳರಾಯರ ನೇತೃತ್ವದಲ್ಲಿ ನಡೆದ ಏರ್ಪಾಡೆಂದು ಒಂದು ಮಾತಿನಲ್ಲಿ ಹೇಳಿದರೆ ಸಾಕು; ಅದರ ಅಚ್ಚುಕಟ್ಟು-ಓರಣಗಳನ್ನು ಬಣ್ಣಿಸಲು ಬೇರೆಯ ಮಾತುಗಳನ್ನು ಬಳಸುವ ಕಾರಣವೇ ಇಲ್ಲ.

ಒಬ್ಬ ವ್ಯಕ್ತಿ ನಡೆಯಿಸಲಿದ್ದ ಉತ್ಸವ. ಕಾರ್ಯಕಾರಿ ಮಂಡಲವಿಲ್ಲ; ಕಾರ್ಯದರ್ಶಿಗಳಿಲ್ಲ; ಸೋಗಿನ ಸ್ವಯಂಸೇವಕರಿಲ್ಲ. ಅದರಂತೆಯೆ ಇವರೆಲ್ಲರೂ ಇದ್ದು ನಡೆಯಿಸುವ ಸಭೆ-ಸಮಾರಂಭಗಳಲ್ಲಿ ಕಂಡುಬರುವ ಅವ್ಯವಸ್ಥೆ-ಅಕ್ರಮಗಳೂ ಇರಲಿಲ್ಲ. ಎಲ್ಲ ಕಡೆಯ ವ್ಯವಸ್ಥೆಯನ್ನು ಶ್ರೀ. ಜಿ ಬಿ. ಜೋಶಿಯವರ ಆಪ್ತಮಿತ್ರರೇ ವಹಿಸಿಕೊಂಡುದರಿಂದ, ಮನೆಯ ಮದುವೆಯಲ್ಲಿ ದುಡಿಯುವಂತೆ ಎಲ್ಲರೂ ಆತ್ಮೀಯತೆ— ಆಸ್ಥೆಗಳಿಂದ ದುಡಿಯುತ್ತಿದ್ದರು. ಎಂತಲೇ ಬಂದವರಿಗೆಲ್ಲ ಸಮಯಕ್ಕೆ ಸರಿಯಾಗಿ ಸುಖಸ್ನಾನ-ಸವಿಯೂಟಗಳು ದೊರೆತುವಲ್ಲದೆ, ನಿಮಿಷ ಕೂಡ ವಿಲಂಬವಾಗದಂತೆ ಕಾರ್ಯಕಲಾಪ ಮೊದಲಾಗಿ ಮುಗಿಯುತ್ತಿದ್ದುವು.

* * * *

ಅಂದು ಇಳಿಹೊತ್ತಿನ ನಾಲ್ಕು ಗಂಟೆಗೆ ಸರಿಯಾಗಿ ಪಂಪ ಕವಿಯ ಉತ್ಸವ ಪ್ರಾರಂಭವಾಯಿತು. ಸಂಗೀತ ಕಲಾಪ್ರವೀಣರಾದ ಶ್ರೀ. ಭೀಮಸೇನ ಜೋಶಿಯವರು, ತಮ್ಮ ಪಳಗಿನ ಕಂಠದಿಂದ ಪಂಪಭಾರತದ ಮಂಗಲಾಚರಣ ಪದ್ಯಗಳನ್ನು ಸುಮಧುರವಾಗಿ ಹಾಡಿ, ಅಂದಿನ ಉತ್ಸವದ ಯಶಸ್ಸಿನ ಮಂಗಲಾಚರಣೆಯನ್ನೇ ಮಾಡಿದರು. ಬಳಿಕ ಪ್ರೊ. ಮುಗಳಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಅಂದು ಆಚರಿಸಬೇಕಾಗಿದ್ದ 'ಪಂಪ ದಿನ'ದ ಔಚಿತ್ಯವನ್ನು ಕುರಿತು ಹೇಳಿದರು. ಅಧ್ಯಕ್ಷರಾದ ಬೇಂದ್ರೆಯವರು ಒಂದೆರಡೇ ಮಾತುಗಳಲ್ಲಿ ಉಪನ್ಯಾಸಕರ ಪರಿಚಯಮಾಡಿಕೊಡುತ್ತ, ಒಬ್ಬೊಬ್ಬರನ್ನೆ ಉಪನ್ಯಾಸಕೊಡುವಂತೆ ಕರೆಯತೊಡಗಿದರು.

ಶಿವಮೊಗ್ಗೆಯ ಇಂಟರ್ ಕಾಲೇಜಿನ ಅಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು 'ಪಂಪಭಾರತದ ರಸಸ್ಥಾನ

ಗಳಲ್ಲಿ ವಿಹಂಗಮ ವಿಹಾರ' ಎಂಬ ವಿಷಯ ಕುರಿತು ಸೋದಾಹರಣವಾಗಿ ಮಾತನಾಡಿದರು. ಬಳಿಕ ಸಂಯುಕ್ತ ಕರ್ನಾಟಕದ ಸಂಪಾದಕರಾದ ಶ್ರೀ. ವಿ. ಬಿ. ನಾಯಕರೂ ಬೆಳಗಾಂವಿಯ ಲಿಂಗರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ. ವಿ. ಜಿ. ಕುಲಕರ್ಣಿಯವರೂ ಕ್ರಮವಾಗಿ 'ಪಂಪಭಾರತ ಏಕಾಗು ಗದಾಯುದ್ಧ' 'ಪಂಪ ಮತ್ತು ರನ್ನ' ಎಂಬ ವಿಷಯಗಳನ್ನು ವಿಮರ್ಶಾತ್ಮಕವಾಗಿ ವಿವೇಚಿಸಿದರು. 'ಪಂಪ ಚಿತ್ರಿಸಿದ ಜನಜೀವನ' ಎಂಬ ವಿಷಯವನ್ನು ಕುರಿತು ಮಾತನಾಡುತ್ತ ಶ್ರೀ. ಬೆಟಗೇರಿ ಕೃಷ್ಣಶರ್ಮರು ಚಾಗ, ಭೋಗ, ಬೀರಗಳನ್ನೇ ಬಯಸುತ್ತಿದ್ದ ಅಂದಿನ ಕ್ಷಾತ್ರಯುಗದಲ್ಲಿ ಸಾಮಾನ್ಯ ಜನಜೀವನ ಹೇಗಿದ್ದಿತೆಂಬುದನ್ನು ಮಕ್ಕಳಾಟ, ಮಕ್ಕಳ ಶಿಕ್ಷಣ, ಮನೆಯ ಹಿರಿಯನ ಸಾವು ಇವುಗಳನ್ನು, ಪಂಪನ ಮಾತುಗಳಲ್ಲಿ ವಿವರಿಸಿ ತೋರಿಸಿದರು. ಬಳಿಕ ಪ್ರೊ. ಎಸ್. ಆರ್. ಮಳಗಿಯವರು 'ಪಂಪನ ಪಾತ್ರಚಿತ್ರಣದ ಕೌಶಲ'ದ ಬಗೆಗೆ, ಪ್ರೊ. ಠಾ ಶ್ರೀ. ಮುಗುಳಿಯವರು ಪಂಪನ ಸಂಸ್ಕೃತಿಯ ಬಗೆಗೆ ಅಭ್ಯಾಸಪೂರ್ಣವಾದ ಮಾತುಗಳನ್ನಾಡಿದರು. ಪ್ರೊ. ಎಸ್. ಆರ್. ಕುಲಕರ್ಣಿಯವರು ಮಾಡಿದ 'ಪಂಪನ ದ್ರೌಪದಿ' ಎಂಬ ಭಾಷಣದಲ್ಲಿ ಪಂಪ, ಕುಮಾರವ್ಯಾಸ, ವ್ಯಾಸರ ದ್ರೌಪದೀ ಪಾತ್ರಗಳ ತುಲನಾತ್ಮಕ ವಿಚಾರವಿದ್ದಿತು. ಹಾನೇರಿ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿರುವ ಶ್ರೀ. ಎಚ್. ವಿ. ಬೆಂಗೇರಿಯವರು 'ಪಂಪನ ದೇಸಿ'ಯನ್ನು ಕುರಿತು ಕೆಲವೆ ನಿಮಿಷ ಮಾತನಾಡಿದರಾದರೂ, ಕನ್ನಡ ಭಾಷೆಯ ಅಭ್ಯಾಸದ ದೃಷ್ಟಿಯಿಂದದು ಮಹತ್ತ್ವದ್ದಾಗಿತ್ತು. ಕೊನೆಗೆ ಅಧ್ಯಕ್ಷ ಬೇಂದ್ರೆಯವರು 'ಆದಿಪುರಾಣ'ದಲ್ಲಿಯ ಏದಾರು ಮುಖ್ಯ ಪಾತ್ರಗಳನ್ನು ಕುರಿತು ಮಾತನಾಡಿ, ಮಾನವನ ಆದರ್ಶದ ಬಗೆಗೆ ಪಂಪನ ತಿಳಿವಳಿಕೆಯೆಂತಹದೆಂಬುದನ್ನು ಎಲ್ಲರಿಗೂ ಮನದಟ್ಟಾಗುವಂತೆ ವಿವೇಚಿಸಿದರು.

ಅಂದಿನ ಎಲ್ಲ ವ್ಯಾಖ್ಯಾನಕಾರರಿಗೂ ಇದ್ದ ವೇಳೆ ೧೫ ನಿಮಿಷ ಮಾತ್ರ. ಸ್ವಲ್ಪ ವೇಳೆಯಲ್ಲಿ ಮಾತನಾಡಿ ಒಂದು ವಿಷಯವನ್ನು ಸಂಪೂರ್ಣವಾಗಿ ವಿವರಿಸುವ ಅಭ್ಯಾಸ ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆಯೆಂಬುದು— ಅಂದಿನ ಉಪನ್ಯಾಸಕರಿಗೆ ಸಮಯಾಭಾವದಿಂದಾದ ಎದೆಗುಂದ್ಕನ್ನು ನೋಡಿದವರಿಗೆ— ಸ್ಪಷ್ಟವಾಗಿ ಎನಿಸುವಂತಿತ್ತು. ಕೇವಲ ಸಾಹಿತ್ಯವಿಮರ್ಶೆಯಿಂದ ಕೂಡಿದ ಅಂದಿನ ಉಪನ್ಯಾಸಗಳು ಸಭೆಯಲ್ಲಿದ್ದ ಎಷ್ಟು ಜನರಿಗೆ ಅರ್ಥವಾದುವೋ ಕಾಣೆ; ಆದರೆ ಸಭಿಕರು ಸಭೆಯಲ್ಲಿ ಕಾಯ್ದು ಶಾಂತತೆಯನ್ನು ಕಂಡ ನನಗೆ, ಗದುಗಿನ ನಾಗರಿಕರ ಸೌಜನ್ಯದ ಬಗೆಗೆ ತುಂಬ ಸಂತೋಷವೆನಿಸಿತು.

ಅಂದಿನಿರುಳು ೯॥ ಗಂಟೆಗೆ ಮನೋರಂಜನ ಕಾರ್ಯಕಲಾಪಕ್ಕೆ ಆರಂಭವಾಯಿತು. ಒಂದೊಂದೂ ರಸಘಟ್ಟಿ. ಶ್ರೀ. ಭಾಗವತರ ಮತ್ತು ಅವರ ಸೋದರಸೊಸೆ ಕುಮಾರಿ ಕುಮುದಾ ಹರಜೀರಕರ್ ಅವರ ಕಾವ್ಯಗಾಯನ ಸಭಿಕರನ್ನು ತಲೆದೂಗಿಸಿತು. ಬಾಗಿಲಕೋಟೆಯ ಶ್ರೀ. ಶ್ರೀನಿವಾಸ ಪರ್ವತೀಕರ ಮತ್ತು ಧಾರವಾಡದ ಕುಮಾರಿ ಕೃಷ್ಣಾ ಕಲಘಟಗಿ ಇವರು ಆಡಿ ತೋರಿಸಿದ 'ಪೋಸ್ಟ್ ಮಾಸ್ಟರ್' ಎಂಬ ಪ್ರಹಸನವು, ಅಭಿನಯಕಾರರ ಸಹಜಸುಂದರ ಅಭಿನಯದಿಂದ ಅಂದಿನ ಕಾರ್ಯಕಲಾಪಕ್ಕೇ ಒಂದು ಕಳೆಯನ್ನು ಒದವಿಸಿತು ಬೆಂಗಳೂರಿನ ಸುಪ್ರಸಿದ್ಧ ಅಭಿನಯಪಟುಗಳಾದ ಶ್ರೀಮಾನ್ ಸಿ. ಕೆ. ನಾಗರಾಜರಾಯರು 'ಮಲ್ಲಿಗೆ ಮಂಟಪ' 'ಲಾಯರ ಸ್ವಯಾಣ' ಎಂಬ ವಿಕಪಾತ್ರಾಭಿನಯದ ದೃಶ್ಯಗಳನ್ನು ಎಲ್ಲರೂ ಮೆಚ್ಚುವಂತೆ ಪ್ರದರ್ಶಿಸಿದರು. ಮುಧ್ಯೆ ಔರಂಗಾಬಾದ್ ರೇಡಿಯೋ ಸ್ಟೇಷನಿನ ಸಂಗೀತಕಲಾವಿದರಾದ ಜನಾಬ್ ಕಲಂಪಾಷರ ಸಾರಂಗಿವಾದನವಾಯಿತು. ಶ್ರೀ. ಭಾಗವತರ ಕಲಾದೃಷ್ಟಿಯ ಫಲಗಳಾದ 'ರಾಧೆಯ ಪಾಡು' 'ಕನಸಿನೊಳಗೊಂದು ಕಣಸು' ಕಾವ್ಯದರ್ಶನಗಳೂ ಜನರ ಮೆಚ್ಚಿಕೆಯ ಕಾಣಿಕೆಯನ್ನು ಪಡೆದುವು.

ಮರುದಿನ ಬೆಳಗಿನ ೯ ಗಂಟೆಗೆ ಸರಿಯಾಗಿ 'ಜ್ಞಾನಪ್ರಸಾರಕ ಉಪನ್ಯಾಸ ಮಾಲೆ'ಯ ಪ್ರಾರಂಭವಾಯಿತು. ಅಂದಿನ ಉಪನ್ಯಾಸಕರಲ್ಲಿಯ ಕೆಲವು ಜನ ಬರಬೇಕಾದವರು ಬಂದಿರಲಿಲ್ಲ. ಹೊಸಗನ್ನಡ ನಾಟಕಗಳನ್ನು ಕುರಿತು ವಿಮರ್ಶಾತ್ಮಕ ಭಾಷಣಗಳು ಅಂದು ನಡೆಯಬೇಕಾಗಿದ್ದುವು. ಶ್ರೀ. ಭೀಮಸೇನ ಜೋಶಿಯವರು 'ಉದಯವಾಗಲಿ ನಮ್ಮ ಚೆಲುವ ಚೆಲುವ ಕನ್ನಡ ನಾಡು' ಹಾಡಿನಿಂದ ಸಭೆಯನ್ನು ಪ್ರಾರಂಭಿಸಿದರು. ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀ. ಎಚ್. ಬಿ. ಕುಲಕರ್ಣಿಯವರು ಶ್ರೀರಂಗರ 'ಪರಿಜನ್ವಾರ'ದ ಬಗೆಗೆ, ಪ್ರೊ. ಬಿ ಜಿ. ಕುಲಕರ್ಣಿಯವರು ಕೈಲಾಸಂ ಅವರ 'ತಾಳೀಕಟ್ಟೋಕ್ಕೂ ಮುಂಚೆ!' ಎಂಬ ನಾಟಕದ ಬಗೆಗೆ, ಪ್ರೊ. ಎಸ್. ಆರ್. ಮಳಗಿಯವರು ದಿವಂಗತ 'ಸಂಪ' ಅವರು ಬರೆದ 'ಏಗಡ ವಿಕ್ರಮರಾಯ' ಎಂಬ ಐತಿಹಾಸಿಕ ನಾಟಕದ ಬಗೆಗೆ, ಶ್ರೀ. ಕೃಷ್ಣಕುಮಾರರು ಶ್ರೀ. ವಿ. ಸೀತಾರಾಮಯ್ಯನವರ 'ಅನ್ನಪೂ' ಎಂಬ ಪೌರಾಣಿಕ ನಾಟಕದ ಬಗೆಗೆ, ವಿಮರ್ಶಾತ್ಮಕವಾಗಿ ಮಾತನಾಡಿದರು. ಕೊನೆಗೆ ಶ್ರೀ. ಬೇಂದ್ರೆಯವರು 'ನಾಟಕಕಾರ, ನಟ, ನಾಗರಿಕರು' ಎಂಬ ವಿಷಯವನ್ನೆತ್ತಿ, ಲಾಕ್ಷಣಿಕರು ಮೆಚ್ಚಿ ತಲೆದೂಗುವಂತೆ ಉಪಸಂಹಾರಾತ್ಮಕ ಭಾಷಣ ಮಾಡಿದರು. ಈಗಲೂ ಸಭೆಯಲ್ಲಿ ನೆಲೆಗೊಂಡ ಶಾಂತತೆ, ಸಭಿಕರ ಜಿಜ್ಞಾಸಲಾಲಸೆಯನ್ನು ವ್ಯಕ್ತಮಾಡುವಂತಿತ್ತು. ಉಪನ್ಯಾಸಕರಿಗೆಲ್ಲ ಪೂಮಾಲೆಯನ್ನು ಒಪ್ಪಿಸಿ ಮನ್ನಣೆ ಸಲ್ಲಿಸಿದ ಮೇಲೆ, ಕಾರ್ಯಕ್ರಮದ ಸಮಾಪ್ತಿಯಾಯಿತು.

ಸಂಜೆಯ ಏದು ಗಂಟೆಗೆ ಕವಿ 'ಅಂಬಿಕಾತನಯ ದತ್ತ'ರಿಗೆ ಅವರ ೫೦ ವರ್ಷದ ಹುಟ್ಟುಹಬ್ಬದ ನಲುವಾಗಿ ನುನ್ನಣಿ ನಲ್ಲಿಸುವ ಸಮಾರಂಭಕ್ಕೆ ಪ್ರಾರಂಭವಾಯಿತು. ಸರಸ್ವತೀ ಭಕ್ತನ ಈ ಸನ್ಮಾನ ಸಮಾರಂಭಕ್ಕೆ ಅಲ್ಲಿಯ ಸರಸ್ವತೀ ಚಿತ್ರವುಂದಿರವು ಹಿಡಿಸಲಾರದಷ್ಟು ಸ್ಫೂರ್ತಿಯ ರಸಿಕರಿಂದ ತುಂಬಿಹೋಗಿದ್ದಿತು.

'ಉಡಯವಾಗಲಿ ನಮ್ಮ ನೆಲುವ ಕನ್ನಡ ನಾಡು' ಗೀತದಿಂದ ಪ್ರಾರಂಭವಾದ ಅಂದಿನ ಸಭೆಯಲ್ಲಿಯ ಕಾರ್ಯಕಲಾಪಗಳು ಒಂದಕ್ಕಿಂತ ಒಂದು ಮಿಗಿಲಾಗಿ ಕುತೂಹಲಕಾರಿಯಾಗಿದ್ದುವು. ಶ್ರೀ. ಮಿರ್ಜಿ ಅಣ್ಣಾರಾಯರು ಬರೆದು, ಶ್ರೀ. ಜಿ. ಬಿ. ಜೋಶಿಯವರು ಪ್ರಕಟಿಸಿದ 'ದತ್ತವಾಣಿ' ಎಂಬ ಹೆಸರಿನ—ಶ್ರೀ. ಬೇಂದ್ರೆಯವರ ಕಾವ್ಯನಿಮರ್ಶೆಯ—ಗ್ರಂಥವನ್ನು ಸಮರ್ಪಿಸುವ ಕಾರ್ಯ ನಡೆಯಿತು. ಇದರ ಅಂಗವಾಗಿ ಪ್ರೊ. ಮುಗಳಿಯವರು ಪ್ರಾಸ್ತಾವಿಕ ಭಾಷಣ ಮಾಡಿದ ಮೇಲೆ, ಗ್ರಂಥಕರ್ತರಾದ ಶ್ರೀ. ಮಿರ್ಜಿ ಅಣ್ಣಾರಾಯರು ನಾಲ್ಕು ಮಾತುಗಳನ್ನಾಡಿ ಶ್ರೀ. ಬೇಂದ್ರೆಯವರಿಗೆ ಗ್ರಂಥವನ್ನು ಸಮರ್ಪಿಸಿದರು. ಅದರಂತೆಯೆ ಶ್ರೀ. ಜಿ. ಬಿ. ಜೋಶಿಯವರು ಸಂಸ್ಕೃತ ಮಹಾ ಪುರಾಣಗಳ ಕನ್ನಡ ಭಾಷಾಂತರ ಗ್ರಂಥಗಳಿಂದ ತುಂಬಿದ ಸುಂದರವಾದ ಕಪಾಟನ್ನು, ತಮ್ಮ ಕವಿಗುರುವಿಗೆ ಸಲ್ಲಿಸಿದರು. (ಧಾರವಾಡದ ಮಿತ್ರರಾದ ಶ್ರೀ. ಬೇಕನಾಂಡೆ ಮತ್ತು ಶ್ರೀ. ಏಕೋಲಕರರು ತಾವೆ ತಮ್ಮ ಬೆಚ್ಚನೆದಿಂದ ಈ ಕಪಾಟನ್ನು ಮಾಡಿಸಿ, ಗದುಗಿನ ವರೆಗೆ ತಂದು ತಲ್ಪಿಸಿದ್ದರು.)

ಗದುಗಿನ ಸಂಗೀತರಸಿಕರ ವೃಂದವಾದನದೊಂದಿಗೆ ಶ್ರೀ. ಭೀಮಸೇನ ಜೋಶಿಯವರು ಅಂದು ಹೇಳಿದ 'ಒಂದೇ ಕರ್ನಾಟಕ' ಗೀತ, ಸಭಿಕರ ಕಿವಿ-ಮನಗಳಲ್ಲಿ ಅಚ್ಚೊತ್ತಿ ನಿಂತಿತು. ಶ್ರೀ. ಎಸ್. ಆರ್. ಕುಲಕರ್ಣಿಯವರ 'ದೊಡ್ಡಾಟದ ಹಾಡು' ಸಭಿಕರಿಗೆ ಚಕ್ಕುಳಿಗುಳಿಯಿಕ್ಕಿತು. ಭಾಗವತರ 'ಯಾರಿಗೂ ಹೇಳೂಣು ಬ್ಯಾಡ' 'ಅನ್ನಾವತಾರ' ಕವಿತೆಗಳು ಕೇಳುವವರನ್ನು ಆಕರ್ಷಿಸಿದುವು. ಇಷ್ಟೆಲ್ಲ ಆದ ಮೇಲೂ ಶ್ರೀ. ಎಸ್. ವಿ. ಪರಮೇಶ್ವರ ಭಟ್ಟರು ಬೇಂದ್ರೆಯವರ 'ಸಖೀಗೀತ'ವನ್ನು ಕುರಿತು ಮಾತನಾಡಿ ಆಹುದೆನಿಸಿಕೊಂಡರು.

ಕೊನೆಗೆ ಶ್ರೀ. ಬೇಂದ್ರೆಯವರು ಉತ್ತರರೂಪವಾಗಿ ಮಾತನಾಡಿ, ತಮ್ಮ ಹೃದಯವನ್ನೇ ತೆರೆದು, 'ಗೌರವ ಪಡೆಯುವವನಿಗಿಂತ ಗೌರವ ಕೊಡುವವನೇ ದೊಡ್ಡವನು' ಎಂಬ ಮಾತಿನ ಯಥಾರ್ಥತೆಯನ್ನರುಹಿ, 'ತಮಗೆ ಸಂದ ಗೌರವ ಬೇಂದ್ರೆ ಎಂಬ ವ್ಯಕ್ತಿಗಲ್ಲ, ತಮ್ಮಲ್ಲಿಯ ಕವಿಶಕ್ತಿಗೆ; ಆ ಶಕ್ತಿ ತನುಗೆ ದೊರೆತುದು ತಾಯಿಯ ಕೃಪೆ; ಅಂತೆಯೆ ಈ ಗೌರವ ಈ ಮರ್ಯಾದೆ ಆ ತಾಯಿಯದು' ಎಂದು ಹೇಳಿ 'ಕರ್ನಾಟಕಕ್ಕೊಂದು ಉಜ್ವಲವಾದ ಭವಿತವ್ಯ ಬರಲಿದೆ; ಇಂತಹ ಶಾರದೋತ್ಸವಗಳು, ಕವಿಗಳಿಗೆ ದೊರೆವ ಈ ಮನ್ನಣೆಗಳು ಅಂತಹದರ ಶುಭಸೂಚನೆಗಳು' ಎಂದು ಸೂಚಿಸಿ, ಎಲ್ಲರ ಅಂತಃಕರಣಗಳು ಸಾತ್ತ್ವಿಕ ಭಾವನೆಯಿಂದ ಉದ್ದೀಪನಗೊಳುವಂತೆ ಮಾಡಿ, ಮಾತನ್ನು ಮುಗಿಸಿದರು. 'ಒಂದೇ ಮಾತರಂ' ಗೀತದೊಂದಿಗೆ ಅಂದಿನ ಸಭೆ ಕೊನೆಗೊಂಡಿತು.

ರಾತ್ರಿ ಕವಿ ಬೇಂದ್ರೆಯವರು ಬರೆದ 'ಉದ್ಧಾರ' ನಾಟಕದ ಪ್ರದರ್ಶನವಾಯಿತು. ಅಭಿನಯಿಸಿದ ಗೆಳೆಯರೆಲ್ಲರೂ ಸುಶಿಕ್ಷಿತರು ಆಲ್ಲದೆ ಅಭಿನಯದ ಹದವನ್ನು ಕಂಡುಹಿಡಿದವರು. ಶ್ರೀ. ಸಿ. ಕೆ. ನಾಗರಾಜರು ಪಾತ್ರಗಳ ವೇಷ-ಭೂಷಣ-ವರ್ಣಗಳ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಬಲ್ಲವರು. ಇವೆಲ್ಲವುಗಳ ಯೋಗದಿಂದ — ಅನೇಕರಿಗೆ ನಾಟಕದ ಯಶಸ್ಸಿನ ಬಗೆಗೆ ಸಂದೇಹವಿದ್ದಿತಾದರೂ— ನಾಟಕಪ್ರಯೋಗವು, ಜನರಿಂದ ಸರ್ವತೋಮುಖವಾಗಿ ಮೆಚ್ಚುಗೆಯನ್ನು ಪಡೆಯಿತು.

ಅಂತೂ 'ನೋಡಿದುದೆಲ್ಲ ಹಿರಿದು, ಕೇಳಿದುದೆಲ್ಲ ಜೆನ್ನು' ಎನ್ನುವಂತಾಗಿದ್ದ ಈ ಶಾರದೋತ್ಸವವು, ನೋಡಿದವರ ನೆನಪಿನಲ್ಲಿ ಬಹುಕಾಲ ಉಳಿವಂತಾಯಿತು. ಎರಡು ದಿನದ ಈ ರಸೋದಯದ ಕಾಲ ಅನ್ನಾಭಾವ, ಜಾತೀಯ ಕಲಹ, ಆರ್ಥಿಕ ಸಂಕಟ ಇವೆಲ್ಲ ದುಃಖಗಳನ್ನು ಮರೆಯಿಸಿ ಬಿಟ್ಟಿದ್ದಿತು. ಗಾನೆಯ ನವ್ಹಂಬರ್ ಬೆಳಗಿನ ಟ್ರೇನಿನಿಂದ ಮರಳಿ ಹೊರಟಾಗ, ಅಂದಿನ 'ಸಂಯುಕ್ತ ಕರ್ನಾಟಕ'ದ ಸುದ್ದಿಗಳು ಕಣ್ಣಿಗೆ ಬಿದ್ದ ಮೇಲೆಯೆ ರಸದೂಟದ ಮದ ತಲೆಯಿಂದ ಇಳಿಯಿತು. ನೌಖಾಲಿ, ತಿಪ್ಪೆರಾಗಳಲ್ಲಿಯದು ಅಮಾನುಷ ಅತ್ಯಾಚಾರದ ವಾರ್ತೆಗಳು ಕರುಳನ್ನು ಚುಚ್ಚಿ ಕಳವಳಗೊಳಿಸತೊಡಗಿದುವು.

ಮುನವಳ್ಳಿಯಲ್ಲಿ ನಮ್ಮ ಏಜಂಟರು

ಶ್ರೀ. ಗೋವಿಂದರಾವ ಅಯರಸಂಗ್

ಸ್ಟೂಜ್ ಪೇಪರ್ ಏಜಂಟ್ ಆ್ಯಂಡ್ ಮರ್ಚಂಟ್



೧೯. ರೇಡಿಯೊ ನಾಟಕಗಳು

(ಏಕಾಂಕಗಳ ಸಂಗ್ರಹ)

ಬರೆದವರು "ಬೀಚಿ" ಬಳ್ಳಾರಿ. ಧಾರವಾಡದ ಪ್ರತಿಭಾಗ್ರಂಥಮಾಲೆಯ ಪ್ರಕಟನೆ. ಬೆಲೆ ೧-೪-೦.

ಇದರಲ್ಲಿ ಬೇರೆ ಬೇರೆ ೯ ಏಕಾಂಕ ನಾಟಕಗಳು ಸಂಗ್ರಹಗೊಂಡಿವೆ. ನಗೆಯೆ ಇವುಗಳಲ್ಲಿ ಹಾಸುಹೊಕ್ಕಾಗಿ ಇರುವುದರಿಂದ, ಎಲ್ಲವೂ ಪ್ರಹಸನ ಇಲ್ಲವೆ ಹುಚ್ಚಾಟದ ತಂತ್ರವನ್ನೇ ಅನುಸರಿಸಿವೆಯೆಂದು ಹೇಳಬಹುದು.

ಇವುಗಳಲ್ಲಿಯ ಮೊದಲಿನ ಆರು ನಾಟಕಗಳು ಮದರಾಸ್ ರೇಡಿಯೊ ನಿಲಯದಲ್ಲಿ ಆಡಿದುವು ಮುಂದಿನ 'ಗರುಡಪುರಾಣ' 'ನಾನೇ ಸತ್ತಾಗ' ಎಂಬುವು 'ಜಯಂತಿ' ಪತ್ರಿಕೆಯಲ್ಲಿ ಪ್ರಕಟವಾದುವು. ಕೊನೆಯದಾಗಿ ಇರುವ 'ಏಕೀಕರಣ' ಹೊಸತಾಗಿಯೆ ಬರೆದು ಪ್ರಕಟಿಸಿದುದು.

ರೇಡಿಯೊ ನಿಲಯದಲ್ಲಿ ಆಡುವ ನಾಟಕಗಳು ಎಂತಹವಿರಬೇಕೆಂಬ ವಿಷಯದಲ್ಲಿ, ಅನುಭವಿಕರಾದ "ಬೀಚಿ"ಯವರು ತಮ್ಮ 'ಒಂದು ಮಾತಿ'ನಲ್ಲಿ ಹೀಗೆ ಹೇಳಿದ್ದಾರೆ:

"ಈ ನಾಟಕದ ರೀತಿಯೆ ಬೇರೆ, ಕ್ರಮವೇ ಹೊಸದು .... ಸಂಭಾಷಣೆಗಳು ಚಿಕ್ಕವಿರಬೇಕು; ಅವುಗಳಲ್ಲಿ . ಓಟಬೇಕು; ಓಟದೊಡನೆ ಹಿಡಿತ ಬೇಕು. ಕಾಲುಗಂಟೆಯಲ್ಲಿ ನಾಟಕವು ಮುಗಿಯಬೇಕು. ವೇಷಕ್ಕೆ ಬಣ್ಣವಿಲ್ಲ, ಬೂದಿಯಿಲ್ಲ. ನಾಟಕವಾಡುವುದು ರೇಡಿಯೊ ನಿಲಯದಲ್ಲಿ; ಕೇಳುವವರು ತಮ್ಮ ತಮ್ಮ ಮನೆಗಳಲ್ಲಿ, ನೂರಾರು ಮೈಲಿಗಳ ಆಚೆ. ಮುಂದೆ ಮಾತ್ರ ರೇಡಿಯೊ ಪೆಟ್ಟಿಗೆ. ಇದು ಬರೀ ನಾಟಕವಷ್ಟೇ ಅಲ್ಲ, ಕುರುಡನಿಗಾಗಿ ಆಡಿದ ನಾಟಕ. ಸಿನೇಮಾದ ಸಾಮಗ್ರಿಯು ಅನುಕೂಲತೆ.. ಎಲ್ಲವೂ ಬೇಕಾದಾಗ ತೆಗೆದುಕೊಳ್ಳಲು ತಯಾರಾಗಿ ಇರುತ್ತವೆ. ಕೆವಿಗಾಗಿ ಆಡುವ ನಾಟಕವೆಂಬುದನ್ನು ನೆನಪಿನಲ್ಲಿಟ್ಟು ಓದುತ್ತ ಹೋದರೆ, ರೇಡಿಯೋದ ಮುಂದೆ ಕೇಳುವ ಅನುಭವವಾಗುವುದು."

ಈ ಮಾತಿನಿಂದ ಲೇಖಕರು ಓದುಗರಿಗೆ ಒಂದು ಹೊಸ ದೃಷ್ಟಿಯನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಓದಿದರೆ, ಮೊದಲಿನ ಆರು ನಾಟಕಗಳಲ್ಲಿಯ ಸ್ವಾರಸ್ಯ ಸಹಜವಾಗಿ ಗೊತ್ತಾಗುವುದು.

'ನಕೀಕರಣ'ದಲ್ಲಿಯ ವಸ್ತು ತೀರ ಚಿಕ್ಕದು. ಸುಬ್ಬಕ್ಕನ ಗಂಡ ಕೃಷ್ಣರಾಯ, ಶಿಕ್ಕಾನಾಯಿಯ ಮಗಳು ಮೇನಕೆಗೆ ಮೋಹಿಸಿ ಮನೆ-ಮಡದಿ ಮಕ್ಕಳನ್ನು ಮರೆತವ. ಅದಕ್ಕಾಗಿ ಸುಬ್ಬಕ್ಕನಿಗೆ ಹೈದ್ರೋಗ. ಸುಬ್ಬಕ್ಕನ ತಾಯಿ ಲಕ್ಷುಂಬಾಯಿ ಮಂತ್ರವಾದಿಯ ಕಡೆಯಿಂದ 'ಪತಿವಶೀಕರಣ' ಯಂತ್ರಮಾಡಿಸಲು ಬಯಸುವಳು. ಮಳೆಯ ಮೂಲಕ ಮನೆಯಲ್ಲಿಯೆ ಮಲಗಿದ ರಾಯನಿಗೆ, ಹೆಂಡತಿಯ ಕನವರಿಕೆಯಿಂದ ಈ ವಿಷಯ ವಿಕಾರಾಕೃತಿಯಿಂದ ಗೊತ್ತಾಗುವುದು. ಅವನು ಹೆಂಡತಿಯನ್ನು ಹೊಡೆಯಹೋದಾಗ, ಪುರೋಹಿತ ನರಸಪ್ಪಾಚಾರಿ ನಿಜಸ್ಥಿತಿಯನ್ನು ಹೇಳಿ ಹೊಡೆಯುವುದನ್ನು ಬಿಡಿಸುವನು. ಇದರಲ್ಲಿಯ ಲಕ್ಷುಂಬಾಯಿ—ನರಸಪ್ಪಾಚಾರಿಗಳ ಸ್ವಭಾವ-ಪರಿಪುಷ್ಟಿ ನಗೆಯ ಹೊಳೆಯನ್ನೆ ಹರಿಸಲು ಕಾರಣವಾಗುತ್ತದೆ. ಆದರೆ ಸುಬ್ಬಕ್ಕನ ಕನವರಿಕೆ ದೀರ್ಘವಾಗಿ, ನಾಟಕದ ಕೊನೆಯು ಅಸ್ವಾಭಾವಿಕವಾಗಿದೆಯೆಂದು ಬಹುಜನರಿಗೆ ಎನಿಸಬಹುದಾಗಿದೆ.

'ಏಕೋದರರು' ಎಂಬುದರಲ್ಲಿ ಅಣ್ಣತಮ್ಮರ ಜಗಳಾಟದ-ಒಂದು ದೃಶ್ಯವಿದೆ. ಕಿರಿಯ ಮಗ ರಾಮಚಂದ್ರ - ತಾಯಿಗೆ ಬೇಕಾದವನು; ಹಿರಿಯ ಮಗ ಶೇಷಗಿರಿ ತಂದೆಗೆ ಬೇಕಾದವನು. ಮಕ್ಕಳಿಬ್ಬರ ಜಗಳಾಟದೊಂದಿಗೆ ತಂದೆ-ತಾಯಿಗಳ ಕಾದಾಟದ ತಮಾಷೆಯೂ ನಡೆದಿರುವುದು. ಪ್ರಾರಂಭದ ಜಗಳಾಟದ ಹೊಸತನ ಮುಂದಿನ ಪಾಲುಗಾರಿಕೆಯ ಕತೆಯಲ್ಲಿ ಉಳಿದಿಲ್ಲ. ಹಳೆಯ ನಿನ್ನೋದಗಳನ್ನೇ ಅಲ್ಲಿ ಸಂಗ್ರಹಿಸಿ ಹೇಳಿದಂತಾಗಿದೆ. ಆದರೂ, ಕೊನೆಯವರೆಗೂ ತೆರೆದ ಬಾಯನ್ನಿದು ಮುಚ್ಚಿಸುವಂತಿಲ್ಲ.

'ಬೇಡಾದ ಅತಿಥಿ'ಯು ಪರದೇಶದಿಂದ ಬಂದು ದೇಶೀಯ ವೇಷಧರಿಸಿದುದರಿಂದಲೋ ಏನೋ— ಇಲ್ಲಿಯ ಹಾಸ್ಯ ಪರಿವಾಕಕ್ಕೆ ಇಳಿದಿಲ್ಲ. ವಸ್ತುವಿನಲ್ಲಿ ಅವಾಸ್ತವತೆ ಹೆಚ್ಚು ಕಂಡು ಬರುವುದು. ಪ್ರಾರಂಭದಲ್ಲಿ ಬರುವ ಗಂಡ-ಹೆಂಡಿರ ಮಾತುಗಳಲ್ಲಿ ಸ್ವಲ್ಪ ಚಮತ್ಕೃತಿಯಿದೆ. ದಾಸ ಅತಿಥಿಯೊಂದಿಗೆ ಆಡಿದ ಮಾತುಗಳಲ್ಲಿ ನಗೆಯಿರುವುದಾದರೂ, ಅವನನ್ನು ಅಂದೆಯೆ ಮನೆ ಬಿಟ್ಟು ಓಡಿಸಲು ಮಾಡಿದ ಮಾಟದಲ್ಲಿ ಸೊಗಸು ಕಾಣುವುದಿಲ್ಲ.

'ಸೈಕಾಲಜಿಸ್ಟ್ ಸಾರಂಗಪಾಣಿ' ಎಂಬುದರಲ್ಲಿ ಸಾರಂಗಪಾಣಿಯ ಮನಶ್ಶಾಸ್ತ್ರಜ್ಞತೆಯ ವಿಡಂಬನೆಯಿದೆ. ಗೋಪುವಿಗೆ ಲಾಟರಿಯಲ್ಲಿ ದೊರೆತ ಒಂದು ಲಕ್ಷ ರೂಪಾಯಿಗಳ ಸುದ್ದಿಯನ್ನು, ಆತನ ರೋಗಿಯಾದ ಹೆಂಡತಿ ಕೇಳಿದರೆ ಏನಾದರೂ ವಿಪರೀತ ಪರಿಣಾಮವಾದೀತೆಂದು, ಆ ಸುದ್ದಿಯನ್ನು ಪರ್ಯಾಯದಿಂದ ತಿಳುಹಲು ಸಾರಂಗಪಾಣಿ ಗೋಪುವಿನ ಮನೆಗೆ ಹೋಗುವನು. ಅಲ್ಲಿ ಮಾತು ನಡೆದು, ತನಗೇ ಐದು ಸಾವಿರ ರೂಪಾಯಿ ಸಿಕ್ಕುವ ವಿಷಯ ಬಂದಾಗ, ಸಂಭ್ರಮಾಧಿಕ್ಯದಿಂದ ಹಾರ್ಟ್‌ಫೇಲಾಗಿ ತಾನೆ ಸಾಯುವನು. ಮೊದಲಿನಿಂದ ಕೊನೆಯವರೆಗೆ ಇದೊಂದು ಹುಚ್ಚಾಟ.

'ಆಯ್ಯೋ ಇದು' ಎಂಬುದು ಗಂಡ-ಹೆಂಡತಿಯರ ಸಲ್ಲಾಪದಲ್ಲಿ ಪ್ರಾರಂಭವಾಗಿ ಮುಗಿದ ನಾಟಕ. ಮನೆಯ ದಾಸಿಯಾದ ಕೆವುಡ ಲಕ್ಷ್ಮಿ, ಹೆಂಡತಿಯ ಮಂಚದ ಮೇಲೆ ಮಲಗಿ ನಿದ್ದೆ ಹೋದುದು ಕುತೂಹಲಕಾರಿಯಾದ ಸನ್ನಿವೇಶ.

ಹೊಸ ವಿಚಾರದ ವಕೀಲ ಸಂಜೀವರಾಯರು, ತೀರ ಹಳೆಯ ವಿಚಾರದ ಅವರ ಹೆಂಡತಿ ಸಾವಿತ್ರೆಮ್ಮ, ಇವರ ವಿಷಮ ಜೀವನದ

ಕರುಣಕತೆ 'ಅನಾಥಾಶ್ರಮ' ಎಂಬುದರಲ್ಲಿ ವಿಡಂಬನೆಗೊಂಡಿದೆ. ಸಂಜೀವರಾಯ— ಸಾವಿತ್ರಮ್ಮರ ಸ್ವಭಾವಪರಿಪುಷ್ಟಿ ಸಹಜ-ಸುಂದರವಾಗಿದೆ.

'ಗರುಡ ಪುರಾಣ' ಯಮಲೋಕದಲ್ಲಿ ನಡೆದ ನಾಟಕ. ಇದರಲ್ಲಿಯು ವಿಡಂಬನೆಯ ಕಲೆ ತುಂಬ ಪ್ರಭಾವಶಾಲಿಯಾಗಿದೆ. ಅಜೀರ್ಣದಿಂದ ಸತ್ತು ಯಮಲೋಕಕ್ಕೆ ಬಂದ 'ರಂಗನಾಥ' ಎಂಬ ಬ್ರಾಹ್ಮಣೋತ್ತಮನ ಪೌರ್ಜನ್ಯದ ಪರಿಪೋಷಣೆಯೆ ಇದರ ವಸ್ತು. ತಂತ್ರದಲ್ಲಿ ತುಂಬ ಹೊಸತನವಿದೆ ಬಡವನಾದ ಸಿರಿಯಪ್ಪನೂ ವಿಧವೆಯಾದ ಲಾವಣ್ಯೆಯೂ ತಂತಮ್ಮ ಕರುಣಕಥೆಗಳಿಂದ ರಂಗನಾಥನ ದುಷ್ಪಜಾರಿತ್ರ್ಯದ ಮೇಲೆ ಬೆಳಕನ್ನು ಕೆಡಹುತ್ತಾರೆ. ವಸ್ತು ಕರುಳನ್ನು ಕೊರೆಯುವಂತಹದಾದರೂ, ಯಮ-ಚಿತ್ರ-ಗುಪ್ತರ ಮಾತುಕತೆಗಳಿಂದ ಕೂಡಿದ ಬೆಳಿವಣಿಗೆ, ಹೊಟ್ಟೆ ಹಿಡಿಸಲಾರದಂತೆ ನಗಿಸುವುದು.

'ನಾನೇ ಸತ್ತಾಗ' ಎಂಬುದರಲ್ಲಿ ಕೌಟುಂಬಿಕರ ಸ್ವಾರ್ಥ ಬುದ್ಧಿಯ ವಿಡಂಬನೆಯಿದೆ. ಮನುಷ್ಯ ಸತ್ತ ಮೇಲೆ ಹೆಂಡತಿ, ಅತ್ತೆ, ಮಕ್ಕಳು, ತಮ್ಮಂದಿರು ಎಲ್ಲರೂ ಅಳುವುದು ತಂತಮ್ಮ ಕೊರತೆಯ ಕಾರಣಕ್ಕಾಗಿ ಎಂಬುದನ್ನು ಸಹಜವಾಗಿ ಚಿತ್ರಿಸಿ ನಗಿಸಿದ ಲೇಖಕರು, ತಾಯಿಯ ಒಂದೇ ಒಂದು ನಿಃಸ್ವಾರ್ಥ-ನಿಷ್ಕಾಮ-ಪೂರಿತ ಹೃದಯದ ವಾಣಿಯಿಂದ, ವಾಚಕರ ಎದೆಯನ್ನು ಕರಗಿಸಿ ಬಿಡುವರು. ಸತ್ತ 'ಬೀಜಿ' ಎದ್ದು 'ಅಮ್ಮಾ ನಿನಗಾಗಿಯೇ ನಾನು ಬದುಕಿರಬೇಕಂತಮ್ಮಾ! ದೇವರು ಪರಲೋಕದಿಂದ ವಾಪಸು ಕಳಿಸಿಬಿಟ್ಟ ನನ್ನ!' ಎಂದು ತಾಯನ್ನು ನಮಸ್ಕರಿಸುವಾಗ, ಸಹೃದಯರು ಅಳು-ನಗುಗಳ ಸಮ್ಮಿಶ್ರ ಭಾವವನ್ನು ಅನುಭವಿಸದಿರಲಾರರು.

'ಏಕೀಕರಣ' ಎಂಬ ಕೊನೆಯ ನಾಟಕದಲ್ಲಿ, ಕನ್ನಡದ ಬೇರೆ ಬೇರೆ ದೇಶಿಗಳು ಒಟ್ಟುಗೂಡಿದಾಗ, ಎಂತಹ ಆಭಾಸವಾಗಬಹುದೆಂಬುದನ್ನು ಗದುಗಿನ ವಕೀಲರೊಬ್ಬರ ಮನೆತನದ ಕತೆಯಿಂದ ಚಿತ್ರಿಸಿರುವರು. ವಕೀಲರ ಹೆಂಡತಿ ಮೈಸೂರು ಸೀಮೆಯವಳು. ತಾಯಿ ಬಳ್ಳಾರಿಯಾಕೆ. ಅಡಿಗೆಯ ಮಾಣಿ ಮಂಗಳೂರು ಕಡೆಯವ. ಮನೆಗೆ ಬಂದ ಅತಿಥಿ ಕೊಯಂಬತ್ತೂರಿನವ. ಅಲ್ಲಲ್ಲಿಯ ಭಾಷಾ ವೈಲಕ್ಷಣ್ಯಗಳು ಒಬ್ಬರೊಬ್ಬರಿಗೆ ತಿಳಿಯದೆ ಎಂತೆಂತಹ ವಿಚಿತ್ರ ನಡೆಯಿತೆಂಬುದನ್ನು ತುಂಬ ವಿನೋದವಾಗಿ ಹೇಳಿದ್ದಾರೆ.

'ಬೀಚಿ' ಯವರ ಈ ಕೃತಿಗಳಲ್ಲಿಯ ನಗೆ ಇನ್ನೊಬ್ಬರನ್ನು ಸ್ತೋಯಿಸಿ ನರಳಿಸುವಂತಹದಲ್ಲ. ವಿಡಂಬನೆ ಲೋಕದಲ್ಲಿ ಮನುಷ್ಯತ್ವ ಬೆಳೆದು ಬಾಳಬೇಕೆಂಬ ಒಳ್ಳೆಯ ಆಪೇಕ್ಷೆಗಾಗಿ. ಪಾತ್ರ ನಿರ್ಮಾಣದಲ್ಲಿ ಸಹಜತೆಯಿದೆ, ಕಲಾ ಚಮತ್ಕೃತಿಯಿದೆ. ಸಂವಾದಗಳಲ್ಲಿ ಸತ್ತ್ವವಿದೆ, ರಭಸವಿದೆ. ಕಿರಿಯ ಮಾತುಗಳ ಹಿಂದೆ ಹಿರಿಯ ಅರ್ಥ ಹುದುಗಿಕೊಂಡಿದೆ. ಅಚ್ಚಿನ ತಪ್ಪು ಮಾತ್ರ ಆಗಾಗ ಅನ್ನದಲ್ಲಿ ಹರಳು ಬಂದಂತಾಗುವುದು. 'ಬೀಚಿ' ಯವರು ಇಂತಹ ಕೃತಿಗಳನ್ನು ಕನ್ನಡಕ್ಕೆ ಇನ್ನೂ ಹೆಚ್ಚಾಗಿ ಕೊಡಲಿ.

—ಬೆಟಗೇರಿ ಕೃಷ್ಣಶರ್ಮ.

೪೯ ಒಡೆದ ಕನ್ನಡಿ
(ಹನ್ನೊಂದು ಹರಟೆಗಳು)

ಬರೆದವರು ಶ್ರೀ. ಎನ್. ಎಸ್. ಗದಗಕರ, ಧಾರವಾಡ. ಬೆಲೆ ೧೨ ಆಣೆಗಳು.

ಸರ್ಕಸಿನಲ್ಲಿ ಕೊಂಗಿಯಿರುವಂತೆ ಸಾಹಿತ್ಯದಲ್ಲಿ ಹರಟೆಗಾರ. ಪ್ರತಿಯೊಂದು ಕಸರತ್ತಿನ ಪರಿಚಯ ಚೆನ್ನಾಗಿದ್ದಾಗಲೇ ಕೊಂಗಿಯ ಜೇಷ್ಟೆ ಪ್ರೇಕ್ಷಕರನ್ನು ನಗಿಸಬಲ್ಲದು; ಅದಿಲ್ಲದಿದ್ದರೆ ಆಭಾಸವೆನಿಸಬಹುದು. ಕಸರತ್ತುಗಳನ್ನು ನೋಡಿ ಗಂಭೀರ ಆಶ್ಚರ್ಯವನ್ನು ಪಡೆದ ಪ್ರೇಕ್ಷಕರನ್ನು, ತನ್ನ ಕೋಡಿಗತನದೊಂದಿಗೆ ಆ ಪ್ರತಿಯೊಂದು ಕಸರತ್ತನ್ನೂ ಸಹಜವಾಗಿ ಮಾಡಿ ತೋರಿಸುವುದರಿಂದಲೆ ಕೊಂಗಿ ನಗಿಸುವನು. ಅದರಂತೆಯೆ ಹರಟೆಗಾರ: ಎಲ್ಲರ ಬಗೆಯ ಲೋಕಾನುಭವವನ್ನೂ ಪಡೆದವನಾಗಿದ್ದು, ಮಿಕ್ಕವರು ಗಂಭೀರದೃಷ್ಟಿಯಿಂದ ಕಾಣುವುದನ್ನು 'ಇದರಲ್ಲೇನು ಮಹತ್ವವಿದೆ?' ಎಂಬ ಲಘುದೃಷ್ಟಿಯಿಂದ ಕಂಡು, ತಾನು ಕಂಡುದನ್ನು ವಿಲಕ್ಷಣಪೂರ್ಣವಾದ ತರ್ಕಸರಣಿಯಲ್ಲಿ ಹೇಳುವುದು ಹರಟೆಗಾರನ ರೀತಿ. ಅವನ ಲಘುದೃಷ್ಟಿಯ ಚಳಕವೆ ವಾಚಕರಲ್ಲಿ ಹಾಸ್ಯವನ್ನು ಹುಟ್ಟಿಸಬಲ್ಲದು.

ಶ್ರೀಮಾನ್ ಗದಗಕರರಲ್ಲಿ ಹರಟೆಗಾರನ ಲಕ್ಷಣಗಳು ಸಾಕಷ್ಟು ಇವೆ. ಲೋಕವನ್ನು ಸೂಕ್ಷ್ಮದೃಷ್ಟಿಯಿಂದ ಕಾಣುವ ಕಣ್ಣು ಇದೆ. ವ್ಯಕ್ತಿಯ ಮನಸ್ಸನ್ನೂ ಘಟನೆಯ ಹಿಂದಿನ ವ್ಯಕ್ತಿಗಳನ್ನೂ ಚೆನ್ನಾಗಿ ಅರಿತುಕೊಳ್ಳಬಲ್ಲರು. ಜನವಾಡುವ ಮಾತುಕತೆಗಳನ್ನೆಲ್ಲ ಮನದ ಕಿವಿಯಿಂದಲೂ ಕೇಳುವರಲ್ಲದೆ, ಕನ್ನಡ, ಸಂಸ್ಕೃತ, ಇಂಗ್ಲಿಷ್ ಸಾಹಿತ್ಯಗಳನ್ನು ಪ್ರೀತಿಯಿಂದ ಅಭ್ಯಾಸಿಸುವವರು. ಇಲ್ಲಿಯ ಹರಟೆಗಳನ್ನು ಓದುತಿರುವಾಗ, ಪ್ರತಿಯೊಂದರಲ್ಲಿಯೂ ಲೇಖಕರ ಈ ಮೇಲಿನ ಗುಣಗಳು ನಿದರ್ಶನಕ್ಕೆ ಬಾರದೆ ಹೋಗವು.

'ಒಡೆದ ಕನ್ನಡಿ' 'ನೀರಿಲ್ಲದ ಬಾವಿ' 'ಬಡಾಡಿ ಕೊಡೆ' ಇವುಗಳ ಲೇಖನತಂತ್ರ ಒಂದೆ ಬಗೆಯದು. ಮಾನವಜೀವನವನ್ನು ಪರ್ಯಾಯವಾಗಿ ರೂಪಿಸುವ ರೂಪಕಪ್ರಬಂಧಗಳಿವು. 'ಧರ್ಮಾರ್ಥ ವಾಚನಾಲಯ' 'ಬಸ್ ನಿಲ್ದಾಣ' ಇವು ವಿಡಂಬನೆ ಹುದುಗಿಕೊಂಡಿರುವ ವಾಸ್ತವಚಿತ್ರಗಳು. 'ಹುಚ್ಚು' 'ಗುಲಾಬಿ' 'ನಾಲಗೆ' ಗಳು ಶುದ್ಧ ಹರಟೆಗಳು. 'ಗಾಡಿ ತಪ್ಪಿದಾಗ' ಎಂಬುದು ಒಂದು ಹೊಳೆಮಾತಿನ ವಿವರಣೆ: ಜೀವನದಲ್ಲಿ ವಿಫಲ, ನಿರರ್ಥಕ ಎಂಬುದು ಇಲ್ಲವೇ ಇಲ್ಲ ಎಂಬ ಸತ್ಯಾನುಭವ ಇಲ್ಲಿ ನಿರೂಪಿತವಾಗಿದೆ. 'ಗತಿಗೆಟ್ಟ ಗಡಿಯಾರ'ದಲ್ಲಿ ಮಾತಿನ ಮೌಜನ್ನು ಕಾಣಬಹುದು. 'ಸಾಯ್‌ಕಲ್' ಹರಟೆ ಮಿಕ್ಕ ಹರಟೆಗಳಷ್ಟು ತುಂಬಿ ಬಂದಿಲ್ಲ.

ಲೋಕವನ್ನು ವಿಶ್ಲೇಷಣೆ ಮಾಡಿ ನೋಡುವ ದೃಷ್ಟಿಯಿಲ್ಲದಿದ್ದರೆ ಮಾನವನ ಹೃದಯ-ಮನಸ್ಸು-ಬುದ್ಧಿಗಳ ಅಶಕ್ತತೆ ಗೊತ್ತಾಗದು. ಇದು ಗೊತ್ತಾಗುತ್ತ ಹೋದಂತೆ ಹರಟೆಗಳು ರಸವತ್ತಾಗುವುವು. ಇದನ್ನರಿತ ಗದಗಕರರ ಹರಟೆಗಳು ಇನ್ನೂ ಒಳ್ಳೆಯವಾಗುವವೆಂದು ನಿರೀಕ್ಷಿಸಿದರೆ ತಪ್ಪಲ್ಲ.

—'ಕುಂಜವಿಹಾರಿ'

ಸಾದರ ಸ್ವೀಕಾರ

★

೮೧. **ಕೃತ್ತಿಕೆ** (ಕವನಸಂಗ್ರಹ). ೭೫ ಸಾನೆಟುಗಳಿವೆ. ಬರೆದವರು 'ಕುನೆಂಪು.' ಮೈಸೂರು ಕಾವ್ಯಾಲಯದ 'ಕನ್ನಡ ಕಾವ್ಯಮಾಲೆ'ಯ ೪೭ನೆಯ ಕುಸುಮ. ಕ್ರೌ. ಅ. ೮೦ ಪುಟಗಳು. ಬೆಲೆ ೧-೪-೦.

೮೨. **ಬಿಳಿ ಹಾರಿನಾಳ** (ಕವನಸಂಗ್ರಹ). ಲೇಖಕರು ಶ್ರೀ. ಎಸ್. ಕೆ. ಮರಳಿಹಳ್ಳಿ ಎಂ. ಎ. ಧಾರವಾಡ ಅವರು. ಲೇಖಕರೆ ಪ್ರಕಾಶಕರು. ಕ್ರೌ. ಅ ೪ ಪುಟಗಳು. ಬೆಲೆ ?

೮೩. **ಹಿಡಿಹೂವು** (ದಿವಂಗತ 'ಶ್ರೀ'ಯವರ ನೆನಹಿಂಗಾಗಿ ಪ್ರೇಮಿಗಳ ಸಂಕಲನ.) ಲೇಖಕರು ಶ್ರೀಮಾನ್ ಎಂ ವಿ. ಸೀತಾರಾಮಯ್ಯ ಎಂ. ಎ. ಅವರು. ದೊರೆಯುವ ಸ್ಥಳ: ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ನಗರ. ಕ್ರೌ. ಅ. ೧೦ ಪುಟಗಳು. ಬೆಲೆ ೦-೧೦-೦.

೮೪. **ಆ ಚಿತ್ರಗಳು ಮತ್ತು ಇತರ ಕಥನ ಕವನಗಳು** (ಕವನಸಂಗ್ರಹ). ಬರೆದವರು 'ರಾಘವ'. ಪ್ರಕಾಶಕರು ಶ್ರೀ. ಎಂ. ವಿ. ಸೀತಾರಾಮಯ್ಯ ಎಂ. ಎ. ಬೆಂಗಳೂರು ನಗರ ಪುಸ್ತಕ ದೊರೆಯುವ ಸ್ಥಳ: ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ನಗರ. ಕ್ರೌ. ಅ. ೬೦ ಪುಟಗಳು. ಬೆಲೆ ೦-೧೦-೦.

೮೫. **ದಾದಿರನ್ನೆ** (ಮಕ್ಕಳ ಪದ್ಯಕಥೆ). ಬರೆದವರು 'ರಾಘವ'. ಪ್ರಕಾಶಕರು ಶ್ರೀಮಾನ್ ಎಂ ವಿ ಸೀತಾರಾಮಯ್ಯ ಎಂ. ಎ. ಬೆಂಗಳೂರು ನಗರ. ದೊರೆಯುವ ಸ್ಥಳವು ಮೇಲಿನ ಪ್ರಕಾ. ಪ್ರಕಟನಮಂದಿರ ಕ್ರೌ ಅ. ೧೬ ಪುಟ. ಬೆಲೆ ೦-೩-೦.

೮೬. **ಮದ್ರಾಸಿನ ಕರ್ನಾಟಕ ಸೇವಾಸಂಘದ ಮೊದಲನೆಯ ವರ್ಷದ ವರದಿ.** ಕ್ರೌ. ಅ. ೭೮ ಪುಟಗಳು.

೧೯೪೪ನೆಯ ಫೆಬ್ರುವರಿ ೭೬ನೆಯ ತಾರೀಖಿಗೆ ಪ್ರಾರಂಭವಾದ ಸಂಸ್ಥೆಯು ಮದ್ರಾಸಿನಲ್ಲಿರುವ ಕನ್ನಡಿಗರ ಸಂಘಟನೆ, ವಿದ್ಯಾಪೋಷಣ, ಸಂಸ್ಕೃತಿ ಪ್ರಚಾರಗಳ ಉದ್ದೇಶವನ್ನಿರಿಸಿಕೊಂಡು ಕಾರ್ಯಮಾಡುತ್ತಲಿದೆ. ಕಾರ್ಯಕಾರಿ ಮಂಡಲಿಯಲ್ಲಿ ಸೇರಿಸಿನ ಹಲವು ಜನ ಕೆನೆಗನ್ನಡಿಗರು ಇದ್ದಾರೆ. ಪುಸ್ತಕ ಭಂಡಾರ, ಭಜನೆ, ವಾಗ್ವರ್ಧಿನೀಸಭೆ, ಕೈಬರೆಹದ ಪತ್ರಿಕೆ, ಧನಸ್ಪರ್ಧೆ ಇವೆಲ್ಲ ಚಟುವಟಿಕೆಗಳು ವರದಿಯ ವರುಷದಲ್ಲಿ ನಡೆದಿವೆ. ೧-೧೨-೪೫ ರಿಂದ ೩೦-೬-೪೬ರ ವರೆಗಿನ ಆಯ-ವ್ಯಯ ವಿವರಣೆಯಂತೆ ಸದಸ್ಯತ್ವದ ಹಣ ಒಳಗೆ ರೂ. ೧೧೦ ಆಣೆಗಳು ಸಂಸ್ಥೆಗೆ ಬಂದಿದೆ. ಈ ಎಳೆಯ ಸಂಸ್ಥೆ ಬಲಿತು ಬೆಳೆದು, ಮದ್ರಾಸಿನ ಕನ್ನಡಿಗರನ್ನೆಲ್ಲ ತನ್ನ ನೆರಳಿನಲ್ಲಿ ಒಟ್ಟುಗೂಡಿಸಲೆಂದು ಹಾರೈಕೆ.

೮೭. **ಕರ್ನಾಟಕ ಬ್ರಾಹ್ಮಣ ಎಜ್ಯುಕೇಶನ್ ಸೊಸೈಟಿ** ಬಾಂಬೆ ಈ ಸಂಸ್ಥೆಯ ವರದಿ. (೫-೨-೪೬ರಿಂದ ೩೦-೬-೪೬ರ ವರೆಗಿನ ಅವಧಿಯದು).

ಕನ್ನಡ ನಾಡಿನಲ್ಲಿ ಇದುವರೆಗೆ ಬ್ರಾಹ್ಮಣರನ್ನು ಸಂಘಟನೆಗೊಳಿಸುವ ಸಂಸ್ಥೆಯು ಕಲಿಯೋರಿರಲಿಲ್ಲ. ನಾಡಿನ ಬಹುಜನ ಸಾರ್ವಜನಿಕ ಕಾರ್ಯಕರ್ತರು ಬ್ರಾಹ್ಮಣರೇ ಇದ್ದರೂ, ವ್ಯಾಪಕ ದೃಷ್ಟಿಯನ್ನಿರಿಸಿಕೊಂಡ ಅವರು, ಒಂದೆ ಒಂದು ಜಾತಿಯನ್ನು ಸಂಘಟಿಸುವ ಸಂಸ್ಥೆಯನ್ನು ತೆರೆಯುವುದೆಂದರೆ ಸಂಕುಚಿತ ದೃಷ್ಟಿಯ ಕೆಲಸವೆಂದು ಭಾವಿಸಿರಬಹುದು. ರಾಷ್ಟ್ರೀಯತ್ವದ ವಿಶಾಲಭಾವನೆಗೆ ಇದು ಸಂಕುಚಿತದೃಷ್ಟಿಯದಾಗಿ ತೋರಿದರೆ ಆದೀತು ಅಸ್ವಾಭಾವಿಕವೂ ಅಲ್ಲ. ಆದರೆ ಭಾರತೀಯರ ದುರ್ದೈವದ ಮೂಲಕ, ಇಂದು ಸಮ್ಮೆಲ್ಲಿ ಜಾತಿ-ಕುಲಗಳ ಸಂಘಟನಾತ್ಮಕ ಸಂಸ್ಥೆಗಳೇ ಹೆಚ್ಚಾಗಿ ಹೊರಟು ಕಾರ್ಯ. ಪ್ರವೃತ್ತವಾಗಿ, ಆಯಾ ಜಾತಿ-ಕುಲಗಳ ಹಿತಸಂಬಂಧದ ಮಟ್ಟಿಗೆ ಕಾರ್ಯಮಾಡುತ್ತಿರುವುವು ಸಮಾಜವನ್ನು ಸಹಜವಾಗಿ ಒಡೆಯಬಹುದಾಗಿದ್ದ ಈ ಜಾತಿ-ಕುಲನಿಷ್ಠ ಸಂಸ್ಥೆಗಳ ಚಟುವಟಿಕೆ, ನಮ್ಮನ್ನಾಳುವ ಪರಕೀಯ ಸರಕಾರಕ್ಕೆ ಅವಶ್ಯವಾಗಿ ಬೇಕಾಗಿದ್ದಿತು. ಆದುದರಿಂದ ಅಂತಹ ಸಂಸ್ಥೆಗಳ ಬೇಡಿಕೆಗಳನ್ನು ಸರಕಾರ ಪುರಸ್ಕರಿಸಿದುದರಿಂದ, ಬೇರೆ ಬೇರೆ ಜಾತಿ-ಕುಲಗಳ ಜನರಿಗೆ ಅನೇಕ ಜೀವನಾನುಕೂಲತೆಗಳೂ ಜೊತೆತುವು. ಕರ್ನಾಟಕದ ಬ್ರಾಹ್ಮಣರೂ ಇದೇ ಕಾಲದಲ್ಲಿ ತಮ್ಮ ಸಂಸ್ಥೆ ಸ್ಥಾಪಿಸಿ ಏನಾದರೂ ಚಟುವಟಿಕೆ ನಡೆಯಿಸಿದ್ದರೆ, ಅವರೂ ಕೆಲಪ್ರೊಂದು ಪ್ರಯೋಜನ ಪಡೆಯಬಹುದಾಗಿದ್ದಿತು. ಆದರೆ ಆಗ ಅವರು ಸಂಪೂರ್ಣ ಉದಾಸೀನರಾಗಿ ವರ್ತಿಸಿದುದರಿಂದ, ಎಲ್ಲ ರೀತಿಯಿಂದಲೂ ನಿರ್ಲಕ್ಷ್ಯಕ್ಕೊಳಪ್ಪಟ್ಟು, ಕರ್ನಾಟಕದಲ್ಲಿಯ ಬ್ರಾಹ್ಮಣಸಮಾಜವಿಂದು ಆರ್ಥಿಕದೃಷ್ಟಿಯಿಂದಲೂ ಸಂಸ್ಕೃತಿಯ ದೃಷ್ಟಿಯಿಂದಲೂ ತೀರ ಹಿಂದುಳಿದುಬಿಟ್ಟಿದೆ. ಒಂದು ಕಾಲದಲ್ಲಿ 'ಮುಂದುವರಿದ ಜನರು' ಎಂದು ಹೇಳಿಸಿಕೊಂಡ ಬ್ರಾಹ್ಮಣರು, ಇಂದು ಹಿಂದುಳಿದವರಿಗಿಂತ ಹಿಂದುಳಿದವರಾಗಿರುವರು. ಅವರ ಉದ್ಧಾರವ ಉದ್ದೇಶವನ್ನಿರಿಸಿಕೊಂಡ ಈ ಸಂಸ್ಥೆ, ರಾಷ್ಟ್ರೀಯತೆಯ ವ್ಯಾಪಕಮನೋಭಾವವನ್ನಿರಿಸಿಕೊಂಡು, ಅದರ ಪರಿಪೋಷಣೆಗೆಂದೇ ಬ್ರಾಹ್ಮಣಸಮಾಜವನ್ನು ಸಂಘಟಿಸುವ ಕೆಲಸವಾಡುತ್ತಿರಲೆಂದು ನಮ್ಮ ಆಶೀ. ಡಾ. ಭಗೀರಥರಾವ ದೇಶಪಾಂಡೆಯವರು ಸಮಾಜಹಿತಬುದ್ಧಿಯಿಂದ ಅನೇಕ ಕನ್ನಡಿಗ ಸುಜನೀಯರನ್ನು ಹುರಿದುಂಬಿಸಿ, ಈ ಸಂಸ್ಥೆಯನ್ನು ಪ್ರಾರಂಭಿಸಲು ಪೆಣಗಿ ಯಶಸ್ವಿಗಳಾಗಿದ್ದಾರೆ. ಹಣವಿದ್ದ ಬ್ರಾಹ್ಮಣರು ಕೊಡುಗೈಯವರಾಗಿ ಈ ಸಂಸ್ಥೆಯನ್ನು ಪೋಷಿಸಬೇಕು.

೮೮. **ಭೈರವಿ** (ಅನುವಾದಿತ ಕಾದಂಬರಿ). ಮೂಲ ಲೇಖಕರು ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು

ಶ್ರೀ. ನೇಳುಂಡಿ ಮಲ್ಲಾರಿ. ಮಾಂಟಗಾರರು ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಕ್ರಾ. ಆ ೩೧೦ ಪುಟಗಳು; ಬೆಲೆ ೩-೪-೦.

೮೯. ಗಾಂಧೀ ವಿಚಾರದೋಹನ (ಅನುವಾದಿತ ಗ್ರಂಥದ ೩ನೆಯ ಆವೃತ್ತಿ) ಮೂಲ ಲೇಖಕರು ಶ್ರೀಮಾನ್ ಕಿಶೋರಿಲಾಲ ಮಶ್ರೂವಾಲಾ. ಅನುವಾದಕರು ಶ್ರೀ. ಗುರುನಾಥ ಜೋಶಿ. ಯವರು. ಸಂಪಾದಕರು ಶ್ರೀಮಾನ್ ರಂ. ರಾ. ದಿವಾಕರರು. ಪ್ರಕಾಶಕರು ಕರ್ನಾಟಕ ಶಿಕ್ಷಣಸಮಿತಿ, ಹುಬ್ಬಳ್ಳಿ ಕ್ರಾ. ಆ. ೭೦೦ ಪುಟಗಳು. ಬೆಲೆ ೩-೮-೦.

೯೦. ಕುಸುಮ (ಹೊನ್ನಾವರ ನ್ಯೂ ಇಂಗ್ಲಿಷ್ ಸ್ಕೂಲಿನ ಕರ್ನಾಟಕ ಸಂಘದ ವೈಬರೆಹದ ಪತ್ರಿಕೆ). ಸಂಪಾದಕರು ಶ್ರೀ. ಜಿ. ಪಿ. ಶೆಟ್ಟಿ. ಫೂ. ಕ್ರಾ. ಥಿನ ೪೦ ಪುಟಗಳು.

ಸ್ಕೂಲಿನ ವಿದ್ಯಾರ್ಥಿಗಳ ಸಾಹಿತ್ಯನಿರ್ಮಾಣದ ರಂಗ ಪ್ರವರ್ತನವಿದು. ಕವಿತೆ, ಕತೆ, ಪ್ರಬಂಧ ಮೊದಲಾದ ವಿವಿಧ ಪ್ರಯೋಗಗಳೂ ಇವೆ. ಇದರಲ್ಲಿ ಬಂದಿರುವ 'ಇಂಗ್ಲಿಷ್ ವಿದ್ಯೆ' ಎಂಬ ಕವಿತೆ ಶ್ರೀ. ರಾಮಚಂದ್ರ ಹೇಜೀಬರದು. ಇನ್ನೊಬ್ಬರ ಕವಿತೆಯನ್ನು ತನ್ನದೆಂದು ಪ್ರಕಟಿಸುವುದು ಒಳ್ಳೆಯದಲ್ಲ. ಹೊನ್ನಾವರದ ವಿದ್ಯಾರ್ಥಿವೃಂದದ ಈ ಸಾಹಿತ್ಯ 'ಕುಸುಮ' ಅರಳಿ, ಕನ್ನಡನಾಡಿನ ಕಂಪನ್ನು ಹೆಚ್ಚಿಸಲಿ.

೯೧. ಬಾಳಿನ ಹಾದಿ (ದಾಂಪತ್ಯಸುಖದ ಹೆದ್ದಾರಿ). ಅಮೇರಿಕದ ವಿಖ್ಯಾತ ಮನೋವಿಜ್ಞಾನಿಯಾದ ಮಾಕ್‌ಡೂಗಲ್‌ನ ವಿಚಾರಸಾರವಿದು. ಕನ್ನಡಕ್ಕೆ ಇಳಿಸಿದವರು ಶ್ರೀಯುತ ಎಜ್. ಎಸ್. ನೆಗಳೂರ ಎಂ. ಎ., ಬಿ. ಟಿ ಧಾರವಾಡ ಅವರು. ಪ್ರಕಾಶಕರು ಶ್ರೀ. ಜಿ. ಕೆ. ಕೇಳಕರ 'ಸರಸ್ವತೀ ನಿಲಯ' ಧಾರವಾಡ ಕ್ರಾ. ಆ. ೪೧೧ ಪುಟಗಳು. ಬೆಲೆ ೦-೮-೦.

೯೨. ಪಲಾಯನ (ಕವನಸಂಗ್ರಹ) ಬರೆದವರು ಶ್ರೀಯುತ ವಿ ಜಿ. ಭಟ್ಟರು, ಕಡತೋಕಾ. ಪ್ರಕಾಶಕರು ಶ್ರೀ. ಮ. ಗ. ಶೆಟ್ಟಿ ಬಂಕೆಕೊಡ್ಲು, ಉತ್ತರ ಕನ್ನಡ ಜಿಲ್ಲಾ. ಫೂ ಕ್ರಾ. ಥಿನ ೧೦೦ ಪುಟಗಳು. ಬೆಲೆ ೧-೪-೦.

೯೩. ನಟಸಾರ್ವಭೌಮ (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು ಶ್ರೀಮಾನ್ ಆ ನ. ಕೃಷ್ಣರಾಯರು ಬೆಂಗಳೂರು. ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ ಅರಳಿದ ಕುಸುಮ. ಕ್ರಾ. ಅ. ೪೨೮ ಪುಟಗಳು. ಬೆಲೆ ೩-೮-೦.

೯೪. ಮಾದಯ್ಯ ಮತ್ತು ವೇಣುವಿನ ಕೊನೆಯ ದಿನಗಳು (ಎರಡು ನೀಳ್ಗತೆಗಳು) ಲೇಖಕರು 'ಭಾರತೀಸುತ' ಕೊಡಗು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೩ನೆಯ ವರ್ಷದ ೬ನೆಯ ಕುಡಿ. ಕ್ರಾ. ಆ. ೧೧೬ ಪುಟ. ಬೆಲೆ ೧-೪-೦.

೯೫. ಬೆಳವಲದ ಭಾಗ್ಯಲಕ್ಷ್ಮಿ (ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಶೀ. ಗೋ. ಕುಲಕರ್ಣಿ ಧಾರವಾಡ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೩ನೆಯ ವರ್ಷದ ೫ನೆಯ ಕಿರಣ. ಕ್ರಾ. ಆ. ೨೦೧ ಪುಟಗಳು. ಬೆಲೆ ೨-೪-೦.

೯೬. ಸುದರ್ಶನ (ಸಾಮಾಜಿಕ ಕಾದಂಬರಿಯ ೩ನೆಯ ಆವೃತ್ತಿ.) ಬರೆದವರು 'ಆನಂದಕಂದ'. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಗಾಂಧೀ ಚೌಕು, ಧಾರವಾಡ. ಕ್ರಾ. ಆ. ೧೪೪ ಪುಟಗಳು. ಬೆಲೆ ೧-೪-೦.

೯೭. ರಾಜಯೋಗಿ (ಐತಿಹಾಸಿಕ ಕಾದಂಬರಿಯ ೩ನೆಯ ಆವೃತ್ತಿ.) ಬರೆದವರು 'ಆನಂದಕಂದ'ರು. ಪ್ರಕಾಶಕರು ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ ಆ. ೧೪೦ ಪುಟಗಳು. ಬೆಲೆ ೨-೦-೦.

೯೮. ನೂಚಿ ಶಿಲ್ಪಕಲೆ (ಹೊಲಿಗೆಯ ವಿಚಾರದ ಗ್ರಂಥ) ಬರೆದವರು ಶ್ರೀ. ಹಳಪೇಟಿ ಚಿಂತಾಮಣಿರಾಯರು, 'ಸೂಚಿಶಿಲ್ಪ ವಿಶಾರದ' ಧಾರವಾಡ. ಪ್ರಕಾಶಕರು ಡಾ. ಕಮಲಾಪುರ ಕಾಂತರಾಯರು. ಗೌರವಕಾರ್ಯದರ್ಶಿ ಕ. ವಿ. ವ. ಸಂಸ್ಥ, ಧಾರವಾಡ. ರೊಯಲ್ ಪ್ಲಿದ ೧೧೨ ಪುಟಗಳು. ಬೆಲೆ ಸಾದಾ ಪ್ರತಿಗೆ ೨-೪-೦. ಸುಂದರ ಪ್ರತಿಗೆ ೩-೦-೦.

೯೯. ಶಬ್ದಪ್ರಪಂಚ (ಧ್ವನಿವಿಜ್ಞಾನವಿಚಾರ). ಲೇಖಕರ ಶ್ರೀ. ಆರ್. ಎಲ್. ನರಸಿಂಹಯ್ಯ ಎಂ. ಎಸ್‌ಸಿ. ಮೈಸೂರು ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೫೬ನೆಯ ಗ್ರಂಥ. ಫೂ. ಕ್ರಾ. ಆ. ೭೬ ಪುಟಗಳು ಬೆಲೆ ೦-೩-೦

(೨೯ನೆಯ ಪುಟದಿಂದ ಮುಂದೆಸಾಗಿದ್ದು)

ಹೋಗಿಯೆ ಹೋಗುವುದೆಂಬುದಕ್ಕೆ ಮಾಲವೀಯರ ದಿವ್ಯಚಾರಿತ್ರ ನಂಬುಗೆಯನ್ನು ಕೊಡುತ್ತದೆ.

' ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇತ್ ಶತಂ ಸಮಾಃ!'

ಎಂಬ ಉಪನಿಷದ್‌ವಾಣಿಯನ್ನು ಮನ್ನಿಸಿ ವರ್ತಿಸಲು ಮಾಲವೀಯಾಜಿಯವರು ಜೀವನದುದ್ದಕ್ಕೂ ಹೆಣಗಿದವರು. ಇನ್ನೂ ಬದುಕಿದ್ದರೆ, ಅವರ ಕರ್ಮಯೋಗ ಇನ್ನೂ ನಡೆಯುತ್ತಿದ್ದಿತು. ಕರ್ಮಯೋಗಿಗೆ ದಣಿವಿಲ್ಲ. ಪೇನ್‌ಶನಿನ ಅಪೇಕ್ಷೆಯಿರದು. ಆತ ಪುನರ್ಜನ್ಮ ಬಯಸಿದರೂ ಕರ್ಮ ಮಾಡಲಿಕ್ಕೆಂದೇ ಬಯಸುವನು. ಸ್ಥಿತೀಯತೆಯ ಭಾವನೆ, ಕರ್ಮಯೋಗಿಗಳಾದ ಮಾಲವೀಯರಿಗೆ ಶಾಶ್ವತಸದ್ಗತಿಯನ್ನು ಬಯಸುವುದಿಲ್ಲ; ಜನೋದ್ಧಾರಕ್ಕಾಗಿ ಭಾರತದಲ್ಲಿ ಅವರ ಪುನರ್ಜನ್ಮವನ್ನು ಬಯಸುವ

—ಸಂಪಾದಕರು

ನಾಲ್ಕೂ ನಿಟ್ಟಿನ ನೋಟ

★

ಲೋಕಕಂಟಕನಾದ ಚಟುವಟಿಕೆಗಳು.

'ಲೀಗಿನ ಆಂತರಿಕ ಪ್ರಜ್ಞೋದನೆಯಿಂದಲೆ ನಡೆದಿರುವ ಬಂಗಾಲದ ನೌಕಾಲಿಯಲ್ಲಿಯ ಅತ್ಯಾಚಾರವು ಭಾರತೀಯರಲ್ಲಿ ಬೆದರಿಕೆಯನ್ನುಂಟು ಮಾಡಿಲ್ಲ; ದ್ವೇಷವನ್ನುಂಟು ಮಾಡಿದೆ; ಸೇಡು ತೀರಿಸಬೇಕೆಂಬ ಬೆಂಕಿಯನ್ನು ಹೃದಯದಲ್ಲಿ ಹೊತ್ತಿಸಿ ಇದೆ...' ಎಂಬುದಾಗಿ ಕಳೆದ ತಿಂಗಳ ನೋಟದಲ್ಲಿ ಬರೆದುದರ ಪ್ರತ್ಯಕ್ಷ ಪ್ರಮಾಣ ಬಿಹಾರದ ದೊಂಬೆಯಲ್ಲಿ ಕಂಡಿತು; ಗುರುಮುಕ್ತೇಶ್ವರ ಯಾತ್ರಿಕರ ಗಲಭೆಯಲ್ಲಿ ಅನುಭವಕ್ಕೆ ಬಂದಿತು; ಕುಲಾಬಾ ಜಿಲ್ಲೆಯ ಪಶ್ಚಿಮ ಪ್ರದೇಶದಲ್ಲೆದ್ದ ಗೊಂದಲದಲ್ಲಿ ವ್ಯಕ್ತವಾಯಿತು. ಮಹಾತ್ಮರ ಆಮರಣ ಉಪವಾಸದ ಭೀತಿ, ಉದಾರ ಹೃದಯದ ಭಾರತೀಯರ ತ್ವೇಷದ ಮೈಮರೆವನ್ನು ಕದಿಸಿಮಾಡಿದುದರಿಂದ, ಬಿಹಾರದಲ್ಲಿ ಮುಸ್ಲಿಂ ಸಮಾಜಕ್ಕೆ ವಿರೋಧವಾಗಿ ಎದ್ದ ದೊಂಬೆ ತಟ್ಟನೆ ನಿಂತುಬಿಟ್ಟಿತಲ್ಲದೆ, ಮಿಕ್ಕ ಮುಸ್ಲಿಂ ಅಲ್ಪಸಂಖ್ಯಾಕ ಪ್ರಾಂತಗಳಲ್ಲಿ ಹೆಬ್ಬಬಹುದಾಗಿದ್ದ ಹಿಂಸಾಕಾಂಡವು ತಪ್ಪಿತು. ನೌಕಾಲಿಯ ಅತ್ಯಾಚಾರ ನಡೆಯದಿದ್ದರೆ ಬಿಹಾರದ ಮುಸ್ಲಿಂ ಬಾಂಧವರಿಗೆ ಗಂಡಾಂತರದ ಸಂದರ್ಭವೇ ಒದಗುತ್ತಿರಲಿಲ್ಲವೆಂದು ಬಂಗಾಲ ಪ್ರಾಂತಿಕ ಮುಸ್ಲಿಂ ಲೀಗಿನ ಅಧ್ಯಕ್ಷ ಅಕ್ರಂ ಖಾನರೂ, ಬಿಹಾರದ ಮುಸ್ಲಿಂಲೀಗಿನ ಹೊಣೆಗಾರ ಸದಸ್ಯರೊಬ್ಬರೂ, ಬಿಹಾರದ ಖಾಕ್ಸಾರ್ ಸ್ವಯಂಸೇವಕರ ಧುರೀಣರಾದ ನೈಯದ ಬಿಹಾರಿ ಮತ್ತು ಅಕ್ತಾರ್ ಎಂಬವರೂ ಲೋಕವಿದುರು ಸಾರಿ ಹೇಳಿದ್ದಾರೆ. ಬಂಗಾಲದಲ್ಲಿಯ ಹಿಂದುಗಳ ಕಷ್ಟ-ನಷ್ಟಗಳಿಗೂ ಬೀಹಾರದಲ್ಲಿಯ ಮುಸ್ಲಿಮರ ಕಷ್ಟ-ನಷ್ಟಗಳಿಗೂ ಕಾರಣ ಸುಹ್ರವರ್ದಿಯವರ, ಹೊಣೆಗಾರಿಕೆಯನ್ನು ಮರೆತ ಲೀಗಿನ ಸರಕಾರ ಎಂದು ಅವರೊಳಗಿನ ನಂಬುಗೆಯ ಜನರೇ ಅಭಿಪ್ರಾಯಪಡುತ್ತಲಿದ್ದಾರೆ. ಇಷ್ಟೇ ಅಲ್ಲದೆ, ಸುಹ್ರವರ್ದಿಯವರ ಸರಕಾರದ ಅಧಿಕಾರಿಗಳೊಬ್ಬರು ಬಿಹಾರಕ್ಕೆ ಹೋಗಿ ಉರಿಯಲ್ಲಿ ಎಣ್ಣೆ ಸುರಿಯುವ ಕೆಲಸಮಾಡತೊಡಗಿದುದರಿಂದ, ಬಿಹಾರ ಸರಕಾರದವರು ಒತ್ತಾಯದಿಂದ ಆ ಅಧಿಕಪ್ರಸಂಗಿಯನ್ನು ಗಡಿದಾಟಿಸಬೇಕಾಯಿತು. ಇದೆಲ್ಲವನ್ನು ನೋಡಿದರೆ, ಮುಸ್ಲಿಂ ಲೀಗು ಸುವಿಚಾರಿಯಾದ ಸಲಹೆಗಾರರಿಲ್ಲದೆ ದಿಕ್ಕುಗೆಟ್ಟು ಹೋಗಿದೆಯೆಂದು ಹೇಳಬೇಕಾಗುವುದು. ಏನು ಮಾಡಬೇಕೆಂಬುದು ತಿಳಿಯದೆ ಏನೇನೋ ಮಾಡಲು ಹೋಗಿ ಲೋಕಕಂಟಕಿಯಾಗುವ ಹೊತ್ತು ಇಂದಿನ ಚಟುವಟಿಕೆಗಳಿಗೆ ಬಂದಿದೆ.

ನವಕಾಲಿ-ತಿಪ್ಪೇರಾಗಳಲ್ಲಿ ಕಾಲನ ಲೀಲೆ

ಒಂದು ರೀತಿಯಿಂದ ಪ್ರಾಂತೀಯ ಸರಕಾರದ ಸಮ್ಮತಿಯಿಂದಲೆ ನಡೆದಿದೆಯೇನೋ—ಎಂದು ಹೊರಗಿನವರೆಲ್ಲ ಭಾವಿಸಬಹುದಾಗಿದ್ದ, ನೌಕಾಲಿ-ತಿಪ್ಪೇರಾ ಜಿಲ್ಲೆಗಳಲ್ಲಿಯ—ಪರದೆಯ ಮರೆಯಲ್ಲಿಯ— ಅತಿಕ್ರಮ ಅತ್ಯಾಚಾರಗಳು ಒಂದೊಂದಾಗಿ ಬೆಳಕಿಗೆ ಬರಲುತೊಡಗಿವೆ. ಇಂದು ರಾಷ್ಟ್ರಪತಿಗಳಾಗಿರುವ ಆಚಾರ್ಯ ಕೃಪಲಾನಿಯವರು ಪತ್ನಿಸಹಿತರಾಗಿ ಅತ್ಯಾಚಾರ ಕ್ಷೇತ್ರಗಳಲ್ಲೆಲ್ಲ ತಿರುಗಾಡಿ ಬಂದರು. ಜೊತೆಗೆ ಶ್ರೀ. ಪುರುಷೋತ್ತಮದಾಸ ಟಂಡನರೂ ಶ್ರೀ. ಠಕ್ಕರ್ರಂದ್ರು ಬೋಸರೂ ಇದ್ದರು. ಅವರೆಲ್ಲ ಕಣ್ಣಾರೆ ಕಂಡ ಸಂಗತಿಗಳನ್ನು, ಮಾನವ ಹೃದಯ ಕುದಿದು ಕರಗಿ ಹೋಗುವ ಮಾತುಗಳಲ್ಲಿ ಹೊರಕ್ಕೆ ಹಾಕಿರುವರು. ಪುರುಷೋತ್ತಮದಾಸ ಟಂಡನರು ತಮ್ಮದೊಂದು ಹೃದಯ ವಿದ್ರಾವಕ ಲೇಖನದಲ್ಲಿ ಒಂದು ಕಡೆ ಹೀಗೆ ಬರೆದಿದ್ದಾರೆ:

"ಆ ರಾತ್ರಿ ಅಲ್ಲೇ (ಕೋಮಿಲ್ಲಾ) ಇದ್ದು ಅನೇಕ ಜನರನ್ನು ಕಂಡು ಮಾತನಾಡಿದೆವು. ಈ ಮಾತಿನಲ್ಲಿ, ಪುಂಡರು ಜನರನ್ನು ಕೊಲ್ಲಲು ಹೊಸ ಹೊಸ ಆಯುಧಗಳನ್ನು ಹೇಗೆ ಉಪಯೋಗಿಸುತ್ತಿದ್ದರು?—ಪೋಲೀಸರು ಸಹಾಯವನ್ನು ಕೊಡದೆ ಹೇಗೆ ಉಳಿದರು?—ಅದರ ಪ್ರತೀಕಾರವೆಂದು ಪುಂಡರು ಬಂದು ನೂರಾರು ಜನರನ್ನು ನಿಷ್ಕರುಣೆಯಿಂದ ಹೇಗೆ ಕೊಂದರು?—ಸೋದರರ ಎದುರು ಸೋದರಿಯರ ಮಾನಾಪಹಾರವನ್ನು ಹೇಗೆ ಮಾಡಿದರು?—ಮಕ್ಕಳ ಎದುರು ತಾಯಂದಿರ ಶೀಲವನ್ನು ಹೇಗೆ ಕೊಯ್ದರು? ಹೆಂಗುಸರನ್ನು ಬತ್ತಲೆ ಮಾಡಿ ಒಬ್ಬರು ಇನ್ನೊಬ್ಬರ ಬಾಯಲ್ಲಿ ಮೂತ್ರ ಹೊಯ್ಯುವಂತೆ ಹೇಗೆ ಒತ್ತಾಯ ಮಾಡಿದರು? ಜನರನ್ನು ನೆಲದ ಮೇಲೆ ಮಲಗಿಸಿ ಅವರ ಎದೆಯಲ್ಲಿ ಕಿರುಗತ್ತಿಗಳನ್ನು ತಿವಿದು, ಆ ಕತ್ತಿಗಳನ್ನು ತಮ್ಮ ಮೈಗೆ ಬಳಿದುಕೊಂಡು, ಆವೇ ಕತ್ತಿಗಳನ್ನು ಮನೆಯ ಹೆಂಗುಸರ ಮೈಗೂ ಬಳಿದು ಹೇಗೆ ಅವರ ಮಾನವನ್ನು ಭಂಗಗೊಳಿಸಿದರು?—ಇವನ್ನೆಲ್ಲ ಜನರು ನನಗೆ ಹೇಳಿದರು. ಹೇಳುಹೇಳುತ್ತಾ ಜನರು ಉನ್ಮತ್ತರಾಗಿ ಚೀರತೊಡಗಿದರು..."

ಒಂದೇ, ಎರಡೇ! ಬರೆಹದುದ್ದಕ್ಕೂ ಇಂತಹ ಭಯಾನಕ—ಭೀಭತ್ಸ ಚಿತ್ರಗಳೇ! ಅದನ್ನು ಕೇಳುವ ಯಾವ ಮಾನವ ಹೃದಯಿಯೂ—ಹಿಂದುವಿರಲಿ. ಮುಸ್ಲಿಂ ಇರಲಿ—ನರುಗದಿರಲಾರ; ಕೇಳಿ ಕೆಂಡವಾಗದಿರಲಾರ. ತಮ್ಮ ಆಪ್ತೇಷ್ಟರು ಅನುಭವಿಸಿದ ಈ ಅತ್ಯಾಚಾರವ ನಿಷ್ಠುರ ವಾರ್ತೆಗಳೇ ಬಿಹಾರದ ಜನರನ್ನು ರೇಗಿಸಿದುವು. ರೊಚ್ಚಿಗೆಬ್ಬಿಸಿದುವು. ನಿರಪರಾಧಿಗಳಾದ ಬಿಹಾರದ ಮುಸ್ಲಿಂ ಜನರನ್ನು ಆಹುತಿ ತೆಗೆದುಕೊಂಡುವು.

ಮುಸ್ಲಿಂ ಬಾಂಧವರಿಗೆ ಮುನ್ನೆಚ್ಚರಿಕೆ

ಲೀಗಿನ ನೇತಾಳುಗಳ ಅಧಿಕಾರದ ಹುಚ್ಚು, ಅವರ ಈ ಹುಚ್ಚಿನ ಕಿಚ್ಚಿಗೆ ತುಲ್ಲನ್ನೊಗೆವ ಬ್ರಿಟಿಷ್ ಅಧಿಕಾರಿ ವರ್ಗದ

ಕುಟಿಲತನ ಎರಡೂ ಸೇರಿ, ಭಾರತದಲ್ಲಿ ಬದುಕಿ ಸುಖಜೀವನ ಸಾಗಿಸಿಕೊಂಡು ಇರಬೇಕೆನ್ನುವವರಿಗೆ ಪ್ರಾಣಾಂತಿಕ ಗಂಡಾಂತರಗಳನ್ನೊದಗಿಸುತ್ತಲಿವೆ. ಇದರಿಂದ ಹಿಂದು-ಮುಸ್ಲಿಂ ಇಬ್ಬರಿಗೂ ಸುಖವಿಲ್ಲ. ಈ ಮಾತನ್ನು ಲೀಗಿನ ಅನುಯಾಯಿಗಳಾದ ಮುಸಲ್ಮಾನ್ ಜನಸಾಮಾನ್ಯರು, ತಮ್ಮ ಮೇಲಾಳುಗಳಿಗೆ ಕೂಗಿಕೂಗಿ ಹೇಳಬೇಕು. ಸ್ವಾರ್ಥದ ಜಶಿಯಿಂದ ದಡ್ಡುಗಟ್ಟಿದ ಅವರ ಹೃದಯಕ್ಕೆ ನಿಷ್ಠುರಸತ್ಯದ ಏಟನ್ನು ಕೊಟ್ಟು ಎಚ್ಚರಿಸಬೇಕು. ವರ್ತಮಾನದ ಮಾನವೋತ್ತಮ ಮಹಾತ್ಮಾಜಿಯವರಿಂದು ಏನು ಕೆಲಸ ನಡೆಯಿಸಿದ್ದಾರೆಂಬುದನ್ನು ಎಲ್ಲರೂ ಕಂದೆರೆದು ನೋಡಬೇಕು. ಮುಪ್ಪು ಮುತ್ತಿದ ಆ ಮಹಾಜೀವ, ಇಂದು ಯಾವ ಬಗೆಯ ಭೀತಿಯನ್ನೂ ಲೆಕ್ಕಿಸದೆ ಸಂಕಟ-ಗಂಡಾಂತರಗಳ ಗುಹೆಯಲ್ಲಿದ್ದು, ಶಾಂತಿಮಂತ್ರ ಪಠಿಸುತ್ತ ತಿರುಗಾಡುತ್ತಲಿವೆ. ರಾಕ್ಷಸರಂತೆ ವರ್ತಿಸಿದ ಪೂರ್ವಬಂಗಾಲದ ಪುಂಡರನ್ನೂ ಪರ್ಯಾಯದಿಂದ ಅವರಿಗೆ ಪ್ರಚೋದಕರೆನಿಸಿಕೊಂಡ ಮುಸ್ಲಿಂ ಲೀಗಿನ ದುರ್ಮಂತ್ರಿಗಳನ್ನೂ ಎಚ್ಚರಿಸಿ, ಮಾನವತೆಯ ದಾರಿಯ ಮೇಲೆ ತಂದು ಬಿಡಲು ಪ್ರಾಣಪಣದಿಂದ ಹೆಣಗುತ್ತಲಿವೆ. ಇದಕ್ಕೆ ತೀರ ವಿರುದ್ಧ ತುದಿಯಂತಿರುವ ಜಿನ್ನಾಸಾಹೇಬರು, ತಮ್ಮ ಉರಿದುನ್ನುಗುಳುವ ಮಾತುಗಳಿಂದ ಜಾತೀಯ ಕಲಹದ ಅಗ್ನಿಯನ್ನು ಪೊತ್ತಿಸುತ್ತಲಿದ್ದಾರೆ. ರಾಷ್ಟ್ರೀಯ ಮಹಾಸಭೆಯಂತಹ ಮಹತ್ತ್ವದ ಸಂದರ್ಭವನ್ನೂ ಬಿಟ್ಟುಕೊಟ್ಟು ಹಿಂದು-ಮುಸ್ಲಿಂ ಮೈತ್ರಿಯ ಬಗೆಗೆ ಮಹಾತ್ಮರು ಅಲ್ಲಿ ಕಾರ್ಯಮಾಡುತ್ತಲಿದ್ದರೆ, ಜಾತೀಯ ಜಗಳವನ್ನು ಇನ್ನಷ್ಟು ಹೆಚ್ಚಿಸಲೆಂದು ವಿಮಾನದಿಂದ ಕರಾಚಿಗೆ ಹಾರಿಬಂದು, ಜಿನ್ನಾಸಾಹೇಬರು ಮುಸ್ಲಿಂ ಲೀಗಿನ ಜುನಾವಣೆಯಲ್ಲಿಯ ಯಶಸ್ಸಿಗಾಗಿ ಕೆಲಸ ಮಾಡಲಿದ್ದಾರೆ. ಒಂದೆ ಒಂದು ಮಾತಿನಿಂದ ಮಹಾತ್ಮರು ಬಿಹಾರದ ದುಷ್ಕೃತ್ಯವನ್ನು ನಿಲ್ಲಿಸಿಬಿಟ್ಟರು. ಹೊರಕ್ಕೆ ಹಾಕಿದ ಹಿಂದು ದ್ವೇಷದ ಭಸ್ಮಾಸುರನ ಉಪಟಳವನ್ನು ಉಪಸಂಹರಿಸುವುದು ತಿಳಿಯದೆ, ದಿನದಿನವು ಜನರನ್ನು ಸಾವಿನ ಸಂಕಟಕ್ಕೆ ಗುರಿಮಾಡುತ್ತಿರುವರು ಜಿನ್ನಾಸಾಹೇಬರು. ಭಾರತೀಯ ಮುಸ್ಲಿಂ ಬಾಂಧವರು, ಬ್ರಿಟಿಷರ ಶಕುನಿತಂತ್ರವನ್ನೂ ತಮ್ಮ ಮುಂದಾಳುಗಳ ಕುರುಡುತನವನ್ನೂ ಜಿನ್ನಾಗೆ ಮನವರಿಕೆ ಮಾಡಿಕೊಂಡು, ಮೊದಲೆ ಎಚ್ಚರುಗೊಳ್ಳಬೇಕು!

ಭಾರತದ ರಾಜಕಾರ್ಯದಲ್ಲಿ ಕಡಲ ಕಡಿತ

ಇಂದಿನ ಕಾಂಗ್ರೆಸಿಗರ ರಾಜಕಾರ್ಯ ಕುಟಿಲದಾರಿಯದಲ್ಲ. ಎಂತಹ ಕುಟಿಲ ಕಾರಸ್ಥಾನವನ್ನೂ ಕಂಡುಹಿಡಿದು ಹೊರಕ್ಕೆ ಹಾಕಬಲ್ಲ ಮುತ್ಸದ್ದಿತನ ಕಾಂಗ್ರೆಸ್ ಮುಂದಾಳುಗಳಲ್ಲಿ ಸಾಕಷ್ಟು ಇದೆ. ಹೂಣನವನ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವನ್ನು ಭಾರತದ ಎಲ್ಲ ಜನರಿಗೂ ದೊರಕಿಸಿ ಕೊಡುವುದು ಅವರ ಗುರಿಯಾಗಿದೆ. ಕಾಂಗ್ರೆಸಿಗರು ವನ್ಯೆತಿಕಬಲ ಎಲ್ಲ ಬಲಗಳನ್ನೂ ನಿವಾರಿಸುವಂತಹದು. ಆದುದರಿಂದಲೆ ಅದರ ಮಾರ್ಗ ಸರಳವಾದುದು. ಎಂತಲೇ ಬ್ರಿಟಿಷರ ಭೇದನೀತಿ ಆಗಾಗ ಕಾಂಗ್ರೆಸ್ಸಿನೆದುರು ತಲೆ ತಗ್ಗಿಸಿ ನಿಲ್ಲಬೇಕಾಗುತ್ತದೆ. ಇಂದಿನ ನಡುಗಾಲ ಸರಕಾರ ಸ್ಥಾಪಿಸಿ, ಕರಟಕರಾಯನ ಕ್ರೀಡೆಯನ್ನು ನಡೆಯಿಸಬೇಕೆಂದು ಹವಣಿಸಿದ ವೈಸ್‌ರಾಯ್ ವೇವೆಲ್‌ಸಾಹೇಬರನ್ನು ಕಾಂಗ್ರೆಸ್ಸು ಈಗ ಮತ್ತೆ ವರೆಗೆ ಹಚ್ಚಲು ನಿಂತಿದೆ. ಮಿರತದಲ್ಲಿ ಕೂಡಿದ ಕಾಂಗ್ರೆಸ್ ವಿಷಯನಿಯಾಮಕ ಮಂಡಲಿಯ ಅಧಿವೇಶನದಲ್ಲಿ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು, ನಡುಗಾಲ ಸರಕಾರದ ರಹಸ್ಯವನ್ನೆಲ್ಲ ಬಯಲಿಗೆ ಹಾಕಿಬಿಟ್ಟರು. ಇದರಿಂದ ಜನತೆಗೆ ಲೀಗಿನ ಮುಂದಾಳುಗಳನ್ನು ವಾಯಿಸ್‌ರಾಯರು ತಮ್ಮ ರಾಜಕಾರ್ಯದ ಜಡುರಂಗದಾಟದಲ್ಲಿ ಹೇಗೆ ಹೇಗೆ ಉಪಯೋಗ ಮಾಡಿಕೊಳ್ಳುತ್ತಲಿದ್ದಾರೆಂಬುದು ಚೆನ್ನಾಗಿ ಗೊತ್ತಾದಂತಾಯಿತು. ಭಾರತ ಸ್ವಾತಂತ್ರ್ಯ ಸಂಪಾದನೆಯ ಬಗೆಗೆ ವೇವೆಲ್ಲರಲ್ಲಿ ನಿಜವಾದ ಸಹಾನುಭೂತಿಯಿದ್ದರೆ, ಅವರು ಪಟವಾದಿಗಳಾದ ಲೀಗ್ ಪಕ್ಷದ ಜನರನ್ನು ಮಂತ್ರಿಮಂಡಳದಿಂದ ಕಡಿಮೆ ಮಾಡಬೇಕು. ತಾವೇ ಕರೆದು ತಂದು ಕೂಡಿಸಿದ ಕಿಡಿಗೇಡಿಗಳನ್ನು,. ಅವರ ಗುಣ ಗೊತ್ತಾದಾಗ ಎಬ್ಬಿಸಿ ಕಳುಹಲಿಕ್ಕೆ ಯಾವ ಘಟನಾತ್ಮಕ ಅಡಚಣೆಗಳೂ ಇರುವುದಿಲ್ಲ. ಕಾಂಗ್ರೆಸ್ ಅಧಿವೇಶನದಲ್ಲಿ ಸರದಾರ್ ವಲ್ಲಭಭಾಯಿ ಪಟೇಲ. ರಾಡಿದ ಮಾತುಗಳನ್ನು ಕೇಳಿದರೆ, ಬ್ರಿಟಿಷ್ ಅಧಿಕಾರಿಗಳು ಮತ್ತು ಮುಸ್ಲಿಂ ಲೀಗುಗಳ ದುರ್ಮೈತ್ರಿಯನ್ನು ಮುರಿಯುವ್ರದಕ್ಕೆಂದೇ ಅವರು ಇದುವರೆಗೆ ನಡುಗಾಲ ಸರಕಾರವನ್ನು ಅಂಟಿಕೊಂಡು ಕುಳಿತಿರುವರೆಂಬುದು ಗೊತ್ತಾಗುತ್ತದೆ. ಒಟ್ಟಿನ ಮೇಲೆ, ನಡೆದಿದೆ ಭಾರತದ ರಾಜಕಾರ್ಯದಲ್ಲಿ ಸಮುದ್ರಮಥನ. ಸತ್ಫಲಕ್ಕೆ ಸ್ವಾತಂತ್ರ್ಯದ ಸುಧೆಯು ಸಿಕ್ಕುವುದರಲ್ಲಿ ಸಂಶಯವಿಲ್ಲ. ಆದರೆ ಜನತೆಗೆ ತಮ್ಮ ಸಂಸ್ಥೆಯಲ್ಲಿಯೂ ಮುಂದಾಳುಗಳಲ್ಲಿಯೂ ಅಚಲವಾದ ನಿಷ್ಠೆ ಬೇಕು; ತಪಸ್ಸು ಬೇಕು; ತಾಳ್ಮೆ ಬೇಕು.

ಕೈಲಾಸಂ ಅವರ ನಿಧನ

ಕನ್ನಡ ಲೋಕಕ್ಕೆ ತಮ್ಮ ನಾಟಕ, ನಗೆಬರೆಹ, ವಿಡಂಬಕ ಲೇಖನಗಳಿಂದ ಚಿರಪರಿಚಿತರಾದ—ಮದರಾಸಿನಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ—ಶ್ರೀಮಾನ್ ಟಿ. ಪಿ. ಕೈಲಾಸಂ ಅವರು, ತಾ. ೩೩-೧೧-೪೬ನೆಯ ರಾತ್ರಿ ಬೆಂಗಳೂರಲ್ಲಿ ನಿಧನರಾದ ದುರ್ವಾರ್ತೆ ಬಂದು, ಕನ್ನಡಿಗರನ್ನು ಕಳವಳದ ಮಡುವಿನಲ್ಲಿ ಮುಳುಗಿಸಿ ಬಿಟ್ಟಿದೆ. ಕನ್ನಡ ಸಾಹಿತ್ಯದೇವಿ ಈ ಕೀರೀಟ ರತ್ನದ ಕೊರತೆಯನ್ನು ಏತರಿಂದ ತುಂಬಿಕೊಳ್ಳುವಳೋ!

ಜಯಂತಿಯ ಸಣ್ಣಕತೆಗಳ ಮೇಲಾಟ

ಆಕರ್ಷಕವಾದ ಮೂರು ಬಹುಮಾನಗಳು

೧ ನೆಯ ಬಹುಮಾನ ★ ೨ ನೆಯ ಬಹುಮಾನ ★ ೩ ನೆಯ ಬಹುಮಾನ
೨೦ ರೂಪಾಯಿ ! ೧೫ ರೂಪಾಯಿ !! ೧೦ ರೂಪಾಯಿ !!!

೧೯೪೭ ಜನವರಿ ೧೫ ನೆಯ ತಾರೀಖಿನೊಳಗಾಗಿ ಕತೆಗಳನ್ನು ಕಳುಹಬೇಕು !

ಮೇಲಾಟದ ನಿಯಮಗಳು.

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ಮೀರದಷ್ಟು, ಎಂದರೆ ಕೈಬರೆಹದಲ್ಲಿ ಫುಲ್‌ಸ್ಕ್ಯಾಪ್ ಅರ್ಧಹಾಳೆಗಳು ೧೦ ಕ್ಕೆ ಮೀರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನು ಬಿಟ್ಟು ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗವಹಿಸಬಹುದು.

೫. "ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ" ಎಂದು ಕೈಬರೆಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು ಆದರೆ ಎರಡು ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ್ನಾದಿನವೆಂದರೆ ೧೫ನೆಯ ಜನವರಿ ೧೫ ನೆಯ ತಾರೀಖು. ಫೆಬ್ರುವರಿ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನು ಪ್ರಕಟಿಸಲಾಗುವುದು; ಮಾರ್ಚ್ ಸಂಚಿಕೆ ಸಣ್ಣಕತೆಗಳ ವಿಶೇಷ ಸಂಚಿಕೆಯಾಗಿ ಪ್ರಕಟವಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ. ಬಹುಮಾನ ಕೊಡಬೇಕಾದಷ್ಟಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹಿಸುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು 'ಜಯಂತಿ' ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ

ಸುದೃಢಕಾಯರೂ ಆನಂದವೃತ್ತಿಯವರೂ ಆದ ಬಾಲಕರೆಂದರೆಯೇ
ಗೃಹರಾಜ್ಯದಲ್ಲಿಯ ಪ್ರತ್ಯಕ್ಷವಾದ ಆನಂದ!

ತಮ್ಮ ಮನೆಯಲ್ಲಿಯ ಬಾಲಕನು ಇದಕ್ಕೆ ಅಪವಾದವಾಗಿ ಇದ್ದರೆ,
ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್ ಅವರ

ಕುಮಾರೀ ಆಸವ ನಂ. ೩

(೩೦ ತೊಲೆಗೆ ಒಂದೂಕಾಲು ರೂಪಾಯಿ)

ಈ ಔಷಧಿಯನ್ನು ಅವನಿಗೆ ಕೊಡಿರಿ. ಕೆಮ್ಮು, ದಮ್ಮು, ಜ್ವರಗಡ್ಡೆ, ಯಕೃತ್ತಿನ ವಿಕಾರ, ಪಾಂಡುರೋಗ—ಮೊದಲಾದ ಬಾಲರೋಗಗಳನ್ನು ಹೊಡೆದುಹಾಕುವುದಲ್ಲದೆ ಮೈಕ್ಕಳೆ ಶಕ್ತಿಯನ್ನೂ ಹೆಚ್ಚಿಸುವುದು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ

ಹುಬ್ಬಳ್ಳಿ ಶಾಖೆ—ಸ್ಟೇಶನ್ ರೋಡ್, ಹುಬ್ಬಳ್ಳಿ

Printed by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Melligatti at the Jayanti Office, Dharwar.—9067-46-1300.

ಕಿರಾತ

ಸಂಪಾದಕರು
ಬೆಟಗೇರಿ ಕೃಷ್ಣಶರ್ಮ

ಸಂಪುಟ
೯

ಸಂಚಿಕೆ
೮

ಸಮಾಜದ ಸುಖಕ್ಕಾಗಿ ವ್ಯಕ್ತಿಯ ಬದುಕು ಹೇಗಿರಬೇಕೆಂಬುದನ್ನು ಆರಿತು ಒರೆದು,
ಈಗ್ಗೆರೆಯಾದ ಶಾಖಿಷ್ಟ, ಕೈಲಾಸಂ ಅವರು.

ಬೆಲೆ
ಆರು ಆಣೆ

ಸಂಪುಟ ೯ | ೧ನೆಯ ಜನವರಿ ೧೯೪೭ | ಸಂಚಿಕೆ ೪

ಮುಖ್ಯ ವಿಷಯಗಳು

ಎಂಥದಿದು? (ಕವನ)
ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಭಟಕಳ ೨೨೫

ಕನ್ನಡಕ್ಕೆ ದೊರೆತಿರುವ ಕೈಲಾಸಂ (ಸಂಪಾದಕೀಯ)
ಸಂಪಾದಕರು ೨೨೬

ಬೀರಣ್ಣನ ಬಡಿನುಡಿಗಳು
'ಗುಡದಪ್ಪ' ೨೨೭

ಆಣ್ಣಾ-ತಮ್ಮಿಕೆ (ಸಣ್ಣ ಕತೆ)
ಶ್ರೀ. ಪಿ. ಪಿ. ಎಸ್. ರಾವ್ ೨೩೯

ಪ್ರಾದೇಶಿಕ ಗ್ರಂಥಾಲಯ, ಅದರ ಉದ್ದೇಶಗಳು (ಪರಿಚಯ)
ಶ್ರೀ. ಪೀಕಪೋರ ರಾಜಾರಾಮ, ಮುಂಬಯಿ ೨೪೪

ತಾಯಿ-ಮಗಳು (ಕವನ)
ಪ್ರೊ. ಆರ್. ಜಿ. ಹುಲೆಮನಿ ಎಂ. ಎ. ಬಾಗಲಕೋಟೆ ೨೪೬

ಸ್ವೀಡಾಷ್ಟಣ್ಣ (ಪ್ರವಾಸ ಲೇಖನ)
ಶ್ರೀ ಮಾಡೋಳಕರ ಶ್ರೀಧರರಾವ್, ಧಾರವಾಡ ೨೪೭

ಪುಣ್ಯಾದ ಕೆಲಸ ಸಣ್ಣ ಕತೆ,
ಶ್ರೀ.ವಿ.ವೆಂಕಟಗಿರಿ ಶಾಸ್ತ್ರಿ, ಸೋಂದಾ ೨೪೯

ಚೀನಾ ಆಕಾರದಲ್ಲಿ ಕೆಂಪು ನಕ್ಷತ್ರ (ಪರಿಚಯಾತ್ಮಕ)
ಶ್ರೀ. ಕುಳಕುಂದ ಶಿವರಾಮರು, ಹುಬ್ಬಳ್ಳಿ ೨೫೧

ಶ್ರೀಯುವರೊಡನೆ ಕೊನೆಯ ಸಂದರ್ಶನ (ಕಂಡಕತೆ)
ಪ್ರೊ. ರಂ. ಶ್ರೀ. ಮುಗಳಿ ಎಂ. ಎ, ಬಿ. ಟಿ. ಸಾಂಗಲಿ ೨೫೫

೧೯೪೬ರಲ್ಲಿ ಕನ್ನಡ ಸಾಹಿತ್ಯಪ್ರಗತಿ (ಪರಿಚಯಾತ್ಮಕ)
ಶ್ರೀ. ಎಚ್. ಎಸ್. ಪಾಟೀಲ ಎಂ. ಎ., ಬಿಕಾಮ್. ಮುಂಬಯಿ ೨೫೭

ಪುಸ್ತಕ ವಿಮರ್ಶೆ (ರಕ್ತತರ್ಪಣ, ಬೆಳವಲದ ಭಾಗ್ಯಲಕ್ಷ್ಮಿ)
ಶ್ರೀ. ಟಿ. ಕೆ. ಪಿ. ಮತ್ತು ಶ್ರೀ ಎನ್. ಎಸ್. ಗದಗಕರ ೨೫೮

ಸಾದರ ಸ್ವೀಕಾರ ೨೫೪

ನಾಲ್ಕೂ ನಿಟ್ಟಿನ ನೋಟ ೨೫೫

ಅಭಿವಂದನೆಗಳು

ಮೇಲೋಲೆಯ ಮೇಲೆ ಪ್ರಕಟವಾದ ದಿವಂಗತ ಕೈಲಾಸಂ ಅವರ ಒಳ್ಳೆಯ ಭಾಯಾಚಿತ್ರವನ್ನು, ಬೇದಿಡೊಡನೆಯೆ ಒದಗಿಸಿಕೊಟ್ಟ ಬೆಳಗಾಂವಿಯ ಸುಪ್ರಸಿದ್ಧ ಚಿತ್ರಕಲಾವಿದರಾದ ಶ್ರೀಮಾನ್ ಎಸ್. ಎಸ್. ಕಟ್ಟಿಯವರಿಗೆ ನಮ್ಮ ಹೃತ್‌ಪೂರ್ವಕ ಅಭಿನಂದನೆಗಳು.

ನಮಗೆ ಜೇಕಾಗಿದ್ದ ೧೯೪೬ನೆಯ ವರ್ಷದ ಸಪ್ಟಂಬರ್ ಜಯಂತಿ ಸಂಚಿಕೆಯನ್ನು, ಗುಳೇದಗುಡ್ಡದಲ್ಲಿ ಶಿಕ್ಷಕರಾಗಿ ಇರುವ ಶ್ರೀಮಾನ್ ನಾ. ವಾ. ಕಾರಕೂನ ಅವರು ದಯೆಯಿಟ್ಟು ಕಳುಹಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಯ ವಂದನೆಗಳು.

ಸಂ. ಜ.

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳೆಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಪಟ್ಟಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.



ವಾರ್ಷಿಕ ಚಂದಾ
೪—೪—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೯ | ೧ನೆಯ ಜನವರಿ ೧೯೪೭ | ಸಂಚಿಕೆ ೮

ಎಂಥದಿದು ?

★

ಬಿ. ಎಚ್. ಶ್ರೀಧರ ಎಂ. ಎ. ಭಟ್ಟಕಳ

ಅ-ಮಾನುಷವೋ ಅಮಮಾನುಷವೋ, ಮನು-
ಕುಲದಪಹಾಸ್ಯವೊ, ಎಂಥದಿದು ?
ಇ-ದಂಧತೆಯೋ, ಮದಗಂಧಜ ಭೂತಾ-
ವೇಶವೊ, ಬಂತೆಂತಿದು ಪುದಿದು ? ೧

ಅ-ದಮ್ಯಶತತ್ವದ ಸುಟ್ಟುರೆಯೋ, ಜಾ-
ತ್ಯಭಿಮಾನದ ದುರ್ದೋಹದವೋ ?
ಇ-ದುಷ್ಟತಮಾನಸರುತ್ಸವವೋ, ಕಲಿ-
ಯುದ್ದಕ್ರಮವೊ, ತಮೋಽನಲವೋ ? ೨

ಅ-ನಂಗ ವಿಕಾರ ವಿಕೋಪವೊ, ಸಲ್ಲಲಿ-
ತಾಂಗಿಯರಲ್ಲಿಹ ಮತ್ಸರವೋ ?
ಇ-ಜೀನೀ ವಂಗೀಯಾಂಗನೆಯರ ಚಾ-
ರಿತ್ರವ ಭಂಗಿಸ ತೊಡಗುವುದು ? ೩

ಇ ದಿಸ್ಲಾಮಲ್ಲ; ಅದರ ಸೈತಾನನ
ಕುತ್ಸಿತಮತಿಯುದ್ವೃತ್ತ ಛಲ !
ಅ-ಮುಸ್ಲಿಮರೇತಕೆ—ಮುಸ್ಲಿಮರೇ ಈ
ಅತ್ಯಾಚಾರವನೊಪ್ಪರಲ ! ೪

ಅ-ಮಾನವ ಹಿಂಸೆಗಳಷ್ಟಯ ? ಅಲ್ಲತಿ-
ದಾನವ ಹಿಂಸೆಗಳೆಷ್ಟೆಷ್ಟೋ !
ಅ-ಘೋಗಲಿವಿಷ್ಟಿದುವಾತ್ಮಗಳಧಮತಿ-
ಯಂತ್ಯದ ಸೆಟ್ಟಿಲ ಮುಟ್ಟಿದುದೋ ! ೫

ಅ-ವರ್ಣ್ಯವವರ್ಣ್ಯವಿವಕ್ಷಟ, ಈ ಕೊಲೆ
ಸುಲಿಗೆ ಸತೀತ್ವಧ್ವಂಸಗಳು !
ಅ-ದಲ್ಲವೊ ಕೀರ್ತಿ ಚಂಗೇಸನ ಹಾವಳಿ—
ನಿರುಪಮವಿನು ಹೊಲ್ಲಮೆಗಳೊಳು ! ೬

ಅ-ಸಹ್ಯವಿವೆಲೆ ರಕ್ಷಕ ಕೇಳದಕೆ ಕೃ-
ಪಾಣವೆ ಜೇಕೋರೆಯಿಂದ ಹಿರಿ ;
ಪ್ರ-ಸಹ್ಯಮತಾಂತರ ಕಾರ್ಯವನೆಸಗುವ
ನುರ್ಜನರನು ಸೆರೆಗಟ್ಟಿ ಮುರಿ ! ೭

ಅ-ಹಿಂಸೆಗಿಹಿಂಸೆಯು ದಿವ್ಯ ಚಿಕಿತ್ಸೆಗೆ
ಬಗ್ಗದ ರುಜೆಗೊಂದೇ ಅಗದ—
ಅ-ದೇ ಅತಿಹಿಂಸೆಯ ಮರ್ಮಕೆ ಮುಟ್ಟಿಸಿ
ಬಡ್ಡಿಯು ಜೇಕೇ ? ಎಂಬ ವಿಧ !

ಕನ್ನಡಕ್ಕೆ ದೊರೆತಿದ್ದ ಕೈಲಾಸಂ

ಕಳೆದ ವರ್ಷದ ಜನವರಿಯ ಸಂಚಿಕೆಯಲ್ಲಿ, ಮದರಾಸಿನ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದುದಕ್ಕಾಗಿ ಶ್ರೀಮಾನ್ ಕೈಲಾಸಂ ಅವರನ್ನು ಅಭಿನಂದಿಸಿ ಬರೆದ ಕೈಯೇ, ಇಂದು ಅವರ ಅಗಲಿಕೆಯ ಬಗೆಗೆ ಉಂಟಾದ ಹೃದಯದ ಕಳವಳದ ಮಾತುಗಳನ್ನು ಬರೆಯುತ್ತಲಿದೆ. ಕಾಲ ತನ್ನ ಲೀಲೆಗಾಗಿ ಹೂಗಳನ್ನು ಅರಳಿಸುತ್ತಾನೆ; ಮತ್ತೆ ಬಾಡಿಸಿ ಬೀಳಿಸುತ್ತಾನೆ. ಈ ನಿಸರ್ಗನಿಯಮವು ಗೊತ್ತಿದ್ದರೂ ಹೂವಿನ ಸೌಂದರ್ಯವನ್ನು ತನ್ನದೆಂದು ಗ್ರಹಿಸಿಕೊಂಡ ಮನುಷ್ಯ, ಅದರ ಅಭಾವಕ್ಕಾಗಿ ಕಳವಳಿಸುತ್ತಾನೆ; ನೊಂದು ನಿಟ್ಟುಸಿರು ಚೆಲ್ಲುತ್ತಾನೆ.

ಎಲ್ಲಿಯೊ ಅರಳಬೇಕಾಗಿದ್ದ ಕೈಲಾಸಂ-ಹೃದಯದ ಹೂ, ಕನ್ನಡದಲ್ಲಿ ಅರಳಿತು. ತನ್ನ ಸೌಂದರ್ಯದಿಂದ ಕನ್ನಡಿಗರೆಲ್ಲರ ಕಣ್ಮನಗಳನ್ನು ಆಕರ್ಷಿಸಿ ಆತ್ಮೀಯಭಾವವನ್ನು ಹುಟ್ಟಿಸಿತು. ಅಮರನಾದ ಸುರಭಿಯಿಂದ ಕನ್ನಡ ಸಾಹಿತ್ಯೋದ್ಯಾನವನ್ನು ಹೆಮ್ಮೆಯಿಂದ ಮೆರೆಯುವಂತೆ ಮಾಡಿತು. ಅರಳಿಸಿದ ಕಾಲನೆ ಇಂದು ಆ ಹೂವನ್ನು ಬಾಡಿಸಿಬಿಟ್ಟ. ಆದರೆ ಈ ಅಸಾಮಾನ್ಯ ಹೂವಿನ ಕಂಪು ಮರೆಯಾಗಿಲ್ಲ, ಮರೆಯಾಗುವಂತಿಲ್ಲ. ಹರಿಹಿಂಗದಂತಹ ಕಲೆಯ ಕಂಪನ್ನು, ಕೈಲಾಸಂ-ಹೃದಯದ ಹೂ ಕನ್ನಡಿಗರಿಗಾಗಿ ಕೊಟ್ಟು ಹೋಗಿದೆ.

ಎಂತಹ ತಪಸ್ಸಿನಿಂದ ತಪ್ಪನಾಗಿ ಕೈಲಾಸಂ ಅಂತಹ ರಸಋಷಿಯಾಗಿದ್ದರೇನೊ! ಹುಟ್ಟಬಳೆದುದು ಮನುಷ್ಯತ್ವವನ್ನೆ ಮರೆಯುವಷ್ಟಾಗಿದ್ದ ಸುಶಿಕ್ಷಿತ ಸಿರಿವಂತರ ಮನೆ; ಆದರೆ ಮನುಷ್ಯತ್ವವನ್ನು ಎಂದೂ ಮರೆಯಗೊಡದಂತಹ ಹಿರಿಯರ ಉಪನಿಷತ್ ಸಂಪ್ರದಾಯ, ಕೈಲಾಸಮರ ಮಾನವತೆಯ ವಿಕಾಸಕ್ಕೆ ಪರಿಪೋಷಣೆಯನ್ನಿತ್ತಿತು. 'ಪರೀಕ್ಷೆ ಪ್ಯಾಸ್ಮಾಡುವ ಪುಟ್ಟುಗಳ' ಶಾಲೆಯಲ್ಲಿಯೆ ಕೈಲಾಸಂ ಕಲಿತು ಪದವಿ ಪಡೆದವರಾದರೂ, 'ಮಕ್ಕಳ ಇಸ್ಕೂಲ್ ಮನೇಲಿ ಆಟ್ಕೆ?' ಎಂಬ ತತ್ವವನ್ನು ತನ್ನ ಅನುಭವ ಬುದ್ಧಿಯಿಂದ ಕಂಡುಹಿಡಿದವರು. ಇಂಗ್ಲಂಡಿನಲ್ಲಿ ಬಹುಕಾಲ ಬಾಳಿಬಂದರೂ ನಮ್ಮಲ್ಲಿಯ ಹಲವು 'ಸುಶಿಕ್ಷಿತ' ತರುಣರಂತೆ, ಸಾಹೇಬರ ಸೋಗು ಹಾಕಿಕೊಳ್ಳಲಿಲ್ಲ; ಸಾಹೇಬರ ಅಭಿರುಚಿಯನ್ನು ತಮ್ಮದಾಗಿಸಿಕೊಳ್ಳಲಿಲ್ಲ.

ಕನ್ನಡವಲ್ಲಿ ಬರೆಯುವ ಇಂಗ್ಲಿಷ್ ಪದವಿಧರರಿಂದು ಬೇಕಾದಷ್ಟು ಜನರು, ಕವಿಗಳಿಗೆ ಶೆಲ್ಲಿ, ಕೀಟ್ಸ್, ಬೈರನ್, ಪಡ್ಸ್ವರ್ಥರು ಆದರ್ಶರಾಗಿ ಇದ್ದರೆ, ನಾಟಕಕಾರರಿಗೆ ಷೇಕ್ಸ್‌ಪೀಅರ್, ಶಾ, ಇಬ್ಸನ್ನರು ಮಾದರಿಯಾಗಿರುವರು. ಕತೆ-ಕಾದಂಬರಿಗಳನ್ನು ಬರೆಯುವ ಬಹು ಜನರ ಹಣೆಬರೆಹವೂ ಇಷ್ಟೆ. ಯಾರೂ ಕನ್ನಡ ಜನರನ್ನು ಕಂಡವರಲ್ಲ, ಕನ್ನಡ ಸಂಸ್ಕೃತಿಯನ್ನು ತಿಳಿದವರಲ್ಲ, ಕನ್ನಡ ಜನರ ಜೀವನದ ಕಷ್ಟ-ಸುಖಗಳನ್ನು ವಿಚಾರಮಾಡಿದವರಲ್ಲ ಹೇತ್ಯಾಗಿ ತಂತ್ರಗ್ರಂಥಗಳನ್ನೋದಿ ಇವರ ಸಾಹಿತ್ಯ ನಿರ್ಮಾಣ. ಆದರೆ ಕೈಲಾಸಮರು ಕನ್ನಡದ ಜನರನ್ನು ಕಂಡವರು; ಅವರ ಸಂಸ್ಕೃತಿಯ ಹಿರಿಮೆಯನ್ನು ಒರೆಗೆ ಹಚ್ಚಿ ನೋಡಿದವರು. ಸದ್ಯದ ಅವರ ಪತನದ ಕಾರಣವನ್ನು ಅರಿತುಕೊಳ್ಳಲು ಹವಣಿಸಿದವರು. ದುಃಖಕ್ಕೆ ಕಾರಣವಾದ ಸಮಾಜದ ಅಶಕ್ತತೆಗಳನ್ನು ಪೂರ್ಣವಾಗಿ ಕಂಡು ಹಿಡಿದವರು. ಎಂತಲೆ ತಮ್ಮ ಸಾಹಿತ್ಯದ ಕನ್ನಡಿಯಲ್ಲಿ ಹಿರಿಯಣ್ಣಯ್ಯನಂತಹ 'ಮಕ್ಕಳ್ಮಂದಿಕ್ ಬರಬೇಕು' ಎಂಬ ಹುಚ್ಚುಹಿಡಿದ—ಕನ್ನಡಿಗ ಶಂಡಿಗಳ ಪ್ರತಿಬಿಂಬವನ್ನು ಮೂಡಿಸಿದರು. ನಾಗತ್ತೆಯಂತಹ ಅತೃಪ್ತಿಯನ್ನೆ ತಿಂದು ಜೀರ್ಣಿಸುವ ವಿಧಿನೆಯನ್ನು ಕಾಣಿಸಿದರು. ಪುಟ್ಟುವಿನಂತಹ ಕಲಿತ ಮೊದ್ದರ ಪ್ರತಿನಿಧಿಯನ್ನು ತೋರಿಸಿದರು. ಭಾಗೀರಥಮ್ಮನಂತಹ ಭಾರತೀಯ ತಾಯನ್ನು ರೇಖಿಸಿದರು. ಅವರಿಂದ 'ಈ ಭೂಮಿಯಾಳಿ ಜೀವಿಸೋಕೆ ದೇವರಿಗೆ ನಾವು ಕೊಡಬೇಕಾದ ಬಾಡಿಗೆ ಎಂದರೆ, ಸುತ್ತು ಮುತ್ತಲೂ ಇರೋ ಜನರಿಗೆ ಉಪಯೋಗವಾಗಿರೋದೆ' ಎಂಬ ನಿಜವಾದ ಪಾಠವನ್ನು ಕಲಿತು ಮನುಷ್ಯನಂತೆ ವರ್ತಿಸಿದ ಮಾಧುವಿನ ಆದರ್ಶಚಿತ್ರವನ್ನು ಚಿತ್ರಿಸಿದರು. ಪೋಲಿಕಿಟ್ಟಿಯ ಮಾನವಹೃದಯವನ್ನೂ ಕಲಿತು ದೊಡ್ಡ ಮನುಷ್ಯನಾದ ಅವನ ಅಣ್ಣನ ಪಶುತ್ವವನ್ನೂ ಪ್ರತಿಬಿಂಬಿಸಿ ತೋರಿಸಿದರು. 'ಹಾವರ್ಕೆಟ್ಟಿದ್ದು ಹೊನ್ನಿಂದ' ಎಂಬ ಮಾತನ್ನು ತಮ್ಮ 'ಬಹಿಷ್ಕಾರ' 'ನಂ ಬ್ರಾಹ್ಮಣಿಕೆ' ಎಂಬುವರ ಮೂಲಕ ಖಚಿತವಾಗಿಸಿದರು. ಸೂಳೆ ಸೂಳೆಯೆನಿಸಿದರೂ, ಹೆಣ್ಣಿನ ಹೃದಯ ಅವಳಲ್ಲಿ ಯಾವಾಗಲೂ ಜಾಗೃತವಾಗಿರುವುದೆಂಬುದನ್ನು ಮನಸ್ಸಿಗೆ ನೆಡುವಂತೆ ರೂಪಿಸಿದರು. ಕನ್ನಡ ದಾಂಪತ್ಯದ ವಿವಿಧ ಮಾದರಿಗಳನ್ನು 'ಅವ್ಯಾವ್ಯ ಗಂಡ'ದಲ್ಲಿ ವಿಶ್ಲೇಷಿಸಿ ತೋರಿಸಿದರು. ಒಂದೇ, ಎರಡೇ, ಕೈಲಾಸಮರ ಕನ್ನಡ ಸಾಹಿತ್ಯದಲ್ಲಿ ಕಾಣುವವರೆಲ್ಲ ಕನ್ನಡಿಗರು—ಬಹಳ ಜನರು ಇಂದಿನ ವಿಕೃತ ಸಮಾಜದ ಸದಸ್ಯರು; ಕೆಲವು ಜನರು ಆದರ್ಶ ಮಾನವರು. ಕನ್ನಡಿಗರ ಉಡಿಗೆ-ತೊಡಿಗೆಗಳನ್ನು ಹಾಕಿಕೊಂಡು ಬರುವ ಸಾಹೇಬುಮಡ್ಡಮ್ಮಗಳು ಒಂದೂ ಇಲ್ಲ.

ನನಗಾರಿಕೆ ಕೈಲಾಸಮರ ಜೀವದ ಜೀವಾಳ. ಜಗತ್ತನ್ನು ಸಾಕ್ಷೀಭೂತನಾಗಿ ನೋಡಬಲ್ಲ ಅನಾಸಕ್ತ ಯೋಗಿಯಲ್ಲದೆ, ಕೈಲಾಸಮರಂತೆ ಇನ್ನೊಬ್ಬನೂ ನಗಿಸಲಾರ, ಒಬ್ಬರನ್ನು ನಗಿಸಿ ಇನ್ನೊಬ್ಬರನ್ನು ಕೆರಳಿಸುವ ನಗೆಗಾರಿಕೆಯಲ್ಲ ಕೈಲಾಸಮರದು. ಜೀವನಾನುಭವದ ತತ್ವದ ಮೆಲುಮಾತುಗಳಿಂದ ಮನದ ಮನೆಯಲ್ಲಿ ಚಕ್ಕಳಗುಳಿ ಇಡುತ್ತ, ಹತ್ತಿರ ಬಂದವರನ್ನೆಲ್ಲ ನಗಿಸುವ ಸುಸಂಸ್ಕೃತ ವಿದೂಷಕತನವು ಅವರದು. ಸಮಾಜದ ತಪ್ಪುಗಳನ್ನು ನಿಡಂಬನೆಗೀಡು-

(೨೨ನೆಯ ಪುಟ ನೋಡಿರಿ)



ಬೆಳಗಾಂವಿಯಿಂದ ಬಂದ ಪತ್ರ

"ಬೀರಣ್ಣಾ, ನಮ್ಮೂರಲ್ಲಿ 'ತರುಣ ಭಾರತ' ಎಂಬ ಹೆಸರಿನದೊಂದು ಮರಾಟಿ 'ರಾಷ್ಟ್ರೀಯ ವಾರಪತ್ರಿಕೆ' ಇರುವುದನ್ನು ನೀನು ಕೇಳಿರಬಹುದು. ಭಾರತದ ಪ್ರಗತಿಯ ದಾರಿಯಲ್ಲಿ ಜನ್ನಿ ಸಾಹೇಬರು ಆಡ್ಡ ನಿಂತಿರುವಂತೆ, ಕರ್ನಾಟಕದ ಪ್ರಗತಿಯ ದಾರಿಯಲ್ಲಿ ಯಾವಾಗಲೂ ಕಲ್ಲು ಮುಳ್ಳು ಹರಡುವ ಕಿಡಿಗೇಡಿತನವನ್ನು ಈ ಪತ್ರಿಕೆ ನಡೆಯಿಸುತ್ತದು. ಕರ್ನಾಟಕ ಪ್ರಾಂತೀಕರಣವೆಂದರೆ ಈ ಪತ್ರಿಕೆಯ ಸಂಪಾದಕರಿಗೆ ತಲೆಶೂಲಿ; ಕರ್ನಾಟಕ ವಿಶ್ವವಿದ್ಯಾಲಯ ಎಂಬ ಹೆಸರನ್ನು ಕೇಳಿದರೆ ಇವರ ಕರುಳಿಗೆ ಚೇಳು ಕಡಿದಂತಾಗುವುದು. ಕನ್ನಡಭಾಷೆ ಎಂದರಂತೂ ಕಂಸನಿಗೆ ಕೃಷ್ಣನ ನೆನಪಾದಂತಾಗುವುದು. 'ಪ್ರಾಥಮಿಕ ಶಿಕ್ಷಣ ಪ್ರಸಾರ' ಎಂಬ ತತ್ತ್ವದ ಮೊದ್ದ ಹೆಸರಿನಿಂದ, ಕನ್ನಡ ಹಳ್ಳಿಗಳಲ್ಲಿ ಮರಾಟಿಯ ಪ್ರಚಾರ ನಡೆಯಿಸಿದ್ದಾರೆ. ನಿಪ್ಪಾಣಿಯ ಭಾಗವು ಮಹಾರಾಷ್ಟ್ರ ಪ್ರಾಂತಕ್ಕೆ ಸೇರಬೇಕೆಂದು ಆ ಭಾಗದ ಜನರಲ್ಲಿ ಪ್ರಚಾರ ನಡೆಯಿಸಿದ್ದಾರೆ. ಪಡ್ಡಿ, ಅಸೋಗಿಗಳ ನೀರಿನ ಯೋಜನೆಗಳಿಂದ ಮರಾಟಿಗರ ಊರುಗಳು ಮುಳುಗಿ ಹೋಗಿ ಕನ್ನಡಿಗರಿಗೆ ಲಾಭವಾಗುವುದೆಂಬ ಹೊಟ್ಟಿಕಿಚ್ಚಿನಿಂದ, ಆ ಆಣೆಕಟ್ಟುಗಳಾಗಬಾರದೆಂದು ಜಳವಳಿ ನಡೆಯಿಸಿದ್ದಾರೆ. ಅವರ ಈ ಕಿಡಿಗೇಡಿತನವನ್ನು ತಡೆಯಲು ನಾವೇನು ಮಾಡಬೇಕು?"

ಈ ಪತ್ರದ ಸಂಗತಿ ಕೇಳಿ ಬೀರಣ್ಣನಕ್ಕುಬಿಟ್ಟಿ; ಅಲ್ಲದೆ "ನಮ್ಮ ಜನಕ್ಕೆ ಇಷ್ಟೂ ತೀಳೀಬಾರ್ದ? ಕುರೀನ ಮುಕ್ಕೊಂಡು ಯಾವಾಗ ತಿಂದೀನಂತ ಹೊಂಚು ಹಾಕೂದು ತ್ವಾಳನ ಸೊಬಾವ; ಆದರ ತ್ವಾಳನ್ನ ತನ್ನ ಕುರೀಮ್ಯಾಗ ಬೀಳಿಪ್ಪಾಂಗ ಕಜ್ಜಟ್ಟು ತಾಯತಿರೂದು ನಂ ಕುರುಬರ ಕೆಲಸ. ಕುರುಬ ಅರುವ್ಹಗೆಟ್ಟು ನಿದ್ದೆ ಹೋದ್ನೊ; ಅವನ ಕುರೀ ತ್ವಾಳನ ಬಾಯಿಗೆ ತುತ್ತಾದೂವ್ರ! ಈ ಪತ್ರಾಬರದ ಮುನಶಾನವ್ನು ಈ ಕುರುಬರ ರೀತೀ ನೆನಪಿಸಿನಾಗ ಇಟಗೋ ಬೇಕು. ಇಸ್ಟು ಅಲ್ಲ; ಬೆಳಗಾಂವೀ ಕನ್ನಡ ಮಂದಲ್ಲಾ ಈ ಮಾತನ್ನ ಮನಸಿನಿವರು ಯಾವಾಗಲೂ ಇಟಗೊಂಡಿರಬೇಕು. ಕುರೀನ ತಿನಬೇಕೆಂಬೋದು ತ್ವಾಳನ ಸ್ವಾರ್ತ; ಕುರೀನ ಕಾಯ್ದುಕೋ ಬೇಕೆಂಬೋದು ಕುರುಬನ ಧರ್ಮ!" ಎಂದು ಒಗಟಿದಂತಹ ಮಾತನ್ನು ಬೀರಣ್ಣ ಹೇಳಿದ. ಬೆಳಗಾಂವಿಯ ಕನ್ನಡಿಗರಿಗೆ ಈ ಒಗಟಿ ಒಡೆದರೆ, ತರುಣ ಭಾರತದ ಕಿಡಿಗೇಡಿತನಕ್ಕೇನು ಮಾಡಬೇಕೆಂಬುದು ತಿಳಿದೇ ತಿಳಿಯುವ್ರದು.

* * *

ಬೆಳಗಾಂವಿಯ ಬಗೆಗೆ ಕೆಲವು ಪ್ರಶ್ನೋತ್ತರಗಳು

ಪ್ರಶ್ನೆ:— ಬೆಳಗಾಂವಿಯಲ್ಲಿ ಕನ್ನಡಿಗರು ಸಂಖ್ಯೆ ಹೆಚ್ಚಿದ್ದರೆಮ್ಮುನಿಸಿಪಾಲಿಟಿಯಲ್ಲಿ ಮರಾಟಿಗರ ಅಧಿಪತ್ಯ ಏಕಿದೆ?

ಉತ್ತರ:— ನಾನೂ ತಿರಿಗಿ ನಿನ್ನುಗೊಂದು ಕೇಳ್ತೀನಿ: ಹಿಂದುಸ್ತಾನದೊಳಗ ನಾಲೊತ್ತು ಕೋಟಿ ಮಂದಿ ನಾವ್ರ ಇದ್ದೀನಲ್ಲಾ!' ಹಿಂದುತುಂಬಾ ಕೆಂಪು ಮಂದಿ ನಮ್ಮುನ್ನೆಲ್ಲಾ ಯಾಕ ಆಳ್ತಾರ?

* * *

ಪ್ರಶ್ನೆ:— ಬೆಳಗಾಂವಿ ಜಿಲ್ಲೆಯಲ್ಲಿ ಮರಾಟಿ ಮಾತನಾಡುವ ಜನರ ಪ್ರದೇಶವಿದೆಯಲ್ಲಾ ಬೀರಣ್ಣಾ! ಆ ಪ್ರದೇಶ ಕರ್ನಾಟಕದಲ್ಲಿರಬೇಕೆಂದು ನಿನ್ನ ಅಭಿಪ್ರಾಯವೇನು? ಹೇಳು, ಏನೆನ್ನುತ್ತಿ?

ಉತ್ತರ:— ಎಂಥಾ ಮಳ್ಳತನವ ನೂತಪ್ಪಾ ನಿಮ್ಮದು! ಬ್ಯಾಡಾವ ನುಂದಿನ್ನ ನಾವ್ಯಾಕ ನಮ್ಮ ಮನ್ಯಾಗ ಸೇರಿಸಿಗೊಳ್ಳೋಣು! ನಮಗ ನಮ್ಮ ಮನೀ ಕಟ್ಟಿ ಜಳಜಳಾ ತಿರಿಸಬೇಕಾಗೇತಿ! ನಮ್ಮ ಮನಿಸಿಗೆ ಬಂದ್ಹಾಂಗ ನಮ್ಮ ಜಾಗಾದಾಗ ಮನೀ ಕಟ್ಟಿಕೋ ಬೇಕಾಗೇತಿ. ನಮ್ಮ ವರಾಗಿ ನಮ್ಮಲ್ಲೇ ಇರತೇನಂದರ ಇರಲ್ಕೆ ಯಾರು ಬ್ಯಾಡ ಅಂತಾರ! ಗೂಳೀ ಬಂದಾಗ ಇರಲಿಕ್ಕೆ ಜಾಗಾ ಕೊಟ್ಟರ ಅವರದ್ದ ಆಗತೈತೇನು..... ಆ ಜಾಗಾ? ನಮ್ಮೊಳಗ ಬೆರತುಕೋಂಡು ಇರಲಿಕ್ಕೆ ಮನಸು ಇರದಿದ್ದರ ತಮ್ಮ ದೇಶಕ್ಕ ಹೋಗಿ ತಮ್ಮ ಮಂದ್ಯಾಗ ಬೇಳ್ಕೆಲಾ; ಯಾರ ಬ್ಯಾಡಂತಾರ?

ಪ್ರಶ್ನೆ:— ಮಂತ್ರಿಗಳು ಬೆಳಗಾಂವಿಗೆ ಬಂದಾಗ ಮರಾಟಿಯಲ್ಲಿಯೆ ಮಾನಪತ್ರ ಕೊಡಬೇಕೆಂದು ಬಹು ಮತದಿಂದ ನಿರ್ಣಯವಾಗಿತ್ತು. ಹೀಗಿದ್ದೂ ಕನ್ನಡಿಗರು ಮಂತ್ರಿಗಳಿಗೆ ಹೇಳಿ ಮಾನಪತ್ರ ಬಿಡಿಸಿದುದು ಅನ್ಯಾಯವಲ್ಲವೆ?

ಉತ್ತರ:— ನೂರು ಜನ ಕಳ್ಳರು ಸೇರಿ ಸುಲಿಗೀ ಮಾಡಬೇಕಂತ ಬಹುಮತದಿಂದಾ ಗೊತ್ತು ಮಾಡಿದ ಕಳವನ್ನ ಒಬ್ಬನೇ ಒಬ್ಬ ಜಜ್ಜಸಾಬ ಲಹರಾಫಾ ಕಂತ ತೀರ್ಮಾನ ಕೊಡಕಾನಲ್ಲಾ! ಇದೇನು ನ್ಯಾಯಾ ಅಂತೀರೋ ಅನ್ಯಾಯ ಅಂತೀರೋ?

* * *

ಕಾರವಾರದ ಭಾಷೆ ಯಾವುದು?

ಉತ್ತರ ಕನ್ನಡ ಜಿಲ್ಲೆಯ ಕಿರಿಯ ಕನ್ನಡಿಗನೊಬ್ಬನಿಂದ ಬೀರಣ್ಣನಿಗೆ ಹೀಗೊಂದು ಕಾಗದ ಬಂದಿದೆ:

"ಬೀರಣ್ಣಾ, ಎಲ್ಲರಿಗೂ ಪಾಠಿಯ ತೋರಣ್ಣಾ! ಮೊನ್ನೆ ಮೊನ್ನೆ, ನಮ್ಮ ಜಲ್ಲೆಯ ಹಿರಿಯರೂರು ಕಾರವಾರಕ್ಕೆ ಮಂಬಯಿ ಪ್ರಾಂತದ ಮಾನಸ ಮಂತ್ರಿಗಳು ಪಯಣ ಮಾಡಿಸಿದ್ದರು. ಆಗ ನಗರಸಭೆಯವರು ಕನ್ನಡವನ್ನು ಬಿಟ್ಟು ಕೊಂಕಣಿ ಭಾಷೆಯಲ್ಲಿ ಮಾನಪತ್ರ ಕೊಟ್ಟರು. ಕಾರವಾರದ ಕೋರ್ಟು ಭಾಷೆ ಕನ್ನಡ; ಕಾರವಾರದ ರಾಜೆಗಳು ಕನ್ನಡ. ಅದರೆ ನಗರಸಭೆಯವರು ಕೊಂಕಣಿಯಲ್ಲೇಕೆ ಮಾನಪತ್ರ ಕೊಟ್ಟರು? ಕಾರವಾರದ ಭಾಷೆ ಯೇನು ಕೊಂಕಣಿಯೆ?"

ಬೀರಣ್ಣ ಹೇಳಿ ಬರೆಯಿಸಿದ ಉತ್ತರವಿದು:

"ಬೆಳಗಾಂವಿಯಲ್ಲಿ ಕನ್ನಡಿಗರು ತಮ್ಮ ಅಸ್ತಿತ್ವ ತೋರಿಸಿ ಮರಾಟಿ ಮಾನಪತ್ರವನ್ನು ಬಿಡಿಸಿ, ಬೆಳಗಾಂವಿಯ ಭಾಷೆ ಕನ್ನಡವೆಂಬುದನ್ನು ಸಿದ್ಧಗೊಳಿಸಿದರು. ಎಲ್ಲಿಯವರೆಗೆ ಕಾರವಾರದ ಕನ್ನಡಿಗರು ತಮ್ಮ ಅಸ್ತಿತ್ವ ಸ್ಥಾಪಿಸಲು ಪ್ರಯತ್ನಿಸಿ ಚಳವಳಿ ನಡೆಯಿಸುವುದಿಲ್ಲವೊ ಅಲ್ಲಿಯವರೆಗೆ ಕಾರವಾರದ ಭಾಷೆ ಕೊಂಕಣಿಯೇ ಸರಿ! ಬಲವುಳ್ಳವನೇ ಬದುಕಬಲ್ಲನು. ಬಾಳಿದು ಕಾಳೆಗದ ಕಣ!"

(೨೫೬ ನೆಯ ಪುಟದಿಂದ ಮುಂದೆ ಸಾಗಿದ್ದು.)

ಬಹುಜನಪ್ರಿಯವಾಗಿ ಬಹುಕಾಲ ಬಾಳಿ ಕನ್ನಡದ ಸೇವೆಯನ್ನು ಮಾಡಬಲ್ಲದು.

೧೦೭. **ವಿಕಟವಿನೋದಿನಿ** (೩೫ನೆಯ ವಾರ್ಷಿಕ ವಿಶೇಷ ಸಂಚಿಕೆ) ಸಂಪಾದಕರು ಶ್ರೀಮಾನ್ ಬಿ. ಶಿವಪ್ಪನವರು. ಸಹ ಸಂಪಾದಕರು ಶ್ರೀಮಾನ್ ಎಂ. ವಿ. ವೆಂಕಟೇಶ, ಎಂ.ಎಸ್.ಸಿ. ಪ್ರಕಾಶಕರು ಶ್ರೀ. ಬಿ. ಶಿವಪ್ಪ, ಎಸ್. ಜಿ ಎನ್. ಪ್ರೆಸ್, ಅರಳೇ ಪೇಟೆ — ಬೆಂಗಳೂರು ನಗರ. ಕ್ರೌ. ಧಿದ ೧೦೦ ಪುಟಗಳು. ಬೆಲೆ ೦—೧೫—೦.

ಕನ್ನಡದಲ್ಲಿ ಸದ್ಯ ಹೀರ ಹಳೆಯ ಮಾಸಪತ್ರಿಕೆಯಿದು. ಹೊಸ ಕಾಲದ ಬಿಡಗುಗಳನ್ನು ಒಪ್ಪಿ ಹೊಸ ರೂಪ ತಳೆದು ಹೊರಡುತ್ತಲಿದೆ. ಹಳೆಯ ಹೊಸ ಲೇಖಕರ ಕಥೆ, ಕವನ, ವೈಶ್ಯ, ಪ್ರಬಂಧ, ಹಾಸ್ಯ ಲೇಖನಗಳು ಬಂದಿರುವುವಲ್ಲದೆ, ತ್ರಿವರ್ಣ ಚಿತ್ರದ ಮೇಲೋಲೆಯಿಂದಲೂ ಚಲನಚಿತ್ರದ ಅನೇಕ ನಕ್ಷತ್ರಗಳ ಪಟಿಯಚ್ಚುಗಳಿಂದಲೂ ಸಂಚಿಕೆ ನಯನಾಕರ್ಷಕವಾಗಿದೆ.

೧೦೮. **ಮಹಾದ್ವಾರ** (ಮರಾಟಿ ಮಾಸಪತ್ರಿಕೆಯ ದೀಪಾವಳಿ ಸಂಚಿಕೆ). ಸಂಪಾದಕರು ಶ್ರೀಮಾನ್ ವ್ಯಂ. ನ. ಕುಲಕರ್ಣಿ, ಮಹಾದ್ವಾರ ಪ್ರೆಸ್, ಕೊಲ್ಹಾಪುರ. ಕ್ರೌ. ಧಿದ ೬೨ ಪುಟಗಳು. ಬೆಲೆ ೧—೦—೦.

೧೦೯. **ಶ್ರೀಗುರು ಸಾರ್ವಭೌಮ** (ಶ್ರೀರಾಘವೇಂದ್ರ ಸ್ವಾಮಿಗಳ ಜೀವನ ಚರಿತ್ರ). ಬರೆದವರು ಶ್ರೀ. ಜಿ. ಎಸ್. ಕೃಷ್ಣರಾವ್. ಪ್ರಕಾಶನ ಸ್ಥಳ: ಪರಿಮಳ ಸಾಹಿತ್ಯ ಮಂದಿರ, ಬೆಂಗಳೂರು ಸಿಟಿ. ಕ್ರೌ. ಅ. ೧೪೪ ಪುಟಗಳು. ಬೆಲೆ ೧-೮-೦.

೧೧೦. **ಸ್ವತಂತ್ರ ಗ್ರಾಮಸಮಾಜ** (ವಿಷಯ ವಿವೇಚನಾತ್ಮಕ ಗ್ರಂಥ) ಲೇಖಕರು ಶ್ರೀ. ಹಿ. ರಾಮರಾಯ ಮಲ್ಯರು. ಪ್ರಕಾಶಕರು: ಮಂಗಳೂರು ಟ್ರೇಡಿಂಗ್ ಅಸೋಸಿಯೇಶನ್ ಲಿಮಿಟೆಡ್, ಮಂಗಳೂರು. ಕ್ರೌ. ಅ. ೫೬ ಪುಟಗಳು, ಬೆಲೆ ೦—೮—೦.

೧೧೧. **ಚಿನ್ಮಯ ಚಿಂತಾಮಣಿ** (ಹಳೆಯ ಪದ್ಯಮಯ ಗ್ರಂಥ). ಬರೆದ ಕವಿ ಕಲ್ಯಾಣಕೀರ್ತಿ. ಸಂಪಾದಕರು ಶ್ರೀಮಾನ್ ವಿರ್ಜಿ ಅಣ್ಣಾರಾಯರು. ಬೆಳಗಾಂವಿ ಜಿಲ್ಲಾ ಸೇಡಬಾಳದ 'ಶಾಂತಿಸೇವಾಸದನ'ದ ಪಳಗನ್ನಡದ ಕಾವ್ಯಮಾಲೆಯ ೧ನೆಯ ಕುಸುಮ. ಕ್ರೌ. ಅ. ೬೪ ಪುಟಗಳು. ಬೆಲೆ ೧—೦—೦. ಮಾಲೆಯ ಸಂಪಾದಕರು: ಶ್ರೀ. ಟಿ. ಕೆ. ಪಾಟೀಲ, ಬಿ.ಎ.,ಬಿ.ಟಿ. ಅವರು.

೧೧೨. **ಮೈಸೂರಿನ ಮಹಾರಾಜರು** (ಪರಿಚಯಾತ್ಮಕ ಕಿರು ಹೊತ್ತಿಗೆ). ಪ್ರಕಾಶಕರು: ಕುಳುಕುಂದ ಶಿವರಾಯರು, ಜನತಾ ಸಾಹಿತ್ಯ, ಮರಾಠಾ ಗಲ್ಲಿ, ಹುಬ್ಬಳ್ಳಿ. ಕ್ರೌ. ಅ. ೧೫ ಪುಟಗಳು. ಬೆಲೆ ೦—೨—೦.

ಇದರಲ್ಲಿ ಮೈಸೂರಿನ ಜನತೆ ಮಹಾರಾಜರವರ ಸರಕಾರದೊಂದಿಗೆ ನಡೆಯಿಸಿರುವ ಸ್ವಾತಂತ್ರ್ಯದ ಹೋರಾಟದ ವಿವರಣೆಯಿದೆ. 'ಮಾದರಿ'ಯ ಮೈಸೂರಿನಲ್ಲಿಯೂ ಜನಸಾಮಾನ್ಯರು ಪಡುತ್ತಿರುವ ಭಪಣೆಯನ್ನು ಇದರಿಂದ ಅರಿತುಕೊಳ್ಳಬಹುದು.

೧೧೩. **ಮುಂಕ್ಕಣ್ಣಯೊತ್ರೆ** (ಪ್ರವಾಸ ಪ್ರಬಂಧ ಸಂಕಲನ). ಪ್ರಬಂಧ ಲೇಖಕರು ಶ್ರೀ-ರಂಗ-ಮುಂಗರು. ಪ್ರಕಾಶಕರು: ರಂಗಮುಂಗ ಪ್ರಕಾಶನ, ಧಾರವಾಡ. ಕ್ರೌ. ಅ. ೬೮ ಪುಟಗಳು. ಬೆಲೆ ೧—೬—೦.

೧೧೪. **ಸುಗ್ಗಿಯ ಮೈಸೂರು** (ವಾರಪತ್ರಿಕೆಯ ದೀಪಾವಳಿಯ ವಿಶೇಷ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಆರ್. ಕೆ. ಐಯಂಗಾರ್, ಶಾಂತಿಪ್ರೆಸ್, ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ. ಕ್ರೌ. ಧಿದ ೬೪ ಪುಟಗಳು. ಬೆಲೆ ೦-೮-೦.

೧೧೫. The Eighth Annual Report and the Audited Accounts and Balansc-sheet of the Divine Life Society— Rikht-kesh (Himalayas). ಪ್ರಕಾಶಕರು: ದಿ ಡಿವೈನ್ ಲೈಫ್ ಟ್ರಸ್ಟ್ ಸೊಸೈಟಿ 'ಆನಂದಕುಟೀರ' ಋಷೀಕೇಶ.

೧೧೬. **ಸಾಹಿತ್ಯಜ್ಞರ ಆತ್ಮಕಥನ** (ಆಧುನಿಕ ಸಾಹಿತ್ಯಿಕರಲ್ಲಿ ಹನ್ನೊಂದು ಜನರ ಸಾಹಿತ್ಯಜೀವನದ ಸಂಕಲನ). ಸಂಪಾದಕರು: ಶ್ರೀ. ಬುಲ್ಲಿ ಬಿಂದುಮಾಧವ ಅವರು. ಧಾರವಾಡದ ಮಿಂಚಿನ ಬಳ್ಳಿಯ ೯ನೆಯ ವರ್ಷದ ೧ನೆಯ ಕುಡಿ. ಕ್ರೌ. ಅ ೧೫೮ ಪುಟಗಳು. ಬೆಲೆ ೧-೮-೦.

(೨೫೬ ನೆಯ ಪುಟದಿಂದ ಮುಂದೆಸಾಗಿದ್ದು.)

ಮಾಡುವುದಾದರೂ ಅದರ ಹಿಂದೆ ಸಹಾನುಭೂತಿಯಿರುವುದು ಹೊರತು, ದ್ವೇಷ-ನೈಷ್ಠುರ್ಯಗಳಿರುವುದಿಲ್ಲ.

ಕೈಲಾಸಮರ ಸ್ವಂತದ ಜೀವನ ಸುಖಪೂರ್ಣವೊ ದುಃಖಪೂರ್ಣವೊ ಎಂಬುದು ಯಾರಿಗೂ ತಿಳಿಯದ ಸಂಗತಿ. ಆದರೆ ಯಾವಾಗಲೂ ನಗೆಯ ಹೊನಲುಗಳನ್ನೆ ಹರಿಸುತ್ತಿರುವ ಕೈಲಾಸಮರನ್ನು ನೋಡಿದವರಿಗೆ 'ಇವರು ಬಾಳಿನ ಕಷ್ಟದ ಬೆಂಕಿಯ ಬಿಸಿಯನ್ನೆ ತಗುಲಿಸಿಕೊಂಡಿಲ್ಲ' ಎನಿಸುವಂತಿತ್ತು. ಮನೋವಿಜ್ಞಾನಿ ವಾತ್ಸ್ಯ 'ಇಂತಹ ಈ ನಗೆಗಾರಿಕೆ, ಎಂತಹ ಎದೆಯುರಿಯನ್ನು ಅರಿಸಿಕೊಳ್ಳಲು ಹುಟ್ಟಿಸಿಕೊಂಡುದೊ!' ಎಂದು ಬೆರಗುಪಡಬಹುದಾಗಿತ್ತು.

ಏವಂಗುಣ ವಿಶಿಷ್ಟರಾದ ಅಸಾಮಾನ್ಯ ಮಾನವ ಕೈಲಾಸಂ, ಕಳೆದ ನವ್ಹಂಬರ್ ೨೩ನೆಯ ತಾರೀಖಿಗೆ ಶೂನ್ಯದಲ್ಲಿ ಸೇರಿಹೋದರು. ಅವರ ಮೂರ್ತ ಮರೆಯಾದರೂ ಕಲೆಯ ಕೀರ್ತಿ ಕನ್ನಡ ಭಾಷೆ ಇರುವನಕ ಇರಬಲ್ಲದು. ಎಂತಲೆ ಕೈಲಾಸಂ ಸಕ್ತರೂ ಬದುಕಿ ಇದ್ದಾರೆ, ಅವರ ಕೃತಿಗಳಲ್ಲಿ. ಅವುಗಳ ಮುಖಾಂತರ ನಮಗೆ ಬೇಕಾದಾಗ ಕೈಲಾಸಮರನ್ನು ಕರೆದು ಅವರೊಂದಿಗೆ ಮಾತನಾಡಿಕೊಳ್ಳಬಹುದು.

—ಸಂಪಾದಕರು

ಅಣ್ಣ-ತಮ್ಮಕೆ

(ಸಣ್ಣಕತೆ *)

ಶ್ರೀ. ಬಿ. ಪಿ. ಎಸ್. ರಾವ್ ಅವರಿಂದ ಅನುವಾದಿತ

★

ದಾಯಾದಿತನದ ಮಾದರಿಯಿದೊಂದು. ದಿನಕರಲಾಲ-ವಿಜಯಲಾಲರ ಸ್ವಭಾವ ದಕ್ಷಿಣೋತ್ತರ ಧ್ರುವಗಳಷ್ಟು ವಿರೋಧವುಳ್ಳದು. ಆದರೆ ಮನೆತನದ ಅಭಿಮಾನದ ಅಕ್ಷವೃತ್ತ ಎರಡು ಧ್ರುವಗಳನ್ನೂ ಹೊಂದಿಸಿರುವುದು.

೧

ದಿನಕರಲಾಲರು ಪುರಾತನಕಾಲದಿಂದಲೂ ನಡೆದುಕೊಂಡು ಬಂದ ದೇಸಾಯಿಯರ ಮನೆತನದಲ್ಲಿ ಹುಟ್ಟಿದವರು. ಇವರಲ್ಲದಿದ್ದರೂ ಇವರ ಪೂರ್ವಜರು, ಗುಜರಾತಿನ ರಾಜ್ಯದ ಸಲುವಾಗಿ ತುಂಬ ತ್ಯಾರ್ಯವನ್ನು ತೋರಿಸಿದ್ದರು; ಆದರೆ ಅದರಿಂದ ಪ್ರಯೋಜನವೇನೂ ಆಗಿರಲಿಲ್ಲ. ಗುಜರಾತಿಗಳ ಅಸಾಮರ್ಥ್ಯದ ಮೂಲಕ ಮುಸಲ್ಮಾನರದೇ ಮೇಲುಗೈ ಆಯಿತು. ಅವರು ಪೂರ್ಣವಾಗಿ ಅಲ್ಲಿ ಕಾಲೂರಿ ನಿಲ್ಲುವವರೆಗೆ, ಈ ದೇಸಾಯರ ಮನೆತನದ ಹಲವು ಜೀವಗಳು ತಮ್ಮನ್ನು ಆಹುತಿಯಾಗಿ ಕೊಟ್ಟಿದ್ದುವು. ಮೊಗಲರ ಆಡಳಿತದ ಕಂಭ ಅಲುಗಾಡತೊಡಗಿದಾಗ, ಪೇಶವೆ-ಗಾಯಕವಾಡರಿಗೆ ಈ ದೇಸಾಯಿಯರ ಮನೆತನದವರು ಅನೇಕ ಬಗೆಯಿಂದ ನೆರವನ್ನು ಕೊಟ್ಟಿದ್ದರು. ಮರಾಟರ ಸ್ವಾತಂತ್ರ್ಯಸೂರ್ಯ ಮುಳುಗಿ ಹೋದ ಮೇಲೆ, ಕಂಪನಿ ಸರಕಾರಕ್ಕೂ ಈ ಮನೆತನದವರಿಂದ ಸಾಕಷ್ಟು ಸಹಕಾರ ದೊರೆಯಿತು. ಈ ಎಲ್ಲ ರಾಜರಿಗೂ ತಮ್ಮ ಮನೆತನದವರು ನೆರವು ಕೊಡದೆ ಹೋಗಿದ್ದರೆ, ಆ ಆ ರಾಜರಿಗೆ ಗುಜರಾತಿನಲ್ಲಿ ತಮ್ಮ ಪಡಿತ ಸಾಗಿಸಲಿಕ್ಕೆ ಸಾಧ್ಯವೇ ಇರಲಿಲ್ಲವೆಂದು ದಿನಕರಲಾಲರ ಗಟ್ಟಿಮುಟ್ಟಾದ ತಿಳಿವಳಿಕೆ; ಇದಕ್ಕಾಗಿ ಅವರಿಗೆ ತುಂಬ ಅಭಿಮಾನ. ತಮ್ಮ ಮನೆತನದ ಸಾಮರ್ಥ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯೆಂದು ಅವರು ಹಲವು ಮರಾಟಿ, ಪಾರಸಿ ವರ್ತವ್ಯವಹಾರಗಳನ್ನೂ ಸನದಿನ ಕಾಗದ-ಜುಕುಮ್‌ನಾಮೆಗಳನ್ನೂ ತುಂಬ ಹೆಮ್ಮೆಯಿಂದ ಜನರಿಗೆ ತೋರಿಸುವರು; ಅಲ್ಲದೆ ಅವುಗಳನ್ನು ತೋರಿಸುವುದರೊಂದಿಗೆ, ತಮ್ಮ ದೇಸಾಯಿ ಮನೆತನದ ೧೪-೧೬ ಮಂದಿ ವೀರರ ಉತ್ಸಾಹದಾಯಕ— ಮನೋರಂಜಕ— ಕತೆಗಳನ್ನೂ ಹೇಳುವರು.

ಇನ್ನು, ಶಕೆ, ತಾರೀಖು, ತಿಥಿಗಳನ್ನೆಲ್ಲಾ ವಿವರಿಸುತ್ತ ಅವರು ಅಭಿಮಾನದ ಸ್ವರದಲ್ಲಿ ಹೇಳತೊಡಗುವರು: 'ಮಹಮ್ಮದ್ ಬೇಗಡನ ಕೆಲಸಕ್ಕೆ ಬಾರದ ಆ ಕುರಿಮುಂದೆಯಂತಹ ಸೈನ್ಯಕ್ಕೆ ತೀರ ಅನವಸ್ಥೆ ಬಂದು ಒದಗಿದ್ದಿತು; ಅಂತಹ ಸಂಕಟ ಕಾಲದಲ್ಲಿ ಒಳ್ಳೆ ಚಾತುರ್ಯ ತೋರಿಸಿ ಅವನಿಗೆ ಧಾನ್ಯವನ್ನು ಒದಗಿಸಿ ಕೊಟ್ಟವರು ಯಾರೆಂದು ತಿಳಿದಿದ್ದೀರಿ? ನಮ್ಮ ವಂಶದ ಇಂದ್ರಜಿತ ದೇಸಾಯರು, ಬೇಟೆಯಾಡಲಿಕ್ಕೆಂದು ಬಂದು ದಾರಿತಪ್ಪಿಸಿಕೊಂಡು ತೊಳಲಾಡುತ್ತಿದ್ದ ಅಕಬರ್ ಬಾದಶಹನಿಗೂ ಅವನ ಅನುಯಾಯಿಗಳಿಗೂ ಅನ್ನ-ಪಾನಗಳ ಅತ್ಯುತ್ತಮ ವ್ಯವಸ್ಥೆಯನ್ನು ಇರಿಸಿದವರು ಯಾರು ಗೊತ್ತಿದೆಯೆ? ನಮ್ಮ ಮನೆತನದ ಪದ್ಮನಾಭ ದೇಸಾಯರು. ಒಮ್ಮೆ ಮಳೆಗಾಲದಲ್ಲಿ ಔರಂಗಜೇಬ್ ಬಾದಶಹರ ಅನೆಯೊಂದು ಕೆಸರಲ್ಲಿ ಸಿಕ್ಕಿ ಬಿದ್ದಿತ್ತು; ಆಗ ಹಳ್ಳಿಗಳಿಂದ ಜನಜಂಗುಳಿ ಕರೆಯಿಸಿ, ಆ ಅನೆಯನ್ನು ಎತ್ತಿ ತೆಗೆಯಿಸಿಕೊಟ್ಟವರು ಯಾರೆಂದಿರಿ? ನಮ್ಮ ಮನೆತನದ ಕುಂವರಜೀ ದೇಸಾಯರು! ಗೋವಿಂದರಾವ್ ಗಾಯಕವಾಡರ ಸೈನ್ಯ ಓಡಿಹೋಗುತ್ತಿರುವಾಗ ಅದನ್ನು ಪ್ರೋತ್ಸಾಹಿಸಿ ಶೂರರಾದ ಇಂಗ್ಲಿಷರನ್ನು ಹಣ್ಣುಮಾಡಿದವರು ಯಾರೆಂಬುದನ್ನು ಒಲ್ಲಿರಾ? ನಮ್ಮ ಮುರಲೀಧರ ದೇಸಾಯರು....'

ಇವೆಲ್ಲ ಸಂಗತಿಗಳನ್ನೂ, ಇತಿಹಾಸಕಾರರು ತಂತಮ್ಮ ಇತಿಹಾಸಗಳಲ್ಲಿ ಉಲ್ಲೇಖಿಸಿರುವರೋ ಇಲ್ಲವೋ—ಎಂಬುದರ ಶೋಧ, ಆಧುನಿಕ ಸಂಶೋಧನ ಪದ್ಧತಿಯಿಂದ ಇನ್ನುಮೇಲೆ ನಡೆಯಬೇಕಾಗಿದೆ. ಮಿಕ್ಕುದೆಲ್ಲ ಏನೇ ಇರಲಿ; ದಿನಕರಲಾಲರ ಪೂರ್ವಜರು ಬಲು ದೊಡ್ಡ ಜಮೀನ್‌ದಾರಿಯನ್ನು ಗಳಿಸಿದ್ದುದು ನಿಜ; ಒಂದುಕಾಲದಲ್ಲಿ ಅವರ ಮನೆತನ ವೈಭವ-ಪ್ರತಿಷ್ಠೆಗಳಿಂದ ಹೆಸರುವಾಸಿಯಾಗಿದ್ದುದೂ ನಿಜ.

'ಒಂದುಕಾಲದಲ್ಲಿ' ಎಂದು ಹೇಳಲಿಕ್ಕೆ ಕಾರಣವೆಂದರೆ: ದಿನಕರಲಾಲರ ಈ ಕಾಲದಲ್ಲಿ, ಹಿಂದಿನ ವೈಭವ-ಪ್ರತಿಷ್ಠೆಗಳು ಇಳಿಮೊಗವನ್ನು ಪಡೆದಿದ್ದುವು. ಭವ್ಯವಾದ ಪುರಾತನ ವಾಡೆಯಿದ್ದಿತು; ಎತ್ತಿನ ಬಂಡಿಯಿದ್ದಿತು; ಕುದುರೆಯು ಗಾಡಿಯಿದ್ದಿತಾದರೂ ಕುದುರೆಯಿಲ್ಲದಂತಾಗಿತ್ತು; ಹೊಸ ಕುದುರೆ ತೆಗೆದುಕೊಳ್ಳಬೇಕೆಂಬ ವಿಚಾರ ನಡೆದಿತ್ತು. ಮನೆಯಲ್ಲಿ ಆಳು-ಹೋಳುಗಳಿದ್ದರು; ಅತಿಥಿ-ಅಭ್ಯಾಗತರಿಂದ ಮನೆಯು ಯಾವಾಗಲೂ ತುಂಬಿತುಳುಕುತ್ತಿರುವುದು. ಕಲೆಕ್ಟರ್, ಅಸಿಸ್ಟಂಟ್ ಕಲೆಕ್ಟರ್, ರೈಲ್ವೇ ಅಧಿಕಾರಿಗಳು ಮೊದಲಾದವರ ಪಾದಧೂಳಿ, ದಿನಕರಲಾಲರ ಮನೆಯಲ್ಲಿ ಯಾವಾಗಲೂ ಬೀಳುತ್ತಿರುವುದು. ದಿನಕರಲಾಲರ ಸತ್ಕಾರದ ಬಗೆಗೆ ತುಂಬ ಪ್ರಸಿದ್ಧಿ. ಪ್ರತಿತಿಂಗಳೂ ಅವರಲ್ಲಿ ದೊಡ್ಡ ದೊಡ್ಡ ಔತಣಗಳು ನಡೆದು, ದೇಸಾಯರ ಕೀರ್ತಿಯೊಂದಿಗೆ ಅವರ ದೇಹವೂ ದಿನದಿನಕ್ಕೆ ಬೆಳೆಯುತ್ತ ಹೊರಟಿತ್ತು.

* ಗುಜರಾತಿನ ಸುಪ್ರಸಿದ್ಧ ಕತೆಗಾರರಾದ ಶ್ರೀ. ರಮಣಲಾಲ ದೇಸಾಯಿ ಅವರ 'ಚಚೇರೋ ಭಾಯಿ' ಎಂಬ ಕತೆಯ ಅನುವಾದವಿದು. —ಕಂ

ಔತಣದೂಟ ಹೊಡೆಯಲು ಬಂದವರು ದೇಸಾಯರ ಆರ್ಥಿಕ ಪರಿಸ್ಥಿತಿಯ ವಿಚಾರವನ್ನು ಏತಕ್ಕಾಗಿ ಮಾಡಬೇಕು? ಆದರೆ ಸಾಲಕೊಟ್ಟ ಸಾವುಕಾರರಿಗೆ ಮಾತ್ರ ಆದರ ವಿಚಾರವನ್ನು ಮಾಡಲೇಬೇಕೆಂದು ಒಮ್ಮಿದೊಮ್ಮೆಲೆ ಎನಿಸತೊಡಗಿತು. ಜವಿನಾನುಗಳನ್ನು ಒತ್ತೆಯಿಕ್ಕಿ ಸಾಲತಂದು ಬೇಕಾದಹಾಗೆ—ಇದುವರೆಗೆ—ದೇಸಾಯರು ವೆಚ್ಚಮಾಡುತ್ತ ಬಂದಿದ್ದರು. ಈಗ ಸಾವುಕಾರರು, ಕೇಳಿದಾಗ ಸಾಲಕೊಡಲಿಕ್ಕೆ ಹಿಂದೆ ಮುಂದೆ ನೋಡಲಾರಂಭಿಸಿದರು. ಸಾಲಕ್ಕಾಗಿ ಬರೆದು ಕಳುಹಿದ ಅವರ ಕಾಗದಗಳನ್ನು ಮುರಳಿ ಕಳುಹತೊಡಗಿದರು. ದೇಸಾಯರ ಗೌರವ-ಪ್ರತಿಷ್ಠೆಗಳ ನಂಬುಗೆಯ ಮೇಲೆ ಸಾಲ ಹುಟ್ಟುವುದು ಈ ಮೊದಲೆ ಎಂದೋ ನಿಂತು ಹೋಗಿತ್ತು. ಈಗ ಜವಿನಾನುಗಳೂ ಸಾಲದ ಹೊರೆಯ ಕೆಳಗೆ ಸಿಕ್ಕಿಕೊಂಡಿದ್ದುವು; ಆದುದರಿಂದಲೆ ನಾವುಕಾರ ಜನರು ಜಾಗರೂಕರಾಗಿ ತಮ್ಮ ಕೊಡುಗೈಗಳನ್ನು ತಡೆದು ಹಿಡಿದರು.

'ಟೀಗೆ ಮಾಡತೊಡಗಿದುದು ಸಾವುಕಾರರ ಕೇಳು ಮನಸ್ಸಿನ ಪ್ರಭಾವ—' ಎಂದೇ ದಿನಕರಲಾಲರು ಭಾವಿಸಿದರು; 'ಸಾವುಕಾರ ಜನರ ಹುಟ್ಟುಗುಣವೇ ಇಂತಹದು! ಕೊಟ್ಟ ಹಣಕ್ಕೆ ಇಪ್ಪತ್ತಿದ್ದು ಮುಪ್ಪತ್ತಿದ್ದು ಬಡ್ಡಿ ತೆಗೆದುಕೊಂಡ ಮೇಲೂ ಅವರ ಸಾಲ ಹಾಗೆಯೆ ಉಳಿಯುವುದು. ಸಾವುಕಾರರ ಸಾಲದ ವ್ಯವಹಾರದ ರಹಸ್ಯ ದೇವರಿಗೆ ಕೂಡ ತಿಳಿಯದಂತಿರುವುದು. 'ಬಟ್ಟಾ, ಪಾಗಡಿ, ದಲಾಲಿ, ಹಮ್ಮಿಣಿ, ಕಸರು' ಎಂದು ಮೊದಲಾಗಿ ಹಣ ಸೆಳೆದುಕೊಂಡೂ, ಮೇಲೆ ಒಂದಕ್ಕೆ ಎರಡರಂತೆ ಬಡ್ಡಿಯ ಲೆಕ್ಕಾಚಾರ ಇದ್ದೇ ಇರುತ್ತದೆ. ಇಷ್ಟು ಬಂದರೂ ಗಂಟು ಮುಟ್ಟಿಲ್ಲವೆಂದು ಕೋರ್ಟು-ಕಚೇರಿಗಳ ದಾರಿಯನ್ನು ಹಿಡಿಯುತ್ತಾರೆ. ಜನ್ಮದುದ್ದಕ್ಕೂ ಇದೇ ಉದ್ಯೋಗ ಅವರಿಗೆ!'

೨

ದಿನಕರಲಾಲರು, ಸಾವುಕಾರರ ಈ ನೀಚತನವನ್ನೂ ಸಹಿಸಿಕೊಂಡು ಇರಬಹುದಾಗಿತ್ತು; ಆದರೆ ತಮ್ಮ ಕಕ್ಕನ ಮಗನಾದ ವಿಜಯಲಾಲರ ನಡತೆ ಮಾತ್ರ ಅವರಿಗೆ ಅ-ಸಹನೀಯವಾಗಿ ಕಾಣುತ್ತಿತ್ತು. ಸಾಧಾರಣ ಇಬ್ಬರೂ ಒಂದೆ ವಯಸ್ಸಿನವರು; ಇಬ್ಬರ ಪಾಲಿಗೆ ಬಂದ ಆಸ್ತಿಯೂ ಸಮಾನವಾಗಿತ್ತು. ಕೆಲವು ಕಾಲ ಇಬ್ಬರ ಆಸ್ತಿ ಕೂಡಿಯೆ ಇತ್ತು; ಆದರೆ ದಿನಕರಲಾಲರ ಔದಾರ್ಯ ವಿಜಯಲಾಲರಿಗೆ ಸರಿಯೆಂದು ಎನಿಸಲಿಲ್ಲ. ಅಣ್ಣನ ಮಿತಿಯಿಲ್ಲದ ಆ ವೆಚ್ಚವನ್ನು ಕಂಡು ಅವರ ಹೃದಯ ಹೆದರಿ ನಡುಗುತ್ತಿತ್ತು. ಕೊನೆಗೆ ಬೇರೆ ಉಪಾಯ ಕಾಣದೆ ವಿಜಯಲಾಲರು, ಕೋರ್ಟಿನ ಮುಖಾಂತರ ತಮ್ಮ ಪಾಲನ್ನು ಬೇರೆ ಮಾಡಿಕೊಂಡು, ತಮ್ಮ ಆಸ್ತಿಯ ವ್ಯವಹಾರವನ್ನು ಸ್ವತಂತ್ರವಾಗಿ ನಡೆಯಿಸತೊಡಗಿದರು.

ಪರಂಪರೆಯಿಂದಲೂ ಒಂದುಗೂಡಿ ವೈಭವದಿಂದ ನಡೆದು ಕೊಂಡು ಬಂದ ಮನೆತನವು ಈಗ ಎರಡು ಹೋಳಾಗಿ ಹೋದುದು ದಿನಕರಲಾಲರಿಗೆ ತುಂಬ ದುಃಖವನ್ನುಂಟು ಮಾಡಿತ್ತು. ಈ ಪಾಲಿನ ಕಾರಣದಿಂದಲೆ ಇಬ್ಬರ ಮನಸ್ಸಿನಲ್ಲಿಯೂ ಒಂದು ಬಗೆಯ ತ್ವೇಷ ಮೂಡಿಕೊಂಡಿತ್ತು; ಅಸಮಾಧಾನವು ಆಟವಾಡುತ್ತಿತ್ತು. ತಮ್ಮ ಪೂರ್ವಜರಂತೆ ಅವರು ಒಬ್ಬರೊಬ್ಬರ ಮೇಲೆ ಕತ್ತಿಗಾಳಿಗ ನಡೆಯಿಸಲಿಲ್ಲವಾದರೂ, ಚುಚ್ಚುಮಾತಿನ ಕೊಂಕುಮಾತಿನ ಬಾಣಗಳನ್ನು ಆಗಾಗ ಬಿಟ್ಟು, ತಮ್ಮ ಕ್ಷಾತ್ರವೃತ್ತಿಯನ್ನು ಪ್ರಕಟಗೊಳಿಸುತ್ತಿದ್ದರು.

ಒಂದು ಮನೆಯಲ್ಲಿಯೆ ಎರಡು ಭಾಗಗಳಾದುದರಿಂದ, ಇಬ್ಬರ ನಡುವಿನ ಅಂತರವೆಂದರೆ ಬರಿ ಒಂದು ಗೋಡೆ. ಎದುರೆದುರಾಗಿ ಜಗಳವಾಡುವುದಲ್ಲದೆ ಅವರು, ತಂತಮ್ಮ ಮನೆಯಲ್ಲಿ ಕುಳಿತಾಗಲೂ ಒಬ್ಬರಿಗೊಬ್ಬರು ಹಸಿಗೆ ಹತ್ತುವಂತಹ ಮಾತುಗಳನ್ನಾಡಿ ಬೈಯುತ್ತಿದ್ದರು. ಇದರಿಂದ ಇಬ್ಬರೂ ಜಗಳಾಟದ ಸುಖವನ್ನು ಇಮ್ಮಡಿಯಾಗಿ ಅನುಭವಿಸುವರು.

"ಅವನಿಗೆ ದೇಸಾಯಿ ಎಂದು ಯಾರು ಅಂದಾರು? ಕೇವಲ—ಹೇಳಿಮಾಡಿಸಿದ— ಮಾರವಾಡಿ ಇದ್ದಾನೆ.. ಮಾರವಾಡಿ! ಅವನ ಮನಸನ್ನಾದರೂ ನೋಡಿರಿ.." ದಿನಕರಲಾಲರ ಸ್ವಗತ ಭಾಷಣವಿದು.

ಈ ಮಾತು ತನ್ನನ್ನು ಉದ್ದೇಶಿಸಿಯೆ ಆಡಿದುದೆಂಬುದು ಗೊತ್ತಾಗಿ ವಿಜಯಲಾಲರು ಕ್ರೋಧದಿಂದ ಕೆಂಡದಂತಾಗುವರು. ಆಗಲೆ 'ಈ ದಿನಕರ ಕಲೆಕ್ಟರ್'-ಕಮಿಶನರರಿಗೆ ಔತಣ ಕೊಡುತ್ತಾನೆ; ಹೂಮಾಲೆ!ಹಾಕುತ್ತಾನೆ; ತೂಗುಮಂಚದ ಮೇಲೆ ಕುಳಿತುಕೊಂಡು ಯಾವಾಗಲೂ ತನ್ನ ಪೂರ್ವಜರ ಕೊಂಡಾಟ ನಡೆಯಿಸಿರುತ್ತಾನೆ'— ಎಂಬುದೆಲ್ಲ ನೆನಪಾಗಿ, ತಾವೂ ಒಂದು ವಾಗ್ಬಾಣ ಹಾರಿಸುವರು:

"ಬಾರೀ ಜಂಭದ ಕೋಳಿ. ಇಲ್ಲದ ದೊಡ್ಡಿತೆಗಾಗಿ ತನ್ನ ದೇಸಗತನ್ನೆಲ್ಲ ಹಾಳುಮಾಡಿಕೊಳ್ಳಲು ನಿಂತಿದ್ದಾನೆ!"

ಕೂಡಲೆ ದಿನಕರಲಾಲರು ತೂಗುಮಂಚದಿಂದ ಅರ್ಧಮರ್ಧ ಎದ್ದು ನಿಂತು ಕೂಗುವರು:

"ಯಾರನ್ನು ಕುರಿತೋ ನೀನು ಬೊಗಳುತ್ತಿರೂದು?"

"ನಿನ್ನನ್ನೇ ಕುರಿತು! ಬೇರೆಯವರನ್ನು ಕುರಿತು ನಾನೇತಕ್ಕೆ ಮಾತನಾಡಬೇಕು? ನಾನು ಮಾತನಾಡಿದ್ದನ್ನು ತಿಳಿದುಕೊಳ್ಳುವಷ್ಟು ಬುದ್ಧಿಯಾದರೂ ಎಲ್ಲಿದೆ ನಿನಗೆ?"

"ದೇವರು ಇದ್ದ ಬುದ್ಧಿಯನ್ನೆಲ್ಲ ನಿನಗೇ ಕೊಟ್ಟು ಬಡವನಾಗಿದ್ದಾನೆ! ಎಲೋ! ಹಂಡೆ-ಹಂಡೆಗಳಲ್ಲಿ ಕುಂಬಿ ಹಣ ಹೂತಿಟ್ಟು ಸತ್ತುಹೋಗುವವನಲ್ಲವೇ ನೀನು? ಹಾವಾಗಿ ಹುಟ್ಟುತ್ತೀಯೆ ಹಾವಾಗಿ! ಮೂರ್ಖತನದ ಮೂರ್ತಿ!"

ಜಯ!

ಪರಿ; ಆಗಲೆ ಅಲ್ಲೊಂದು ಕುರುಕ್ಷೇತ್ರದ ನಾಟಕವಾಗುವುದು.

ಈ ಯುದ್ಧದಲ್ಲಿ ಯಾವಾಗಲೂ ಕಾದಾಡುವವರೆಂದರೆ ಬರಿ ಅಣ್ಣ-ತಮ್ಮದಿರಿಬ್ಬರೆ. ಅವರವರ ಹೆಂಡಿರು-ಮಕ್ಕಳುಗಳ ಮೇಲೆ ಈ ಯುದ್ಧದ ಪರಿಣಾಮ ಸ್ವಲ್ಪವೂ ಆಗುತ್ತಿರಲಿಲ್ಲ. ಹೊರಗೆ ಇಬ್ಬರೂ ಜಗಳಾಡುತ್ತಿರುವರು; ಆಗಲೆ ಒಳಗೆ ಅವರ ಹೆಂಡದಿರಿಬ್ಬರೂ ಕೂಡಿ, ಎರಡೂ ಮನೆಗಳಿಗಾಗಿ ಉಪ್ಪಿನಕಾಯಿ-ಸಂಬಾರಗಳ ಸಿದ್ಧತೆಯಲ್ಲಿ ತೊಡಗಿರುವರು—ಇಲ್ಲವೆ ಉಡಿಗೆ-ತೊಡಿಗೆಗಳ ವಿಚಾರದ ಮಾತುಗಳಲ್ಲಿ ಮಗ್ನರಾಗಿರುವರು. ವಿಜಯಲಾಲರ ಹೆಂಡತಿ ದಿನಕರಲಾಲರ ಮಗಳಿಗೆ ಹೆಳಲುಹಾಕುತ್ತಿರುವುದನ್ನು ಒಮ್ಮೆ ಕಂಡರೆ, ದಿನಕರಲಾಲರ ಹೆಂಡತಿ ವಿಜಯಲಾಲರ ಕೂಸಿಗೆ ತುತ್ತುಮಾಡಿ ಉಣಿಸುವುದು ಇನ್ನೊಮ್ಮೆ ಕಣ್ಣಿಗೆ ಬೀಳುವುದು. ಈ ದೇಸಾಯಿ ಬಂಧುಗಳ ಜಗಳಾಟದ ಒಂದು ವೈಶಿಷ್ಟ್ಯವೆಂದರೆ, ಜಗಳ ನಡೆದ ಗಳಿಗೆಯ ತರುವಾಯ ಅದರ ಅಂಶ ಉಳಿಯುತ್ತಿರುವುದೇ ಇಲ್ಲ. ನಮ್ಮ ಸೂರ್ಯ ನಿರುವನಲ್ಲ; ಈತ ಇನ್ನೊಬ್ಬ ಸೂರ್ಯನೊಂದಿಗೆ ಎಳೆದಾಟ ಸೆಳೆದಾಟ ನಡೆಯಿಸಿರಬಹುದು; ಆದರೆ ಪೃಥ್ವಿಗೂ ಅದಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಆ ಎಳೆದಾಟ-ಸೆಳೆದಾಟಗಳ ಕಲ್ಪನೆ ಕೂಡ ಪೃಥ್ವಿಯ ಮೇಲಿರುವ ನಮಗೆ ಇರುವುದಿಲ್ಲ ಈ ಜಗಳಗಂಟ ಅಣ್ಣತಮ್ಮದಿರ ಕುಟುಂಬಗಳ ಸ್ಥಿತಿಯೂ ಹೀಗೆಯೆ ಇದ್ದಿತು. ಕುಟುಂಬದ ಜನರ ಮನಸ್ಸನ್ನು, ಈ ಅಣ್ಣ-ತಮ್ಮದಿರ ಜಗಳವು ಸೋಂಕುತ್ತಲೇ ಇರಲಿಲ್ಲ.

ಮನೆಯಲ್ಲಿ ಯಾರಿಗೇ ಔತಣದೂಟ ನಡೆಯಲಿ; ವಿಜಯಲಾಲರನ್ನು ದಿನಕರಲಾಲರು ಕರೆಯದೆ ಬಿಡುತ್ತಿರಲಿಲ್ಲ. ಬಿಡಲಿಕ್ಕೆ ಅವರ ಮನಸ್ಸೂ ಒಪ್ಪುತ್ತಿರಲಿಲ್ಲ; ಆದರೆ ವಿಜಯಲಾಲರು ಮಾತ್ರ ಆ ಔತಣಗಳಲ್ಲಿ ಭಾಗವಹಿಸುವುದು ತೀರ ಅಪರೂಪ. ಕಮ್ಮ ಬಾರದೆ ಇದ್ದಾಗೆಲ್ಲ ದಿನಕರಲಾಲರು ಸಿಡುಕುತನದಿಂದ ನುಡಿಯುವರು:

"ಅವನು ಬರುತ್ತಾನೆಯೆ? ಬರಲಿಕ್ಕೆ ಮುಖವೆಲ್ಲಿದೆ ಅವನಿಗೆ? ತನ್ನ ಮನೆಗೆ ಎಂದಾದರೂ ಯಾರನ್ನಾದರೂ ಔತಣದೂಟಕ್ಕೆ ಕರೆದಿದ್ದಾನೆಯೆ?"

ಆಗ ವಿಜಯಲಾಲರು ಕೆಣಕುನುಡಿಗಳನ್ನಾಡುವರು:

"ಛೇ ಛೆ! ಎಂತಹ ಮೂರ್ಖನಪ್ಪಾ ನಮ್ಮ ದಿನಕರಲಾಲ! ಈತನಿಗೆ ಬುದ್ಧಿ ಎಂದು ಬರುತ್ತದೋ ಯಾರು ಬಲ್ಲರು! ಈ ಹುಚ್ಚ ಅವರಿಗೆ ಕರೆದು ಸನಿಯೂಟ ಹಾಕುತ್ತಾನೆ, ಆ ಹುಂಟರು ಬೇಕಾದ ಹಾಗೆ ಕೆಚ್ಚಿ-ಕೆಚ್ಚಿ ಹೋಗುತ್ತಾರೆ!"

ಒಮ್ಮೊಮ್ಮೆ, ಹೊಸ ಅಧಿಕಾರಿಗಳಾರಾದರೂ ಬಂದಾಗ, ವಿಜಯಲಾಲರಿಗೆ ನಿರ್ವಾಹವಿಲ್ಲದೆ ಊಟಕ್ಕೆ ಹೋಗಬೇಕಾಗಿ ಒರುತ್ತಿತ್ತು. ಆಗ ದಿನಕರಲಾಲರು ಮರೆಯದೆ, ಬಂದ ಅತಿಥಿಗಳಿಗೆ ಬಂಧುವಿನ ಗುರುತು ಮಾಡಿಕೊಡುತ್ತ ಹೇಳುವರು:

"ಸಾಹೇಬರೆ, ಈತ ನನ್ನ ತಮ್ಮ! ಒಂದೆ ಮನೆಯಲ್ಲಿ ಹುಟ್ಟಿದವರು.... ಒಂದೇ ಮನೆಯ ಅನ್ನ ತಿಂದು ಬಾಳುವವರು!"

"ಓ, ಹೀಗೇನು?" ಎಂದು ಸಾಹೇಬರು ಆತ್ಮೀಯತೆಯ ಆವಿರ್ಭಾವವನ್ನು ತೋರಿಸುತ್ತ ಕೇಳುವರು. ದೇಸಾಯರ ಮನೆತನದ ಬಗೆಗೆ ಇಷ್ಟರೆಷ್ಟು ಅಸ್ಥೆಯುಳ್ಳವರಿದ್ದಾರೆ—ಎಂದು ನೋಡಿದವರಿಗೆನಿಸುತ್ತಿತ್ತು.

"ಅಹುದು ಸಾಹೇಬರೆ, ನಮ್ಮ ಅಜ್ಜ-ಮುತ್ತಾತಂದಿರ ಪುಣ್ಯ ಇದುವರೆಗೂ ನಮಗೆ ಉಪಕಾರಮಾಡುತ್ತಲಿದೆ!" ಎಂದು ವಿಜಯಲಾಲರು ನಮ್ರತೆಯನ್ನು ತೋರಿಸುತ್ತ ನುಡಿಯುವರು.

ಊಟವಾಯಿತೊ, ಮತ್ತೆ ಅಣ್ಣ-ತಮ್ಮದಿರು ಬೇರೆ ಬೇರೆ! ಅವರಿಬ್ಬರ ಮನಸ್ಸು ಒಬ್ಬರೊಬ್ಬರ ಬಗೆಗೆ ಎಷ್ಟೊಂದು ಹೇಸಿಕೊಂಡಿದ್ದುವೆಂದರೆ, ಜಗಳಾಟದ ಮಾತುಗಳಲ್ಲದೆ ಬೇರೆಯ ಮಾತುಗಳನ್ನೇ ಎಂದೂ—ಅವರಿಬ್ಬರೂ—ಆಡುತ್ತಿರಲಿಲ್ಲ.

ದಿನಕರಲಾಲರು ಕೇವಲ ಅಧಿಕಾರಿಜನರಿಗಷ್ಟೇ ಆದರ ಸತ್ಕಾರ ನಲ್ಲಿಸುತ್ತಿದ್ದರೆಂದಲ್ಲ. ಮನೆಗೆ ಬಂದ ಅತಿಥಿ-ಅಭ್ಯಾಗತರನ್ನು ಸ್ವಾಗತಿಸುವುದರಲ್ಲಿಯೂ ದಾನ-ಧರ್ಮ ಮಾಡುವುದರಲ್ಲಿಯೂ ಎಲ್ಲರಿಗಿಂತ ಇವರ ಕೈ ಮುಂದಿರುತ್ತಿತ್ತು. ಸಾಧು-ಸಂತರನ್ನು ಉಣಿಸುವುದಿರಲಿ, ಪುರಾಣ-ಪುಣ್ಯಕಥೆಗಳ ಮಂಗಳ ಮಹೋತ್ಸವಗಳಿರಲಿ, ಸಂಗೀತಗಾರನೊಬ್ಬನ ಕಚೇರಿ ನಡೆಯಿಸುವುದಿರಲಿ—ಊರಲ್ಲಿಯ ಯಾವ ವೆಚ್ಚದ ಪ್ರಸಂಗಗಳಿದ್ದರೂ—ದಿನಕರಲಾಲರು ಎಲ್ಲದರಲ್ಲಿ ಮುಂದಾಳಾಗಿರುವರು. ಇದಕ್ಕೆ ಇನ್ನೊಂದು ತುದಿಯೆಂದರೆ ವಿಜಯಲಾಲರು. ಇಂತಹ ವೆಚ್ಚದ ಯಾವ ಸಂದರ್ಭದಲ್ಲಿಯೂ ಅವರು ಹಿಂದೆ ಹೆಜ್ಜೆ ಹಾಕುವರು. ತೀರ ಹತ್ತಿರ ಬಂದು ಮೈಗೆ ಅಂಟಿಕೊಂಡರೆ, ರೂಪಾಯಿಯೊ ಎಂಟಾಣೆಯೊ ಕೊಟ್ಟು ಬಿಡುಗಡೆ ಹೊಂದುತ್ತಿದ್ದರು.

ವರ್ಗಣಿಗಾಗಿ ಬಂದವರು ವಿಜಯಲಾಲರನ್ನು ಈರ್ಪಿಗೆ ಈಡು ಮಾಡಬೇಕೆಂದು ಹೇಳುವರು:

"ರಾಯರೆ, ಇದು ನೋಡಿರಿ! ದಿನಕರಲಾಲರು ಇಷ್ಟು ಕೊಟ್ಟಿದ್ದಾರೆ; ನೀವೂ ಅವರಷ್ಟೇ ಕೊಡಬೇಕು!"

ಹೀಗೆ ಸರಿಹೊಂದಿಸಿ ಮಾತನಾಡುವುದು ವಿಜಯಲಾಲರಿಗೆ ಸ್ವಲ್ಪವೂ ರುಚಿಸುತ್ತಿರಲಿಲ್ಲ. ಕೂಡಲೆ ಬಿರುನುಡಿಗಳಲ್ಲಿ ಹೇಳುವರು:

"ಅತನಿಗೆ ಬೇಗನೆ ಬಿಕ್ಕೆ ಬೇಡಬೇಕೆಂಬ ಆತುರವಿದ್ದೀತು; ನನಗೆ ಮಾತ್ರ ಅಂತಹ ಹುಚ್ಚು ಆತುರವಿಲ್ಲ!"

ಇತ್ತ ದಿನಕರಲಾಲರ ಮುಖಮುದ್ರೆ ನೋಡುವಂತೆ ಆಗಿರುವುದು. ಅವರು ಉತ್ತೇಜಿತ ಸ್ವರದಲ್ಲಿ ಕೂಗಿ ಹೇಳುವರು:

"ಎಲೋ, ಆ ಕಲಿಯುಗದ ಕರ್ಣನಿಂದ ನಿಮಗೆ ಏನು ಸಿಕ್ಕುವುದೆಂದು ಹೋಗಿ ಕೈಯೊಡ್ಡುತ್ತೀರಿ! ಚಿನಿವಾಲರಲ್ಲಿಯ

ಚಿನಿವಾಲನವ! ಬೆಳಗಿನಲ್ಲಿ ಎದ್ದು ಆತನ ಮುಖ ನೋಡಿದರೆ, ಇಡಿಯ ದಿನ ಕೇಡು ತಪ್ಪಿದ್ದಲ್ಲ!"

೩

ದಿನಕರಲಾಲರು ಇತ್ತೀಚೆಗೆ ಕೆಲವು ದಿನಗಳಿಂದ—ಪ್ರತಿ ದಿನವೂ—ಳ ಗಂಟೆಗೆ, ಒಬ್ಬ ಭಾಟ (ಸ್ತುತಿಪಾಠಕ)ನ ಕಡೆಯಿಂದ ತಮ್ಮ ಮನೆತನದ ವೀರರ ವೀರಕಥೆಗಳನ್ನು ಕೇಳುತ್ತಿದ್ದರು. ಕೊನೆಯ ದಿನ ಆ ಭಾಟನಿಗೆ ಒಂದು ಜರಿಯ ಶೆಲ್ಲೆಯವನ್ನು ಇನಾಮಾಗಿ ಕೊಟ್ಟರು. ಕೂಡಲೆ ಅವನು ದಿನಕರಲಾಲರ ಗುಣವನ್ನು ಬಣ್ಣಿಸಿ ಅಲಿ ಕವನವೊಂದನ್ನು ರಚಿಸಿ ಹಾಡಿದನು. ಅದರಲ್ಲಿ ಲಾಲಾಜಿಯವರನ್ನು ಸೂರ್ಯ, ಚಂದ್ರ, ಚಕ್ರವರ್ತಿ-ಗಳಿಗೆ ಹೋಲಿಸಿದ್ದಲ್ಲದೆ, ಸಮುದ್ರಕ್ಕಿಂತ ದೊಡ್ಡವರು—ಪರ್ವತಕ್ಕಿಂತ ಎತ್ತರದವರು—ಧನಪತಿಯಾದ ಕುಬೇರನಿಗೆ ಸಾಲ ಕೊಡುವವರು—ಎಂದು ಹೊಗಳಿ ಹಾಡಿದ್ದ. ಇನಾಮನ್ನು ಪಡೆದು ಭಾಟನತ್ತ ಹೊರಟುಹೋದ; ಇತ್ತ ದೇಸಾಯಿಯರ ಹಳೆಯ ಸಾವುಕಾರನೊಬ್ಬ, ಬೇಲೀಫ್ ಮತ್ತು ಇಬ್ಬರು ಸೀಪಾಯಿಗಳೊಂದಿಗೆ ದಿನಕರಲಾಲರ ಮನೆಯೊಳಕ್ಕೆ ಪ್ರವೇಶಿಸಿದ. ಆಗ ಬಂದುದು ಜಪ್ತಿಯ ಸಲುವಾಗಿ. ಮುನಸೂಫರಿಗೆ ದಿನಕರಲಾಲರು ಏಳೆಂಟು ಸಲ ಔತಣ ಸಲ್ಲಿಸಿದ್ದರು. ಬೆಳಸಿಯ ಪಾರ್ಟಿಗೆ ಕರೆದಿದ್ದರು. ಒಂದು ದೊಡ್ಡ ಕಪಾಟನ್ನು 'ಇರಲಿ, ತೆಗೆದುಕೊಳ್ಳಿರಿ!' ಎಂದು ಉಪಯೋಗಿಸಲಿಕ್ಕೆ ಕೊಟ್ಟಿದ್ದರು. ಆದುದರಿಂದ ಈ ಪ್ರಕರಣದ ವಿಚಾರದಲ್ಲಿ ಅವರು ನಿಶ್ಚಿಂತರಾಗಿದ್ದರು. ಇಷ್ಟು ಬೇಗನೆ ಕೋರ್ಟಿನ ಜಪ್ತಿಯು ಬಂದೀತೆಂದು ಅವರು ಕಲ್ಪಿಸಿರಲಿಲ್ಲ ಕೂಡ. ಬರಬೇಕಾದ ಫೀ ಹಣ ತಮಗೆ ಬಂದಿಲ್ಲವೆಂದು ಇಂದೆಯೆ ವಕೀಲರೂ ದಿನಕರಲಾಲರನ್ನು ಎಚ್ಚರಿಸಿದ್ದರು.

ಲಾಲಾಜಿಯವರು ಸಂತಪ್ತರಾದರು. 'ಮಾನಹಾನಿ ಮಾಡಿದ ಬಗ್ಗೆ ಕ್ರಿಮಿನಲ್ ಖಟ್ಲೆ ಹಾಕುತ್ತೇನೆ' ಎಂದು ಬೆದರಿಕೆ ಹಾಕತೊಡಗಿದರು. 'ಗವರ್ನರರ ಕಡೆಗೆ ಈಗಲೆ ತಂತಿಯನ್ನು ಕಳುಹುವೆನು' ಎಂದು ಎದ್ದರು. ಸಾಯಂಕಾಲದೊಳಗಾಗಿ ನಿಮ್ಮ ಹಣವನ್ನೆಲ್ಲ ತೀರಿಸಿ ಬಿಡುತ್ತೇನೆಂದು ಅವಧಿಯನ್ನು ಕೇಳಿದರು. ಏನು ಮಾಡಿದರೂ ಸಾವುಕಾರ ಕೇಳಲೊಲ್ಲ. ಜಪ್ತಿಮಾಡಬೇಕೆಂಬ ಉದ್ದೇಶದಿಂದಲೇ ಬಂದವನವ. ದಿನಕರಲಾಲರ ಎಲ್ಲ ಹಂಚಿಕೆಗಳೂ ನಿರರ್ಥಕವಾದುವು. ಆಗಮಾತ್ರ ಪಾಪ, ಅವರು ಕೈಕಾಲು ಕಳೆದುಕೊಂಡರು.

ಇತ್ತ ಬೇಲಿಫ್‌ನೂ ಸೀಪಾಯಿಗಳೂ ಸೇರಿ, ಸಾವುಕಾರನ ಹೇಳಿಕೆಯಂತೆ ಬೇರೆ ಬೇರೆ ವಸ್ತುಗಳನ್ನು ತಂದು ಸ್ವಾಧೀನ ಪಡಿಸಿಕೊಳ್ಳತೊಡಗಿದರು.

ನೆರೆಮನೆಯ ಅಂಗಳದ ಉಯ್ಯಾಲೆಯ ಮೇಲೆ ಕುಳಿತು ಕೊಂಡು ವಿಜಯಲಾಲರು, ನಡೆದಿರುವುದನ್ನೆಲ್ಲ ನೋಡುತ್ತಲಿದ್ದರು. ಅವರ ಮುಖವು ಶಾಂತವಾಗಿದ್ದರೂ ಕಳೋರತೆಯ ಗೆರೆಗಳನ್ನು ಮೂಡಿಸಿಕೊಂಡಿದ್ದಿತು. ಇಷ್ಟರಲ್ಲಿಯೆ ಅವರ ಹೆಂಡತಿ ಹೊರಗೆ ಬಂದು ಆತುರದಿಂದ ಹೇಳಿದರು; "ಭಾವಾಜಿಯವರ ಮನೆಗೆ ಜಪ್ತಿ ಬಂದಿದೆ!"

"ಅವನ ಅದೃಷ್ಟ; ಅದಕ್ಕೆ ನಾನೇನು ಮಾಡಲಿ?"

"ಇದೇನು ಮಾತಿದು? ಒಳ್ಳೆಯದಾಗಿ ಕಾಣುವುದೇ ನಿಮಗೆ? ಏನಾದರೂ ಉಪಾಯ ಮಾಡಬೇಕಲ್ಲವೇ ನಾವು?"

"ಅವನ ಮಿತ್ರರಿದ್ದಾರಲ್ಲಾ; ಏನಾದರೂ ಮಾಡಬಹುದು ಅವರು! ಇದುವರೆಗೆ ಈತನ ಮನೆಯಲ್ಲಿ ಬಂದು ಮೇದುಹೋದ ಅಧಿಕಾರಿ ಜನರೇನು ಕಡಿಮೆಯಿದ್ದಾರೆಯೆ? ಅವರೇನೂ ಸತ್ತಿಲ್ಲ; ಬಂದಾರಲ್ಲಾ ಸಹಾಯ ಮಾಡಲಿಕ್ಕೆ!"

"ಏನಾದರೂ ಅಲ್ಪಸ್ವಲ್ಪ ಕೊಟ್ಟು ತಿಳಿವಳಿಕೀ ಮಾತುಹೇಳಿ, ಬಂದಿರುವ ಕುತ್ತವನ್ನಾದರೂ ಮುಂದೆ ನೂಕಿರಿ!"

"ಏದಾರು ಸಲ ನಾನು ನಡುವೆ ಬಿದ್ದು ಹೋಗಿ ಹೊತ್ತಿದ್ದೇನೆ. ಆದರೂ ಈತನ ದುಂದುಗಾರಿಕೆಯ ಚಟ ಕಡಿಮೆಯಾಗಲೊಲ್ಲದು. ಈಗ ಮನೆ ಮಾರಾಟ ಮಾಡುವುದರ ಹೊರತು ಬೇರೆ ಉಪಾಯವೇ ಉಳಿದಿಲ್ಲ. ಇದು ಹೀಗೆಯೆ ನಡೆದರೆ, ತನ್ನನ್ನೇ ಮಾರಿಕೊಳ್ಳುವ ದಿನವೂ ಬಾರದೆ ಹೋಗದು ಆತನಿಗೆ!"

ಮಾತಿನ ಕೊನೆಯೊಂದಿಗೆ ವಿಜಯಲಾಲರು ಉಯ್ಯಾಲೆಯಿಂದಿಳಿದು ಮೊಗಸಾಲೆಯಲ್ಲಿ ಬಂದು ಅತ್ತಿತ್ತ ಅಡಿಯಾಡತೊಡಗಿದರು. ಬೇಲೀಫನು ಅಂಗಳದಲ್ಲಿ ಬಂದು ಹೇಳಿದ:

"ಸ್ವಲ್ಪ ಈ ಪಂಚನಾಮೆಯ ಮೇಲೆ ಸಹಿ ಹಾಕುತ್ತೀರಾ?"

"ನನಗೀಗ ವೇಳೆಯಿಲ್ಲ; ಹೋಗು, ಬೇರೆಯವರಾರನ್ನಾದರೂ ನೋಡಿಕೊಳ್ಳು!" ಎಂದು ನುಡಿದವರೇ ವಿಜಯಲಾಲರು ತಟ್ಟನೆ ಒಳಕ್ಕೆ ಹೋಗಿಬಿಟ್ಟರು. ಸ್ವಲ್ಪ ವೇಳೆಯಲ್ಲಿಯೆ ಮೈಮೇಲೆ ಬಟ್ಟೆ ಹಾಕಿಕೊಂಡು ಹೊರಕ್ಕೆ ಬಂದರು. ಪಡಸಾಲೆಯಲ್ಲಿ ತಮ್ಮ ಹೆಂಡತಿ, ಹುಡುಗಿಯೊಬ್ಬಳನ್ನು ಬಳಿಯಲ್ಲಿ ನಿಲ್ಲಿಸಿಕೊಂಡು, ಏನೇನೋ ಸಮಾಧಾನದ ಮಾತುಗಳನ್ನು ಹೇಳುತ್ತಿದ್ದಳು. ಇದನ್ನು ನೋಡಿದೊಡನೆಯೆ ವಿಜಯಲಾಲರು ಕೇಳಿದರು:

"ಏನಾಯಿತಮ್ಮಾ ನಿನಗೆ? ಅಳುತ್ತಿದ್ದೀಯಲ್ಲ? ಏಕೆ?"

ಹುಡುಗಿ ದಿನಕರಲಾಲರ ಮಗಳು ಪದ್ಮಾ. ವಿಜಯಲಾಲರು ಕೇಳಿದೊಡನೆಯೆ ಕಣ್ಣೊರಸಿಕೊಳ್ಳುತ್ತ ಅವಳು ಹೇಳಿದಳು:

"ಏನೂ—ಇಲ್ಲ—ಚಿಕ್ಕಪ್ಪಾಜಿ!"

"ಎಲೆ, ನೀನೇತಕ್ಕಮ್ಮಾ ಹೆದರಬೇಕು? ದೇಸಾಯರ ಕೆಲಸ. ಇಂತಹ ಪ್ರಕರಣಗಳೆಲ್ಲ ನಡೆದೇ ನಡೆದಿರುವುವು. ಜಪ್ತಿಯ ಸಂದರ್ಭಗಳೂ ಒಮ್ಮೊಮ್ಮೆ ಬರುತ್ತವೆ!" ಎಂದು ಹುಡುಗಿಯನ್ನು ಸಮಾಧಾನಗೊಳಿಸಲೆಂದು ವಿಜಯಲಾಲ ನುಡಿದರು. ಕೂಡಲೆ ಅವರ ಹೆಂಡತಿ ಹೇಳಿದರು:

"ಅದೆಲ್ಲವೂ ಸರಿ! ಈಕೆಗೆ ಮದುವೆಯ ಕಾಲದಲ್ಲಿ ಬಳುವಳಿ

ಕೊಟ್ಟ ಒಡವೆಗಳು ಕೂಡ ಈಗ ಜಪ್ತಿಯಾಗಿ ಹೋಗುತ್ತವಲ್ಲ! ಅದಕ್ಕೇನು ಮಾಡಬೇಕು?"

ಪದ್ಮೆಯ ಕಣ್ಣಲ್ಲಿ ಮತ್ತೆ ಕಂಬನಿ ತುಂಬಿದುವು. ತನ್ನ ಒಡವೆಗೆ ಬಂದಿರುವ ದುರ್ದಶೆಯನ್ನು ಕೇಳಿ ಆಕೆ ಹೆದರಿದ್ದಳು.

"ಮಗು, ಪದ್ಮಾ! ನೀನು ಅಳಬೇಡ! ನಿನ್ನ ಒಡವೆಗಳನ್ನು ಹಿಡಿಯುವ ಗಂಡೆದೆ ಯಾರಿಗಿದೆ ನೋಡೋಣ!" ಎಂದು ನುಡಿಯುತ್ತಲೆ, ಒಂದು ಕೀಲಿಕೈಗಳ ಗೊಂಚಲನ್ನು ಹೆಂಡತಿಯ ಕಡೆಗೆ ಚೆಲ್ಲಿ ಹೇಳಿದರು:

"ಆ ಚಿಕ್ಕ ಪೆಟ್ಟಿಗೆಯಲ್ಲಿ ಒಂದು ನೋಟಿನ ಬಂಡಲು ಇದೆ; ಅದನ್ನಿಲ್ಲಿ ತೆಗೆದುಕೊಂಡು ಬಾ!"

ಚಿಕ್ಕಮ್ಮ ಬೇಗನೆ ಹೋಗಿ ನೋಟಿನ ಬಂಡಲಿನೊಂದಿಗೆ ಹೊರಗೆ ಬಂದಳು. ವಿಜಯಲಾಲರು ಪದ್ಮೆಯ ಕಡೆಗೆ ಅವುಗಳನ್ನು ಕೊಟ್ಟು "ಹೋಗು, ಇವುಗಳನ್ನು ತೆಗೆದುಕೊಂಡು ಹೋಗಿ ನಿಮ್ಮ ಆಪ್ಪಾಜಿಯವರ ಕಡೆಗೆ ಕೊಡು!"

ನೋಟುಗಳನ್ನು ತೆಗೆದುಕೊಂಡು ಪದ್ಮಾ ಓಡುತ್ತಲೇ ಮನೆಗೆ ಹೋದಳು; ಆದರೆ ಹೋದ ವೇಗದಲ್ಲಿಯೆ ಆಕೆ ಮರಳಿ ಬಂದು, ಬಿಗಿದ ಕಂಠದಲ್ಲಿ ಹೇಳಿದಳು:

"ಆಪ್ಪಾಜಿಯವರು ಇವನ್ನು ತೆಗೆದುಕೊಳ್ಳಲಿಲ್ಲ!"

ವಿಜಯಲಾಲರು ಬಿರುನುಡಿಯಲ್ಲಿ ಮಾತನಾಡಿದರು:

"ಅಬ್ಬಾ, ಅವನೇಕೆ ತೆಗೆದುಕೊಂಡಾನು! ಲಕ್ಷಾಧೀಶನ ಸೊಮ್ಮಗನವ!"

ಬಳಿಕ ಗಟ್ಟಿಯಾಗಿ ಕೂಗಿದರು:

"ವನಮಾಲೀ ಶೇಟ್!"

ಮಧ್ಯದ ಕಿಟಕಿಯಲ್ಲಿ ವನಮಾಲಿಯು ಹಣಿಯಿಕ್ಕಿ ನೋಡಿದ; ವಿಜಯಲಾಲರು ಗದ್ದರಿಸುತ್ತ ಹೇಳಿದರು:

"ಮೊದಲು ಮನೆಬಿಟ್ಟು ಹೊರಡು! ನಾ ಚಿ ಕೆಯಿಲ್ಲದ ಮನುಷ್ಯ ನೀನು! ನನ್ನನ್ನು ಕೇಳದೆ ನೀನು ಮನೆ ಹೊಕ್ಕೆರುತ್ತೀಯಲ್ಲವೆ? ಇಲ್ಲಿಗೆ ಬಂದಿತೇನು ನಿನ್ನ ಅಂತಸ್ತು?"

ವನಮಾಲಿಯು ವಿನಯದ ಧ್ವನಿಯಲ್ಲಿ ಹೇಳಿದ:

"ನಾನು ಬರುತ್ತಿರುವಾಗ.. ತಾವುಕ್ಕಿಎದುರಿನಲ್ಲಿಯೇ ಕುಳಿತಿದ್ದಿರಲ್ಲಾ—ಲಾಲಾಜೀ?"

"ನಡೆ; ನಿನ್ನ ಹಣ ಎಣಿಸಿಕೋ.. ಹಾದಿಯನ್ನು ಹಿಡಿ! ಬರೀ ಬಡ್ಡಿಯಲ್ಲಿಯೇ ಜನರನ್ನು ಮಣ್ಣುಗೂಡಿಸಿ ಬಿಡುತ್ತೀಯಾ! ಕಸ್ಟಮಾಣಿಕ—ನೀಚ!"

ಅದೇ ಹೊತ್ತಿನಲ್ಲಿಯೆ ದಿನಕರಲಾಲರು ಕನಲಿ ಕೆಂಡವಾಗಿ ಕೆಳಗಿಳಿದು ಬಂದರು. ವಿಜಯಲಾಲರೊಂದಿಗೆ ಜಗಳವಾಡತೊಡಗಿದರು:

"ನನ್ನ ಸಾಲದ ಹಣ ಕೊಡಲಿಕ್ಕೆ ನೀನು ಯಾರು? ನನ್ನನ್ನು ನುರ್ಜಾದೆಗೇಡುಮಾಡಬೇಕೆಂದು ಯಾವಾಗಲೂ ದಾರಿಕಾದುತ್ತ ಕುಳಿತಿರುತ್ತಿಯೆ ನೀನು!"

"ಇರಲಿ ಹೋಗಪ್ಪಾ ಹೋಗು! ಸುಮ್ಮನೆ ಮನೆಯೊಳಗೆ ಹೋಗಿ ಕುಳಿತುಕೊ! ನಿನ್ನ ಮರ್ಯಾದೆ ಎಷ್ಟು ದೊಡ್ಡದಿದೆಯೆಂಬುದೆಲ್ಲಾ ನನಗೆ ಗೊತ್ತಿದೆ! ಇರಲಿ, ಹೋಗು!"

"ನನ್ನದೇನಾದರೂ ಇರಲಿ! ನಿನಗೆ ದುಡ್ಡು ಕೊಡೆಂದು ಯಾರು ಹೇಳಿದ್ದರು? ನನ್ನ ಮನೆ ಹರಾಜಾಗಿ ಹೋದೀತು; ಹೋಗಲಿ! ಇದರಿಂದ ನಿನ್ನ ಗಂಟೇನು ಹೋಗುವುದು?"

"ನಿನಗೆ ನಾನು ದುಡ್ಡು ಕೊಟ್ಟೇ ಇಲ್ಲ; ಹೋಗು!"

"ಹಾಗಾದರೆ ಯಾರಿಗೆ ಕೊಟ್ಟಿದ್ದೀಯೆ?"

"ನನ್ನ ಮಗಳಿಗೆ ನಾನು ಕೊಟ್ಟಿಜ್ಜೇನೆ; ಅವಳ ಒಡವೆಗಳನ್ನು ನೀನು ಹರಾಜಿಗೆ ಹಚ್ಚಿದ್ದಿ; ಅದನ್ನು ನಾನು ಕಣ್ಣಾರೆ ನೋಡುತ್ತ ಸುಮ್ಮನೆ ಕುಳಿತುಕೊಳ್ಳಲೆ?"

"ಮಗಳು? .... ಪದ್ಮಾ ನಿನ್ನ ಮಗಳೇನು?"

"ಹೌದು ನನ್ನ ಮಗಳು! ಒಂದೇ ಸಲವಲ್ಲ; ಸಾವಿರಸಾರೆ ಹೇಳುತ್ತೇನೆ ನನ್ನ ಮಗಳೆಂದು! ಅವಳು ನಿನಗೊಬ್ಬನಿಗೇ ಮಗಳಲ್ಲ; ದೇಸಾಯಿಮನೆತನದ ಮಗಳಿದ್ದಾಳೆ ಪದ್ಮಾ! ನಮ್ಮ ವಂಶದಲ್ಲಿ ಹುಟ್ಟಿಬಂದ ಹೆಣ್ಣುಮಗಳಿದ್ದಾಳೆ.... ತಿಳಿಯಿತೇನು?"

"ಕೊನೆಗೂ ನೀನು ನಿನ್ನ ಅಣ್ಣ-ತಮ್ಮಕೆಯನ್ನು ಸಾಧಿಸಿದಿಯಲ್ಲವೇ? ಎಲ್ಲರ ಎದುರೂ ನೀನು ನನ್ನನ್ನು ಅಪಮಾನಗೊಳಿಸಿದ್ದೀಯೆ ...." ಎಂದು ಕೂಗಿಕೊಳ್ಳುತ್ತಲೆ ದಿನಕರಲಾಲರು ಹೋಗಿ ತಮ್ಮ ತೂಗುಮಂಚದ ಮೇಲೆ ಕುಳಿತರು. ಬೆಳ್ಳಿಯ ಎಲೆಯಡಿಕೆಯ ತಟ್ಟೆಯಿಂದ ಎಲೆಗಳನ್ನು ತೆಗೆದುಕೊಂಡು, ಮಸಾಲೆಯ ಅಡಿಕೆ-ಚಿನ್ನದ ವರ್ಕ್ ಹಾಕಿ ಎರಡು ಪಟ್ಟಿಗಳನ್ನು ಮಾಡಿದರು; ಪದ್ಮೆಯ ಕೈಯಲ್ಲಿ ಒಂದನ್ನು ಕೊಟ್ಟು ಬಿರುದನಿಯಲ್ಲಿಯೇ ಅವರು ಹೇಳಿದರು;

"ಹೋಗು, ನಿಮ್ಮ ಚಿಕ್ಕಪ್ಪಾಜಿಗೆ ಒಯ್ದು ಕೊಡು!"

ಅಣ್ಣ-ತಮ್ಮಂದಿರಿಬ್ಬರಲ್ಲಿಯೂ ಇದೇ ರೀತಿಯಾಗಿ, ಮಾತುಗಳಿಲ್ಲದೆ ತಾಂಬೂಲದ ಪಟ್ಟಿಯನ್ನು ಕೊಡು-ಕೊಳ್ಳುವುದರಲ್ಲಿ ದಿವಸಗಳು ಹೋಗುತ್ತಲಿದ್ದುವು. ಅವರಿಬ್ಬರೂ ಜಗಳವಾಡುತ್ತ ಎಷ್ಟೇ ಬೈದಾಡುತ್ತಿದ್ದಾಗಲೂ, ಜಗಳದ ರಭಸ ಬೇಕಾದಷ್ಟಿದ್ದಾಗಲೂ, ದಿನಕರಲಾಲರು ಕೊಟ್ಟುಕಳುಹಿದ ಎಲೆಯ ಪಟ್ಟಿಯನ್ನು ವಿಜಯಲಾಲರು ಒಂದು ದಿವಸವೂ ತಿನ್ನದೆ ಇರುತ್ತಿರಲಿಲ್ಲ.

* * *

ದಿಂಬಿಗೆ ಒರಗಿ ಕುಳಿತಿದ್ದ ದಿನಕರಲಾಲರು ಬಿದ್ದಲ್ಲಿಯೆ ತಮ್ಮ ಪೂರ್ವಜರ ಪರ್ಯಾಕ್ರಮದ ಸಿಂಹಾವಲೋಕನವನ್ನು ನಡೆಯಿಸಿದ್ದರು. ಕೊನೆಕೊನೆಗೆ ಅವರ ಮನಸ್ಸಿನಲ್ಲಿ ಅಡಿಗಡಿಗೆ ಒಂದೆ ಒಂದು ವಿಚಾರ ಬರಲಾರಂಭಿಸಿತು:

"ವಿಜಯ ಹೇಗಾದರೂ ಇರಲಿ; ಕೊನೆಗೂ ಆತ ದೇಸಾಯಿ ಮನೆತನಕ್ಕೆ ಸೇರಿದವನೇ ಅಲ್ಲವೆ? ಸರಿ; ಇನ್ನೇನು ಬೇಕು?"

ಪ್ರಾದೇಶಿಕ ಗ್ರಂಥಾಲಯ, ಅದರ ಉದ್ದೇಶಗಳು

ಶ್ರೀ. ವೆಂಕಟೇಶ ಸಾಂಗಲಿ, ಮುಂಬಯಿ

ಮುಂಬಯಿ ಸರಕಾರದ ನೆರವಿನಿಂದ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ಪ್ರಾದೇಶಿಕ ಗ್ರಂಥಾಲಯ ಸಂಸ್ಥಾಪಿತವಾಗುವುದರಲ್ಲಿದೆ; ಈ ಪ್ರಾದೇಶಿಕ ಗ್ರಂಥಾಲಯದ ಪ್ರಯೋಜನ ಕನ್ನಡ ಜನತೆಗೆ ಯಾವಯಾವ ರೀತಿಯಲ್ಲಿ ಸಿಕ್ಕುವುದು?

'ಗಿಳಿಯ ನೆಯ ಇಸ್ವಿಯಲ್ಲಿ ಕನ್ನಡದ ಮೊದಲ ಕಾದಂಬರಿಯು ಪ್ರಕಟವಾಗಿದೆ' ಎಂಬ ಮಾತು ಸಂಶೋಧಕರೊಬ್ಬರಿಂದ ಗೊತ್ತಾಯಿತು. ಅವರನ್ನು ಭೆಟ್ಟಿಯಾಗಿ ಆ ಕಾದಂಬರಿಯ ವಿಷಯ ಕೇಳಲಾಗಿ "ಪ್ರಕಟವಾಗಿದೆ ನಿಜ; ಆದರೆ ಅದು ಕರ್ನಾಟಕದಲ್ಲಿ ಉಪಲಬ್ಧವಿಲ್ಲ" ಎಂದರು. "ಅದನ್ನು ಪೂರೈಸಿಸಲು ಸರ್ವ ಪ್ರಯತ್ನಗಳನ್ನೂ ಮಾಡಲಾಗಿದೆ; ಯಾವ ಪ್ರಯತ್ನಗಳೂ ಯಶಸ್ವಿಯಾಗಿಲ್ಲ" ಎಂದೂ ಅವರೇ ಹೇಳಿದರು. ನೂರು ವರ್ಷದ ಹಿಂದಿನ ಪುಸ್ತಕದ ಪಾಡು ಹೀಗಾದರೆ, ಸಾವಿರ ವರುಷಗಳ ಮೊದಲು ಹುಟ್ಟಿದ ಗ್ರಂಥಗಳ ಸ್ಥಿತಿ ಏನು? ಬೆಳಕಿಗೆ ಬಂದ ಪುಸ್ತಕಗಳೆಲ್ಲ ಇಂದಿಲ್ಲ ನಾಳೆ ಅದೃಶ್ಯವಾಗತೊಡಗಿದರೆ, ಮುಂದಿನ ಜನಾಂಗಕ್ಕೆ ನಾವು ಏನೂ ಭಂಡವಲು ಉಳಿಸಲು ಸಮರ್ಥರಾಗಲಾರೆವು. ಕೈಗೆ ಬಂದದ್ದನ್ನು ಕಳೆದುಕೊಳ್ಳುವ ಬುದ್ಧಿವಂತಿಕೆಯನ್ನು ಕನ್ನಡಿಗರು ಗ್ರಂಥಗಳ ವಿಷಯವಾಗಿ ಹೆಚ್ಚು ವ್ಯಕ್ತಮಾಡುತ್ತಲಿದ್ದಾರೆ. ಇದುವರೆಗೆ ನಡೆದ ತಾತ್ಸಾರವು ಹಾಗೆಯೆ ಸಾಗಿದರೆ ಅನೇಕ ಲೇಖಕರ, ಪಂಡಿತರ ವಿದ್ವತ್ತಿಗೂ ಪ್ರತಿಭೆಗೂ ನಮ್ಮ ಮುಂದಿನ ಪೀಳಿಗೆಯು ಎರವಾಗಬೇಕಾಗುತ್ತದೆ. ನಾವು ಶ್ರೇಷ್ಠವಾದ ಗ್ರಂಥಸಂಗ್ರಹ ಮಾಡಬೇಕು ಎನ್ನುವುದಕ್ಕೆ ಇದೊಂದೇ ಉದ್ದೇಶವಲ್ಲ. ಲೇಖನ, ಪತ್ರಿಕಾ ವ್ಯವಸಾಯದಲ್ಲಿ ಕೆಲಸ ಮಾಡುವವರಿಗೂ ಸಾಹಿತ್ಯಾಭ್ಯಾಸಿಗಳಿಗೂ, ಇತರ ಪ್ರೌಢ ವಿದ್ಯಾರ್ಥಿಗಳಿಗೂ ಗ್ರಂಥ ಸಂಗ್ರಹಾಲಯದ ಆವಶ್ಯಕತೆಯು ಎಷ್ಟು ತೀವ್ರವಾಗಿ ಭಾಸವಾಗುತ್ತಿದೆಯೆಂಬುದನ್ನು ಅನುಭವಿಸಿದವರೇ ಹೇಳಬಲ್ಲರು. ಸಂಶೋಧಕರಂತೂ ಆವಶ್ಯಕ ಸಾಹಿತ್ಯವು ಒಂದೇ ಕಡೆಗೆ ಸಿಕ್ಕದಿದ್ದುದಕ್ಕೆ ತಮ್ಮ ಕೆಲಸಕ್ಕಾಗಿ ಅಪರಿಮಿತ ವೇಳೆಯನ್ನೂ ಧನವನ್ನೂ ಪಾಳು ಮಾಡಿಕೊಳ್ಳಬೇಕಾಗುತ್ತದೆ. 'ಗ್ರಂಥ ಸಂಶೋಧನೆಗಿಂತ ಗ್ರಂಥವು ಎಲ್ಲಿದೆ ಎಂಬುದನ್ನು ಸಂಶೋಧಿಸುವುದೇ ಇಂದು ಬಿಕ್ಕಟ್ಟಿನದಾಗಿದೆ' ಎಂದು ಹಿರಿಯರೊಬ್ಬರು ಹೇಳಿದುದು ಅಕ್ಷರಶಃ ನಿಜವಿದೆ.

ಇಂತಹ ಒಂದೆರಡೇ ಸಾಮಾನ್ಯ ಕಾರಣಗಳನ್ನು ನೋಡಿದರೂ, ಮುಂಬಯಿ ಸರಕಾರದವರು ಇಪ್ಪರಲ್ಲಿಯೆ ಧಾರವಾಡದಲ್ಲಿ ಸ್ಥಾಪಿಸಲಿರುವ ಪ್ರಾದೇಶಿಕ ಗ್ರಂಥಸಂಗ್ರಹಾಲಯದ ಮಹತ್ತ್ವವು ಗೊತ್ತಾಗುತ್ತದೆ. ಮುಂದುವರೆದ ರಾಷ್ಟ್ರಗಳೆಲ್ಲ, ದೇಶಕ್ಕೆ ಭೂಷಣಪ್ರಾಯವಾಗುವಂತೆ ಇಡಿಯ ನಾಡಿನಲ್ಲಿ ಪ್ರಕಟವಾದ ಸಾಹಿತ್ಯವನ್ನೆಲ್ಲ ಒಂದೆಡೆಗೆ ಸಂಗ್ರಹಿಸಿಡುತ್ತವೆ. ಅದರಂತೆಯೆ ನಮ್ಮಲ್ಲಿಯ ಇತರ ಪ್ರಾಂತಗಳೂ ವಿಶ್ವವಿದ್ಯಾನಿಲಯದ ಹೆಸರಿನಿಂದ, ಇನ್ನಿತರ ಸಂಸ್ಥೆಗಳ ವತಿಯಿಂದ, ಪ್ರಾತಿನಿಧಿಕ ಗ್ರಂಥಸಂಗ್ರಹಾಲಯಗಳನ್ನು ಸ್ಥಾಪಿಸಿ, ಆಯಾ ಪ್ರಾಂತಿಕ ಭಾಷೆಯ ಎಲ್ಲ ಗ್ರಂಥಗಳನ್ನೂ ಒಂದೆಡೆಗೆ ಕೂಡಿಸಿ ಇಡುತ್ತಿವೆ. ನಮ್ಮಲ್ಲಿಯೂ ಒಂದೆರಡು ಗ್ರಂಥಸಂಗ್ರಹಾಲಯುಗಳಿದ್ದರೂ ಅವು ಪ್ರಾತಿನಿಧಿಕವಲ್ಲ; ಪರಿಪೂರ್ಣವೂ ಇಲ್ಲ. ಉತ್ತರ ಕರ್ನಾಟಕದಲ್ಲಿ ಶಾಂತೇಶ ವಾಚನಾಲಯವೊಂದನ್ನು ಬಿಟ್ಟರೆ ಉಳಿದೆಲ್ಲ ಸಂಸ್ಥೆಗಳು ಕೇವಲ ಸ್ಥಳಿಕರಿಗಾಗಿ (ವಿದ್ಯಾವರ್ಧಕ ಸಂಘವು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವುದರಿಂದ, ಶಾಂತೇಶ ವಾಚನಾಲಯವೂ ಅಖಿಲ ಕನ್ನಡಿಗರಿಗಾಗಿಯೇ ಎಂದು ಭಾವಿಸಬಹುದು). ಅಂತಹ ಸಂಸ್ಥೆಯಲ್ಲಿ ಕೂಡ ಪ್ರೌಢ ವ್ಯಾಸಂಗಿಗಳಿಗೆ ಉಪಯುಕ್ತವಾಗುವ ಸಂದರ್ಭ ಸಾಹಿತ್ಯವೆಲ್ಲವೂ ದೊರಕುವುದಿಲ್ಲ.

ಧಾರವಾಡದಲ್ಲಿ—ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ—ಸರಕಾರದವರ ಸಹಾಯದಿಂದ ಸ್ಥಾಪಿತವಾಗಲಿರುವ ಕನ್ನಡ ಪ್ರಾದೇಶಿಕ ಗ್ರಂಥಾಲಯವು, ಈ ಎಲ್ಲ ಕೊರತೆಗಳನ್ನು ನೀಗಿಸುವುದೆಂದು ನಂಬಬಹುದಾಗಿದೆ. ಅದು ಇಟ್ಟುಕೊಂಡ ಉದ್ದೇಶಗಳು ಮುಖ್ಯವಾಗಿ ನಾಲ್ಕು: (೧) ಕಾಪಿರೈಟ್ ಗ್ರಂಥಗಳನ್ನು ಸಂಗ್ರಹಿಸುವುದು. (೨) ಕನ್ನಡದಲ್ಲಿಯ ಅಪೂರ್ವವಾಗೂ ಬೆಲೆಬಾಳುವ ಪುಸ್ತಕಗಳನ್ನು ಸಂಗ್ರಹಿಸುವುದು. (೩) ಓದುಗರಿಗೂ ಅಭ್ಯಾಸಿಗಳಿಗೂ ಸಂದರ್ಭಗ್ರಂಥಗಳ ಅನುಕೂಲತೆಗಳನ್ನು ಒದಗಿಸಿಕೊಡುವುದು. ಕೊನೆಯದಾಗಿ, (೪) ಕರ್ನಾಟಕದಲ್ಲಿ ಸಾಗಬೇಕಾಗಿರುವ ಗ್ರಂಥಾಲಯ ಚಳವಳಿಗೆ ಕೇಂದ್ರಸ್ಥಾನವಾಗಿ ನಿಂತು ಕೆಲಸಮಾಡುವುದು.

(೧) ನಾವು ಪ್ರಕಟಿಸಿದ ಯಾವುದೇ ಪುಸ್ತಕದ ಮೂರು ಪ್ರತಿಗಳನ್ನು ಕಾಪಿರಾಯಿಟಿಗಾಗಿ ಸರಕಾರಕ್ಕೆ ಕಳಿಸಬೇಕಾಗುತ್ತದೆ. ಆದರಲ್ಲಿಯ ಒಂದು ಪ್ರತಿ ಬ್ರಿಟಿಶ್ ಮ್ಯೂಸಿಯಮ್, ಮತ್ತೊಂದು ಇಂಡಿಯಾ ಆಫೀಸುಗಳಲ್ಲಿರಿಸಲು ಇಂಗ್ಲಂಡಿಗೆ ಹೋಗುತ್ತವೆ. ಕೊನೆಯದೊಂದು ಪ್ರತಿ ಪ್ರಾಂತಿಕ ಸರಕಾರದ ಬಳಿ ಉಳಿಯುತ್ತದೆ. ಹೀಗೆ ಕಳಿಸಲ್ಪಟ್ಟ ಗ್ರಂಥಗಳೆಲ್ಲ ಮುಂಬಯಿ ಸರಕಾರದ ರಿಕಾರ್ಡ್ ಆಫೀಸಿನಲ್ಲಿ ಬಿದ್ದು ಮಣ್ಣಾಗಿಂದು ಎಷ್ಟೋ ನಾಶವಾಗಿ ಹೋಗಿವೆ. ಅವುಗಳಿಗೆ ಸರಿಯಾದ

ನಾಮಾವಲಿಯಿಲ್ಲ. ಪ್ರಾಂತದ ಭಾಷೆಗಳಾದ ಕನ್ನಡ, ಮರಾಠಿ, ಗುಜರಾತಿಗಳ ಎಲ್ಲ ಪ್ರಕಟನೆಗಳೂ ಬರುತ್ತಿರುವಾಗ, ಅವೆಲ್ಲವುಗಳ ಯೋಗಕ್ಷೇಮ ನೋಡಿಕೊಳ್ಳಲು ಅಯಾ ಭಾಷಾತಜ್ಞರೂ ಪುಸ್ತಕ ಹಿತಚಿಂತನೆಯಲ್ಲಿ ಆಸಕ್ತಿಯುಳ್ಳವರೂ ಇಲ್ಲಿ ಅಧಿಕಾರಿಗಳಾಗಿರಬೇಕು. ಮುಂಬಯಿ ಸರಕಾರದವರು ಮೊದಲಿನಿಂದಲೂ ಈ ವಿಷಯವಾಗಿ ಅಷ್ಟು ಆಸ್ಥೆ ತೋರಿಸಲಿಲ್ಲವಾದುದರಿಂದ, ಮುದ್ರಕರು ಕಳುಹಿದ ಒಂದು ಪ್ರತಿಯಾದರೂ ಇಂದು ಜೀವಂತ ಸ್ಥಿತಿಯಲ್ಲಿ ಸಿಕ್ಕೀತೆಂದು ಹೇಳಲು ಬರುವುದಿಲ್ಲ. ಈ ಸಂಗ್ರಹವು ಸಾರ್ವಜನಿಕರ ಉಪಯೋಗಕ್ಕಾಗಿಯೆ ಇದ್ದದ್ದು ನಿಜ; ಆದರೆ ಪುಸ್ತಕಗಳೂ ಇಲ್ಲ, ಓದುಗರೂ ಇಲ್ಲ! ಕನ್ನಡ ಪ್ರಕಟನೆಗಳನ್ನು ಬೇಡುವವರು ಕನ್ನಡ ಬಲ್ಲ ಕರ್ನಾಟಕಸ್ಥರು. ಅಂಥವರ ಸಂಖ್ಯೆ ಮುಂಬಯಿಯಲ್ಲಿ ಎಷ್ಟು? ಕನ್ನಡ ಶಾಲೆ-ಕಾಲೇಜುಗಳ ಅನುಕೂಲತೆ ಇಲ್ಲದಾಗ, ಸಾಹಿತ್ಯವ್ಯಾಸಂಗ-ಸಂಶೋಧನೆಗಳಲ್ಲಿ ತೊಡುಗುವ ಜನರು ಮತ್ತೂ ಕಡಮೆಯಲ್ಲವೆ? ಪುಸ್ತಕಗಳು ಬೇಕಾದವರು ಕರ್ನಾಟಕದಿಂದ ಮುಂಬಯಿವರೆಗೆ ಪ್ರವಾಸಮಾಡಬೇಕು. ಈ ಮಹಾ ಗಂಡಾಂತರವನ್ನೆಲ್ಲ ನಿವಾರಿಸಿ, ಈ ಗ್ರಂಥಸಂಗ್ರಹಾಲಯದ ಕನ್ನಡ ಭಾಗವನ್ನು ಕನ್ನಡ ಜಿಲ್ಲೆಗಳಿಗೂ, ಮರಾಠಿ ವಿಭಾಗವನ್ನು ಮರಾಠಿ ಜಿಲ್ಲೆಗಳಿಗೂ, ಗುಜರಾಥಿ ಭಾಗವನ್ನು ಗುಜರಾಥಕ್ಕೂ ಒಯ್ದರೆ ಗ್ರಂಥಗಳ ಸದುಪಯೋಗವಾಗುವುದು—ಜನತೆಗೆ ಲಾಭವಾಗುವುದು. ಇದಕ್ಕಾಗಿಯೇ ಕಾಪಿರೈಟ್ ಸಂಗ್ರಹಾಲಯವನ್ನು ಪ್ರಾದೇಶಿಕ ಸಂಸ್ಥೆಯ ಒಂದು ಅಂಗವನ್ನಾಗಿ ಮಾಡಿದ್ದಾರೆ. ಈ ಯೋಜನೆಯಿಂದ ಮುಂಬಯ ಪ್ರಾಂತದಲ್ಲಿ ಪ್ರಕಟವಾದ ಯಾವ ಕನ್ನಡ ಪುಸ್ತಕವೂ ಈ ಪ್ರಾದೇಶಿಕ ಗ್ರಂಥಾಲಯದಲ್ಲಿ ದೊರೆಯಬಲ್ಲದು.

(೨) ಅಪೂರ್ವ ಕನ್ನಡ ಗ್ರಂಥಗಳನ್ನು ಒಂದೆಡೆಗೆ ಕೂಡಿಸಿ ಇಡುವುದು ಈ ಸಂಸ್ಥೆಯ ಎರಡನೆಯ ಕೆಲಸ. ಇದು ಕೂಡ ಅತ್ಯಂತ ಮಹತ್ವದ್ದು. ಕಾಪಿರೈಟ್ ಸಂಗ್ರಹದಿಂದ, ಮುಂಬಯಿ ಪ್ರಾಂತದಲ್ಲಿ ಪ್ರಕಟವಾದ ಕನ್ನಡ ಪುಸ್ತಕಗಳ ಪ್ರಶ್ನೆ ಮಾತ್ರ ಬಗೆ ಹರಿಯಬಹುದು; ಆದರೆ ಮದ್ರಾಸ ಕನ್ನಡ ವಿಭಾಗ, ಮತ್ತು ಇತರ ಸಂಸ್ಥಾನಗಳಲ್ಲಿ ಪ್ರಕಟವಾಗುವ ಪುಸ್ತಕಗಳನ್ನು ಕೊಳ್ಳಬೇಕಾಗುವುದು. ಅವೆಲ್ಲ ಒಂದೆ ಕಡೆಗೆ ದೊರೆಯುವಂತೆ ಮಾಡುವುದು ಈ ಕೇಂದ್ರಸಂಸ್ಥೆಗೆ ಮಾತ್ರ ಸಾಧ್ಯ. ಪ್ರಚಲಿತ ಗ್ರಂಥಗಳಿಂದ ಓದುಗರ ಮನಸ್ಸನ್ನು ರಂಜಿಸುವುದೊಂದನ್ನೇ ಇಂದಿನ ಎಲ್ಲ ಗ್ರಂಥಾಲಯಗಳೂ ಧ್ಯೇಯವನ್ನಾಗಿ ಮಾಡಿಕೊಂಡುದರಿಂದ, ತೀರ ಇತ್ತೀಚಿನ—ಗಳಗನಾಥ, ವೆಂಕಟಾಚಾರ್ಯರ—ಕೃತಿಗಳು ಕೂಡ ನಮಗೆ ನ್ಯವಸ್ಥಿತವಾಗಿ ಒಂದೆಡೆ ಸಿಕ್ಕುವುದಿಲ್ಲ. ಐತಿಹಾಸಿಕ ಯುಗದ ಗ್ರಂಥದ ಬಾಹ್ಯರಚನೆ, ಮುದ್ರಣದ ರೀತಿ ಮೊದಲಾದುವು ಇಂದು ನಮಗೆ ಕಾಣಸಿಗದಾಗಿದೆ. ಅಪ್ರಕಟಿತ ವಾಙ್ಮಯದ ವಿಷಯವಂತು ದೂರವೆ. ತಾಳೆಗರಿಯ ಪ್ರತಿ, ಕೈಬರಿಹದ ಕಾಗದದ ಪ್ರತಿ, ಶಿಲಾ ಮುದ್ರಣದ ಪ್ರತಿ ಮೊದಲಾದ ಸಾಹಿತ್ಯವೆಲ್ಲ ಒಂದೆಡೆಗೆ ದೊರೆಯುವಂತೆ ಮಾಡುವುದು ತೀರ ಅವಶ್ಯವಾದ ಕೆಲಸ. ಆರ್ಥಿಕ ಮುಗ್ಗಟ್ಟಿನ ಕಾರಣದಿಂದ, ಹಲವಾರು ಬೆಲೆ ಬಾಳುವ ಪುಸ್ತಕಗಳನ್ನು ಕೊಳ್ಳುವುದು ಸಾಮಾನ್ಯ ವಾಚನಾಲಯಗಳಿಗೆ ಸಾಧ್ಯವಾಗುವುದಿಲ್ಲ. ಅದರಂತೆ, ಕನ್ನಡ ಇತಿಹಾಸ-ಸಂಸ್ಕೃತಿಗಳ ಬಗೆಗೆ ಇತರ ಭಾಷೆಗಳಲ್ಲಿ—ವಿಶೇಷವಾಗಿ ಇಂಗ್ಲಿಷಿನಲ್ಲಿ—ಪ್ರಕಟವಾದ ಪುಸ್ತಕಗಳು, ಚಿಕ್ಕ ಗ್ರಂಥಾಲಯಗಳಲ್ಲಿ ದೊರೆಯಲಾರವು. ಅವೆಲ್ಲವುಗಳನ್ನೂ ಓದುಗರಿಗೆ ಒದಗಿಸಿಕೊಡುವ ಕೆಲಸವನ್ನು ಈ ಪ್ರಾತಿನಿಧಿಕ ಸಂಸ್ಥೆಯು ಮಾಡಬಲ್ಲದು.

(೩) ಸಾಮಾನ್ಯ ಓದುಗರಿಗೂ ಅಭ್ಯಾಸಿಗಳಿಗೂ ಸಮನಾಗಿ ಪ್ರಯೋಜನಕರವಾಗುವುದರಿಂದ ಈ ಗ್ರಂಥಾಲಯವು ಹೆಚ್ಚು ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲ ಬಗೆಯ ಸಂದರ್ಭಗ್ರಂಥಗಳೂ ಇಲ್ಲಿ ದೊರೆಯುತ್ತವೆ. ಅವಶ್ಯವೆನಿಸಿದಾಗ ಬೇರೆ ಸಂಸ್ಥೆಗಳಿಂದ ಗ್ರಂಥಗಳನ್ನು ಕಡವಾಗಿ ತಂದು ಸಹಾಯಮಾಡಬಲ್ಲದು. ಹಳೆಯ ಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟವಾದ ಸಂಶೋಧನಸಾಮಗ್ರಿಯನ್ನು ಓರಣವಾಗಿರಿಸಿ, ಸಾಹಿತ್ಯಕಾರರಿಗೂ ಲೇಖಕರಿಗೂ ಸಹಕಾರನೀಡಬಲ್ಲದು.

(೪) ಪ್ರಾದೇಶಿಕ ಗ್ರಂಥಾಲಯದ ಕೊನೆಯ ಉದ್ದೇಶ ತೀರ ಮಹತ್ವವಾದ್ದಾಗಿದೆ. ಮುಂಬಯಿ ಸರಕಾರದವರು ವಾಚನಾಲಯದ ಚಳವಳಿಯನ್ನು ಹಳ್ಳಿಹಳ್ಳಿಗೂ ಒಯ್ದು ಮುಟ್ಟಿಸಬೇಕೆಂದು ಸಂಕಲ್ಪಿಸಿ, ಕಾರ್ಯಪ್ರವೃತ್ತರಾಗಿದ್ದಾರೆ. ಪ್ರಾಥಮಿಕ ಶಾಲೆಯಿದ್ದು, ೧೦೦೦ ದಿಂದ ೫೦೦೦ ದ ವರೆಗೆ ಜನಸಂಖ್ಯೆಯಿದ್ದ ನೂರು ಹಳ್ಳಿಗಳಲ್ಲಿ ವಾಚನಾಲಯಗಳು ಸ್ಥಾಪಿಸಲ್ಪಡುತ್ತವೆ ವರ್ಷಕ್ಕೆ ನೂರರಂತೆ ೫ ವರ್ಷಗಳಲ್ಲಿ ೫೦೦ ಸಂಸ್ಥೆಗಳನ್ನು ಏರ್ಪಡಿಸುವುದು ಅವರ ಹವಣಿಕೆಯಾಗಿದೆ. ಈ ಯೋಜನೆಯಲ್ಲಿ ಕರ್ನಾಟಕಕ್ಕೂ ಪಾಲು ಬರಲೇ ಬೇಕು. ಸರಕಾರದಿಂದ ಕನ್ನಡ ಜಿಲ್ಲೆಗಳಲ್ಲಿ ಹೀಗೆ ಸ್ಥಾಪಿಸಲ್ಪಟ್ಟ ಹಳ್ಳಿಯ ಗ್ರಂಥಾಲಯಗಳಿಗೆ ನೀರೆರೆದು ಅವುಗಳನ್ನು ಪೋಷಿಸುವುದು ಅಯಾ ಸ್ಥಳಗಳ ನಾಗರಿಕರ ಹೊಣೆ. ಈ ಗ್ರಂಥಾಲಯಗಳಿಗೆಲ್ಲ ಕೇಂದ್ರಸ್ಥಾನದಲ್ಲಿ ನಿಂತು, ಮೇಲ್ವಿಚಾರಣೆ ನೋಡಿಕೊಳ್ಳುವುದು ಪ್ರಾದೇಶಿಕ ಗ್ರಂಥಾಲಯಕ್ಕೆ ಒಪ್ಪಿದ ಕೆಲಸ. ಹಳ್ಳಿಗರಿಗೆ ಅನುಕೂಲವಾಗುವಂತಹ ಓದುವ ಸಾಮಗ್ರಿಯನ್ನು ಸೂಚಿಸುವುದು, ಉಪಯುಕ್ತ ಪತ್ರಿಕೆ-ಪ್ರಕಟನೆಗಳನ್ನು ಒದಗಿಸುವುದು, ನಾಮಾವಲಿ, ವರ್ಗೀಕರಣ ಮೊದಲಾದ ವಿಷಯಗಳಲ್ಲಿ ಸೂಕ್ತ ಸಲಹೆಕೊಡುವುದು ಇವೇ ಮೊದಲಾದ ಹಿರಿಯತನದ ಕೆಲಸವು ಈ ಸಂಸ್ಥೆಯ ಪಾಲಿಗೆ. ಹಳ್ಳಿಯ ಗ್ರಂಥಾಲಯಗಳ ಪ್ರಚಾರ ಹೆಚ್ಚಿದಂತೆ, ಜನರಲ್ಲಿ ವಾಚನಾಭಿರುಚಿ ಬೆಳೆಯುತ್ತದೆ; ಅವರ ತಿಳಿವಳಿಕೆ ಹೆಚ್ಚುತ್ತದೆ; ಸರಕಾರದವರ ಉದ್ದೇಶ ಸಫಲವಾಗುತ್ತದೆ.

ತಾಯಿ - ಮಗು

ಪ್ರೊ. ಆರ್. ಸಿ. ಹಿರೇಮಠ ಎಂ. ಎ. ಬಾಗಲಕೋಟೆ

★

ತಾಯಿ:—

" ಎನ್ನ ಬಳ್ಳಿ ಕುಡಿಯ ಚಾಚಿ
ಜಿಲ್ಲವರಿದು ಹೂತು ಕಾತು
ಆಲೆದು ಒಲೆದು ಕುಣಿಯಲೆಂದು
ಸಸಿಯ ನೆಟ್ಟೆನು-ಹೊಸದು-ಕಳೆಯನಿಟ್ಟೆನು
ಒಡತನದಾ ಬೇಗೆ ತಾಗೆ
ಕಡೆಗೆ ನೀರು ದೊರೆಯದಾಗೆ
ಎಡಗೈಯೊಳಿ ಜೀವ ಹಿಡಿದು
ದುಡಿದು ಸಣ್ಣಾದೆನು—ಮುಡಿಗೆ ಬೆವರನಿತ್ತೆನು.
ಕಳತು-ಮಾಗಿ ಕಾಲವಲಾ!
ಉಳಿದು ಹೇಗೊ ನಿಂದಿರಲಾಂ
ನವ ವಸಂತ ಬರುವುದೆಂದು
ಬಯಸುತಿರುವೆನು-ಬಾಯ-ಬಿಡುತಲಿರುವೆನು "

ಮಗು:—

" ತಾಯೆ ಹಿರಿಯ ಗುಡಿಯ ಕಟ್ಟಿ
ಜಗವ ಕರೆವ ಕಳಸವಿಟ್ಟು
ತೊರೆವೆ ಮೆರೆವೆ ಬೆರೆವೆನೆಂದು
ಮಿಡಿಯುತಿರುವುದು-ಹೃದಯ ನುಡಿಯುತಿರುವುದು.
ನೆಗೆದು ಮನವು ಮೋಡವಾಗಿ
ಹಕ್ಕಿ ಬಳಗದೊಡನೆ ಹಾರಿ
ಚಿಕ್ಕ ಹೂವ ಕೊಯ್ದು ನಿನ್ನ
ಅಡಿಗೆ ತರುವುದು-ತಾಯೆ- ಹುಲ್ಲ ತಾರದು' "

ತಾಯಿ:—

" ಹೆಣ್ಣ ಹೂವ ಹಿಡಿಯೆ ಮಗನೆ
ಅಲ್ಲಿಗ್ಹಾರಲಾರೆಯೇನೆ?
ಹಿಡಿದು ಮುಡಿಸು ಶಿವನ ಅಡಿಗೆ
ಬಳ್ಳಿ ಹೂವನು-ಎನ್ನ-ಬಳ್ಳಿ ಹೂವನು "

ಮಗು:—

" ಹೂವಿಗಿಹುದು ತಿರೆಯ ಭಾರ
ಸಾವಹೊರೆಯ ಶಿರದಲಿಟ್ಟು
ಹಾರಿ ಗಗನ ಮುಟ್ಟಲಿರುವ
ದಾರಿ ಕಾಣೆನು-ದೂರ-ಏರಲಾರೆನು!"

ತಾಯಿ:—

" ಮುಂಜು ಬೆಟ್ಟವೇನೆ ಮಗನೆ
ಅಂಜನವಿದೆ ಕಣ್ಣಿಗೇನೆ?
ಅಂಜಿ ಹಿಂದೆ ಸರಿವುದೇನು
ಲೋಕದಾಟವೋ-ನಿನ್ನ-ಮನಕೆ ಮಾಟವೊ?"

ಮಗು:—

" ಹೊನ್ನ ಹೊಳವು ಕಣ್ಣ ಮುಚ್ಚೆ
ಹೆಣ್ಣ ಬಳ್ಳಿ ಕಾಲ ತೊಡರಿ
ಮಣ್ಣ ಬಿತ್ತಿ ನುತ್ತು ಬೆಳೆವ
ಹದವ ತಿಳಿಯೆನು-ತಾಯೆ- ಮುದವನರಿಯೆನು!"

ತಾಯಿ:—

" ಎನ್ನ ರಕುತದಿಂದೆ ಮಗನೆ
ಬಣ್ಣ ಬಳಿದು ಗುಡಿಗೆ, ಜಗದ
ಕಣ್ಣ ಕುಕ್ಕಿಸುವುದದೇನು
ನಿನಗೆ ಧರ್ಮವೋ-ಎನ್ನ-ಪಾಪ ಕರ್ಮವೊ?

ಮಗು:—

" ಇಳೆಯ ಜೀವ ನಿವ್ಯುದಾನ
ಅಳುವ ಹನಿಯು ವಿಷದವಾನ
ಸತ್ತು ಬದುಕುವಂತೆ ಮಾಡು
ಶರಣು ತಾಯಿಯೆ-ಎನ್ನ-ಹರಣದಾಯಿಯೆ!"

ಸ್ತ್ರೀ ದಾಕ್ಷಿಣ್ಯ!

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

'ಮಾತೃ ದೇವೋ ಭವ!' ಎಂದು ಆಜ್ಞೆ ಕೊಟ್ಟಿರುವ ಭಾರತೀಯರ ಧರ್ಮದಲ್ಲಿ ಹೆಣ್ಣಿಗೆ ಮನ್ನಣೆಯಿಲ್ಲವೆಂದು ಹೇಳುವುದು ಸಂಪೂರ್ಣ ತಪ್ಪು. ಆದರೆ ಆದರ್ಶವನ್ನೆ ಮರೆತು ಬಾಳುತ್ತಿರುವವರು ಯಾರ ದಾಕ್ಷಿಣ್ಯವನ್ನೆಲ್ಲಿ ಹಿಡಿಯುವರು? ಅಲ್ಲಿ ಸ್ವಾರ್ಥಸಾಧನೆಯೊಂದೇ ಗುರಿ!

"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ"

(ಮನು)

ನಾನು ಒಮ್ಮೆ ಬಸ್ಸಿನೊಳಗೆ ಹತ್ತಿದೆ. ಹದಿನೆಂಟು ಜನರು ಕುಳಿತುಕೊಳ್ಳಲೆಂದು ಮಾಡಿರುವ ಎಡೆಯಲ್ಲಿ ಇಪ್ಪತ್ತು ಜನ ತುಂಬಿದ್ದರು. ನನ್ನ ಕನ್ನಡಕವನ್ನೋ, ಸಧ್ಯಸ್ಥಿತಿಯನ್ನೋ, ನನ್ನ ಉಡುಪು-ತೊಡಪುಗಳನ್ನೋ, ದೀನತನವನ್ನೋ ನೋಡಿ—ಒಂದಿಬ್ಬರು—ಸ್ವಲ್ಪ ಸೊಂಟಗಳನ್ನಲುಗಾಡಿಸಿ, ನನಗೆ ಬಾಕಿನಲ್ಲಿ ಸ್ಥಳವನ್ನು ಮಾಡಿಕೊಟ್ಟರು. ನನ್ನ ಹಿಂದೆ ಮತ್ತೆ ಬಂದವರು—ಕೆಲವರು ಹೆಂಗುಸರು. ಒಡ್ಡರು, ಪಾಪ! ಕುಪ್ಪಸವೂ ಇಲ್ಲದವರು. ಗಂಟುಮೊಟ್ಟೆಗಳನ್ನು ಹೊತ್ತವರು. ಅವರಿಗೆ ನೆಲದಲ್ಲಿಯೆ, ಎಂದರೆ ನೋಟಾರಿನೊಳಗಿನ ನೆಲದಲ್ಲಿಯೆ, ಜಾಗ ಸಿಕ್ಕಿತು. ಅವರು ಆಲ್ಲಿ ಕೂಡಲೆ ಬೇಕು. ಎದ್ದು ನಿಲ್ಲುವ ಹಾಗಿಲ್ಲವೆಂದು ಮೋಟಾರಿನ ನಿಯಮ. ಆ ಮೇಲೆ ಒಬ್ಬ ಗುಜರಾತಿ ಹೆಂಗುಸು ಬಂದಳು. ಸ್ವಲ್ಪ ಸೌಂದರ್ಯವತಿಯಾಗಿದ್ದಳು. ಕೈಯಲ್ಲೊಂದು ಚೀಲ. ಬಂದು ನಿಂತಳು ನೋಟಾರಿನ ಬಾಯಿಯಲ್ಲಿ. ಆಕೆಯನ್ನು ನೋಡಿ ಮತ್ತೆ ಕೆಲವರು ಅತ್ತಿತ್ತ ಸರಿದಾಡಿದರು. ಬಾಯಿಯವರ ಗಾತ್ರ ಸ್ವಲ್ಪ ದುಂಡಗಿದ್ದುದರಿಂದ, ಸ್ಥಳವಂತೂ ಆಗಲೇ ಇಲ್ಲ. ಅಷ್ಟರಲ್ಲಿ ಒಬ್ಬ ಜಟಕ್ಕನೆ ಎದ್ದು, ತಾನು ನಿಂತು ಜಾಗ ಮಾಡಿಕೊಟ್ಟ. ಬಾಯೀಸಾಹೇಬರು ನಗುತ್ತ 'ಥ್ಯಾಂಕ್ ಯು' ಎಂದು ಕುಕ್ಕರಿಸಿದರು. ಜಾಗಮಾಡಿ ಕೊಟ್ಟವ ಸ್ತ್ರೀದಾಕ್ಷಿಣ್ಯವನ್ನು ತೋರಿಸಿದ್ದು ನಿಜವೇ; ಆದರೆ ಒಡ್ಡರ ಹೆಂಗುಸರು ಕೆಳಕ್ಕೆ ಕುಳಿತಾಗ ಇವನ ಸ್ತ್ರೀದಾಕ್ಷಿಣ್ಯ ಎಲ್ಲಿ ಹೋಗಿತ್ತು? ಇದೇ ಈ ಸುಂದರಿಯನ್ನು ನೋಡಿದ್ದಕೂಡಲೆ ಅವನಿಗೆ ದಾಕ್ಷಿಣ್ಯದ ಉಕ್ಕು ಏಕೆ ಬಂದಿತು? ಆಕೆಯಿಂದ ಇವನಿಗೆ ಯಾವ ಸುಖವೂ ಆಗುವಂತಿರಲಿಲ್ಲ. ದರ್ಶನಸುಖವೋ, ನಮ್ಮೆಲ್ಲರಿಗೆ ಸಹಜವಾಗಿ ಆಗುತ್ತಲೇ ಇತ್ತು. ಆಕೆ ಶ್ರೀಮಂತಳೆಂದು ಅವನು ಎದ್ದಿರಬಹುದೇನು? ಅದರೆ ಇವನ ಕೈಗೆ ಒಂದು ತಾಮ್ರದ ಒಡಕು ನಾಣ್ಯವನ್ನೂ ಆಕೆ ಹಚ್ಚಲಿಲ್ಲ! ಪರಿಚಯವಿರಬಹುದೇ? ಅದೂ ಇಲ್ಲ. ಏಕೆಂದರೆ ಹತ್ತುನಿಮಿಷದಲ್ಲಿ ತನ್ನ ಸ್ಥಾನ ಬಂದಕೂಡಲೆ, ಆಕೆ ಇವನ ಕಡೆಗೆ ನೋಡದೆಯೆ ಬಿರಿಬಿರಿ ಇಳಿದುಹೋದಳು. ಸುಂದರಿಯೆಂದು ಆಕೆಯ ಸೌಂದರ್ಯಕ್ಕೆ ಪೂಜೆ ಕಟ್ಟಿದ್ದೆನೆನ್ನಬೇಕೆ? ಅವಳೇನೂ ಅಷ್ಟು 'ಸುಂದರಿ' ಎನ್ನಿಸಿಕೊಳ್ಳುವಷ್ಟು ಸುಂದರಿಯಾಗಿರಲಿಲ್ಲ. ಸ್ವಲ್ಪ ಗುದುಗು ಗುಜರಾಥೀ ಹೆಂಗುಸು! ನನ್ನ ವಿಚಾರ ಮುಗಿಯಲೊಲ್ಲದು. ಸುಮ್ಮನೆ ಮನೆಗೆ ಬಂದುಬಿಟ್ಟೆ!

* * *

ಇನ್ನೊಂದು ಸಲ ಇಂಥದೇ ಪ್ರಸಂಗ. ಒಬ್ಬರು ಬಾಕಿನ ಕೊನೆಯಲ್ಲಿ ಕುಳಿತಿದ್ದರು. ಮೈಯಲ್ಲಿ ಸರ್ಜಿಕೋಟು. ಕಣ್ಣಿಗೆ ಸುಂದರವಾದ ಕನ್ನಡಕ. ಕೈಯಲ್ಲಿಯೊಂದು ಗ್ರಂಥವಿತ್ತು. ಕಾಲಲ್ಲಿ ಹೊಸ ಕೋರಾ ಬೂಟು. ಒಬ್ಬ ಹೆಂಗುಸಿಗೆ ಕೆಳಗೆ ಕೂಡುವ ಪ್ರಸಂಗ ಬಂತು. ಅದರಲ್ಲೇನೂ ಹೀನತೆ ಇಲ್ಲ. ಹೊತ್ತು ಬಂದರೆ ಕತ್ತೆಯ ಕಾಲನ್ನೂ ಹಿಡಿಯಬೇಕಾಗುತ್ತದೆ. ನನ್ನಂಥ ನಾನೂ ಎಷ್ಟೋ ಸಲ, ಬಾಕಿನಲ್ಲಿ ಕುಳಿತ ಜನರ ಪಾದ ಧೂಳಿಯನ್ನು ಮೈಮೇಲೆ ಕೆಡಹಿಕೊಂಡಿರುವೆನು. ಇರಲಿ. ಆ ಸದ್ಗೃಹಸ್ಥರು ಚಟಕ್ಕನೆ ಎದ್ದು, 'ಬಾಯಿ, ನೀವು ಇಲ್ಲಿ ಕೂಡಿರಿ. ನನಗೆ ಇಲ್ಲೇ ಹೋಗುವದಿದೆ' ಎಂದು ಎದ್ದು ನಿಂತು ಆಳಿಗೆ ಜಾಗಮಾಡಿ ಕೊಟ್ಟರು. ಹೆಂಗುಸು ಸುಂದರಿಯೂ ಆಗಿರಲಿಲ್ಲ, ಒಡ್ಡರವಳೂ ಆಗಿರಲಿಲ್ಲ. ಸರ್ವಸಾಮಾನ್ಯ ಕೆಳಗಿನ ತರದ ಹೆಂಗುಸು ಆ ಮೇಲೆ ಒಂದೆರಡು ವಾರಗಳಲ್ಲಿ ನನಗೊಂದು ಸಂಗೀತ ಕಚೇರಿಗೆ ಹೋಗಬೇಕಾಗಿತ್ತು. ಕಾಲೇಜಿನಲ್ಲಿ ಸಂಗೀತ ಕೇಳಲಿಕ್ಕೆ. ಆಲ್ಲಿ ಬಂದ ದೊಡ್ಡ ಜನರನ್ನು ಸ್ವಾಗತಮಾಡುತ್ತಿದ್ದರು ಆ ಗೃಹಸ್ಥರು. ನನ್ನೊಬ್ಬ ಮಿತ್ರರನ್ನು ಕೇಳಿದೆ: 'ಇವರಾರು?'. 'ಇವರೇ! ನಮ್ಮ ಕಾಲೇಜಿನ ಪ್ರಿನ್ಸಿಪಾಲರು' ಎಂದು ಆತ ಹೇಳಿದ. 'ಆಯ್ಯೋ!' ಎಂದೆ. ಅವರಲ್ಲಿಯೂ ನಿಜವಾದ ಸ್ತ್ರೀದಾಕ್ಷಿಣ್ಯವನ್ನು ಕಂಡೆ— ಆ ದಿನ ಬಸ್ಸಿನಲ್ಲಿ!

ಸ್ತ್ರೀದಾಕ್ಷಿಣ್ಯವನ್ನು ಯುರೋಪಿಯನ್ ಜನರಿಂದ ನಾವು ಈಗೀಗ ಕಲಿಯಹತ್ತಿರುವೆವೆಂಬುದು ನಮ್ಮನ್ನು ತೆಗಳುವವರು ನಮ್ಮ ಮೇಲೆ ಹೊರಿಸುವ ಆರೋಪ. ಮಾನವನಲ್ಲಿ ದೇವರನ್ನು ನೋಡುವ ಹವ್ಯಾಸವಿಟ್ಟು ಹೆಂಬಲಿಸಿದವರು ನಮ್ಮ ಹಿರಿಯರು. ಸ್ತ್ರೀಯಲ್ಲಿಯೂ ದೇವತ್ವವನ್ನು ಕಂಡ ನಮ್ಮ ಪೂರ್ವಿಕರು 'ಸ್ತ್ರೀಯರನ್ನು ದೇವತೆಗಳಂತೆ ಪೂಜಿಸಿರಿ' ಎಂದು ಹೇಳಿರುವರು. ಪ್ರತಿಯೊಬ್ಬ ಸ್ತ್ರೀಯನ್ನು (ತಮ್ಮ ಹೆಂಡತಿಯನ್ನು ಬಿಟ್ಟು) ತಾಯಿಯೆಂದು ತಿಳಿದುಕೊಂಡು ಜೀವನವನ್ನು ಸಾಗಿಸಬೇಕೆನ್ನುವವರು, ಸ್ತ್ರೀದಾಕ್ಷಿಣ್ಯವನ್ನು ಪರದೇಶದಿಂದ ಕಲಿಯಹತ್ತಿರುವರೆಂಬುದು ಸೋಜಿಗದ ಮಾತಾಗಿದೆ. ಇದಕ್ಕೂ ಆಳವಾಗಿ ವಿಚಾರಿಸಿದರೆ, ಸ್ತ್ರೀದಾಕ್ಷಿಣ್ಯವನ್ನು ಮಾನವನ ಸ್ವಭಾವದಲ್ಲಿಯೇ ದೇವರು ಬೇರೂರಿರುವನೆಂದರೂ ಅಡ್ಡಿಯಿಲ್ಲ. ತಾರುಣ್ಯದಲ್ಲಿ ಕಬ್ಬಿಣದ ಕಲಬೀಮನಾದರೂ, ಮೇಣದಂತೆ ಮೆತ್ತಗೆ ಆಗುವನು—ಯುವತಿಯ ಪ್ರೇಮಸಂಗಮದಲ್ಲಿ. ತಾರುಣ್ಯದಲ್ಲಿಯೆ ಮೊದಲು ಅವನಿಗೆ ಸ್ತ್ರೀಯಲ್ಲಿ ದೇವತಾಂಶವಿರುವುದೆಂದು ಮನವರಿಕೆಯಾಗುವುದು. ಇದೇ ಭಾವನೆಯು ಬಲವಾಯಿತೆಂದರೆ, ಅವನು ಎಲ್ಲ ಸ್ತ್ರೀಯು-

ರಲ್ಲಿಯೂ ದೇವತಾಂಶವನ್ನು ನೋಡಹೆತ್ತುವನು. ಈ ಭಾವನೆಯು ಹೃದಯದಲ್ಲಿ ಬಲವಾಯಿತೆಂದರೆ, ಉದ್ದುರುಟನಾದವನೂ ಸ್ತ್ರೀಯರ ಸಂಗಡ ಮೃದುವಾಗಿ ನಡೆಯಹತ್ತುವನು. ಈ ಮಧುರವಾದ ನಡತೆಗೇ ಸ್ತ್ರೀದಾಕ್ಷಿಣ್ಯವೆಂದು ಹೆಸರು.

ಸ್ತ್ರೀದಾಕ್ಷಿಣ್ಯವನ್ನು ಕಲಿಸುವ ಶಾಲೆಯೆಂದರೆ ತಾರುಣ್ಯ; ಅದೂ ಮದುವೆಯಾದ ಅನಂತರ. ಬ್ರಹ್ಮಚರ್ಯದಲ್ಲಿ ದೇಹದ ಬೆಳವಣಿಗೆಯಾಗುವುದು. ತಾರುಣ್ಯದಲ್ಲಿ ಹೊಸಹುರುಪು, ಹೊಸ ಬಣ್ಣ, ಹೊಸ ವಿಚಾರ, ಹೊಸ ಆಚಾರಗಳೂ ಹುಟ್ಟುವುವು. ಮದುವೆಯಿಂದಲೆ ಬ್ರಹ್ಮಚಾರಿಯು ಸದಾಚಾರವನ್ನೂ ಶಿಷ್ಟಾಚಾರವನ್ನೂ ಕಲಿಯುವನು. ಒಮ್ಮೆ ಸ್ತ್ರೀಯ ಸಂಗಡ ಉದಾತ್ತ ಭಾವನೆಯಿಂದ ನಡೆಯಲು ಕಲಿತವನು, ಅದನ್ನು ಎಂದೆಂದಿಗೂ ಮರೆಯಲಾರನು. ಅವನ ಜೀವನದಲ್ಲಿ ಅದೇ ಉದಾತ್ತ ಭಾವನೆಯು, ಮೇಲಿಂದ ಮೇಲೆ ಅವನನ್ನು ಅಡ್ಡಗಟ್ಟಿ, ದುರ್ಮಾರ್ಗವನ್ನು ತೋರಿಸದೆ ಸನ್ಮಾರ್ಗಕ್ಕೇ ಹಿಡಿದು ಎಳೆಯುವುದು. ಈ ಉದಾತ್ತಭಾವನೆಯಿದ್ದವನೇ ಮಾನವನೆಂಬ ಹೆಸರಿಗೆ ಪಾತ್ರನಾಗುವನು.

ನಾನು ಚಿಕ್ಕವನಿದ್ದೆ. ನಮ್ಮ ನೆರೆಹೊರೆಯಲ್ಲಿ ಒಬ್ಬ ವೈಷ್ಣವ ವೈದಿಕ ಆಚಾರ್ಯರ ಮನೆ ಇತ್ತು. ಒಂದು ದಿವಸ ಮುಂಜಾವು ಸಮವಸೆಯಾಗಿತ್ತು. ಗೊಂದಲೋ ಗೊಂದಲವಾಯಿತು— ಅವರ ಮನೆಯ ಮುಂದೆ. ಬೆಳಗಿನಲ್ಲಿ ಕಸ ಉಡುಗುವ ಹೊಲೆಯರವಳು, ತನ್ನ ಉಡಿಯಲ್ಲಿದ್ದ ಮುಸುರೆಯ ಎಂಜಲನ್ನು ಅವರ ಜಾಗಿಲಲ್ಲಿ ಜೆಲ್ಲಿದ್ದಳು. ಬೇಕೆಂತಲೆ ಅಲ್ಲ; ಅಲ್ಲಿ ಬಂದ ಕೂಡಲೆ ಉಡುಗುವಾದ ಕಟ್ಟಿದ್ದ ಪಡರಿನ ಗಂಟು ಉಚ್ಚಿ ಹೋಗಿ ಎಂಜಲುಬಿದ್ದಿತ್ತು. ಅದನ್ನು ನೋಡಿ ಧೀರ (ಆಚಾರ್ಯರ ನುಗ), ಆಟ್ಟದ ಮೇಲಿಂದ ಕೆಳಗೆ ಬಂದು ಜಾಗಿಲ ತೆರೆದು "ಏರಂಡೇ (ಹೊಲತಿಗೆ ಅಂದರೂ ಅಡ್ಡಿಯಿಲ್ಲ—ಪುರಾಣಸಮತವಾದ ಸೂತ್ರಭಾಷ್ಯ), ಈ ಮುಸುರೆಯನ್ನು ಬಳಕೊಂಡು ಹೋಗುತ್ತೀಯೋ ಇಲ್ಲೋ? ಇಲ್ಲದಿದ್ದರೆ ಮುಟ್ಟೆ ಪೈಮುರೀ ಛಳಿಸೇನು!" ಎಂದನು. ಹೊಲೆಯರವಳು ಕೂಡಲಿನಷ್ಟೂ ಕದಲಲಿಲ್ಲ. ಧೀರನ ಗುಡುಗು ಕೇಳಿ ಆಚಾರ್ಯರು ಒಳಗಿನಿಂದ ಬಂದರು. ಆದುದನ್ನೆಲ್ಲ ತಿಳಿದುಕೊಂಡು ಅವರು: "ತಂಗೀ, ಹೀಂಗ ಮಾಡಬಾರದು! ನೀ ಏನೂ ಮುಡ್ಡಾಂ ಮಾಡಿಲ್ಲ, ನಿನ್ನ ಕೈಯಿಂದ ಬಿದ್ದಿರಬಹುದು. ನಾ ನೀರು ಹಾಕತೀನಿ. ನೀ ಅಷ್ಟು ಬಳದುಕೋ; ನಾವು ಬ್ರಾಂಬರು. ಹೊಲೆಯರ ಎಂಜಲನ್ನ ಮುಟ್ಟೋದಿಲ್ಲ, ಮೈಲಿಗಿ ಆಗತದ, ಬಾಅಕ್ಕಾ" ಎಂದರು. ಹೊಲೆಯರವಳು ಜೆಟಕ್ಕನೇ ಎದ್ದು, ಅವರ ಅಂಗಳವನ್ನು ಕನ್ನಡಿಯಂತೆ ಮಾಡಿಟ್ಟಳು...ಇದೇ ನಿಮಿಷಗಳಲ್ಲಿ. ಆಚಾರ್ಯರು ಸಂಸ್ಕೃತ ಪಂಡಿತರಾಗಿದ್ದು ವೈತವೇದಾಂತವನ್ನು ದಿನಾಲು ಕಲಿಸುತ್ತಾರೆಂದು ನನಗೆ ಹಿಂದಿನಿಂದ ತಿಳಿಯಿತು. "ಹರಿರೇವ ಪರಃ" ಎಂಬುದರ ಮೇಲೆ ಸಾವಿರಾರು ಭಾಷ್ಯಗಳನ್ನು ಬರೆದರೇನು ಫಲ? ಹೊಲೆಯರಲ್ಲಿಯೂ ಹರಿ ಇದ್ದಾನೆಂಬುದನ್ನು ತಿಳಿದ ಮೇಲೆ, ಭಾಷ್ಯಗಳನ್ನು ಓದಿದರೂ ಅಷ್ಟೇ, ಬಿಟ್ಟರೂ ಅಷ್ಟೇ!

ಸ್ವಾಮಿ ವಿವೇಕಾನಂದರು (ನನ್ನ ಸದ್ಗುರುಗಳು) ಒಂದು ಕಡೆ ತಮ್ಮ ವ್ಯಾಖ್ಯಾನದಲ್ಲಿ: "We talk like philosophers, and act like fools" ಎಂದರೆ, "ನಾವು ವೇದಾಂತವನ್ನು ಯಾವಾಗಲೂ ಬಡಬಡಿಸುತ್ತೇವೆ, ಆದರೆ ಮಹಾ ಮೂರ್ಖರಂತೆ ನಡೆಯುತ್ತೇವೆ." ಎಂದಿರುವುದು ಎಷ್ಟು ನಿಜವಾಗಿದೆಯೆಂಬುದನ್ನು ಪ್ರತಿನಿತ್ಯ ನೋಡಬಹುದು. "ಯತ್ರ ನಾರ್ಯಸ್ತು ಪೂಜ್ಯಂತೇ" ಎಂದು ಹಗಲೂ ಹನ್ನೆರಡು ತಾಸೂ ಕಿರಿಚುವವರು, ಹೆಂಡತಿಯ ಕಡೆಯಿಂದ, ಅಡಿಗೆಯಂತಹ ಕ್ಷುಲ್ಲಕ ಕಾರ್ಯದಲ್ಲಿ ಉಪ್ಪು ಬಿದ್ದುವಂತಹ ಕ್ಷುಲ್ಲಕ ಅಪರಾಧವಾದಾಗ, ಹೆಂಡತಿಗೆ ಹಾಸ್ಯದಿಂದ "ಅಯ್ಯೋ! ನಿನಗೆ ಮುಪ್ಪು ಬಂದಿತೇನು? ಉಪ್ಪೇ ಮರತೀಯಲ್ಲಾ ಸಾರಿನೊಳಗೆ! ಏನು ನನ್ನ ವಿಚಾರವಾಗಿ ನನ್ನ ನೆನಪು ಬಂದು ಮರೆತೀಯೋ ಉಪ್ಪು? ಹಾಕೊಂದು ಹಿಡಿ....ಎಲೆಯೊಳಗ!" ಎನ್ನುವದನ್ನು ಬಿಟ್ಟು, ಮನೆಮುಂದಿ ಮಕ್ಕಳು ಅತಿಥಿಗಳು ಪಂಕ್ತಿಯಲ್ಲಿ ಕುಳಿತಿರುವಾಗ, ರಂಭೆ ಯುಂಥ ಸುಡದಿಯನ್ನು ರಮಿಸದೆ ರಮರಮನೆ ಹೊಡೆದು, ರಂಭೆ ಎನ್ನುವುದರ ಬದಲು ಭಕಾರಕ್ಕೆ ಡಕಾರವನ್ನು ಇಟ್ಟು, ಒದೆಯುವುದು ಯಾವ ಮಾನವನ ಧರ್ಮವೆಂಬುದೇ ತಿಳಿಯದಾಗಿದೆ! "ನ ಸ್ತ್ರೀಸ್ವಾತಂತ್ರ್ಯಮರ್ಹತಿ" ಎಂಬುದೇ ಮಾನವ (ಮನುಸ್ಮೃತಿ) ಧರ್ಮವೆಂದು, ಹೆಣ್ಣು ಮಕ್ಕಳಿಗೆ ಸರ್ವಸಾಧಾರಣವಾದ ಸ್ವಾತಂತ್ರ್ಯವನ್ನೂ ಕೊಡದವರ ಮುಂದೆ ಸ್ತ್ರೀದಾಕ್ಷಿಣ್ಯ— ಅದೂ ಎರಡನೆಯವರ ಬಡವರ ಹೆಣ್ಣು ಮಕ್ಕಳಿಗೆ—ತೋರಿಸಿರೆಂದು ಹೇಳುವುದು ಕಿವುಡರ ಮುಂದೆ ಪುರಾಣ ಓದಿದಂತೆಯೆ ಸರಿ! ಅಪರಾಧವಾದಾಗ "ಲಗುಡೇನ ತಾಡಯೇತ್" = "ಬಡಿಗೆಯಿಂದ ಹೊಡೆಯಬೇಕು" (ಯಾಜ್ಞವಲ್ಕ್ಯ ಸ್ಮೃತಿಭಾಷ್ಯ) ಎಂಬುದೇ ಧರ್ಮವೆಂದು ತಿಳಿಯುವ ಅಧರ್ಮಿಗಳಿಗೆ ನಮ್ಮ ಆರ್ಯಧರ್ಮದ ಉದಾತ್ತವಾದ ಧ್ಯೇಯ ಧರ್ಮವು (Idealism) ತಿಳಿದಿಲ್ಲವೆಂತಲೇ ಎನ್ನಬಹುದು. ಸ್ತ್ರೀ-ಸನ್ಮಾನದ ಹೊಣೆಯನ್ನು ಹೊತ್ತು, ಮದುವೆಯಾಗುವಾಗ ಅಗ್ನಿಸಾಕ್ಷಿಯಾಗಿ "ಧರ್ಮೇ ಚ ಅರ್ಥೇ ಚ ಕಾಮೇಚ ನಾತಿಚರಾಮಿ" ಎಂಬ ಘೋರ ವೇದಾಂತದ ಪ್ರತಿಜ್ಞೆಯನ್ನು ಮಾಡಿ, ಬಂದ ಸಂಬಳವನ್ನು ಹೆಂಡತಿಯ ಉಡಿಯೊಳಗೆ ಹಾಕುವುದನ್ನು ಬಿಟ್ಟು, ಅದನ್ನು ಟ್ರಂಕಿನೊಳಗೆ ಹಾಕಿ ಬೀಗ ಜಡಿದು, ಹೆಂಡತಿಯು ದೇವರಿಗೊಂದು ದುಡ್ಡು ಬೇಡಲು "ಬರೇ ಅಕ್ಕೀಕಾಳಿನಿಂದ ದೇವರು ಸಂತುಷ್ಟನಾಗುವುದಿಲ್ಲವೇ?" ಎಂದು ಕೇಳುವವರಿಗೆ ಸ್ತ್ರೀದಾಕ್ಷಿಣ್ಯದ ತತ್ತ್ವ ತಿಳಿಯಲೇ ಅರದು. ಆರ್ಯಧರ್ಮದ ಗುಟ್ಟೆಂದರೆ ಸ್ತ್ರೀದಾಕ್ಷಿಣ್ಯ— ಸ್ತ್ರೀಸನ್ಮಾನ!!!

ಪುಣ್ಯದ ಫಲ!

(ಚಿಕ್ಕ ಕಥೆ)

ಶ್ರೀಮತಿ ದೇವಾಂಗನಾ ಶಾಸ್ತ್ರಿ, ಗೋಕರ್ಣ

"ಪ್ರೀಯ ಗೆಳತಿ ಮಹಾಲಕ್ಷ್ಮಿಗೆ,

ನಿನ್ನ ಪತ್ರ ಕೈಸೇರಿ ಈಗೊಂದು ವಾರ ಕಳೆದುಹೋಯಿತು. ನನ್ನ ನಿರೀಕ್ಷಣೆಯಲ್ಲಿ ನೀನು ಬೇಸತ್ತಿರಬಹುದು. ನನ್ನೆದೆಯ ಸಿಡಿತ-ಮಿಡಿತವನ್ನರಿತ ನೀನು, ಮತ್ತೆ ನನಗೇಕೆ ಗ್ರಹಣಕ್ಕೆ ಬರಲು ಆಗ್ರಹ ಮಾಡಿರುವೆ? ಗ್ರಹಣವೆಂದರೆ ಸಿಡಿಲೆರಗಿದಂತೆ ಎನಿಸುವ ನನಗೆ, ಆದನ್ನು ನೋಡುವಷ್ಟು ಕೂಡ ತಾಳ್ಮೆಯಿಲ್ಲ. ನಿಮ್ಮಲ್ಲಿಯವರೆಗೆ ಬರುವ ಮಾತಿರಲಿ; ಇಲ್ಲಿಯೂ ನಾನು ಹೋಗುವುದಿಲ್ಲ! ನನ್ನವರನ್ನು ಆಹುತಿಗೊಂಡ ಆ ಗ್ರಹಣಕ್ಕಾಗಿ ಎಳ್ಳಷ್ಟೂ ಪವಿತ್ರ ಭಾವನೆಯಿಲ್ಲ. ನಿನ್ನ ಗೆಳತನ ಆದೆಷ್ಟು ಮಧುರವಾಗಿದ್ದರೂ, ನಾನೀಗ ಬರಲಾರೆ. ಆವರಾ ಸಾವಿನ ಸನ್ನಿವೇಶದ ಆ ಹಾಳು ನೆನಪು, ನನ್ನಮೇಲೆ ಹೇಗೆ ಒತ್ತಿ ನಿಂತಿದೆ ಬಲ್ಲೆಯಾ? ಗ್ರಹಣವು ಬಂದಾಗೆಲ್ಲ ಆ ದುರ್ದಿನದ ನೆನಪು ಉಕ್ಕಿ ಬಂದು ನೋವು ಮರುಕಳಿಸುವುದು. ಆಯ್ಯೋ .... ಭಾರವಾಗುತ್ತಿರುವ ಈ ಹೃದಯವನ್ನು ಹೊರಲಾರೆ. ಗೆಳತಿ, ಗ್ರಹಣವೆಂದೊಡನೆಯೆ ಹೃದಯವದುರುವುದು. ಕರುಳಿನ ಕಂಪನವು ಜೀವವನ್ನು ಹಿಂಡುವುದು. ಅಂದಿನ ಗ್ರಹಣಕ್ಕೆ ತುತ್ತಾದ ನನ್ನವರ ನೆನಪು, ಒಡಲಿನಲ್ಲಿ ಕಿಚ್ಚಿಕ್ಕಿ ಕಾಯ್ದಿದೆಯನ್ನು ಸುಡತೊಡಗುವುದು. ಉರಿದೆ ಉರಿಯುತ್ತಿರುವ ಈ ದುಃಖಾಗ್ನಿಗೆ ಜೀವ ಬೆಂದುಹೋಗಿದೆ. ಚಂದ್ರನನ್ನು ನುಂಗಿ ತುಷ್ಟಿಗೊಳ್ಳದ ರಾಹು-ಕೇತುಗಳು, ನನ್ನವರ ತುತ್ತಿನಲ್ಲಿ ಸಂತುಷ್ಟಿಗೊಂಡು ತೆರಳಬೇಕೆ? ಮತ್ತೆ ಮೂಡಿಬಂದ ಮುಗಿಲ ರಾಜನನ್ನು ತಿರುಗಿಕೊಡುವ ಭಾಷೆಯನ್ನು ಹೊತ್ತು ಹಡಪಿಸಿರಬೇಕು ಆವರುಗಳು. ಅಥವಾ ಕುಮುದಿನಿಯ ಕರಕರೆಗೆ ಸಾಗರದ ಉಬ್ಬಸಕ್ಕೆ ತಳಮಳಗೊಂಡು, ರಾತ್ರೀರಾಣಿಯ ರಾಜನನ್ನು ಮತ್ತೆ ಇತ್ತರೊ! ಸೆಳೆದುಕೊಂಡೊಯ್ದ ನನ್ನವರ ಪ್ರಾಣ ಮಾತ್ರ ಬರಲೇ ಇಲ್ಲ. ಪತಿಯುಸಿರಿನಲ್ಲಿ ಜೀವವಾಡಿಸುತ್ತಿದ್ದ ನನ್ನೊಡನೆ, ಈ ಬಗೆಯ ಪಕ್ಷಪಾತವೆ? ಆ ಹಾಳು ಗ್ರಹಣ ಬಾರದಿದ್ದರೆ, ನನ್ನ ತಾಳೆಯು ಕಟ್ಟಿದ್ದ ಗಂಟಿನಲ್ಲಿ ಭದ್ರವಾಗಿರುತ್ತಿತ್ತು. ಕ್ರೂರ ರಾಹು-ಕೇತುಗಳು "ಗ್ರಹಣ" ಎಂದು ಮೋಸದ ಬಲೆ ಬೀಸಿ, ನೀರಿನಲ್ಲಿ ಮುಳುಗೇಳುತ್ತಿರುವಷ್ಟರಲ್ಲಿಯೆ— ಇನ್ನೂ ಈ ಜೀವನದ ಪೂರ್ವಾನ್ಹದಲ್ಲಿಯೆ— ಪ್ರಾಣವನ್ನು ಕಸಿದೊಯ್ಯಬೇಕೆ? ಮಾಡುವುದೇನು? ದೈವದತ್ತ ದುರ್ದಿನ ಅಂದು! ವಿಧಿ ಸಾಧಿಸುತ್ತಿದ್ದ ಹೊಂಚಿಗೆ ಸಮಯ ಸರಿದು ನಿಂತು ತೆರೆಯ ಸಹಾಯವನ್ನಿತ್ತರೆ, ನಿಃಸಹಾಯರಾದ ನಾವು ಕಂಬನಿಯಲ್ಲಿ ಕಣ್ಣನ್ನು ತೇಲಿಸಿ ಬಿಡುವುದರ ಹೊರತಾಗಿ ಇನ್ನೇನೂ ಸಾಧ್ಯವಿಲ್ಲ. ಗ್ರಹಣವೇ ಪುಣ್ಯವೆಂದು ರಮಿಸಲು ಬಂದ ರಾಹು-ಕೇತುಗಳಿಗೆ, ನನ್ನವರನ್ನು ಬಲಿತೆಗೆದುಕೊಂಡ ಕಲಂಕದ ಕಪ್ಪು ಕಲೆಯನ್ನು, ಅವರಿಗಪ್ಪೆ ಬಡಿದೆ ಸಾಗರವು ತಾನೂ ಆದನ್ನಷ್ಟು ಒತ್ತಿಸಿಕೊಂಡಿದೆ.

ಇದೊಂದು ವಿಷಾದಾಂತ ಘಟನೆಯ ವಿವರಣೆ. ಒಳ್ಳೆಯದನ್ನು ಪಡೆಯಲು ಬಯಸಿ ಉಳ್ಳದನ್ನು ಕಳೆದುಕೊಂಡ ತರುಣಿಯ ಕರ್ಮಕಥೆ. ಸರೂ ಅಂತಹರು ಬಾಳನ್ನು ಕೊನೆಯವರೆಗೂ ಕಣ್ಣೀರ ಕಡಲಲ್ಲಿಯೆ ಕಳೆಯಬೇಕೆ?

ಈಗಿರಡು ವರ್ಷದ ಹಿಂದಿನ ಮಾತು: ಆ ದುರ್ದಿನದ ನೆನಪು ಈ ಹೋಳಾದ ಬಾಳು ಹಾಳಾಗುವ ವರೆಗೆ ಮರೆಯುವಂತಿಲ್ಲ. ಅಂದು ಉರಿಯುವ ನಂಬೆಯಲ್ಲಿ ತಣ್ಣಗಿರನ್ನು ಚೆಲ್ಲುತ್ತ ಚಂದ್ರನು ಜಕ್ಕಂದದಲ್ಲಿ ಆಕಾಶವನ್ನು ಏರಿ, ತುಂಬುಜವ್ವನದಿಂದ ತಿಂಗಳು ಬೆಳಕಿನೊಡನೆ ತನ್ನ ಅಂಗಳವನ್ನು ತುಂಬಿ ತೇಲಿಸುತ್ತಿದ್ದ. ತಂಗದಿರು ತಂಬೆಲರನಪ್ಪಿ ಭೂಮಿಯನ್ನು ಜುಂಬಿಸುತ್ತಿದ್ದ ದೃಶ್ಯವದು, ಅದ್ಭುತರಮ್ಯವಾಗಿತ್ತು. ಈ ಸೌಂದರ್ಯದ ಸೊಬಗನ್ನು ಸೂರೆಗೆಯ್ಯಲು ಬರುವ ಗ್ರಹಣವನ್ನು ನೆನೆದು, ದುಗುಡದಲ್ಲಿ ಮನಸ್ಸು ಮುಸೆಯುತ್ತಿತ್ತು. "ನಮ್ಮ ಈ ತುಂಬುಜೀವನಕ್ಕೂ ಗ್ರಹಣ ತಗಲಿದರೆ...." ಹೀಗೆಲ್ಲ ಹುಚ್ಚು ವಿಚಾರ ಹರಿದು ಬಂದು ಎದೆಯಾಳವನ್ನು ಧಡಧಡಿಸುತ್ತಿತ್ತು. ಚಿತ್ತದಲ್ಲಿ ಒತ್ತಿ ಮೂಡುತ್ತಿದ್ದ ಭವಿಷ್ಯದ ಭೀಷಣಚಿತ್ರವು, ಕಣ್ಣು ಕಟ್ಟಿ ಮುಚ್ಚಿಸಿತ್ತು. ಹೀಗೆ ವಿಚಾರದಲ್ಲಿ ತೊನೆಯುತ್ತಿದ್ದ. ನನ್ನನ್ನು ಸಂತಯಿಸುತ್ತ, ಅಲ್ಲೇ ಸನಿಯದಲ್ಲಿ ಕುಳಿತಿದ್ದ ಅವರು "ಶುದ್ಧ ಹುಚ್ಚೀ! ಇಲ್ಲದ ವಿಚಾರವನ್ನೆಲ್ಲ ಸುಮ್ಮನೆ ಕಲೆಹಾಕುವುದರಲ್ಲಿ ಅರ್ಥವಿಲ್ಲ. ಹೇಗಾಗಬೇಕೆಂದಿದೆಯೊ ಹಾಗೆ ಆಗುವುದೇ ಹೊರತು, ನಮ್ಮ ಪಶ್ಚಾತ್ತಾಪ— ಕಣ್ಣೀರುಗಳಿಗೆ ಅವೆಲ್ಲ ತಡೆದುನಿಲ್ಲುವವೇ? ಆದರೆ ಇದ್ದಷ್ಟು ದಿನ ಬರುವಷ್ಟು ಗಳಿಗೆಯನ್ನು ರಸವಾಗಿಸಿ ಹೀರಬೇಕೆನ್ನುವುದೇ ನಶ್ವರತೆಯಿಂದ ಕಲಿತ ಪಾಠವಾಗಿದೆ!" ಎಂದು ಕಣ್ಣನರಳಿಸಿದರು. ಆ ಕಣ್ಣಿನಲ್ಲಾಗ ರಸನಿಮಿಷವನ್ನಾಗಿಸುವ ಒಲವಿನ ಹೊನಲು ಸಂಗಮಿಸಲು ಹರಿದುಬಂತು. ಸುದೀರ್ಘಜೀವನದಲ್ಲಿ ಸಮರಸವೇ ದಿನವೆಲ್ಲ ಉಕ್ಕಿಬಂದು ಒಂದೊಂದು ನಿಮಿಷವನ್ನೂ ತೇಲಿಸಿ ತರುವ ಆ ರಸದ ತೊರೆಯನ್ನು ಕಟ್ಟಿನಲ್ಲಿ ಹಿಡಿದಿಡಲು ಶಕ್ಯವಾಗುತ್ತಿದ್ದರೆ, ಅದಕ್ಕಾಗಿ ಮಾನವನು ಪಂಬಲಿಸಿ ಹಳಹಳಿಸುತ್ತಿದ್ದಿಲ್ಲ.

ಆಗಷ್ಟೇ ಕವಿದುಬರುತ್ತಲಿದ್ದ ಕತ್ತಲು ತಿಂಗಳನ್ನು ಗ್ರಾಸಗೊಂಡು, ಜೆಕ್ಕಂದವನ್ನು ಜೆದರಿಸಿದ ಮಿಡುಕು ಹೃದಯವನ್ನು ಮಿಡಿದುಜಡಿಯುತ್ತಿತ್ತು. ಇಂತಹ ಕಗ್ಗತ್ತಲಲ್ಲೂ ಜನಸ್ತೋಮವು ಗ್ರಹಣದ ಪರ್ವಕಾಲದ ಪುಣ್ಯವನ್ನು ಪಡೆಯಲಿಕ್ಕೆ ಸಮುದ್ರದ ಕಡೆಗೆ ಸಾಗಿತ್ತು. ದಂಡೆಯಲ್ಲಿ ಮಳಲಲಿಂಗವ ಮಾಡಿ ಅಪ್ಪಾನಿಸಿ, ಲಿಂಗದಲ್ಲಿ ಪ್ರತ್ಯಕ್ಷವಾಗಿ ಬಂದ ದೇವನೊಡನೆ ಪಾಪವನ್ನು ಪರಿಹರಿಸೆಂದು ಬೇಡಿ, ಅಲೆಯಲ್ಲಿ ಪಾಪವನ್ನು

ಹನಿಹನಿಯಾಗಿ ತೇಲಿಬಿಟ್ಟು, ಒಂದೆ ತೆರನಾಗಿ ಸಾಗರದ ತೆರೆಯಲ್ಲಿ ಜನರು ಪುಣ್ಯವನ್ನು ಕಣಕಣವಾಗಿ ಶೇಖರಿಸುತ್ತಿದ್ದರು. "ಪರ್ವಕಾಲದಲ್ಲಿ ಪುಣ್ಯನನ್ನು ಗಳಿಸಿಕೊಳ್ಳಿ!" ಎನ್ನುತ್ತಿರುವ ಅಮ್ಮನ ಒತ್ತಾಸೆಯನ್ನು ಧಿಕ್ಕರಿಸಲಾರದೆ, ನಾನೂ ಅವರೂ ಸಮುದ್ರದ ದಡಕ್ಕೆ ಸಾಗಿದ್ದೆವು. ಅಂದು ಸಾಗರದ ಅಲೆ ಅಲೆಯಲ್ಲಿಯೂ ಪುಣ್ಯವು ಪೂರವಾಗಿ ಬಂದಿತ್ತು. ದಂಡಿಯಂಚಿಗೆ ಕಡೆದು ಬಡಿದು ನಗುತ್ತಿರುವ ತೆರೆಯ ನೊರೆಯು ಹಾಲಾಗಿ ಉಕ್ಕಿಬಂದು, ಮರುನಿಮಿಷಕ್ಕೆ ನೀರಾಗಿ ಬೆರೆತು ಹರಿದೋಡುವ ಸೊಬಗು ಓಡುತ್ತಿದ್ದವರನ್ನು ನಿಲ್ಲಿಸುತ್ತಿತ್ತು. ಜಿನ್ನಾಟವಾಡುತ್ತಿದ್ದ ಅಲೆಯು ಒಮ್ಮೆಲೇ ರೇಗಿತು. ತನ್ನನ್ನು ತುಳಿಯುತ್ತಿದ್ದವರ ಅರಿವು ಬಂದು ಕಾಲನ್ನು ಅರಸರಸಿ, ಜೆಳವಿನಲ್ಲಿ ಕೊರೆಕೊರೆದು ಎಳೆಯುವತ್ತಿತ್ತು. ನಾಗರಕ್ಕೆ ಸೊಂಪನ್ನು ತಂದಿದ್ದ ಸುಳಿತೆರೆಯು, ಕಂಡವರನ್ನು ದಿಂಡುರುಳಿಸುವ ತರುಗಣಿಯ ಸುಳಿಯು ತೆರದಲ್ಲಿ ಸುಳಿಸುಳಿದು ಬಂದುಬಿಟ್ಟಿತು. ಅಷ್ಟರಲ್ಲಿ ಅಲೆಯು ಅಬ್ಬರಿಸಿ ಬಂದು, ಒಂದೇ ಉಬ್ಬಸಕೆ ನನ್ನವರನ್ನು ಆಪೋಶನಗೊಂಡು ತೆರಳಿತು. 'ಹಾ' ಎಂದು ಚೀರುತ್ತ ಪಿಡಿಯಲೊಡ್ಡಿದ್ದ ಕೈಗಳನ್ನು ಹಿಂದೆ ನೂಕಿ, ನಿರ್ದಯದಿಂದ ತನ್ನೆಡೆಗೆ ಸೆಳೆದೊಯ್ದುಬಿಟ್ಟಿತು. ಇಷ್ಟರೊಳಗೆ ಪೌಪಾರಿ ಹತ್ತಿಸ್ಪತ್ತು ಕೈಗಳ ಗರುಡಪಾತಾಳವು ಸಮುದ್ರದ ಆಳವನ್ನು ಪಿಡಿದು ಇಳಿದುಹೋದುವು. ಹೋದ ಹತ್ತುಜನಗಳು ನಿಟ್ಟುಸಿರ ಉತ್ತರವನ್ನು ಹೇಳುತ್ತ, ಅವರಾ ನಿರ್ಜೀವ ದೇಹವನ್ನು ಹೊತ್ತು ತಂದರು. ಆಗಷ್ಟೇ ಭೂಮಿಯನ್ನು ತಬ್ಬಿದ್ದ ಕತ್ತಲು ನನ್ನ ಹೃದಯವನ್ನೂ ಕವಿದುಬಿಟ್ಟಿತು. ನನ್ನೆದೆಯ ಅಳು- ಆಕ್ರೋಶವನ್ನು ಕೇಳಿ ಬಂದಂತೆ ಕತ್ತಲೆಯ ಕುಹರವನೊಡೆದುಬಂದು ತಾರೆಯೊಂದು, ಜಾನಿನಂಚಿಗೆ ಜಾಣುಕುಹಾಕಿ ಅಣಕಿಸುತ್ತಿತ್ತು. ಮುನ್ನೀರಿನಾಳವನ್ನು ಸೇರಿದ್ದ ನನ್ನವರ ಆತ್ಮವದು ನಕ್ಷತ್ರದಂತೊಮ್ಮೆ ಮಿನುಗಬಹುದೆಂದು ಕಣ್ಣು ಕಾತರಿಸಿತ್ತು. ಅನಿರೀಕ್ಷಿತವಾಗಿ ಆವರಿಸಿದ ಗಂಭೀರ ನಿರಾಶೆಯೊಡನೆ, ಇನ್ನೂ ಉಸಿರಾಡಿಸುತ್ತಿದ್ದ ಆಶೆಯು ಹೋರಾಡುತ್ತಿತ್ತು. ಆಗ ಕೊಡುತ್ತಿದ್ದ ಬಂಧುಗಳ ಸಾಂತ್ವನೆಯು ನನ್ನನ್ನು ನಿರಾಶೆಯ ಆಳಕ್ಕೆ ಎಳೆದೊಯ್ಯುತ್ತಿದ್ದಂತೆ ಕಂದಿತು. ಗಾಸಿಗೊಂಡ ಹೃದಯದಿಂದ ಒತ್ತರಿಸಿ ಬರುವ ಕಂಬನಿಯು ಹನಿಯು ಹೊಳೆಯಾಗಿ ಸೇರಿದಂತೆ ಕಡಲುಕ್ಕಿ ಮುಂಬಂದು ಇನ್ನೆಷ್ಟು ಜನಗಳನ್ನು ತಿಂದು ತೇಗಲಿಂದೋ 'ಔತಣದ ಸಮಯವಿದು' ಎಂದು ತೆರೆಯು ತನ್ನೆಲ್ಲ ಬಳಗವನ್ನು ಕೂಗಿ ಕರೆಯುತ್ತಿತ್ತು. ಅವೆಲ್ಲ ಸಮಯವನ್ನು ಸಂದರ್ಶಿಸಲು ಬಾಯ್ ಮುಸೆದು ಹಾರಿಬರುತ್ತಿದ್ದುವು. ಪುಣ್ಯವನ್ನು ಹೊತ್ತು ಬರಲಿಕ್ಕೆ ಹೊರಟಿದ್ದ ನಾನು, ಪುಣ್ಯವೇ ಪೂರ್ತಿಗೊಂಡು ಜೀವತಳೆದುಬಂದು ಜೀವನವನ್ನು ಪವಿತ್ರವನ್ನಾಗಿಸಿದ ಜೀವನನ್ನು, ಸುಕೃತವನ್ನು ಸಂಪಾದಿಸುವ ಸಂಕಲ್ಪದಲ್ಲಿ— ಆವರ ಪ್ರಾಣದ ಪರಂಜ್ಯೋತಿಯು ಜೆಳಕಿನಲ್ಲಿ—ನೀರು ಪಾಲಿಸಿತು ಗ್ರಹಣದ ಪರ್ವಕಾಲ! ಹಾಯ್.... ಪುಣ್ಯದ ಫಲವು ಮೃತ್ಯುವಾಗಿ ಬರಬೇಕೇ? ವಿಧಿಯು ವಿಧಿವತ್ತಾದ ಕರ್ಮವನ್ನು ನೆನೆಯುತ್ತ ಬಿದ್ದ ಹೃದಯವನ್ನು ಹೊತ್ತು ಬಧಿಯಡಾದ ಮನೆಯನ್ನು ಸೇರಿದೆ.

ಈಗ ಅಗ್ಗವಾಗಿ ಬರುತ್ತಿರುವ ಗ್ರಹಣವಿದು, ತ್ರೇತಾಯುಗದ ದಶರಥನ ಕರಕರೆಯ ತಪಸ್ಸಿನ ಫಲವೆಂದೇ ಗಟ್ಟಿಯಾಗಿ ಹೇಳುತ್ತೇನೆ. ಏಕಪ್ಪು ಆ ಹಾಳು ಗ್ರಹಣಕ್ಕಾಗಿ ಭಕ್ತಿಗಳನ್ನೆಲ್ಲ ವೆಚ್ಚಮಾಡಿ ತಪಗೈದನೋ! ಸುಕೃತದ ಗಳಿಕೆಯ ಜೀವಮಾನದಲ್ಲೆಲ್ಲ ಗ್ರಹಣದ ಪುಣ್ಯದ ಕಾಲವನ್ನು ಬರಿಕಾಯ್ದು ಸೋತು ಸೊರಗಿದನಂತೆ ರಾಜಾಧಿರಾಜ! ಒಮ್ಮೆಯೂ ಆ ತಪಸ್ಸು ಫಲವಾಗಿ ಬಾರದೆ ಹಂಬಲಿಸಿ ಹಲಬುತ್ತಿದ್ದ ರಾಜನನ್ನು, ಮನದ ಕೊರಗಿನಲ್ಲಿಯೇ ಸಾವು ಕರೆದೊಯ್ಯಿತ್ತಂತೆ! ಅದಕ್ಕೆಂತು ಆಜ್ಞೊಂದು ಮರುಗಿ ಮಿಡುಕಿದನೋ ಮರುಳುರಾಜ! ನೋಡು. ಪುಟ್ಟುಪುಟ್ಟಿಗೆ ಬರುವ ಈ ಕಲಿಯುಗದಲ್ಲಿ ಹುಟ್ಟಿಬರುವ ಭಾಗ್ಯವನ್ನು ಪಡೆದುಬಂದಿರಲಿಲ್ಲವೇನೋ ನಿರ್ಭಾಗ್ಯ ದಶರಥ! 'ಪುಣ್ಯವನ್ನುಕ್ಕೈಯೆತ್ತಿ ಕೊಡುವೆ'ನೆಂದ. ಧರೆಯನ್ನು ಧುಮ್ಮೆಂದು ನಡುಗಿಸಲು ಬರುವ ಅಸುಟ್ಟು ಗ್ರಹಣವು ಎಂದೆಂದೂ ಬಾರದಿರಲೆಂದೂ "ತ್ರೇತಾಯುಗವೊಮ್ಮೆ ತಿರುಗಿದರೆ, ದಶರಥನು ಧರೆಗಿಳಿದು ಬಂದರೆ, ಗ್ರಹಣದ ವರದಾನವನ್ನಿತ್ತು ದಿನವೆಲ್ಲ ಪೂರ್ತಿಯಾಗಿ ಪುಣ್ಯದ ಪೂರದಲ್ಲಿ ತೇಲಿಸಿಬಿಡುವೆಯಂತೆ" ಎಂದೂ ದೇವನೊಡನೆ ಕೊರಗಿದೆದೆಯಿಂದ ಎರಗಿ ಬೇಡುವೆನು.

ಲಕ್ಷ್ಮೀ! ಇಂದು ಮತ್ತೆ ಆ ಗ್ರಹಣ, ಪೌರ್ಣಮೆಯ ತುಂಬು ದಿಂಗಳನ್ನು ನಿಂತಕಾಲವೇಲೆ ದಾರಿಕಾಯುತ್ತಿದೆ. ಸುಕೃತವೆಂದು ಭಾವಿಕರ ಬಗೆಯರಳಿಸಲು ಬರುತ್ತಿರುವ ಈ ಗ್ರಹಣ, ನನ್ನ ತುಂಬುಜೀವನಕ್ಕೆ ಆಜನ್ಮ ತುಂಬಿಬರಲಾರದ ಹಾನಿಯನ್ನು ತಂದೊಡ್ಡಿ, ಜೀವನವನ್ನೆಲ್ಲ ನಿಗ್ರಾಸದಲ್ಲಿ ತೇಲಿಸಿ ಮುಳುಗಿಸಿದೆ. ಇದನ್ನು "ಪುಣ್ಯ" ಎಂದು ಕರೆದರೆ, ಪಾಪವು ಜೆನ್ನಟ್ಟಿ ಬಂದು ನನ್ನ ಬಾಯಿ ಮುಚ್ಚಿಸಬಹುದು. ನನ್ನವರ ಕಾಲವಾಶವನಿಕ್ಕಿ ಕೊಂಡೊಯ್ದು ಈ ಗ್ರಹಣವನ್ನು, ಜೆಂದೆದೆಯು ಎಂದೆಂದೂ ಶಪಿಸದಿರಬಹುದೇ? ಇಷ್ಟೆಲ್ಲ ತೋಡಿಕೊಂಡ ಮೇಲೆ, ಇದೀಗ ಸ್ವಲ್ಪ ಭಾರ ಇಳಿದಂತೆನಿಸಿತು. ಕಾಲ ಕಸಿದೊಯ್ದ ತುತ್ತಿಗಾಗಿ ಎಷ್ಟು ಕೂಗಿಕೊಂಡರೇನು? ಒಂದರೆಕ್ಷಣದಲ್ಲಿ— ನೋಡು-ನೋಡುತ್ತಿದ್ದಂತೆಯೇ — ಜೀವನದ ಸೌಭಾಗ್ಯವೆಲ್ಲ ನೀರಿನೊಡನೆ ನೀರಾಗಿಹೋಯಿತು. ಯಾವುದನ್ನು ಕಂಡು ಸಮಾಧಾನ ಪಡಬೇಕು ಹೇಳು? ಈ ಶೂನ್ಯ ಆ ಶೂನ್ಯವನ್ನು ಸೇರಿದಾಗಲೇ ಇನ್ನು ಶಾಂತಿ! ಹೀಗಾಗುವುದೆಂದುಕೊಂಡಿರಲಿಲ್ಲ. ವರ್ತಮಾನದ ಅಡಿಯಲ್ಲಿಯೆ ಭವಿಷ್ಯ ಹುದುಗಿದ್ದರೂ, ಪರಿಸ್ಥಿತಿಯನ್ನು ಪರಿಣಾಮದಿಂದಲೆ ಕಂಡುಕೊಳ್ಳಬೇಕಾಗಿದೆ. ಆಗ ಬೇಕಾದುದು ಆಗಿಯೇ ತೀರುವಲ್ಲಿ, ಅಸಹಾಯರಾದ ನಮ್ಮಿಂದ ಏನು ಮಾಡಲು ಸಾಧ್ಯವಿದೆ?.....

ಇತಿ ನಿನ್ನ ಸರೂ"

ಚೀನೀ ಆಕಾಶದಲ್ಲಿ ಕೆಂಪು ನಕ್ಷತ್ರ

ಶೀ. ಕುಳಕುಂದ ಶಿವರಾಯರು, ಹುಬ್ಬಳ್ಳಿ

★

ಪ್ರಪಂಚದ ಮಹಾಯುದ್ಧ ಮುಗಿದುಹೋಗಿ ಇಂದು ಶಾಂತಿ-ಸಂಧಾನಗಳ ಮಾತು ನಡೆದಿದ್ದರೂ ಚೀನಾದ ಅಂತರ್ಯುದ್ಧ ಮುಗಿದಿಲ್ಲ. ಹಿಂದುಸ್ತಾನದಲ್ಲಿ ಎರಡು ಧಾರ್ಮಿಕ ಮತಗಳು ಹೊಡೆ ದಾಡುತ್ತಿರುವಂತೆ, ಚೀನಾದಲ್ಲಿ ಎರಡು ರಾಜಕೀಯ ಮತಗಳು ಹೊಡೆದಾಟ ನಡೆಸಿರುವವು.

★

ಮುನ್ನುಡಿ

"ಚೀನಾ ಸ್ನೇತಿಲ್ಲ, ಬಸವಳಿದಿಲ್ಲ. ಚೀನಾ ಶರಣಾಗತ. ವಾಗುವುದು ಎಂದೆಂದಿಗೂ ಸಾಧ್ಯವಿಲ್ಲ. ಇದು ಚೀನೀ ರಾಷ್ಟ್ರದ ಮತ್ತು ಜನತೆಯ ಹೋರಾಟವಷ್ಟೇ ಅಲ್ಲ; ಆಸ್ಯದ ಎಲ್ಲ ಜನರ ಹೋರಾಟ. ದಲಿತರಾಷ್ಟ್ರಗಳ ದಲಿತ ವರ್ಗಗಳ ಬಂಧವಿಮೋಚನೆಗಾಗಿ ಕೋಕವಾದ್ಯಂತ ಹೋರಾಡುತ್ತಿರುವ ವೀರಸೇನೆಯ ಒಂದಂಶ— ನಮ್ಮ ಯೋಧರ ಪಡೆ."

"ಚೀನಾವನ್ನು ಬಗ್ಗುಬಡಿಯುವುದರಲ್ಲಿ 'ಜಪಾನು ಯಶಸ್ವಿಯಾದರೆ, ಆಸ್ಯದ ಜನಾಂಗಗಳೆಲ್ಲ ಇನ್ನೆಷ್ಟೋ ಕಾಲ ಪರಾಧೀನತೆಯಲ್ಲಿ ನರಳಬೇಕಾಗುವುದು."

[—೧೯೩೭ ನವಂಬರ್ ೩೦ರಂದು, ಚೀನಾದ ಕಮ್ಯೂನಿಸ್ಟ್ ಸೇನಾ ಜನರಲ್ **ಜೂ ಟೆ**, ಪಂಡಿತ ಜವಾಹರಲಾಲರಿಗೆ ಬರೆದ ಪತ್ರದಿಂದ.]

ಎಷ್ಟೋ ವರ್ಷಗಳು ದಾಟಿವೆ, ಈ ಪತ್ರ ನಮ್ಮ ದೇಶಕ್ಕೆ ಬಂದು. ಈ ಅವಧಿಯಲ್ಲೆಲ್ಲಾ ಸಂಘಟಿತ ಬಡ ಚೀನಾ-ಜೀವನ ಮರಣ ಹೋರಾಟವೆಸಗಿತು. ಚೀನೀ ಜನರು ಅಸಹನೀಯ ಯಾತನೆಯನ್ನು ಅನುಭವಿಸಿದರು; ಕೊನೆಗೆ ಜಯಶೀಲರಾದರು.

ಜಪಾನು ಶರಣು ಬಂತು; ಚೀನಾ ಬಂಧವಿಮುಕ್ತವಾಯಿತು. ಆದರೆ ಅಲ್ಲಿ ಇನ್ನೂ ಯುದ್ಧ ಮುಗಿದಿಲ್ಲ.

ಚೀನಾದಲ್ಲಿ ಈಗ ನಡೆಯುತ್ತಿರುವುದು ಅಂತರ್ಯುದ್ಧ. ಹಿಂದೂಸ್ಥಾನದೊಳಗಿನ ಕೋಮುವಾರು ವಿಷಕಲಹ ಬೇರೆ, ಚೀನೀ ಅಂತಃಕಲಹ ಬೇರೆ. ಅಲ್ಲಿ ಎರಡು ತತ್ತ್ವ—ಎರಡು ರಾಜ್ಯಪದ್ಧತಿಗಳೊಳಗೆ ತಿಕ್ಕಾಟ ನಡೆದಿದೆ.

ಹಿಂದುಸ್ತಾನದ ಪೂರ್ವಕ್ಕಿರುವ ಆ ಹಿರಿಯ ಭ್ರಾತೃದೇಶದಲ್ಲಿ, ಎರಡು ಚೀನಾಗಳಿವೆ. ಕಮ್ಯೂನಿಸ್ಟ್ ಚೀನಾ ಮತ್ತು ಕೂಮಿಂಟಾಂಗ್ ಚೀನಾ. ಕಮ್ಯೂನಿಸ್ಟ್ ಚೀನಾ ಇಡೀ ದೇಶದ ಮೂರರಲ್ಲಿ ಒಂದಂಶದಷ್ಟಿದೆ. ಗುಡ್ಡಗಾಡು. ಅದರೆ ಅಲ್ಲಿ ಶ್ರಮ ಜೀವಿಗಳ ಕೆಂಪು ಬಾವುಟ ಹಾರಾಡುತ್ತಿದೆ. ಅಲ್ಲಿಯ ಬಡಜನರ ಸಮುದಾಯ, ತನ್ನದೇ ಆದ ಪಂಚಾಯತಿ ಪದ್ಧತಿಯಂತೆ ಜೀವಿಸುತ್ತಿರುವುದು. ಅದು ನಿಜವಾದ ಸಮತಾವಾದವಲ್ಲ. ಮೋಸ-ಶೋಷಣೆಗಳಿಲ್ಲದ ಹೊಸಸಮಾಜವನ್ನು ಸೃಷ್ಟಿಸುವ ಮಾನವ ಯತ್ನ—ಆ ಯತ್ನದಲ್ಲಿ ಮೊದಲ ಮೆಟ್ಟಿಲು. ಕೂಮಿಂಟಾಂಗ್ ಚೀನಾವನ್ನು 'ರಾಷ್ಟ್ರೀಯ ಚೀನಾ' ಎಂತಲೂ ಕರೆಯುತ್ತಾರೆ. ಮಾರ್ಷಲ್ ಚಿಯಾಂಗ್ ಕೈಶೇಕ್ ಈ ರಾಷ್ಟ್ರದ ಹಿರಿಯ ಅಧಿಕಾರಿ. ಇಲ್ಲಿ ಸಮತಾವಾದವನ್ನು ವಿರೋಧಿಸುವವರಿಗೆ ಪರಿಪೂರ್ಣ ಸ್ವಾತಂತ್ರ್ಯವಿದೆ.

ಹಿನ್ನೆಲೆ

ನಿನ್ನೆ ಮೊನ್ನೆಯಿಂದಲ್ಲ, ಕಳೆದ ಹತ್ತೊಂಬತ್ತು ವರ್ಷಗಳಿಂದ ಈ ಘರ್ಷಣೆ ನಡೆದುಬಂದಿದೆ.

ಚೀನಾದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ, ಸಮತೆಯ ಪುರೋಗಮನದ ಭಾವನೆಯನ್ನು ತಮ್ಮ ಜನರಲ್ಲಿ ಹುಟ್ಟಿಸಿದ, "ಚೀನಾದ ತಂದೆ"—ಕ್ರಾಂತಿಕಾರಿ ಡಾ.ಸೂನ್ ಯಾತ್-ಸೇನ್—೧೯೨೫ರಲ್ಲಿ ತೀರಿಕೊಂಡರು. ರಾಷ್ಟ್ರದ ಆ ಕುರ್ಚಿಯ ಉಪಯೋಗಿಸಿ, ಚೀನಾದ ಶ್ರೀಮಂತರು ತಮ್ಮ ಕಾರ್ಯ ಸಾಧಿಸಿಕೊಂಡರು. ಎರಡೇ ವರ್ಷಗಳಲ್ಲಿ ತೀಕ್ಷ್ಣತೆ ಬಲವಾಯಿತು. ಚೀನಾದಲ್ಲಿ ಎರಡು ಬಣಗಳಾದುವು. ಬಲಪಕ್ಷೀಯರಿಗೆ ಚಿಯಾಂಗ್ ಕೈಶೇಕ್ ಮೆಚ್ಚುಗೆಯ ನಾಯಕರಾದರು. ಎಡಪಕ್ಷದವರನ್ನು ಬೇಟೆಯಾಡುವುದು ತಡವಿಲ್ಲದೆ ಆರಂಭವಾಯಿತು.

ಹಿಂದೆ ಸೂನ್‌ಯಾತ್‌ಸೇನರ ಶಿಷ್ಯರೆನಿಸಿಕೊಂಡಿದ್ದ ಜಿಯಾಂಗರು, ತಮ್ಮ ಗುರುವಿನ ಕ್ರಾಂತಿಕಾರಿ ಧ್ಯೇಯ-ಧೋರಣೆಗಳನ್ನೆಲ್ಲ ಗಾಳಿಗೆ ತೂರಿದರು. **ನಾನ್‌ಕಿಂಗ್** ನಗರವು ಪ್ರತಿಗಾಮಿಗಳ ರಾಜಧಾನಿಯಾಯಿತು.

ನಾನ್‌ಕಿಂಗಿನಿಂದ ತಲೆಮರೆಸಿಕೊಂಡ ಸಮತಾವಾದಿಗಳೂ ಅವರ ಹಿಂಬಾಲಕರೂ, ದಕ್ಷಿಣ ಚೀನಾದ **ಕಿಯಾಂಗ್ಸಿ**ಯಲ್ಲಿ ತಳವೂರಿ, ತಮ್ಮದೇ ಆದ ಪ್ರತ್ಯೇಕ ರಾಜ್ಯ ಕಟ್ಟಿದರು.

ಚಿಯಾಂಗ್, ಕಮ್ಯೂನಿಸ್ಟರನ್ನು ನಿರ್ನಾಮ ಮಾಡುವುದಾಗಿ ಘೋಷಿಸಿ, ಸಮತಾವಾದದ ವಿರುದ್ಧ 'ಧರ್ಮಯುದ್ಧ' ಆರಂಭಿಸಿದರು. ಆದರೆ ಚಿಯಾಂಗ್, ಸಂಖ್ಯೆಯಲ್ಲಿ ಚಿಕ್ಕದಾಗಿದ್ದ ಕೆಂಪುಸೇನೆಯನ್ನಷ್ಟೆ ಅಲ್ಲ, ಜನರ ಬೆಂಬಲಕ್ಕೆ ನಿಂತಿದ್ದ ಶೈತಸಮುದಾಯವನ್ನೂ ಇನಿಸಿಸೇಕಾಯಿತು. ಆದರೆ ಚಿಯಾಂಗರ ಸೈನ್ಯಶಕ್ತಿಯು ಎಷ್ಟೊ ಹೆಚ್ಚಾಗಿದ್ದ ಕಮ್ಯೂನಿಸ್ಟರ ಜಟ ನಡೆಯಲಿಲ್ಲ.

ಹಿಂಪಯಣ

೧೯೩೪ರಲ್ಲಿ ಸಮತಾವಾದಿಗಳು ನಾನಾಕಿಂಗನ್ನು ತ್ಯಜಿಸಬೇಕಾಯಿತು. ಯಾವ ಗೊತ್ತುಗುರಿಯೂ ಇಲ್ಲದೆ, ಪೆಸರು ಕೇಳಿರದ ಕಾವ್ಯ ನೋಡಿರದ ನಾಡಿಗೆ ಸಮತಾವಾದಿಗಳ ಬಳಗ ಹೊರಟಿತು. ಪಲವು ಸಾವಿರ ಚೀನೀ ಕೆಂಪ್ತ ಪಡೆಯ ಯೋಧರು, ಅವರಲ್ಲಿ ಅಚಲ ವಿಶ್ವಾಸವಿಟ್ಟಿದ್ದ—ಅವರೇ ತಮ್ಮ ಉದ್ಧಾರಕ-ರೆಂದು ನಂಬಿದ್ದ—ನಾವಿರಾರು ಜನ ಶೈತರು, ಅವರ ಹೆಂಡಿರು ಮಕ್ಕಳು. ಹೀಗೆ ಒಂದು ಲಕ್ಷ ಜನಸಮೂಹ, ರಾಷ್ಟ್ರೀಯ ಸೇನೆಗಳ ದಾಳಿಯನ್ನು ಹಗಲಿಬಿಳಿ ಇವಿಸಿಸುತ್ತ ಮುಂದೆ ಸಾಗಿತು. ಎಲ್ಲೆಡೆಗಳಿಂದಲೂ ಬೆಂಬತ್ತಿ ಬರುತ್ತಿದ್ದ ಚಿಯಾಂಗರ ಬೀಡೆ ಸೈನಿಗರಿಗೆ ಕುತ್ತಾಗಿದೆ, ಕಾಡು-ಗುಡ್ಡಗಳನ್ನು ಧಾಳಾದು ಸದಿಗಳನ್ನು ದಾಟಿ, ಕಾಲುನಡಿಗೆಯಿಂದ ದಿನಕ್ಕೆ ಹದಿನೈದ ಮೈಲುಗಳಂತೆ ಆ ಜನರು ಮುಂದೆ ಸಾಗಿದರು; ಹನ್ನೆರಡು ವಿವಿಧ ಪ್ರಾಂತಗಳನ್ನು ದಾಟಿದರು. ೬,೦೦೦ ಮೈಲು ಅವರ ಯಾತ್ರೆ ನಡೆಯಿತು. ಸಿಲ ದಿನಗಳು ಕಳೆದ ಮೇಲೆ, ಸುರಕ್ಷಿತ-ವೆಂದು ತೋರಿದ ಒಂದು ಬೆಟ್ಟದ ಪ್ರದೇಶದಲ್ಲಿ ಅವರು ತಳ-ಪೂರಿದರು.

ಚಿಯಾಂಗರ ಪ್ರತಿಜ್ಞೆ ಪೂರ್ಣವಾಗಲಿಲ್ಲ. ವಾಯವ್ಯ ಚೀನಾದ ಶಾನ್ಸಿ ಪ್ರಾಂತವನ್ನು ಸೇರಿದಾಗ, ಸಮತಾವಾದಿಗಳ ಸಂಖ್ಯೆ ಸರಿ ಆರ್ಧಕ್ಕಿಳಿದಿತ್ತು. ಶಾನ್ಸಿಯಲ್ಲಿ ಅವರು ತಮ್ಮ ಹೊಸಪದ್ಧತಿಯ ನಾಡನ್ನು ಕಟ್ಟಿದರು. ಕೋಷಕ ಭೂಮಾಲಿಕರಿಂದ, ಶತಮಾನ-ಗಳ ದಾಸ್ಯ-ಅಂಧಶ್ರದ್ಧೆಯಿಂದ, ತಮ್ಮನ್ನು ಬಂಧವಿಮುಕ್ತ-ಗೊಳಿಸಲು ಬಂದ ಸಮತಾವಾದಿಗಳನ್ನು, ಅಲ್ಲಿನ ಬೈತ ಸಮು-ದಾಯ ಸ್ವಾಗತಿಸಿತು.

ಪರರಿಗಾಗಿ ಉಳುತ್ತಿದ್ದ ಹೊಲಗಳಿಗೆ ಬೈತರು ತಾವೇ ಒಡೆಯ-ರಾದರು. ಅವರೇ ಮತಕೊಟ್ಟು ಆರಿಸಿದ ಪ್ರತಿನಿಧಿಗಳು, ಸಾಮೂಹಿಕ ಹೊಲಗಳ ಉಜಳಿತ ನೋಡಿದರು. ಪಾದಗಳನ್ನು ಬಿಗಿಯಾಗಿ ಕಟ್ಟಿ ಜಾಗಿ ನಡೆಯುತ್ತಿದ್ದ ಚೀನೀ ಹುಡುಗಿ, ಆಜ್ಞೆಗೆ ಮನೆಯಿಂದ ಹೊರಬಂದು ಗಂಡುಸಿನೊಡನೆ ಸಮಭಾಗಿಯಾಗಿ ವರ್ತಿಸಿದಳು. ನೂತನ ತಳಹದಿಯ ಮೇಲೆ ಆ ಶ್ರಮಜೀವಿಗಳು ತಮ್ಮ ರಾಜ್ಯ ಕಟ್ಟಿದರು.

ಜನಪ್ರಿಯ ನಾಯಕರು

ಮಾವೋ ತ್ಸೆ ಈ ಸಮತಾವಾದಿಗಳ ನಾಯಕರು. ಅವರ ಪಾರ್ಟಿಯ ಕಾರ್ಯದರ್ಶಿ; ನೂತನ ಚೀನೀ ಪ್ರಜಾಪ್ರಭುತ್ವದ ಅಧ್ಯಕ್ಷರು. ಜೂ ಟೆ ಚೀನೀ ಕೆಂಪುಪಡೆಯ ಸೇನಾನಿ. ವೈಯ-ಕ್ತಿಕ ಹಿತ-ಸುಖಗಳನ್ನು ಮರೆತು, ತಾವು ಸತ್ಯವೆಂದು ನಂಬಿದ ಉನ್ನತ ಧ್ಯೇಯಗಳಿಗಾಗಿ ಹೊಡೆದಾಡುವ ವಿರಾಗಿಜೀವಿಗಳ ಪೀಳಿಗೆಯವರದು. ಲೋಕವೇ ಬೆರಗುಗೊಂಡ ಸಾಹಸಮಯ ಕಾರ್ಯಗಳನ್ನು ಮಾಡಿದ ಕಾಲದಲ್ಲಿ ಅವರಿಗೆ ನಾಲ್ವತ್ತು ಕೂಡ ತುಂಬಿರಲಿಲ್ಲ.

ಅವರ ಪ್ರದೇಶದ ಜನ "ಬಂಧು ಮಾವೋತ್ಸೆ—ಬಂಧು ಜೂ ಟೆ" ಎಂದು ಅವರನ್ನು ಸಂಬೋಧಿಸುತ್ತಾರೆ. ಮಾವೋತ್ಸೆ 'ಸಮತಾವಾದಿ ಮೆದುಳು', ಜೂ ಟೆ 'ಸಮತಾವಾದಿ ಹೃದಯ' ಎಂದು ಅಲ್ಲಿಯ ಜನ ಆಡಿಕೊಳ್ಳುತ್ತಾರೆ.

ಚಿಯಾಂಗರ ಸರ್ಪಗಾವಲನ್ನು ಭೇದಿಸಿ, ಸಮತಾವಾದಿಗಳ ಗುಡ್ಡಗಾಡಿಗೆ ಹೋಗಿ ಅವರನ್ನು ಕಂಡುಬಂದ ಎಡ್ಗಾರ್ ಸ್ನೋ, ಜಾನ್ ಗಂಥರ್, ಇಸ್ರೇಲ್, ಇಸ್ಟ್ರೀನ್, ಸ್ಮೆಡ್ಲಿ ವಾರ್ಟ್-ಗಿಲ್ಡರ್, ಅನ್ನಿ ಸ್ಮೆಡ್ಲಿ — ಇವರಂಥ ಎಷ್ಟೋ ಪತ್ರಿಕೋ-ದ್ಯೋಗಿಗಳು, ಆ ಸಮತಾವಾದಿ ನಾಯಕರ ಬಗ್ಗೆ ಅಂಥದೇ ಮಾತಾಡಿದ್ದಾರೆ.

ಆ ಇಬ್ಬರನ್ನು ಜೀವಂತ ಇಲ್ಲವೆ ಗತಪ್ರಾಣರಾಗಿ ಹಿಡಿದು ತಂದವರಿಗೆ ಐವತ್ತು ಸಾವಿರ ಪವನು ಬಹುಮಾನ ಕೊಡುವು-ದಾಗಿ ಚಿಯಾಂಗ್ ಸರಕಾರ ಪ್ರಕಟಣೆ ಹೊರಡಿಸಿತ್ತು. ಆದರೆ ಆ ನಾಯಕರನ್ನು ಹಿಡಿದುಕೊಡುವುದಲ್ಲ, ಅವರಿಗೋಸ್ಕರ ಪ್ರಾಣಾರ್ಪಣ ಮಾಡಲೂ ಸಿದ್ಧ ವಿರುವ ಜನರಷ್ಟೇ ಕೆಂಪು ಚೀನಾ ದಲ್ಲಿರುವುದು!

ಅಪತ್ತಿನ ಐಕ್ಯ

ಚಿಯಾಂಗರಾಗಲಿ ಅವರ ಸರಕಾರದವರಾಗಲಿ, "ಕಮ್ಯೂ-ನಿಸ್ಟ್" ಎಂಬ ಪದವನ್ನು ಎಂದೂ ಒಪ್ಪಿಕೊಂಡುದಿಲ್ಲ. ಚೀನೀ ಸಮತಾವಾದಿಗಳನ್ನೆಲ್ಲ "ದರೋಡೆಗಾರರು" ಎಂದು ಸಂಬೋಧಿಸುತ್ತಿದ್ದರು.

ಆದರೆ ಅಂಥ ದರೋಡೆಗಾರರೊಡನೆಯೆ ಚಿಯಾಂಗ್ ಒಪ್ಪಂದ ಮಾಡಿಕೊಳ್ಳಬೇಕಾಯಿತು.

ಆ ಸ್ವಾರಸ್ಯಕರ ಘಟನೆ ಹೀಗೆ ನಡೆಯಿತು :

ಜಪಾನರು ಚೀನವನ್ನು ಆಕ್ರಮಿಸಲು ಸಿದ್ಧವಾಗಿದ್ದ ಕಾಲ. ಆದರೆ ಚಿಯಾಂಗರು ಆ ಕಡೆಗೆ ಗಮನವನ್ನೇ ಕೊಟ್ಟಿರಲಿಲ್ಲ. ಸಾಮ್ರಾಜ್ಯವಾದಿ ಜಪಾನಿಗಿಂತಲೂ ಸಮತಾವಾದಿ ಚೀನೀ-ಯರೇ ಅವರಿಗೆ ಹೆಚ್ಚಿನ ವಿರೋಧಿಗಳು. ಅವರ ಎಷ್ಟೋ ಸೇನೆಗಳು ಕಮ್ಯೂನಿಸ್ಟ್ ಪ್ರಾಂತದ ಮೇಲೆ ಧಾಳಿಮಾಡುವುದ-ರಲ್ಲೇ ನಿರತವಾಗಿದ್ದುವು. ಒಮ್ಮೆ ಚಿಯಾಂಗ್ ಅಂಥ ಒಂದು ಸೇನಾವಿಭಾಗವನ್ನು ಸಂದರ್ಶಿಸಲು ಹೋದರು. ಆ ವಿಭಾಗದ ಸೇನಾನಿ ಒಮ್ಮೆಲೆ ಚಿಯಾಂಗರನ್ನು ಬಂಧನದಲ್ಲಿಟ್ಟ! ಆತ

ಸಮತಾವಾದಿಯಾಗಿರಲಿಲ್ಲ. ಆದರೆ ಚಿಯಾಂಗರು ಕಮ್ಯೂನಿಸ್ಟರ ಜತೆ ಸೇರಿ ಜಪಾನರನ್ನು ದಿಕ್ಕರಿಸಬೇಕೆಂಬುದು ಅವನ ಇಚ್ಛೆಯಾಗಿತ್ತು. ಕಮ್ಯೂನಿಸ್ಟ್ ಪ್ರದೇಶದಿಂದಲೂ ಪ್ರತಿನಿಧಿಗಳು ಅಲ್ಲಿಗೆ ಧಾವಿಸಿದರು. ಬಯಸಿದ್ದರೆ ಯಾರಾದರೂ ಚಿಯಾಂಗರನ್ನು ಕೊಲೆಮಾಡಬಹುದಾಗಿತ್ತು. ಹಾಗಾಗದಂತೆ, ದೇಶದಲ್ಲಿ ಅರಾಜಕತೆಯುಂಟಾಗಿ ಜಪಾನರು ಒಳಗೆಬರದಂತೆ, ಕಮ್ಯೂನಿಸ್ಟರು ನೋಡಿಕೊಂಡರು.

ಚಿಯಾಂಗರು ರಾಜಧಾನಿಗೆ ಮರಳಿದರು. ತಾತ್ಕಾಲಿಕವಾಗಿ ಕಮ್ಯೂನಿಸ್ಟರ ಬೇಟೆ ತಡೆಹಿಡಿಯಲ್ಪಟ್ಟಿತು.

ವಿದೇಶೀಯ ಸಾಮ್ರಾಜ್ಯಶಾಹಿಗಿದಿರಾಗಿ ಚೀನಾವನ್ನು ಳಿಸುವ, ಜಪಾನರನ್ನು ಪ್ರತಿಭಟಿಸುವ, ಅದಕ್ಕೋಸ್ಕರ ಐಕ್ಯರಂಗವನ್ನು ರಚಿಸುವ, ದೇಶಪ್ರೇಮಿಗಳ ಕರೆಯನ್ನು ಚೀನಾದ ಕಮ್ಯೂನಿಸ್ಟರು ಕೊಟ್ಟರು. ಮನಸ್ಸಿಲ್ಲದ ಮನಸ್ಸಿನಿಂದ ಚಿಯಾಂಗರು ಐಕ್ಯರಂಗಕ್ಕೆ ಅನುಮತಿ ಕೊಡಬೇಕಾಯಿತು.

ಐರಂಗ ರ್ಗಳಲ್ಲಿ ರೂಪುಗೊಂಡಿತು.

ಪ್ರತಿಗಾಮಿ ಧೋರಣ

ಈ ಆಪತ್ಕಾಲದ ಐಕ್ಯವೇನೋ ಆರೇಳು ವರ್ಷ ಉಳಿಯಿತು. ಅಷ್ಟು ಕಾಲದಲ್ಲೂ ಅಪಾರ ತ್ಯಾಗ ಮಾಡಿದವರು ಕೆಂಪು ಪಡೆಯ ಯೋಧರು—ಎಂದು ಇತಿಹಾಸ ಹೇಳುತ್ತದೆ. ಅವರ 'ಗರಿಲಾ' ಹೋರಾಟ ಲೋಕವಿಖ್ಯಾತವಾಗಿದೆ.

ಯುದ್ಧಾನಂತರ ಕಮ್ಯೂನಿಸ್ಟರು ಸುತ್ತೆ ತಲೆ ಎತ್ತಬಾರದೆಂಬ ಪ್ರಬಲ ಆಶೆ ಚಿಯಾಂಗರಿಗಿತ್ತು. ಜಪಾನರನ್ನು ಪ್ರತಿಭಟಿಸುವುದಕ್ಕಿಂತಲೂ ಹೆಚ್ಚು, ಕಮ್ಯೂನಿಸ್ಟರ ಮೇಲೆ ಕಣ್ಣಿಡುವುದೇ ಚಿಯಾಂಗರಿಗೆ ಮುಖ್ಯವಾಗಿತ್ತು.

ಕಮ್ಯೂನಿಸ್ಟ್ ಪಡೆಗಳು ಎಷ್ಟೋ ಪ್ರಾಂತಗಳನ್ನು ಜಪಾನರಿಂದ ಮರಳಿ ಗಳಿಸಿದುವು. ಅಲ್ಲಿ ಚಿಯಾಂಗ್ ರಾಜ್ಯದ ಬದಲು ನೂತನ ಪ್ರಜಾಪ್ರಭುತ್ವ ಬಂತು.

ಚಿಯಾಂಗ ರಾಜ್ಯಭಾರವನ್ನು ಬಣ್ಣಿಸುವುದು ಬಲು ಸುಲಭ. ಹಿಂದುಸ್ಥಾನವನ್ನೂ ಚೀನಾವನ್ನೂ ಜೆನ್ನಾಗಿ ಬಲ್ಲ ಎಡ್ಗಾರ್ ಸ್ನೋ ಒಂದೆಡೆ ಹೀಗೆನ್ನಿಹೇಳಿದ್ದಾರೆ :

"ಜನರಾಲಿಸ್ಸಿಮೋ ಚಿಯಾಂಗ್ ಕೈಶೇಕ್ ದಿಲ್ಲಿಗೆ ಬಂದರು [ರ್ಗಳಲ್ಲಿ ಫೆಬ್ರುವರಿ] 'ಹಿಂದೀಯರಿಗೆ ನಿಜವಾದ ರಾಜಕೀಯ ಅಧಿಕಾರ ಕೊಡಿ' ಎಂದೆಲ್ಲ ಹೊಡ್ಡ ಪ್ರಸ್ತಾವನೆ ಕೊಟ್ಟರು. ಆದರೆ ಚೀನಾದಲ್ಲಿ ಪತ್ರಿಕಾಸ್ವಾತಂತ್ರ್ಯವೆಂಬುದೂ ಇಲ್ಲ, ವೆಂಬುದು ಚಿಯಾಂಗರಿಗೆ ಗೊತ್ತಿದೆ. ಚೀನಾದಲ್ಲಿ ಒಂದೇ ಒಂದು ನಗರಸಭೆಗಾಗಲಿ ಸ್ಥಳೀಯ ಸರಕಾರಕ್ಕಾಗಲಿ, ಜುನಾವಣೆಯಾಗಲು ಚಿಯಾಂಗ್ ಸಮ್ಮತಿ ಕೊಟ್ಟಿಲ್ಲ. ಬ್ರಿಟಿಷರನ್ನು ಕಾಂಗ್ರೆಸಿನವರು ಟೀಕಿಸುತ್ತಾರೆ; ಆದರೆ ಕಾಮಿಂಟಂಗ್ ಸರಕಾರದ ಬಗ್ಗೆ ಚುಂಕಿಂಗಿನಲ್ಲಿ [ಯುದ್ಧಕಾಲದ ರಾಜಧಾನಿ—] ಜ ಚೂ' ಎನ್ನುವಂತಿಲ್ಲ. ಕಲ್ಕತ್ತಾ, ದಿಲ್ಲಿ, ಮುಂಬಯಿಗಳಲ್ಲಿ ಕಮ್ಯೂನಿಸ್ಟರು ಕಂಠವು ಬಿರಿಯುವಂತೆ 'ಇಂಕ್ವಿಲಾಬ್ ಜಿಂದಾಬಾದ್' ಎನ್ನುತ್ತ ಕೆಂಪು ಬಾವುಟದೊಡನೆ ಮೆರವಣಿಗೆ ಹೋಗುವುದನ್ನು ನಾನು ನೋಡಿದ್ದೇನೆ ಚುಂಕಿಂಗಿನಲ್ಲಿ ಯಾರಾದರೂ ಹಾಗೆ ಮಾಡಿದರೆ, ಗುಂಡಿನೇಟಿಗೆ ಬಲಿಯಾಗುವರು!"

ಯುದ್ಧಾನಂತರ

ಯುದ್ಧ ಮುಗಿಯಿತು. "ಜನರ ಯುದ್ಧ ಇದೇ ಇದೆ. ಚೀನಾದಲ್ಲಿ ಪ್ರಜಾಪ್ರಭುತ್ವ ಬರಲಿ, ಸರ್ವಾಧಿಕಾರ ಕೊನೆಗಾಣಲಿ," ಎಂದರು ಕಮ್ಯೂನಿಸ್ಟರು. ಅವರ ಶಕ್ತಿಯೂ ಅಪರಿಮಿತವಾಗಿ ಬೆಳೆದಿತ್ತು. ಅವರ ಪ್ರದೇಶ ವಿಸ್ತರಿಸಿತ್ತು. ಮಂಚೂರಿಯದಲ್ಲಿ ರಷ್ಯದ ಕೆಲವು ಪಡೆಯೊಡನೆ ಅರೆಂಟು ದಿನ ಅವರು ಬಾಳ್ವೆ ಮಾಡಿದ್ದರು. ಸೋವಿಯೆಟ್ ರಷ್ಯದ—ಅಸ್ಯದ ಭವಿತವ್ಯ ಅವರ ಕಣ್ಣ ಮುಂದೆ ಕಟ್ಟಿತ್ತು.

"ಯುದ್ಧ ಮುಗಿದಿಲ್ಲ" ಎಂದು ಚಿಯಾಂಗರೂ ಹೇಳಿದರು. ತಮ್ಮ ವಿರೋಧಿಯೆ ಚೀನಾದ ವಿರೋಧಿ—ಎಂಬುದು ಅವರ ಅಭಿಪ್ರಾಯ. ತಮ್ಮ ವಿರೋಧಿಗಳಾದ ಸಮತಾವಾದಿಗಳ ಹುಟ್ಟಡಗಿಸಿದಾಗ ಮಾತ್ರ ತಮಗೂ ಶಾಂತಿ, ಚೀನಾಕ್ಕೂ ಶಾಂತಿ—ಎಂಬುದು ಅವರ ನಿಶ್ಚಿತ ಮತ. ಅವರ ಶಕ್ತಿಯೂ ವಿಪುಲವಾಗಿ ಬೆಳೆದಿತ್ತು. ಅಮೆರಿಕನ ಮೈತ್ರಿ ದೊರಕಿತ್ತು. ಅಲ್ಲಿಯ ಬಂಡ-

ಡೊಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಮಾಳಗಾರರು ಕಮ್ಯೂನಿಸ್ಟರ ವಿರುದ್ಧವಾಗಿ ಬೇಕಾದ ಸಹಾಯ ಕೊಡಲು ಸಿದ್ಧರಿದ್ದರು. "ಕಡ-ಆಡವು" ಒಪ್ಪಂದದಂತೆ ಸಾಮಗ್ರಿಗಳು ಚಿಯಾಂಗರಿಗೆ ಬರುತ್ತಲೇ ಇದ್ದುವು.

ಹೀಗೆ ಭೀಷಣ ಯುದ್ಧ ಮೊದಲಾಯಿತು.

ಕಾಣದ ಕೈ

ಈ ಯುದ್ಧಾನಂತರ ರಷ್ಯಾ ಅತ್ಯಂತ ಪ್ರಬಲ ಶಕ್ತಿಯಾಗಿ ನಿಂತಿದೆ ಎನ್ನುವುದು ಸ್ವತಃಸಿದ್ಧವಾದ ಮಾತು. ಇತ್ತ ಪ್ರಗತಿಪರ ಚೀನಾ, ರಷ್ಯಾದ ಮೈತ್ರಿ ಬೆಳೆಸಬಹುದು. ಆದರಿಂದ ಅಮೆರಿಕದ ಮತ್ತು ಬ್ರಿಟನ್ನಿನ ಬಂಡವಾಳಗಾರರಿಗೂ ಸಾಮ್ರಾಜ್ಯ ಶಾಹಿಗಳಿಗೂ ಅಪಾರ ಹಾನಿಯಾಗುವುದು.

ಆ ಕಾರಣದಿಂದಲೇ ಅಮೆರಿಕ, ಪಲವೊಂದು ರೂಪದಲ್ಲಿ ಚಿಯಾಂಗರಿಗೆ ನೆರವಾಗುತ್ತಿದೆ.

ಚಿಯಾಂಗ್-ಕಮ್ಯೂನಿಸ್ಟರೊಳಗೆ ಮಾತುಕತೆಯ ಪ್ರಹಸನವಾಯಿತು. ದೂರದ ಯೆನಾನ್ ನಗರದಿಂದ ಮಾವೋ ತ್ಸೆ—ತುರೋಡೆಗಾರ ಮಾವೋ ತ್ಸೆ— ಚುಂಕಿಂಗಿಗೆ ಬಂದರು. ಇತ್ತ ಮಾತು-ಕತೆ ಮುಗಿಯುವುದರೊಳಗಾಗಿಯೇ ಕಮ್ಯೂನಿಸ್ಟ ಚೀನಾವನ್ನು ಪುಡಿಪಾಡಲು ಚಿಯಾಂಗರು ಸಿದ್ಧತೆ ನಡೆಸಿದ್ದರು. ನಂಜು ಹೊರಬಿತ್ತು; ಮಾತು-ಕತೆ ಕೊನೆಗಂಡಿತು.

ಅಮೆರಿಕದ ಅಧಿಕಾರಿಗಳು ಮಧ್ಯಸ್ಥಿಕೆ ವಹಿಸುವ ಸೋಗು ಹಾಕಿಕೊಂಡು, ಸೈನ್ಯದ ಸಾಮಗ್ರಿ — ವಿಮಾನ ಪಡೆ ಹೀಗೆ ಎಲ್ಲ ಸಹಾಯವನ್ನೂ ಚಿಯಾಂಗರಿಗೆ ಕೊಟ್ಟರು.

ದಿವಂಗತ ಜೂನ್‌ಯಾತ್ ಸೇನರ ಪತ್ನಿ ಮೆಡಾಂ ಸೇನರು, ಅಮೆರಿಕನರು ಚೀನಾ ದೇಶವನ್ನು ಬಿಟ್ಟು ಹೊರನಡೆಯಬೇಕೆಂದು ಖಂಡತುಂಡವಾಗಿ ಹೇಳಿದ್ದಾರೆ. "ವಿಶ್ವಶಾಂತಿ ಬೇಕಾದರೆ ಅಮೆರಿಕನ್ ಸೇನೆಗಳು ಚೀನಾವನ್ನು ಬಿಟ್ಟು ಹೊರಡಬೇಕಾದುದು ಅತ್ಯವಶ್ಯ" ಎಂದು ಸ್ಟಾಲಿನ್ ಕೂಡಾ ಸ್ಪಷ್ಟಪಡಿಸಿದ್ದಾರೆ.

ಯುಕ್ತರಾಷ್ಟ್ರ ಸಂಘಕ್ಕೆ ಈ ಬಗ್ಗೆ ದೂರು ಬಯ್ಯಬೇಕೆಂದು ಕಮ್ಯೂನಿಸ್ಟರು ಯೋಜಿಸಿದ್ದಾರೆ.

ವಿಫಲ ಯತ್ನ

ಚಿಯಾಂಗರನ್ನು ವಿರೋಧಿಸುವವರು ಕಮ್ಯೂನಿಸ್ಟರು ಮಾತ್ರ ವಲ್ಲ. ಕಾಮಿಂಟಂಗ್ ರಾಜ್ಯದಲ್ಲೇ ಪ್ರಜಾಪ್ರಭುತ್ವ ಲೀಗ್ ಎಂಬ ಒಂದು ರಾಜಕೀಯ ಪಕ್ಷವಿದೆ. ಸೂನ್‌ಯಾತ್ ಸೇನರ ಮಗನಂಥವರು ಆ ಪಕ್ಷದ ನಾಯಕರ ವರ್ಗದಲ್ಲಿದ್ದಾರೆ. ಚಿಯಾಂಗ್ ಸರ್ವಾಧಿಕಾರವನ್ನು ಖಂಡಿಸುವ ಮೇಧಾವಿಗಳಿದ್ದಾರೆ, ಬುದ್ಧಿಜೀವಿಗಳಿದ್ದಾರೆ, ಕಲಾವಿದರಿದ್ದಾರೆ, ಮೇಲಾಗಿ ಎಚ್ಚತ್ತ ವಿದ್ಯಾರ್ಥಿ ಸಮುದಾಯವಿದೆ.

ಸಾಧ್ಯವಿದ್ದ ಕಡೆಗಳಲ್ಲಿ ಕಮ್ಯೂನಿಸ್ಟರನ್ನು ಗಮನಿಸದೆಯೆ ಚಿಯಾಂಗರು ಒಂದು ಚುನಾವಣೆ ನಡೆಯಿಸಿದರು. ಸರಕಾರಿ ರಾಜಭಕ್ತರನ್ನುಳಿದು, ಬೇರೆ ಯಾರೂ ಆ ಚುನಾವಣೆಯಲ್ಲಿ ಭಾಗವಸಹಿಲಿಲ್ಲ.

ಅಂಥ ಅಸೆಂಬ್ಲಿಯು ಅಧಿವೇಶನವೇ ಮೊನ್ನೆ ಕೂಡಿತು. ಹೊಸ ಘಟನೆಯು ರಚನೆಯಾಗುವುದೆಂದೂ ತಾವು ಅಧಿಕಾರಗದ್ದುಗೆಯನ್ನು ಬಿಟ್ಟುಕೊಡುವುದಾಗಿಯೂ ಚಿಯಾಂಗರು ಹೇಳಿದರು.

ಇದೊಂದು ನಾಟಕ. ಚಿಯಾಂಗರು ಎಂದೆಂದಿಗೂ ಅಧಿಕಾರಸ್ಥಾನ ಬಿಟ್ಟುಕೊಡುವುದಿಲ್ಲ. ಆದರೆ, ಸಮಸ್ತಾದಿಗಳ ನಿರ್ಮೂಲನದ ಕೊನೆಯ 'ಧರ್ಮಯುದ್ಧ'ದ ಪೂರ್ಣಾಹುತಿಗಾರಿಕೆಯನ್ನು ಅವರು ಹೊರುವುದು ಅಸಂಭವವಲ್ಲ.

ಹಿಂದೂಸ್ಥಾನದ ಮಧ್ಯಂತರ ಸರಕಾರದ ಸ್ಥಾಪನೆಯಾದಾಗ ನೆಹರೂ "ಜೀನಾದ ಅಂತಃಕಲಹ ಕೊನೆಗಂಡು ಪ್ರಜಾಪ್ರಭುತ್ವದ ಸ್ಥಾಪನೆಯಾಗಲಿ!" ಎಂದು ಹಾರೈಕೆ ವ್ಯಕ್ತಗೊಳಿಸಿದರು.

ಎಲ್ಲಾ ಹಿಂದೀಯರ ಎಲ್ಲಾ ಸ್ವಾತಂತ್ರ್ಯಪ್ರೇಮಿಗಳ ಹಾರೈಕೆಯೂ ಅದೇ.

ಚೀನೀ ಆಕಾಶದಲ್ಲಿ ಮಿನುಗುತ್ತಿರುವ ಕೆಂಪು ನಕ್ಷತ್ರ ಇನ್ನಷ್ಟು ಜಾಜ್ವಲ್ಯಮಾನವಾಗುವುದರಲ್ಲಿ ಸಂಶಯವಿಲ್ಲ. ಪ್ರತಿಗಾಮಿ ಸರ್ವಾಧಿಕಾರ ಕೊನೆಗಂಡು, ಹೊಸ ಚೀನಾ ರೂಪುಗೊಳ್ಳುವುದಂತೂ, ಇರುಳು ಕಳೆದ ಮೇಲೆ ಬೆಳಗಿಗೆ ಬೆಳಗಾಗುವಷ್ಟು ಖಂಡಿತ.

ನಾಲ್ವತ್ತು ವರ್ಷಗಳ ಅನುಭವದಿಂದ ಶ್ರೇಷ್ಠವೆನಿಸಿದ

ಆಯುರ್ವೇದೀಯ ಔಷಧಗಳು.

ವೈದ್ಯ ಲೋಂಢೆ ಇವರ ಜಳಜ್ವರದ ಗುಳಿಗೆ.
ಸರ್ವಪ್ರಕಾರದ ಜ್ವರಗಳಿಗೆ ಉಪಯುಕ್ತ.
ಅಮಾಂಶಗುಳಿಗೆ—ಸರ್ವಪ್ರಕಾರದ ಅಮಾಂಶದ ಮೇಲೆ ಗುಣಕಾರಿ.
ಏಜಂಟರನ್ನು ನೇಮಿಸುವುದು ಇದೆ.
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್— ವೈದ್ಯ ಪಿ. ಕೆ. ಲೋಂಢೇ ಫಾರ್ಮಸಿ,
ಸನವೇಲ—ಕುಲಾಬಾ.

ಬಡತನದ ಬಾಳು

★

'ಆನಂದಕಂದ' ಕಥಾಸಂಗ್ರಹ.

ಕನ್ನಡ ಜನತೆಯ ಜೀವನದ ನಿಜವಾದ ಚಿತ್ರ
ಇದರಲ್ಲಿ ಮೂಡಿದೆ.
ಬೇಕಾದವರು
'ಜಯಂತಿ' ಕಾರ್ಯಾಲಯಕ್ಕೆ
ಬರೆಯಿರಿ.

ಶ್ರೀಯವರೊಡನೆ
ಕೊನೆಯ ಸಂದರ್ಶನ

★

ಪ್ರೊ. ರಂ. ಶ್ರೀ. ಮುಗಳಿ, ಎಂ.ಎ., ಬಿ.ಟಿ.
ಸಾಂಗಲಿ

'ಶ್ರೀ' ಯವರು ಅಗಲಿ ಒಂದು ವರ್ಷ ಮುಗಿವುದರಲ್ಲಿದೆ. ಮರಣಕ್ಕೆ ಮೊದಲು ಅವರು ಆಡಿದ ಮಾತುಗಳೆಂದರೆ ಮನೆ-ಮಕ್ಕಳ ಯೋಗಕ್ಷೇಮವನ್ನಲ್ಲ. ಬಿದ್ದ ಕನ್ನಡದ ವಿಳ್ಗಿಯನ್ನು ಕುರಿತು; ರಾಜಕಾರ್ಯವನ್ನು ಕುರಿತು!

★

'ಬನ್ನಿ ಮುಗಳಿ ಬನ್ನಿ, ಕೂತುಕೊಳ್ಳಿ' ಮುಖದ ಮೇಲೆ ನಯವಾಗಿ ಲಾಸ್ಯವಾಡುವ ತಮ್ಮ ಅಪರೂಪವಾದ ಮುಗುಳ್ನಗೆಯಿಂದ, ಶ್ರೀಯವರು ಮಲಗಿದಲ್ಲಿಂದಲೇ ನನ್ನನ್ನೂ ನನ್ನ ಮಿತ್ರರಾದ ಧಾ. ರಾ.ಯರನ್ನೂ ಬರಮಾಡಿದರು.

ಕೆ. ಇ. ಬೋರ್ಡಿನ ಹೊಸ ಆರ್ಟ್ಸ್ ಕಾಲೇಜಿಗೆ ಪೂಜ್ಯ ಬಿ. ಎಂ. ಶ್ರೀಕಂಠಯ್ಯನವರು ಪ್ರಿನ್ಸಿಪಾಲರಾಗಿ ಬಂದ ಮೇಲೆ, ಹಲವು ಸಲ ಅವರನ್ನು ಕಂಡಿದ್ದೆ. ನಮ್ಮ ಕಾಲೇಜಿನ ಕರ್ನಾಟಕ ಸಂಘದ ಪ್ರಾರಂಭೋತ್ಸವಕ್ಕೆ ಅವರು 'ಬರುವುದಾಗದು' ಎಂದು ತಿಳಿಸಿದ ಮೇಲೆ, ಎಷ್ಟೂ ಶ್ರಮವಾಗದಂತೆ ನೋಡಿಕೊಳ್ಳುವೆನೆಂದು ಭರವಸೆ ಕೊಟ್ಟು ಕರಸಿಕೊಂಡೆ. ಆದರೆ ಅವರು ಸಾಂಗಲಿಗೆ ಬಂದ ಮೇಲೆ ಶ್ರಮವಾಗುವುದೇನು ತಪ್ಪಲಿಲ್ಲ. ನನ್ನ ಪ್ರಯತ್ನ ವಿಫಲ. ಒಂದೇ ದಿನದಲ್ಲಿ ಬೆಳಗಿನಿಂದ ಸಂಜೆಯವರೆಗೆ ಅವರು ನಾಲ್ಕು ಭಾಷಣಗಳನ್ನು ಮಾಡಿದರು. ಮಧ್ಯಾಹ್ನದ ಒಂದು ಭಾಷಣವಂತೂ ಅವರಿಗೆ ಬಹಳ ತೊಂದರೆ ಕೊಟ್ಟಿತು. ಆದರೆ ಸಾಂಗಲಿಯೂರಲ್ಲಿ, ಸಂಜೆಯ ಹೊತ್ತು 'ಉಪನಿಷತ್ತಿನಲ್ಲಿಯ ಪ್ರಾರ್ಥನೆಗಳು' ಎಂಬ ವಿಷಯವನ್ನು ಕುರಿತು ಇಂಗ್ಲಿಷಿನಲ್ಲಿ ಎರಡು ಘಂಟೆಯ ವರೆಗೆ ಅದ್ಭುತವಾಗಿ ಮಾತಾಡಿದರು. ಅದು ಬರೀ ಮಾತಲ್ಲ, ಆತ್ಮಾನುಭವದ ಗೀತವಾಯಿತು. ಆ ಮೇಲೆ ರಬಕವಿಯ ಸಂಮೇಲನದಲ್ಲಿ ಅವರನ್ನು ಕಂಡಾಯಿತು. ಮುಂದೆ ಒಂದು ವರ್ಷದ ವರೆಗೆ ಅವರ ಭೇಟ್ಟಿಯೇ ಆಗಲಿಲ್ಲ. ಆಗಬೇಕೆಂದು ಹವಣಿಸಿಯೂ ಆಗಲಿಲ್ಲ. ಆ ವರ್ಷದ ನಾಡಹಬ್ಬದಲ್ಲಿ ಮೊದಲ ದಿನದ ಉಪನ್ಯಾಸ ಗೋಕಾಕದಲ್ಲಿ ಅವರದು, ಮರುದಿನ ನನ್ನದು. ಹೀಗೆ ಕಾಣುವ ಯೋಗ ಹತ್ತಿರ ಬಂದು ತಪ್ಪಿಹೋಯಿತು ಕೊನೆಗೆ ಜನವರಿ ೫ಕ್ಕೆ ಧಾರವಾಡಕ್ಕೆ ಬಂದವನು ಕೇಳಿದೆ: ಶ್ರೀಕಂಠಯ್ಯನವರ ಮೈಯಲ್ಲಿ ಒಂದೆರಡು ತಿಂಗಳು ಸರಿಯಾಗಿರಲಿಲ್ಲ ಈಗ ಗುಣವಾಗಿದೆ—ಎಂದು ಕಾಣಬೇಕೆಂಬ ಹಂಬಲು ಹೆಚ್ಚಿತು. ಅವರ ಕಾಲೇಜಿನಲ್ಲಿ ನಾನೊಂದು ಲೆಕ್ಚರುಕೊಡಬೇಕೆಂದು ಮಿತ್ರರಾದ ಧಾ. ರಾ.ಯರು ಆಗ್ರಹಪಡಿಸುತ್ತಿದ್ದರು. ಅವರು ಆ ಕಾಲೇಜಿನಲ್ಲಿಯ ಕನ್ನಡ ಪ್ರಾಧ್ಯಾಪಕರು. 'ಶ್ರೀಯವರ ಆರೋಗ್ಯ ನೋಡಿ ಅದನ್ನು ಗೊತ್ತುಮಾಡೋಣ' ಎಂದು, ಕಾಲೇಜಿನ ಆವಾರದಲ್ಲಿಯ ಅವರ ನಿವಾಸಕ್ಕೆ ಮಧ್ಯಾಹ್ನ ಎರಡು ಘಂಟೆಗೆ ಹೋದೆ. ಆಗ ಮೇಲಿನಂತೆ ಅವರು ಬರಮಾಡಿದರು. ನಾನೂ ಧಾರಾಯರೂ ಅವರ ಮಂಜದ ಹತ್ತಿರವೇ ಕುರ್ಚಿಯಿಳಿದುಕೊಂಡು ಮಾತಾಡುತ್ತ ಕುಳಿತೆವು. ತಮ್ಮ ಶಾಲನ್ನು ಹೊದ್ದುಕೊಂಡು ಅವರು ಮಲಗಿದ್ದರು. ಮೋರೆಯ ಮೇಲೆ ಜೀವನದ ಕಳೆ ಎಷ್ಟೂ ಇರಲಿಲ್ಲ. ಇಷ್ಟೇ ಯಾಕೆ, ಈಗಳೆ ಎದ್ದು ದೊಡ್ಡ ಸಭೆಯಿದಿರು ಭಾಷಣಮಾಡಬೇಕೆಂದರೆ ಇವರು ಸಿದ್ಧರಾಗಬಹುದು ಎಂಬಂಥ ಪುಟಿಯುವ ತುಂಬುಳಿಕೆ ಅವರ ಮೊಗದಲ್ಲಿತ್ತು. ಜೀವನವೆಂತೂ ಹೋಗಿತ್ತು, ನಿತ್ರಾಣವೂ ಇರಲಿಲ್ಲ; ಆದರೆ ಆಯಾಸವಾಗಬಾರದೆಂದೋ ಮುನ್ನೆಚ್ಚರವೆಂದೋ ಮಲಗಿದಂತೆ ತೋರುತ್ತಿತ್ತು.

ಮೊದಲು ಕುಶಲಪ್ರಶ್ನೆಯಾಯಿತು. ಆ ಮೇಲೆ ನನ್ನ ಲೆಕ್ಚರಿನ ಪ್ರಸ್ತಾವ ಹೊರಟಿತು. ಆ ಹೊತ್ತಿಗೆ ಹುಡುಗರು ಜಾಸ್ತಿಯಾಗಿ ಇರಲಿಲ್ಲವೆಂದು ತಿಳಿಯಿತು. 'ಜೀಕಾದರೆ ಲೆಕ್ಚರು ಇಡಿಸಿ' ಎಂದು ಶ್ರೀಯವರು ಧಾರಾಯರಿಗೆ ಹೇಳಿದರು. ನಾನೇ ಆದೀಗ ಬೇಡವೆಂದು ರದ್ದು ಮಾಡಿಸಿದೆ. ಮುಂದೆ ಮಾತು ಸಾಗಿತು. ಬೆಳಗಾಂವಿ ಜಿಲ್ಲೆಯ ಮತ್ತು ಕನ್ನಡ ಸಂಸ್ಥಾನಗಳ ಪ್ರಮುಖ ಊರುಗಳಿಗೆಲ್ಲ ಹೋಗಿದ್ದರೂ ಶ್ರೀಯವರು ಗೋಕಾಕಕ್ಕೆ ಹೋಗಿರಲಿಲ್ಲ. ಆಂತೇ ಅಲ್ಲಿಯ ಗೆಳೆಯರ ಆಗ್ರಹದ ಕರೆಯನ್ನು ಮನ್ನಿಸಿ, ನಾಡಹಬ್ಬದ ಮೊದಲದಿನವೇ ಹೋದರು. ಅವರಿಗೆ ತೊಂದರೆಯಾಗಬಾರದೆಂದು ಒಂದು ಕಾರಿನಲ್ಲಿ ಕರೆದುಕೊಂಡು ಹೋಗಿದ್ದರು. ದಾರಿಯಲ್ಲಿ ಘಟಪ್ರಭೆಯ ತಡಿಸಲನ್ನು ನೋಡಲಕ್ಕೆ ಇಳಿದು ಹೋದರಂತೆ; ತಿರುಗಿ ಬರುವಾಗ ಕಾಲೇ ಏಳಲಿಲ್ಲವಂತೆ. ಸ್ವಲ್ಪಸ್ವಲ್ಪ ತಡೆದು ಹೇಗೋ ಮರಳಿ ಬಂದೆನೆಂದರು. ಆ ಮೇಲೆ ನಾಡಹಬ್ಬದ ಉಪನ್ಯಾಸಗಳಿಗಾಗಿ ಗದಗು, ಬಾಗಲಕೋಟೆ, ವಿಜಾಪುರ, ಸೊಲ್ಲಾಪುರ, ಪುಣೆ ಮುಂತಾದ ಸ್ಥಳಗಳಿಗೆ ಬಿರುಗಾಳಿಯಂತೆ ಸಂಚರಿಸಿ ಬಂದರು. ಅವರ ಆ ಕೊನೆಯ ಭಾಷಣಗಳು ಅತ್ಯಂತ ಆವೇಶಯುಕ್ತವಾದುವು. ಅವರಿಂದ ಕನ್ನಡಜನಕ್ಕೆ ಕೊನೆಯ ಸಂದೇಶವನ್ನೂ ಸ್ಫೂರ್ತಿಯನ್ನೂ

ಕೊಡಿಸಲು ಯಾವುದೋ ಶಕ್ತಿ ಅವರನ್ನು ಎಳೆದುಕೊಂಡು ಹೋದಂತಾಯಿತು.

'ಈ ತಿರುಗಾಟ ಹೆಚ್ಚು ಮಾಡಿ ನೀವು ಬಹಳ ಆಯಾಸ ಮಾಡಿಕೊಂಡಿರಿ' ಎಂದು ನಾನಾಡಿದೆ. ಆದರಿಂದಲೇ ಒಂದೆರಡು ತಿಂಗಳು ಅನಾರೋಗ್ಯವಾಯಿತೆಂದು ನಾನು ಸೂಚಿಸುತ್ತಿರಬಹುದೆಂದು ತಿಳಿದು ಅವರು ತಟ್ಟನೆ ಆಡಿದರು: 'ಅದಲ್ಲ ಮುಗಿ, ಆ ಸಂಚಾರಮಾಡಿಕೊಂಡು ಬಂದ ಮೇಲೆ ಒಂದು ತಿಂಗಳು ನಿಮೋನಿಯೇ ಇತ್ತೆ. ಅಷ್ಟು ದಿನ ಈ ಕಾಯಿಲೆ ಕಾಯುವೇಕಾದ್ದಿರಲಿಲ್ಲ' ಆ ಮಾತನ್ನು ನಾನು ಮುಂದುವರಿಸಲಿಲ್ಲ. ಇನ್ನೂ ಹಾಸಿಗೆಯಲ್ಲಿದ್ದಾರೆ, ಯಾವ ಮಾತನ್ನೂ ಚೀನಕೂಡದು. ಬೇಗನೆ ಹೊರಡಬೇಕು—ಎಂದೇ ನನ್ನ ವೃತ್ತಿಯಾಗಿತ್ತು. ಸ್ವಲ್ಪ ಹೊತ್ತಿನ ಮೇಲೆ ಒಂದು ಗಾಡಿಗೆ ಹೋಗಬೇಕಾಗಿಯೂ ಇದ್ದಿತೆಂದು, ಗಡಿಯಾಳ ನೋಡುತ್ತಲೇ ಇದ್ದೆ.

ತಮ್ಮ ಕಾಲೇಜಿನಲ್ಲಿ ಬಿ.ಎ. ವರ್ಗಗಳನ್ನು ತೆರೆಯುವ ಬಗೆ ಮುನಿಸಿಪಲ್ಟಿಗೆ ಅರ್ಜಿಹಾಕಿದ ಸಂಗತಿಯನ್ನು ಅವರು ಹೇಳಿದರು. ಅಷ್ಟಿಗಿಂತ ಸಾಮಾನ್ಯಕವೆ ಈಗ ವಿದ್ಯಾರ್ಥಿಗಳಲ್ಲಿ ಒಲವು ಹೆಚ್ಚಿರುವುದರ ಸಾಕು ಬಂತು. 'ವಿಜ್ಞಾನ ವಿಭಾಗವನ್ನು ಬೇರೆಡೆ ಯಾವ ವಿದ್ಯಾಲಯವೂ ಇಂದು ಬೆಳೆಯುವುದು ಅಕ್ಕೆ ಎನ್ನುವುದಾಯಿತು. ಈ ಹೊತ್ತಿಗೆ, ಇಂಗ್ಲಿಷ್, ಕನ್ನಡ, ಸಂಸ್ಕೃತ ಮುಂತಾದ ವಿಷಯಗಳನ್ನು ಓದುವಲ್ಲಿ ಮತ್ತು ಅವುಗಳ ಪ್ರಯೋಜನ ಪಡೆಯುವ ವಿಷಯದಲ್ಲಿ ವಿದ್ಯಾರ್ಥಿಗಳ ಅನಾಸ್ಥೆ ಎಷ್ಟೆಂಬುದನ್ನು ವಿವರಿಸುತ್ತ ಅವರು ಮಾತಾಡಿದರು. ತರುವಾಯ 'ನನ್ನ 'ರನ್ನನ ಕೃತಿರತ್ನ' ಪುಸ್ತಕಕ್ಕೆ ತಾವು ಮುನ್ನುಡಿ ಬರೆಯಲೊಪ್ಪಿದ್ದು ತಿಳಿದು ಸಂತೋಷವಾಯಿತು. ಪ್ರಕಾಶಕರು ಪ್ರಕಟನೆಯ ದಿನವೊಂದನ್ನು ಗೊತ್ತುಮಾಡಿದ್ದಾರೆ. ಅಷ್ಟರೊಳಗೆ ನೀವು ಬರೆಯುವುದು ಎಷ್ಟು ಮಟ್ಟಿಗೆ ಸಾಧ್ಯವೆಂದು ನಾನೇ ಮುಂದಾಗಿ ನಿಮಗೆ ಒತ್ತಿಯಲಿಲ್ಲ' ಎಂದೆ.

'ಸರಿ, ತಪ್ಪೇನು? ಅದರ ಕೆಲವು ಅಚ್ಚಾದ ಪ್ರಟಗಳನ್ನು ತರಿಸಿ ಓದಿದ್ದೇನೆ. ಸರ್ವಸಂಗ್ರಹವಾಗಿ ಸ್ವತಂತ್ರ ದೃಷ್ಟಿಯಿಟ್ಟು ಕೊಂಡು ಬರೆದಿದ್ದೀರಿ. ಗದಾಯುದ್ಧದ ಮೇಲೆ ಮಲ್ಲಿನಾಥ ಟೀಕೆಯಂತಿದೆ ಒಳ್ಳೆಪಣಕ್ಕೆ' ಎಂದರು.

'ತಾವು ಗದಾಯುದ್ಧವನ್ನು ಓದಿ ತಿಳಿದವರು. ನನ್ನ 'ಕೃತಿರತ್ನ' ವನ್ನು ಎಲ್ಲ ಓದಿದ ಮೇಲೆ ತಮ್ಮ ಅಭಿಪ್ರಾಯ ನನಗೆ ಬೇಕು.'

'ಅಯ್ಯೋ, ಇಂಗ್ಲಿಷ್ ವ್ಯಾಸಂಗದಲ್ಲಿ ನಾನು ಆಯುಷ್ಯ ಕಳೆಯಬೇಕಾಯ್ತು. ಕನ್ನಡ ಓದಲು ನಿಮಗಿದ್ದ ಸಂಧಿ ನನಗೆ ದೊರೆಯಲಿಲ್ಲ. ಮುನ್ನುಡಿಯನ್ನು ಸಂತೋಷದಿಂದ ಬರೆಯುತ್ತೇನೆ.'

೮ ಸುಮಾರಿಗೆ ಶ್ರೀಯವರು ತಮ್ಮ ಮಗಳನ್ನು ಕರೆದು ನಾವು ಬಂದದ್ದು ತಿಳಿಸಿ, ಚಹತರಲು ಹೇಳಿದರು. ಚಹ ಬಂದಿತು, ಅದನ್ನು ತಕ್ಕೊಳ್ಳುತ್ತಲೆ ಮುಂದೆ ಮಾತು ನಡೆದುವು. 'ಈಗ ನನಗೆ ಚೆನ್ನಾಗಿ ತಿರುಗಾಡುವಂತಾಗಿದೆ. ಸೋಮವಾರದಿಂದ ಕ್ಲಾಸುಗಳಿಗೆ ಪಾಠ ಹೇಳಬೇಕೆಂದಿದ್ದೇನೆ' ಎಂದರು. ನಾವು ಅವರನ್ನು ಕಂಡದ್ದು ಶನಿವಾರ ಜನವರಿ ೫ನೆಯ ತಾರೀಖಿನ ದಿನ. ಒಂದೆರಡು ದಿನದಲ್ಲಿಯೆ ಅವರ ಹುಟ್ಟುಹಬ್ಬವನ್ನು ಮಾಡುವ ಸಿದ್ಧತೆ ಮನೆಯಲ್ಲಿ ನಡೆದಿತ್ತು. ಕಾಯಿಲೆಯಿಂದ ಎದ್ದು ಅವರು ಮೊದಲಿನಂತೆ ಓಡಾಡುವರೆಂದು ಮುಕ್ಕಳ ಹಾಗೂ ಮೊಮ್ಮಕ್ಕಳ ಮುಖದಲ್ಲಿ ಸಂತೋಷ ಸೂಸುತ್ತಿತ್ತು.

ಮಾತಿಗೆ ಮಾತು ಬಂದು ಶ್ರೀಯವರೆಂದರು: 'ಮದ್ರಾಸ ಸಮ್ಮೇಲನಕ್ಕೆ ಈ ಸಲ ನಾನು ಹೋಗಲಿಲ್ಲ. ಮಿತ್ರರು ಬಹಳ ಕರೆದರು. ದೇಹಸ್ಥಿತಿ ಹೋಗಗೊಡಲಿಲ್ಲ. ನನ್ನ ಮನಸ್ಸೆಲ್ಲಾ ಅಲ್ಲೇ ಇತ್ತು. ಪರಿಷತ್ತಿನ ಸಾಮಾನ್ಯ ಅಧಿವೇಶನದಲ್ಲಿ, ನಮ್ಮ ನಾಡನ್ನು ಕೆಲವು ಪ್ರದೇಶಗಳಾಗಿ ಹಂಚಿ ಪ್ರದೇಶಸಮಿತಿಗಳನ್ನು ಸ್ಥಾಪಿಸಬೇಕೆಂದು ಗೊತ್ತಾಯಿತಂತೆ. ಅದು ನನಗೆ ಸಂತೋಷದ ವಿಷಯ.'

'ನಿಜ. ನಿಮ್ಮ ಬಹುದಿನದ ಕನಸು ಈಗ ನನಸಾಯಿತು' ಎಂದೆ.

ಈ ವಿಷಯ ಮುಗಿದೊಡನೆ 'ನಿಮ್ಮ ನಾಡಹಬ್ಬದ ಲೆಕ್ಕರುಗಳ ವಿಷಯ ಮತ್ತು ಅದರ ಪ್ರತಿಕ್ರಿಯೆ ನಾ ಸ್ವಲ್ಪ ಮಟ್ಟಿಗೆ ಕೇಳಿದ್ದೇನೆ' ಎಂದು ನಾನು ಸಹಜವಾಗಿ ಆಡಿದೆ. ಅದಕ್ಕೆ ಅವರು ತಾವು ಲೆಕ್ಕರುಗಳಲ್ಲಿ ಹೇಳಿದ ಅಭಿಪ್ರಾಯವನ್ನು ಸಂಗ್ರಹಿಸಿ, ಮತ್ತೆ ಅದರ ಮೇಲೆ ವಿವರಣೆ ಮಾಡುತ್ತ ಆಡಿದರು. ಈ ಈ ಕೊನೆಯ ಮಾತೇ ಬಹಳ ಹರಡಿಕೊಂಡು, ಅವರ ತೀವ್ರವಾದ ವಿಚಾರಧಾರೆಯನ್ನೂ ಧಾರಾಳವಾದ ವಾಗ್ಧಾರೆಯನ್ನೂ ಹರಿಯಿಸಿತು. ಆದರೂ ಅವರು ಸ್ವರವನ್ನೆತ್ತರಕ್ಕೆ ಒಯ್ಯದೆ ಮುಖದಲ್ಲಿ ಕೆಂಪು ತಾರದೆ ಇಳಿತರದಲ್ಲಿಯೆ ಮಾತಾಡಿದರು: 'ಇಲ್ಲಿ ನೋಡಿ, ನಮ್ಮ ಕನ್ನಡ ನಾಡಿನಲ್ಲಿ ಕಾಂಗ್ರೆಸಿಗರು ಎಂಥ ತ್ಯಾಗಮಾಡಿದ್ದಾರೆ, ಸೇವೆಮಾಡಿದ್ದಾರೆ—ದೇಶದ ಸಲುವಾಗಿ! ಆದರೆ ರಾಷ್ಟ್ರೀಯ ಸಭೆಯ ಕ್ಯಾಬಿನೆಟ್ಟಿನಲ್ಲಿ ಅವರಿಗೆ ಸ್ಥಾನವಿಲ್ಲ. ಅದನ್ನವರು ಬೇಡುವುದಿಲ್ಲ. ಏಕೀಕರಣದ ಕೂಗನ್ನು ಮೇಲಿನ ವರೆಗೆ ಹೋಗಿ ಒತ್ತಿ ಹೇಳಿ ಮುಟ್ಟಿಸುವುದಿಲ್ಲ. ಇದನ್ನು ಮಾಡಿ ಎಂದು ನಾ ಹೇಳಿದ್ದು. 'ಆಂಧ್ರ-ಕರ್ನಾಟಕ ಒಂದೇ ಪ್ರಾಂತವಾಗಲಿ' ಎಂದು ಪಟ್ಟಾಭಿಯವರು ಇಲ್ಲಿ ಬಂದು ಹೇಳಿದಾಗ, ನಾ ಎದ್ದು ಹೋಗಿ ಹೇಳಬೇಕೆಂದು ಮಾಡಿದ್ದೆ. ಇವರ ಭಾಷಾಸ್ಪರ್ಧೆಯ ಪ್ರಾಂತರಚನೆಯ ತತ್ತ್ವವೆಲ್ಲಿ ಹೋಯಿತು?... ತತ್ತ್ವ ಎಲ್ಲಿದೆ? ಮಹಾತ್ಮರಂಥವರೂ ಸುಭಾಸರು ಅಧ್ಯಕ್ಷರಾಗಿ ಆರಿಸಿ ಬಂದರೆ, ಅದು ತಮ್ಮ ವೈಯಕ್ತಿಕ ಸೋಲು ಎಂದರು. ಕಾಂಗ್ರೆಸ್ ಪ್ರಮುಖರು ಅವರನ್ನು ಹೊರಗೆ ಹಾಕಿದರು. ಈಗ ಅವರಿಗೆ 'ಸ್ವಾತಂತ್ರ್ಯವೀರ' ಎನ್ನುತ್ತಿದ್ದಾರೆ. ಈ ರಾಜಕಾರಣ ನಮಗೆ ತಿಳಿಯುವುದಿಲ್ಲವೇ? ತತ್ತ್ವ ಎಲ್ಲಿದೆ?' ಈ ರೀತಿ ಮಾತಾಡಿ, ಒಂದೆರಡು ನಿಮಿಷತಡೆದು ಕೊನೆಗೆ 'ನನಗೆ ಗೊತ್ತಿದೆ, ನಾನೀಗ ತಲೆಕಾಯಿಸಿಕೊಳ್ಳಬಾರದು' ಎಂದು ಸುಮ್ಮನಾದರು.

ಎರಡುವರೆಯಾಯಿತು. ಗಡಿಯಾರ ನೋಡಿ ನಾನು ಹೊರಡಲೆದ್ದೆ. ಶ್ರೀಯವರು ತಮ್ಮ ಹಾಸಿಗೆಯಲ್ಲಿ ಮಲಗಿದಲ್ಲಿಯೆ

ಬಂದು ಬಿದ್ದಂತೆ ಮಾಡಿ, ನನ್ನ ಕೈ ಕುಲುಕಿ ಬರಗಿದರು. 'ನಾನು ಹೋಗಿ ಬರಲೇನೆ' ಎಂದು ಹೇಳಿ ಹೊರಟೆ. ಧಾರಾಯರೂ ನಾನೂ ಅವರ ಮನೆಯ ಹೊರಗೆ ಹೋಗಿ ಒಂದು ಮಿನಿಟು ಆಗಿತ್ತೋ ಇಲ್ಲವೊ, ಅಷ್ಟರಲ್ಲಿ 'ಮಂಗಳಿಯಪರೇ ಬನ್ನಿ' ಎಂಬ ಕೂಗು ಕೇಳಬಂತು. ಅದು ಶ್ರೀಯವರ ಕುರುಡ ಮಗನಿಂದ ಬಂದ ಕರೆ. ಇನ್ನೇನೋ ಹೇಳುವುದನ್ನು ಹೇಳಲೆಂದು ಕರೆದ-ರೆಂದು ಭಾವಿಸಿ, ನಾವು ಹೋಗಿ ನೋಡುತ್ತೇವೆ, ಅವರು ಗೋಣು ಚಿಲ್ಲಿ ಕಣ್ಣು ಮುಚ್ಚಿ ಬಿಟ್ಟಿದ್ದರು.

ಡಾಕ್ಟರರನ್ನು ಸಾಧ್ಯವಾದಷ್ಟು ಬೇಗನೆ ಕರೆದು, ಎಲ್ಲ ಉಪ-ಚಾರ ಮಾಡಿಯಾಯಿತು. ಆದರೆ ಒಮ್ಮಿಂದೊಮ್ಮೆಲೆ ಹೃದಯ ಕ್ರಿಯೆ ನಿಲ್ಲಿಸಿ ಮೃತ್ಯು ಅವರನ್ನು ತನ್ನ ಪಕ್ಷಕ್ಕೆ ತೆಗೆದುಕೊಂಡು ಬಿಟ್ಟಿತ್ತು. ಬರಸಿಡಿಲೆರಗಿದ ಮರದ ಗೂಡಿನೊಳಗಿನ ಹಕ್ಕಿ-ಹಿಂಡು ಕಿರುಚುವಂತೆ, ಮನೆಮಕ್ಕಳೆಲ್ಲ ಗೊಳೋ ಎಂದು ಅಳ-ತೊಡಗಿದರು. ಕಾಲೇಜಿನ ವಿದ್ಯಾರ್ಥಿಗಳು, ಗುರುಗಳು, ಊರ ಹಿರಿಯರು ಬರಹತ್ತಿದರು. ಎಲ್ಲರ ಮುಖದ ಮೇಲೆ ದುಃಖದ ಕಾರ್ಮೋಡ ಕವಿಯಿತು. ಆದರೆ ಆ ಕುರುಡ ಮಗನೆಂಥ ವೇದಾಂತಿ! ಅಕ್ಕನಿಗೂ ಸಣ್ಣ ಪುಟ್ಟ ಹುಡುಗರಿಗೂ 'ಸಮಾಧಾನ ತಂದುಕೊಳ್ಳಿ' ಎಂದು ತಿರುತಿರುಗಿ ಹೇಳುತ್ತ, ತನ್ನ ಕಣ್ಣಲ್ಲಿ ತೊಟ್ಟು ಹನಿಯಿಲ್ಲದೆ ಕಂಠದಲ್ಲಿ ಉಬ್ಬಿಲ್ಲದೆ, ಗೊಮ್ಮಟನಂತೆ ಅತ ನಿಂತಿದ್ದಾನೆ. ತನಗೆ ಸರ್ವಸ್ವವಾದ ಜೀವನಧಾರವಾದ ತಂದೆ ಕೈಬಿಟ್ಟು ಹೋಗಿರುವಾಗ, ಕುರುಡನಾದರೂ ಎಲ್ಲ ತಿಳಿ-ವಳಿಕೆಯುಳ್ಳ ಬೆಳೆದ ಮಗನು ತೋರಿದ ನಿಶ್ಚಲತೆ ನನ್ನನ್ನು ಬೆರಗುಗೊಳಿಸಿತು. 'ಇದು ಪ್ರತ್ಯಕ್ಷ ಕೃತಿಯಲ್ಲಿ ಮಾಡಿ ತೋರಿಸಿದ ವೇದಾಂತ' ಎಂದುಕೊಂಡೆ. 'ಶ್ರೀಯವರು ಕಂಡ ಜೀವನದ ಒಳಗಣ್ಣು ಈ ಪುತ್ರರತ್ನದಲ್ಲಿದೆ' ಎಂದು ಅಂಥ ಶೋಕಪ್ರಸಂಗ-ದಲ್ಲಿಯೂ ನನ್ನನ್ನು ನಾನು ಸಂತವಿಸಿಕೊಂಡೆ.

* * *

ಪೂಜ್ಯರಾದ ಬಿ. ಎಂ. ಶ್ರೀಕಂಠಯ್ಯನವರು ತೀರಿ ಒಂದು ವರ್ಷವಾಗುತ್ತ ಬಂತು. ೧೯೪೯ನೆಯ ಜನವರಿ ೫ನೆಯ ದಿನಾಂ-ಕಕ್ಕೆ ಅವರ ಪುಣ್ಯತಿಥಿ ಬರುತ್ತದೆ. ಕನ್ನಡ ನಾಡೆಲ್ಲ ಅಂದು ಅವರ ಪುಣ್ಯಸ್ಮರಣೆಯನ್ನು ಮಾಡಬೇಕು. ಹೊಸ ಕರ್ನಾಟಕದ ನಿರ್ಮಾಣಕರ್ತರಲ್ಲಿ ಒಬ್ಬರೆಂದು ಅವರನ್ನು ನೆನೆಯಬೇಕು. ಈ ಸಮಯದಲ್ಲಿ ಅವರ ಜೀವನಚರಿತ್ರೆಯನ್ನೂ ವ್ಯಕ್ತಿತ್ವವನ್ನೂ ತಿಳಿದುಕೊಳ್ಳಬೇಕೆಂಬ ಕುತೂಹಲವು ಸಮಸ್ತ ಜನದಲ್ಲಿ ಹುಟ್ಟು-ವುದು ಸಹಜವಾಗಿದೆ. ಯಾವುದೋ ಒಂದು ಯೋಗಾಯೋಗ-ದಿಂದ ಅವರೊಡನೆ ಕೊನೆಯ ಸಂದರ್ಶನ ನನಗೆ ಲಭಿಸಿತು. ಈ ಸಂದರ್ಶನದ ನಿವೇದನವು ಅವರ ವಿಷಯ ತಿಳಿಯಬಯಸುವವ-ರಿಗೆ ಓದತಕ್ಕುದಾಗಬಹುದೆಂದು, ಇದರಲ್ಲಿ ಅದನ್ನು ಮೂಡಿಸಿ-ದ್ದೇನೆ. ಆದಾದ ಒಂದೆರಡು ದಿನದಲ್ಲಿ ಗುರುತುಹಾಕಿದ ಟಿಪ್ಪಣಿ-ಗಳ ನೆರವಿನಿಂದ ಇದನ್ನು ಆಣಿಗೊಳಿಸಿದೆ. ಆಬರೆ ಎಲ್ಲ ಮಾತು-ಗಳು ಅಜೇ ಪರಿವಿಡಿಯಲ್ಲಿ ಬಂದಿರುವುವೆಂದು ನಾ ಹೇಳಲಾರೆ ಸಾರವೆಂದು ನಾ ತಿಳಿದ ಭಾಗ ಮಾತ್ರ ಬಂದಿದೆ. ನಡೆದ ಸಂವಾದವು ಇಂಗ್ಲಿಶ್-ಕನ್ನಡ ಎರಡರಲ್ಲಿ ನಡೆದರೂ, ಇಲ್ಲಿ ಎಲ್ಲ-ವನ್ನೂ ಕನ್ನಡದಲ್ಲಿ ಕೊಟ್ಟಿದೆ.

ಶ್ರೀಯವರ ತ್ಯಾಗ-ಸೇವೆಗಳಿಂದ ಕನ್ನಡಜನಕ್ಕೆ ಚಿರಂತನ-ವಾದ ಸ್ಫೂರ್ತಿ ದೊರೆಯಲಿ, ಕನ್ನಡವೆಲ್ಲ ಒಂದಾಗಲೆಂಬ ಅವರ ಕನಸು ಬೇಗ ಸತ್ಯಸೃಷ್ಟಿಗೆ ಇಳಿದು ಬರಲಿ!

'ಶ್ರೀ' ಅವರಿಗೆ :—

ಶ್ರೀ. ದತ್ತಾತ್ರೇಯ ಕುಲಕರ್ಣಿ, ಧಾರವಾಡ

ಸಿರಿಗನ್ನಡವೆ ಶ್ರೀಯೊ, ಶ್ರೀಯೆ ಸಿರಿಗನ್ನಡವೊ!
ಎಂಥ ತಾದಾತ್ಮ್ಯ ನಿಮ್ಮದು ಗುರುವೆ ನುಡಿಯೊಡನೆ!
ಬಿಳಿಜನರ ನುಡಿಯಲ್ಲಿ ನೀವು ಗಳಿಸಿದ ಕೀರ್ತಿ
ಕರುನಾಡ ಸಂಸ್ಕೃತಿಗೆ ಗಾಳಿ-ಬೆಳಕಾಗಿತ್ತು!
ಈ ಬಿಡಗನಾ ನುಡಿಗೆ ಆ ತೊಡವನೀ ನುಡಿಗೆ
ಇಡಿಸಿ ಸಂತಸಗೊಂಡು, ಜನಕೆ ಸಂತಸ ತಂದು,
ಹರಿದು ಹಂಚಿದ ನಾಡ ಜಾಳಿನಲಿ ನೀವ್ ಮಿಂದು,
ಜನಕೆ ನೀಡಿದ ಮಾತು ಜೀವಜೇತನವಾಯ್ತು!
ತನ್ನದೆನುವುದನೆಲ್ಲ ನಾಡ ಜನತೆಗೆ ಎರೆದು
ನಾಡಬಾಳುವೆಯಲ್ಲಿ ಒಂದಾಗಿ ನೀವ್ ಬೆರೆದು,
ಸದ್ದಿಲ್ಲದೊಲು ಸೇವೆಗೆಯ್ವ ಪರಿಯನು ಕಲಿಸಿ
ಗೆದ್ದು ನಡೆದಿರಿ ನೀವು ನಾಡಜನತೆಯ ಮನವ.
ನಾಡಜಾಳಿಗೆ ಉಸಿರನಿತ್ತು, ನಡೆದಿರಿ ನೀವು,
ಕನ್ನಡದ ಸಿರಿ ಕಳಚಿತೆನ್ನಬೇಕೇ ನಾವು?

೧೯೪೬ರಲ್ಲಿ ಕನ್ನಡ ಸಾಹಿತ್ಯದ ಪ್ರಗತಿ

ಶ್ರೀ. ಎಚ್. ಎಲ್. ಫಾಟ್ಗೇಲ, ಎಂ.ಎ, ಬಿ.ಕಾಮ್, ಮುಂಬಯಿ

★

ಸಾಹಿತ್ಯ ನಿರ್ಮಿತಿಯ ದೃಷ್ಟಿಯಿಂದ ಕರ್ನಾಟಕದಲ್ಲಿ ಈ ವರ್ಷ ಸುಕಾಲದ್ದೆಂದೇ ಹೇಳಬಹುದು. ಆದರೆ ನಿರಿಕ್ಷಣಮುಖವಾದ ಅಭ್ಯಾಸ, ವಿಷಯ ವೈವಿಧ್ಯಗಳ ಕೊರತೆ ಇನ್ನೂ ಕಡಿಮೆಯಾಗಿಲ್ಲ.

★

ಈ ವರುಷದ ಸಾಹಿತ್ಯಸೃಷ್ಟಿಯನ್ನು ವಿಹಂಗಮದೃಷ್ಟಿಯಿಂದ ನೋಡಲಾಗಿ, ಆದರ ನೈವಿಧ್ಯ ಮತ್ತು ವೈಪುಲ್ಯಗಳಿಗಾಗಿ ಹರುಷವೂ ಹುರುಪೂ ಎನಿಸುತ್ತದೆ. ಯುದ್ಧದ ಕಾವು ಕಡಿಮೆಯಾಗುತ್ತ, ದೇಶದ ಅನೇಕ ಸಮಸ್ಯೆಗಳ ಕಡೆಗೆ ಜನರ ಲಕ್ಷ್ಯವು ಹೆಚ್ಚು ಹೆಚ್ಚಾಗಿ ನೆಲೆಯುತ್ತ, ಈ ಸಲದ ಆದರ ಸಾಹಿತ್ಯ-ಪರಿಣಾಮವು ಸಮಾಧಾನಕಾರಕವಾಗಿದೆ ಎಂದು ಸ್ಥೂಲವಾಗಿ ಹೇಳಬಹುದು. ಸಂಧಿಕಾಲದ ಇಂದಿನ ಸಮಯದಲ್ಲಿ ಹಿಂದುಸ್ತಾನದ ಎಲ್ಲ ಸಾಹಿತ್ಯಗಳು ಪರಿವರ್ತನೆಯನ್ನು ಹೊಂದುತ್ತಲಿದ್ದು, ಕನ್ನಡವು ತೀರ ಹೊಸರೂಪವನ್ನು ತೋರದಿದ್ದರೂ ಬದಲಾಗುತ್ತಿರುವ ಲಕ್ಷಣಗಳನ್ನು ಮಾತ್ರ ತಪ್ಪದೆ ತಿಳಿಸುತ್ತದೆ. ಇಷ್ಟೆ, ನೂರು ನಾಲ್ಕು ದೊಡ್ಡದೊಡ್ಡ ಆಡಳಿತಗಳಲ್ಲಿ ಹರಿದುಹೋಗಿರುವ ಕನ್ನಡದ ಭಾಗಗಳಲ್ಲಿ ನಮ್ಮ ಪುಸ್ತಕಗಳು ಪ್ರಕಟವಾಗುತ್ತಿದ್ದು, ಅವು ಅನಾಯಾಸವಾಗಿ ಮಿಕ್ಕ ಆಡಳಿತದೊಳಗಿನ ಜನರ ಕಣ್ಣಿಗೆ ಬೀಳುವುದಿಲ್ಲ. ಅಂತೆಯೆ ಸಹಜವಾಗಿ ನಮ್ಮ ಸಾಹಿತ್ಯ ಪ್ರಗತಿಯ ಪ್ರಮಾಣವು ತಿಳಿಯದಂತಾಗುವದು.

ಕಳೆದ ವರುಷ ನಮ್ಮ ಸಾಹಿತ್ಯಕ್ಷೇತ್ರದಲ್ಲಿ ನುಸುಳಿದ ಪ್ರಗತಿಶೀಲರ ಗಾಳಿಯು, ಈ ಸಲ ನಸುವೆ ಪೆಲ್ಲಗೆ ಬೀಸುತ್ತದೆ. ಬಿರುಗಾಳಿಯಾಗಿ, ಇದ್ದ ಅಡೆತಡೆಗಳನ್ನೆಲ್ಲ ತೊಡೆದುಕೊಂಡು ಹೋಗಬಹುದೇನೊ ಎಂದು ತೋರಿದ ಆ ಆಂದೋಲನವು, ಇದೀಗ ಸಾಮ್ಯವಾದ ರೀತಿಯಿಂದ ಸಾಗಿದೆಯೆಂದೆನ್ನಬಹುದು. ಆದರೂ ಅದರ ಜೊತೆಯಲ್ಲಿಯೆ ಜನ್ಮತಾಳಿದ ಸಮತಾವಾದದ ಸಾಹಿತ್ಯವು ಈ ಸಲ ಹೆಚ್ಚು ಸ್ಪುಟವಾಗಿ ಕಾಣಿಸಿದೆ. ಅದರಲ್ಲಿಯೂ ಹುಬ್ಬಳ್ಳಿಯಲ್ಲಿಯ ಪ್ರಯತ್ನದ ಪರಿಣಾಮವಾಗಿ ಪ್ರಕಟನಾದ ಅನುವಾದಗಳು, ಹೆಚ್ಚಾಗಿ ಆ ಪಕ್ಷದ ವಿಚಾರಗಳ ಪ್ರಚಾರಾರ್ಥ ಹೊರಡಿಸಿದ ಪ್ರಕಟನೆಗಳು ಎಂದರೂ ಸಲ್ಲುವುದು. ಅವು ಕೇವಲ ರಾಜಕೀಯ ವಿಷಯಗಳೇ ಆದುದರಿಂದ, ವಿಜ್ಞಾನ ಕ್ಷೇತ್ರದಲ್ಲಿ ಒಂದೆರಡು ಪತ್ರಿಕೆ (Bulletin) ಗಳನ್ನು ಹೊರಡಿಸಿದಂತೆ ಎಂದು ತಿಳಿಯಬೇಕೆ ಹೊರತು, ಅಡೊಂದು ವಿಚಾರದ ರೀತಿ, ಜೀವನದ ದಾರಿ ಇಲ್ಲವೆ ವಿಶಿಷ್ಟ ತತ್ತ್ವಜ್ಞಾನ ಎಂಬ ಬಗೆಯಲ್ಲಿ ಅವುಗಳ ಸೇರ್ಪಡೆಯಾಗಲಾರದು; ಉಪಯುಕ್ತತೆಯೆನಿಸಲಾರದು.

ಆದರೆ ಗಾಂಧೀ ಸಾಹಿತ್ಯದಲ್ಲಿ ಮಾತ್ರ ಈ ಸಲ ವಿಶಿಷ್ಟವಾದ ಕೆಲವು ಗ್ರಂಥರತ್ನಗಳು ಕನ್ನಡಕ್ಕೆ ದೊರೆತಿವೆಯೆಂದು ಧಾರಾಳವಾಗಿ ಹೇಳಬಹುದು. ವಿಚಾರಸಾಹಿತ್ಯಮಾಲೆಯವರು ಮತ್ತು 'ಸತ್ಯಶೋಧನ' ಪುಸ್ತಕ ಭಾಂಡಾರವು ಕೆಲವು ಉತ್ತಮವಾದ ಅನುವಾದಗಳನ್ನು, ಚರಿತ್ರೆಗಳನ್ನು ಪ್ರಕಟಗೊಳಿಸಿದ್ದರೂ, 'ಸಂಯುಕ್ತಕರ್ನಾಟಕ' ಪತ್ರಿಕೆಯವರು ಕಾಂಗ್ರೆಸಿನ ರನ್ನಮಯೋತ್ಸವದ ನೆನಪಿಗಾಗಿ ಕೈಕೊಂಡ ಪುಸ್ತಕಮಾಲೆಯಲ್ಲಿ ಬಂದ ಅಸ್ಪೃಶ್ಯತಾನಿವಾರಣೆ, ಪ್ರಾಂತಭಾಷೆ-ರಾಷ್ಟ್ರಭಾಷೆ, ಏಕೀಕರಣ, ಸತ್ಯಾಗ್ರಹ, ಖಾದಿ ಮುಂತಾದ ಬರೆಹಗಳು ಸ್ವತಂತ್ರವಾಗಿದ್ದು, ಚಿಕ್ಕವೆನಿಸುತ್ತಿದ್ದರೂ ಜೊಕ್ಕಾಗಿವೆ; ಜೆಲುವಾಗಿವೆ. ಇಂತಹದೆ ಯೋಗ್ಯತೆಯುಳ್ಳ ಪುಸ್ತಕವನ್ನು 'ರಾಷ್ಟ್ರ ಪತಿಗಳು' ಎಂಬ ಹೆಸರಿನಲ್ಲಿ ಪ್ರಸಿದ್ಧಗೊಳಿಸಿದ ಶ್ರೇಯಸ್ಸು 'ನಿಂಬಿನ ಬಳ್ಳಿ'ಯವರದಾಗಿದೆ.

ಇನ್ನು ಕರ್ನಾಟಕದ ಹೆಸರು-ಹೆಗ್ಗಳಿಕೆಗಳನ್ನು ಹೊರಗೆ ಹರಡುವ ಕಾರ್ಯವೂ ಈ ಸಲ ಮುಂದೆ ಸಾಗಿದೆಯೆಂಬುದು ಅಭಿಮಾನದ ಸಂಗತಿಯಾಗಿದೆ. ಶ್ರೀ. ದಿವಾಕರ ಶಂಗರಾಯರ 'ಸತ್ಯಾಗ್ರಹ' ಪುಸ್ತಕವು ಮೂಲದಲ್ಲಿ ಕನ್ನಡದ್ದಿದ್ದು ಅದರ ಇಂಗ್ಲಿಷ್ ರೂಪವು ಇಷ್ಟರಲ್ಲಿಯೆ ಪ್ರಕಟವಾಗಿದ್ದು, ಮರಾಠಿ ಮತ್ತು ಬೇರೆ ಭಾಷೆಗಳಲ್ಲಿ ಅನುವಾದಹೊಂದುವುದರಲ್ಲಿದೆ. ಇತ್ತ ಶ್ರೀ. ಮುಗಳಿ ರಂಗರಾಯರ The Heritage of Karnatak ಎಂಬ ಪುಸ್ತಕವು ಈಗಾಗಲೆ ಜನರ ಮೆಚ್ಚುಗೆ-ಮನ್ನಣೆಗಳನ್ನು ಪಡೆಯುತ್ತಿದೆ. ಪಾಗೆಯ 'ಶ್ರೀನಿವಾಸರ' ಕೆಲವು ಕತೆಗಳು ವಂಗಭಾಷೆಯಲ್ಲಿ ಭಾಷಾಂತರ ಹೊಂದಿ ಪ್ರಕಟವಾದುದು ಒಂದು ಹೊಸ ಉಪಕ್ರಮ ಎಂದು ಹೇಳಬಹುದು. ಇಷ್ಟು ದಿನ ಪರ-ನೆರೆಗಳ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರ ಹೊಂದಿ ಬರತಕ್ಕ ಪುಸ್ತಕಗಳೆ ಹೆಚ್ಚಾಗಿದ್ದುವು; ಆದರೆ ಇದೀಗ ಕನ್ನಡದ ಉತ್ತಮವಾದ ಸಾಹಿತ್ಯಸಂಪತ್ತು, ಮಿಕ್ಕ ಭಾಷೆಗಳಿಗೆ ಪರಿ-

ಮಯಂತೆ

ವರ್ತನೆಯಾಗಿ ಹೋಗಹತ್ತಿ ಪರಸ್ಪರ ಕೊಡುಕೊಳ್ಳುವುದು ಹೆಚ್ಚು ಸರಾಗವಾಗಿ ಸಾಗುವಂತೆ ಎನಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

ಕಳೆದ ಸಲ ದಿವಂಗತ ಕೈಲಾಸಂ ಅವರ ಅರುವತ್ತನೆಯ ಹುಟ್ಟಿದ ಹಬ್ಬದ ನಿಮಿತ್ತವಾಗಿ ಅವರ ಜೀವನ-ಸಾಹಿತ್ಯಗಳ ಕೆಲವು ಪರಿಚಯ-ಪರೀಕ್ಷೆ-ಪ್ರಶಂಸೆಗಳ ಪುಸ್ತಕಗಳು ಪ್ರಕಟವಾದುವು. ಈ ಸಲ ಶ್ರೀ. ಬೇಂದ್ರೆಯವರ ೫೦ನೆಯ ಹುಟ್ಟಿದ ಹಬ್ಬದ ಉತ್ಸವ ಮತ್ತು ಬೇರೆ ಸತ್ಕಾರ ಸಮಾರಂಭಗಳ ಕಾಲಕ್ಕೆ ಅವರ ಚರಿತ್ರೆ-ಕೃತಿಗಳನ್ನೊಳಗೊಂಡ, 'ಹಾಡು-ಪಾಡು', 'ಕವಿವರ ಬೇಂದ್ರೆ', 'ಶ್ರೀ. ಬೇಂದ್ರೆಯವರಿಗೆ ಜೀವನದ ಕಾಣಿಕೆ', 'ಬೇಂದ್ರೆ ವಾಙ್ಮಯ ದರ್ಶನ' ಮತ್ತು 'ದತ್ತವಾಣಿ' ಮುಂತಾದ ಗ್ರಂಥಗಳು ಹೊರಬಿದ್ದಿರುತ್ತವೆ. ಇಂತಹ ವಿಶಿಷ್ಟವಾದ ಸಂದರ್ಭಗಳಲ್ಲಿ ಕೇಂದ್ರಿತವಾದ ಒಂದು ಪ್ರಯತ್ನವು ನಡೆದಲ್ಲಿ, ಅದು ನಿಜವಾಗಿಯೂ ಹೆಚ್ಚು ಬಾಳುವ ಕೆಲಸವಾಗುವುದರಲ್ಲಿ ಸಂದೇಹವಿಲ್ಲ. ಒಬ್ಬ ಸಾಹಿತಿಯನ್ನು ಗೌರವಿಸುವ ಕಾಲಕ್ಕೆ ಕೇವಲ ನೈಯಕ್ತಿಕವಾದ ಬರೆಹಗಳ ಪ್ರಯತ್ನಗಳಾಗದೆ, ಸಂಯೋಜಿತವಾದ ಕಾರ್ಯವಾದರೆ ಕೃತಿಯೂ ಸಾರ್ಥಕವಾಗುವುದು. ಸಾಹಿತ್ಯವೂ ಗೌರವಿಸಿಯುವುದು. ಈ ಸಂದರ್ಭವಲ್ಲಿ 'ಶ್ರೀ' ಅವರಿಗೆ ಸಲ್ಲಿಸಿದ ಸಂಭಾವನೆಯ ನೆನಪಾಗದಿರದು. ಇಂಗ್ಲಿಶ್ ಮತ್ತು ಹಿಂದುಸ್ತಾನದ ಬೇರೆ ಪ್ರಾದೇಶಿಕ ಭಾಷೆಗಳಲ್ಲಿ ನಡೆಯುತ್ತಿರುವ ಕಾರ್ಯದೊಡನೆ ಹೋಲಿಸಿಕೊಳ್ಳುವ ಪಕ್ಷವ್ಯಾಸವನ್ನು ಬಿಟ್ಟರೂ, ಕನ್ನಡದಲ್ಲಿಯೇ ಆದ ಕೃತಿಯನ್ನಾದರೂ ಸರಿಗಟ್ಟುವ ಸಮಯವೊದಗಬಾರದೆ?

ಕನ್ನಡದ ಸಮಸ್ಯೆಗಳನ್ನು ಚರ್ಚಿಸುವ ಶ್ರೀ. ಅ. ನ. ಕೃಷ್ಣರಾಯರ ಬರೆಹಗಳ ಸಂಗ್ರಹಗಳಾದ 'ಅಖಂಡ ಕರ್ನಾಟಕ' ಮತ್ತು 'ಕನ್ನಡದ ದಾರಿ' ಎಂಬ ಪುಸ್ತಕಗಳು, ಕಲಾವಿದರ ಪರಿಚಯಗಳನ್ನೊಳಗೊಂಡ 'ಕರ್ನಾಟಕದ ಕಲಾವಿದರು' ಎಂಬ ಗ್ರಂಥ, ಕನ್ನಡದ ಕೀರ್ತಿಯನ್ನು ಹೆಚ್ಚಿಸಿವೆ. ರಂಗಸಂಗ ಪ್ರಕಾಶನದವರ 'ಮುಕ್ಕಣ್ಣ ಯಾತ್ರೆ' ಇನ್ನೊಂದು ಉಪಯುಕ್ತವಾದ ಪ್ರವಾಸಸಾಹಿತ್ಯದ ಮಾದರಿಯಾಗಿದೆ. ಶ್ರೀ. ಗಣಪತಿಯವರ 'ಕೊಡಗಿನ ಸಮಸ್ಯೆ'ಯು ಹೊತ್ತಿಗೆ ಸರಿಯಾಗಿ ಹೊರಬಿದ್ದಿದೆ.

ಕನ್ನಡ ಸಾಹಿತ್ಯದ ಯಾವುದೇ ವಿಭಾಗವನ್ನು ಪರೀಕ್ಷಿಸಿ ನೋಡಿದರೂ, ಈ ಸಲ ಅದರಲ್ಲಿ ತರುಣ ಬರೆಹಗಾರರು ವಿಶೇಷವಾಗಿ ಮುನ್ನುಗ್ಗುತ್ತಿರುವುದೊಂದು ಕೂಡಲೆ ಎದ್ದುಕಾಣುತ್ತದೆ. ಇಷ್ಟು ದಿನ 'ಕನ್ನಡದಲ್ಲಿ ವಿಜ್ಞಾನಸಾಹಿತ್ಯವು ಕಂಡುಬರುವುದೇ ಇಲ್ಲ' ಎಂದಿದ್ದ ಕೊರತೆಯು ಇನ್ನು ಉಳಿಯಲಿಕ್ಕಿಲ್ಲ— ಎಂಬ ಆಶಾದಾಯಕವಾದ ವಾತಾವರಣವು ಇಂದಿನದಾಗಿದೆ. ಶ್ರೀ. ಪಾಟೀಲ ಕಲ್ಲನಗೌಡರ 'ಭಾರತದ ರಾಜಕೀಯ ಬೆಳವಣಿಗೆ', ಶ್ರೀ. ಪುರಾಣಿಕ ಪದ್ಮನಾಭರ 'ವೈಜ್ಞಾನಿಕ ಪ್ರಬಂಧಗಳು' ಶ್ರೀ. ಪಿ. ಲಕ್ಷ್ಮೀನಾರಾಯಣರಾಯರ 'ಜೀನಿನ ವ್ಯವಸಾಯ' ಶ್ರೀ. ಸಿ. ವಿ. ರಾಯರ 'ತರಕಾರಿಗಳು' ಶ್ರೀ. ಜೋಶಿ ಶಂಕರರಾಯರ 'ಸಭಾಶಾಸ್ತ್ರ' ಶ್ರೀ. ದೊಡ್ಡೇರಿ ವೆಂಕಟರಾಯರ 'ಪ್ರಸವವಿಜ್ಞಾನ' ಶ್ರೀ. ಹಳಕೇಟಿ ಚಿಂತಾಮಣಿರಾಯರ 'ಸೂಚಿಪಿಲ್ಲ' ಮುಂಜಿನ ಬಳ್ಳಿಯವರು ಪ್ರಕಟಿಸಿದ ಶ್ರೀ. ದೇಶಪಾಂಡೆಯವರ 'ಪಾಕಿಸ್ತಾನ' ಇವುಗಳಲ್ಲದೆ ಶ್ರೀ. ಜೋಶಿ ಕೃಷ್ಣಾಚಾರ್ಯರ 'ರಾಜನೀತಿಶಾಸ್ತ್ರ' ಹಾಗೂ ಶ್ರೀ. ಬಿ. ಹನುಮಂತರಾಯರ 'ಆಧುನಿಕತತ್ತ್ವಶಾಸ್ತ್ರ: ಸಮಸ್ಯೆಗಳು' ಎಂಬ ಪುಸ್ತಕಗಳು, ನಮಗೆ ದೊರೆತಿವೆ. ಇವುಗಳ ಜೊತೆಯಲ್ಲಿಯೆ 'ಎಚ್ಚತ್ತ ಭಾರತ ಎತ್ತ ಸಾಗಿದೆ?' 'ಎಚ್ಚತ್ತ ಆಗ್ನೇಯ ಏಸಿಯ' ಮುಂತಾದ ಪ್ರಕಟನೆಗಳು ಪ್ರಪಂಚದ ಪ್ರವಾಹದಲ್ಲಿ ಹಿಂದುಸ್ತಾನವೂ ಈಜುತ್ತ ನಡೆದಿದೆ— ಕನ್ನಡವೂ ತೇಲುತ್ತ ಸಾಗಿದೆ— ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಸಹಾಯಕಾರಕವಾಗುವವು.

ಇಪ್ಪತ್ತಾದರೂ ಒಂದು ಕೊರತೆಯು ನಮ್ಮ ಸಾಹಿತ್ಯದಲ್ಲಿ ಹಾಗೆಯೆ ಉಳಿದಿದೆ; ದಿನದಿನಕ್ಕೆ ಅದರ ಪರಿಣಾಮವು ಚಿಂತನೀಯವಾಗತೊಡಗಿದೆ. ಯಾವ ಪ್ರಕಟನೆಯನ್ನೆ ತೆಗೆದುಕೊಳ್ಳಲಿ, ಯಾವ ಪತ್ರಿಕೆಯನ್ನೆ ಹಿಡಿಯಲಿ, ಅದರಲ್ಲಿ ನಮಗೆ ಕಾಣಿಸುವ ಸಾಹಿತ್ಯಪ್ರಕಾರಗಳು ಕೇವಲ ಎರಡು. ಒಂದನೆಯದಾಗಿ ಬೇರೆಯವರ ವಿಚಾರ-ಲೇಖನಗಳ ಭಾಷಾಂತರ-ರೂಪಾಂತರಗಳು; ಇಲ್ಲವೆ ಎರಡನೆಯದಾಗಿ ನಮ್ಮ ಸಾಹಿತಿಗಳ ಮತ್ತು ಆ ಸಾಹಿತಿಗಳ ಕೃತಿಗಳ ಪರಿಚಯ ಪ್ರಯತ್ನಗಳು. ಇವು ಇರಬಾರದು ಎಂದಲ್ಲ; ಆದರೆ ಕೇವಲ ಇವೇ ಇರುವುದೆಂದರೆ ಆದೇಕೊ ಬೇಸರವೆನಿಸುವುದು ಒಂದು ಸ್ವತಂತ್ರ ವಿಚಾರ, ಒಂದು ಹೊಸಬಗೆಯ ಬರೆಹ, ಒಂದು ಸಾಹಿತ್ಯದ ಪರಿಸರವನ್ನು ಬಿಟ್ಟು ಮಾಡಿದ ಪ್ರಯತ್ನ ಇಂತಹ ಯಾವ ನಾವೀನ್ಯವು ಕಾಣುವುದಿಲ್ಲ. ನಮ್ಮಲ್ಲಿ ವಿಚಾರ ಸಾಹಿತ್ಯವೆ ಬೆಳೆಯಲೊಲ್ಲದು; ಇಷ್ಟೆ ಅಲ್ಲದೆ ಅನಾವಶ್ಯಕವಾದುದು ಅತಿಯಾಗಿ ಹಬ್ಬುತ್ತಿರುವುದೂ ಒಂದು ಅವಲಕ್ಷಣವೆ ಆಗಿದೆ.

ಇನ್ನು ಕಾವ್ಯ-ನಾಟಕಗಳನ್ನು ನೋಡುವುದಾದಲ್ಲಿ ಈ ಸಲ ಹಿರಿಯ ಸಾಹಿತಿಗಳು ವಿಶೇಷವಾಗಿ ಮುಂದೆ ಸುಗ್ಗಿಲ್ಲ ಎಂಬ ಸಂಗತಿಯು ತಿಳಿದುಬರುವುದು. ಶ್ರೀ. ಬಿ. ಎಚ್. ಶ್ರೀಧರರ 'ಮೇಘನಾದ' ಶ್ರೀ. ಭೂಪಾಲಂ ವಾಸುದೇವರ 'ರಂಜನ' ಶ್ರೀ. ನರೇಗಲ್ಲ ಪ್ರಲ್ಹಾದರಾಯರ 'ನಸುಕು' ಮುಂತಾದ ಕಾವ್ಯಸಂಗ್ರಹಗಳು ತರುಣರ ಕೃತಿಗಳೆ. ಹಾಗೆಯೆ ನಾಟಕಗಳಲ್ಲಿ ಶ್ರೀ. ಬಳ್ಳಾರಿ ಬೀಚಿಯವರ 'ಬೇಡಿಯೋ ನಾಟಕಗಳು' ಮತ್ತು ಶ್ರೀ. ಕ್ಷೀರಸಾಗರರ ಅನೇಕ ಚಿಕ್ಕ ಏಕಾಂಕಗಳು ಹೊಸಬಗೆಯ ಪ್ರಯತ್ನಗಳೆ ಆಗಿದ್ದರೂ, ರೂಪದಲ್ಲಿ ಮಾತ್ರ ಬೇರೆಯಾಗಿವೆ. ಇಲ್ಲ ಎನ್ನಬಾರದೆಂಬುದಕ್ಕೇನೊ ಎನ್ನುವಂತೆ ಶ್ರೀ. ಅ. ನ. ಕೃಷ್ಣರಾಯರ 'ರಜಪೂತ ಲಕ್ಷ್ಮಿ', ಶ್ರೀರಂಗರ 'ಪ್ರಪಂಚ ಪಾಣಿಪತ್ತು', ಶ್ರೀ. ಕೈಲಾಸಂ ಅವರ 'ಸೂಳೆ'

ಮತ್ತು ಶ್ರೀ. ಚೌಡಪ್ಪ ಅವರ 'ಚಂದ್ರಗುಪ್ತ'—ಎಂಬ ಎಂದೋ ಬರೆದ ನಾಟಕಗಳು ಈ ಸಲ ಪ್ರಕಟವಾಗಿವೆ. ಆದರೆ ನಿಜವಾಗಿಯೂ ಹೊಸ ಪ್ರಯೋಗಗಳು ಎನ್ನಿಸಿಕೊಳ್ಳುವ ಶ್ರೀ. ಕಾರಂತರ 'ಗೀತನಾಟಕಗಳು' ಈ ವರುಷದ ಆದ್ವಿತೀಯವಾದ ಪ್ರಕಟನೆಯಾಹುದು. ಶ್ರೀ. ನರಸಿಂಹಾಚಾರ್ಯರ 'ಅಹಲ್ಯೆ' ಯಂತಹ-ಇನ್ನೊಂದು ಕೃತಿ 'ಗೋಕುಲ ನಿರ್ಗಮನ'; ಮತ್ತು ಶ್ರೀ. ಪುರಾಣಿಕ ಕೃಷ್ಣಮೂರ್ತಿಯವರ 'ಸ್ವೈರಂಧ್ರಿ' ಮತ್ತು ಹಿರಿಯರಾದ ಶ್ರೀ. ಗೋವಿಂದ ಪೈ ಅವರ 'ಮೆಜ್ಜೊಟ್ಟು' ಇವು ಸರಳರಗಳೆಯ ನಾಟಕಗಳು.

ವಿಮರ್ಶಕ ಸಾಹಿತ್ಯದಲ್ಲಿ ಕೂಡ ಹಲವು ಪುಸ್ತಕಗಳು ಇತ್ತೀಚೆಗೆ ಬರಹತ್ತಿವೆ. ಅವುಗಳಲ್ಲಿಯೆ ಶ್ರೀ. ಮುಗಳಿ ರಂಗರಾಯರ 'ರನ್ನನ ಕೃತಿರತ್ನ' ಶ್ರೀ. ಆನಂತರಂಗಾಚಾರ್ಯರ 'ಕವಿರನ್ನ' ಮತ್ತು ಶ್ರೀ. ವಿ. ಸೀತಾರಾಮಯ್ಯ ಅವರ 'ಅಶ್ವತ್ಥಾಮನ್' ಹಾಗೂ ರಂಗಮಂಗ ಪ್ರಕಾಶನದವರ 'ಗಳಗನಾಥ' ಎಂಬ ಕೃತಿಗಳು ಮನನೀಯವಾಗಿವೆ. ಇವುಗಳ ಜೊತೆಯಲ್ಲಿಯೆ ಕೆಲವು ಹಳೆಯ ಗ್ರಂಥಗಳನ್ನು ಸಂಪಾದಿಸಿ ಪ್ರಕಟಗೊಳಿಸಿದ ಉದಾಹರಣೆಗಳೂ ಈ ಸಲ ಸಿಕ್ಕುತ್ತಿವೆ.

ಅನುವಾದಗಳ ಕ್ಷೇತ್ರದಲ್ಲಿ ಭಾಷಾಜ-ಹೊಬ್ಬಳಿಗಳಲ್ಲಿ ಕರತ್ಸಾಹಿತ್ಯದ ಪ್ರಯತ್ನಗಳು ಮುಂದುವರಿದಿದ್ದು, ಅಲ್ಲಲ್ಲಿ ಹಿಂದಿ-ಮರಾಠಿಗಳ ಪುಸ್ತಕಗಳೂ ಬರಹತ್ತಿವೆ. ಆದರಲ್ಲಿ ಈ ಸಲ ಪಂಗದ ಶರಚ್ಚಂದ್ರ, ಹಿಂದಿಯ ಪ್ರೇಮಚಂದರ ಕೃತಿಗಳೊಡನೆ, ಉತ್ತಮಚಂದ್ರರ 'ಸುಭಾಷ ಸೇನೋಲ್ಲಂಘನ' ಎಂಬ ಭಾಷಾಂತರವು ಒಂದಾಗಿವೆ. ಆದಲ್ಲದೆ 'ಧರ್ಮಸಂಕಟ' ಎಂಬ ಇನ್ನೊಂದು ಪುಸ್ತಕ ಮತ್ತು ಶ್ರೀ. ವಿ. ಸೀ. ಖಾಂಡೇಕರರ 'ಕಾಂಚನಮೃಗ' ಇವು ಉ. ಕನ್ನಡ ಜಿಲ್ಲೆಯವರಿಂದ ಕನ್ನಡಕ್ಕೆ ದೊರೆತಿವೆ. ಆದರೂ ಈ ಸಲದ ಕಾಣಿಕೆಯು ಅಷ್ಟೇನು ಗಮನಾರ್ಹವಾಗಿಲ್ಲ. ಕನ್ನಡದಲ್ಲಿ ಈಗ ಸ್ವತಂತ್ರ ಕೃತಿಗಳು ಹೆಚ್ಚಾಗಿ ಬರಹತ್ತಿರುವುದರಿಂದ, ಇನ್ನು ಅನುವಾದಕ್ಕಾಗಿ ಆರಿಸಬೇಕಾದ ಕೃತಿಗಳನ್ನು ತುಂಬಾ ಜಾಗರೂಕತೆಯಿಂದಲೇ ನೋಡಬೇಕಾಗುವುದೆಂಬ ಮಾತು ಖಂಡಿತವಾದುದು. ಕಥಾಸಾಹಿತ್ಯದಲ್ಲಿ ಕಿರಿಯರು ಮುಂಡಿ ಬರದಿದ್ದರೂ, ಕಥೆಗಳಿಗಿಂತ ಈ ವರುಷ ಕಾದಂಬರಿಯ ಆಗಮನವೆ ವಿಶೇಷವಾದುದು ಎಂದೆನ್ನಬಹುದು. ಶ್ರೀ. ವು. ತಿ. ನರಸಿಂಹಾಚಾರ್ಯರು ಮತ್ತು ಶ್ರೀ. ಆನಂದರೊಡನೆಯೆ ಅನೇಕ ತರುಣ ಬರೆಹಗಾರರ ಹೆಸರುಗಳೂ ಈ ಸಲದ ಕಥಾಸಾಹಿತ್ಯದಲ್ಲಿ ಕಂಡುಬರುತ್ತವೆ. ಶ್ರೀ. ಎಂ. ವಿ. ಸೀತಾರಾಮಯ್ಯ, ಶ್ರೀ. ಕಟ್ಟೀಮನಿ ಬಸವರಾಜರು, ಶ್ರೀ. ಪಾಟೀಲ ಪುಟ್ಟಪ್ಪ, ಶ್ರೀ. ತ. ಸು. ರಾಮಸ್ವಾಮಯ್ಯ, ಶ್ರೀ. ಕುಳಕುಂದ ಶಿವರಾಯರು, ಶ್ರೀ. ಷಣ್ಮುಖಯ್ಯ, ಶ್ರೀ. ತ. ರಾ. ಸುಬ್ಬರಾಯ ಮುಂತಾದವರು ತಮ್ಮ ಕೃತಿಗಳ ಹೊಸ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಇವುಗಳಲ್ಲಿ ವಿಷಯ-ದೃಷ್ಟಿಗಳ ಸಲುವಾಗಿ ಅಂತಹ ವೈಶಿಷ್ಟ್ಯವಿಲ್ಲದಿದ್ದರೂ, ಹೊಸಬರ ಕೃತಿಗಳು ಎಂಬುದು ಒಂದು ಸಮಾಧಾನ. ವ್ಯಾಸಂಗ ಅನುಭವ ಇವುಗಳಿಂದ, ವಾತಾವರಣವು ಬದಲಾಗುತ್ತ ನಡೆದಂತೆ; ಅವುಗಳ ಗುಣ-ರುಚಿಗಳು ಉತ್ತಮಗೊಳ್ಳಬಹುದು. ಆದರೆ ಕಳೆದ ಸಲದ 'ಪ್ರಗತಿ'ಯ ಅವಲೋಕನದಲ್ಲಿ ಹೇಳಿದಂತೆ ಈ ಸಲ ಕಾದಂಬರಿಗಳದೊಂದು ಸುಗ್ಗಿಯು ಬಂದಿದೆ. ಶ್ರೀ. ಬಸವರಾಜರ 'ಸ್ವಾತಂತ್ರ್ಯದೆಡೆಗೆ', ಶ್ರೀ. ಮೀರ್ಜಿ ಅಣ್ಣಾರಾಯರ 'ನಿಸರ್ಗ', ಶ್ರೀ. ಹೇಮಂತರ 'ಭಗ್ನಮಂದಿರ' ಮತ್ತು ಶ್ರೀ. ವಿ. ಎಂ. ಇನಾಂದಾರರ 'ಮೂರಾಬಟ್ಟೆ' ಇವೆಲ್ಲ ಮೊದಲ ಪ್ರಯತ್ನಗಳೆನಿಸಿಕೊಂಡರೆ ಶ್ರೀ. ತ. ರಾ. ಸು. ಅವರ 'ರಕ್ತತರ್ಪಣ'ವು ಮೇಲಿನ ಗುಂಪಿನೊಳಗಿನ ಮೂರರಂತೆ ರ್ಗಳತ್ರಿಯ ಆಗಸ್ಟ್ ಚಳುವಳಿಯ ಹಿನ್ನೆಲೆಯನ್ನು ಇಟ್ಟುಕೊಂಡ ಸಾಮಾಜಿಕ ಕಾದಂಬರಿಯಾಗಿದೆ. ಈ ವಿಭಾಗವು ಇನ್ನು ಮೆಲ್ಲನೆ ಹೆಜ್ಜು ಹೆಜ್ಜು ಬೆಳೆಯುತ್ತ ಮತ್ತು ಆಕರ್ಷಕವಾಗುತ್ತ ನಡೆಯುವುದೆ!

ಶ್ರೀ. ಬೆಟಗೇರಿ ಕೃಷ್ಣಶರ್ಮರು, ಶ್ರೀ. ಏ. ಎನ್. ಮೂರ್ತಿರಾಯರು, ಶ್ರೀ. ಕೆ. ವಿ. ಪುಟ್ಟಪ್ಪ, ಶ್ರೀ. ರಾಜರತ್ನಂ ಅವರು ತಮ್ಮ ಕೃತಿಗಳ ಪುನರ್ಮುದ್ರಣಗಳನ್ನು ಹೊರಡಿಸಿದ್ದಾರೆ. ಶ್ರೀ. ಗೋಕಾಕರ 'ತ್ರಿವಿಕ್ರಮರ ಆಕಾಶಗಂಗೆ' ಎಂಬ ಚಂಪೂ-

ಕಳೆದ ಹನ್ನೆರಡು ವರ್ಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ
ದಕ್ಷಿಣ ಕನ್ನಡ ಜಿಲ್ಲೆಯ ಒಂದೆ ಒಂದಾದ
ಸಾಹಿತ್ಯಿಕ—ಲೋಕಪ್ರಿಯ—ಪುರೋಗಾಮಿ ಎಂದು ಹೆಸರಾದ

ಕನ್ನಡ ಮಾಸಪತ್ರಿಕೆ

ವಾ. ಚಂ. ಲಂ. ಪೆ. ಸೇರಿ ೨-೪-೦ | ಧುರೀಣ | ಬಿಡಿಸಂಚಿಕೆಗೆ ೦-೩-೦

★

ಸಂಪಾದಕರು

ಶ್ರೀ. ಆರ್. ಎಸ್. ಶೆಣೈ ....
ಶ್ರೀ. ಬನ್ನಂಜೆ ರಾಮಾಚಾರ್ಯ

ಕನ್ನಡನಾಡಿನ ಸಮರ್ಥ ಬರೆಹಗಾರರ ಕತೆ, ಕವನ, ಲೇಖನಗಳಿಂದ ತುಂಬಿದ ಸಂಚಿಕೆಗಳು. ಜಾಹೀರಾತು ಕೊಡಬೇಕೆನ್ನುವವರಿಗೆ ಅತ್ಯುತ್ತಮ ಸಾಧನ.

ಮ್ಯಾನೇಜರ್:—
'ಧುರೀಣ' ಉಡುಪಿ (ದ. ಕ. ಜಿಲ್ಲಾ)

ಕ. ಆ. ವಿ. ಸಿ. ಕಣ್ಣಿನ ಹಾಸ್ಪಿಟಲ
ಖಾನಬಾಗ, ಬೆಳಗಾಂವ.

★

ಇಲ್ಲಿಯ ತಜ್ಞ ಕಣ್ಣಿನ ಸರ್ಜನರಾದ ಡಾ. ಎಮ್. ಸಿ. ಮೋದಿಯವರು, ಹಿಂದುಸ್ತಾನದಲ್ಲಿಯ ಎಲ್ಲ ದೊಡ್ಡ ಕಣ್ಣಿನ ಹಾಸ್ಪಿಟಲುಗಳಲ್ಲಿ ಎಷ್ಟೋ ಆಪರೇಶನ್‌ಗಳನ್ನು ಯಶಸ್ವಿಯಾಗಿ ಮಾಡಿ ಬಂದಿದ್ದಾರೆ. ಆದ್ದರಿಂದ ಎಲ್ಲ ಕಣ್ಣಿನ ರೋಗಿಗಳು ಅವರ ಲಾಭವನ್ನು ಪಡೆಯಬೇಕು.

ಕಾವ್ಯವೊಂದು ವಿಶೇಷವಾದ ಮಾದರಿ. ಅದರಂತೆಯೆ 'ಮಿಂಚಿನ ಬಳ್ಳಿ'ಯವರು ಕೈಕೊಂಡ ಉಪಕ್ರಮವೊಂದು ಅಭಿನಂದನಾರ್ಹವಾದುದು. 'ಸಾಹಿತ್ಯಜ್ಞರ ಆತ್ಮಕಥನಗಳು' ಎಂಬುದು ಪ್ರತ್ಯಕ್ಷವಾಗಿ ಹೊರಬಿದ್ದಾಗ ಎಷ್ಟೆ .ಅಸಮಾಧಾನಕಾರಕ ಎಂದೆನಿಸುತ್ತಿದ್ದರೂ, ಅದೊಂದು ಅನುಕರಣೀಯವಾದ ನವೀನ ಪ್ರಯೋಗವೆಂದು ಹೇಳಬಹುದು.

ಇತ್ತ ಜೀವನಚರಿತೆಗಳ ಸಂಖ್ಯೆಯೂ ಈ ಸಲ ಸಾಕಷ್ಟು ದೊಡ್ಡದಾಗಿದೆ. ಎಲ್ಲಕ್ಕೂ ಮೊದಲು ನಿರ್ದೇಶಿಸಬೇಕಾದ ಪುಸ್ತಕವೆಂದರೆ ಶ್ರೀ. ಕಂದಾಡೆಯವರ 'ಜವಾಹರಲಾಲ ನೆಹರು', ಶ್ರೀ. ಶಾರದಾದೇವಿ, ಚಾರ್ಲ್ಸ್ ಡಾರ್ವಿನ್ ಮತ್ತು ಶ್ರೀ. ಮುಳಿಯ ತಿಮ್ಮಪ್ಪಯ್ಯ ಅವರು ಬರೆದ ಆದ್ವಿತೀಯ ಗ್ರಂಥವಾದ 'ಪಾರ್ತಿಸುಬ್ಬ' ಇವು, ಶ್ರೀ. ಓ. ಎನ್. ಲಿಂಗಣ್ಣಯ್ಯ ಅವರು ಬರೆದ ಮತ್ತು ಶ್ರೀ. ನಾಡಿಗ ಕೃಷ್ಣಮೂರ್ತಿಯವರು ನೀಡಿದ ಚರಿತ್ರೆಗಳಿಗಿಂತ ಬೇರೆಯಾಗಿವೆ; ಬಾಳುವಂತಹವಾಗಿವೆ. ಇನ್ನು ಗದ್ಯದಲ್ಲಿಯೆ ಒಳ್ಳೆಯ ಪ್ರಕಾರಗಳಾದ ಪ್ರಯತ್ನಗಳೂ ಈ ಸಲ ಕೆಲವು ಆಗಿವೆ. ಶ್ರೀ. ಮತಿಭಟ್ಟ ಕೃಷ್ಣಮೂರ್ತಿಯವರ 'ಕಳಸಾಪುರದ ಹುಡುಗರು', ಶ್ರೀ. ಪುರಾಣಿಕ ಕೃಷ್ಣಮೂರ್ತಿಯವರ 'ರಾಮೂನ ಕಥೆಗಳು', ಶ್ರೀ. ಹಿರೆಮಲ್ಲೂರ ಈಶ್ವರನ್ ಅವರ 'ವಿಷನಿವಿಷಗಳು', ಶ್ರೀ. ಕೃಷ್ಣ ಆವರ 'ಮುಗುವೆಯರ ಪತ್ರಗಳು' ಇವು ಗದ್ಯಲೇಖನದಲ್ಲಿ ಹೊಸಹಾದಿಯನ್ನು ತುಳಿದ ಉದಾಹರಣೆಗಳಾಗಿವೆ.

ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸ ಅವರ 'ಚಿನ್ನದ ಬಳೆ' ಒಂದನ್ನು ಬಿಟ್ಟರೆ ಮಹಿಳೆಯರ ಕಾಣಿಕೆಯಾಗಲಿ, ಮಕ್ಕಳ ಸಾಹಿತ್ಯವಾಗಲಿ ಈ ವರುಷ ದೊರೆತಿಲ್ಲ. ಶ್ರೀ. ಅ. ನ. ಕೃಷ್ಣರಾಯರ 'ಪೊರಕೆ' ಶ್ರೀ. ಗದಗ ಎನ್. ಎಸ್. ಅವರ 'ಒಡೆದ ಕನ್ನಡಿ' ಇವುಗಳ ಹೊರತಾಗಿ ಲಕ್ಷ್ಯವನ್ನು ಎಳೆಯುವಂತಹ ಬೇರೆ ಹರಟೆ-ನಿಬಂಧಗಳ ಸಂಗ್ರಹವಿಲ್ಲ. ಈ ಬಗೆಯಾಗಿ 'ಇಲ್ಲ'ಗಳ ಪಟ್ಟಿಯು ಬೆಳೆಯುತ್ತ ನಡೆಯುವಂತಿದ್ದರೂ ಹೊಸ ಮತ್ತು ಹೆಚ್ಚಿನ ಪ್ರಯತ್ನಗಳೇನು ಕಡಿಮೆಯಿಲ್ಲ, ಎಂಬುದೊಂದು ಹೆಮ್ಮೆಯ ವಿಚಾರ.

ಈಗೀಗ ಅಲ್ಲಲ್ಲಿಯ ಸಾಹಿತ್ಯಸಂಸ್ಥೆಗಳು ಮತ್ತು ಕೆಚ್ಚಾಗಿ ಗದಿನಾಡು-ಹೊರನಾಡುಗಳಲ್ಲಿಯು ಕರ್ನಾಟಕ ಸಂಘಗಳು ಪುಸ್ತಕ ಪ್ರಕಟನೆಯ ಕಾರ್ಯವನ್ನು ಕೈಕೊಂಡಿರುವುದೊಂದು ಸ್ತುತ್ಯವಾದ ಯೋಜನೆಯಾಗಿದೆ. ಸಾಹಿತ್ಯಸಮ್ಮೇಲನದ ಕಾಲಕ್ಕೆ ಮದ್ರಾಸ ಮಿತ್ರಮಂಡಳಿಯವರು ಪ್ರಕಟಿಸಿದ 'ಕಾಣಿಕೆ', ಮೈಸೂರ ಮಿತ್ರರು 'ಶ್ರೀ' ಅವರ ಜ್ಞಾಪಕವಾಗಿ ನೀಡಿದ 'ಕಾಣಿಕೆ', ಜಿಲ್ಲಾ ಸಮ್ಮೇಲನದ ಕಾಲಕ್ಕೆ ಹುಬ್ಬಳ್ಳಿಯ ಮಿತ್ರರು ಇಟ್ಟ 'ಮುಡಿವು'— ಇವು ಅಂತಹ ಫಲಗಳಾಗಿವೆ. ಹಾಗೆಯೆ ಲವಮೊಗ್ಗೆಯ ಕರ್ನಾಟಕ ಸಂಘದೊಡನೆ ಹೈದರಾಬಾದಿನ 'ಸಾಹಿತ್ಯಮಂದಿರ' ರಾಯಚೂರಿನ ತರುಣಸಂಘ, ಗೋಕರ್ಣದ ಕರ್ನಾಟಕ ಸಂಘ, ಬ್ಯಾದಿಗಿಯ ಕೆಳೆಯರ ಕೂಟ ಮುಂತಾದ ಸಂಸ್ಥೆಗಳು ಪ್ರಕಟನೆಯ ಕಾರ್ಯವನ್ನು ಕೈಕೊಂಡುದು ಮತ್ತು ಹುಬ್ಬಳ್ಳಿಯಂತಹ ಕರ್ನಾಟಕದ ಪಡೆಮೂಲೆಯ ಸ್ಥಳದಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಆಂದೋಲನವು ಭರದಿಂದ ಸಾಗಹತ್ತಿರುವುದು ವಿಶೇಷವಾಗಿ ಗಮನಿಸತಕ್ಕ ಸಂಗತಿಗಳಾಗಿವೆ.

ವೃತ್ತಪತ್ರ ಸಾಹಿತ್ಯ ನಿರ್ಮಾಣಕಾರ್ಯವು ತ್ವರೆಯಿಂದ ಮುಂದಿನ ಹೆಜ್ಜೆಯನ್ನಿಡಹತ್ತಿದೆ. ವಿಜಾಪುರದ 'ಉದಯ' ಮತ್ತು ಹುಬ್ಬಳ್ಳಿಯ 'ಲೋಕಮತ' ವಾರಪತ್ರಗಳು ಪುನರ್ಜನ್ಮ ಹೊಂದುವಂತಾಗಿದ್ದರೆ ಅತ್ತ ಹೈದರಾಬಾದಿನ ಏಕಮೇವಾದ್ವಿತೀಯ ವಾರಪತ್ರಿಕೆಯಾಗಿದ್ದ 'ಪ್ರಜಾ' ಇದು ಇದೀಗ ದಿನಪತ್ರಿಕೆಯಾಗಿದೆ. ಹೊಸತಾಗಿ ಧಾರವಾಡದಿಂದ 'ನರಸಿಂಹ' ಎಂಬ ಮಾಸಪತ್ರಿಕೆಯು ಹೊಸ ಹುಟ್ಟುರೂಪಗಳನ್ನು ಪಡೆದಿದೆ; ಬೆಂಗಳೂರಿನಿಂದ ಮಯೂರ, ಕೇಸರಿ ಮತ್ತು ಸ್ವತಂತ್ರ ಎಂಬ ಮಾಸಪತ್ರಿಕೆಗಳು ಜನ್ಮತಾಳಿವೆ. ಈ ವರುಷದ ಇನ್ನೊಂದು ಮಹತ್ತ್ವದ ಪ್ರಗತಿಫಲವೆಂದರೆ. ದೀವಳಿಗೆಯ ಕಾಲಕ್ಕೆ ಹೊರಟ ಹತ್ತೆಂಟು ವಿಶೇಷ ಸಂಚಿಕೆಗಳು. ಪ್ರಜಾಮತ, ಉಷಾ, ವಾಕ್ಚಿತ್ರ, ವಿಕಟವಿನೋದಿನಿ, ಚಿತ್ರಸಮಾಚಾರ ಮುಂತಾದುವುಗಳ ವಿಶೇಷ ಸಂಚಿಕೆಗಳು ಅಭಿನಂದನಾರ್ಹ ಎನಿಸುವಂತಿದ್ದರೂ 'ವಾಹಿನಿ'ಯ ಸಂಚಿಕೆಯೆ ಅವುಗಳಲ್ಲಿ ಮೊದಲಮನ್ನಣೆಯನ್ನು ಪಡೆಯುವಂತಹದು. ಮುಂಬಯಿಯಿಂದ 'ಜಾಗೃತಿ' ಎಂಬ ವಾರಪತ್ರಿಕೆಯು ಹೊರಡಲಿದೆ.

ಈ ರೀತಿಯಾಗಿ ಕನ್ನಡ ಸಾಹಿತ್ಯವು ಈ ವರುಷ ಬೆಳೆದುಬಂದಿದೆ. ಅದರಲ್ಲಿ ಸಮಾಧಾನಕಾರಕ ಪ್ರಗತಿಯಿದೆ; ಆಶಾದಾಯಕ ಭವಿಷ್ಯವಿದೆ.

ರಕ್ತತರ್ಪಣ

(ಸ್ವತಂತ್ರ ಕಾದಂಬರಿ)

ಲೇಖಕರು: ತ. ರಾ. ಸು. ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು.

ಕನ್ನಡಕ್ಕೆ ಕಾದಂಬರಿಗಳ ಕೊರತೆ ದೂರವಾಗುವ ಸುಚಿಹ್ನಗಳು ಇದೀಗ ಕಾಣಬರುತ್ತಲಿವೆ. ಬಹುಜನ ಲೇಖಕರು ಇದಕ್ಕೀಗ ಕೈ ನೀಡಿದ್ದಾರೆ. ಅದೆಷ್ಟೋ ಸ್ವತಂತ್ರ ಕೃತಿಗಳು ಕನ್ನಡಿಗರಿಗೆ ಲಭಿಸಿವೆ. ಸಮಾಜದ ರೀತಿ-ನೀತಿಗಳನ್ನು ತಿದ್ದಲು ಸಾಮಾಜಿಕ ಕಾದಂಬರಿಗಳು ನಮಗೆ ಎಷ್ಟು ಆವಶ್ಯಕವೊ, ರಾಜಕೀಯ ರಂಗದಲ್ಲಿ ಜನರನ್ನು ಜೀತರಿಸಿ ಸ್ಫೂರ್ತಿ ತುಂಬುವ ರಾಜಕೀಯ ಕಾದಂಬರಿಗಳೂ ಅಷ್ಟೇ ಮಹತ್ತ್ವವಾದುವುಗಳು.

ಭಾರತದ ಕ್ರಾಂತಿಯ ಚರಿತ್ರೆಯಲ್ಲಿ ಆಗಸ್ಟ್ ಕ್ರಾಂತಿಗೆ ಮಹತ್ತ್ವದ ಸ್ಥಾನವಿದೆ. ಅಂತಹ ಆ ಕ್ರಾಂತಿಯ ಕಾಲದ ಘಟನೆಯೊಂದನ್ನು ಎತ್ತಿ ಶ್ರೀ. ತ ರಾ. ಸು. ಅವರು 'ರಕ್ತತರ್ಪಣ' ರಚಿಸಿದ್ದಾರೆ.

ಇದೊಂದು ಘಟನಾ ಪ್ರಧಾನವಾದ ಕಾದಂಬರಿ. ಸಾಮಾನ್ಯ ವರ್ಗದ ಯುವಕ ಚಂದ್ರಶೇಖರನು—ಪಟ್ಟಣದಲ್ಲಿ ಪೋಲೀಸರಿಂದ ಹೊಡೆತ ತಿಂದು ಗಾಯಗೊಳ್ಳುತ್ತಾನೆ. ಹಳ್ಳಿಯಿಂದ ಪುಲ್ಲು ಮಾರಲು ಬಂದ ಅಜ್ಜಿಗನ ಬಂಡಿಯಲ್ಲಿಯು ಹುಲ್ಲಿನಲ್ಲಿ ಅಡಗಿ, ಸೋಮುಲಾಪೂರ ಹಳ್ಳಿಗೆ ಬರುತ್ತಾನೆ; ಆ ಹಳ್ಳಿಯ ಶಾನಭೋಗರಾದ ಸೀತಾರಾಮಯ್ಯನವರ ಆಶ್ರಯದಲ್ಲಿ ಇರುತ್ತಾನೆ. ಚಂದ್ರಶೇಖರನ ಉಪದೇಶದ ಪ್ರಭಾವಪೂರ್ಣ ಮಾತುಗಳಿಂದ, ಹಳ್ಳಿಯಲ್ಲಿಯ ಯುವಕರೆಲ್ಲರೂ ಅವನ ಆಸು ಯಾಯಿಗಳಾಗುತ್ತಾರೆ. ಇವರಲ್ಲಿ ಅಜ್ಜಿಗ ಮುಂದಾಳು. ಕೂಡಲೆ ಕ್ರಾಂತಿಯ ಕಿಡಿ ಹಳ್ಳಿಯಲ್ಲಿ ಹೊತ್ತುವುದು. ಹೆಂಡದ ಅಂಗಡಿಗೆ ಪಿಕೆಟಿಂಗ್ ಆಗುವುದು. ಇಲ್ಲಿಗೆ ಕಾದಂಬರಿಯ ಒಂದು ಘಟ್ಟ ಮುಗಿದಂತಾಗುವುದು.

ಪಿಕೆಟಿಂಗಿನಿಂದ ಹೆಂಡದ ಕಾಂಟ್ರ್ಯಾಕ್ಟರನಾದ ಬಾಪಾರೆಡ್ಡಿಗೆ ಧನಹಾನಿಯಲ್ಲವೆ? ಕೂಡಲೆ ಅತನ ಕುಹಕತಂತ್ರ ಆರಂಭವಾಗುವುದು. ಸೀತಾರಾಮಯ್ಯನೂ ಅಜ್ಜಿಗನೂ ಬಂಧಿಸಲ್ಪಡುವರು. ದಫೇದಾರ ಭಾಲಾಜಿ ಸಿಂಗನ ಕಾಟ ಪ್ರಾರಂಭವಾಗುವುದು. ಹೊಡೆತಕ್ಕೆ ಅಜ್ಜಿಗನ ಮೈಯ ರಕ್ತ ಚಿಮ್ಮುವುದು. ಜನ ರೊಚ್ಚಿಗೆದ್ದು ಹೆಂಡದಂಗಡಿಗೆ ಕೊಳ್ಳಿ ಇಡುವರು. ಚಂದ್ರಶೇಖರ ಮೈಗರೆದು ನಿಲ್ಲುವನು. ಅಜ್ಜಿಗನ ಹರಯದ ತಂಗಿ ಚೆನ್ನಿಯ ಮೇಲೆ ಭಾಲಾಜಿಯ ವಕ್ರ ದೃಷ್ಟಿ ಬೀಳುವುದು. ಮದ್ಯದ ಅಮಲಿನಲ್ಲಿ ಅವಳನ್ನು ಅವಮಾನಗೊಳಿಸಲು ಹೋದಾಗ, ತಾಳ್ಮೆಗೆಟ್ಟ ಚಂದ್ರಶೇಖರನು ಮುಂದಾಗಿ ನಿಂತು, ಪೋಲೀಸರ ಕೂಡ ಕಾದುವನು. ಗುಂಡಿನೇಟು ತಿಂದು ರಕ್ತವನ್ನು ಕಾರಿ 'ತರ್ಪಣ' ಕೊಡುವನು.

ಲೇಖಕರು ಮುನ್ನುಡಿಯಲ್ಲಿ ನಿರೂಪಿಸಿದಂತೆ ಕಥೆಯ ಬೆಳೆವಣಿಗೆಯಲ್ಲಿ ಸ್ವಾನುಭವವಿದೆ. ಬಾಪಾರೆಡ್ಡಿಯ ಕುಹಕ ವಿಚಾರ ಸರಣಿ, ಹಳ್ಳಿಯ ತರುಣರ ನಿಷ್ಕಪಟವೃತ್ತಿ, ಭಾಲಾಜೀ ದಫೇದಾರನ ಹೀನ ಹಿಂಸಾಕಾರ್ಯ, "ಹುಂಜಿನ ಹಾಗೆ ಹೆಜ್ಜೆ ಹಾಕ್ತಾ ಬಂದ" "..., ಭೂಮಿತಾಯಿ ಋಣಾನೂ ತೀರಿ ತೂಂತ" ಎಂಬ ಅಜ್ಜಿಗನ ಮಾತುಗಳಲ್ಲಿಯ ವಿಚಾರಸರಣಿ, ಇವೆಲ್ಲವೂ ಹಳ್ಳಿಗರ ಬಗ್ಗೆ ಇದ್ದ ಲೇಖಕರ ಅನುಭವ ತೋರಿಸುವುವು. ಸನ್ನಿವೇಶಗಳೊಡನೆ ನಿಸರ್ಗಸಂಬಂಧ ನಿರೂಪಣೆಯು ತ. ರಾ. ಸು. ಅವರ ಪ್ರಭಾವೀ ತಂತ್ರಗಳಲ್ಲಿ ಒಂದು. ಬಯಲಾಂಜನೆಯನ ಗುಡಿಗೆ ಹೋದಾಗ ಚಂದ್ರಶೇಖರನ ಹೃದಯಕ್ಕೂ ನಿಸರ್ಗದ ರೀತಿಗೂ ಇದ್ದ ದಿವ್ಯ ಸಂಬಂಧ ನಿರೂಪಣೆ, ಹೆಂಡದಂಗಡಿಗೆ ಕೊಳ್ಳಿ ಇಡುವಾಗ ತರುಣರೆಲ್ಲರೂ ಮೌನವಾಗಿ ಗುಪ್ತಸ್ಥಳದಲ್ಲಿ ಕೂಡುವ ವಾತಾವರಣದ ವರ್ಣನೆ, ಹೆಂಡದಂಗಡಿ ಸುಡುವ ದೃಶ್ಯದ ವರ್ಣನೆ— ಇವೆಲ್ಲವೂ ಸ್ವಾಭಾವಿಕವಾಗಿದ್ದು ಓದುಗರನ್ನು ಉದ್ರೇಕಗೊಳಿಸುವುವು.

ಪೂರ್ವಾರ್ಧದಲ್ಲಿ ಕಥೆಯು ಮಂದಗತಿಯಲ್ಲಿ ಸಾಗುವುದು. ಚಂದ್ರಶೇಖರನು ಹಳ್ಳಿಗರನ್ನು ತರಬೇತುಗೊಳಿಸಿದನಂತರದ ಭಾಗದಿಂದ ಕಥೆಗೆ ಓಟ ಸಿಕ್ಕುವುದು. ಲೇಖಕರಲ್ಲಿ, ಸಹಜವಾದ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಕೌಶಲ ಇದೆ. ಸಂವಾದ ಹೃದಯ ರುಚಿಕಟ್ಟಾಗಿದೆ. ಪರಿಣಾಮಕಾರಕ ಹಿನ್ನೆಲೆಗಳಿಂದ ಸನ್ನಿವೇಶಗಳು ಸಜೀವವಾಗಿವೆ. ಆದರೆ ಬಾಪಾರೆಡ್ಡಿ ಮತ್ತು ಬಾಲಾಜಿ ಸಿಂಗರ ಸ್ವಭಾವಪರಿಪುಷ್ಟಿ ಅಸಹನೀಯವೆನಿಸುವಂತಾಗಿದೆ. ಅವರನ್ನೂ ಮಾನವೀಯ ಸಹಾನುಭೂತಿಯಿಂದ ನೋಡಬೇಕಿತ್ತು. ಚಂದ್ರಶೇಖರನನ್ನು ಶಾನಭೋಗರ ಆಶ್ರಯದಲ್ಲಿಟ್ಟುದು, ನಿವ್ಯಾಜ ವೃತ್ತಿಯ—ಪರೋಪಕಾರಿ—ಗೌರಜ್ಜಿಯನ್ನು ಆತನಿಗೆ ಒದಗಿಸುವುದು ಕಥೆಯ ಮುನ್ನೋಟಕ್ಕೂ, ಮುನ್ನೋಟದ ಕಳೆಗೂ ಹಿತಕಾರಿಯಾಗಿದೆ.

ಕಾದಂಬರಿ ನಾಯಕನು ಭಾವನಾ ಪ್ರಧಾನವ್ಯಕ್ತಿ. ಅಜ್ಜಿಗ-ಗೌರಜ್ಜಿಯರು ಮಾತ್ರ ಮರೆಯಲಾಗದ ವ್ಯಕ್ತಿಗಳು. ಗಾಯಗೊಂಡ ಅಪರಿಚಿತನಾದ ಚಳವಳಿಯ ಹುಡುಗನಿಗೆ ಬೊಮ್ಮಯ್ಯ-ಅಜ್ಜಿಗರು ತಮ್ಮ ಗುಡಿಸಿಲಿನಲ್ಲಿ ಆಶ್ರಯಕೊಡುವಾಗ, ಅವರಲ್ಲಿ ಸಹಜವಾಗಿ ಹುಟ್ಟುವ ಮನಸ್ಸಿನ ಕೂಗಾಟವನ್ನೂ ತಾಳಲಾಟ.

ವನ್ನೂ ಲೇಖಕರು ಇನ್ನಿಷ್ಟು ತೋರಿಸಬೇಕಿತ್ತು. ಅವರಲ್ಲಿ ಮಾನವೀಯತೆ ಇದ್ದರೂ "ಆಳುವ ಅರಸರಲ್ಲಿ ನಂಬಿಗೆ ಇದ್ದ" ಜನ ಉದು.

ರಾಜಕೀಯ ಆಂದೋಲನವನ್ನು ಕುರಿತು ವಿವೇಚಿಸುವ ಕಾದಂಬರಿಗಳ ಕೊರತೆಯನ್ನೂ ಹೋಗಲಾಡಿಸುವ ತ. ರಾ. ಸು. ಅವರ ಕೃತಿನಿರ್ಮಿತಿ ಸ್ತುತ್ಯವಾಗಿದೆ. ತಮ್ಮ ಹದಗೊಂಡ ಲೇಖಣಿಕೆಯಿಂದ ರಾಜಕೀಯ ಕ್ಷೇತ್ರದಲ್ಲಿ ಕನ್ನಡಿಗರ ಮನವನ್ನು ಈ ಲೇಖಕರು ಇನ್ನೂ ಹದಗೊಳಿಸುವರೆಂದು ಹಾರಯಿಸುತ್ತೇವೆ. ಮೈಸೂರಲ್ಲಿ ಹೊಸತಾಗಿಯೇ 'ಉಷಾ' ಗ್ರಂಥಮಾಲೆಯನ್ನು ಪ್ರಾರಂಭಿಸಿ, ಮೊದಲನೆಯ ಪುಷ್ಪವನ್ನಾಗಿ ಈ ಒಳ್ಳೆಯ ಕಾದಂಬರಿಯನ್ನು ಕನ್ನಡಿಗರ ಕೈಗೆ ಕೊಟ್ಟ ಸಂಪಾದಕ ಪ್ರೇಮಾನ್ ರಾ. ವೆಂ. ಶ್ರೀ. ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

—ಟಿ. ಕೆ. ಸ.

ಬೆಳವಲದ ಭಾಗ್ಯಲಕ್ಷ್ಮಿ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಬರೆದವರು : ಕುಲಕರ್ಣಿ ಶೇಷಗಿರಾಯರು. ಬೆಲೆ ೩-೮-೦. ಕ್ರೌ. ಆ. ೨೦೦ ಪುಟ. ಪ್ರತಿಭಾ ಗ್ರಂಥಮಾಲೆಯ ೩೨ನೆಯ ವರ್ಷದ ೫೩ನೆಯ ಕೆರಡ.

ಸುಪ್ರಸಿದ್ಧ ಸಾಹಿತಿಗಳಾದ ಕಾರಂತರ 'ಬೆಟ್ಟದ ಜೀವ'ದ ಮಾದರಿಯ ಕಾದಂಬರಿಯಿದು. ಕಾರಂತರು ಬೆಟ್ಟದ ಜೀವನವನ್ನು ಬಣ್ಣಿಸಿ ಯಶಸ್ಸನ್ನು ಪಡೆದರು. ಇಲ್ಲಿಯ ಕಾದಂಬರಿಯಲ್ಲಿ ಬೆಳವಲದ ಐಸಿರಿ ವರ್ಣಿತವಾಗಿದೆ. ಲೇಖಕರಾದ ಕುಲಕರ್ಣಿಯವರು ಕವಿಗಳೆಂದು ಮಾನ್ಯತೆ ಪಡೆದಿದ್ದರೂ, ಈ ಮೊದಲೇ ಬರೆದ 'ಮಹಾಪೂರ' ಎಂಬ ಅವರ ಇನ್ನೊಂದು ಕಾದಂಬರಿಯ ಪರಿಚಯ ವಾಚಕರಿಗೆ ಇರದೆ ಇರಲಿಕ್ಕಿಲ್ಲ. 'ಬೆಳವಲದ ಭಾಗ್ಯಲಕ್ಷ್ಮಿ' ಅವರ ಎರಡನೆಯ ಸಾಮಾಜಿಕ ಕಾದಂಬರಿ.

ಕಾದಂಬರಿಯ ವಸ್ತು ಏನ ಬಗ್ಗೆ ವಿಚಾರಿಸುವಾಗ, ಪ್ರಾರಂಭದಿಂದ ಕೊನೆಯ ವರೆಗೂ, ತವಳಿ ಅದರ ಸುತ್ತು ಮುತ್ತಲಿನ ನಿಸರ್ಗಸೌಂದರ್ಯಕ್ಕೆ ಪ್ರಾಮುಖ್ಯತೆ ಇದೆ ಎನಿಸುವುದು. ಬೆಳವಲದ ಒಕ್ಕಲಿಗನ ದುಡಿಮೆ, ಅವನ ವ್ಯವಸಾಯದ ಸಲಕರಣೆಗಳು, ಅಲ್ಲಿಯ ಹಬ್ಬ-ಹುಣ್ಣಿಮೆ, ಆಚಾರ-ವಿಚಾರ, ನಡೆ-ನುಡಿ, ದೇಸಾಯಿ-ನಾಯಕರ ಮನೆತನಗಳ ಒಳಜಗಳ, ಮನಸ್ತಾಪ್ಯ-ಕಾಂಕ್ಷೆ, ಅಸೂಯೆ, ಏರಿಳಿತ— ಎಲ್ಲವನ್ನೂ ಸೂಕ್ಷ್ಮನಿರೀಕ್ಷಣಶಕ್ತಿಯೊಡನೆ ಲೇಖಕರು ಬಣ್ಣಿಸಿದ್ದಾರೆ.

ಇಲ್ಲಿಯ ಪಾತ್ರಪರಿಪೋಷಣೆಯಲ್ಲಿ ಅಂತಹ ವಿಶೇಷ ಪರಿಶ್ರಮದ ಲಕ್ಷಣಗಳು ಕಾಣಬಾರದಿದ್ದರೂ, ಕಾದಂಬರಿಕಾರರು ಸಾಕಷ್ಟು ವೈವಿಧ್ಯತೆಯಿರಿಸಿ ಓದುಗರ ಜೀಜ್ಞಾರನ್ನು ಕಳೆದಿದ್ದಾರೆ. ಆದರೂ ತುಂಗವ್ವನವರದೊಬ್ಬರದೇ ಪ್ರಮುಖ ಪಾತ್ರವಾಗಿ ಉಳಿದವರು ನಿಮಿತ್ತಮಾತ್ರರೆನಿಸುವುದರಿಂದ, ಕತೆಗೆ ಕೊಂಚ ತಾಸಿನ ಮುಳ್ಳಿನ ಗತಿಯಿಂಟಾಗುವುದು. ಇಂತಹ ಸಹಜ ಕೊರತೆ ತುಂಬಲು ಲೇಖಕರು ನಿಸರ್ಗದ ಬಣ್ಣನೆಗೆ ಉಚಿತ ರೀತಿಯಲ್ಲಿ ಜೊರೆಹೋಗಿ, ಅಲ್ಲಲ್ಲಿ ತಮ್ಮ ಕಾವ್ಯದ ರಸದೂಟವನ್ನು ಬಡಿಸಿ, ಓದುಗರಿಗೆ ನುಂದುವರಿಯಲು ಅನುವು ಕಲ್ಪಿಸಿಕೊಟ್ಟಿದ್ದಾರೆ.

ಮುಖ್ಯತಃ ಕಾದಂಬರಿಯ ಭಾಷೆ ಲಲಿತವೂ, ಇಲ್ಲಿಯ ಕರ್ನಾಟಕದ ಓದುಗರ ತೀರ ಬಳಕೆಯದಾಗಿಯೂ ಇರುವುದರಿಂದ, ಹಳ್ಳಿಯ ಕತೆ ಎನಿಸಿದರೂ— ೨೦೦ ಪುಟ ಓದಲು ಅನುಕೂಲವಾಗುವುದು. ಪಾತ್ರಗಳ ಮುಖಾಂತರ ವಚನ ಸಾಹಿತ್ಯದ ಹಿರಿಮೆ ಅದರ ಬಗ್ಗೆ ಜನಸಾಮಾನ್ಯರಲ್ಲಿ ಆದರ ಹುಟ್ಟಿಸುವಂತಹ ಜರ್ಜಿ, ಕುಮಾರವ್ಯಾಸ— ಲಕ್ಷ್ಮೀಶರ ಕಾವ್ಯಗಳ ರಸವಿಮರ್ಶೆ, ಮುಖ್ಯ ಪಾತ್ರವಾದ ತುಂಗವ್ವನವರ ಸಾಹಸೀ ಮನಸ್ಸು, ಹೂವಿನಂತಹ ಸ್ವಭಾವ, ಔದಾರ್ಯ— ಎಲ್ಲವೂ ಒಂದೊಂದಾಗಿ ಓದುಗರ ಮನಹಿಡಿದು, ಹಳ್ಳಿಯ ಜೀವನದ ಸೌಂದರ್ಯದ ರಹಸ್ಯ, ಅಲ್ಲಿಯ ಸಮಗ್ರ ಜೀವನದ ಸ್ಪುಟ ಕಲ್ಪನೆ ಮಾಡಿಕೊಡುವುವು.

ಕಾದಂಬರೀಪ್ರಪಂಚವು ಅಕಾಶಕುಸುಮಕ್ಕೆ ಕೈಯೊಡ್ಡಬಾರದೆಂಬ ಉದಾತ್ತಧ್ಯೇಯವು ಗ್ರಂಥಕರ್ತರಿಗಿದ್ದರೂ, ಅಲ್ಲಲ್ಲಿ ಅನಿವಾರ್ಯವಾಗಿ ಪಾತ್ರಪರಿಪೋಷಣೆಯ ನ್ಯೂನತೆಗಳು ಕಂಡುಬರುವುವು. ಮುಖ್ಯತಃ ತುಂಗವ್ವನವರು ಕದುರೆಹತ್ತುವುದು ಸ್ವಲ್ಪ ವಿಲಕ್ಷಣವೆ! ಹಳ್ಳಿಯಲ್ಲಿಯ ಕುಲೀನ ಸ್ತ್ರೀಗೆ ಇದು ಸಾಧ್ಯವಾಗಲಿಕಿಲ್ಲವೆಂಬ ಸಂಶಯವು ಮುಂದೆ ಲೇಖಕರನ್ನು ಆವರಿಸಿದ್ದಂದಲೋ ಏನೋ, ಆ ಸಮಸ್ಯೆಯನ್ನು ಎಬ್ಬಿಸಿ ಸಮಾಧಾನ ಮಾಡಲು ಹವಣಿಸಿದ್ದಾರೆ. ಆದರೆ ಪ್ರಶ್ನೆ ಹಾಗೇ ಉಳಿಯುವುದು! ಕಾದಂಬರಿಯ ಮುಕ್ತಾಯದಲ್ಲಿ ಅನಾವಶ್ಯಕ ಅವಸರದ ಪ್ರತೀಕವೆಂಬಂತೆ, ತುಂಗವ್ವನವರ ಆಕಸ್ಮಿಕ ಮರಣ ಸಂಭವಿಸಿದೆ. ಸುಸಂಬದ್ಧತೆಯ ಪ್ರಶ್ನೆ ಈಗಲೂ ಕೆಣಕದಿರದು!

ವಸ್ತುಕದ ಆಚ್ಚು ಕಟ್ಟು, ಹಾಗೂ ಮೇಲ್ತರಗತಿಯ ನವೀನ ಮಾದರಿಯ ಕಾದಂಬರಿಯನ್ನು ಕೊಡುವ ಧ್ಯೇಯವಿರಿಸಿಕೊಂಡು ಅದರ ಸಾಧನೆಗೆ ಹೆಣಗಿದ ಕುಲಕರ್ಣಿಯವರ ಸಾಹಸ ಮೊದಲಾದುವುಗಳನ್ನು ವಿಚಾರಿಸಿದಾಗ, ಮೆಲ್ಲಾಣಿಸಿದ ಚಿಕ್ಕ ಪುಟ್ಟ ದೋಷಗಳು ಜಂದ್ರನ ಮೇಲಿನ ಕಲೆಗಳಂತೆ ಪರಿಣಮಿಸಬಹುದು. ಇಂತಹ ಒಳ್ಳೆಯ ಕಾದಂಬರಿಯನ್ನು ನೀಡಿ ಕನ್ನಡ ನಾಡಿನ ಹೃದಯದ ಜೆಲುವ ತೋರಿಸಿಕೊಟ್ಟದ್ದಕ್ಕಾಗಿ ಲೇಖಕರು ಅಭಿನಂದನಾರ್ಹರು.

ಎಸ್. ಎಸ್. ಗದಗಕರ

ಸಾದರ ಸ್ವೀಕಾರ

★

೧೦೦. **ವಾಹಿನಿ** (ವಾರಪತ್ರಿಕೆಯು ಜನ್ಮದಿನಾಂಕ). ಸಂಪಾದಕರು ಶ್ರೀ. ಎಂ. ಎಸ್. ಜಂತಕಾನುಣಿ ಬಿ. ಎಸ್. ಸಿ. ಈಸ್ಟರ್ನ್ ಪ್ರೆಸ್, ೧೧-ಎ. ಜಯಚಾಮರಾಜ ರೋಡ್, ಬೆಂಗಳೂರು ನಗರ. ಕ್ರೌ. ಥಿವ ೧೫೬ ಪುಟಗಳು. ಬೆಲೆ ೧-೦-೦.

ನಾಡಿನಲ್ಲಿಯ ಪೆನುವಾಸಿಯನ್ನು ಪಡೆದ ಲೇಖಕರ ಸ್ವಾಸ್ಥ್ಯವಾದ ಗದ್ಯ-ಪದ್ಯಲೇಖನಗಳಿಂದ ಸಂಜಿಕೆಯು ಅಂತರಂಗ ಸೌಜನಾಕರ್ಷಕವಾಗಿದೆಯಲ್ಲನೆ. ಸುಸ್ಪಾದ ಮುದ್ರಣ, ಮೇಲೋದೆಯು ಸಬಾಷನ ಮಾರ್ಪಿತ್ರಸಹ ಬಾಹ್ಯಸೌಂದರ್ಯವನ್ನು ಕೆಚ್ಚಿಸಿವೆ. 'ಈ ವರ್ಷದ ಸಾಹಿತ್ಯಸೃಷ್ಟಿ' ಎಂಬ ಸಾಲ್ಕು ವಾಕ್ಯವಿಭಾಗಗಳು ಈ ಸಂಜಿಕೆಯ ಒಂದು ವೈಶಿಷ್ಟ್ಯವಾಗಿ ಕಾಣುತ್ತವೆ. ವಾರದ ಸಂಚಿಕೆಗಳೇ ಇರಲಿ, ಈ ವಿಷಯವಾಗಿಯೇ ಆಗಲಿ, ವಾಹಿನಿ ತನ್ನ ನಡಿಗೆಯನ್ನು ಒಂದು ಎತ್ತರಕ್ಕೆಯೂ ಏರಿಸಿಕೊಂಡು ಸಾಗಿಸುವುದೆಂದು, ವಾಚಕಲೋಕವು ವಾಹಿನಿ ಕನ್ನಡಿಗರಿಗೆ ಪ್ರಾತಃವಾಹಿನಿಯಾಗಿ ಬಹುಕಾಲ ಬಾಳಲಿ.

೧೦೧. **ಕರ್ನಾಟಕ ಮುಂಬಯಿ ಟಿಕೆಯ** (ಮುಂಬಯಿ ಟಿಕೆಯ ಮುಖವಾಣಿ ಮತ್ತು ಪರಿಚಯಪತ್ರಿತ ಲೆಕ್ಕಪತ್ರಗಳು.) ಕಾರ್ಯದರ್ಶಿಗಳು ಶ್ರೀಮಾನ್ ಕೆ. ಎನ್. ಗಾಮುತೊಂಡೆ ಮತ್ತು ಶ್ರೀಮಾನ್ ಎಚ್. ಎಸ್. ಪಾಟೀಲ. ಕಚೇರಿ: ಬಾಲಸ್ಟೇಕ್ಟ್ ಚೇಂಬರ್ಸ್, ವಾಸಿನಿ ರೋಡ್, ಮುಂಬಯಿ. ಡಿ. ಆ. ೧೫ ಪುಟಗಳು.

ಮುಂಬಯಿಯಲ್ಲಿರುವ ಬೇರೆ ಬೇರೆ ಕನ್ನಡ ಸಂಘಗಳನ್ನು ಸಂಘಟಿಸಿ, ಕನ್ನಡಿಗರೆಲ್ಲ ಒಂದೆ ಎಂಬ ಭಾವನೆಯನ್ನು ಬೆಳೆಯಿಸಿ, ಅಲ್ಲಿಲ ಕನ್ನಡಿಗರನ್ನು ಬೇರೆ ಬೇರೆ ಜಟುಸಟಿಕೆಗಳಲ್ಲಿ ಒಂದುಗೂಡಿಸುವ ಉದ್ದೇಶದಿಂದ ಹೊರಟ ಸಂಸ್ಥೆಯಿದು. ಮುಂಬಯಿಯಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಪ್ರಚಾರ-ಪ್ರಸಾರಗಳ ಕಾರ್ಯಕ್ರಮಗಳನ್ನು ಈ ಸಂಸ್ಥೆ ನಡೆಯಿಸಿದೆ; ಅಲ್ಲದೆ, ಒಳನಾಡಿನ ಕನ್ನಡದ ಜಿಲ್ಲೆಗಳಿಗೂ ನೆರವುಕೊಟ್ಟಿದೆ. ೧೯೪೫ನೆಯ ಏಪ್ರಿಲ್ ೨೮-೨೯ನೆಯ ದಿನಾಂಕಗಳಲ್ಲಿ ಈ ಸಂಸ್ಥೆ, ಮುಂಬಯಿಯಲ್ಲಿ ಹೊರನಾಡ ಕನ್ನಡಿಗರ ೨ನೆಯ ಸಮ್ಮೇಳನ ಕೂಡಿಸಿದ್ದಿತು. ವರದಿಯ ವರ್ಷದ ಆಯ-ವ್ಯಯ ೧೦೫೮ ರೂ. ೬ ಆಣೆಗಳದಿದೆ. ಈ ಸಂಸ್ಥೆಯ ಜನಯವೆಂದರೆ ಮುಂಬಯಿ ತರುಣ ಕನ್ನಡಿಗರ ದೂರದೃಷ್ಟಿಯ ದ್ಯೋತಕವಾಗಿದೆ. ಕನ್ನಡಿಗರ ಹಿರಿಮೆ-ಗರಿಮೆಗಳನ್ನಿದು ಹೊರನಾಡಿನಲ್ಲಿ ಹೆಚ್ಚಿಸುತ್ತಿರಲಿ.

೧೦೨. **ರಕ್ತತರ್ಪಣ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು 'ತ. ರಾ. ಸು.'. ಮೈಸೂರಲ್ಲಿ ಹೊಸತಾಗಿ ಪ್ರಾರಂಭವಾಗಿರುವ ಉಷಾಸಾಹಿತ್ಯಮಾಲೆಯ ಮೊದಲನೆಯ ಪುಸ್ತಕವಿದು. ಮಾಲೆಯ ಸಂಪಾದಕರು ಶ್ರೀಮಾನ್ ರಾ. ಪೆಂ. ಶ್ರೀನಿವಾಸ ಮೈಸೂರು. ಕ್ರೌ. ಅ. ೧೦೨ ಪುಟಗಳು. ಬೆಲೆ ೧-೪-೦. (ವಿಮರ್ಶೆ ಇದೇ ಸಂಚಿಕೆಯಲ್ಲಿ ಬಂದಿದೆ.)

೧೦೩. **ಅಂತಿಮ ಆಹ್ವಾನ** (ಕಮ್ಯುನಿಸ್ಟ್ ವಿಚಾರ ಪ್ರಸಾರಕ ಪುಸ್ತಕ). ಪ್ರಕಾಶಕರು ಶ್ರೀ. ಕುಳುಕುಂದ ಶಿವರಾಯರು; ಜನತಾಸಾಹಿತ್ಯ ಕಾರ್ಯಾಲಯ, ಮರಾಠಾಗಲ್ಲಿ, ಹುಬ್ಬಳ್ಳಿ. ಕ್ರೌ. ಅ ೩೩ ಪುಟಗಳು. ಬೆಲೆ ೦-೪-೦.

೧೦೪. **ಹಿಂದು ಮುಸ್ಲಿಂ ಗಲಭೆಗೆ ಯಾರು ಹೊಣೆ?** (ಕಮ್ಯುನಿಸ್ಟ್ ವಿಚಾರಪ್ರಸಾರಕ ಪುಸ್ತಕ) ಪ್ರಕಾಶಕರು ಶ್ರೀ. ಕುಳುಕುಂದ ಶಿವರಾಯರು, ಜನತಾಸಾಹಿತ್ಯ ಕಾರ್ಯಾಲಯ, ಹುಬ್ಬಳ್ಳಿ. ಕ್ರೌ. ಅ. ೧೬ ಪುಟ. ಬೆಲೆ ೦-೨-೦.

ಕಲ್ಕತ್ತಾ ದುರಂತದ ಬಗ್ಗೆ, ಹಿಂದು-ಮುಸ್ಲಿಂ ಗಲಭೆಯ ಬಗ್ಗೆ ತನ್ನ ಅಭಿಪ್ರಾಯ-ಧೋರಣೆ ಏನೆಂಬುದನ್ನು, ಕಮ್ಯುನಿಸ್ಟ್ ಪಾರ್ಟಿಯ ಈ ಪುಸ್ತಕದಲ್ಲಿ ವಿವರಿಸಿದೆ.

೧೦೫. **ಭಾರತದ ಶಾಸನಪದ್ಧತಿ** (ಮಾಧ್ಯಮಿಕ ಶಾಲೆಗಳ ಅಭ್ಯಾಸಕ್ರಮವನ್ನನುಸರಿಸಿ ಬರೆದುದು). ಲೇಖಕರು ಶ್ರೀಮಾನ್ ಎಸ್. ಜಿ. ನಾಡಿಗೇರ ಎಂ. ಎ., ಬಿ. ಟಿ., ಡಿ. ಪಿ. ಇಡಿ. ಶಿಕ್ಷಕರು ಕ. ಎ. ಬೋರ್ಡಿನ ಮಾಳಮರಡಿ ಶಾಲೆ, ಧಾರವಾಡ. ಪ್ರಕಾಶಕರು ಶ್ರೀ. ಆರ್. ಜಿ. ಹುಕ್ಕೇರಿ, ಸ್ಟೂಡಂಟ್ಸ್ ಓನ್ ಬುಕ್ ಡಿಪೊ, ಧಾರವಾಡ. ಕ್ರೌ. ಅ. ೧೮೦ ಪುಟಗಳು. ಬೆಲೆ ೧-೪-೦.

೧೦೬. **ಉಷಾ** (ಮಾಸಪತ್ರಿಕೆಯು ದಸರಾ ವಿಶೇಷ ಸಂಚಿಕೆ.) ಸಂಪಾದಕರು ಮತ್ತು ಸಂಚಾಲಕರು ಶ್ರೀ. ಎಸ್. ನಂಜಪ್ಪ ಉಷಾ ಪ್ರಕಟನ ಮಂದಿರ ೫೬. ಗಾಂಧೀನಗರ, ಬೆಂಗಳೂರು ಸಿಟಿ. ಕ್ರೌ. ಅ. ೪೦೦ ಪುಟಗಳು. ಬೆಲೆ ೧-೦-೦,

ಎಂದಿನಂತೆ 'ಉಷಾ' ವಿಶೇಷಸಂಚಿಕೆಯು ವಿಷಯ ವೈವಿಧ್ಯದಿಂದಲೂ ಜಲಚ್ಚಿತ್ರಗಳಲ್ಲಿಯು ಆಕರ್ಷಕ ಚಿತ್ರಗಳಿಂದಲೂ ಕೂಡಿದೆ. ಬ್ರ. ಶ್ರೀ. ಸಿದ್ಧಾಂತಿ ಕಪ್ಪಣಶಾಸ್ತ್ರಿಗಳಿಂದ ರಚಿತವಾದ 'ವರ್ಷಭವಿಷ್ಯ' ಇದೆ. ವಾಹಿನಿಯ ವಿಶೇಷ ಸಂಚಿಕೆಯ ಲೇಖಕವರ್ಗದಲ್ಲಿ ಕಾಣುವ ಹಲವು ಲೇಖಕರು ಇದರ ಲೇಖಕವರ್ಗದಲ್ಲಿಯೂ ಇದ್ದಾರೆ. 'ಉಷಾ' ಪತ್ರಿಕೆಯ ಸದ್ಯದ ದಾರಿ ಆದರ್ಶವನ್ನಿರಿಸಿಕೊಂಡುದೂ ವಿಧಾಯಕವೂ ಆದುದೂ ಸಂತೋಷದ ಸಂಗತಿ. ಈ ದಾರಿಯಿಂದಲೆ ಆದ

(೨೨೪ನೆಯ ಪುಟ ನೋಡಿರಿ.)

ನಾಲ್ಕೂ ನಿಟ್ಟಿನ ನೋಟ

★

ಜಾದೂ ಆಟದ ವೇಷೆಲ್ಲರು

ಕೈತೋರಿಸಿದಾಗ 'ಅವಲಕ್ಷಣ' ಎಂದು ಹೇಳಿದರೆ ದೊಡ್ಡ ಮಾತಲ್ಲ. ಬೇಡವಾಗಿದ್ದರೂ ಕೈಯನ್ನು ಎಳೆದುಕೊಂಡು ನೋಡಿ 'ಅವಲಕ್ಷಣ' ಎಂದು ಹೇಳಿದಂತೆ ಮಾಡಿದ್ದಾರೆ ಬ್ರಿಟಿಷರಿಂದು ಭಾರತೀಯರಿಗೆ. ಕೊನೆಗೂ ಅವರು ತಮ್ಮ ಸ್ವಾರ್ಥಪೂರಿತ ಧೂರ್ತಸ್ವಭಾವವನ್ನು ಲೋಕಕ್ಕೇ ಮನವರಿಕೆ ಮಾಡಿಕೊಟ್ಟಂತಾಯಿತು. ಹಿತದ ಮಾತುಗಳನ್ನು ಬಳಸಿ, ವೈಸ್‌ರಾಯರಿಂದ ದಾಕ್ಷಿಣ್ಯಕ್ಕೊಳಗಾಗಿಸಿ, ನಿಮ್ಮ ಒಳ್ಳೆಯದಕ್ಕಾಗಿಯೆ ಔತಣಕೊಟ್ಟಿದ್ದೇವೆ ಎಂಬ ಡಂಭಾಚಾರವನ್ನು ತೋರಿ, ಪಂಡಿತ ನೆಹರು-ಬಲದೇವಸಿಂಹರನ್ನು ತಮ್ಮಲ್ಲಿಗೆ ಬರಮಾಡಿಕೊಂಡರು, ಬ್ರಿಟಿಷ್ ಮುಖ್ಯಾಮಾತ್ಯರು. ಅಲ್ಲಿಗೆ ಹೋದ ಮೇಲೆ ಮೊದಲಾಡಿದ ಸರಳಮಾತುಗಳನ್ನೆಲ್ಲ ಬದಲಿಸಿ, ಭಾರತದ ರಾಜಕಾರ್ಯದಲ್ಲಿ ಬಗೆಹರಿಯದಂತಹ ಬಿಕ್ಕಟ್ಟನ್ನುಂಟುಮಾಡುವ ಬ್ರಿಟಿಷ್ ಸರಕಾರದ ಸ್ಪಷ್ಟೀಕರಣದ ಪತ್ರಿಕೆಯನ್ನು ಕೊಟ್ಟು, ಮುಖಭಂಗಿತರನ್ನಾಗಿಮಾಡಿ ಕಳುಹಿದರು. ಉತ್ಸಾಹದಿಂದ ಪ್ರಾರಂಭವಾದ ಘಟನಾಸಮಿತಿಯಾಗ ಬ್ರಿಟಿಷರು ತಂದೊಡ್ಡಿದ ಬಿಕ್ಕಟ್ಟಿನ ಪರಿಸ್ಥಿತಿಯ ಮೂಲಕ ಬಿಕ್ಕುಗೆಟ್ಟಂತಾಗಿದೆ. ಶಾಸನಬದ್ಧವಾದ ದಾರಿಯಿಂದ ಹೋಗಬೇಕೆನ್ನುವ ಪ್ರಾಗತಿಕರು ಕೈಕೈ ಹಿಸುಕಿಕೊಳ್ಳಲಾರಂಭಿಸಿದ್ದಾರೆ. ಕಾಂಗ್ರೆಸಿನ ಉಗ್ರನಾಯಕರು, ಕ್ರಾಂತಿಜಳವಳಿಯ ಮಾತುಗಳನ್ನಾಡಲು ತೊಡಗಿದ್ದಾರೆ. ಜೊತೆಗೆ ಚಾದೂಪೆಟ್ಟಿಗೆ ತೆಗೆದುಕೊಂಡು ಬಂದ ವೈಸ್‌ರಾಯ ವೇವೆಲ್ಲರು, ಕೊನೆಗೂ ತಮ್ಮ ಜಾದೂ ಆಟವನ್ನು ಆಡಿ, ಭಾರತದ ರಾಜಕಾರ್ಯದ ಪ್ರಗತಿಗೆ ಪಾಳುಬಾವಿಯ ದಾರಿಯನ್ನು ತೋಸಿದ್ದಾರೆ.

ದೌರ್ಜನ್ಯದ ಪರೀಕ್ಷೆಗಾಗಿ ಧರ್ಮದ ದಾರಿ

ಪ್ರಕಟನೆಯಲ್ಲಿ ಕಾಂಗ್ರೆಸಿಗೆ ಫೆಡರಲ್ ಕೋರ್ಟಿನ ದಾರಿ ತೋರಿಸಿದೆ ಬ್ರಿಟಿಷ್ ಸರಕಾರ. ಮತ್ತೆ ಅದೇ ಸರಕಾರದ ಮುಖವೊಂದು 'ಪ್ರಕಟನೆಯಲ್ಲಿ ನಾವು ಸ್ಪಷ್ಟಪಡಿಸಿದ ಮಾತುಗಳಿಗಲ್ಲದೆ ಫೆಡರಲ್ ಕೋರ್ಟಿನ ನಿರ್ಣಯಕ್ಕೆ ಬ್ರಿಟಿಷ್ ಸರಕಾರ ಬದ್ಧವಾಗದು' ಎಂದು ಮೊದಲೆ ಸಾರಿಬಿಟ್ಟಿದೆ. ಅದರಂತೆಯೆ ಜಿನ್ನಾಸಾಹೇಬರೂ 'ಪೊಲಕ್ಕೆ ಮೂರೇ ಕಾಲು!' ಎಂಬ ಹಟವನ್ನು, ಯಾವ ನ್ಯಾಯಾಧೀಶರ ನಿರ್ಣಯದಿಂದಲೂ ಪಡಲಿಕ್ಕೆ ಸಿದ್ಧರಿಲ್ಲ. ಆದುದರಿಂದಲೆ ಫೆಡರಲ್ ಕೋರ್ಟಿಗೆ ಹೋಗುವುದರಲ್ಲಿ ಲಾಭವಿಲ್ಲವೆಂದು ರಾ. ಮಹಾಸಭೆಗೆ ಘಟನಾತಜ್ಞರು ಸಲಹೆ ಕೊಟ್ಟಿದ್ದರೂ, ಶಾಂತಿಮಯ ಮಾರ್ಗದಿಂದಲೆ ಧ್ಯೇಯವನ್ನು ಸಾಧಿಸಲು ಕೊನೆಯನರಿಗೂ ಪ್ರಯತ್ನ ಮಾಡಲು ಬಯಸುವ ಕಾಂಗ್ರೆಸ್ ನಾಯಕರು, ಫೆಡರಲ್ ಕೋರ್ಟಿಗೆ ಪ್ರಕರಣವನ್ನು ಒಯ್ದು ನಿರ್ಣಯ ಪಡೆದುಕೊಳ್ಳಬೇಕೆಂದಿದ್ದಾರೆ. ಪರಿಣಾಮ ಅವರಿಗೆ ಗೊತ್ತಿಲ್ಲವೆಂದಲ್ಲ. ಕೌರವರೊಂದಿಗೆ ಸಂಧಾನಮಾಡಿಕೊಳ್ಳಲು ಪಾಂಡವರು ಎಷ್ಟೆಷ್ಟು ಬಗೆಯಿಂದ ಪ್ರಯತ್ನ ಮಾಡಲಿಲ್ಲ! ದುರ್ಜನರ ದೌರ್ಜನ್ಯವು ಲೋಕದೆದುರು ಎಲ್ಲ ಬಗೆಯಿಂದಲೂ ಸಿದ್ಧವಾಗಿ ನಿಂತರೆ, ಸಜ್ಜನಪಕ್ಷದವರಿಗೆ ಲೋಕದ ನೈತಿಕಬೆಂಬಲ ಸಿಕ್ಕುವುದು. ನೀತಿಯ ಬಲ ಲೋಕಕ್ಕೆ ವಿಧಾಯಕಸಾಧನವಾಗಿ ಪರಿಣಮಿಸೀತೇ ಹೊರತು ಕ್ರಾಂತಿಯ ಬಲವು ಸಾಧನವಾಗದು. ಈ ಮಾತನ್ನರಿತ ಭಾರತದ ನಾಯಕರು, ಶಾಸನಬದ್ಧವಾದ ಮಾರ್ಗದಿಂದಲೆ ಮುಂದುವರಿದು, ಬ್ರಿಟಿಷರ ಸ್ವಾರ್ಥ-ಕುಟಿಲತನಗಳನ್ನು ಬೀದಿಗೆತರಬೇಕೆಂದಿದ್ದಾರೆ. ಸಾಮೋಪಾಯದಿಂದ ಕಾರ್ಯ ಸಾಧಿಸದೆ ಹೋದರೆ, ರಾಜಕಾರ್ಯದಲ್ಲಿ ಜೇರೆಯ ಉಪಾಯಗಳನ್ನು ಯೋಜಿಸಲೆಬೇಕಾಗುವುದೆಂಬುದನ್ನು ಅವರೇನು ಅರಿತಿಲ್ಲವೆಂದಲ್ಲ.

ಕೂಲಿಕಾರ ಸರಕಾರವೂ ಆಳಬೇಕೆಂದೆ ಬಯಸುವುದು!

ಆಟ್ಲೆ ಸರಕಾರ ಭಾರತೀಯರಿಗೆ ಕೊಟ್ಟ ಮಾತನ್ನು ಮುರಿಯಿತೇಕೆ?— ಎಂದು ಬಹುಜನ ಸರಳಸ್ವಭಾವದ ಜನರು ಆಶ್ಚರ್ಯ-ವಿಷಾದಗಳಿಂದ ಕೇಳುತ್ತಿರುವರು. ಅವರಿಗೆ ನಾವು ಹೇಳಬೇಕಾದುದು ಇಷ್ಟು: ಕೂಲಿಕಾರ ಸರಕಾರದ ಸದಸ್ಯರೇನು ಯೋಗಿಗಳ ಬಳಗವಲ್ಲ. ತತ್ತ್ವದ ಮಾತುಗಳನ್ನಾಡುವಾಗ ಎಲ್ಲರೂ ಸ್ವಾತಂತ್ರ್ಯ, ಸಮತೆ, ಮಾನವಬಂಧುತ್ವ ಇವುಗಳನ್ನೆಲ್ಲ ಒಪ್ಪುತ್ತಾರೆ; ಆದರೆ ಬ್ರಿಟಿಷರಲ್ಲಿಯ ಯಾವನಿಗೂ ಸಾಮ್ರಾಜ್ಯವನ್ನು ಅಳಬೇಕೆಂಬ ಮಹತ್ತ್ವಾಕಾಂಕ್ಷೆ ಮಾಯವಾಗಿಲ್ಲ. ಇಂಗ್ಲಂಡಿನ ಆಂತರಿಕ ರಾಜಕಾರ್ಯವನ್ನು ಸಾಧಿಸಲಿಕ್ಕೆಮಾತ್ರ ಟೋರಿಪಕ್ಷಕ್ಕೆ ವಿರೋಧಿಯಾಗಿ ಕೂಲಿಕಾರಪಕ್ಷ ಹೊರಟಿದೆ ಇಷ್ಟೆ. ಪಕ್ಷಕ್ಕೊಂದು ಯಾವುದಾದರೂ ರಾಜಕೀಯ ತತ್ತ್ವಜ್ಞಾನವಿರಬೇಕಾಗುವುದು. ಆದುದರಿಂದ ಸಮತಾವಾದದ ಆಭಾಸವನ್ನದು ಆದರ್ಶವಾಗಿ ಇಟ್ಟುಕೊಂಡಿದೆ. ಇದು ತಮಗೆ ಬೆಂಬಲವಾಗಿರುವ ಕೂಲಿಕಾರ-ನೈತಮತದಾರರ ಕಣ್ಣಲ್ಲಿ ಮಂಕುಬೂದಿ ಎರಚಲಿಕ್ಕೆ ಹೊರತು, ಆಡಳಿತದಲ್ಲಿ ಪ್ರಚಾರದಲ್ಲಿ ತರಲಿಕ್ಕಲ್ಲ. ಯುಕ್ತರಾಷ್ಟ್ರಸಂಘದಲ್ಲಿ ಬ್ರಿಟಿಷ್

ರಾಜಕಾರಣಿಗಳು ನಡೆಯಿಸಿದ ಮೊನ್ನೆಯ ಚಟುವಟಿಕೆಗಳನ್ನು ನೋಡಿದರೆ, ಇವರ ನಮತಾವಾದದ ಸೂರಣ ಹೊರಬಿದ್ದುದು ಕಾಣುವುದು. ಮಾನವಸಮತೆಯ ಉದಾರಧ್ಯೇಯದಿಂದ ಮುಂದೆ ಬಂದ ಪ್ರತಿಯೊಂದು ಗೊತ್ತುವಳಿಗೂ, ಬ್ರಿಟನ್ನು ಮತ್ತು ಅದರ ಕೊಂಕುಳ ಕೂಸುಗಳು ವಿರೋಧಿಯಾಗಿ ಮತವನ್ನು ಕೊಟ್ಟಿವೆ. ಬೀಯರ ಮೇಲ್ಮೆಗೆ ಚರಪಟ್ಟಕಟ್ಟಿನೆಯೆ. ತೀರಬೇಕೆಂಬ ನ. ಆಫ್ರಿಕನ ನಾಯಕ ನ್ಯಟ್ಸ್‌ರಿಗೆ ಯಾವಾಗಲೂ. ಬ್ರಿಟಿಷರೇ ಬಲವಕ್ಕೆ. ಸಕ್ಕದಲ್ಲಿಯು ಇವ್ವ ನ್ಯಾನ್ನು ಉದಾರ-ಧೋರಣೆ ತೋರಿಸಿ, ಕವಿಯ ಭಾರತೀಯರ ಮನುಷ್ಯತ್ವದ ಹಕ್ಕುಗಳನ್ನು ಒಪ್ಪಿಕೊಳ್ಳಲು ಸಿದ್ಧವಾದರೂ, ಕವಿಯ ಭಾರತೀಯರ ಋಣದಿಂದಲೇ ಕೊಬ್ಬನ್ನು ಬೆಳೆಯಿಸಿಕೊಂಡಿರುವ ಬ್ರಿಟಿಷರು ಉದಾರಾರ್ಥಿಗಳಾಗಿ ವರ್ತಿಸಿದವರಿಷ್ಟೇ ಅಲ್ಲ; ತಮ್ಮ ಸಮತಾವಾದದ ತತ್ತ್ವವನ್ನು ಮೂಲೆಗೆಪಾಕಿ ಪೆಟ್ಟಿ ತುಳಿದಂತೆ ಮಾಡಿದರು. ಇದನ್ನೆಲ್ಲ ನೋಡಿದರೆ, ಬ್ರಿಟಿಷರು ಭಾರತೀಯರನ್ನು ಉದಾರಬುದ್ಧಿಯಿಂದ ನೋಡಲಿಕ್ಕೆ, ಎಂದೂ ಯಾವನೂ ಸಿದ್ಧವಿಲ್ಲವೆಂಬುದನ್ನು ನಾವು ಮನವರಿಕೆಮಾಡಿಕೊಳ್ಳಬೇಕು!

ಭಾರತದಲ್ಲಿಯ ಬ್ರಿಟಿಷರ ಕೈಗೊಲುಗಳು

ಇಷ್ಟಾದರೂ ಭಾರತೀಯರ ಸಂಘಟನೆಯ ಬಲವು ಬ್ರಿಟಿಷರನ್ನು ಪೆದರಿಸದೆ ಬಿಡುವಂತಿಲ್ಲ. ಮುಳುಗಿ ಸಾಯಲಿರುವವನು ಹುಲ್ಲುಕಡ್ಡಿಯ ಆಶ್ರಯವನ್ನೂ ಅಪೇಕ್ಷಿಸುವಂತೆ, ಭಾರತದಲ್ಲಿಯ ಎಂತೆಂತಹ ಕ್ಷುಲ್ಲಕ ಶಕ್ತಿಗಳನ್ನೂ ಆಶ್ರಯಿಸಿ ಇಲ್ಲಿ ಜೀವ ಹಿಡಿದು ನಿಲ್ಲಲು ಅವರು ಹವಣಿಸುತ್ತಿದ್ದಾರೆ. ಜಿನ್ನಾ ಸಾಹೇಬರ ಲೀಗಿನ ದೊಡ್ಡ(?) ಆಧಾರಸ್ತೊಂಭವನ್ನು ಅವರು ಸಿದ್ಧಮಾಡಿ ಇಟ್ಟೇ ಇದ್ದಾರೆ. ಅಲ್ಲದೆ ಭಾರತದಲ್ಲಿಯ ದೊಡ್ಡ ದೊಡ್ಡ ಸಂಸ್ಥಾನಗಳಿಗೆ ತಮ್ಮ ಕೈಗೊಲುಗಳನ್ನೇ ಒತ್ತಾಯದಿಂದ ಮಂತ್ರಿಗಳನ್ನಾಗಿ ನಿಯಮಿಸಿಕೊಳ್ಳಲು ಹಚ್ಚಿ, ಅವರಿಂದ ಸ್ವಾತಂತ್ರ್ಯದ ದಾರಿಯಲ್ಲಿ ಆಗಾಗ ಅಡೆ-ತಡೆಯೊಡ್ಡುವ ಆಧಾರವನ್ನು ಕಲ್ಪಿಸಿ ಇರಿಸಿದ್ದಾರೆ. ಘಟನಾ ಸಮಿತಿಯಲ್ಲಿ ಶ್ರೀಮಾನ್ ಜಯಕರರ ತಿದ್ದುಪಡೆಯ ಸೂಚನೆಯನ್ನು ಪುರಸ್ಕರಿಸಿ ಮಾತನಾಡಿದ ಡಾ. ಅಂಬೇಡಕರರ ಮಾತುಗಳನ್ನು ನೋಡಿದರೆ, ದಲಿತವರ್ಗದವರ ಆಧಾರದ ಆಶೆಯನ್ನು ಬ್ರಿಟಿಷರು ಬಿಟ್ಟಿಹಾಗೆಯೆ ಸರಿ. ಮುಸ್ಲಿಂ ಲೀಗು, ಕೆಲವು ಸಂಸ್ಥಾನ ಇವೇ ಬ್ರಿಟಿಷರಿಗೆ ಈಗ ರಾಜಕಾರ್ಯದ ಸಾಗರವನ್ನು ಈಜುವುದಕ್ಕೆ ಸೋರೆ-ಬುರುಡೆಗಳಾಗಿವೆ. ಆದರೆ ಈ ಸೋರೆ-ಬುರುಡೆಗಳನ್ನು ಒಡೆದುಹಾಕುವಂತಹ ಶಕ್ತಿ ಭಾರತೀಯರ ಇಂದಿನ ಸಂಘಟನೆಯಲ್ಲಿದೆ ಎಂಬುದರ ಅರಿವು ಬ್ರಿಟಿಷರಿಗೆ ಇಲ್ಲದೆ ಇಲ್ಲ. ಆದುದರಿಂದಲೇ ಅವರು ನಮ್ಮಲ್ಲಿ ಒಡಕನ್ನು ಹುಟ್ಟಿಸುವಂತಹ ಹಲವು ಹಂಚಿಕೆಗಳನ್ನು ಮಾಡಬಹುದಾಗಿದೆ. ಈ ಹಂಚಿಕೆಗಳಿಗೆ ಬಿಡದಂತಹ ಬೆಸುಗೆ ಭಾರತೀಯರಲ್ಲಿ ಗಟ್ಟಿಗೊಳಬೇಕು. 'ಜಯಚಂದ' ಮನೋವೃತ್ತಿಗೆ ಮತ್ತೆ ನಾವು ಆಶ್ರಯ ಕೊಟ್ಟರೆ, ರಾ. ಮಹಾಸಭೆಯ ೬೦ ವರ್ಷದ ಉದ್ಯಮಫಲವೆಲ್ಲ ಹುಡಿಗೂಡಿ ಹೋದಂತಾಗುವುದು.

ಶಾಂತಿಯು ಸುಧೆಯೊ, ಕ್ರಾಂತಿಯು ಕಾಳಕೂಟವೊ

ಬ್ರಿಟಿಷ್ ಸರಕಾರವು ತನ್ನ ಮೊನ್ನೆಯ ಪ್ರಕಟನೆಯಲ್ಲಿ ಕೊನೆಯ ಮಾತಾಗಿ ಸಾರಿದ 'ಸರ್ವಜನ ಸಮ್ಮತವೆನಿಸಿದ ಯಾವ ಯೋಜನೆಯನ್ನೂ ಬೇಡವಾದವರ ತಲೆಯ ಮೇಲೆ ಹೇರಲು ಬ್ರಿಟಿಷ್ ಪಾರ್ಲಿಮೆಂಟು ಒಪ್ಪಿಗೆ ಕೊಡಲಾರದು ಎಂಬ ಮಾತುಗಳಿಂದ, ಸದ್ಯ ಒಂದು ರೀತಿಯಿಂದ ಘಟನಾ ಸಮಿತಿ ನಿಂತಲ್ಲಿ ನಿಂತಿದೆ ಎಂದು ಹೇಳಬಹುದು. ಹೀಗೆ ಮಾಡಬೇಕೆಂಬುದೇ ಬ್ರಿಟಿಷರ ಉದ್ದೇಶವಾಗಿದೆ. ಈಗ ಕಾಂಗ್ರೆಸ್ಸು ಬ್ರಿಟಿಷ್ ಪ್ರಕಟನೆಯನ್ನೊಪ್ಪಿ ಲೀಗಿನೊಡನೆ ಸಂಧಿ ಮಾಡಿಕೊಳ್ಳಲಿಕ್ಕೆ ಸಿದ್ಧವಾದರೂ ಬ. ಕ. ವಿಭಾಗಗಳೆಲ್ಲಿ ಒಂದುಗೂಡಲು ಸಿದ್ಧವಿವೆ? ಆಸಾಮುಪ್ರಾಂತ ಬಂಗಾಳದೊಂದಿಗೆ ಕೂಡಿಕೊಳ್ಳಲಿಕ್ಕೆ ಸಂಪೂರ್ಣ ವಿರೋಧವನ್ನು ತೋರಿಸಿದೆ. ಇಷ್ಟೇ ಅಲ್ಲ, ಹಿಂದು ಬಹುಸಂಖ್ಯಾಕವಾದ ಪಶ್ಚಿಮ ಬಂಗಾಲವೂ ಜಳವಳಿಯನ್ನೆಬ್ಬಿಸದೆ ಬಿಡದು. ಇತ್ತ ಇನ್ನೊಂದು ಕಡೆಗೆ, ಮುಸ್ಲಿಂ ಬಹುಸಂಖ್ಯಾಕವಾಗಿದ್ದರೂ ಸೀಮಾಪ್ರಾಂತವು ಗುಂಪುಗೂಡಲಿಕ್ಕೆ ಖಂಡಿತ ಒಲ್ಲೆನೆಂದು ಗಟ್ಟಿಯಾಗಿ ಹೇಳುತ್ತಿದೆ. ಪಂಜಾಬದಲ್ಲಿ ಸೀಖ-ಹಿಂದುಗಳ ಪ್ರಶ್ನೆ ಸುಲಭವಾಗಿ ಬಿಡುವಂತಿಲ್ಲ. ಇದೆಲ್ಲ ಮಾತು ಗೊತ್ತಿದ್ದರೂ, ಬಂದಿರುವ ಸಂಧಿಯನ್ನು ದುರುಪಯೋಗಪಡಿಸಿಕೊಂಡು, ಕಾಂಗ್ರೆಸಿನ ಶಕ್ತಿಯು ಸಹಾಯದಿಂದಲೆ ಪಾಕಿಸ್ತಾನ ಕಟ್ಟಿಕೊಳ್ಳಬೇಕೆಂದು ಜಿನ್ನಾರವರಿಗೆ ಚರ್ಚಿಲರು ಕಿವಿಮಂತ್ರ ಹೇಳಿಕೊಟ್ಟಿರುವರು. ಪಾಕಿಸ್ತಾನದ ಸ್ಥಾಪನೆಯಿಂದ ಹಿಂದುಸ್ತಾನದಲ್ಲಿ ಮತ್ತೂ ತಮ್ಮ ಕರಟಕನೀತಿಯನ್ನು ನಡೆಯಿಸಲು ಬರುವುದೆಂದು ಬ್ರಿಟಿಷರ ಮನದಾಸೆ. ಹಾಗೆಲ್ಲ ಜಿನ್ನಾ ಮತ್ತು ಚರ್ಚಿಲ್ ಪ್ರಭೃತಿ ಬ್ರಿಟಿಷ್ ಪ್ರತಿಗಾಮಿ ನಾಯಕರಲ್ಲಿ ರಹಸ್ಯಕರಾರುಗಳಾಗಿವೆಯೆಂದೂ ವಾತಾವರಣದಲ್ಲಿ ಸುದ್ದಿ ಹಬ್ಬಿಕೊಂಡಿದೆ. ಇದೆಲ್ಲವನ್ನೂ ನೋಡಿದರೆ, ಭಾರತದ ರಾಜಕಾರ್ಯವೀಗ ಗೊಬ್ಬರದಲ್ಲಿಯ ಬೆಂಕಿಯಂತೆ ಒಳಗೊಳಗೇ ಹೊತ್ತುತ್ತಲಿದೆ. ಕಾಂಗ್ರೆಸಿನ ಕ್ರಾಂತಿಕಾರಿ ಮುಂದಾಳುಗಳು ಈ ಬೆಂಕಿಗೆ ಎಣ್ಣೆ-ತುಪ್ಪ ಸುರಿದು ಊದಿ ಉರಿಮಾಡಲು ಹವಣಿಸುತ್ತಿದ್ದಾರೆ. ಸದ್ಯದ ಸಂಕ್ರಮಣಕಾಲ ಶಾಂತಿಯು ಸುಧೆಯನ್ನು ತರುವುದೊ, ಕ್ರಾಂತಿಯು ಕಾಳಕೂಟವನ್ನು ತರುವುದೋ ನೋಡಬೇಕು.

ಜಯಂತಿಯ ಸಣ್ಣಕತೆಗಳ ಮೇಲಾಟ

ಆಕರ್ಷಕವಾದ ಮೂರು ಬಹುಮಾನಗಳು

೧ ನೆಯ ಬಹುಮಾನ ೨೦ ರೂಪಾಯಿ ! ★ ೨ ನೆಯ ಬಹುಮಾನ ೧೫ ರೂಪಾಯಿ !! ★ ೩ ನೆಯ ಬಹುಮಾನ ೧೦ ರೂಪಾಯಿ !!!

೧೯೪೭ ಜನವರಿ ೧೫ ನೆಯ ತಾರೀಖಿನೊಳಗಾಗಿ ಕತೆಗಳನ್ನು ಕಳುಹಬೇಕು !

ಮೇಲಾಟದ ನಿಯಮಗಳು.

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ವಿಸ್ತಾರದಷ್ಟು, ಎಂದರೆ ಕೈಬರಹದಲ್ಲಿ ಫುಲ್‌ಸ್ಕ್ಯಾಪ್ ಅರ್ಧಹಾಳೆಗಳು ೧೦ ಕ್ಕೆ ವಿಸ್ತಾರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನ್ನು ಬಿಟ್ಟ ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗವಹಿಸಬಹುದು.

೫. "ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ" ಎಂದು ಕೈಬರಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು. ಆದರೆ ಎರಡು ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ೧೯೪೭ ನೆಯ ಜನವರಿ ೧೫ ನೆಯ ತಾರೀಖು. ಫೆಬ್ರುವರಿ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನು ಪ್ರಕಟಿಸಲಾಗುವುದು; ಮಾರ್ಚ್ ಸಂಚಿಕೆ ಸಣ್ಣಕತೆಗಳ ವಿಶೇಷ ಸಂಚಿಕೆಯಾಗಿ ಪ್ರಕಟವಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕದೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು 'ಜಯಂತಿ' ಧಾರವಾಡ.

ದಿವಸ ಸ್ವಲ್ಪವೆ ಉಳಿದಿವೆ. ಬೇಗನೆ ಬಹುಜನರು ಭಾಗವಹಿಸಬೇಕು